ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣಾ ಹೋರಾಟಗಳು

(೧೮೩೦ ರಿಂದ ೧೯೪೭ರವರೆಗಿನ ಅಧ್ಯಯನ)

(ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗಕ್ಕೆ
ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಬಸವರಾಜು ಕೆ.ಆರ್.

ಮಾರ್ಗದರ್ಶಕರು

ಡಾ. ಎನ್. ಚಿನ್ನಸ್ವಾಮಿ ಸೋಸಲೆ

ಪ್ರಾಧ್ಯಾಪಕರು

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೭

ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣಾ ಹೋರಾಟಗಳು

(೧೮೩೦ ರಿಂದ ೧೯೪೭ರವರೆಗಿನ ಅಧ್ಯಯನ)

(ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗಕ್ಕೆ
ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಬಸವರಾಜು ಕೆ.ಆರ್.

ಮಾರ್ಗದರ್ಶಕರು

ಡಾ. ಎನ್. ಚಿನ್ನಸ್ವಾಮಿ ಸೋಸಲೆ
ಪ್ರಾಧ್ಯಾಪಕರು

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

೨೦೧೭

ಮಾರ್ಗದರ್ಶಕರ ದೃಢೀಕರಣ ಪತ್ರ

ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣಾ ಹೋರಾಟಗಳು (೧೮೩೦ ರಿಂದ ೧೯೪೭ರವರೆಗಿನ ಅಧ್ಯಯನ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಚರಿತ್ರೆ ವಿಭಾಗದ** ಪಿಎಚ್.ಡಿ. ಪದವಿಗಾಗಿ **ಬಸವರಾಜು ಕೆ.ಆರ್.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 21-11-17
ಸ್ಥಳ : ವಿದ್ಯಾರಣ್ಯ

ಡಾ. ಎನ್. ಚಿನ್ನಸ್ವಾಮಿ ಸೋಸಲೆ
ಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ಡಾ ಎನ್ ಚಿನ್ನಸ್ವಾಮಿ ಸೋಸಲೆ
ಪ್ರಾಧ್ಯಾಪಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಸಂಶೋಧಕರ ಪ್ರಮಾಣ ಪತ್ರ

ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣಾ ಹೋರಾಟಗಳು (೧೮೩೦ ರಿಂದ ೧೯೪೭ರವರೆಗಿನ ಅಧ್ಯಯನ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ. ಎನ್. ಚಿನ್ನಸ್ವಾಮಿ ಸೋಸಲೆ,** ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ **ಚರಿತ್ರೆ ವಿಭಾಗಕ್ಕೆ** ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಬಸವರಾಜು. ಕೆ.ಆರ್.

ದಿನಾಂಕ : 21/11/17
ಸ್ಥಳ : ವಿದ್ಯಾರಣ್ಯ

ಬಸವರಾಜು ಕೆ.ಆರ್.
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಪರಿವಿಡಿ

ಅಧ್ಯಾಯ : ಒಂದು

ಪ್ರಸ್ತಾವನೆ

ಅಧ್ಯಾಯ : ಒಂದು

ಪ್ರಸ್ತಾವನೆ

ಕರ್ನಾಟಕ ಚರಿತ್ರೆಯಲ್ಲಿ ಮಾತ್ರವಲ್ಲ, ಭಾರತದ ಚರಿತ್ರೆಯಲ್ಲಿಯೇ ಮೈಸೂರು ಸಂಸ್ಥಾನಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಏಕೆಂದರೆ ದಲಿತರು, ಶೋಷಿತರು, ಕೆಳವರ್ಗದವರು, ಮಹಿಳೆಯರಿಗೆ ಮೊದಲ ಬಾರಿಗೆ ಸಾಮಾಜಿಕ ನ್ಯಾಯ ಹಾಗೂ ಬದಲಾವಣೆಯ ಅವಕಾಶ ಕಲ್ಪಿಸಿದ್ದು ಇದೇ ಸಂದರ್ಭದಲ್ಲಿ. ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯ ಕಾಲಘಟ್ಟದಲ್ಲಿ ಮೈಸೂರು ಸಂಸ್ಥಾನ 'ಮಾದರಿ ಸಂಸ್ಥಾನ' ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಇದಕ್ಕೆ ಕಾರಣ ಬ್ರಿಟಿಷರು ಮತ್ತು ಒಡೆಯರ ಆಡಳಿತಾತ್ಮಕ ಸುಧಾರಣೆಗಳಿಂದ ಸಂಸ್ಥಾನದಲ್ಲಿ ಆದಂತಹ ಪ್ರಗತಿಪರ ಕಾರ್ಯಗಳು. ಆಧುನಿಕ ಮೈಸೂರಿನ ಚರಿತ್ರೆಯು ೧೭೯೯ ರಿಂದ ೧೮೩೦, ೧೮೩೦ರಿಂದ ೧೮೮೧, ೧೮೮೧ ರಿಂದ ೧೯೪೭. ಈ ಮೂರು ಹಂತದ ಕಾಲಾವಧಿಯಲ್ಲಿ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯವಾಗಿ ದೇಶ-ವಿದೇಶದ ಚರಿತ್ರೆಕಾರರು ಮತ್ತು ಚಿಂತಕರನ್ನು ಮುಖಾಮುಖಿ ಮಾಡುವಂತೆ ಮಾಡಿದ ಕಾಲವೇ ಆಗಿದೆ. ಜನತೆ ಪ್ರಭುತ್ವದ ಜೊತೆ ಮಾತನಾಡಲು ಆರಂಭಿಸಿದ ಕಾಲವೆಂದು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಅರಸರೂ ಸಹ ತಮ್ಮ ಜನಪರ ಕಾನೂನುಗಳನ್ನು ಜಾರಿಗೊಳಿಸುವ ಮೂಲಕ ಪ್ರಜೆಗಳನ್ನು ಮಾತನಾಡಿಸುವ ಕಾಲವಾಗಿತ್ತು. ಬಹುಮುಖ್ಯವಾಗಿ ಕೈಗಾರಿಕೆ, ಕೃಷಿ, ನೀರಾವರಿ, ವಿದ್ಯುತ್ ಅಭಿವೃದ್ಧಿಯ ಜೊತೆ ಶತ ಶತಮಾನಗಳಿಂದ ಶೋಷಣೆಗೆ ಒಳಗಾಗಿದ್ದಂತಹ ದಲಿತರ ಪ್ರಗತಿಗೆ ಕಾಳಜಿಯನ್ನು ವಹಿಸಿದ ಪ್ರಮುಖ ಸಂಸ್ಥಾನವಾಗಿ ರೂಪುಗೊಂಡಿತು.

ಆಧುನಿಕ ಮೈಸೂರಿನ ಚರಿತ್ರೆಯಲ್ಲಿ ದಲಿತರ ಪ್ರಗತಿ ಕುರಿತು ಸಂಶೋಧನಾತ್ಮಕ ಅಧ್ಯಯನ ಮಾಡಿರುವ ಚಿನ್ನಸ್ವಾಮಿ ಸೋಸಲೆ ಎಸ್. ಅವರು ಹೇಳುವಂತೆ ಉತ್ತರ ಕರ್ನಾಟಕಕ್ಕೆ ಹೋಲಿಸಿಕೊಂಡಾಗ ಮೈಸೂರು ಸಂಸ್ಥಾನದ ದಲಿತರು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕವಾದ ಪ್ರಗತಿಯಲ್ಲಿ ೫೦ ವರ್ಷದ ಹಿರಿತನವನ್ನು ಕಾಣಬಹುದು. ಇದು ಹೇಗೆ ಎಂಬ ಪ್ರಶ್ನೆ ಹಾಕಿಕೊಂಡಾಗ ಮೈಸೂರು ಸಂಸ್ಥಾನದ ೨೪ನೇ ಅರಸ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದಲಿತಪರ ಕಾಳಜಿಯಿಂದಾಗಿ ಪ್ರಪ್ರಥಮ ಬಾರಿಗೆ ಈ ವರ್ಗದವರಿಗೆ,

ಶಿಕ್ಷಣ ಹಾಗೂ ಅವರ ರಾಜಕೀಯ, ಸಾಮಾಜಿಕ ಪರಿಸ್ಥಿತಿಗಳನ್ನು ಉತ್ತಮ ಪಡಿಸುವುದಕ್ಕೆ ಹಾಗೂ ಅವರು ಸಮಾಜದ ಮುಖ್ಯವಾಹಿನಿಗೆ ಬರುವುದಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ನೀಡಿದ ಪ್ರೋತ್ಸಾಹ, ಮಾಡಿದ ಸಹಾಯ, ಕೈಗೊಂಡ ಕಾರ್ಯಗಳು, ತೋರಿಸಿದಂತಹ ಕಾಳಜಿ ಗಮನಾರ್ಹವಾದವು.

೧೯ನೆಯ ಶತಮಾನದಲ್ಲಾದ ಹೊಸ ಬದಲಾವಣೆಯ ಸುಧಾರಣಾ ಕ್ರಾಂತಿ ಮೈಸೂರು ಸಂಸ್ಥಾನಕ್ಕೆ ಪ್ರಭಾವಿಸಿತ್ತು. ಶಿಕ್ಷಣ ಜಾಗೃತಿ ಎಂಬ ಮಂತ್ರ ದಲಿತ ಜನತೆಯನ್ನು ಎಚ್ಚರಿಸಿತು. ಕ್ರಿಶ್ಚಿಯನ್ ಮಿಷನರಿ ಮತ್ತು ಒಡೆಯರು ಕೈಗೊಂಡ ಆಡಳಿತ ಕ್ರಮದ ಜೊತೆಗೆ ವೈದಿಕ ಸಮಾಜದಲ್ಲಿ ಅಂದು ಆಗುತ್ತಿದ್ದ ಸಮಾಜ ಸುಧಾರಣಾ ಆಂದೋಲನಗಳು ಕೆಳಸಮುದಾಯಗಳನ್ನು ಮೇಲೆತ್ತಲು ಪ್ರಯತ್ನಿಸಿದವು. ಕೆಲವು ದಲಿತರು ದೊರಕುವ ಶಿಕ್ಷಣವನ್ನು ಪಡೆದುಕೊಳ್ಳುವುದರೊಂದಿಗೆ ಪ್ರಜ್ಞಾವಂತರಾಗಿ ತಮ್ಮ ಬದುಕು, ಸಮುದಾಯ ಹಾಗೂ ಹಕ್ಕುಬಾಧ್ಯತೆಗಳ ಬಗ್ಗೆ ಚಿಂತನೆ ನಡೆಸಿದರು. ತಮ್ಮ ಮೇಲೆ ನಿರಂತರವಾಗಿ ಪ್ರಬಲವರ್ಗದವರಿಂದ ನಡೆಯುತ್ತಿರುವ ದೌರ್ಜನ್ಯ, ಶೋಷಣೆಯನ್ನು ಗ್ರಹಿಸಿ ಅದರಿಂದ ವಿಮೋಚನೆಗೊಳ್ಳಲು ಸಮುದಾಯಗಳನ್ನು ಜಾಗೃತಗೊಳಿಸಿದರು. ಭಾರತಕ್ಕೆ ಬ್ರಿಟಿಷರ ಆಗಮನದ ನಂತರ ಇವರು ಪಾಶ್ಚಾತ್ಯ ಶಿಕ್ಷಣವನ್ನು ಪ್ರಸಾರ ಮಾಡುವಲ್ಲಿ ಯಶಸ್ವಿಯಾದರು. ಮೈಸೂರು ಸಂಸ್ಥಾನದಲ್ಲಿ ಕ್ರೈಸ್ತ ಮಿಷನರಿಗಳು ಅನೇಕ ಮಿಷನರಿ ಶಾಲೆಗಳನ್ನು ತೆರೆದು ಆ ಮುಖಾಂತರ ಮೇಲು-ಕೀಳು ಎಂಬ ತಾರತಮ್ಯ ಮಾಡದೇ ಪ್ರತಿಯೊಬ್ಬರಿಗೂ ಸಮಾನ ರೀತಿಯಲ್ಲಿ ಶಿಕ್ಷಣವನ್ನು ದೊರಕಿಸಿಕೊಟ್ಟರು(ಇವರ ಉದ್ದೇಶವೇ ಪ್ರತ್ಯೇಕ ಅಧ್ಯಾಯವಾಗಿದೆ). ಇದರಿಂದಾಗಿ ಸಮಾಜ ಸುಧಾರಕರಾದ ಜ್ಯೋತಿಬಾಪುಲೆ, ರಾಜರಾಮ್ ಮೋಹನ್‌ರಾಯ್, ಸ್ವಾಮಿ ವಿವೇಕಾನಂದ, ಸಾಹು ಮಹಾರಾಜ್, ಗಾಂಧಿ, ಅಂಬೇಡ್ಕರ್ ಮುಂತಾದ ಸುಧಾರಕರ ಜ್ಞಾನ ಮತ್ತು ಬೋಧನೆಗಳನ್ನು ಅರಿಯಲು ಸಹಕಾರಿಯಾಯಿತು. ಈ ಹೊಸ ಶಿಕ್ಷಣ ಪಡೆದು ಮೂಕರಂತಿದ್ದ ದಲಿತರು ಸಮಾಜದಲ್ಲಿ ತಲೆಎತ್ತಿ ಮಾತನಾಡುವಂತಾದರು. ಬರಹ ಗೊತ್ತಿಲ್ಲದವರು ಬರವಣಿಗೆ ಮಾಡಿದರು. ತಮ್ಮ ಮೇಲಾಗುತ್ತಿರುವ ಶೋಷಣೆಯನ್ನು ಪ್ರಶ್ನಿಸಲು ಮುಂದಾದರು. ಮೈಸೂರು ಸಂಸ್ಥಾನದ ಆಧುನಿಕ ಶಿಕ್ಷಣ ಇದಕ್ಕೆ ಅವಕಾಶ ಕಲ್ಪಿಸಿಕೊಟ್ಟಿತು.

ದಲಿತ ಸಮುದಾಯವು ಅರಮನೆಗೆ ಪ್ರವೇಶ ಪಡೆಯಿತು. ಹೆಚ್ಚು ಆಡಳಿತಾತ್ಮಕವಾದ ಸೌಲಭ್ಯ ಪಡೆಯಲು ರಾಜಾಶ್ರಯ ದೊರೆಕಿತು. ಒಂದರ್ಥದಲ್ಲಿ ಪುರೋಹಿತಶಾಹಿ ಹಾಗೂ ಯಜಮಾನ್ಯ ಸಂಸ್ಕೃತಿಯಿಂದ ಸ್ವಲ್ಪಮಟ್ಟಿಗೆ ಪಾರಾಗಿ ನಾವು ನಿಮ್ಮ ಸಮಾನರೆಂದು ಹೇಳಿಕೊಳ್ಳುವ ಧ್ವನಿ ಹುಟ್ಟಿದ್ದು ಈ ಕಾಲದಲ್ಲಿಯೇ. ದಲಿತರ ಅಭಿವೃದ್ಧಿಗೆ ಕೈಗೊಂಡ ಸಮಾಜಮುಖಿ ಕಾರ್ಯಗಳನ್ನು ಶಾಸನಗಳ ಮೂಲಕ ಜಾರಿಗೆ ತಂದು ದಲಿತರಿಗೆ ಮಾತನಾಡುವ ಶಕ್ತಿ ನೀಡಿದವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು. ಜಾತಿ, ಮತ, ಪಂಥಗಳನ್ನು ಬಿಟ್ಟು, ಮೇಲು-ಕೀಳು ಎಂಬ ತಾರತಮ್ಯವನ್ನು ಅಳಿಸಿ, ಸಾಮಾನ್ಯ ಜನತೆಯು ಮೊದಲ ಬಾರಿಗೆ ಸಮಾಜದ ಮುಖ್ಯವಾಹಿನಿಗೆ ಬರಬೇಕೆಂದು ಶ್ರಮಿಸಿದರು.

ಪಾಶ್ಚಾತ್ಯ ಶಿಕ್ಷಣದ ಪ್ರಭಾವಕ್ಕೊಳಗಾದ ಸಮಾಜ ಸುಧಾರಣಾ ಸಂಸ್ಥೆಗಳಾದ ಬ್ರಹ್ಮಸಮಾಜ, ಆರ್ಯಸಮಾಜ, ಥಿಯೊಸೋಫಿಕಲ್ ಸೊಸೈಟಿ, ರಾಮಕೃಷ್ಣ ಮಿಷನ್‌ಗಳು ಹಾಗೂ ಗಾಂಧಿ, ಅಂಬೇಡ್ಕರ್, ಗೋಪಾಲಸ್ವಾಮಿ ಅಯ್ಯರ್ ಅವರುಗಳ ಪ್ರಭಾವದಿಂದ ೧೯ನೆಯ ಶತಮಾನದ ಅಂತ್ಯಕ್ಕೆ ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣಾ ಹೋರಾಟಗಳು ಆರಂಭವಾಗ ತೊಡಗಿದವು. ಅನೇಕ ದಲಿತೇತರರು ಅಸ್ಪೃಶ್ಯತೆ ನಿವಾರಿಸಲು ಮುಂದಾದರು. ಬಹುಮುಖ್ಯವಾಗಿ ಅಸ್ಪೃಶ್ಯರಿಗೆ ಶಿಕ್ಷಣ ಕಲ್ಪಿಸಿದ್ದು ಸ್ವಾಮಿ ವಿವೇಕಾನಂದರು. ಹತ್ತನೆಯ ಚಾಮರಾಜ ಒಡೆಯರ್ ಅವರಿಗೆ ದಲಿತರಿಗೆ ಶಿಕ್ಷಣ ನೀಡಲು ಪ್ರೇರೇಪಿಸಿ ಅನೇಕ ಶಾಲೆಗಳನ್ನು ತೆರೆಸಿದರು. ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯರಿಗೆ ಶಿಕ್ಷಣ ದೊರೆಯಲು ಸ್ವಾಮಿ ವಿವೇಕಾನಂದರ ಪಾತ್ರವು ಪ್ರಮುಖವಾದುದಾಗಿದೆ.

ಪಾಶ್ಚಾತ್ಯ ಶಿಕ್ಷಣದ ಪ್ರಭಾವ ಹಾಗೂ ಗಾಂಧಿಯವರ ಸೂಚನೆ ಮೇರೆಗೆ ಅನೇಕ ದಲಿತೇತರರು ಅನಾದಿಕಾಲದಿಂದಲೂ ಹಿಂದೂ ಸಮಾಜಕ್ಕೆ ಅಂಟಿಕೊಂಡು ಬಂದಿದ್ದ ಅಸ್ಪೃಶ್ಯತೆಯ ಬಗ್ಗೆ ಮಾತನಾಡಲು ಪ್ರಾರಂಭಿಸಿದರು. ಅಸ್ಪೃಶ್ಯತೆಯನ್ನು ನಿರ್ಮೂಲನೆ ಮಾಡಲು ರಾಷ್ಟ್ರೀಯವಾದಿಗಳು ಸಂಘ-ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಅಸ್ಪೃಶ್ಯತಾ ನಿವಾರಣಾ ಹೋರಾಟಗಳನ್ನು ನಡೆಸಿದರು. ಆದರೆ ಈ ಕಾರ್ಯದಲ್ಲಿ ಅವೆಷ್ಟು ಸತ್ಯ ಹಾಗೂ ಯಶಸ್ವಿಯಾದವು ಎಂಬುದು ಕೂಡ ಮುಖ್ಯ. ಕಾರಣ ಕೇವಲ ಪ್ರಚಾರಕೋಸ್ಕರ ಕೆಲವರು ಇಂತಹ ಚಳವಳಿಗಳನ್ನು ನಡೆಸಿ ಚರಿತ್ರೆಯ ಪುಟಗಳಲ್ಲಿ ದಾಖಲಿಸಿಕೊಂಡಿದ್ದಾರೆ. ಆದರೆ ಮೈಸೂರು ಸಂಸ್ಥಾನದಲ್ಲಿ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ನಿಸ್ವಾರ್ಥ ಸೇವೆಯನ್ನು ಮಾಡಿ ಚರಿತ್ರೆಯ ಪುಟಗಳಲ್ಲಿ ದಾಖಲಾಗದೆ ಎಲೆಮರೆ ಕಾಯಿಯಾಗಿಯೇ ಉಳಿದುಕೊಂಡ ಅನೇಕ ದಲಿತೇತರರನ್ನು ಗುರುತಿಸಬಹುದು. ಅವರ ನಿಸ್ವಾರ್ಥ ಸೇವೆ ದಲಿತ ಸಮುದಾಯವು ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸಹಕಾರಿಯಾಯಿತು.

ಭಾರತದ ಚರಿತ್ರೆಯನ್ನು ಒಮ್ಮೆ ಅವಲೋಕಿಸಿ ನೋಡಿದಾಗ, ಅದು ಪ್ರಬಲ ವರ್ಗಗಳ ಆಧಾರಿತ ಚರಿತ್ರೆಯಾಗಿದೆ ಎಂಬ ಭಾವನೆ ಬರುವುದು ಸಹಜ. ಪ್ರಾಚೀನ ಕಾಲದಿಂದಲೂ ಇಂದಿನವರೆಗೂ ಬದುಕನ್ನು ನಡೆಸುತ್ತಿರುವ ಬಹುಸಂಖ್ಯಾತ ಕೆಳವರ್ಗ ಹಾಗೂ ದಲಿತರ ಬದುಕು ಚರಿತ್ರೆಯ ಪುಟಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ. ಆಧುನಿಕ ಭಾರತದ ಚರಿತ್ರೆಯಲ್ಲೂ ದಲಿತರ ಬದುಕು, ಹೋರಾಟಗಳ ಕುರಿತು ದಾಖಲೆಗಳಿದ್ದರೂ, ಅವರಿಗೊಂದು ಇತಿಹಾಸವಿರದ ರೀತಿಯಲ್ಲಿ ಚರಿತ್ರೆಯನ್ನು ರೂಪಿಸಿದ್ದಾರೆ. ೧೯೭೦ರ ದಶಕದ ಆರಂಭದಿಂದ ಭಾರತದ ಚರಿತ್ರೆಯನ್ನು ಕುರಿತು ಚಿಂತಿಸುವ ಮತ್ತು ಮರುರಚಿಸುವ ಪ್ರಯತ್ನ ಆರಂಭವಾಗಿದ್ದು, ಇದರಲ್ಲಿ ಮೇಲ್ವರ್ಗ ಆಧಾರಿತ ಚರಿತ್ರೆಯನ್ನು ವಿಮರ್ಶಿಸುವ ಮೂಲಕ ನೈಜ ಚರಿತ್ರೆಯನ್ನು ಹುಟ್ಟು ಹಾಕುವಲ್ಲಿ ಪ್ರಗತಿಪರ ಚರಿತ್ರೆಕಾರರು ಆಸಕ್ತಿ ವಹಿಸುತ್ತಿದ್ದಾರೆ. ಹಾಗಾಗಿ ಕೆಳವರ್ಗ ಮತ್ತು

ದಲಿತವರ್ಗ ಇಂದು ತಮ್ಮ ಪರಂಪರೆ, ಸಂಸ್ಕೃತಿ ಮತ್ತು ಸಾಮುದಾಯಿಕ ಕುರುಹುಗಳನ್ನು ಚರಿತ್ರೆಯೆಂಬ ಕನ್ನಡಿಯಲ್ಲಿ ಕಾಣುವ ಪ್ರಯತ್ನ ಮಾಡುತ್ತಿರುವುದು ಗಮರ್ನಾಹವಾಗಿದೆ.

ಭಾರತೀಯ ಸ್ವಾತಂತ್ರ್ಯ ಚಳುವಳಿಯ ಇತಿಹಾಸವು ಪ್ರಬಲ ಕೋಮುಗಳ ಪಾತ್ರ ಮತ್ತು ಅವರ ಕೊಡುಗೆಗಳನ್ನು ಪ್ರಧಾನವಾಗಿಸಿ, ಅವರೇ ಭಾರತೀಯ ಸ್ವಾತಂತ್ರ್ಯ ಹೋರಾಟಗಾರರು ಎಂದು ವೈಭವೀಕರಿಸುವುದರ ಜೊತೆಗೆ ಕಾಂಗ್ರೆಸ್ ನೇತೃತ್ವದ ಹೋರಾಟಗಳನ್ನು ಮಾತ್ರ ಪರಿಗಣಿಸಿ ಚರಿತ್ರೆ ರಚಿಸಿದ್ದಾರೆ. ಅದೇ ಅವಧಿಯಲ್ಲಿ ಹುಟ್ಟಿಕೊಂಡ ಅನೇಕ ಜನಪರರ ಚಳವಳಿ ಮತ್ತು ಸಂಘಟನೆಗಳು ಹಾಗೂ ಬಹುಸಂಖ್ಯಾತ ವರ್ಗದ ಪಾತ್ರ ಮತ್ತು ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರಂತಹ ಮಹಾನ್ ವ್ಯಕ್ತಿಗಳನ್ನು ಗುರುತಿಸುವುದೇ ಇಲ್ಲ. ಹೀಗಾಗಿ ಪ್ರಸ್ತುತ ಅಧ್ಯಯನದಲ್ಲಿ ಸ್ವಾತಂತ್ರ್ಯ ಚಳವಳಿ ಅವಧಿಯ ದಲಿತ ಚರಿತ್ರೆಯನ್ನು ಬೆಳಕಿಗೆ ತರುವ ಪ್ರಯತ್ನ ಮಾಡಲಾಗಿದೆ.

ಇತಿಹಾಸದ ಅಧ್ಯಯನ ಇಂದು ಬದಲಾವಣೆಯ ದಿಕ್ಕಿಗೆ ಮುಖ ಮಾಡಿ ನಿಂತಿದೆ. ಖ್ಯಾತ ಪ್ರಖ್ಯಾತರಾದ ರಾಜರು, ಅವರ ವಂಶಾವಳಿ, ಅವರು ತಮ್ಮ ಹೊಗಳು ಭಂಟರಿಗೆ ಹೇಳಿ ಬರೆಸಿದಂತಹ ಭಟ್ಟಂಗಿ ಶಾಸನ, ಕಾವ್ಯಗಳಿಗೆ ಹಿಂದೆ ಸಲ್ಲುತ್ತಿದ್ದ ಮನ್ನಣೆ ಇಂದಿಲ್ಲ. ಒಂದು ದೇಶದ ಚರಿತ್ರೆ ಎಂದರೆ ಅದನ್ನು ಆಳಿದ ರಾಜವಂಶಗಳ ಇತಿಹಾಸ ಎಂಬ ಪರಿಕಲ್ಪನೆ ಗಟ್ಟಿಯಾಗಿ ಬೇರುಬಿಟ್ಟಿದ್ದ ಕಾಲದಲ್ಲಿ, ಕರ್ನಾಟಕದ ರಾಜಮನೆತನಗಳೆಂದರೆ ಕೇವಲ ಗಂಗ, ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರವೆಂದಷ್ಟೆ ಎನ್ನುವ ಭ್ರಮೆ ಇಂದು ಸಂಪೂರ್ಣವಾಗಿ ಇಲ್ಲವಾಗುತ್ತದೆ. ಇದರ ಬದಲಿಗೆ ಈ ಪ್ರಖ್ಯಾತ ರಾಜವಂಶಗಳ ಯಶಸ್ಸಿಗೆ ಕಾರಣಕರ್ತರೂ, ಮೂಲಾಧಾರ ಸ್ವರೂಪರೂ ಆದ ಸಾಮಂತರು, ಸ್ಥಾನಿಕರು, ಪಾಳೆಯಗಾರರು, ನಾಡಗೌಡರಂತಹ ಮಧ್ಯ ಹಾಗೂ ಕೆಳಸ್ತರದ ಆಡಳಿತಗಾರರನ್ನು ಕುರಿತ ಸೂಕ್ಷ್ಮ ಅಧ್ಯಯನ ಇಂದಿನ ಸಂಶೋಧನಾ ಪದ್ಧತಿಯ ನೆಲೆಗಟ್ಟಾಗಿದೆ. ಬದಲಾಗುತ್ತಿರುವ ಬದುಕಿನ ಹೊಸ ಪರಿಕಲ್ಪನೆಗಳು ಮತ್ತು ಪರಿಕರಗಳು ಚರಿತ್ರೆ ಮತ್ತು ಚರಿತ್ರೆಯ ಬರವಣಿಗೆಯನ್ನು ಕಾಲಕಾಲಕ್ಕೆ ಪರೀಕ್ಷೆಗೆ ಒಳಪಡಿಸುವುದು ಅನಿವಾರ್ಯ. ಇದೇ ಚರಿತ್ರೆಯ ಪುನರ್‌ಮೌಲ್ಯೀಕರಣ. ಈ ರೀತಿಯ ಅಧ್ಯಯನಗಳಿಗೆ ಕರ್ನಾಟಕದ ಇತಿಹಾಸದಲ್ಲಿಯೇ ಅತ್ಯಂತ ಹೆಚ್ಚಾಗಿ ಒಳಗಾಗಿರುವುದು ಆಧುನಿಕ ಮೈಸೂರು ಸಂಸ್ಥಾನದ ಚರಿತ್ರೆ.

ಆಧುನಿಕ ಮೈಸೂರು ಸಂಸ್ಥಾನದ ಒಡೆಯರು ತಮ್ಮ ಆಳ್ವಿಕೆಯ ಅವಧಿಯಲ್ಲಿ ಅಸ್ಪೃಶ್ಯತೆಯ ನಿವಾರಣೆ ಹಾಗೂ ಅಸ್ಪೃಶ್ಯರಲ್ಲಿ ಅಭಿವೃದ್ಧಿಯ ಕನಸನ್ನು ಕಾಣಿಸಿದವರೆಂದರೆ ತಪ್ಪಾಗಲಾರದು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಳ್ವಿಕೆ ಅವಧಿಯಲ್ಲಿ ಉಂಟಾದ ಬ್ರಾಹ್ಮಣೇತರ ಚಳವಳಿ ಒಂದು ರೀತಿಯಲ್ಲಿ ದಲಿತರು ಜಾಗೃತಿ ಹೊಂದಿ, ಸಂಘಟನಾತ್ಮಕ ಹೋರಾಟದಲ್ಲಿ ತೊಡಗಲು ಸಹಕಾರಿಯಾಯಿತು. ಬ್ರಾಹ್ಮಣೇತರರು ತಮ್ಮ ಸಮುದಾಯಗಳಿಗೆ ಅನುಕೂಲ

ಪಡೆಯಲು ದಲಿತ ಸಮುದಾಯದ ಸಹಕಾರ ಪಡೆದು ತದನಂತರದಲ್ಲಿ ದಲಿತರನ್ನು ಮೂಲೆಗುಂಪು ಮಾಡಿದ ರಾಜಕೀಯ ಹುನ್ನಾರಗಳನ್ನು ಪ್ರಸ್ತುತ ಮಹಾಪ್ರಬಂಧದಲ್ಲಿ ಸಮಗ್ರವಾಗಿ ಚರ್ಚಿಸಲಾಗಿದೆ.

ಬ್ರಾಹ್ಮಣೇತರ ಚಳವಳಿ ಯಶಸ್ವಿಯಾದ ನಂತರ ಬ್ರಾಹ್ಮಣರ ಪ್ರಾಬಲ್ಯ ಕುಸಿಯತೊಡಗಿತು. ಇದನ್ನು ಅರಿತ ಬ್ರಾಹ್ಮಣ ಸಮುದಾಯವು ಅರಸರನ್ನು ಓಲೈಸಿಕೊಳ್ಳುವ ಮತ್ತು ಹಿಂದೂ ಧರ್ಮವನ್ನು ರಕ್ಷಿಸುವ ಉದ್ದೇಶದಿಂದ ಬಹುಸಂಖ್ಯಾತರಾದ ದಲಿತ ಸಮುದಾಯವನ್ನು ಓಲೈಸಿಕೊಳ್ಳಲು ಪ್ರಯತ್ನಿಸಿದ ಅಂಶಗಳನ್ನು ವಿಶ್ಲೇಷಿಸಲಾಗಿದೆ. ಗಾಂಧಿ ಹರಿಜನೋದ್ಧಾರ ಕಾರ್ಯ ಕೈಗೊಂಡ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ಬ್ರಾಹ್ಮಣೇತರರು ಗಾಂಧಿ ಅನುಯಾಯಿಗಳಾಗಿದ್ದು, ಗಾಂಧಿ ಅವರ ರಚನಾತ್ಮಕ ಕಾರ್ಯಗಳನ್ನು ಅನುಷ್ಠಾನಗೊಳಿಸಲು ಪ್ರಯತ್ನಿಸಿದ ಬಗೆ ಹಾಗೂ ಅದೇ ಸಂದರ್ಭದಲ್ಲಿ ಬಾಬಾಸಾಹೇಬ್ ಅಂಬೇಡ್ಕರ್ ದೇಶದಾದ್ಯಂತ ಅಸ್ಪೃಶ್ಯತಾ ನಿವಾರಣೆ ವಿರುದ್ಧ ಹೋರಾಡುತ್ತಿದ್ದರೂ ಸಹ ಅಂಬೇಡ್ಕರ್ ಅವರು ಬ್ರಾಹ್ಮಣೇತರರಿಗೆ ನಾಯಕರಾಗಿ ಕಾಣಿಸಲಿಲ್ಲ. ಏಕೆಂದರೆ ಅವರೊಬ್ಬ ಅಸ್ಪೃಶ್ಯ ಎಂಬ ಕಾರಣಕ್ಕಾಗಿ, ಗಾಂಧಿ ನಾಯಕತ್ವವನ್ನು ಒಪ್ಪಿಕೊಂಡ ಸೂಕ್ಷ್ಮ ಅಂಶಗಳನ್ನು ವಿಶ್ಲೇಷಾತ್ಮಕವಾಗಿ ಪ್ರಸ್ತುತ ಮಹಾಪ್ರಬಂಧದಲ್ಲಿ ಚರ್ಚಿಸಲಾಗಿದೆ.

ಪ್ರಸ್ತುತ ಪ್ರಬಂಧದಲ್ಲಿ ಮೈಸೂರು ಸಂಸ್ಥಾನದಲ್ಲಿ ೧೮೯೯ರಿಂದ ೧೯೪೭ರ ಕಾಲಾವಧಿಯಲ್ಲಿ ಜರುಗಿಸಿದಂತಹ ಅಸ್ಪೃಶ್ಯತಾ ನಿವಾರಣಾ ಹೋರಾಟಗಳನ್ನು ಸಮಗ್ರವಾಗಿ ದಾಖಲಿಸಲಾಗಿದೆ. ಹಾಗೆಯೇ ಸ್ವಾತಂತ್ರ್ಯಪೂರ್ವದ ದಲಿತ ಹಾಗೂ ದಲಿತೇತರ ಹೋರಾಟಗಾರರ ಜೀವನ ಸಾಧನೆಯನ್ನು ವಿಶ್ಲೇಷಿಸಿ ಮಾಹಿತಿಯನ್ನು ನೀಡಲಾಗಿದೆ. ಮೈಸೂರು ಸಂಸ್ಥಾನದ ಅರಸರು ಸಮಾಜ ಸುಧಾರಣಾ ಕಾನೂನುಗಳನ್ನು ಜಾರಿಗೊಳಿಸುವುದರ ಮೂಲಕ ದಲಿತರ ಅಭಿವೃದ್ಧಿಯನ್ನು ಹಾಗೂ ಅವರಲ್ಲಿದ್ದಂತಹ ಅನಿಷ್ಟ ಆಚರಣೆಗಳನ್ನು ಹೋಗಲಾಡಿಸುವುದರ ಮೂಲಕ ಸಾಮಾಜಿಕ ಪ್ರಗತಿಯನ್ನು ಸಾಧಿಸಲು ಮುಂದಾದ ಕ್ರಮವನ್ನು ಚರ್ಚಿಸಲಾಗಿದೆ. ಅಲ್ಲವೇ ಅಂದಿನ ಅಸ್ಪೃಶ್ಯತಾ ನಿವಾರಣಾ ಹೋರಾಟಗಳು ಪ್ರಸ್ತುತ ಸಂದರ್ಭದ ದಲಿತ ಚಳವಳಿ, ಸಂಘಟನೆಗಳ ಮೇಲೆ ಪ್ರಭಾವ ಬೀರಿದ ಬಗೆಯನ್ನು ಕುರಿತು ವಿಶ್ಲೇಷಿಸಲಾಗಿದೆ.

ಒಟ್ಟಾರೆಯಾಗಿ ಮೈಸೂರು ಸಂಸ್ಥಾನದ ಚರಿತ್ರೆಯನ್ನು ವಿಭಿನ್ನ ನೆಲೆಯಲ್ಲಿ ಅಧ್ಯಯನ ಮಾಡಿ ಅಸ್ಪೃಶ್ಯತಾ ನಿವಾರಣಾ ಹೋರಾಟಗಳಿಂದ ದಲಿತ ಸಮುದಾಯದಲ್ಲಿ ಉಂಟಾದ ಜಾಗೃತಿಯಿಂದ ಮೈಸೂರು ಸಂಸ್ಥಾನದ ಶೈಕ್ಷಣಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ಬದಲಾವಣೆಗೆ ಕಾರಣ ಮತ್ತು ಅಸ್ಪೃಶ್ಯತಾ ನಿವಾರಣೆಗೆ ಪ್ರೇರಣೆ ಹಾಗೂ ಪ್ರಭಾವ ಬೀರಿದ ಅಂಶಗಳು ಹಾಗೂ ದಲಿತೋದ್ಧಾರ ಕಾರ್ಯಗಳನ್ನು ಕೈಗೊಂಡಿದ್ದರ ರಾಜಕೀಯ ಅಂಶಗಳನ್ನು ಸಮಗ್ರವಾಗಿ ಚರ್ಚಿಸಿ ವಿಶ್ಲೇಷಿಸಿ ಪ್ರಸ್ತುತ ಪ್ರಬಂಧವನ್ನು ಕಟ್ಟಿಕೊಡಲಾಗಿದೆ.

೧.೧. ಅಧ್ಯಯನದ ಉದ್ದೇಶ

ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ಗಾಂಧಿ ಪೂರ್ವದಲ್ಲಿಯೇ ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತೆಯನ್ನು ನಿರ್ಮೂಲನೆ ಮಾಡಲು ಹಲವಾರು ಹೋರಾಟಗಳು ನಡೆದಿದ್ದು ಹಾಗೂ ದಲಿತ ಮತ್ತು ದಲಿತೇತರರರು ಅಸ್ಪೃಶ್ಯತೆಯ ವಿರುದ್ಧ ನಡೆಸಿದ ಚಳವಳಿಗಳನ್ನು ಚರಿತ್ರೆಯಲ್ಲಿ ಹೆಚ್ಚು ದಾಖಲಾಗದೆ ಇರುವುದನ್ನು ಗಮನಿಸಬಹುದು. ಇವರನ್ನು ಚರಿತ್ರೆಯಿಂದ ಕಡೆಗಣಿಸಿ ಅಸ್ಪೃಶ್ಯರನ್ನಾಗಿಸಿರುವ ಸತ್ಯ ಸಂಗತಿ ಬೌದ್ಧಿಕ ಜಗತ್ತಿಗೆ ಆಶ್ಚರ್ಯ ಮೂಡಿಸುತ್ತದೆ. ಅಲ್ಲದೇ ಭಾರತೀಯ ಸ್ವಾತಂತ್ರ್ಯ ಹೋರಾಟದ ಕಾಲವನ್ನು ತೆಗೆದುಕೊಂಡಾಗಲೂ ದಲಿತ ಚರಿತ್ರೆ ಎಂಬುದು ಸ್ಥಗಿತಗೊಂಡ ಅಧ್ಯಾಯವಾಗಿದೆ. ದಲಿತ ಹೋರಾಟಗಾರರ ಬದುಕು, ಹೋರಾಟದ ಕುರಿತ ಯಾವುದೇ ಬರಹಗಳು ಆ ಕಾಲಘಟ್ಟದ ಚರಿತ್ರೆ ಬರವಣಿಗೆಯಲ್ಲಿ ಉಲ್ಲೇಖಿತವಾಗಿಲ್ಲ. ಅಕ್ಷರ ಬಲ್ಲವರು ತಮಗೆ ಅನುಕೂಲವಾಗುವ ರೀತಿಯಲ್ಲಿ ಚರಿತ್ರೆಯನ್ನು ರಚಿಸಿಕೊಂಡು ಕೆಳವರ್ಗದವರ, ದಲಿತರ ಬಗ್ಗೆ ವಕ್ರದೃಷ್ಟಿ, ನಿಕೃಷ್ಟ ಭಾವನೆ, ತಿರಸ್ಕಾರವನ್ನು ತೋರಿಸಿದ್ದಾರೆ. ಹಾಗಾಗಿ ಇತಿಹಾಸದಿಂದಲೇ ಮರೆಮಾಚಲ್ಪಟ್ಟ ಅದೆಷ್ಟೋ ಸತ್ಯ ಸಂಗತಿಗಳು, ತಿರುಚಿದ ಚರಿತ್ರೆಯೆಲ್ಲವೂ ಇಂದು ಸಂಶೋಧಕರಿಗೆ ದೊಡ್ಡ ಸವಾಲಾಗಿದೆ. ಪ್ರಬಲ ವರ್ಗದ ಚರಿತ್ರೆಯಷ್ಟೇ ದಲಿತ, ಕೆಳಸಮುದಾಯಗಳ ಚರಿತ್ರೆಯೂ ಪ್ರಮುಖವಾದುದು ಎಂಬುದನ್ನು ಅಧ್ಯಯನ ಮಾಡುವುದೇ ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ. ಕಾಲಚಕ್ರದಲ್ಲಿ ಸಿಲುಕಿ ನರಳುತ್ತಿರುವ ದಲಿತ ಸಮುದಾಯಗಳ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಅನೇಕ ಹೋರಾಟಗಳು ನಡೆದಿರುವುದು ಕಂಡುಬರುತ್ತದೆ. ಈ ಹೋರಾಟಗಳ ಒಳನೋಟಗಳನ್ನು ವಿವಿಧ ಆಯಾಮಗಳ ಮೂಲಕ ಅಧ್ಯಯನ ಮಾಡುವ ಉದ್ದೇಶವನ್ನು ಒಳಗೊಂಡಿದೆ.

* ಪ್ರಸ್ತುತ ಅಧ್ಯಯನದಲ್ಲಿ ಮೈಸೂರು ಸಂಸ್ಥಾನದಲ್ಲಿ ೧೮೩೦ ರಿಂದ ೧೯೪೭ರ ಕಾಲಾವಧಿಯಲ್ಲಿ ಜರುಗಿದಂತಹ ಅಸ್ಪೃಶ್ಯತಾ ನಿವಾರಣಾ ಹೋರಾಟಗಳನ್ನು ಸಮಗ್ರವಾಗಿ ದಾಖಲಿಸುವ ಉದ್ದೇಶವನ್ನು ಹೊಂದಿದೆ.

* ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣೆ ಕೈಗೊಳ್ಳಲು ಪ್ರೇರಣೆಯಾದ ಅಂಶಗಳನ್ನು ವಿಸ್ತೃತವಾಗಿ ವಿಶ್ಲೇಷಿಸುವ ಉದ್ದೇಶವನ್ನು ಒಳಗೊಂಡಿದೆ.

* ಇದುವರೆಗಿನ ಚರಿತ್ರೆಯಲ್ಲಿ ದಲಿತೇತರ ನಾಯಕರ ದಲಿತಪರ ಕೆಲಸಗಳನ್ನು ಮಾರೆಮಾಚಿ ಕೇವಲ ಅವರ ರಾಜಕೀಯ, ಸ್ವಾತಂತ್ರ್ಯ ಚಳವಳಿಯಲ್ಲಿ ಅವರ ಪಾತ್ರ ಮತ್ತು ಕೌಟುಂಬಿಕ ಹಿನ್ನೆಲೆಯನ್ನು ದಾಖಲಿಸಲಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ದಲಿತೇತರರ ದಲಿತೋದ್ಧಾರ ಕಾರ್ಯಗಳನ್ನು ಮತ್ತು ಸಮಾಜಮುಖಿ ಚಿಂತನೆಗಳನ್ನು ಚರ್ಚಿಸುವ ಉದ್ದೇಶವನ್ನು ಒಳಗೊಂಡಿದೆ.

* ಚರಿತ್ರೆಯಲ್ಲಿ ದಾಖಲಾಗದೇ ಇರುವ ಸ್ವಾತಂತ್ರ್ಯಪೂರ್ವದಲ್ಲಿಯೇ ಶಿಕ್ಷಣ ಪಡೆದ ಪ್ರಥಮ ತಲೆಮಾರಿನ ದಲಿತ ಹೋರಾಟಗಾರರ ಅಸ್ಪೃಶ್ಯತಾ ನಿವಾರಣಾ ಹೋರಾಟಗಳು

ಮತ್ತು ಅವರ ಜೀವನ ಸಾಧನೆಯನ್ನು ಅಧ್ಯಯನ ಮಾಡುವ ಉದ್ದೇಶವನ್ನು ಪ್ರಸ್ತುತ ಮಹಾಪ್ರಬಂಧ ಒಳಗೊಂಡಿದೆ.

* ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯಪೂರ್ವದಲ್ಲಿಯೇ ಜಾರಿಗೊಂಡ ಸಮಾಜ ಸುಧಾರಣಾ ಕಾನೂನುಗಳ ಸಾಧಕ-ಬಾಧಕಗಳ ವಿಶ್ಲೇಷಣೆ ಮಾಡುವ ಉದ್ದೇಶವನ್ನು ಹೊಂದಿದೆ.

* ಮೈಸೂರು ಸಂಸ್ಥಾನದ ಅಸ್ಪೃಶ್ಯತಾ ನಿವಾರಣಾ ಹೋರಾಟಗಳ ಪ್ರಭಾವ ಪ್ರಸ್ತುತ ಸಂದರ್ಭದ ದಲಿತ ಸಮುದಾಯದ ಮೇಲೆ ಬೀರಿದ ಪರಿಣಾಮಗಳನ್ನು ಕುರಿತು ಚರ್ಚಿಸಲಾಗಿದೆ.

* ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ಮೈಸೂರು ಸಂಸ್ಥಾನಕ್ಕೆ ಆಹ್ವಾನಿಸದಂತೆ ತಡೆದ ದಲಿತೇತರ ರಾಜಕೀಯ ಹುನ್ನಾರವನ್ನು ವಿವೇಚಿಸುವುದಾಗಿದೆ.

* ಬ್ರಾಹ್ಮಣ ಮತ್ತು ಬ್ರಾಹ್ಮಣೇತರರು ದಲಿತ ಸಮುದಾಯವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡು ನಂತರದಲ್ಲಿ ದಲಿತರನ್ನು ಕಡೆಗಣಿಸಿದ ಹಿನ್ನೆಲೆಯನ್ನು ವಿಶ್ಲೇಷಿಸುವ ಉದ್ದೇಶವಿದೆ.

* ದಲಿತೇತರರು ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣೆಗೆ ಮುಂದಾಗಲು ಇದ್ದ ಕಾರಣಗಳನ್ನು ಚರ್ಚಿಸುವ ಉದ್ದೇಶವನ್ನು ಒಳಗೊಂಡಿದೆ.

ಹೀಗೆ ಚರಿತ್ರೆಯಲ್ಲಿ ದೂರ ಉಳಿದ ಅನೇಕ ಘಟನೆಗಳನ್ನು ಸಮಗ್ರವಾಗಿ ಅಧ್ಯಯನವನ್ನು ಕೈಗೊಳ್ಳುವ ಉದ್ದೇಶವನ್ನು ಮಹಾಪ್ರಬಂಧ ಒಳಗೊಂಡಿದೆ.

೧.೨. ಅಧ್ಯಯನದ ವಿಧಾನ ಮತ್ತು ವ್ಯಾಪ್ತಿ

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಪ್ರಕಟಿತ ಮತ್ತು ಅಪ್ರಕಟಿತ ಗ್ರಂಥಗಳನ್ನು ಮತ್ತು ಬಿಡಿ ಬಿಡಿ ಲೇಖನಗಳನ್ನು ಹಾಗೂ ಇತರ ಆಕರ ಸಾಮಗ್ರಿಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಪ್ರಗತಿಪರ ಮತ್ತು ಹಿರಿಯ ದಲಿತ ಹೋರಾಟಗಾರರನ್ನು ಭೇಟಿ ಮಾಡಿ ವಿಷಯಕ್ಕೆ ಪೂರಕವಾದ ಮಾಹಿತಿ ಸಂಗ್ರಹಿಸಲಾಗಿದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ದೊರೆಯುವ ಲಿಖಿತ ಆಕರಗಳು ಮತ್ತು ಮೌಖಿಕ ಆಕರಗಳ ಮೂಲಕ ಮಾಹಿತಿ ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಅಲ್ಲದೇ ನಿಯತಕಾಲಿಕೆ ಮತ್ತು ಪತ್ರಿಕೆಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಮೈಸೂರು ಸಂಸ್ಥಾನದಲ್ಲಿ ಶಿಕ್ಷಣ ಪಡೆದ ಪ್ರಥಮ ತಲೆಮಾರಿನ ದಲಿತ ಶಿಕ್ಷಣವಂತರ ಕುಟುಂಬದವರನ್ನು ಸಂದರ್ಶನ ಮಾಡಿ ಅಂದಿನ ಸಾಮಾಜಿಕ ಸ್ಥಿತಿಗತಿಗಳು, ದಲಿತೋದ್ಧಾರದ ಕಾರ್ಯಗಳ ಬಗ್ಗೆ ಮಾಹಿತಿಯನ್ನು ಪಡೆಯಲಾಗಿದೆ. ಎಲ್ಲಾ ಬಗೆಯ ಪ್ರಾಥಮಿಕ ಹಾಗೂ ಇತರೆ ಆಕರ ಸಾಮಗ್ರಿಗಳನ್ನು ಬಳಸಿಕೊಳ್ಳಲಾಗಿದೆ. ನೆರವಾದ ಹಾಗೂ ಪೂರಕವಾಗಿ ದೊರೆಯುವ ಎಲ್ಲಾ ಬಗೆಯ ವಿವರ, ಕಾಗದ ಪತ್ರ, ದಾಖಲೆಗಳನ್ನು ಬಳಸಿಕೊಳ್ಳಲಾಗಿದೆ.

ರಾಜ್ಯ ಪತ್ರಗಾರ ಇಲಾಖೆ, ಸರ್ಕಾರಿ ಹಾಗೂ ಖಾಸಗಿ ಗ್ರಂಥಾಲಯಗಳು ಸಂಘ-ಸಂಸ್ಥೆಗಳನ್ನು ಬಳಸಿಕೊಂಡು ಚರಿತ್ರೆಯ ಶಿಸ್ತಿನ ವಿಧಿ-ವಿಧಾನಗಳ ಮೂಲಕ ವಿಶ್ಲೇಷಣೆಯನ್ನು ಮಾಡಲಾಗಿದೆ.

ವಸಾಹತುಶಾಹಿಯ ಆಗಮನದಿಂದಾಗಿ ಕರ್ನಾಟಕವು ಹಲವು ಭಾಗಗಳಾಗಿ ಒಡೆದು ಹೋಯಿತು. ಕರ್ನಾಟಕವನ್ನು ಮೈಸೂರು ಸಂಸ್ಥಾನ, ಹೈದರಾಬಾದ್ ಕರ್ನಾಟಕ, ಮುಂಬಯಿ ಕರ್ನಾಟಕ, ಮದ್ರಾಸ್ ಕರ್ನಾಟಕ, ಕೊಡಗು ಪ್ರತ್ಯೇಕ ರಾಜ್ಯ ಹೀಗೆ ವಿವಿಧ ಭಾಗಗಳನ್ನಾಗಿ ವಿಂಗಡಿಸಲಾಯಿತು. ಹೀಗಾಗಿ ವಸಾಹತು ಆಳ್ವಿಕೆಯುದ್ದಕ್ಕೂ ಇವೆಲ್ಲವು ಬೇರೆ ಬೇರೆ ಬಗೆಯ ಆಡಳಿತಕ್ಕೆ ಒಳಪಡಬೇಕಾಯಿತು. ಮೈಸೂರು ಸಂಸ್ಥಾನವೆನ್ನಿಸಿಕೊಂಡಿದ್ದಂತಹ ಪ್ರದೇಶವು ಮೈಸೂರು, ಬೆಂಗಳೂರು, ತುಮಕೂರು, ಕೋಲಾರ, ಮಂಡ್ಯ, ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ ಹಾಗೂ ಶಿವಮೊಗ್ಗ ಜಿಲ್ಲೆಗಳನ್ನು ೧೮೩೧ರಿಂದ ೧೯೪೭ರ ಕಾಲಘಟ್ಟವನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಳ್ಳಲಾಗಿದೆ.

೧.೩. ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವು ಮೈಸೂರು ಸಂಸ್ಥಾನದಲ್ಲಿ ೧೮೯೯ ರಿಂದ ೧೯೪೭ರವರೆಗೆ ನಡೆದ ಅಸ್ಪೃಶ್ಯತಾ ನಿವಾರಣಾ ಹೋರಾಟಗಳಲ್ಲಿ, ದಲಿತ ಮತ್ತು ದಲಿತೇತರ ಹೋರಾಟಗಾರರ ಪಾತ್ರ, ಪ್ರೇರಣೆಯಾದ ಅಂಶಗಳ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸುವುದಾಗಿರುತ್ತದೆ.

ಈ ಅಧ್ಯಯನವು ಒಟ್ಟು ೮ ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲನೆಯ ಅಧ್ಯಾಯವು ಪ್ರಸ್ತಾವನೆ, ಉದ್ದೇಶ, ವ್ಯಾಪ್ತಿ ವಿಧಿವಿಧಾನ, ಸ್ವರೂಪ ಹಾಗೂ ಈವರೆಗಿನ ಅಧ್ಯಯನಗಳ ಕುರಿತ ವಿವರಗಳನ್ನು ಒಳಗೊಂಡಿದೆ.

ಎರಡನೆಯ ಅಧ್ಯಾಯವು ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣೆಗೆ ಪ್ರೇರಣೆಯಾದ ಅಂಶಗಳನ್ನು ಚರ್ಚಿಸಲಾಗಿದೆ. ಬ್ರಾಹ್ಮಣೇತರ ಚಳವಳಿಯ ನಂತರ ಉಂಟಾದ ಬಿಕ್ಕಟ್ಟು, ಬ್ರಾಹ್ಮಣ ಮತ್ತು ಬ್ರಾಹ್ಮಣೇತರರು ದಲಿತರನ್ನು ರಾಜಕೀಯವಾಗಿ ಬಳಸಿಕೊಂಡು ನಂತರದಲ್ಲಿ ಅವರಿಗೆ ಮಾಡಿದ ಅನ್ಯಾಯವನ್ನು ಕುರಿತು ವಿಶ್ಲೇಷಿಸಲಾಗಿದೆ. ಕ್ರೈಸ್ತ ಮಿಷನರಿಗಳು ದಲಿತರಿಗೆ ಮಾಡಿದ ಸಮಾಜ ಸೇವೆಯ ಹಿಂದಿನ ಹುನ್ನಾರಗಳನ್ನು ಚರ್ಚಿಸಲಾಗಿದೆ. ಗಾಂಧಿ ಅವರು ದಲಿತೋದ್ಧಾರದ ಕಾರ್ಯವನ್ನು ಕೈಗೊಳ್ಳಲು ಮುಂದಾದ ಬಗೆಯನ್ನು ಚರ್ಚಿಸಲಾಗಿದೆ. ಅಂಬೇಡ್ಕರ್ ಅವರು ಮೈಸೂರು ಸಂಸ್ಥಾನಕ್ಕೆ ಪ್ರವೇಶ ನಿರಾಕರಿಸಿದರ ಹಿಂದಿನ ಪುರೋಹಿತಶಾಹಿ ವರ್ಗದ ಕುತಂತ್ರವನ್ನು ವಿವರಿಸಲಾಗಿದೆ. ಅಲ್ಲದೇ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಅಸ್ಪೃಶ್ಯತಾ ನಿವಾರಣೆಗೆ ಮುಂದಾಗಲು ಪ್ರೇರಣೆಯಾದ ರಾಜಕೀಯ, ಸಾಮಾಜಿಕ ಅಂಶಗಳನ್ನು ಕುರಿತು ಚರ್ಚಿಸಲಾಗಿದೆ. ಮೇಲಿನ ಎಲ್ಲಾ ಅಂಶಗಳು ದಲಿತರ ಅಭಿವೃದ್ಧಿಗೆ ಹೇಗೆ ಪ್ರೇರಣೆಯಾದವು ಎಂಬುದನ್ನು ಸಮಗ್ರವಾಗಿ ಚರ್ಚಿಸಿ ವಿಶ್ಲೇಷಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣೆಗಾಗಿ ಪ್ರಮುಖ ಪಾತ್ರ ವಹಿಸಿದ ದಲಿತೇತರರ ಬಗ್ಗೆ ಮಾಹಿತಿ ನೀಡಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಇವರೆಗಿನ ಚರಿತ್ರೆಗಳಲ್ಲಿ ದಲಿತೇತರ ನಾಯಕರ ರಾಜಕೀಯ ಜೀವನದ ಕುರಿತು ಮಾಹಿತಿಯನ್ನು ಹೆಚ್ಚಾಗಿ ನೀಡಿರುವುದನ್ನು ಕಾಣಬಹುದು. ದಲಿತೇತರರು ಅಸ್ಪೃಶ್ಯರ ಅಭಿವೃದ್ಧಿಗೆ ಮುಂದಾಗಲು ಕಾರಣ ಮತ್ತು ಪ್ರೇರಣೆಯಾದ ಅಂಶಗಳನ್ನು ವಿಸ್ತೃತವಾಗಿ ಚರ್ಚಿಸಿ, ದಲಿತೇತರರು ಕೈಗೊಂಡ ದಲಿತೋದ್ಧರಾದ ಕಾರ್ಯಗಳನ್ನು ಮತ್ತು ಅವರ ಜೀವನ ಸಾಧನೆಯ ಮಾಹಿತಿಯನ್ನು ವಿಶ್ಲೇಷಣಾತ್ಮಕವಾಗಿ ಚರ್ಚಿಸಿ ರಾಜಕೀಯ ಸ್ವಾತಂತ್ರ್ಯ ಹೋರಾಟದಲ್ಲಿ ಅಲ್ಲದೆ ಕೆಲವು ಪ್ರಗತಿಪರ ದಲಿತೇತರರು ಸಮಾಜ ಸುಧಾರಣಾ ಕಾರ್ಯಗಳಲ್ಲಿ ತೊಡಗಿದ್ದರು ಎಂಬುದನ್ನು ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಸ್ವಾತಂತ್ರ ಪೂರ್ವದಲ್ಲಿಯೇ ಮೈಸೂರು ಸಂಸ್ಥಾನದಲ್ಲಿ ಒಡೆಯರ ಮತ್ತು ಪ್ರಗತಿಪರ ದಲಿತೇತರರು ಹಾಗೂ ಕ್ರೈಸ್ತ ಮಿಷನರಿಗಳ ಸಹಾಯದಿಂದ ಶಿಕ್ಷಣ ಪಡೆದ ಮೊದಲ ತಲೆಮಾರಿನ ದಲಿತ ಶಿಕ್ಷಣವಂತರ ಮಾಹಿತಿಯನ್ನು ನೀಡಲಾಗಿದೆ. ದಲಿತ ಸಮುದಾಯದ ಅಭಿವೃದ್ಧಿಗೋಸ್ಕರ ಅವರ ಶಿಕ್ಷಣ, ಮೂಲಭೂತ ಸೌಲಭ್ಯಗಳಿಗಾಗಿ ಶಿಕ್ಷಣವಂತ ದಲಿತರು ಕೈಗೊಂಡ ಕಾರ್ಯಗಳು ಮಾಡಿದ ಹೋರಾಟಗಳನ್ನು ಸಮಗ್ರವಾಗಿ ದಾಖಲಿಸಲಾಗಿದೆ. ಚರಿತ್ರೆಯಿಂದ ದೂರ ಉಳಿಸಲ್ಪಟ್ಟ ೨೫ ಜನ ದಲಿತ ಹೋರಾಟಗಾರರ ಜೀವನ ಚರಿತ್ರೆ ಮತ್ತು ಅಂದಿನ ಸಂದರ್ಭದ ಸಾಮಾಜಿಕ ಪರಿಸ್ಥಿತಿಯನ್ನು ವಿಮರ್ಶಾತ್ಮಕವಾಗಿ ವಿವೇಚಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ನಡೆದ ಅಸ್ಪೃಶ್ಯತೆ ಆಚರಣೆಯ ವಿರುದ್ಧ ನಡೆದ ಹೋರಾಟಗಳನ್ನು ದಾಖಲಿಸಲಾಗಿದೆ. ಸ್ವಾತಂತ್ರ್ಯ ಹೋರಾಟಕ್ಕಾಗಿ ನಡೆದ ಚಳವಳಿಗಳನ್ನು ಹಾಗೂ ಪ್ರಬಲ ವರ್ಗದವರು ಕೈಗೊಂಡ ಹೋರಾಟಗಳನ್ನು ಮಾತ್ರ ಚರಿತ್ರೆಯ ಭಾಗವೆಂಬಂತೆ ಅಕ್ಷರಬಲ್ಲ ವೈದಿಕರು ಚರಿತ್ರೆಯನ್ನು ರಚಿಸಿ, ದಲಿತರು ತಮ್ಮ ಸ್ವಾತಂತ್ರ್ಯಕ್ಕಾಗಿ ಮತ್ತು ಮೂಲಭೂತ ಸೌಕರ್ಯಗಳಿಗಾಗಿ ನಡೆದ ಹೋರಾಟಗಳನ್ನು ಚರಿತ್ರೆಯಲ್ಲಿ ದಾಖಲಿಸಲೇ ಇಲ್ಲ. ದಲಿತರು ಕೈಗೊಂಡ ಅಸ್ಪೃಶ್ಯತಾ ನಿವಾರಣೆ ಹೋರಾಟಗಳನ್ನು ಹಾಗೂ ಆ ಹೋರಾಟಗಳಿಂದ ಆದ ಬದಲಾವಣೆಯನ್ನು ಕುರಿತು ಮಾಹಿತಿ ಸಂಗ್ರಹಿಸಿ ಚರ್ಚಿಸಲಾಗಿದೆ. ದಲಿತ ಚರಿತ್ರೆಯು ಮುಖ್ಯವಾದುದ್ದರಿಂದ ಚರಿತ್ರೆಯಲ್ಲಿ ದಾಖಲಾಗದೆ ಉಳಿದ ಹಲವಾರು ಹೋರಾಟಗಳನ್ನು ದಾಖಲಿಸಿ ವಿಶ್ಲೇಷಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಮೈಸೂರು ಸಂಸ್ಥಾನದಲ್ಲಿ ಜಾರಿಗೊಂಡ ಸಮಾಜ ಸುಧಾರಣಾ ಕಾನೂನುಗಳನ್ನು ಕುರಿತು ಚರ್ಚಿಸಲಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿಯೇ ಜಾರಿಗೊಂಡ ಹಲವಾರು ಕಾನೂನುಗಳು ದಲಿತರ ಅಭಿವೃದ್ಧಿಗೆ ಸಹಕಾರಿಯಾದವು. ಈ ಕಾನೂನುಗಳನ್ನು ಜಾರಿಗೊಳಿಸಲು ಒದಗಿದ ಸಂದರ್ಭ ಮತ್ತು ಆ ಕಾನೂನುಗಳು ಎಷ್ಟರಮಟ್ಟಿಗೆ ಸಂಸ್ಥಾನದಲ್ಲಿ ಪ್ರಭಾವ ಬೀರಿದವು ಎಂಬ ಅಂಶಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಮೈಸೂರು ಸಂಸ್ಥಾನದಲ್ಲಿ ನಡೆದ ಅಸ್ಪೃಶ್ಯತಾ ನಿವಾರಣಾ ಹೋರಾಟಗಳು ಪ್ರಸ್ತುತ ಸಂದರ್ಭದ ದಲಿತರ ಮೇಲೆ ಯಾವ ರೀತಿಯ ಪರಿಣಾಮ ಬೀರಿವೆ

ಎಂಬ ಅಂಶಗಳನ್ನು ಚರ್ಚಿಸಲಾಗಿದೆ. ಪ್ರಸ್ತುತ ಸಂದರ್ಭದ ದಲಿತ ಚಳವಳಿ, ದಲಿತ ಸಂಘಟನೆಗಳ ಸಾಧಕ-ಬಾಧಕಗಳನ್ನು ಕುರಿತು ವಿಶ್ಲೇಷಣಾತ್ಮಕವಾಗಿ ಚರ್ಚಿಸುವ ಜೊತೆಗೆ ಬಾಬಾಸಾಹೇಬ್ ಅಂಬೇಡ್ಕರ್ ಅವರು ಕನ್ನಡಿಗರಿಗೆ ತಲುಪಿದ ನಂತರ ಆದ ಬದಲಾವಣೆ ಪರಿಣಾಮಗಳನ್ನು ಸಮಗ್ರವಾಗಿ ಚರ್ಚಿಸಲಾಗಿದೆ.

ಎಂಟನೆಯ ಅಧ್ಯಾಯವು ಸಮಾರೋಪವಾಗಿದ್ದು, ಅಧ್ಯಯನದಿಂದ ಕಂಡುಕೊಂಡ ಫಲಿತಗಳನ್ನು ನೀಡಲಾಗಿದೆ. ಅನುಬಂಧದಲ್ಲಿ ಆಕರ ಗ್ರಂಥಗಳು, ವಕ್ತೃವಿವರ, ನಕ್ಷೆ ಹಾಗೂ ಛಾಯಾಚಿತ್ರಗಳನ್ನು ನೀಡಲಾಗಿದೆ.

೧.೪. ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಚಂದ್ರಶೇಖರ್ ಎಸ್. ಅವರ ಕೃತಿ ವಸಾಹತುಕಾಲೀನ ಕರ್ನಾಟಕ ಕೃತಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಸುಧಾರಣೆಗಳ ಬಗ್ಗೆ ಅವಲೋಕನವನ್ನು ನಡೆಸಲಾಗಿದೆ. ಸಾಮಾಜಿಕ ಹಾಗೂ ರಾಜಕೀಯ ಸುಧಾರಣೆಗಳು ಮೈಸೂರು ಸಂಸ್ಥಾನದಲ್ಲಿ ಯಾವ ರೀತಿಯ ಪರಿಣಾಮ ಬೀರಿತು ಎಂಬುದರ ಬಗ್ಗೆ ಚರ್ಚಿಸಿದ್ದಾರೆ. ಬ್ರಾಹ್ಮಣೇತರ ಚಳವಳಿಯಿಂದ ಉಂಟಾದ ಬಿಕ್ಕಟ್ಟಿನಿಂದ ವಿಶ್ವೇಶ್ವರಯ್ಯನವರ ರಾಜೀನಾಮೆಯ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ. ಕಾಂತರಾಜ್ ಅರಸರು ದಿವಾನರಾದ ನಂತರದ ಬೆಳವಣಿಗೆಯನ್ನು ಕೃತಿಯಲ್ಲಿ ಚರ್ಚಿಸಿರುವರು.

ಚಂದ್ರಶೇಖರ್ ಎಸ್. ಅವರ ಆಧುನಿಕ ಕರ್ನಾಟಕದ ಆಂದೋಲನಗಳು ಎಂಬ ಕೃತಿಯು ಮೈಸೂರಿನ ಬ್ರಾಹ್ಮಣೇತರರ ಜಾತಿ ರಾಜಕೀಯ ಮತ್ತು ಪರಿಣಾಮಗಳು ಹಾಗೂ ವಸಾಹತುಶಾಹಿ ಸನ್ನಿವೇಶದಲ್ಲಿ ದಕ್ಷಿಣ ಭಾರತದ ಸಮಾಜ ಹಾಗೂ ರಾಜಕೀಯಗಳನ್ನು ಜನ ತಾಂತ್ರೀಕರಣಗೊಳಿಸಲು ಪ್ರಯತ್ನಿಸಿದ ಚಿಂತಕ ಸಿ.ಆರ್. ರೆಡ್ಡಿಯವರ ತಾತ್ವಿಕತೆಯ ಕುರಿತು ವಿಶೇಷವಾಗಿ ಒತ್ತು ನೀಡಿದೆ. ದಲಿತವರ್ಗಗಳನ್ನು ರಾಷ್ಟ್ರೀಯ ಚಳವಳಿಯಲ್ಲಿ ಕೊಂಡೊಯ್ಯಲು ಅನುಸರಿಸಿದ ಮಾರ್ಗ, ರಾಷ್ಟ್ರೀಯವಾದಿಗಳು ದಲಿತರ ಬಗ್ಗೆ ಉದಾರವಾದಿ ಧೋರಣೆಯನ್ನು ಹೊಂದಲು ಕಾರಣ ಮತ್ತು ರಾಜಕೀಯ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ.

ಚಂದ್ರಶೇಖರ್ ಎಸ್. ಅವರ ದಕ್ಷಿಣ ಭಾರತ ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ ಕೃತಿಯಲ್ಲಿ ನಿಮ್ನವರ್ಗದವರು ಮೈಸೂರು ಸಂಸ್ಥಾನದಲ್ಲಿ ಇದ್ದಂತಹ ಪರಿಸ್ಥಿತಿಯನ್ನು ವಿವರಿಸುತ್ತಾ ಅವರ ಅಭಿವೃದ್ಧಿಗೆ ಗಾಂಧಿ ಮತ್ತು ಅವರ ಅನುಯಾಯಿಗಳು ಕೈಗೊಂಡ ಕ್ರಮಗಳ ಕುರಿತು ಚರ್ಚಿಸಿದ್ದಾರೆ.

ಚಿನ್ನಸ್ವಾಮಿ ಸೋಸಲೆ ಎನ್. ಅವರ ಕೃತಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು ಕೃತಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ದಲಿತರ ಅಭಿವೃದ್ಧಿಗೆ ಪ್ರೇರಣೆ ನೀಡಿದ ಅಂಶಗಳನ್ನು ಕುರಿತು ಚರ್ಚಿಸಿದ್ದಾರೆ. ಯಾವುದೇ ಬದಲಾವಣೆ ಉಂಟಾದ ಸಂದರ್ಭದಲ್ಲಿ ಆದ ಬದಲಾವಣೆಗೆ ಕಾರಣವಾದ ಪ್ರಭಾವ, ಧೋರಣೆಗಳನ್ನು ತಿಳಿಯುವುದು

ಮುಖ್ಯ. ಈ ಹಿನ್ನೆಲೆಯಲ್ಲಿ ಅಸ್ಪೃಶ್ಯತಾ ನಿವಾರಣೆಗೆ ಪ್ರೇರಣೆ ನೀಡಿದ ಅಂಶಗಳನ್ನು ವಸ್ತುನಿಷ್ಠವಾಗಿ ವಿವರಿಸಿದ್ದಾರೆ. ಅಂಬೇಡ್ಕರ್ ಪೂರ್ವ ಮೈಸೂರು ಸಂಸ್ಥಾನದಲ್ಲಿ ಕಂಡುಬಂದ ಬ್ರಾಹ್ಮಣೇತರರ ಚಳವಳಿ ಹಾಗೂ ದಲಿತ ಸಂಘಟನೆಗಳ ಹುಟ್ಟು ಬೆಳವಣಿಗೆಯನ್ನು ಚರ್ಚಿಸಿದ್ದಾರೆ. ಎಲೆಮರೆ ಕಾಯಿಯಂತಿದ್ದು ದಲಿತರ ಅಭಿವೃದ್ಧಿಗೆ ಪ್ರೇರಕರಾದ ಗೋಪಾಲಸ್ವಾಮಿ ಅಯ್ಯರ್ ಅವರ ದಲಿತೋದ್ಧಾರದ ಕಾರ್ಯಗಳು ಹಾಗೂ ಅಂದಿನ ಸಂದರ್ಭದ ಸಾಮಾಜಿಕ ಪರಿಸ್ಥಿತಿಯನ್ನು ವಿವರಿಸುವ ಜೊತೆಗೆ ಮೈಸೂರು ಸಂಸ್ಥಾನದಲ್ಲಿ ಶಿಕ್ಷಣ ಪಡೆದ ಮೊದಲನೇ ತಲೆಮಾರಿನ ಶಿಕ್ಷಣವಂತರ ಜೀವನ ಸಾಧನೆಯನ್ನು ಚರ್ಚಿಸಿದ್ದಾರೆ.

ಚಿನ್ನಸ್ವಾಮಿ ಸೋಸಲೆ ಎನ್. ಅವರ ವಸಾಹುತ ಕಾಲಘಟ್ಟದ ಮೈಸೂರು ಸಂಸ್ಥಾನ ಎಂಬ ಕೃತಿಯಲ್ಲಿ ಸ್ವಾತಂತ್ರ್ಯಪೂರ್ವದಲ್ಲಿಯೇ ಸಾಮಾಜಿಕ ಸುಧಾರಣಾ ಕಾನೂನುಗಳನ್ನು ಜಾರಿಗೊಳಿಸಿ ಅದರ ಮುಖಾಂತರ ದಲಿತರ ಅಭಿವೃದ್ಧಿಗೆ ಮುಂದಾದ ಬಗೆಯನ್ನು ಮತ್ತು ಆ ಕಾನೂನುಗಳ ಸಾಧಕ-ಬಾಧಕಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

ಚಿನ್ನಸ್ವಾಮಿ ಸೋಸಲೆ ಎನ್. ಅವರ ಕರ್ನಾಟಕದ ಸಮಗ್ರ ದಲಿತ ಚರಿತ್ರೆ ಕೃತಿಯಲ್ಲಿ ಮೈಸೂರು ಸಂಸ್ಥಾನ, ಕರಾವಳಿ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಮುಂಬಯಿ ಕರ್ನಾಟಕಗಳ ದಲಿತ ಚಳವಳಿಯನ್ನು ಸಮಗ್ರವಾಗಿ ಅದರ ಹುಟ್ಟು ಬೆಳವಣಿಗೆಯನ್ನು ಕುರಿತು ವಿಶ್ಲೇಷಣಾತ್ಮಕವಾಗಿ ಚರ್ಚಿಸಿದ್ದಾರೆ. ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ದಲಿತರನ್ನು ಗುರುತಿಸಿರುವ ಬಗೆ ಮತ್ತು ಸಮಕಾಲೀನ ಕರ್ನಾಟಕದ ದಲಿತರ ಬದುಕಿನ ಸಾಧಕ-ಬಾಧಕಗಳನ್ನು ಕರ್ನಾಟಕ ನೆರೆಹೊರೆ ರಾಜ್ಯಗಳಾದ ಕೇರಳ, ತಮಿಳುನಾಡು, ಆಂಧ್ರ, ಮಹಾರಾಷ್ಟ್ರದ ದಲಿತ ಸಾಧಕರ ಜೀವನ-ಸಾಧನೆಗಳನ್ನು ವಿಸ್ತೃತವಾಗಿ ಚರ್ಚಿಸಿದ್ದಾರೆ.

ಪ್ರೊ. ಲಕ್ಷ್ಮಣ್ ತೆಲಗಾವಿ ಅವರ ಹಿಂದುಳಿದ ವರ್ಗಗಳು ಮತ್ತು ದಲಿತ ಚಳವಳಿಗಳು ಎಂಬ ಕೃತಿಯಲ್ಲಿ ಹಿಂದುಳಿದವರ್ಗ ಮತ್ತು ದಲಿತ ಚಳವಳಿಗಳು ನಡೆದು ಬಂದ ಬಗೆಯನ್ನು ಚರ್ಚಿಸಿದ್ದಾರೆ. ೧೯೧೮ರ ಮಿಲ್ಲರ್ ವರದಿಯಿಂದ ಹಿಡಿದು ಓ. ಚಿನ್ನಪ್ಪ ರೆಡ್ಡಿ ಆಯೋಗದವರೆಗೆ ಎಲ್ಲಾ ಆಯೋಗಗಳ ಸಾಧಕ-ಬಾಧಕಗಳನ್ನು ಸಮಗ್ರವಾಗಿ ಚರ್ಚಿಸಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಉಂಟಾದ ಬ್ರಾಹ್ಮಣೇತರರ ಚಳವಳಿ ಹಾಗೂ ಅಂದಿನ ದಲಿತ ಚಳವಳಿಯ ಬಗ್ಗೆ ವಿವರಣೆಯಿದೆ. ಪ್ರಸ್ತುತ ಸಂದರ್ಭದ ಚಳವಳಿಗಳು ಹಾಗೂ ದಲಿತ ಸಂಘರ್ಷ ಸಮಿತಿಯ ಸಂಪೂರ್ಣ ಮಾಹಿತಿಯನ್ನು ಈ ಕೃತಿಯಲ್ಲಿ ಉಲ್ಲೇಖಿಸಲಾಗಿದೆ.

ಅರವಿಂದ ಮಾಲಗತ್ತಿ(ಸಂ), ದಲಿತ ಮಾರ್ಗ ಎಂಬ ಕೃತಿಯ ಮೂಲಕ ದಲಿತ ಚಳವಳಿಯ ಸಮಗ್ರ ನೋಟವನ್ನು ಮುಂದಿಡಲು ಪ್ರಯತ್ನಿಸಲಾಗಿದೆ. ದಲಿತ ಚಳವಳಿಯ ಭಿನ್ನಮುಖಗಳನ್ನು ಪರಿಚಯಿಸಿಕೊಡುವ ಇಲ್ಲಿಯ ಲೇಖನಗಳು ದಲಿತ ಚಳವಳಿ, ಸಾಹಿತ್ಯ ನಡೆದು ಬಂದ ಬಗೆಯನ್ನು ವಿವರಿಸುತ್ತದೆ.

ವಿರೂಪಾಕ್ಷಿ ಪೂಜಾರಹಳ್ಳಿ ಅವರ ದಲಿತರು ಮತ್ತು ಚರಿತ್ರೆ ಕೃತಿಯಲ್ಲಿ ದಲಿತರ ದೃಷ್ಟಿಕೋನದಿಂದ ನಮ್ಮ ಸಾಂಪ್ರದಾಯಿಕ ಚರಿತ್ರೆಯನ್ನು ಪುನಾರಚನೆ ಮಾಡುವ ಆಲೋಚನಾ ದೃಷ್ಟಿಯಿಂದ ಇಲ್ಲಿನ ಲೇಖನಗಳಿಗೆ ವಿಶೇಷ ಮಹತ್ವವಿದೆ. ಭಾರತ ಮತ್ತು ಕರ್ನಾಟಕದ ಚರಿತ್ರೆಯನ್ನು ದಲಿತರ ಪಾಲ್ಗೊಳ್ಳುವಿಕೆ ಮತ್ತು ಲೋಕದೃಷ್ಟಿಯ ಮೂಲಕ ಒಡೆದು ಮತ್ತೆ ಕಟ್ಟುವ ಮಹತ್ವದ ಕೆಲಸ ಇಲ್ಲಿ ನಡೆದಿದೆ. ಇಲ್ಲಿನ ಲೇಖನಗಳು ದಲಿತರು ಮತ್ತು ಮಹಿಳೆ ಎನ್ನುವ ಎರಡು ಪ್ರಮುಖ ನೆಲೆಗಳನ್ನು ಇಟ್ಟುಕೊಂಡು ಭಾರತ ಮತ್ತು ಕರ್ನಾಟಕದ ಚರಿತ್ರೆಯನ್ನು ಪುನರ್‌ರೂಪಿಸುವ ಲೇಖನಗಳನ್ನು ಈ ಕೃತಿಯು ಒಳಗೊಂಡಿದೆ.

ಶ್ರೀಧರ ಸಿ.ಎ. ಅವರ ಮೈಸೂರು ಒಡೆಯರು ಮತ್ತು ಕರ್ನಾಟಕ ಸಂಸ್ಕೃತಿ ಎಂಬ ಕೃತಿಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತ, ರಾಜಕೀಯ, ಕೈಗಾರಿಕೆ, ಶೈಕ್ಷಣಿಕ, ಮಹಿಳಾ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಮತ್ತು ಅಲ್ಲಿ ತಂದಂತಹ ಸಾಮಾಜಿಕ ನ್ಯಾಯದ ಸುಧಾರಣೆಗಳನ್ನು ಕುರಿತು ವಿವರಿಸಲಾಗಿದೆ.

ಚಂದ್ರಶೇಖರ್ ಟಿ.ಆರ್. ಅವರು ಸಂಪಾದಿಸಿರುವ ದಲಿತ ಅಧ್ಯಯನ ಕೃತಿಯಲ್ಲಿ ದಲಿತ ಸಾಹಿತ್ಯ, ಸಂಸ್ಕೃತಿ, ಚಿಂತನೆ ಮತ್ತು ಚಳುವಳಿಗೆ ಸಂಬಂಧಿಸಿದ ವಿಮರ್ಶಾತ್ಮಕ ಲೇಖನಗಳಿವೆ. ದಲಿತರ ಆಲೋಚನಾಕ್ರಮ, ಲೋಕದೃಷ್ಟಿ ಮತ್ತು ಅವುಗಳಿಂದ ನಿರ್ಮಾಣಗೊಂಡ ಸಾಹಿತ್ಯ ಮತ್ತು ಸಂಸ್ಕೃತಿಗಳ ವಿವೇಚನೆ ನಡೆಸಲಾಗಿದೆ. ಪರಂಪರಾಗತವಾದ ದಲಿತ ಸಮಾಜವು ಆಧುನಿಕ ಸನ್ನಿವೇಶದಲ್ಲಿ ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಹೊಸ ಆಯಾಮಗಳನ್ನು ಪಡೆಯುವ ಸಂಗತಿಗಳನ್ನು, ಸಾಧ್ಯತೆಗಳನ್ನು ಮತ್ತು ಅವುಗಳಿಗಿರುವ ಆತಂಕಗಳನ್ನು ಈ ಲೇಖನಗಳು ಚರ್ಚಿಸುತ್ತವೆ.

ಮುನಿವೆಂಕಟಪ್ಪ ವಿ. ಅವರ ಸಂಪಾದನೆಯ ದಲಿತ ಚಳವಳಿ ಚರಿತ್ರೆ ಎಂಬ ಸಂಪುಟಗಳಲ್ಲಿ ಮೈಸೂರು ಸಂಸ್ಥಾನದ ೨೪ನೆಯ ಒಡೆಯರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಾಮಾಜಿಕ ಮತ್ತು ಶೈಕ್ಷಣಿಕ ಕಾರ್ಯಗಳ ಸಮಗ್ರವಾದ ವಿವರಣೆಯಿದೆ. ಪ್ರಸ್ತುತ ಸಂದರ್ಭದ ದಲಿತರ ಸ್ಥಿತಿಗತಿ, ದಲಿತ ಹೋರಾಟಗಾರರ ಜೀವನ ಚರಿತ್ರೆ, ದಲಿತರ ಮುಂದಿರುವ ಸವಾಲುಗಳ ಬಗ್ಗೆ ಈ ಸಂಪುಟಗಳಲ್ಲಿ ಚರ್ಚಿಸಲಾಗಿದೆ.

ಗುರುಸ್ವಾಮಿ ಕೆ. ಅವರ ಕರ್ನಾಟಕದಲ್ಲಿ ದಲಿತ ಚಳವಳಿ ಎಂಬ ಕೃತಿಯು ಕರ್ನಾಟಕದಲ್ಲಿ ನಡೆದ ದಲಿತ ಚಳುವಳಿಯ ಸ್ವರೂಪವನ್ನು ಮತ್ತು ದೌರ್ಜನ್ಯಕ್ಕೆ ಒಳಗಾದ ಪ್ರದೇಶಗಳಲ್ಲಿ ನಡೆದ ಚಳವಳಿಗಳ ಸಮಗ್ರ ಮಾಹಿತಿ ಈ ಕೃತಿಯಲ್ಲಿದೆ.

ವೆಂಕಟೇಶಮೂರ್ತಿ ಎಚ್.ಟಿ. ಅವರ ಸಮಾಜ ಪರಿವರ್ತನಾ ಚಳವಳಿ ಮತ್ತು ಕರ್ನಾಟಕ ದಲಿತ ಚಳವಳಿ ಎಂಬ ಕೃತಿಯಲ್ಲಿ ೧೨ನೆಯ ಶತಮಾನದಿಂದ ಆರಂಭವಾದ ಪರಿವರ್ತನಾ

ಚಳವಳಿಯ ಬಗ್ಗೆ ವಿವರಣೆಯಿದೆ. ಜ್ಯೋತಿಬಾಪುಲೆ, ಶಾಹುಮಹಾರಾಜ್, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಮಾಜ ಸುಧಾರಣಾ ಕಾರ್ಯಗಳನ್ನು ಒಳಗೊಂಡಿದೆ. ಪೆರಿಯಾರ್ ಮತ್ತು ಅಂಬೇಡ್ಕರ್ ಅವರ ಜೀವನ ಚರಿತ್ರೆಯನ್ನು ಕೃತಿಯಲ್ಲಿ ಕಾಣಬಹುದು.

ಕ್ಷೀರ್‌ಸಾಗರ್ ಆರ್.ಕೆ. ಅವರು ದಲಿತ ಮೂವ್‌ಮೆಂಟ್ ಇನ್ ಇಂಡಿಯಾ ಆ್ಯಂಡ್ ಇಟ್ಸ್ ಲೀಡರ್ಸ್ ಎಂಬ ಕೃತಿಯಲ್ಲಿ ಭಾರತದಾದ್ಯಂತ ೧೮೫೭ರಿಂದ ೧೯೫೬ರವರೆಗೆ, ಹಲವಾರು ರಾಜ್ಯಗಳಲ್ಲಿ ಕಾಣಿಸಿಕೊಂಡ ದಲಿತ ಸಂಘಟನೆ, ದಲಿತ ನಾಯಕರು ಮತ್ತು ದಲಿತ ಚಳವಳಿಯ ಬಗ್ಗೆ ಮಾಹಿತಿ ನೀಡುವ ಕೃತಿಯಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿಯೇ ದಲಿತರು ತಮ್ಮ ತಮ್ಮ ರಾಜ್ಯಗಳಲ್ಲಿ ತಮ್ಮ ಸಮಸ್ಯೆಗಳ ವಿರುದ್ಧ ಜಾಗೃತಗೊಂಡು ತಮ್ಮದೇ ನಾಯಕತ್ವ ಹಾಗೂ ದಲಿತೇತರ ನಾಯಕತ್ವದಲ್ಲಿ ಸಂಘಟಿತಗೊಂಡು ಚಳುವಳಿ ನಡೆಸಿರುವ ಅಂಶಗಳನ್ನು ಕಾಣಬಹುದು. ೧೮೫೭ರಿಂದ ೧೯೫೬ರವರೆಗೆ ಕಂಡು ಬಂದ ಸುಮಾರು ೮೩ ದಲಿತ ಸಂಘಟನೆಗಳನ್ನು ಗುರುತಿಸುವುದರೊಂದಿಗೆ, ಆ ಸಂಘಟನೆಗಳ ಹುಟ್ಟು, ಉದ್ದೇಶ ನಾಯಕತ್ವದ ಸ್ವರೂಪವನ್ನು ಉಲ್ಲೇಖಿಸಿದ್ದಾರೆ.

ಜೆನೆಟ್ ರಾಬಿನ್ ಅವರ ಡಾ. ಅಂಬೇಡ್ಕರ್ ಆ್ಯಂಡ್ ಹಿಸ್ ಮೂವ್‌ಮೆಂಟ್ ಗ್ರಂಥದಲ್ಲಿ ಅಂಬೇಡ್ಕರರು, ದಲಿತರು ಮತ್ತು ದುರ್ಬಲರನ್ನು ಸಂಘಟಿಸುವ ಮೂಲಕ ದೇಶದಲ್ಲಿ ಬಹುಜನ ಸಂಸ್ಕೃತಿಯ ಮೂಲ ಸ್ವರೂಪವನ್ನು ಮತ್ತು ಸ್ವಾತಂತ್ರ್ಯ ಆಂದೋಲನದ ತಾತ್ವಿಕ ಧ್ಯೇಯಗಳನ್ನು ಚರ್ಚಿಸಿದ್ದಾರೆ.

ಮಹೇಶ್‌ಕುಮಾರ್ ಕೆ.ಈ. ಅವರ ಅಪ್ರಕಟಿತ ಪ್ರಬಂಧ ದಲಿತ ಚಳುವಳಿ, ದಲಿತರ ಅನನ್ಯತೆ ಮತ್ತು ಭಾರತೀಯ ಸ್ವಾತಂತ್ರ್ಯ ಹೋರಾಟ: ೧೮೮೫-೧೯೪೭ ಎಂಬ ಪ್ರಬಂಧದಲ್ಲಿ ದಕ್ಷಿಣ ಭಾರತದಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ಉಂಟಾದ ದಲಿತ ಚಳವಳಿ, ದಲಿತ ನಾಯಕರ ಬಗ್ಗೆ ವಿವರಣೆಯಿದೆ ಹಾಗೂ ಅಂಬೇಡ್ಕರ್ ಕಾಲದ ಚಳವಳಿಯನ್ನು ಹಾಗೂ ದಲಿತರ ವಿಮೋಚನೆಯ ಅಂಶಗಳನ್ನು ಚರ್ಚಿಸಲಾಗಿದೆ.

❖❖❖

ಅಧ್ಯಾಯ : ಎರಡು

ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣೆಗೆ ಪ್ರೇರಣೆಯಾದ ಅಂಶಗಳು

ಅಧ್ಯಾಯ : ಎರಡು

ಮೈಸೂರು ಸಂಸ್ಥಾನದ ಅಸ್ಪೃಶ್ಯತಾ ನಿವಾರಣೆಗೆ ಪ್ರೇರಣೆಯಾದ ಅಂಶಗಳು

೨.೧. ಪ್ರಸ್ತಾವನೆ

ಬ್ರಿಟಿಶ್ ವಸಾಹತುಶಾಹಿ ಸಾಮ್ರಾಜ್ಯದ ಕಾಲದಲ್ಲಿಯೇ 'ಮಾದರಿ ಸಂಸ್ಥಾನ'ವೆಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ ಮೈಸೂರು ಸಂಸ್ಥಾನವು ಸಾಮಾಜಿಕ ಸಮಾನತೆ ಹಾಗೂ ಸಾಮಾಜಿಕ ನ್ಯಾಯಕ್ಕೆ ನೀಡಿದ ಕೊಡುಗೆಗಳು ಆಧುನಿಕ ಭಾರತದ ಇತಿಹಾಸದಲ್ಲಿ ಪ್ರಮುಖ ಮೈಲಿಗಲ್ಲಾಗಿವೆ. ವಿವಿಧ ಒಡೆಯರ ಆಳ್ವಿಕೆಯ ಅವಧಿಯು ಒಂದು ನಿರಂತರ ಸಾಮಾಜಿಕ ಪರಿವರ್ತನೆಯ ಕಾಲ ಮತ್ತು ನಿರ್ಣಾಯಕ ಘಟ್ಟವಾಗಿತ್ತು. ಇವರ ಕಾಲದಲ್ಲಿ ಸಮಾಜದ ಎಲ್ಲ ಕ್ಷೇತ್ರಗಳಲ್ಲಿಯೂ ಸಾಧಿಸಲಾಗಿದ್ದ ಸರ್ವಾಂಗೀಣ ಪ್ರಗತಿಯನ್ನು ವಸ್ತುನಿಷ್ಠ ದೃಷ್ಟಿಯಿಂದ ಅವಲೋಕಿಸಿ ನೋಡಿದಾಗ ರಾಜಕೀಯ, ಆಡಳಿತಾತ್ಮಕ, ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕವಾಗಿ ಒಡೆಯರ ಕಾಲ ಅತ್ಯಂತ ಪ್ರಮುಖ ಕಾಲವೆಂದು ಹೇಳಬಹುದು. ಏಕೆಂದರೆ ೧೮೮೧ ರಿಂದ ೧೯೪೭ರವರೆಗೆ ದೀರ್ಘಕಾಲ ಆಳ್ವಿಕೆ ನಡೆಸಿದ ಒಡೆಯರು ತಮ್ಮ ಅಧಿಕಾರಾವಧಿಯಲ್ಲಿ ಸಾಮಾಜಿಕವಾಗಿ ಶೋಷಿತ ಹಾಗೂ ದಲಿತ ವರ್ಗದವರ ಬದುಕಿಗೆ ಹೊಸ ಮುನ್ನುಡಿಯನ್ನು ಬರೆದರು.

ಊಳಿಗಮಾನ್ಯ ಮತ್ತು ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಕಾಣಿಸಿಕೊಂಡಿದ್ದ ಜಾತೀಯತೆ, ಅಸ್ಪೃಶ್ಯತೆಯಂತಹ ಅನಿಷ್ಟ ಪಿಡುಗುಗಳು ಭಾರತೀಯ ಸಾಂಸ್ಕೃತಿಕ ಪರಂಪರೆಯ ದೋಷಗಳಾಗಿ ಮಾತ್ರವಲ್ಲದೆ, ರಾಷ್ಟ್ರದ ಪ್ರಗತಿಗೆ ಪ್ರಮುಖ ಸವಾಲಾಗಿ ಪರಿಣಿಮಿಸಿದ್ದವು. ಇದರಿಂದ ಹಿಂದುಳಿದವರು ಮತ್ತು ದಲಿತ ವರ್ಗದವರ ಬದುಕು ಅಸಹನೀಯವಾಗಿತ್ತು. ಸಾಮಾಜಿಕ ಅಸಮಾನತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಕಾಣಿಸಿಕೊಂಡಿತ್ತು. ಸವರ್ಣೀಯರ ದಬ್ಬಾಳಿಕೆ, ದೌರ್ಜನ್ಯಗಳು ಎಲ್ಲೆ ಮೀರಿದ್ದವು. ಇಂತಹ ಸಂದರ್ಭದಲ್ಲಿ ಭಾರತದಾದ್ಯಂತ ವಿಶೇಷವಾಗಿ ದಕ್ಷಿಣ ಭಾರತದಲ್ಲಿ ಸಾಮಾಜಿಕ ಸುಧಾರಣಾ ಚಳವಳಿಯ ಗಾಳಿ ಬೀಸಲಾರಂಭಿಸಿತು. ಆ ಸಾಮಾಜಿಕ ಸುಧಾರಣಾ ಚಳವಳಿಗಳ ನಾಯಕತ್ವವನ್ನು ಜ್ಯೋತಿ ಬಾಪುಲೆ, ಶಾಹುಮಹಾರಾಜ್, ಪೆರಿಯಾರ್, ಅಂಬೇಡ್ಕರ್, ನಾರಾಯಣಗುರು ಮೊದಲಾದವರು ವಹಿಸಿದ್ದರು. ಈ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ವಹಿಸಿದ ಪಾತ್ರ ಅವಿಸ್ಮರಣೀಯವಾದುದು. ಅವರು ನೀಡಿದ ಮಾರ್ಗದರ್ಶನ ತಳಸಮುದಾಯಗಳ ಪ್ರಗತಿಗೆ ಸಹಕರಿಯಾದವು. ಅನುಷ್ಠಾನಗೊಳಿಸಿದ ನಿರ್ಧಾರಗಳು ಕ್ರಾಂತಿಕಾರಕವಾಗಿದ್ದವು.

ಮೈಸೂರು ಸಂಸ್ಥಾನದಲ್ಲಿ ಅಂಬೇಡ್ಕರ್ ಪೂರ್ವ ಅಸ್ಪೃಶ್ಯತಾ ನಿವಾರಣಾ ಹೋರಾಟಗಳು ನಡೆದಿರುವುದನ್ನು ಗುರುತಿಸಬಹುದು. ದಲಿತ ಸಮುದಾಯ ಸಂಘಟಿತವಾಗಿ ಚಳವಳಿ ನಡೆಸಲು ಅಂದಿನ ಬ್ರಿಟಿಶ್ ಸರ್ಕಾರ ಜಾರಿಗೆ ತಂದ ಹೊಸ ಸುಧಾರಣಾ ಕ್ರಮ, ಕ್ರಿಶ್ಚಿಯನ್ ಮಿಷನರಿಗಳ ಶೈಕ್ಷಣಿಕ ಕೊಡುಗೆಯ ಜೊತೆಗೆ ಮೈಸೂರು ಸಂಸ್ಥಾನದ ಅರಸರು ದಲಿತ, ಕೆಳವರ್ಗದ ಪರವಾಗಿ ತೆಗೆದುಕೊಂಡ ನಿಲುವು ಮತ್ತು ಕಾರ್ಯಯೋಜನೆಗಳು ಪ್ರಮುಖವಾಗುತ್ತವೆ. ಅಂದು ದಲಿತ ಮತ್ತು ಕೆಳವರ್ಗದವರು ನವ ಸಮಾಜದೆಡೆಗೆ ಹೆಜ್ಜೆ ಇಟ್ಟಿದ್ದು ಶಿಕ್ಷಣದ ಸವಲತ್ತನ್ನು ಪಡೆಯಲು ಅವಕಾಶ ದೊರೆಯುವುದರ ಜೊತೆಗೆ ಕೆಳವರ್ಗ ಮತ್ತು ದಲಿತ ವರ್ಗದ ಅಭಿವೃದ್ಧಿಗೆ ಕ್ರಮಗಳನ್ನು ಕೈಗೊಂಡಿದ್ದು ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ.

ನಾಲ್ವಡಿಯವರ ಆಳ್ವಿಕೆಯಲ್ಲಿ ಮೈಸೂರು ಸಂಸ್ಥಾನದಲ್ಲಿ ದಲಿತ ವರ್ಗವು, ಇಡೀ ಭರತಖಂಡದಲ್ಲಿಯೇ ಐವತ್ತು ವರ್ಷಗಳಷ್ಟು ಶೈಕ್ಷಣಿಕ ಮತ್ತು ರಾಜಕೀಯವಾಗಿ ಹಿರಿತನವನ್ನು ತಂದುಕೊಟ್ಟಿತ್ತು. ಅವರ ಸಮರ್ಥ ಆಡಳಿತ ಈ ಭಾಗದ ಅಸ್ಪೃಶ್ಯ ಜನರ ಅಭಿವೃದ್ಧಿಗೆ ಸಹಾಯವಾಯಿತು.

ಇದರ ಜೊತೆಗೆ ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣೆ ಹಾಗೂ ಅಭಿವೃದ್ಧಿಗೆ ಅನೇಕ ಅಂಶಗಳು ಪ್ರೇರಣೆಯಾಗಿದ್ದು ಸಾಮಾಜಿಕ, ಶೈಕ್ಷಣಿಕ, ರಾಜಕೀಯವಾಗಿ ಅಸ್ಪೃಶ್ಯತಾ ನಿವಾರಣಾ ಹೋರಾಟವನ್ನೇ ಕೈಗೊಳ್ಳಲು ಮುಂದಾದುದರ ಬಗ್ಗೆ ವಿಶ್ಲೇಷಣಾತ್ಮಕವಾಗಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

೨.೨. ಬ್ರಾಹ್ಮಣೇತರ ಚಳವಳಿಯ ಪ್ರಭಾವ

ಭಾರತದ ರಾಜ್ಯಗಳಲ್ಲಿ ಒಂದಾದ ಕರ್ನಾಟಕವೂ ಹಲವು ಸಾಮಾಜಿಕ ಚಳವಳಿಗಳನ್ನು ಕಂಡಿದೆ. ಅವುಗಳಲ್ಲಿ ಕೆಲವು ರಾಷ್ಟ್ರವ್ಯಾಪ್ತಿಯುಳ್ಳವುಗಳಾದರೆ, ಇನ್ನು ಕೆಲವು ಪ್ರಾದೇಶಿಕ ಮಟ್ಟದಲ್ಲಿಯೇ ರೂಪುಗೊಂಡವುಗಳಾಗಿವೆ. ಕರ್ನಾಟಕಕ್ಕೆ ವಿಶಿಷ್ಟವಾದ ಸಾಮಾಜಿಕ ಚಳವಳಿಗಳು ಕನ್ನಡ ನಾಡಿನ ವಿವಿಧ ಕ್ಷೇತ್ರಗಳ ಮೇಲೆ ತಮ್ಮ ಪ್ರಭಾವವನ್ನು ಬೀರಿ ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ ಹಾಗೂ ಆರ್ಥಿಕ ಪರಿವರ್ತನೆಗೆ ಕಾರಣೀಭೂತವಾಗಿವೆ. ಅದರಲ್ಲಿಯೂ ಹನ್ನೆರಡನೆಯ ಶತಮಾನದಲ್ಲಿ ಶಿವಶರಣರ ನೇತೃತ್ವದಲ್ಲಿ ನಡೆದ ಸಾಮಾಜಿಕ, ಧಾರ್ಮಿಕ ಚಳವಳಿ ಬಹು ಪ್ರಮುಖವಾದುದು. ಸಾಮಾಜಿಕ, ಧಾರ್ಮಿಕ, ಆರ್ಥಿಕ ಹಾಗೂ ಲಿಂಗ ತಾರತಮ್ಯತೆ ಹಾಗೂ ಅಸಮಾನತೆಯ ವಿರುದ್ಧ ಮೊಟ್ಟಮೊದಲ ಬಾರಿಗೆ ದನಿ ಎತ್ತಿದಲ್ಲದೆ, ಸಮಾನತೆಯ, ಸಹೋದರತ್ವ, ಸಮಭಾವದ ಸಮಾಜವೊಂದರ ನಿರ್ಮಾಣದ ಕನಸು ಕಂಡು ಅದಕ್ಕಾಗಿ ನಿರಂತರ ಶ್ರಮಿಸಿದ

ಕೀರ್ತಿ ಈ ಶಿವಶರಣರಿಗೆ ಸಲ್ಲುತ್ತದೆ.[೧] ಇದೇ ರೀತಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ೧೯ನೆಯ ಶತಮಾನದಲ್ಲಿ ಕಂಡು ಬಂದ ಬ್ರಾಹ್ಮಣೇತರ ಚಳವಳಿ ಒಂದು ಹೊಸ ಬದಲಾದ ಸ್ವರೂಪವನ್ನು ಪಡೆಯಿತು. ಈ ಹಿನ್ನೆಲೆಯಲ್ಲಿ ಮೈಸೂರು ಸಂಸ್ಥಾನದ ಬ್ರಾಹ್ಮಣೇತರರ ಚಳವಳಿಯ ವಿಶೇಷತೆಯೆಂದರೆ ರಾಜ್ಯದ ಬಹುದೊಡ್ಡ ಸಮುದಾಯಗಳಲ್ಲಿ ಬದಲಾವಣೆಯನ್ನುಂಟು ಮಾಡಿ, ಅವರನ್ನು ರಾಜ್ಯದ ಅಭಿವೃದ್ಧಿಯ ಪಾಲುದಾರರನ್ನಾಗಿಸಿತು. ಉಳಿದ ದೇಶಿಯ ಸಂಸ್ಥಾನಗಳಲ್ಲಿ, ಬ್ರಿಟಿಶ್ ಪ್ರಾಂತ್ಯಗಳಲ್ಲಿ ಸಾಧಿಸಲಾಗದ್ದನ್ನು ಮೈಸೂರು ಬ್ರಾಹ್ಮಣೇತರ ವರ್ಗಗಳು ಸಾಧಿಸಿದ್ದವು. ಆ ಕಾರಣದಿಂದ ಮೈಸೂರು ಸಂಸ್ಥಾನದ ಬ್ರಾಹ್ಮಣೇತರ ಚಳವಳಿಗಳು ತನ್ನದೇ ಆದ ಮಹತ್ವವನ್ನೇ ಪಡೆದಿವೆ.[೨] ಇದರಿಂದಾಗಿ ಪ್ರಸ್ತುತ ಬ್ರಾಹ್ಮಣೇತರ ಚಳವಳಿಯನ್ನು ಕುರಿತು ವಿಶ್ಲೇಷಣಾತ್ಮಕವಾಗಿ ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

೨.೨.೧. ಬ್ರಾಹ್ಮಣೇತರ ಚಳವಳಿಯ ಉಗಮ ಮತ್ತು ಬೆಳವಣಿಗೆ

ವಸಾಹತುಕಾಲೀನ ಭಾರತ ೧೮೮೦ ರಿಂದ ೧೯೪೭ರ ಅವಧಿಯಲ್ಲಿ ಹಲವಾರು ಚಳವಳಿಗಳನ್ನು ಕಂಡಿತು. ಅವುಗಳಲ್ಲಿ ಸಾಮಾಜಿಕ, ಧಾರ್ಮಿಕ ಜಾತಿ ಕೋಮುವಾದಿ ಚಳವಳಿಗಳು, ಸ್ವಾತಂತ್ರ್ಯ ಮತ್ತು ಭಾಷಾವಾರು ಪ್ರಾಂತ್ಯಗಳ ಏಕೀಕರಣ ಚಳವಳಿಗಳು ಮುಖ್ಯವಾದವು. ಪ್ರಮುಖವಾಗಿ ಮೈಸೂರು ಸಂಸ್ಥಾನದಲ್ಲಿ ನಡೆದ ಬ್ರಾಹ್ಮಣೇತರ ಹಾಗೂ ದಲಿತ ಚಳವಳಿಗಳನ್ನು ಕುರಿತು ಚಾರಿತ್ರಿಕ ನೆಲೆಯಲ್ಲಿ ವಿವೇಚಿಸುವುದು ಅನಿವಾರ್ಯ.[೩] ವಸಾಹತುಕಾಲೀನ ಭಾರತದಲ್ಲಿ ಜಾತಿ ವಿನಾಶದ ಅರಿವನ್ನು ವರ್ಗವಿನಾಶ ಮತ್ತು ಸ್ತ್ರೀ ವಿಮೋಚನೆಗಳ ನೆಲೆಯಲ್ಲಿ ಭಾರತೀಯ ಅಸ್ಪೃಶ್ಯ ಮತ್ತು ಇತರೆ ಹಿಂದುಳಿದ ವರ್ಗಗಳಲ್ಲಿ ಮೂಡಿಸುವ ಪರಿಣಾಮಕಾರಿ ಕೆಲಸಕ್ಕೆ ಕೈ ಹಾಕಿದವರೆಂದರೆ ಮಹಾತ್ಮ ಜ್ಯೋತಿ ಬಾಪುಲೆ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರು. ಭಾರತೀಯ ಅಸ್ಪೃಶ್ಯ ಮತ್ತು ಹಿಂದುಳಿದ ವರ್ಗಗಳನ್ನು ಅಬ್ರಾಹ್ಮಣವಾದಿ ಸಂಘರ್ಷಕ್ಕೆ ಯಶಸ್ವಿಯಾಗಿ ಸೆಳೆದವರಲ್ಲಿ ಪ್ರಮುಖರು. ಈ ಹಿನ್ನೆಲೆಯಲ್ಲಿ ಬ್ರಾಹ್ಮಣೇತರ ಚಳವಳಿ ಮೈಸೂರು ಸಂಸ್ಥಾನದಲ್ಲಿ ಘಟಿಸಿದ ಚಾರಿತ್ರಿಕ ಈ ಆಂದೋಲನ ಬ್ರಿಟಿಶ್ ಸಾಮ್ರಾಜ್ಯಶಾಹಿ ವ್ಯವಸ್ಥೆಯಲ್ಲಿ ಬ್ರಾಹ್ಮಣರ ವಿರುದ್ಧ ಬ್ರಾಹ್ಮಣೇತರರು ನಡೆಸಿದ ಹೋರಾಟವಿದಾಗಿದೆ. ವ್ಯವಸ್ಥೆಯ ಅಧಿಕಾರ ಅಂತಸ್ತು ಸೌಲಭ್ಯ ಇತ್ಯಾದಿಗಳನ್ನು ಪಡೆಯಲು ಸಾಮಾನ್ಯ ಹಿಂದುಳಿದ ವರ್ಗದವರು ತಮ್ಮ ಅಸ್ತಿತ್ವ ಹಾಗೂ ಆತ್ಮಗೌರವಕ್ಕಾಗಿ ನಡೆಸಿದ ಸುದೀರ್ಘ ಸಮರ. ಬ್ರಾಹ್ಮಣರ ಸರ್ವಾಧಿಕಾರದ ಪರ್ವತವನ್ನು ಛಿದ್ರಗೊಳಿಸಿದ ಸಾಮಾನ್ಯ ಜನರ ಆತ್ಮಬಲದ ಹೋರಾಟ. ಈ ಚಳವಳಿ ಮೈಸೂರು ಸಂಸ್ಥಾನದ ಚರಿತ್ರೆಯಲ್ಲಿ ಒಂದು ಉಜ್ವಲ ಘಟ್ಟ. ಹಿಂದುಳಿದ ವರ್ಗದ ನಾಯಕರಿಗೆ, ಅವರಿಗೆ ಅರಿವಿಲ್ಲದಂತೆ ಮಾರ್ಗಸೂಚಿಯಾಗಿದ್ದು ಮೈಸೂರು ಬ್ರಾಹ್ಮಣರು ಹಾಗೂ ಮದ್ರಾಸ್ ಬ್ರಾಹ್ಮಣರ ನಡುವೆ ನಡೆಯುತ್ತಿದ್ದ ಹೋರಾಟವಾಗಿದೆ.[೪] ಮೈಸೂರು ಹಾಗೂ ಮದ್ರಾಸಿಗರು ಹೊಂದಿದ್ದ ಬಲವಾದ ಸಂಘಟನಾತ್ಮಕ ಹೋರಾಟ, ಪತ್ರಿಕೆಗಳ ಮೂಲಕ ನಡೆಸಿದ ಪ್ರಚಾರತಂತ್ರ ಈ ವರ್ಗಗಳ ಹೋರಾಟಕ್ಕೆ ಮಾದರಿಯಾಯಿತು. ಬ್ರಾಹ್ಮಣೇತರ ಚಳವಳಿಯು ೧೯೦೦ರ ಹೊತ್ತಿಗೆ ಆರಂಭಿಕ

ಲಕ್ಷಣಗಳನ್ನು ಹೊಂದಿದ್ದು, ಒಡೆಯರ ಬೆಂಬಲವನ್ನು ಪಡೆದಿತ್ತು. ೧೯೧೦ರ ಹೊತ್ತಿಗೆ ದಲಿತರನ್ನು ಸೇರಿ ಎಲ್ಲ ವರ್ಗಗಳು ಸಂಘಟಿಸಲ್ಪಟ್ಟಿದ್ದವು. ೧೯೧೫ರ ಹೊತ್ತಿಗೆ ಬ್ರಾಹ್ಮಣೇತರ ಚಳವಳಿ ಬದಲಾದ ಸ್ವರೂಪವನ್ನು ಪಡೆಯಿತು.[೫] ೧೯೧೭ರಲ್ಲಿ ಜಸ್ಟೀಸ್ ಪಾರ್ಟಿಯು ಮೈಸೂರಿನಲ್ಲಿ ಸಮ್ಮೇಳನವೊಂದನ್ನು ಏರ್ಪಡಿಸಿ, ಸರ್ಕಾರಿ ನೌಕರಿಯಲ್ಲಿ ಯಾವುದೇ ಒಂದು ಜಾತಿಗೆ ಹೆಚ್ಚು ಅವಕಾಶ ಪ್ರಾತಿನಿಧ್ಯಗಳು ದೊರಕುವುದಾದರೆ, ಆ ಜಾತಿಗೆ ಪ್ರಾಮುಖ್ಯ ಮತ್ತು ಪ್ರಭಾವಗಳು ದೊರೆಯುತ್ತವೆ. ಸರ್ಕಾರಿ ನೌಕರಿಗಳನ್ನು ಪಡೆಯುವುದೆಂದರೆ ಅಧಿಕಾರ ಕೇಂದ್ರದಲ್ಲಿ ಪಾಲು ಪಡೆಯುವುದು ಎಂಬುದನ್ನು ಒಕ್ಕೊರಲಿನಿಂದ ಘೋಷಿಸಿತು. ಜಸ್ಟೀಸ್ ಪಕ್ಷದ ಈ ಮಾತು ಮೈಸೂರಿನ ಬ್ರಾಹ್ಮಣೇತರರನ್ನು ಪ್ರಚೋದಿಸಿ ವ್ಯವಸ್ಥಿತವಾಗಿ ಸಂಘಟನೆಗೊಳ್ಳಲು ಕಾರಣವಾಯಿತು. ಇದರಿಂದಾಗಿ ಲಿಂಗಾಯಿತರು, ಒಕ್ಕಲಿಗರು, ಕುರುಬರು ಶಿಕ್ಷಣವನ್ನು ಪಡೆದು ಬ್ರಾಹ್ಮಣ ವರ್ಗಗಳ ಎಲ್ಲ ಕ್ಷೇತ್ರಗಳಲ್ಲಿನ ಏಕಸ್ವಾಮ್ಯದ ವಿರುದ್ಧ ನಿಲ್ಲಲು ಸಾಧ್ಯವಾಯಿತು.[೬]

ಹೀಗೆ ಮೈಸೂರು ಸಂಸ್ಥಾನದ ಆಡಳಿತ ವ್ಯವಸ್ಥೆಯಲ್ಲಿ ಮೈಸೂರು ಬ್ರಾಹ್ಮಣರು ಮತ್ತು ಮದ್ರಾಸ್ ಬ್ರಾಹ್ಮಣರ ನಡುವೆ ಕಂಡು ಬಂದ ಸಂಘರ್ಷದ ಫಲವೇ ಬ್ರಾಹ್ಮಣೇತರರು ಎಚ್ಚರಗೊಂಡು ಚಳವಳಿಗೆ ತಮ್ಮನ್ನು ಸಂಘಟಿಸಿಕೊಳ್ಳಲು ಕಾರಣವಾಯಿತು.

೨.೨.೨. ಬ್ರಾಹ್ಮಣೇತರ ಚಳವಳಿಯ ಪರಿಣಾಮ ಮತ್ತು ದಲಿತ ವರ್ಗಗಳಲ್ಲಿ ಉಂಟಾದ ಜಾಗೃತಿ

ಜಾತಿಗ್ರಸ್ಥ ಭಾರತದಲ್ಲಿ ಹಿಂದುಳಿದ ಬ್ರಾಹ್ಮಣೇತರರನ್ನು ಒಗ್ಗೂಡಿಸಿ, ಅವರನ್ನು ಪಾರಂಪರಿಕ ಶೋಷಣೆ ವಿರುದ್ಧ ಸಂಘಟಿಸಲು ರೆಡ್ಡಿಯವರು ಪ್ರಯತ್ನಿಸಿದ್ದು ಚಾರಿತ್ರಿಕ ಸಂಗತಿಯಾಗಿದೆ. ದಕ್ಷಿಣ ಭಾರತದ ರಾಜಕಾರಣದಲ್ಲಿ ಎರಡು ದಶಕಗಳ ಕಾಲ ಪ್ರಮುಖ ಪಾತ್ರ ವಹಿಸಿದ ಸಿ.ಆರ್. ರೆಡ್ಡಿ ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ಬ್ರಾಹ್ಮಣೇತರರನ್ನು ಒಂದುಗೂಡಿಸಿ ಜಾಣ್ಮೆಯಿಂದ ಈ ಬ್ರಾಹ್ಮಣೇತರ ಗುಂಪನ್ನು ಅರಮನೆಯ ಪ್ರಭಾವೀವಲಯದೊಂದಿಗೆ ಬೆಸೆಯುವಲ್ಲಿ ಯಶಸ್ವಿಯಾದರು. ಬಹುಸಂಖ್ಯಾತ ಕೋಮುಗಳ ಗುಂಪನ್ನು ಮಹಾರಾಜರ ಪರೋಕ್ಷ ಬೆಂಬಲದೊಂದಿಗೆ ಹತ್ತಿರ ಸೆಳೆದುಕೊಂಡ ರೆಡ್ಡಿ ಮೈಸೂರು ರಾಜಕೀಯದಲ್ಲಿ ಹಲವಾರು ಪ್ರಮುಖ ಸಾಮಾಜಿಕ, ರಾಜಕೀಯ ಬದಲಾವಣೆಗಳನ್ನು ತರುವಲ್ಲಿ ಯಶಸ್ವಿಯಾದರು.[೭] ಇದರಿಂದಾಗಿ ಬ್ರಾಹ್ಮಣೇತರರಲ್ಲಿ ಜಾಗೃತಿ ಉಂಟಾಗಿ ಜಾತಿವಾರು ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳಲು ತೊಡಗಿದವು ಮತ್ತು ಈ ಜಾಗೃತಿ ಸಂಘಟನೆ ಸಮಾಜದ ಮೇಲಿನ ಸ್ಥರದಲ್ಲಿದ್ದ ವರ್ಗಗಳಲ್ಲಿ ಮೂಡಿ, ಮೈಸೂರು ಸಂಸ್ಥಾನದಲ್ಲಿ ೧೯೦೫ರಲ್ಲಿ ಮೈಸೂರು ಲಿಂಗಾಯಿತ ವಿದ್ಯಾಭಿವೃದ್ಧಿ ಸಂಘ, ೧೯೦೬ರಲ್ಲಿ ಒಕ್ಕಲಿಗರ ಸಂಘ ೧೯೦೯ರ ಕೇಂದ್ರ ಮಹಮ್ಮದೀಯರ ಸಂಘಗಳ ಸ್ಥಾಪನೆಯೊಂದಿಗೆ ಬ್ರಾಹ್ಮಣೇತರ ಸಂಘಟನಾ ಚಳವಳಿ ಪ್ರಬಲಗೊಂಡಿತು.[೮] ತಮ್ಮ ಸಮುದಾಯಗಳನ್ನು ಒಗ್ಗೂಡಿಸಿದ ಈ ಜಾತಿ ಸಂಘಟನೆಗಳು ಬ್ರಾಹ್ಮಣೇತರ ಚಳವಳಿಯ ಮುಖ್ಯ ರೂವಾರಿಗಳು ಎಂದರೆ ತಪ್ಪಾಗಲಾರದು. ಈ ಸಂಘಟನೆಗಳು ತಮ್ಮ ತಮ್ಮ ಸಮುದಾಯಗಳ ಅಭಿವೃದ್ಧಿ ಶಿಕ್ಷಣ ಪ್ರಸಾರವನ್ನು ಮುಖ್ಯ ಗುರಿಯಾಗಿಸಿಕೊಂಡವು.[೯] ಇಷ್ಟೆಲ್ಲ

ಪರಿಣಾಮಗಳು ಜರುಗಿದರೂ ಈ ಸಂದರ್ಭದಲ್ಲಿ ಯಾವುದೇ ದಲಿತ ಸಂಘಟನೆಗಳು ಉದಯಿಸಲಿಲ್ಲ. ೧೯೦೧ರಲ್ಲಿ ಆದಿ ದ್ರಾವಿಡ ಸಂಘ ಸ್ಥಾಪನೆಯಾದರೂ ಸಹ ನೆಪ ಮಾತ್ರದಂತಾಗಿತ್ತು. ಯಾವುದೇ ಹೇಳಿಕೊಳ್ಳುವ ಅಭಿವೃದ್ಧಿ ಕಾರ್ಯಗಳನ್ನು ಅಂದಿನ ಸಂದರ್ಭದಲ್ಲಿ ಮಾಡುವಲ್ಲಿ ವಿಫಲವಾಯಿತು. ಪ್ರಭಾವಿ ಕೋಮುಗಳ ನಾಯಕರು ತಮ್ಮ ಗುಂಪುಗಳಿಗೆ ಸವಲತ್ತುಗಳು ಲಭ್ಯವಾಗುವವರೆಗೂ ರೆಡ್ಡಿಯವರೊಡನೆ ಸಹಕರಿಸಿದರು. ಆದರೆ ಸಾಮಾಜಿಕ ಶ್ರೇಣಿಯಲ್ಲಿ ಇನ್ನು ಕೆಳಹಂತದಲ್ಲಿದ್ದ ಅಸ್ಪೃಶ್ಯರಿಗೆ ಈ ಸವಲತ್ತುಗಳು ವಿಸ್ತರಣೆಯಾಗಬೇಕೆಂದು ರೆಡ್ಡಿ ತಮ್ಮ ಪ್ರಯತ್ನ ತೀವ್ರಗೊಳಿಸತೊಡಿದಾಗ, ಪ್ರಭಾವಿ ಕೋಮುಗಳವರು ಅಡ್ಡಿಪಡಿಸಿದರು.[೧೦] ಅದರಿಂದ ರೆಡ್ಡಿಯವರ ಹಿಂದುಳಿದ ವರ್ಗಗಳ ಚಳವಳಿ ಮರಳಿನ ಮನೆಯಂತೆ ಕುಸಿಯಲಾರಂಭಿಸಿತು. ಬ್ರಾಹ್ಮಣೇತರರು, ಮುಸ್ಲಿಂಮರು ರೆಡ್ಡಿಯವರ ಯೋಜನೆಗಳ ವಿರುದ್ಧ ತಿರುಗಿಬಿದ್ದರು. ಅಸ್ಪೃಶ್ಯರ ವಿಚಾರವನ್ನು ಅಷ್ಟಕ್ಕೆ ಕೈಬಿಟ್ಟಿದ್ದರಿಂದ ಬೇಸತ್ತು ಸವರ್ಣೀಯರು ಅಸ್ಪೃಶ್ಯರನ್ನು ತಮ್ಮವರೆಂದು ಒಪ್ಪಿಕೊಳ್ಳದೇ ಹೋದದ್ದು, ಅವರು ಮೈಸೂರು ಬಿಡಲು ಕಾರಣವಾಗಿದೆ.[೧೧] ಪ್ರಬಲ ಸಮುದಾಯಗಳು ಹೆಚ್ಚಿನ ಉದ್ಯೋಗ ಅಧಿಕಾರ ಸವಲತ್ತುಗಳನ್ನು ಪಡೆದುಕೊಳ್ಳಬೇಕೆಂಬ ಅತೀವ ಆಕಾಂಕ್ಷೆಯಾಗಿತ್ತು. ತನಗಿಂತ ದುರ್ಬಲವಾದ ದಲಿತ ವರ್ಗದವರನ್ನು ಮೊದಲಿಗೆ ಸೇರಿಸಿಕೊಳ್ಳಲು ಇಚ್ಛಿಸಿದರೂ, ಅವರಿಗೆ ತಮ್ಮಂತೆಯೇ ಸಮಾನತೆಯ ಹಕ್ಕುಗಳನ್ನು ನೀಡಲು ನಿರಾಕರಿಸಿತು. ಅವರಿಗೆ ಸಿಗಬೇಕಾದ ಹಕ್ಕುಗಳನ್ನು ನೀಡಬೇಕೆನ್ನುವವರ ವಿರುದ್ಧ ತನ್ನ ಪ್ರತಿಭಟನೆಯನ್ನು ಸೂಚಿಸುವಲ್ಲಿ ಮುಂದಾಗಿತ್ತು. ಅಸ್ಪೃಶ್ಯರಿಗೆ ಮಿಕ್ಕೆಲ್ಲರಿಗಿಂತ ಸರ್ಕಾರಿ ನೌಕರಿ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ಆದ್ಯತೆ ಕೊಡಬೇಕೆನ್ನುವ ಮಿಲ್ಲರ್ ಸಮಿತಿಯ ವಿರುದ್ಧ ತಿರುಗಿಬಿದ್ದರು. ಮೇಲ್ವರ್ಗದವರ ವಿರೋಧವನ್ನು ಗಮನಿಸಿದ ಸರ್ಕಾರ ಈ ವಿರೋಧ ತನ್ನ ವಿರುದ್ಧವೇ ತಿರುಗುತ್ತದೆಂದು ಹೆದರಿ ಅಸ್ಪೃಶ್ಯರ ವಿಚಾರವನ್ನು ಅಷ್ಟಕ್ಕೆ ಕೈ ಬಿಟ್ಟಿತು. ಇಲ್ಲಿ ಜಾತಿ ಸಂಪ್ರದಾಯ ಮತ್ತು ಸಾಮಾಜಿಕ ವ್ಯವಸ್ಥೆಗಳು ನಿರ್ಣಾಯಕ ಪಾತ್ರ ವಹಿಸಿದವು. ಜಾಗೃತಗೊಂಡಿದ್ದ ಅಸ್ಪೃಶ್ಯ ಜನಾಂಗದ ನಾಯಕರು ಇವೆಲ್ಲದ್ದರಿಂದ ಬೇಸತ್ತು ಪ್ರಜಾಮಿತ್ರ ಮಂಡಳಿಯಿಂದ ದೂರ ಸರಿದರು. ತಮ್ಮ ಸಮುದಾಯಕ್ಕೆ ಬ್ರಾಹ್ಮಣೇತರರಿಂದ ನ್ಯಾಯ ಸಿಗುತ್ತದೆ ಎಂಬ ಭರವಸೆ ಇಲ್ಲವಾಗಿತ್ತು.[೧೨] ಬ್ರಾಹ್ಮಣೇತರರು ಅಸ್ಪೃಶ್ಯರನ್ನು ಅದೇ ಸ್ಥಾನದಲ್ಲಿ ಉಳಿಸುವ ಪ್ರಯತ್ನದ ಯೋಜನೆಯನ್ನು ಅರಿತ ಅಸ್ಪೃಶ್ಯ ಜನಾಂಗ ತಮ್ಮದೇ ಆದ ನಾಯಕತ್ವದ ಹೋರಾಟದ ಮೂಲಕ ತಮ್ಮ ಸಮುದಾಯದ ಅಭಿವೃದ್ಧಿ, ಸಮಾನ ಹಕ್ಕು ಮತ್ತು ಜಾತೀಯತೆಯ ವಿರುದ್ಧ ಹೋರಾಟ ನಡೆಸಲು ತೀರ್ಮಾನಿಸಿದರು. ಮುಂದೆ ತಮ್ಮದೇ ಆದ ನಾಯಕತ್ವದ ಮೂಲಕ ಪ್ರತ್ಯೇಕವಾಗಿ ಸಂಘಟಿತಗೊಂಡು ಪ್ರಬಲ ಹೋರಾಟ ನಡೆಸಿರುವುದು ಚರಿತ್ರೆಯಲ್ಲಿ ಕಂಡು ಬರುತ್ತದೆ.

ಬ್ರಾಹ್ಮಣೇತರರ ಸ್ವ-ಹಿತಾಸಕ್ತಿಯಿಂದ ಬೇಸತ್ತ ದಲಿತರು ತಮ್ಮ ಸಮುದಾಯಗಳನ್ನು ಸಂಘಟಿಸುವ ಕಾರ್ಯವನ್ನು ಮಾಡಿದರು. ಆ ಸಮಯದಲ್ಲಿ ದಲಿತ ಏಳ್ಗೆಯನ್ನೂ

ಗುರಿಯಾಗಿಸಿಕೊಂಡು ಮುರುಗೇಶನ್ ಪಿಳ್ಳೈ ಎಂಬುವರ ಮುಂದಾಳತ್ವದಲ್ಲಿ ಆದಿ ದ್ರಾವಿಡ ಅಭಿವೃದ್ಧಿ ಸಂಘ ಎಂಬ ಗುರುತರವಾದ ಸಂಘಟನೆ ಸ್ಥಾಪಿತವಾಯಿತು. ಈ ಸಂಘಟನೆಯ ಮೂಲಕ ಸರ್ಕಾರದಿಂದ ದಲಿತರಿಗೆ ಅಸೆಂಬಲಿ ಮತ್ತು ಕೌನ್ಸಿಲ್‌ಗಳಲ್ಲಿ ಪ್ರಾತಿನಿಧ್ಯ ಒಳಗೊಂಡಂತೆ ಕೆಲವಾರು ರಿಯಾಯಿತಿಗಳನ್ನು ದೊರಕಿಸಿಕೊಡಲು ಹೋರಾಟ ನಡೆಸಿದರು. ಇದು ಪ್ರಥಮವಾಗಿ ಕರ್ನಾಟಕದಲ್ಲಿ ದಲಿತರೇ ಸಂಘಟಿತಗೊಂಡು ಮೇಲ್ವರ್ಗದ ವಿರುದ್ಧ ಸಾಮಾಜಿಕ, ರಾಜಕೀಯ ಹಾಗೂ ಮೂಲಭೂತ ಹಕ್ಕುಗಳ ಸಮಾನತೆಗಾಗಿ ಹೋರಾಟ ನಡೆಸಿದ ಸಂಘಟನೆಯಾಗಿದೆ.[೧೩]

ಒಟ್ಟಾರೆ ಹೇಳುವುದಾದರೆ ಮೇಲ್ಜಾತಿಯ ಬಲಾಢ್ಯ ನಾಯಕರು ಆರ್ಥಿಕ ಮತ್ತು ರಾಜಕೀಯ ಅವಕಾಶಗಳಿಗೆ ಸ್ಪರ್ಧಿಸುತ್ತಿದ್ದರೆ ಹೊರತು, ಸಾಮಾಜಿಕವಾಗಿ ದೂರ ಉಳಿಯುತ್ತಿದ್ದರು. ಅವರಿಗೆ ಅಸ್ಪೃಶ್ಯರು ಅಭಿವೃದ್ಧಿ ಹೊಂದುವುದು ಬೇಕಾಗಿರಲಿಲ್ಲ. ಅಸ್ಪೃಶ್ಯರು ವಿದ್ಯಾವಂತರಾದರೆ ತಮ್ಮ ಸ್ಥಾನಮಾನಗಳಿಗೆ ತೊಂದರೆ ಉಂಟಾಗುತ್ತದೆಯೋ ಎಂದು ಹೆದರಿದರು. ಮೇಲ್ಜಾತಿ ನಾಯಕರು ಬ್ರಾಹ್ಮಣರಿಂದ ಸಮಾನತೆ ಕೇಳಿದರು. ಆದರೆ ಅಸ್ಪೃಶ್ಯರಮಟ್ಟಿಗೆ ಅವರು ಎಲ್ಲಿ ಇದ್ದಾರೋ ಅಲ್ಲೇ ಉಳಿಸಲು ಪ್ರಯತ್ನಿಸಿದರು. ದಲಿತ ಜನತೆಯನ್ನು ತಮ್ಮ ಹಿತಾಸಕ್ತಿಗೆ ಬಳಸಿಕೊಳ್ಳುವ ಪ್ರಯತ್ನ ಮಾಡಿದರೇ ಹೊರತು, ಅವರಿಗೆ ಮೂಲಭೂತವಾದ ಹಕ್ಕು, ಸಮಾನತೆ ದೊರಕಿಸಿಕೊಡುವಲ್ಲಿ ಯೋಚಿಸಲಿಲ್ಲ. ಇದನ್ನರಿತ ದಲಿತ ವಿದ್ಯಾವಂತ ನಾಯಕರು ಜಾಗೃತಿಗೊಳ್ಳಲು ಕಾರಣವಾಯಿತು.

೨.೨.೩. ವಿದ್ವಾಂಸರ ದೃಷ್ಟಿಯಲ್ಲಿ ಬ್ರಾಹ್ಮಣೇತರ ಚಳವಳಿ

ಕರ್ನಾಟಕ ಚರಿತ್ರೆಯಲ್ಲಿ ವಿಜಯನಗರ ಮತ್ತು ಮೈಸೂರು ಸಂಸ್ಥಾನ ಕುರಿತು ನಡೆದಿರುವಷ್ಟು ಸಂಶೋಧನೆಗಳು, ರಚನೆಯಾದ ಕೃತಿಗಳು ಬೇರೆ ಸಂಸ್ಥಾನ, ಸಾಮ್ರಾಜ್ಯಗಳ ಕುರಿತಂತೆ ನಡೆದಿಲ್ಲವೆನ್ನಬಹುದು. ಅವುಗಳಲ್ಲಿ ಪ್ರಭುತ್ವ ಕೇಂದ್ರಿತ ಮತ್ತು ರಾಜರನ್ನು ಓಲೈಸುವಂತಹ ಕೃತಿಗಳೇ ಅಧಿಕವಾಗಿವೆ. ಅಲ್ಲಿನ ರಾಜಕೀಯಕ್ಕೆ ಒತ್ತು ನೀಡಿ, ಜನಸಾಮಾನ್ಯರ ಬದುಕಿನ ಚಿತ್ರಣವನ್ನು ಕಟ್ಟಿಕೊಡುವುದಕ್ಕೆ ಸಂಬಂಧಿಸಿದ ಕೃತಿಗಳು ವಿರಳ. ಮೈಸೂರು ಸಂಸ್ಥಾನದಲ್ಲಿ ರಾಜಕೀಯ ಧೃವೀಕರಣಕ್ಕೆ ಕಾರಣವಾದ ಬ್ರಾಹ್ಮಣೇತರ ಚಳವಳಿಯನ್ನು ಕುರಿತು ಹಲವಾರು ವಿದ್ವಾಂಸರು ಚರ್ಚಿಸಿದ್ದಾರೆ. ಈ ಚಳವಳಿಯ ಕುರಿತಂತೆ ವಿದ್ವಾಂಸರ ಅಭಿಪ್ರಾಯಗಳನ್ನು ಈ ಕೆಳಗಿನಂತೆ ಪ್ರಸ್ತಾಪಿಸಲಾಗಿದೆ.

೧. ಎಸ್. ಚಂದ್ರಶೇಖರ್ ಅವರ 'ಆಧುನಿಕ ಕರ್ನಾಟಕದ ಆಂದೋಲನಗಳು' ಎಂಬ ಕೃತಿಯು ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ಚಳವಳಿಯನ್ನು ವಿಶ್ಲೇಷಿಸುತ್ತಾ ಬ್ರಾಹ್ಮಣ ವರ್ಗದಿಂದ ಬ್ರಾಹ್ಮಣೇತರರು ಅಧಿಕಾರ, ಉದ್ಯೋಗಗಳನ್ನು ಪಡೆಯಲು ಅನುಸರಿಸಿದ ರೀತಿ ಮತ್ತು ದಲಿತರನ್ನು ಬ್ರಾಹ್ಮಣ ಮತ್ತು ಬ್ರಾಹ್ಮಣೇತರರು ತಮ್ಮ ಸ್ವಹಿತಾಸಕ್ತಿಗೋಸ್ಕರ ಬಳಸಿಕೊಂಡ ರೀತಿಯನ್ನು ಚರ್ಚಿಸುತ್ತಾರೆ. ಬ್ರಾಹ್ಮಣೇತರ ಚಳವಳಿಯಿಂದ ಉಂಟಾದ ರಾಜಕೀಯ ಸ್ಥಿತ್ಯಂತರದ ಬಗ್ಗೆ ವಿಶ್ಲೇಷಿಸುತ್ತಾರೆ.

೨. ಬಿ. ಪಾಂಡುಕುಮಾರ್ ಅವರ ಕೃತಿ '೧೬೦೦ ವರ್ಷಗಳ ಒಕ್ಕಲಿಗರ ಇತಿಹಾಸ' ಎಂಬ ಕೃತಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಭಾರತದಲ್ಲಿಯೇ ಮೊಟ್ಟಮೊದಲ ಬಾರಿಗೆ ಪ್ರಜಾಪ್ರಭುತ್ವ ಮಾದರಿ ಸರ್ಕಾರದ ಪ್ರಯೋಗ ನಡೆಯಿತು. ಇದರ ಪರಿಣಾಮದಿಂದಾಗಿ ೧೮೮೧ರಲ್ಲಿ ಪ್ರಜಾಪ್ರತಿನಿಧಿ ಸಭೆ ಉಗಮವಾಯಿತು. ಅಲ್ಲಿನ ಪ್ರಜಾಪ್ರತಿನಿಧಿಗಳು ಅಂದರೆ ವಿವಿಧ ಜಾತಿ ಮತ್ತು ಕೋಮುಗಳಿಗೆ ಸೇರಿದ ಜನನಾಯಕರುಗಳಾಗಿದ್ದರು. ಇದರ ಪ್ರತಿನಿಧಿಗಳಾಗಲು ಕೆಲವು ಅರ್ಹತೆಗಳನ್ನು ನಿಗದಿಪಡಿಸಿದ್ದಾರೆ. ಈ ಅರ್ಹತೆಗಳನ್ನು ಕೇವಲ ಬ್ರಾಹ್ಮಣ ಸಮುದಾಯ ಮಾತ್ರ ಹೊಂದಿದ್ದು, ಇತರ ಪ್ರಬಲ ಕೋಮಿನವರಿಗೆ ಅರ್ಹತೆಯಿಲ್ಲದೆ, ಪ್ರಜಾಪ್ರತಿನಿಧಿ ಸಭೆಯ ಸದಸ್ಯತ್ವ ಸಿಗುತ್ತಿರಲಿಲ್ಲ. ಈ ಸಂದರ್ಭದಲ್ಲಿ ಸಹಜವಾಗಿಯೇ ಬ್ರಾಹ್ಮಣರು ಹಾಗೂ ಆರ್ಥಿಕವಾಗಿ ಮುಂದುವರಿದ ನಗರೀಕರಣದ ಪ್ರಭಾವಕ್ಕೊಳಗಾದ ಪ್ರಬಲ ಜಾತಿ ಕೋಮಿನವರು ಹೊಸ ರಾಜಕೀಯ ವ್ಯವಸ್ಥೆಯೂ ತಮ್ಮ ಪ್ರಾಬಲ್ಯವನ್ನು ಗಣನೀಯವಾಗಿ ಬಳಸಿಕೊಂಡರು. ಬೇರೆಲ್ಲಾ ಜಾತಿಗಳಿಗಿಂತ ಇಂಗ್ಲಿಶ್ ಶಿಕ್ಷಣ ಪಡೆದು ಜೀವನೋಪಾಯಕ್ಕಾಗಿ ಸರ್ಕಾರಿ ನೌಕರಿಯನ್ನು ಆರಿಸಿಕೊಂಡ ಇವರು ರಾಜಕೀಯ ಅಧಿಕಾರ ಹಾಗೂ ಪ್ರಭಾವವನ್ನು ಬೆಳೆಸಿಕೊಂಡರು. ಅಲ್ಪಸಂಖ್ಯಾತರಾದ ಬ್ರಾಹ್ಮಣರು ಶೇಕಡ ೯೦ರಷ್ಟು ಹೆಚ್ಚು ಸರ್ಕಾರಿ ಹುದ್ದೆಗಳನ್ನು ಪಡೆದುಕೊಂಡಿದ್ದರು. ಉಳಿದ ಬ್ರಾಹ್ಮಣೇತರರು ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಆರ್ಥಿಕವಾಗಿ ಮುಂದುವರೆದಿದ್ದ ಲಿಂಗಾಯತರು ಹಾಗೂ ಒಕ್ಕಲಿಗರ ಜನಾಂಗ ಮತ್ತು ನಗರ ಪ್ರದೇಶಗಳಲ್ಲಿ ಶಿಕ್ಷಣ ಪಡೆದಿದ್ದ ಮುಸ್ಲಿಮರಿಗೆ ಅಸಮಾಧಾನ ಉಂಟಾಯಿತು. ಇದೇ ಸಮಯಕ್ಕೆ ಮೈಸೂರಿನ ಬ್ರಾಹ್ಮಣರು ದಿವಾನ್ ಹುದ್ದೆಗೆ ಮದ್ರಾಸಿನ ಬ್ರಾಹ್ಮಣರ ಬದಲಿಗೆ ಮೈಸೂರಿನ ಬ್ರಾಹ್ಮಣರಿಗೆ ನೀಡಬೇಕೆಂದು ಮೈಸೂರು ಮೈಸೂರಿನವರಿಗೆ ಎಂಬ ಘೋಷಣೆ ಯೊಂದಿಗೆ ಒತ್ತಾಯ ಮಾಡತೊಡಗಿದರು. ಇದರಿಂದಾಗಿ ಮದ್ರಾಸಿನ ಬ್ರಾಹ್ಮಣರ ಬದಲಿಗೆ ಮೈಸೂರಿನ ಬ್ರಾಹ್ಮಣರಾದ ಸರ್.ಎಂ. ವಿಶ್ವೇಶ್ವರಯ್ಯನವರನ್ನು ದಿವಾನರಾಗಿ ನೇಮಿಸಲಾಯಿತು. ಇದನ್ನು ಗಮನಿಸಿದ ಬ್ರಾಹ್ಮಣೇತರರು ಸಹ ಚಳವಳಿ ನಡೆಸಲು ಮುಂದಾದರು. ಅದೇ ಬ್ರಾಹ್ಮಣೇತರ ಚಳವಳಿಯಾಗಿ ಮಾರ್ಪಟ್ಟಿತು ಎಂದು ಚರ್ಚಿಸಿದ್ದಾರೆ.

೩. ಲಕ್ಷ್ಮಣ್ ತೆಲಗಾವಿ ಅವರ ಕೃತಿ 'ಹಿಂದುಳಿದ ವರ್ಗಗಳು ಮತ್ತು ದಲಿತ ಚಳವಳಿಗಳು' ಎಂಬ ಕೃತಿಯಲ್ಲಿ ಮೈಸೂರಿನ ಬ್ರಾಹ್ಮಣೇತರರನ್ನು ಪ್ರಚೋದಿಸಿದುದು. ಜಸ್ಟೀಸ್ ಪಕ್ಷದ ೧೯೧೭ರ ಪ್ರಥಮ ಸಮ್ಮೇಳನದಲ್ಲಿ ವ್ಯಕ್ತಪಟ್ಟ ಸಂಗತಿಗಳು. ಈ ಸಮ್ಮೇಳನದಲ್ಲಿ ಒತ್ತಿ ಹೇಳಲಾದ ಮಾತೆಂದರೆ ಸರ್ಕಾರಿ ನೌಕರಿಯಲ್ಲಿ ಯಾವುದೇ ಒಂದು ಸಮುದಾಯಕ್ಕೆ ಹೆಚ್ಚು ಅವಕಾಶ ಪ್ರಾತಿನಿಧ್ಯಗಳು ದೊರಕುವುದಾದರೆ ಆ ಜಾತಿಗೆ ಪ್ರಾಮುಖ್ಯ ಮತ್ತು ಪ್ರಭಾವಗಳು ದೊರೆಯುತ್ತ ವೆಂಬುದು ವಾಸ್ತವವೂ. ಆದ್ದರಿಂದ ಮೈಸೂರು ಸಂಸ್ಥಾನದ ಬ್ರಾಹ್ಮಣೇತರರು ವ್ಯವಸ್ಥಿತವಾಗಿ ಸಂಘಟನೆಗೊಳ್ಳಲು ಅನುಕೂಲವಾಯಿತು. ಸರ್ಕಾರದ ನೌಕರಿಗಳನ್ನು ಪಡೆಯುವುದೆಂದರೆ ಅಧಿಕಾರ ಕೇಂದ್ರದಲ್ಲಿ ಪಾಲು ಪಡೆಯುವುದು ಎಂಬ ಸತ್ಯ ಅವರಿಗೆ ಗೋಚರಿಸಿತು. ಇದರ ಫಲವಾಗಿ

೧೯೧೭ರಲ್ಲಿ ಹುಟ್ಟಿಕೊಂಡಿದ್ದೇ ಪ್ರಜಾಮಿತ್ರ ಮಂಡಳಿ ಎಂಬ ಒಕ್ಕೂಟ. ಬ್ರಾಹ್ಮಣೇತರರ ಮುಖ್ಯವಾಹಿನಿಯಾಗಿ ಕೆಲಸ ಮಾಡತೊಡಗಿದ ನಂತರ ಸಾಂಸ್ಥಿಕ ರೂಪ ತಳೆಯಿತು. ಇದನ್ನು ಮೈಸೂರು ಸಂಸ್ಥಾನದ ಮೊದಲ ಸಂಘಟಿತ ರಾಜಕೀಯ ಪಕ್ಷವೆಂದು ಕರೆಯಲಾಗಿದೆ. ಬ್ರಾಹ್ಮಣರ ವಿರುದ್ಧ ಸಂಘಟಿತರಾಗಿ ಚಳವಳಿಯನ್ನು ನಡೆಸಿದ ಪರಿಣಾಮವಾಗಿ ಪ್ರಬಲ ಕೋಮುಗಳೆಂದು ಗುರುತಿಸಿಕೊಂಡಿದ್ದ ಲಿಂಗಾಯತ, ಒಕ್ಕಲಿಗ ಮತ್ತು ಮುಸ್ಲಿಂ ಸಮುದಾಯಗಳು ಮಾತ್ರ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದು, ನಂತರ ದಲಿತರನ್ನು ತಮ್ಮ ಹಿತಾಸಕ್ತಿಗೋಸ್ಕರವೇ ಹೆಚ್ಚಾಗಿ ಬಳಸಿಕೊಂಡರು ಎಂದು ವಿಶ್ಲೇಷಿಸಿದ್ದಾರೆ.

೪. ಕೆ.ಎಲ್.ಎನ್. ಮೂರ್ತಿ ಅವರ 'ಮೈಸೂರು ಸಂಸ್ಥಾನದ ರಾಜಕೀಯ ಮತ್ತು ಸಂವಿಧಾನಾತ್ಮಕ ಬೆಳವಣಿಗೆಗಳು' ಎಂಬ ಪಿಎಚ್.ಡಿ. ಪ್ರಬಂಧದಲ್ಲಿ ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣವರ್ಗ ಉಚ್ಚ ಸ್ಥಾನದಲ್ಲಿತ್ತು. ಹಲವಾರು ಸೌಲಭ್ಯಗಳನ್ನು ಸ್ಥಾನಮಾನಗಳನ್ನು ಪಡೆದುಕೊಳ್ಳುತ್ತಾ ಬಂದಿತ್ತು. ಪ್ರಾರಂಭದಲ್ಲಿ ಈ ಶೋಷಣೆಯ ವಿರುದ್ಧ ಹೋರಾಡಲು ಅಗತ್ಯವಾದ ಅವಕಾಶ ಹಾಗೂ ಸಾಮರ್ಥ್ಯ ಇಲ್ಲದ ಕಾರಣ ಹಿಂದುಳಿದ ವರ್ಗಗಳು ಬಹು ಕಾಲ ಅಸಹಾಯಕರಾಗಿ ಉಳಿದಿದ್ದರು. ಭಾರತದ ಬೇರೆ ಭಾಗಗಳಲ್ಲಿ ಸಾಮಾಜಿಕ, ಧಾರ್ಮಿಕ ಸುಧಾರಣೆಗಳು ಪ್ರಚಾರ ಪಡೆದು, ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ವರ್ಗದವರು ಹೆಚ್ಚು ಹೆಚ್ಚು ಜಾಗೃತಗೊಂಡು ತಮಗಾದ ಅನ್ಯಾಯದ ವಿರುದ್ಧ ಹೋರಾಡಲು ಮುಂದಾದರು. ಇದು ಬ್ರಾಹ್ಮಣೇತರ ಚಳುವಳಿಯಾಗಿ ಮಾರ್ಪಟಾಯಿತು ಎಂಬ ವಿಷಯಗಳನ್ನು ಚರ್ಚಿಸಿದ್ದಾರೆ.

೫. ಆರ್.ವಿ. ರವೀಂದ್ರನಾಥ ಅವರ 'ಮಹಾನ್ ಸಾಧಕ ಕೆ.ಸಿ. ರೆಡ್ಡಿ' ಎಂಬ ಕೃತಿಯಲ್ಲಿ ಬ್ರಾಹ್ಮಣೇತರ ಚಳವಳಿಯನ್ನು ಕುರಿತು ಬರೆಯುವಾಗ ಕೇವಲ ಬ್ರಾಹ್ಮಣ ವರ್ಗದ ವಿರುದ್ಧ ಬ್ರಾಹ್ಮಣೇತರರು ಯಾವ ರೀತಿ ಹೋರಾಟ ನಡೆಸಿದರು ಅನ್ನುವುದನ್ನು ಚರ್ಚಿಸಿದ್ದಾರೆ. ಇದರಲ್ಲಿ ಕೆ.ಸಿ. ರೆಡ್ಡಿಯವರ ಪಾತ್ರವನ್ನು ಕುರಿತು ತಿಳಿಸಿದ್ದಾರೆ. ಆದರೆ ಕೇವಲ ಪ್ರಬಲ ಜಾತಿಗಳ ಪಾತ್ರವನ್ನು ಮಾತ್ರ ಬಿಂಬಿಸಲು ಮುಂದಾಗಿದ್ದಾರೆ. ಇತರ ಸಮುದಾಯಗಳ ಪಾತ್ರವನ್ನು ಕುರಿತು ಪ್ರಸ್ತಾಪಿಸಿಲ್ಲ.

೬. ಎನ್. ಚಿನ್ನಸ್ವಾಮಿ ಸೋಸಲೆ ಅವರ ಕೃತಿ 'ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು' ಎಂಬ ಕೃತಿಯಲ್ಲಿ ಬ್ರಾಹ್ಮಣೇತರ ಚಳವಳಿಯ ಕುರಿತು ಸಮಗ್ರವಾಗಿ ಚರ್ಚಿಸುತ್ತಾರೆ. ಅಂಬೇಡ್ಕರ್ ಪೂರ್ವ ಮೈಸೂರು ಸಂಸ್ಥಾನದಲ್ಲಿ ಕಂಡು ಬಂದ ಬ್ರಾಹ್ಮಣೇತರರ ಚಳವಳಿ ಅದರ ಹುಟ್ಟು, ಬೆಳವಣಿಗೆಯನ್ನು ಕುರಿತು ವಿಶ್ಲೇಷಿಸುತ್ತಾ ಕ್ರೈಸ್ತ ಮಿಶನರಿಗಳು ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರೋತ್ಸಾಹದ ಫಲವಾಗಿ ಶಿಕ್ಷಣವನ್ನು ಎಲ್ಲಾ ಸಮುದಾಯದವರು ಪಡೆಯಲು ಅನುಕೂಲವಾಯಿತು. ಶಿಕ್ಷಣ ಪಡೆದ ಬ್ರಾಹ್ಮಣೇತರರು, ಕಡಿಮೆ ಸಂಖ್ಯೆಯಲ್ಲಿದ್ದ ಬ್ರಾಹ್ಮಣರು ಉತ್ತಮ ಸ್ಥಾನಮಾನಗಳ ನೌಕರಿ,

ಹಕ್ಕುಗಳು ಮತ್ತು ಸವಲತ್ತುಗಳನ್ನು ಪಡೆಯಲು ಮೈಸೂರು ಬ್ರಾಹ್ಮಣರು ಮತ್ತು ಮದ್ರಾಸ್ ಬ್ರಾಹ್ಮಣರ ನಡುವೆ ಕಂಡು ಬಂದ ಸಂಘರ್ಷವನ್ನು ಸೂಕ್ಷ್ಮವಾಗಿ ಗಮನಿಸಿ ಅರ್ಥಮಾಡಿಕೊಳ್ಳಲು ಸಹಕಾರಿಯಾಯಿತು. ಇದರಿಂದಾಗಿ ಬ್ರಾಹ್ಮಣೇತರರು ಹಾಗೂ ದಲಿತರು ಎಚ್ಚರಗೊಂಡು ಚಳವಳಿಗೆ ತಮ್ಮನ್ನು ಸಂಘಟಿಸಿಕೊಳ್ಳಲು ಸಹಕಾರಿಯಾಯಿತು. ಬ್ರಾಹ್ಮಣೇತರರು ತಮ್ಮ ಹಕ್ಕು ಮತ್ತು ಸವತ್ತುಗಳನ್ನು ಪಡೆಯಲು ದಲಿತ ಸಮುದಾಯದ ಸಹಕಾರ ಪಡೆದು ನಂತರ ದಲಿತರು ನಮ್ಮಂತೆ ಹಕ್ಕಿಗೆ ಬಾಧ್ಯರು ಎಂಬ ಮನೋಭಾವನೆಯನ್ನು ತಾಳದೆ ಅವರನ್ನು ಅಲ್ಲಿಯೇ ಉಳಿಸುವ ಹಾಗೆ ಮಾಡಿದ ಹುನ್ನಾರಗಳನ್ನು ಲೇಖಕರು ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ.

ಪ್ರಸ್ತುತವಾಗಿ ಮೇಲಿನ ಕೃತಿಗಳಲ್ಲಿ ಚರ್ಚಿತವಾದ ಬ್ರಾಹ್ಮಣೇತರರ ಚಳವಳಿಯ ಸ್ವರೂಪವನ್ನು ಸೂಕ್ಷ್ಮವಾಗಿ ಗ್ರಹಿಸಿದ ವಿಚಾರಗಳನ್ನು ಎನ್. ಚಿನ್ನಸ್ವಾಮಿ ಸೋಸಲೆ ಅವರು ತಮ್ಮ ಕೃತಿಯಲ್ಲಿ ಬ್ರಾಹ್ಮಣೇತರರ ಚಳವಳಿಯನ್ನು ಮುಖ್ಯ ಆಶಯವಾಗಿಟ್ಟುಕೊಂಡು ಸಮಗ್ರವಾಗಿ ಚರ್ಚಿಸಿದ್ದು, ಅವರ ಎಲ್ಲ ಅಂಶಗಳು ಒಪ್ಪುವಂತಿವೆ. ಏಕೆಂದರೆ ಕೇವಲ ಚಳವಳಿಯ ಹಿನ್ನೆಲೆಯಲ್ಲಿ ಗಮನಿಸಿದೆ. ಅದನ್ನೇ ಸೂಕ್ಷ್ಮವಾಗಿ ಅವಲೋಕಿಸಿದಾಗ ಅಲ್ಲಿನ ದಲಿತ ಸಮುದಾಯಗಳಿಗೆ ಮಾಡಿದ ಮೋಸದ ಕುತಂತ್ರವನ್ನು ತಿಳಿಯುವ ಜೊತೆಗೆ ಸ್ವಾತಂತ್ರ್ಯ ಪೂರ್ವದಲ್ಲಿಯೇ ದಲಿತ ಚಳವಳಿಗೆ ಕಾರಣವಾದುದರ ಸತ್ಯ ಸತ್ಯತೆಗಳನ್ನು ಅರಿಯಬಹುದು. ಪ್ರಸ್ತುತ ದಲಿತ ಚಳವಳಿಯ ಸಂಘಟನೆಗಳಿಗೆ ಅಂದೇ ಮೈಸೂರು ಸಂಸ್ಥಾನದಲ್ಲಿನ ಬ್ರಾಹ್ಮಣೇತರ ಚಳವಳಿಯ ಸಂದರ್ಭದಲ್ಲಿಯೇ ಅಡಿಗಲ್ಲು ಹಾಕಿದ್ದು ಚಾರಿತ್ರಿಕ ಸಂಗತಿಯಾಗಿದೆ.

೨.೨.೪. ಬ್ರಾಹ್ಮಣೇತರರ ಚಳವಳಿ ಮತ್ತು ಅಸ್ಪೃಶ್ಯತಾ ಪ್ರಶ್ನೆಗಳು

ಮೈಸೂರು ಸಂಸ್ಥಾನದ ಆಡಳಿತ ನಿರ್ಮಾಣ ವ್ಯವಸ್ಥೆಯಲ್ಲಿ ಮೈಸೂರು ಬ್ರಾಹ್ಮಣರು ಮತ್ತು ಮದ್ರಾಸ್ ಬ್ರಾಹ್ಮಣರ ನಡುವೆ ಕಂಡು ಬಂದ ಸಂಘರ್ಷದಲ್ಲೇ ಬ್ರಾಹ್ಮಣೇತರರು ದಲಿತರನ್ನೇ ಒಂದುಗೂಡಿಸಿಕೊಂಡು ಚಳವಳಿಯನ್ನು ನಡೆಸಿದರು. ಆ ಚಳವಳಿಯಲ್ಲಿ ಬ್ರಾಹ್ಮಣೇತರರು ಯಶಸ್ಸನ್ನು ಕಂಡರು. ನಂತರದಲ್ಲಿ ಉಂಟಾದ ಬೆಳವಣಿಗೆಯಲ್ಲಿ ಬ್ರಾಹ್ಮಣೇತರರು ಸ್ವಹಿತಾಸಕ್ತಿಗೋಸ್ಕರ ದಲಿತರನ್ನು ಕಡೆಗಣಿಸಿದ್ದು ಮತ್ತು ಬ್ರಾಹ್ಮಣ ವರ್ಗವು ಸಹ ಶತಶತಮಾನಗಳಿಂದ ಅಸ್ಪೃಶ್ಯರನ್ನು ತಮ್ಮ ಸೇವೆಗೆ ಮುಡುಪಾಗಿಟ್ಟವರು ಎಂದು ಭಾವಿಸಿ, ನೀಡಿದ ಶೋಷಣೆ ದಲಿತ ಸಮುದಾಯಗಳಿಗೆ ನಿರಂತರವಾಗಿ ಮುಂದುವರೆಯುತ್ತಿತ್ತು. ಬ್ರಾಹ್ಮಣೇತರರ ಚಳವಳಿಯಿಂದ ನಂತರ ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ವರ್ಗಗಳು ಅಸ್ಪೃಶ್ಯರ ಕಡೆ ಗಮನ ಹರಿಸಿದ್ದರ ಹಿನ್ನೆಲೆಯನ್ನು ಪ್ರಸ್ತುತ ಬರೆಹದಲ್ಲಿ ಚರ್ಚಿಸಲಾಗಿದೆ.

ಬ್ರಾಹ್ಮಣೇತರರ ಚಳವಳಿ ದಿನದಿಂದ ದಿನಕ್ಕೆ ತನ್ನ ಪ್ರಭಾವ ಮೈಸೂರು ಸಂಸ್ಥಾನದಾದ್ಯಂತ ಹೆಚ್ಚಾಗತೊಡಗಿತು. ಇದರಿಂದಾಗಿ ಬ್ರಾಹ್ಮಣ ಸಮುದಾಯದಲ್ಲಿ ಆತಂಕ ಶುರುವಾಯಿತು. ತದನಂತರದಲ್ಲಿ ಬ್ರಾಹ್ಮಣೇತರ ಚಳವಳಿಯ ಪ್ರಭಾವವನ್ನು ತಗ್ಗಿಸುವ ಸಲುವಾಗಿ ಬ್ರಾಹ್ಮಣ

ವರ್ಗ ಕಂಡುಕೊಂಡ ಮಾರ್ಗೋಪಾಯವೇ ಈ ಅಸ್ಪೃಶ್ಯತಾ ನಿವಾರಣೆ, ದಲಿತೋದ್ಧಾರ ಎಂಬ ಅಸ್ತ್ರ. ಬ್ರಾಹ್ಮಣೇತರ ಚಳವಳಿಯ ನಂತರ ಉಂಟಾದ ಬಿಕ್ಕಟ್ಟು ಹಾಗೂ ಪ್ರಬಲ ಸಮುದಾಯಗಳು ಬ್ರಾಹ್ಮಣ ವರ್ಗದ ವಿರುದ್ಧ ಒಂದುಗೂಡಿ ಸಾಮಾಜಿಕ, ಆರ್ಥಿಕ, ರಾಜಕೀಯ ಅಧಿಕಾರಗಳನ್ನು ಪಡೆಯಲು ಮುಂದಾದರು. ಇದರಿಂದಾಗಿ ಸಹಜವಾಗಿಯೇ ಬ್ರಾಹ್ಮಣರಲ್ಲಿ ಅಸಮಾಧಾನ ಮೂಡಲು ಕಾರಣವಾಯಿತು. ಬ್ರಾಹ್ಮಣೇತರರು ತಮ್ಮ ಹಕ್ಕು ಮತ್ತು ಸವಲತ್ತುಗಳನ್ನು ಪಡೆಯಲು ದಲಿತ ಸಮುದಾಯದ ಸಹಕಾರ ಪಡೆದು ತದನಂತರದಲ್ಲಿ ದಲಿತರು ಸಹ ನಮ್ಮಂತೆ ಹಕ್ಕುಗಳಿಗೆ - ಬಾಧ್ಯರು ಎಂಬ ಭಾವನೆಯನ್ನು ತಾಳದೇ ಅವರನ್ನು ನಿರ್ಲಕ್ಷಿಸಿದರು. ಸವಲತ್ತುಗಳನ್ನು ಮತ್ತು ಅಧಿಕಾರವನ್ನು ಕೇವಲ ತಮ್ಮ ಸಮುದಾಯಗಳು ಅನುಭವಿಸಬೇಕೆಂಬ ನಿಲುವಿನಿಂದ ದಲಿತರನ್ನು ಕಡೆಗಣಿಸಿದರು. ಇದರಿಂದಾಗಿ ಸಹಜವಾಗಿಯೇ ಶೋಷಿತ ವರ್ಗಗಳು ಬ್ರಾಹ್ಮಣೇತರರಿಂದ ದೂರ ಸರಿಯತೊಡಗಿದರು. ಈ ಚಳವಳಿಯ ಪ್ರಭಾವವನ್ನು ಹತ್ತಿಕ್ಕುವ ಉದ್ದೇಶದಿಂದ ಅವಕಾಶವನ್ನು ನಿರೀಕ್ಷಿಸುತ್ತಿದ್ದ ಬ್ರಾಹ್ಮಣ ಸಮುದಾಯ ಮೈಸೂರು ಸಂಸ್ಥಾನದಲ್ಲಿ ಬಹುಸಂಖ್ಯಾತ ದಲಿತ ಸಮುದಾಯವನ್ನು ತಮ್ಮ ಕಡೆ ಸೆಳೆಯುವ ತಂತ್ರವನ್ನು ಅನುಸರಿಸಿತು. ಇದರಿಂದಾಗಿ ತಲತಲಾಂತರದಿಂದ ವಿದ್ಯೆ ಎಂಬುದು ಬ್ರಾಹ್ಮಣ ವರ್ಗದ ಸ್ವತ್ತು ಎಂಬ ಅಲಿಖಿತ ಸಂವಿಧಾನವನ್ನು ಸೃಷ್ಟಿಸಿದ್ದ ಈ ಸಮುದಾಯವು ದಲಿತ ವರ್ಗದವರನ್ನು ತಮ್ಮ ಕಡೆ ಸೆಳೆಯುವ ಉದ್ದೇಶದಿಂದ ಶಿಕ್ಷಣ ನೀಡುವ ಮತ್ತು ದಲಿತೋದ್ಧಾರದ ಹಾಗೂ ಅಸ್ಪೃಶ್ಯತೆ ನಿವಾರಣೆಯಂತಹ ಮಾತುಗಳನ್ನು ಆಡಲು ಪ್ರಾರಂಭಿಸಿದರು. ದಲಿತ ಸಮುದಾಯಗಳನ್ನು ತಮ್ಮ ಕಡೆ ಓಲೈಸಿಕೊಳ್ಳುವ ಪ್ರಯತ್ನ ಮಾಡಿದರು. ಇದರಿಂದಾಗಿ ಅವಕಾಶ ವಂಚಿತ ಅಸ್ಪೃಶ್ಯ ಸಮುದಾಯವು ಸಹಜವಾಗಿಯೇ ಬ್ರಾಹ್ಮಣ ಸಮುದಾಯದತ್ತ ಆಕರ್ಷಿತರಾಗಲು ಸಹಕಾರಿಯಾಯಿತು.

ಇಲ್ಲಿ ವಾಸ್ತವವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಬ್ರಾಹ್ಮಣ ವರ್ಗವು ಮೈಸೂರು ಸಂಸ್ಥಾನದಲ್ಲಿ ಎಲ್ಲ ಸಮುದಾಯದ ಜನತೆಗೆ ಮೂಲಭೂತ ಹಕ್ಕುಗಳು ಇರುವಂತೆ ದಲಿತ ವರ್ಗಕ್ಕೂ ಇದೆ ಎಂಬುದನ್ನು ಪರಿಗಣಿಸದೇ ಅವರ ಅಭಿವೃದ್ಧಿಗೆ ಮತ್ತು ಮೂಲಭೂತ ಸೌಲಭ್ಯಗಳಿಗೆ ಬ್ರಾಹ್ಮಣ ವರ್ಗದ ಅನುಕಂಪ ಮತ್ತು ಸೇವಾ ಮನೋಭಾವವೇ ಕಾರಣ ಎನ್ನುವಂತೆ ಬಿಂಬಿಸುತ್ತ ಬರುವ ಮುಖೇನ ದಲಿತ ವರ್ಗವನ್ನು ಓಲೈಸಿಕೊಳ್ಳುವ ಪ್ರಯತ್ನ ಮಾಡಿತು. ಒಂದು ವೇಳೆ ಬ್ರಾಹ್ಮಣೇತರ ಚಳವಳಿಯಿಂದ ಬ್ರಾಹ್ಮಣ ಸಮುದಾಯಕ್ಕೆ ಯಾವುದೇ ರೀತಿಯ ತೊಂದರೆ ಉಂಟಾಗದಿದ್ದ ಸಂದರ್ಭದಲ್ಲಿ ಶಿಕ್ಷಣ, ಅಸ್ಪೃಶ್ಯತಾ ನಿವಾರಣೆ, ದಲಿತೋದ್ಧಾರದ ಬಗ್ಗೆ ಕಾಳಜಿ ವಹಿಸುತ್ತಿದ್ದಿತೇ ಎಂಬ ಪ್ರಶ್ನೆ ಪ್ರಸ್ತುತ ಸಂದರ್ಭದಲ್ಲಿ ಗೋಚರಿಸುತ್ತದೆ. ಕೇವಲ ಬೆರಳೆಣಿಕೆಯಷ್ಟು ಮಂದಿ ಬ್ರಾಹ್ಮಣ ನಾಯಕರು ತಮ್ಮ ಸಮುದಾಯದ ಅಸ್ತಿತ್ವವನ್ನು ಉಳಿಸಿಕೊಳ್ಳುವ ಮತ್ತು ತಮ್ಮ ಹಿಡಿತವನ್ನು ಕಾಪಾಡುವ ದೃಷ್ಟಿಯಿಂದ ಮಾತ್ರ ಅಸ್ಪೃಶ್ಯತಾ ನಿವಾರಣೆಯ

ಮಾತುಗಳನ್ನಾಡಿದ್ದಾರೆಯೇ ಹೊರತು, ಎಲ್ಲಾ ಬ್ರಾಹ್ಮಣ ಸಮುದಾಯದ ಉದ್ದೇಶವಾಗಿರಲಿಲ್ಲ ಎಂಬ ಅನುಮಾನ ಪ್ರಸ್ತುತ ಸಂದರ್ಭದಲ್ಲಿ ಬಹುಮುಖ್ಯವಾಗಿ ಕಾಡುವ ಪ್ರಶ್ನೆಯಾಗಿದೆ.

೨.೩. ಸ್ವಾಮಿ ವಿವೇಕಾನಂದರ ಪ್ರಭಾವ

ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣೆಗೆ ಪ್ರೇರಣೆ ನೀಡಿದ ಪ್ರಮುಖ ವ್ಯಕ್ತಿಯೆಂದರೆ ಸ್ವಾಮಿ ವಿವೇಕಾನಂದರು. ಅವರ ವಿಚಾರಧಾರೆಗಳ ಮೂಲಕ ಜಾತೀಯತೆ, ಅಸ್ಪೃಶ್ಯತೆಯನ್ನು ಆಚರಿಸುತ್ತಿದ್ದವರಿಗೆ ತಮ್ಮ ತತ್ವ ಸಿದ್ಧಾಂತಗಳ ಮೂಲಕ ಚಾಟಿ ಏಟು ಬೀಸಿದ್ದರು. ದಿವ್ಯವಾದ ಕಲ್ಪನೆಗಳು, ಕನಸುಗಳು, ಆದರ್ಶಗಳು, ಆಶಾವಾದಗಳು ಜಾತಿರಹಿತವಾದ ಸಮಾಜ ನಿರ್ಮಾಣ, ಅಸ್ಪೃಶ್ಯತಾಚರಣೆ ಎಂಬ ಭೀಕರ ದೌರ್ಜನ್ಯ, ನಿಮ್ನ ವರ್ಗದವರ ಶೋಷಣಾಮುಕ್ತವಾದವರ ಬೆಳಕಾಗಿ, ದನಿಯಾಗಿ, ಜಾತಿರಹಿತ ಸಮಾಜದ ಏಳಿಗೆಗಾಗಿ ಶ್ರಮಿಸಿದರು. ದಲಿತರ ಕಷ್ಟಗಳನ್ನು ಕಣ್ಣಾರೆ ಕಂಡು ಅವರ ಶ್ರೇಯೋಭಿವೃದ್ಧಿಗಾಗಿ ಮತ್ತು ಅವರ ಉದ್ಧಾರಕ್ಕೆ ನೀಡಿದ ಸಲಹೆ ಸೂಚನೆಗಳು ಹಾಗೂ ಅವರ ವಿಚಾರಧಾರೆಗಳು ಮೈಸೂರು ಸಂಸ್ಥಾನದ ಒಡೆಯರಿಗೆ ಗಾಢವಾದ ಪ್ರಭಾವ ಬೀರಿದವು. ದಲಿತಪರ ಕಾಳಜಿ ಹೊಂದಿ ಅಸ್ಪೃಶ್ಯತೆ ನಿವಾರಣೆಗೆ ಮತ್ತು ದಲಿತ ವರ್ಗಗಳಿಗೆ ಶಿಕ್ಷಣವೆಂಬುದು ಮರೀಚಿಕೆಯಾದಂತಹ ಸಂದರ್ಭದಲ್ಲಿ ಮೈಸೂರು ಒಡೆಯರು ಶಿಕ್ಷಣ ನೀಡಿದ್ದು, ಸ್ವಾಮಿ ವಿವೇಕಾನಂದರ ಪ್ರೇರಣೆ ಮತ್ತು ಪ್ರಭಾವದಿಂದಾಗಿ ಮೈಸೂರು ಸಂಸ್ಥಾನದಲ್ಲಿ ದಲಿತೋದ್ಧಾರದ ಕಾರ್ಯಗಳನ್ನು ಕೈಗೊಳ್ಳಲು ಸಹಕಾರಿಯಾಯಿತು.

೨.೩.೧. ಮೈಸೂರು ಸಂಸ್ಥಾನಕ್ಕೆ ಸ್ವಾಮಿ ವಿವೇಕಾನಂದರ ಆಹ್ವಾನ

ಮೈಸೂರು ಸಂಸ್ಥಾನವು ೧೮೮೧ರಿಂದ ಆಧುನಿಕ ಮಾದರಿಯ ಆಳ್ವಿಕೆ ನೀಡಿ ಆಧುನಿಕ ಮೈಸೂರು ಎಂದು ಕರೆಸಿಕೊಳ್ಳಬೇಕಾದರೆ ಬಹು ಮುಖ್ಯವಾಗಿ ಅಭಿವೃದ್ಧಿ ನೆಲೆಯಿಂದ ಹೇಳಿದರೆ ಸಾಲದು. ಇದರಲ್ಲಿ ಬಹುಮುಖ್ಯವಾದುದು ಅಸ್ಪೃಶ್ಯರಿಗೆ ಶಿಕ್ಷಣ ಕಲ್ಪಿಸಿದ್ದು. ಈ ಮಹತ್ವದ ಕೆಲಸವನ್ನು ೧೦ನೆಯ ಚಾಮರಾಜ ಒಡೆಯರ್ ಅವರು ಪ್ರಾರಂಭ ಮಾಡಲು ಕಾರಣರಾದವರು, ಸ್ವಾಮಿ ವಿವೇಕಾನಂದರು ಎಂಬುದು ದಾಖಲೆಗಳಿಂದ ತಿಳಿದುಬರುತ್ತದೆ. ಮೈಸೂರು ಸಂಸ್ಥಾನವನ್ನು ೧೦ನೆಯ ಚಾಮರಾಜ ಒಡೆಯರ್ ಅವರು ೧೮೮೧ರಿಂದ ೧೮೯೪ರವರೆಗೆ ಆಳುತ್ತಿದ್ದ ಕಾಲದಲ್ಲಿ ಸ್ವಾಮಿ ವಿವೇಕಾನಂದರನ್ನು ಸಂಸ್ಥಾನಕ್ಕೆ ಆಹ್ವಾನಿಸಿ ಪತ್ರ ಬರೆದಿದ್ದರು. ರಾಮಕೃಷ್ಣ ಪರಮಹಂಸರ ಶಿಷ್ಯಂದಿರಲ್ಲಿ ಚಾಮರಾಜ ಒಡೆಯರ್ ಅವರೂ ಸಹ ಒಬ್ಬರು. ಪತ್ರಕ್ಕೆ ಉತ್ತರವಾಗಿ 'ಅಸ್ಪೃಶ್ಯರ' ಉದ್ಧಾರಕ್ಕೆ ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರೆ, ನಾನು ಅದನ್ನು ನೋಡಲು ಬಯಸುತ್ತೇನೆ. ಆಗ ಮಾತ್ರ ನಿಮ್ಮ ಆಹ್ವಾನವನ್ನು ಒಪ್ಪಿ ಆನಂದ ಪಡುವೆ ಎಂದು ಸ್ವಾಮಿ ವಿವೇಕಾನಂದರು ಮರು ಪತ್ರ ಬರೆದಿದ್ದರು. ಸಂಸ್ಥಾನಿಕರಿಗೆ ಇದೊಂದು ಸವಾಲಿನ ಕೆಲಸವಾಗಿ ಪರಿಣಮಿಸಿತು. ಈ ಸವಾಲಿನ ಪ್ರತೀಕಾರವೇ ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯರ ಅಭಿವೃದ್ಧಿ ಕಾರ್ಯಕ್ಕೆ ನಾಂದಿಯಾಯಿತು. ಕ್ರಿ.ಶ. ೧೮೯೦ರಲ್ಲಿ ಪ್ರಯೋಗಾರ್ಥವಾಗಿ

ಆನೇಕಲ್ ತಾಲ್ಲೂಕಿನ ಹುಸ್ಕೂರು, ಮಾಲೂರು ತಾಲ್ಲೂಕಿನ ನರಸಾಪುರ, ಮಳವಳ್ಳಿ, ಚನ್ನಪಟ್ಟಣ, ಚಾಮರಾಜನಗರ, ಅರಸೀಕೆರೆ, ಬಂಗಾರಪೇಟೆ ತಾಲ್ಲೂಕಿನ ನೂಲುಕುಂಟೆಗಳಲ್ಲಿ ಹಾಗೂ ಮೈಸೂರಿನ ನಜಬಾದ್, ಹಾಸನ ಹಾಗೂ ಚಿಕ್ಕಮಗಳೂರಿನ ನರಸಿಂಹರಾಜಪುರಗಳಲ್ಲಿ ಅಸ್ಪೃಶ್ಯರಿಗಾಗಿ ಪ್ರತ್ಯೇಕ ಪಂಚಮ ಶಾಲೆಗಳನ್ನು ತೆರೆಯಲಾಯಿತು. ನಂತರ ೧೮೯೨ರಲ್ಲಿ ವಿವೇಕಾನಂದರು ಸಂಸ್ಥಾನಕ್ಕೆ ಭೇಟಿ ನೀಡಿ ಇಲ್ಲಿ ಕೈಗೊಂಡಿದ್ದ ದಲಿತ ಅಭಿವೃದ್ಧಿ ಕಾರ್ಯಗಳನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸಿ ಮುಂದುವರಿಸಲು ಸೂಚಿಸುತ್ತಾರೆ.[೧೪]

೨.೩.೨. ಮೈಸೂರು ಸಂಸ್ಥಾನಕ್ಕೆ ಸ್ವಾಮಿ ವಿವೇಕಾನಂದರ ಪ್ರವೇಶ

ಮೈಸೂರು ಸಂಸ್ಥಾನಕ್ಕೆ ಸ್ವಾಮಿ ವಿವೇಕಾನಂದರು ೧೮೯೨ ನವೆಂಬರ್ ಮೊದಲ ವಾರದಲ್ಲಿ ಧಾರವಾಡ ಮಾರ್ಗವಾಗಿ ನೇರ ಬೆಂಗಳೂರಿಗೆ ಬರುತ್ತಾರೆ. ಈಗಿನ ಮೆಜೆಸ್ಟಿಕ್ ಇರುವ ಪ್ರದೇಶದಲ್ಲಿದ್ದ ಕಾಳಪ್ಪ ಧರ್ಮ ಛತ್ರದಲ್ಲಿ ತಂಗುತ್ತಾರೆ. ಬೆಂಗಳೂರು ಸುತ್ತಾಡುತ್ತಾ ಇದೇ ಪ್ರದೇಶದಲ್ಲಿ ಅಕ್ಕಸಾಲಿಗರಾದ ಸೂಗಪ್ಪ ಎಂಬುವರ ಮನೆಯಲ್ಲಿ ಆಗಾಗ ವಿಶ್ರಮಿಸುತ್ತಿದ್ದರು. ಇದೇ ವೇಳೆ ಆ ಕಾಲದಲ್ಲಿ ಸಾಂಕ್ರಾಮಿಕ ರೋಗವಾಗಿದ್ದ ಸಿಡುಬು ತಗುಲಿ ಮಲಗುತ್ತಾರೆ. ಮೈಸೂರು ಮಹಾರಾಜರಿಂದ ಅಧಿಕೃತವಾಗಿ ನೇಮಕಗೊಂಡಿದ್ದ ಡಾ. ಫಲ್ಗು ಅವರು ವಿವೇಕಾನಂದರಿಗೆ ಚಿಕಿತ್ಸೆಯನ್ನು ನೀಡುತ್ತಾರೆ. ಈ ಸಂದರ್ಭದಲ್ಲಿ ವಿವೇಕಾನಂದರ ವ್ಯಕ್ತಿತ್ವದಿಂದ ಪ್ರಭಾವಿತರಾಗಿ ಅವರೊಂದಿಗೆ ಜಾತಿ ವ್ಯವಸ್ಥೆ ಕುರಿತು ಚರ್ಚೆ ನಡೆಸುತ್ತಾರೆ. ಮೂಲತಃ ಈಳವ ಸಮುದಾಯಕ್ಕೆ ಸೇರಿದ ಡಾ. ಫಲ್ಗು ಕೇರಳದ ಜಾತಿ ತಾರತಮ್ಯದಿಂದ ರೋಸಿ ಹೋಗಿ ಮೈಸೂರಿನ ಅರಸರ ಆಶ್ರಯದಲ್ಲಿ ವೈದ್ಯ ವೃತ್ತಿ ಮಾಡುತ್ತಿರುತ್ತಾರೆ. ವಿವೇಕಾನಂದರ ವಿಚಾರಧಾರೆಯಿಂದ ಮನಸೋತು ಆಗಿನ ಮೈಸೂರು ದಿವಾನರಾದ ಶೇಷಾದ್ರಿ ಅಯ್ಯರ್ ಅವರಿಗೆ ಪರಿಚಯ ಪತ್ರವನ್ನು ಬರೆದು ವಿವೇಕಾನಂದರ ಬಗ್ಗೆ ತಿಳಿಸಿಕೊಡುತ್ತಾರೆ. ಯುವ ಸನ್ಯಾಸಿಯನ್ನು ನೋಡಿ ಬೆರಗಾದ ದಿವಾನರು ಬೆಂಗಳೂರಿನ ಚಿಂತಕರು, ಗಣ್ಯರಿಗೆ ಪರಿಚಯಿಸುತ್ತಾರೆ. ಮೈಸೂರಿನ ಒಡೆಯರ್ ಅವರನ್ನು ಭೇಟಿ ಮಾಡಲು ನಿರ್ಧರಿಸುತ್ತಾರೆ.[೧೫] ೧೦ನೆಯ ಚಾಮರಾಜ ಒಡೆಯರೊಂದಿಗೆ ದಾಖಲೆ ಸಹಿತ ಚರ್ಚಿಸುವಾಗ ನೀವು ನಿಮ್ಮ ಸಂಸ್ಥಾನವನ್ನು ಮಾದರಿ ಮೈಸೂರೆಂದು ಹೇಳಿಕೊಳ್ಳುತ್ತಿರಲ್ಲ, ನಿಮ್ಮ ಸಂಸ್ಥಾನದಲ್ಲಿರುವ ಅಸ್ಪೃಶ್ಯರಿಗೆ ಯಾವ ಉದ್ಧಾರ ಕಾರ್ಯ ಕೈಗೊಂಡಿದ್ದೀರಿ? ಬ್ರಿಟಿಶ್ ಪಾದ್ರಿಗಳು ಸತ್ಯಮಂಗಲ, ಕೊಳ್ಳೇಗಾಲಗಳಿಗೆ ಬಂದಿದ್ದಾರೆ. ಈ ಜನರನ್ನು ಕ್ರೈಸ್ತರನ್ನಾಗಿ ಮಾಡಿದರೆ ನಿಮಗೆ ರಾಜ್ಯವೆಲ್ಲಿ ಉಳಿಯುತ್ತವೆ. ನಿಮ್ಮನ್ನು ಯಾರು ಉಳಿಸುತ್ತಾರೆ? ಎಂದು ಅಸ್ಪೃಶ್ಯರ ಉದ್ಧಾರಕ್ಕೆ ಮನವೊಲಿಸಿದರು.[೧೬] ಸ್ವಾಮಿ ವಿವೇಕಾನಂದರ ಮೈಸೂರು ಭೇಟಿಯ ಸಮಯದಲ್ಲಿ ವಾಯುವಿಹಾರಕ್ಕೆ ಹೊರಟಾಗ ಅಂದಿನ ದೊಡ್ಡ ಹೊಲಗೇರಿ, ಜಾಡ ಮಾಲಿಗಳ ವಾಸಸ್ಥಳ ಮತ್ತು ಇತರ ಕೊಳೆಗೇರಿಯಲ್ಲಿ ಅಡ್ಡಾಡಿದರು. ದೊಡ್ಡ ಹೊಲಗೇರಿಯಲ್ಲಾಗಲೇ ಅಸ್ತಿತ್ವಕ್ಕೆ ಬಂದಿದ್ದ ದೊಡ್ಡಗರಡಿ, ಚಿಕ್ಕಗರಡಿಯಲ್ಲಿ ಕಸರತ್ತು ಮಾಡುತ್ತಿದ್ದ ಪೈಲ್ವಾನರ ದೇಹದಾರ್ಢ್ಯಗಳನ್ನು ಕಂಡರು. ಅರಮನೆಯ ಮಧುವನದಲ್ಲಿ ಮಾಲಿಯಾಗಿ

ಕೆಲಸ ಮಾಡುತ್ತಿದ್ದ ಬಂಡೆಲಿಂಗಯ್ಯ ಈ ಎರಡು ಗರಡಿ ಮನೆಗಳಿಗೆ ಯಜಮಾನ. ಬಂಡೆಲಿಂಗಯ್ಯನನ್ನು ವಿವೇಕಾನಂದರು ಹತ್ತಿರ ಕರೆದು ಹೊಲೆಯರ ಸ್ಥಿತಿಗತಿಗಳನ್ನು ವಿಚಾರಿಸಿ ಅವರ ಸ್ಥಿತಿಗತಿಯನ್ನು ಗ್ರಹಿಸಿದರು. ನಂತರ ಬಾಲಕರಾಗಿದ್ದಂತಹ ಯುವರಾಜ ನಾಲ್ವಡಿ ಕೃಷ್ಣರಾಜ ಒಡೆಯರ್, ವೆಂಕಟಕೃಷ್ಣಯ್ಯ ಮತ್ತು ಬಾಲಸುಬ್ರಹ್ಮಣ್ಯಂ ಐಯ್ಯರ್ ಮತ್ತು ಇನ್ನಿತರ ಗಣ್ಯರೊಡನೆ ಸಭೆ ನಡೆಸಿ ದಲಿತರ ಅಭಿವೃದ್ಧಿಗೆ ಸಂಬಂಧಿಸಿದ ಅಮೂಲ್ಯ ಸಲಹೆ - ಸೂಚನೆಗಳನ್ನು ನೀಡಿದರು. ನನ್ನ ಅಪೇಕ್ಷೆ ದೀನದಲಿತರ ಉದ್ಧಾರ, ಅದಕ್ಕಾಗಿ ಏನು ಕಾರ್ಯ ಹಾಕಿಕೊಳ್ಳಬಲ್ಲಿರಿ ಎಂದು ವಿವೇಕಾನಂದರು ಪ್ರಶ್ನೆ ಹಾಕಿದರು. ೧೦ನೆಯ ಚಾಮರಾಜ ಒಡೆಯರ್ ಮತ್ತು ಅಲ್ಲೇ ಉಪಸ್ಥಿತರಿದ್ದ ನರಸಿಂಹರಾಜ ಒಡೆಯರ್ ಅವರತ್ತ ಪ್ರಶ್ನಿಸಿದರು. ಮಹಾರಾಜರು ಆಶ್ವಾಸನೆ ಕೊಡುತ್ತಾ, ಮನೆಮಠ, ವಸತಿಸೌಕರ್ಯ, ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗದ ನೆರವಿನ ಕಾರ್ಯಭಾರವನ್ನು ನಾವೇ ವಹಿಸುತ್ತೇವೆ ಎಂದು ವಿವರವಾಗಿ ತಿಳಿಸಿ, ಮುಂದುವರೆದು ಈ ಜನಾಂಗ ವಿಜಯನಗರ ಸಾಮ್ರಾಜ್ಯದ ಅವನತಿಯ ನಂತರ ಶ್ರೀರಂಗಪಟ್ಟಣಕ್ಕೆ ವಲಸೆ ಬಂದರು ಮತ್ತು ಅರಮನೆಯ ಕಾವಲು ಕಾಯ್ದು ಮೈಸೂರಿನ ಸಿಂಹಾಸನ ರಕ್ಷಣೆ ಮಾಡಿದರು. ಆದಕಾರಣ ಈ ಕೆಲಸಗಳನ್ನು ಶ್ರದ್ಧೆಯಿಂದ ಮಾಡುತ್ತೇವೆ ಎಂದು ಆಶ್ವಾಸನೆ ನೀಡಿದರು.[೧೭]

೧೦ನೆಯ ಚಾಮರಾಜ ಒಡೆಯರ್ ಮತ್ತು ಇನ್ನು ಅನೇಕ ಗಣ್ಯ ವ್ಯಕ್ತಿಗಳು ವಿವೇಕಾನಂದರು ಚಿಕಾಗೋ ನಗರಕ್ಕೆ ಪ್ರಯಾಣ ಮಾಡಿ ಅಲ್ಲಿನ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸುವಂತೆ ಕೇಳಿಕೊಂಡಿದ್ದರು. ಮೈಸೂರು ದೊರೆಗಳು ಸಮ್ಮೇಳನಕ್ಕಾಗುವ ವೆಚ್ಚವನ್ನು ಭರಿಸುವುದಾಗಿ ವಾಗ್ದಾನ ಮಾಡಿದ್ದರು. ಅದಕ್ಕಾಗಿ ಹಣ ಸಂಗ್ರಹಣೆ ನಡೆದಿತ್ತು. ಸ್ವಾಮಿ ವಿವೇಕಾನಂದರ ಮನಸ್ಸು ಕಲಕಿ ಚಿಕಾಗೋ ಪ್ರವಾಸಕ್ಕೆ ಒಪ್ಪಲಿಲ್ಲ. ನೀವು ನನ್ನ ಪ್ರಯಾಣಕ್ಕಾಗಿ ಸಂಗ್ರಹಿಸಿದ ಹಣವನ್ನು ದೀನದಲಿತರಿಗೆ ಹಂಚಿಬಿಡಿ ಎಂದು ತಿಳಿಸಿದರು. ಅದೇ ರೀತಿ ಹಣ ಖರ್ಚು ಮಾಡಲಾಯಿತು.[೧೮] ನಂತರ ವಂಶಗತವಾಗಿ ಶಿಕ್ಷಣ ಪಡೆದುಕೊಂಡು ಅಗ್ರಹಾರ ದೇವಾಲಯಗಳಲ್ಲಿ ಶಿಕ್ಷಣ ಪಡೆಯುತ್ತಿರುವ, ಬ್ರಾಹ್ಮಣ ಓದಬೇಕೆಂದರೆ ಅದಕ್ಕೆ ಹಣ ವ್ಯಯ ಮಾಡಬೇಡಿ. ಅದೇ ಹಣವನ್ನು ಹೊಲೆಯ ಮಾದಿಗರ ಹಾಗೂ ಅಸ್ಪೃಶ್ಯರ ವಿದ್ಯೆಗಾಗಿ ವಿನಿಯೋಗಿಸಿ, ೫೦ ವರ್ಷಗಳವರೆಗೆ ಎಲ್ಲಾ ದೇವರುಗಳನ್ನು ಮರೆತು ಬಿಡಿ. ದರಿದ್ರ ಎಂಬ ದೇವರನ್ನು ಉದ್ಧಾರ ಮಾಡಿ ಎಂದು ಸಂದೇಶವಿತ್ತರು.[೧೯] ಯುವಕರೂ, ಉತ್ಸಾಹಿಗಳು ಆಗಿದ್ದ ಚಾಮರಾಜ ಒಡೆಯರು ಸ್ವಾಮೀಜಿ ಅವರ ವ್ಯಕ್ತಿತ್ವಕ್ಕೆ ಮಾರು ಹೋದರು. ಮೈಸೂರಿನಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದನ್ನು ಗಮನಿಸಿದ ವಿವೇಕಾನಂದರು ಈ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಇವರು ಮೈಸೂರಿನಲ್ಲಿದ್ದಷ್ಟು ಕಾಲ ಅರಮನೆಯಲ್ಲಿ ಗೋಷ್ಠಿ, ಮಹಾರಾಜರೊಂದಿಗೆ ಸಂವಾದಗಳು ನಿರಂತರವಾಗಿದ್ದವು. ನೇರವಾಗಿ ಮಾತನಾಡುತ್ತಿದ್ದ ವಿವೇಕಾನಂದರು ಮಹಾರಾಜರ ಸುತ್ತ ಹೊಗಳು ಭಟ್ಟರಿರುವ ಬಗ್ಗೆ ಮತ್ತು ದಿವಾನರನ್ನು ನಂಬುವ ಕುರಿತು ಎಚ್ಚರಿಸಿದ್ದರು. ತದನಂತರ ಒಡೆಯರ ಮತ್ತು ಗಣ್ಯರ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಚಿಕಾಗೋಗೆ ಹೋಗಲು ಒಪ್ಪಿದರು.[೨೦]

ಒಟ್ಟಾರೆಯಾಗಿ ಸ್ವಾಮಿ ವಿವೇಕಾನಂದರ ಪ್ರೇರಣೆಯೇ ಮೈಸೂರು ಸಂಸ್ಥಾನದಲ್ಲಿ ಮೊದಲು ಅಸ್ಪೃಶ್ಯತಾ ನಿವಾರಣೆ ಕೈಗೊಳ್ಳಲು ಕಾರಣವಾಯಿತು.

೨.೩.೩. ಮೈಸೂರು ಸಂಸ್ಥಾನಕ್ಕೆ ಸ್ವಾಮಿ ವಿವೇಕಾನಂದರು ಪ್ರವೇಶ ಮಾಡಿದ ನಂತರ ಉಂಟಾದ ಬದಲಾವಣೆ

ವಿವೇಕಾನಂದರು ಮೈಸೂರು ಸಂಸ್ಥಾನಕ್ಕೆ ಆಗಮಿಸಿದ ನಂತರ ಅವರ ವಿಚಾರಧಾರೆಗಳಿಂದ ಒಡೆಯರ ಮತ್ತು ದಿವಾನರ, ಗಣ್ಯ ವ್ಯಕ್ತಿಗಳ, ಚಿಂತಕರ ಮನಪರಿವರ್ತನೆಗೊಳಿಸಿ ದೀನ-ದಲಿತರ ಉದ್ಧಾರ ಮತ್ತು ಅಸ್ಪೃಶ್ಯತೆ ಎಂಬ ಕಳಂಕವನ್ನು ಹೋಗಲಾಡಿಸುವ ಕಾರ್ಯಗಳನ್ನು ಕೈಗೊಳ್ಳುವಂತೆ ಸೂಚಿಸಿದರು. ಬನ್ನಿ ಮನುಷ್ಯರಾಗಿ ಪ್ರಗತಿಗೆ ಯಾವಾಗಲು ವಿರುದ್ಧವಾಗಿರುವ ಪುರೋಹಿತಶಾಹಿಯನ್ನು ಒದ್ದೋಡಿಸಿ, ಅವರೆಂದಿಗೂ ತಿದ್ದಿಕೊಳ್ಳುವುದಿಲ್ಲ. ಅವರ ಹೃದಯ ಎಂದಿಗೂ ವಿಶಾಲ ಆಗುವುದಿಲ್ಲ. ಶತಶತಮಾನಗಳಿಂದ ಬಂದ ಮೂಢನಂಬಿಕೆ ಮತ್ತು ದಬ್ಬಾಳಿಕೆಯ ಸಂತಾನ ಅವರು. ಬನ್ನಿ ಮನುಷ್ಯರಾಗಿ, ಮುಂದೆ ಬನ್ನಿ ಸಂಕುಚಿತ ಬಿಲಗಳಿಂದ ಹೊರಗೆ ಬನ್ನಿ ಎಂಬ ಸಂದೇಶವನ್ನು ಸಾರುತ್ತಾ ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣೆ ಮತ್ತು ದಲಿತೋದ್ಧಾರದ ಕಾರ್ಯಗಳನ್ನು ಮಾಡಲು ಪ್ರೇರಣೆ ನೀಡಿದರು. ಇದರ ಫಲವಾಗಿ ದಲಿತರ ಅಭಿವೃದ್ಧಿ ಕಾರ್ಯಗಳು ನಡೆದವು. ಯುವರಾಜರು ೧೯೧೬ರಲ್ಲಿ ಒಂದು ಕಮಿಟಿ ರಚಿಸಿ ಅದರಲ್ಲಿ ವೆಂಕಟಕೃಷ್ಣಯ್ಯ, ಬಾಲಸುಬ್ರಹ್ಮಣ್ಯಂ ಐಯ್ಯರ್ ಮತ್ತು ದೊಡ್ಡ ಹೊಲಗೇರಿಯ ಮರಿದಂಡಯ್ಯ ಸದಸ್ಯರಾದರು. ಅದನ್ನು ಸಿವಿಲ್ ಅಂಡ್ ಸೋಷಿಯಲ್ ಪ್ರೋಗ್ರೆಸ್ ಎಂದು ಕರೆಯಲಾಯಿತು. ಯುವರಾಜರು ತಮ್ಮ ಸ್ವಂತ ಹಣದಿಂದ ಧನಲಕ್ಷ್ಮಿ ಕೋ ಅಪರೇಟಿವ್ ಸೊಸೈಟಿ ಎಂಬ ಸೊಸೈಟಿಯನ್ನು ಸ್ಥಾಪಿಸಿದರು. ಶ್ರೀಮಂತರಾಗಿದ್ದ ಬಸುಮಯ್ಯ, ವಜ್ರಯ್ಯ ಮುಂತಾದವರನ್ನು ಪ್ರೇರೇಪಿಸಿ ಹಣ ಒದಗಿಸಿದರು. ಈ ಹಣದಿಂದ ಅಧಿಕ ಪ್ರಮಾಣದಲ್ಲಿ ವಸತಿಗಳನ್ನು ನಿರ್ಮಿಸಿದರು. ಗರಡಿ ಮನೆ ಮತ್ತು ಇತರ ಸಂಘ ಸಂಸ್ಥೆಗಳು ಉದಯಿಸಿದವು. ಮೈಸೂರು ಸಿವಿಲ್ ಅಂಡ್ ಸೋಷಿಯಲ್ ಪ್ರೋಗ್ರೆಸ್‌ನವರು ವಿದ್ಯಾಭ್ಯಾಸ ಮುಂತಾದ ಸಮಾಜ ಸುಧಾರಣ ಕಾರ್ಯಕ್ರಮಗಳನ್ನು ಹಾಕಿಕೊಂಡರು. ಸ್ವಾಮಿ ವಿವೇಕಾನಂದರ ವೀರವಾಣಿ, ದಲಿತೋದ್ಧಾರದ ಕೂಗು ಅನೇಕ ವಿದ್ವಾಂಸರ ಮತ್ತು ಯುವಜನರ ಮನಸ್ಸನ್ನು ಸೂರೆಗೊಂಡ ಕಾಲವಾಗಿತ್ತು. ಬೆಂಗಳೂರು ಅರಮನೆಯಲ್ಲಿ ೧೯೧೫ರ ಜನವರಿ ತಿಂಗಳಲ್ಲಿ ಯುವರಾಜರು ಅಸ್ಪೃಶ್ಯರ ಅಭಿವೃದ್ಧಿ ಹಾಗೂ ಸಮಾಜೋದ್ಧಾರಕ ಕೆಲಸವನ್ನು ಕೈಗೊಳ್ಳುವ ಅಗತ್ಯತೆಯಿಂದ ಬೆಂಗಳೂರು ಸೋಷಿಯಲ್ ಸರ್ವಿಸ್‌ಲಿಗ್ ಉದಯವಾಯಿತು. ಇದರ ಮೊದಲ ಸಮ್ಮೇಳನ ಮೈಸೂರಿನಲ್ಲಿ ನಡೆಯಿತು. ಡಿಪ್ರೆಸ್ಡ್ ಕ್ಲಾಸ್ ಜನಾಂಗದ ಶಿಕ್ಷಣಕ್ಕೆ ಮಹತ್ವ ನೀಡಲಾಯಿತು. ಇದಾದ ನಂತರ ಮೈಸೂರಿನಲ್ಲೊಂದು ಡಿಪ್ರೆಸ್ಡ್ ಕ್ಲಾಸ್ ಮಿಷನ್ ಎಂಬ ಸಂಸ್ಥೆ ಉದಯಿಸಿತು. ಈ ಸಂಸ್ಥೆಯ ಮುಖಾಂತರ ನಿಮ್ನ ವರ್ಗಗಳ ಅಭಿವೃದ್ಧಿ ಕಾರ್ಯಕ್ರಮವನ್ನು ಹಮ್ಮಿಕೊಂಡರು. ಹಲವಾರು ಪಂಚಮ ಶಾಲೆಗಳನ್ನು, ವಸತಿ ನಿಲಯಗಳನ್ನು

ಸ್ಥಾಪಿಸಿದರು. ಹೀಗೆ ಸ್ವಾಮಿ ವಿವೇಕಾನಂದರು ಮೈಸೂರು ಭೇಟಿಯ ನಂತರ ಅವರ ವಿಚಾರಧಾರೆಗಳಿಂದ ಪ್ರಭಾವಿತರಾದ ಮಹಾರಾಜರು, ದಿವಾನರು ದಲಿತೋದ್ಧಾರ ಕಾರ್ಯಗಳ ಬಗ್ಗೆ ಚಿಂತಿಸತೊಡಗಿದರು. ಪರಿಣಾಮವಾಗಿ ಹಲವಾರು ಸಮಾಜ ಸುಧಾರಣೆಗೆ ಮುಂದಾದರು.[೨೧] ಅವರ ಆಕರ್ಷಿತ ವ್ಯಕ್ತಿತ್ವ, ಅವರ ವಿಚಾರಗಳು ವಿವೇಕಾನಂದರು ಮೈಸೂರಿಗೆ ಪ್ರವೇಶಿಸಿದ ನಂತರ ದುರ್ಬಲ ವರ್ಗಗಳಲ್ಲಿ ಆಶಾಕಿರಣ ಮೂಡಿರುವುದಂತು ಸತ್ಯ. ಸಂಸ್ಥಾನದ ದಲಿತ ವರ್ಗಗಳಿಗೆ ಸ್ವಲ್ಪಮಟ್ಟಿಗಾದರೂ ತಮ್ಮ ವಿಚಾರಗಳಿಂದ ಜೀವನದ ಬದಲಾವಣೆಗೆ ಕಾರಣೀಭೂತರಾದರು.

೨.೪. ಕ್ರೈಸ್ತ ಮಿಷನರಿಗಳ ಪ್ರಭಾವ

ಮೈಸೂರು ಸಂಸ್ಥಾನದಲ್ಲಿ ಕ್ರೈಸ್ತ ಮಿಷನರಿಗಳ ಪ್ರಭಾವ ದಲಿತರ ಪ್ರಗತಿಗೆ ಕಾರಣವಾಯಿತು. ಅಸ್ಪೃಶ್ಯರು ಎಲ್ಲಾ ಸೌಲಭ್ಯಗಳಿಂದ ವಂಚಿತವಾಗಿದ್ದಂತಹ ಸಂದರ್ಭದಲ್ಲಿ ಕ್ರೈಸ್ತ ಮಿಷನರಿಗಳು ದಲಿತರಿಗೆ ಮೂಲಭೂತ ಸೌಲಭ್ಯಗಳನ್ನು ನೀಡುವುದರ ಮುಖಾಂತರ ತಮ್ಮ ಕಡೆ ಆಕರ್ಷಿಸುವಂತೆ ಮಾಡಿತು. ಶಿಕ್ಷಣ, ವಸತಿ, ಮೂಲಭೂತ ಸೌಲಭ್ಯಗಳನ್ನು ನೀಡಿದ್ದರ ಪರಿಣಾಮವಾಗಿ ದಲಿತರು ಜಾಗೃತಗೊಳ್ಳಲು ಕಾರಣವಾಯಿತು. ಹಿಂದೂ ಧರ್ಮದಲ್ಲಿನ ಅನಿಷ್ಟ ಆಚರಣೆಗಳ ವಿರುದ್ಧ ಹೋರಾಟ ಮಾಡಲು ಸಹಕಾರಿಯಾಯಿತು. ಕ್ರೈಸ್ತ ಮಿಷನರಿಗಳು ಬಹುಸಂಖ್ಯಾತ ದಲಿತರನ್ನು ತಮ್ಮ ಕಡೆ ಸೆಳೆದು ಮತಾಂತರಗೊಳಿಸಿ, ತಮ್ಮಿಂದ ದಲಿತರನ್ನು ಹೊರಗೂಳಿಸುತ್ತಾರೆಂಬ ಭಯ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರಲ್ಲಿ ಮೂಡಿತು. ಇದರಿಂದಾಗಿ ಅವರು ಕ್ರೈಸ್ತ ಮಿಷನರಿಗಳ ಶಾಲೆಗಳ ಪಕ್ಕದಲ್ಲಿಯೇ ಪಂಚಮ ಶಾಲೆಗಳನ್ನು ತೆರೆದು, ಶಿಕ್ಷಣ ಮೂಲಭೂತ ಸೌಲಭ್ಯಗಳನ್ನು ನೀಡಲು ಮುಂದಾದರು. ದಲಿತ ಸಮುದಾಯಕ್ಕೆ ವಿದ್ಯೆ ಎಂಬುದು ಕನಸಾಗಿದ್ದ ಸಂದರ್ಭದಲ್ಲಿ ಶಿಕ್ಷಣದ ಅರಿವು ಅವರಿಗೆ ಸಹಕಾರಿಯಾಯಿತು. ತಮ್ಮ ಸ್ಥಿತಿಗತಿಗಳನ್ನು ಅರ್ಥ ಮಾಡಿಕೊಳ್ಳಲು ಸಹಕಾರಿಯಾಯಿತು. ಈ ನಿಟ್ಟಿನಲ್ಲಿ ಕ್ರೈಸ್ತ ಮಿಷನರಿಗಳ ಪ್ರಭಾವ ದಲಿತರಲ್ಲಿ ಜಾಗೃತಿ, ಆತ್ಮಸ್ಥೈರ್ಯ ಉಂಟು ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿತು.

೨.೪.೧. ಮೈಸೂರು ಸಂಸ್ಥಾನಕ್ಕೆ ಕ್ರೈಸ್ತ ಮಿಷನರಿಗಳ ಪ್ರವೇಶ

ಮೈಸೂರು ಸಂಸ್ಥಾನದಲ್ಲಿ ವಸಾಹತುಶಾಹಿಗಳ ಆಳ್ವಿಕೆಯ ಕಾಲದಲ್ಲಿ ಅನೇಕ ಸಾಮಾಜಿಕ ಆಂದೋಲನಗಳು ಸಮಾಜವನ್ನು ಪರಿವರ್ತಿಸುವ ಪ್ರಯತ್ನವನ್ನು ಮಾಡಿದವು. ಇದಕ್ಕೆ ಕ್ರೈಸ್ತ ಮಿಷನರಿಗಳ ಪಾತ್ರವೂ ವಿಶೇಷವಾಗಿ ಕಾರಣವಾಗಿತ್ತು. ಹೊಸದಾಗಿ ಆರಂಭವಾದ ಪ್ರಾಟೆಸ್ಟೆಂಟ್ ಮಿಷನರಿಗಳು ಈ ದಿಸೆಯಲ್ಲಿ ಕಾರ್ಯೋನ್ಮುಖವಾದವು. ಮೈಸೂರಿನಲ್ಲಿ ಥಿಯೋಸೊಫಿಕಲ್ ಸೊಸೈಟಿಯು ಕ್ರಿ.ಶ. ೧೮೮೬ರಲ್ಲಿ ತನ್ನ ಕಾರ್ಯವನ್ನು ಆರಂಭಿಸಿತು.[೨೨] ಕ್ರೈಸ್ತ ಮಿಷನರಿಗಳು ಮೈಸೂರು ಸಂಸ್ಥಾನದ ಪ್ರವೇಶ ಹಾಗೂ ತಮ್ಮದೇ ಆದ ಕಾರ್ಯಸೂಚಿಯನ್ನು ಹೊಂದಿ ಅದಕ್ಕೆ ಪೂರಕವಾಗಿ ಹಲವಾರು ಸಾಮಾಜಿಕ ಸೇವಾ ಕಾರ್ಯಕ್ರಮಗಳನ್ನು ಕೈಗೊಂಡರು.

ಕೆಲಮಿಷನರಿಗಳು ಧರ್ಮ ಪ್ರಚಾರಕ್ಕಾಗಿ ಬಂದರೂ, ಇಲ್ಲಿನ ಪರಿಸ್ಥಿತಿ ಸಂಸ್ಕೃತಿ ಮತ್ತು ಜನತೆಯ ಭಾವನೆಗಳನ್ನು ಗುರುತಿಸಿ ತಮ್ಮ ಉದ್ದೇಶವನ್ನೇ ಮರೆತು, ಈ ನಾಡಿನವರಾಗಿಯೇ ಕಾರ್ಯನಿರ್ವಹಿಸಿದ್ದುಂಟು. ಹೀಗಾಗಿ ೧೯ನೆಯ ಶತಮಾನ ಕ್ರೈಸ್ತ ಧರ್ಮದ ಇತಿಹಾಸದಲ್ಲಿ ಅತ್ಯಂತ ಪ್ರಮುಖವಾದುದಾಗಿದೆ. ಏಕೆಂದರೆ ಈ ಅವಧಿಯಲ್ಲಿ ಕ್ರೈಸ್ತ ಮಿಷನರಿಗಳು ಕ್ರೈಸ್ತ ಧರ್ಮದ ಪ್ರಚಾರವನ್ನು ಪ್ರಪಂಚದಾದ್ಯಂತ ಮಾಡಿದ್ದುದರ ಫಲವಾಗಿ ಈ ಧರ್ಮ ಜಾಗತಿಕ ಧರ್ಮವಾಗಿ ಪರಿವರ್ತನೆ ಹೊಂದಿತು. ಮೈಸೂರು ಸಂಸ್ಥಾನದ ಹಲವು ಭಾಗಗಳಲ್ಲಿ ಕ್ರೈಸ್ತ ಧರ್ಮದ ಪ್ರಚಾರವು ನಡೆಯುತ್ತಿತ್ತು. ಒಡೆಯರು ಯಾವುದೇ ನಿರ್ಬಂಧ ಹಾಕಿರಲಿಲ್ಲ.

ಹೀಗೆ ಮೈಸೂರು ಸಂಸ್ಥಾನಕ್ಕೆ ಕ್ರೈಸ್ತ ಮಿಷನರಿಗಳ ಪ್ರವೇಶ ನಂತರ ಅಸ್ಪೃಶ್ಯರ ಮತ್ತು ಕೆಳವರ್ಗಗಳು ಸಾಮಾಜಿಕವಾಗಿ ಬದಲಾವಣೆಯನ್ನು ಹೊಂದಲು ಸಹಕಾರಿಯಾಯಿತು.

೨.೪.೨. ಕ್ರೈಸ್ತ ಮಿಷನರಿಗಳ ಸಮಾಜ ಸೇವೆಯ ಹಿನ್ನೆಲೆ

ಕ್ರಿ.ಶ. ೧೬೦೦ರಲ್ಲಿ ಭಾರತಕ್ಕೆ ಆಗಮಿಸಿದ ಈಸ್ಟ್ ಇಂಡಿಯಾ ಕಂಪೆನಿ ಭಾರತದ ಹಲವು ಪ್ರದೇಶಗಳಲ್ಲಿ ತನ್ನ ವ್ಯಾಪಾರ ಚಟುವಟಿಕೆಗಳನ್ನು ಪ್ರಾರಂಭಿಸಿತು. ಆರಂಭದಲ್ಲಿ ಇವರ ಮುಖ್ಯ ಉದ್ದೇಶ ವ್ಯಾಪಾರ ಮತ್ತು ಲಾಭಗಳಿಕೆ ಆಗಿದ್ದರೂ, ಕ್ರೈಸ್ತ ಧರ್ಮದ ಪ್ರಚಾರವು ಸಹ ಬಹುಮುಖ್ಯವಾಗಿದ್ದಿತ್ತು. ಆರಂಭದಲ್ಲಿ ಮಿಷನರಿಗಳು ನೇರವಾಗಿ ಮತಾಂತರಕ್ಕೆ ಮತ್ತು ಧರ್ಮ ಪ್ರಚಾರಕ್ಕೆ ಪ್ರಯತ್ನಿಸಿದರು. ಇದಕ್ಕೆ ವಿರೋಧ ವ್ಯಕ್ತವಾದಾಗ ಮಿಷನರಿಗಳು ಇಲ್ಲಿನ ಜಾತಿ ಪದ್ಧತಿ, ಪರಿಸ್ಥಿತಿ, ಅವಶ್ಯಕತೆ, ಭಾಷೆ, ಸಂಸ್ಕೃತಿ ಎಲ್ಲವನ್ನು ಪರಿಚಯ ಮಾಡಿಕೊಂಡ ನಂತರ ನಿಧಾನವಾಗಿ ಇಲ್ಲಿನ ಜನರಿಗೆ ಸಾಕಷ್ಟು ಅವಶ್ಯಕವಾಗಿ ಬೇಕಿದ್ದ ಸೇವೆಗಳನ್ನು ಪ್ರಾರಂಭಿಸಿದರು.[೨೩] ವೈದಿಕ ಪುರೋಹಿತಶಾಹಿ ಹಾಗೂ ಹಿಂದೂ ಧರ್ಮ ಇಲ್ಲಿನ ಬಹುಸಂಖ್ಯಾತರನ್ನು ಒಂದಿಲ್ಲೊಂದು ರೀತಿಯಲ್ಲಿ ಕತ್ತಲೆಯಲ್ಲಿಟ್ಟುಕೊಂಡು ಬಂದಿದೆ. ಅಜ್ಞಾನ ಅಂಧಕಾರದಲ್ಲಿರುವ ಅಸ್ಪೃಶ್ಯ ಸಮುದಾಯಗಳೊಂದಿಗೆ ಚೆಲ್ಲಾಟವಾಡುತ್ತಾ ಬಂದಿದೆ. ಇಂತಹ ಎಲ್ಲ ಸಾಮಾಜಿಕ ಅಸಮತೋಲನವನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಬಂದ ಕ್ರೈಸ್ತ ಮಿಷನರಿಗಳು ಭಾರತೀಯ ಸಾಮಾಜಿಕ ಮತ್ತು ಜಾತಿ ಪದ್ಧತಿಯ ಸ್ವರೂಪವನ್ನು ಅಧ್ಯಯನ ಮಾಡಿ ನಂತರದಲ್ಲಿ ಸೂಕ್ಷ್ಮ ಕಾರ್ಯಯೋಜನೆಗಳನ್ನು ರೂಪಿಸಿದರು.[೨೪]

ಪ್ರಬಲ ಸಮುದಾಯಗಳಿಂದ ದಲಿತ ವರ್ಗಗಳು ಜಾತಿ ಶೋಷಣೆ, ಆರ್ಥಿಕ ಶೋಷಣೆಗಳಲ್ಲಿ ಸಾಮಾಜಿಕ ಬಹಿಷ್ಕಾರಕ್ಕೂ ಒಳಗಾಗಿದ್ದರು. ಪ್ರಬಲ ಸಮುದಾಯಗಳು ದಲಿತರನ್ನು ಮನುಷ್ಯರಂತೆ ಕಾಣದೆ ಒಂದು ಕ್ರಮಬದ್ಧವಾದ ರೀತಿಯಲ್ಲಿ ಸ್ವಪ್ರಯೋಜನಕ್ಕಾಗಿ ದುಡಿಸಿಕೊಂಡು ಅವರನ್ನು ಶೋಷಣೆಗೆ ಗುರಿ ಮಾಡಿದ್ದರು. ಇಂತಹ ಸಂದರ್ಭದಲ್ಲಿ ದಲಿತರಿಗೆಲ್ಲ ತಾವು ಮನುಷ್ಯರೆಂಬ ಬೆಲೆಯೇ ಇಲ್ಲದ ಸಮಾಜದಿಂದಲೂ ಅವರ ಜೀವನದ ಎಲ್ಲ ದುಸ್ಥಿತಿಗಳಿಂದಲೂ ಒಂದು ವಿಮೋಚನೆಯ ಮಾರ್ಗದ ಅವಶ್ಯಕತೆ ದಲಿತರಿಗಿತ್ತು.[೨೫]

ಈ ಸಂದರ್ಭವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡ ಕ್ರೈಸ್ತ ಮಿಷನರಿಗಳು, ಸಂಸ್ಥಾನದಲ್ಲಿ ಶಿಕ್ಷಣ, ವೈದ್ಯಕೀಯ ಸೇವೆ, ಕ್ಷಾಮ ಮತ್ತು ಬರಗಾಲಗಳ ಕಾಲದಲ್ಲಿ ಸೇವೆ, ಅನಾಥಾಲಯಗಳ ಸ್ಥಾಪನೆ ಮತ್ತು ಸಾಮಾಜಿಕ ಸುಧಾರಣೆಯಲ್ಲಿ ಹೆಚ್ಚಿನ ಗಮನ ಹರಿಸಿದರು. ಮೂಲಭೂತ ಹಕ್ಕುಗಳಿಂದ ವಂಚಿತವಾಗಿದ್ದ ದಲಿತ ಸಮುದಾಯದ ಕೆಳವರ್ಗಗಳು ಕ್ರೈಸ್ತ ಮಿಷನರಿಗಳು ನೀಡುತ್ತಿದ್ದ ಸೌಲಭ್ಯಗಳಿಂದ ಆಕರ್ಷಿತರಾಗಿ ಸಹಜವಾಗಿಯೇ ಕ್ರೈಸ್ತ ಧರ್ಮದತ್ತ ತಮ್ಮ ಒಲವನ್ನು ಹೊಂದಿದರು. ತಾವು ಕ್ರೈಸ್ತರಾದರೆ ತಮ್ಮ ಸಾಮಾಜಿಕ ಸ್ಥಿತಿ ಉತ್ತಮವಾಗುತ್ತದೆಂಬ ನಿರೀಕ್ಷೆ ಅವರಲ್ಲಿತ್ತು. ಹಿಂದೂ ಸಮಾಜದಲ್ಲಿ ಕಾಣದಂತಹ, ಕೇಳದಂತಹ ಮತ್ತು ಎಂದೂ ಅನುಭವಿಸದಂತಹ ವೈಯಕ್ತಿಕ ಗೌರವ, ಸ್ವಾತಂತ್ರ್ಯ ಹಾಗೂ ಸಮಾನತೆಗಳನ್ನು ಬೋಧಿಸುವ ಕ್ರೈಸ್ತ ಧರ್ಮ ದಲಿತರನ್ನು ಆಕರ್ಷಿಸಿತು. ಇದರಿಂದಾಗಿ ಕ್ರೈಸ್ತ ಮಿಷನರಿಗಳು ಧರ್ಮ ಪ್ರಚಾರ ಮತ್ತು ಮತಾಂತರವನ್ನು ಸುಲಭವಾಗಿ ನಡೆಸಿದರು.[೨೬]

೨.೪.೩. ಕ್ರೈಸ್ತ ಮಿಷನರಿಗಳ ಶಿಕ್ಷಣ ಮತ್ತು ದಲಿತವರ್ಗ

ಮೈಸೂರು ಸಂಸ್ಥಾನದಲ್ಲಿ ಕ್ರೈಸ್ತ ಮಿಷನರಿಗಳು ಪಾಶ್ಚಾತ್ಯ ಶಿಕ್ಷಣವನ್ನು ನೀಡಿದರು. ಲಂಡನ್ ಮಿಷನ್, ವೆಸ್ಲಿಯನ್ ಮಿಷನ್ ಮತ್ತು ಬಾಸೆಲ್ ಮಿಷನ್ ಇವು ಇಂಗ್ಲಿಶ್ ಶಿಕ್ಷಣ ಪ್ರಸಾರದಲ್ಲಿ ಅಭೂತಪೂರ್ವ ಸೇವೆ ಸಲ್ಲಿಸಿದುದಷ್ಟೇ ಅಲ್ಲದೆ, ಅವು ಕನ್ನಡ ಭಾಷೆ, ಸಾಹಿತ್ಯ ಮತ್ತು ಮುದ್ರಣ ಕ್ಷೇತ್ರದಲ್ಲಿಯೂ ವಿಶಿಷ್ಟ ಕೊಡುಗೆ ನೀಡಿವೆ.

ಮೈಸೂರು ಸಂಸ್ಥಾನದಲ್ಲಿ ಪುರಾತನ ಕಾಲದಿಂದಲೂ ಶಿಕ್ಷಣ ಕೆಲವೇ ವರ್ಗಗಳಿಗೆ ಸೀಮಿತವಾಗಿತ್ತು. ಗ್ರಾಮೀಣ ಮತ್ತು ಕೆಳವರ್ಗಗಳಿಗೆ ಹಾಗೂ ಸ್ತ್ರೀಯರಿಗೆ ಶೈಕ್ಷಣಿಕ ಸವಲತ್ತುಗಳು ಇರಲಿಲ್ಲ. ಆ ಸಂದರ್ಭದಲ್ಲಿ ಮಿಷನರಿಗಳು ಸಂಸ್ಥಾನದ ಹಲವಾರು ಕಡೆಗಳಲ್ಲಿ ಶಾಲೆಗಳನ್ನು ಸ್ಥಾಪಿಸಿದರು. ಎಲ್ಲರಿಗೂ ಮುಕ್ತವಾದ ಅವಕಾಶ ಕಲ್ಪಿಸಿದರು. ಶಾಲೆಗಳಲ್ಲಿ ಆಂಗ್ಲ ಶಿಕ್ಷಣ, ಮಾತೃಭಾಷೆ ಶಿಕ್ಷಣ, ಕೈಸ್ತ ಧರ್ಮದ ಬಗ್ಗೆ ಬೋಧನೆ ಮುಂತಾದವುಗಳನ್ನು ಬೋಧಿಸಲಾಗುತ್ತಿತ್ತು. ಅಸ್ಪೃಶ್ಯರು ಸಾರ್ವಜನಿಕ ಶಾಲೆಗಳಲ್ಲಿ ಸೇರಿ ವಿದ್ಯೆ ಕಲಿಯಲು ಸರ್ಕಾರ ತಾತ್ವಿಕವಾಗಿ ಒಪ್ಪಿಗೆ ಕೊಟ್ಟಿತ್ತಾದರೂ ಸಮಾಜದ ವಿವಿಧ ವಲಯಗಳಲ್ಲಿ ಅದಕ್ಕೆ ಸಾಕಷ್ಟು ವಿರೋಧವಿತ್ತು. ಇದರಿಂದಾಗಿ ಸರ್ಕಾರವು ಪಂಚಮ ಶಾಲೆಗಳೆಂಬ ಪ್ರತ್ಯೇಕ ಶಾಲೆಗಳನ್ನು ತೆರೆಯುವತ್ತ ಹೆಚ್ಚು ಒಲವು ತೋರಿಸಿತು. ಅನೇಕ ಪಂಚಮ ಶಾಲೆಗಳು ಕ್ರೈಸ್ತ ಮಿಷನ್ ಸಂಸ್ಥೆಗಳ ಆಶ್ರಯದಲ್ಲಿ ನಡೆಯುತ್ತಿದ್ದವು.[೨೭] ಕ್ರೈಸ್ತ ಮಿಷನರಿಗಳು ಸ್ಥಾಪಿಸಿದ ಪಂಚಮ ಶಾಲೆಗಳಲ್ಲಿ ಶಿಕ್ಷಣ ಪಡೆದ ದಲಿತ ಸಮುದಾಯ ತಮ್ಮ ಮೇಲೆ ನಡೆಯುವ ಶೋಷಣೆ, ದಬ್ಬಾಳಿಕೆ ಮುಂತಾದವುಗಳನ್ನು ಅರಿಯಲು ಸಹಕಾರಿಯಾಯಿತು.

೨.೫. ಮೈಸೂರು ಸಂಸ್ಥಾನದಲ್ಲಿ ಗಾಂಧೀಜಿ ಅವರ ಪ್ರಭಾವ

ಮೈಸೂರು ಸಂಸ್ಥಾನದಲ್ಲಿ ಗಾಂಧಿ ಅವರ ಪ್ರಭಾವ ಅಂಬೇಡ್ಕರ್ ಪ್ರಭಾವಕ್ಕಿಂತಲೂ ಹೆಚ್ಚಾಗಿಯೇ ಪರಿಣಾಮ ಬೀರಿರುವುದು ಕಂಡು ಬರುತ್ತದೆ. ಇವರು ಮೈಸೂರು ಸಂಸ್ಥಾನಕ್ಕೆ

ಭೇಟಿ ನೀಡಿದ ನಂತರ ಅವರ ವಿಚಾರಧಾರೆಗಳಿಂದ ಪ್ರೇರೇಪಿತರಾದ ಅನೇಕ ಬ್ರಾಹ್ಮಣ ಹಾಗೂ ಸವರ್ಣೀಯ ಶ್ರೀಮಂತರು ಆಸ್ತಿ, ಹಣ, ಅಧಿಕಾರಗಳನ್ನು ಗಾಂಧೀಜಿ ಅವರಿಗೆ ತ್ಯಾಗ ಮಾಡಿದರು. ಅವರ ರಚನಾತ್ಮಕ ಕಾರ್ಯಗಳನ್ನು ಶ್ರದ್ಧೆ ವಹಿಸಿ ಸಂಸ್ಥಾನದಲ್ಲಿ ಜಾರಿಗೊಳಿಸಲು ಪ್ರಯತ್ನಿಸಿದರು. ಗಾಂಧೀಜಿಯವರು ನಿರ್ಲಕ್ಷ್ಯ ತಾತ್ಸರಗಳಿಗೆ ಒಳಗಾಗಿದ್ದ ಸಮುದಾಯಗಳನ್ನು ಮೇಲೆತ್ತುವ ಮತ್ತು ಆತ್ಮಸ್ಥೈರ್ಯವನ್ನು ತುಂಬುವ ಕೆಲಸ ಮಾಡಿದರು. ಅವರ ದಲಿತೋದ್ಧಾರದ ಕಾರ್ಯಗಳು ದಲಿತರ ಅಭಿವೃದ್ಧಿಗೆ ಸಹಕಾರಿಯಾದವು. ಆದರೆ ಅವರ ಹಲವಾರು ನಡೆ, ಅಭಿಪ್ರಾಯಗಳನ್ನು ಗಮನಿಸಿದಾಗ ಅಸ್ಪೃಶ್ಯತಾ ನಿವಾರಣೆ ಕೇವಲ ರಾಜಕೀಯದಿಂದ ಕೂಡಿತ್ತು ಎಂಬ ಅನುಮಾನ ಕಾಡುತ್ತದೆ. ಪ್ರಸ್ತುತ ಅಧ್ಯಾಯದಲ್ಲಿ ಗಾಂಧೀ ಅವರ ಅಸ್ಪೃಶ್ಯತಾ ನಿವಾರಣೆಯ ಹಿನ್ನೆಲೆ ಮತ್ತು ಮೈಸೂರು ಸಂಸ್ಥಾನದಲ್ಲಿ ಅವರ ಅಸ್ಪೃಶ್ಯತಾ ನಿವಾರಣಾ ಕಾರ್ಯಗಳನ್ನು ಕುರಿತು ಸಮಗ್ರವಾಗಿ ಚರ್ಚಿಸಲಾಗಿದೆ. ಗಾಂಧಿ ಅವರ ವಿಚಾರಗಳು ಅಂದಿನ ಸಂದರ್ಭದಲ್ಲಿ ಯಾವ ರೀತಿ ಪ್ರಭಾವ ಬೀರಿದವು ಎಂಬುದರ ಕುರಿತು ವಿಮರ್ಶಾತ್ಮಕವಾಗಿ ಚಿಂತಿಸಲಾಗಿದೆ. ಇಂತಹ ಸುಧಾರಣಾ ಚಳವಳಿಗಳಿಂದ ಪ್ರಭಾವಿತರಾದ ಹಲವಾರು ವ್ಯಕ್ತಿಗಳು ಸ್ವತಂತ್ರ ಪೂರ್ವದಲ್ಲಿಯೇ ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿರ್ಮೂಲನಾ ಚಳವಳಿಯನ್ನು ಕೈಗೊಂಡಿದ್ದರು. ಮಿಷನರಿಗಳ ಪಾಶ್ಚಾತ್ಯ ಶಿಕ್ಷಣವನ್ನು ಪಡೆದ ದಲಿತ ಸಮುದಾಯವು ಎಚ್ಚೆತ್ತುಕೊಳ್ಳಲು ಸಾಧ್ಯವಾಯಿತು. ಸವರ್ಣೀಯರ ದಬ್ಬಾಳಿಕೆ, ಶೋಷಣೆ, ಮೂಢನಂಬಿಕೆಗಳ ವಿರುದ್ಧ ಪ್ರತಿಭಟಿಸಲು ಸಹಕಾರಿಯಾಯಿತು. ನಾವು ಮನುಷ್ಯರೇ ನಮಗೂ ಸಹ ಎಲ್ಲರಂತೆ ಬಾಳವ ಹಕ್ಕಿದೆ ಎಂಬುದನ್ನು ಮನಗಾಣಲಾಯಿತು. ಶಿಕ್ಷಣವಂತ ದಲಿತ ಸಮುದಾಯದಲ್ಲಿನ ನಾಯಕರುಗಳು ಹಿಂದೂಧರ್ಮವನ್ನು ನಿಕೃಷ್ಟವಾಗಿ ಕಾಣಲಾರಂಭಿಸಿದರು. ಮೂಲಭೂತ ಸೌಲಭ್ಯವನ್ನು ನೀಡಿದ ಕ್ರೈಸ್ತ ಧರ್ಮದತ್ತ ಹೆಚ್ಚು ಹೆಚ್ಚು ಆಕರ್ಷಿತರಾಗತೊಡಗಿದರು. ಇದರಿಂದಾಗಿ ಸನಾತನಿಗಳು, ಹಿಂದೂ ಧರ್ಮದ ರಕ್ಷಕರೆನಿಸಿಕೊಂಡಿದ್ದ ಬ್ರಾಹ್ಮಣ-ಬ್ರಾಹ್ಮಣೇತರರು ದಲಿತ ವರ್ಗಗಳ ಓಲೈಕೆಗೆ ಮುಂದಾದರು. ಅವರೂ ಕ್ರೈಸ್ತ ಮಿಷನರಿಗಳಂತೆ ಎಲ್ಲಾ ರೀತಿಯ ಸೌಲಭ್ಯಗಳನ್ನು ನೀಡುವುದರ ಜೊತೆಗೆ ಹಿಂದೂ ಧರ್ಮದಲ್ಲಿಯೇ ಉಳಿಸಿಕೊಳ್ಳುವ ಪ್ರಯತ್ನ ಮಾಡಿದರು. ಕ್ರೈಸ್ತ ಮಿಷನರಿಗಳು ನೀಡಿದ ಶಿಕ್ಷಣದಿಂದಾಗಿ ದಲಿತ ವರ್ಗಗಳು ಜಾಗೃತರಾಗಲು ಸಹಕಾರಿಯಾಯಿತು.

೨.೫.೧. ಗಾಂಧೀಜಿ ಅವರು ಅಸ್ಪೃಶ್ಯತಾ ನಿವಾರಣೆಗೆ ಮುಂದಾಗಲು ಕಾರಣ

ವರ್ಣಾಶ್ರಮ ವ್ಯವಸ್ಥೆಯಲ್ಲಿ ಆದಿಕಾಲದಿಂದಲೂ ಜಾತಿಪದ್ಧತಿ ಪ್ರಚಲಿತದಲ್ಲಿದ್ದು, ಈ ಪದ್ಧತಿಯ ನಿರ್ಮೂಲನೆಗೆ ನಡೆದ ಹೋರಾಟ ಹಾಗೂ ಈ ಅನಿಷ್ಟ ಆಚರಣೆಯನ್ನು ವಿರೋಧಿಸುವಲ್ಲಿ ಗಾಂಧೀಜಿಯವರ ಪಾತ್ರ ಬಹಳ ಮುಖ್ಯವಾದುದಾಗಿದೆ. ಮೈಸೂರು ಸಂಸ್ಥಾನದಲ್ಲಿ ಗಾಂಧೀಯವರ ಪ್ರವೇಶದ ನಂತರ ಒಂದು ಹೊಸ ಬದಲಾದ ಸ್ವರೂಪವನ್ನು ಪಡೆಯಿತು. ಗಾಂಧೀಯವರು ಮೈಸೂರು ಸಂಸ್ಥಾನದಲ್ಲಿನ ಅಸ್ಪೃಶ್ಯತಾ ನಿವಾರಣೆ ಹೋರಾಟಗಳನ್ನು ಕುರಿತು ಸಮಗ್ರವಾಗಿ ವಿಶ್ಲೇಷಿಸಲಾಗಿದೆ.

ರಾಷ್ಟ್ರೀಯ ಸಮಗ್ರ ನೆಲೆಯಲ್ಲಿ ಎಲ್ಲರೂ ಗೌರವಿಸಬೇಕಾದ ಮಹಾನ್ ವ್ಯಕ್ತಿತ್ವ ಗಾಂಧೀಜಿಯವರದು. ಆದರೆ ಭಾರತದ ಆಂತರಿಕ ನೆಲೆಯಲ್ಲಿ ಅಸ್ಪೃಶ್ಯರನ್ನು ಮೇಲೆತ್ತುವಲ್ಲಿ ಅಥವಾ ಅಸ್ಪೃಶ್ಯತೆ ನಿವಾರಣೆಯ ಸಂದರ್ಭದಲ್ಲಿ ಅವರ ವಿಚಾರಗಳಲ್ಲಿ ಸ್ಪಷ್ಟವಾದ ನಿಲುವಿರಲಿಲ್ಲ.

ದಕ್ಷಿಣ ಆಫ್ರಿಕಾದಲ್ಲಿ ಕರಿಯರ ಮತ್ತು ಅಲ್ಲಿರುವ ಭಾರತೀಯರ ಮೇಲಾಗುತ್ತಿದ್ದ ದೌರ್ಜನ್ಯ ದಬ್ಬಾಳಿಕೆಯನ್ನು ಸಹಿಸದ ಗಾಂಧೀಜಿಯವರು ತೀವ್ರ ಹೋರಾಟ ಮಾಡಿದರು. ಆದರೆ ಭಾರತಕ್ಕೆ ಬಂದ ಮೇಲೆ ಅಸ್ಪೃಶ್ಯತೆಯೆಂಬ ಭೀಕರ ಮತ್ತು ಅನಾಗರಿಕ, ಅವೈಜ್ಞಾನಿಕ, ಅಮಾನವೀಯ ಪದ್ಧತಿ ವಿರುದ್ಧ ಧ್ವನಿ ಎತ್ತುವಲ್ಲಿ ವಿಳಂಬವಾದುದಕ್ಕೆ ಅನೇಕ ಚಿಂತಕರು ಪ್ರಶ್ನೆ ಮಾಡುವಂತಾಗಿದೆ. ವರ್ಣವ್ಯವಸ್ಥೆಯಲ್ಲಿ ಗಾಂಧೀಜಿಯವರಿಗೆ ಅಚಲವಾದ ನಂಬಿಕೆ ಇರುವುದೇ ಇದಕ್ಕೆ ಕಾರಣ. ಜಾತಿಪದ್ಧತಿ ವರ್ಣವ್ಯವಸ್ಥೆ ಜನ್ಮಜಾತವಾದುದು ಎಂದು ಅವರು ನಂಬಿಕೊಂಡವರಾಗಿದ್ದರು.

ಹೀಗಾಗಿ ಗಾಂಧೀಜಿಯವರು ಜಾತಿ ವ್ಯವಸ್ಥೆಯನ್ನು ಬೆಂಬಲಿಸುವವರಾಗಿದ್ದರೇ ವಿನಃ ವಿರೋಧಿಸುವವರಾಗಿರಲಿಲ್ಲ ಎನ್ನುವುದು ಮೇಲ್ನೋಟಕ್ಕೆ ತಿಳಿದು ಬರುತ್ತದೆ.[೨೮] ಭಾರತ ರಾಷ್ಟ್ರೀಯ ಚಳವಳಿಯ ನಾಯಕತ್ವ ವಹಿಸಿದ ಗಾಂಧೀಜಿಗೆ ಚಳವಳಿ ನಿಜವಾಗಿಯೂ ರಾಷ್ಟ್ರೀಯ ಸ್ವರೂಪ ಪಡೆಯಬೇಕಾದರೆ ಭಾರತದ ಎಲ್ಲಾ ಧಾರ್ಮಿಕ, ಸಾಮಾಜಿಕ ವರ್ಗದವರೂ ಪಾಲ್ಗೊಳ್ಳಬೇಕು ಎಂಬ ಸ್ಪಷ್ಟ ಅರಿವಿತ್ತು ಮತ್ತು ವಿಶೇಷ ಆಸಕ್ತಿ ವಹಿಸಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಾದ, ಅಸ್ಪೃಶ್ಯರ ಸಮಸ್ಯೆಯಂತೂ ಅವರ ದೃಷ್ಟಿಯಲ್ಲಿ ಬಹಳ ಪ್ರಾಮುಖ್ಯತೆಯುಳ್ಳದಾಗಿತ್ತು.[೨೯] ಗಾಂಧೀ ಅವರ ಪ್ರಕಾರ ಅಸ್ಪೃಶ್ಯತೆ ಹಿಂದೂ ಧರ್ಮಕ್ಕೆ ತಗುಲಿದ ಒಂದು ರೋಗ. ಹಿಂದೂ ಧರ್ಮದ ಸುಧಾರಣೆ ಬಗ್ಗೆ ಅವರು ಮಾತನಾಡುತ್ತಿದ್ದರು. ಅಸ್ಪೃಶ್ಯತೆ ಎಂಬುದು ಅವರ ಪ್ರಕಾರ ಒಂದು ವೈರುಧ್ಯ ಚಾತುರ್ವರ್ಣದಲ್ಲಿ ಅದಕ್ಕೆ ಸ್ಥಾನವಿಲ್ಲ. ಆದ್ದರಿಂದ ಚಾತುರ್ವರ್ಣವನ್ನೇ ನಾಶ ಮಾಡುವುದರ ಬಗ್ಗೆ ಯೋಚಿಸುವುದಕ್ಕೆ ಪ್ರತಿಯಾಗಿ ಗಾಂಧೀಜಿ ಅಸ್ಪೃಶ್ಯತೆಯ ನಿವಾರಣೆ ಬಗ್ಗೆ ಯೋಚಿಸುತ್ತಿದ್ದರು. ಅವರಿಗೂ ಸಹ ಬ್ರಿಟಿಶ್ ವಸಾಹತುಶಾಹಿ ಬಗ್ಗೆ ವಿರೋಧವಿತ್ತೇ ವಿನಃ ವೈದಿಕ ಬ್ರಾಹ್ಮಣಶಾಹಿ ಬಗ್ಗೆ ವಿರೋಧವಿರಲಿಲ್ಲ.[೩೦] ದಲಿತರ ಸಮಸ್ಯೆಯನ್ನು ಹಾಗೂ ಅಸ್ಪೃಶ್ಯತೆಯನ್ನು ನಿವಾರಿಸುವುದು ಹಿಂದೂಗಳ ಹಾಗೂ ಹಿಂದೂ ಧರ್ಮದ ಜವಾಬ್ದಾರಿ ಎಂದು ತಿಳಿದಿದ್ದರು. ದಲಿತರನ್ನು ಹಿಂದೂ ಧರ್ಮದ ಅವಿಭಾಜ್ಯ ಅಂಗವಾಗಿ ಅವರು ಪರಿಭಾವಿಸಿಕೊಂಡಿದ್ದರು. ದಲಿತರ ಪ್ರತ್ಯೇಕಿಕರಣವನ್ನು ಮತ್ತು ಪ್ರತ್ಯೇಕ ರಾಜಕೀಯ ಮೀಸಲಾತಿಯನ್ನು ಅವರು ತಮ್ಮ ಪ್ರಾಣವನ್ನು ಪಣಕಿಟ್ಟು ವಿರೋಧಿಸಿದರು.[೩೧] ಗಾಂಧೀ ಎಂದೂ ಹಿಂದೂ ಆಚಾರ ವಿಚಾರಗಳನ್ನು ತೆಗಳಲಿಲ್ಲ. ಅವರಿಗೆ ಸಾಮಾಜಿಕ ನ್ಯಾಯದ ಬಗ್ಗೆ ನಂಬಿಕೆಯಿತ್ತು ಎಂಬುದೇ ಅನುಮಾನಾಸ್ಪದ. ನಂಬಿಕೆ ಇದ್ದಲ್ಲಿ ಅಸ್ಪೃಶ್ಯರ ಪ್ರಶ್ನೆ ಎದುರಾದಾಗ ಅವರು ಅಸ್ಪೃಶ್ಯರನ್ನು ಹತ್ತಿಕ್ಕುವ ಮತ್ತು ಬಲಿಷ್ಠರಾದ ಮುಸ್ಲಿಮರು ಮತ್ತು ಸಿಖ್ಖರ ಪರವಾದ ನಿಲುವು ತೆಗೆದುಕೊಳ್ಳುವ ಕೆಲಸ ಮಾಡುತ್ತಿರಲಿಲ್ಲ. ಮುಸ್ಲಿಮರಿಗೆ ಪ್ರತ್ಯೇಕ ಮತಗಟ್ಟೆಗೆ ಒಪ್ಪಿದರು. ನಾಯಕತ್ವದಲ್ಲಿ ಹೆಚ್ಚಿನ ಪಾಲು

ನೀಡಿದರು. ಆದರೆ ಅತ್ಯಂತ ದುಃಸ್ಥಿತಿಯಲ್ಲಿದ್ದ ಅಸ್ಪೃಶ್ಯರ ವಿಷಯ ಬಂದಾಗ ಅಮರಣಾಂತರ ಉಪವಾಸ ಕುಳಿತು ಪ್ರತ್ಯೇಕ ಮತಗಟ್ಟೆಗಳನ್ನು ತಡೆಗಟ್ಟಿದ್ದರು. ತನ್ನ ಸಮುದಾಯದ ಹಿತಕ್ಕೆ ಕಟ್ಟುಬದ್ಧರಾಗಿರುವ ಅಪ್ಪಟ ರಾಜಕಾರಣಿಯಂತೆ ವರ್ತಿಸಿದರು. ಆದರೆ ತಮ್ಮ ಮಾತುಗಳಲ್ಲಿ ರಾಜಕಾರಣಕ್ಕೆ ಧರ್ಮದ ಲೇಪಕೊಟ್ಟು ಎಲ್ಲರನ್ನು ದಿಕ್ಕು ತಪ್ಪಿಸಿದರು. ಅದೂ ಆ ಧರ್ಮದಲ್ಲಿ ನೀತಿಯಿಲ್ಲದಿರುವಾಗ, ರಾಜಕಾರಣ ನೀತಿಯ ಮೇಲೆ ನಿಲ್ಲಬೇಕೇ ವಿನಃ ಧರ್ಮದ ಮೇಲಲ್ಲ, ಅದರ ಪರಿಣಾಮವನ್ನು ನಾವಿಂದು ಉಣ್ಣುತ್ತಿದ್ದೇವೆ.[೨೨]

ಮಹಾತ್ಮಗಾಂಧಿ ಸ್ವಾತಂತ್ರ್ಯ ಚಳವಳಿಯ ನೇತಾರರಾಗಿ ಗೌರವಿಸಲೇಬೇಕಾದ ವ್ಯಕ್ತಿತ್ವದವರು, ಗೌರವಕ್ಕೆ ಅರ್ಹರೂ ಹೌದು. ಆದರೆ ಅಸ್ಪೃಶ್ಯರ ವಿಷಯ ಬಂದಾಗ ಗಾಂಧೀಜಿಯವರು ಹಿಂದೂವಾದದ ರಕ್ಷಕರಾಗಿ, ವೀರ ಯೋಧರಾಗಿ ಕಂಡು ಬರುತ್ತಾರೆ. ಹಿಂದೂವಾದವೆಂದರೆ ಅವರ ಜೀವ. ತಮ್ಮ ಜೀವ ಪಣಕ್ಕಿಟ್ಟು ತನ್ನವರನ್ನು ತನ್ನ ವರ್ಣಾಶ್ರಮ ಧರ್ಮವನ್ನು ರಕ್ಷಿಸುವ ಸಲುವಾಗಿ ಕೋಟಿ ಕೋಟಿ ದಲಿತರ ಬದುಕನ್ನು ಕರಾಳ ಕೂಪಕ್ಕೆ ತಳ್ಳಿದ ಅಪಕೀರ್ತಿ ಗಾಂಧೀಜಿಯವರಿಗೆ ಸಲ್ಲುತ್ತದೆ. ಸನಾತನ ವಾತಾವರಣದಲ್ಲಿ ಬೆಳೆದ ಗಾಂಧೀಜಿಗೆ ಹನ್ನೆರಡನೆಯ ವಯಸ್ಸಿನಲ್ಲಿಯೇ ಅಸ್ಪೃಶ್ಯತೆ ಎಂಬುದು ಒಂದು ಸಾಮಾಜಿಕ ಕಳಂಕವೆಂದು ಗೊತ್ತಿತ್ತು. ಹಾಗಿದ್ದೂ ಸುಮ್ಮನಿದ್ದ ಗಾಂಧೀಜಿಯವರು, ಅಂಬೇಡ್ಕರ್ ಅವರ ದಲಿತಪರ ಹೋರಾಟದ ಗಾಳಿ ಬೀಸುತ್ತಿದ್ದಂತೆ ೧೯೩೨ರ ಪೂನಾ ಒಪ್ಪಂದದ ನಂತರ ಅಸ್ಪೃಶ್ಯರ ಬಗ್ಗೆ ವಿಶೇಷ ಆಸಕ್ತಿ ತೋರಿಸಿದ್ದನ್ನು ಕಾಣುತ್ತೇವೆ.

ಅಸ್ಪೃಶ್ಯತೆ ಕುರಿತು ಪ್ರಜಾಂದೋಲನ, ಹರಿಜನ ಸಂಘ ಸ್ಥಾಪನೆಯನ್ನು ಮಾಡಿದರು. ಅವು ಅವರು ನಿರೀಕ್ಷಿಸಿದಷ್ಟು ಫಲ ನೀಡಲಿಲ್ಲ. ಕೇರಳ ರಾಜ್ಯದ ಗುರುವಾಯೂರು ದೇವಾಲಯ ಪ್ರವೇಶ ಸತ್ಯಾಗ್ರಹವನ್ನು ಅಸ್ಪೃಶ್ಯರು ಹಮ್ಮಿಕೊಂಡಿದ್ದರು. ದೇವಾಲಯ ಪ್ರವೇಶ ಸಂದರ್ಭದಲ್ಲಿ ಅಸ್ಪೃಶ್ಯರಿಗೆ ಪ್ರವೇಶ ನಿರಾಕರಿಸಿದಾಗ, ಗಾಂಧೀಜಿಯವರು ಸವರ್ಣೀಯರ ಮನವೊಲಿಸಬೇಕೆಂದರೆ ಹೊರತು, ಅವರಿಗೆ ನೈತಿಕ ಬೆಂಬಲ ನೀಡುವ ಹೇಳಿಕೆ ನೀಡಲಿಲ್ಲ. ಅಲ್ಲದೆ ಕೇಂದ್ರ ಶಾಸನಸಭೆಯಲ್ಲಿ ಮಂಡಿಸಲಾದ ಅಸ್ಪೃಶ್ಯತೆ ಆಚರಣೆ ನಿಷೇಧ ಮಸೂದೆಯನ್ನು ಅಂಗೀಕರಿಸುವಂತೆ ಸರಕಾರದ ಮೇಲೆ ಒತ್ತಡ ಹಾಕಲಿಲ್ಲ. ಬಲು ನೋವಿನ ಹಾಗೂ ಹಾಸ್ಯಾಸ್ಪದ ಸಂಗತಿಯೆಂದರೆ ಹರಿಜನ ಸೇವಕ ಸಂಘದಲ್ಲಿ ಅಸ್ಪೃಶ್ಯರೇ ಇರಲಿಲ್ಲ. 'ಕವಿತಾ' ಎಂಬ ಗ್ರಾಮದ ಶಾಲೆಯಲ್ಲಿ ಸವರ್ಣೀಯರ ಮಕ್ಕಳ ಜೊತೆಗೆ ಅಸ್ಪೃಶ್ಯರ ಮಕ್ಕಳನ್ನು ಕೂಡಿಸುವುದಿಲ್ಲವೆಂಬ ತಕರಾರು ಬಂದಾಗ ಗಾಂಧೀಜಿಯವರು ಅಸ್ಪೃಶ್ಯರ ಮಕ್ಕಳು ಬೇರೆ ಶಾಲೆಗೆ ಹೋಗಿ ಸೇರಿಕೊಳ್ಳಲಿ ಎಂಬ ನಿರ್ಣಯಕ್ಕೆ ಬಂದರು. ಅಸ್ಪೃಶ್ಯತೆ ಅವಮಾನ ಎಂತಹದ್ದು ಮತ್ತು ಅವರ ಸಂಕಟ ಏನು ಅನ್ನುವುದನ್ನು ಅರಿತಿದ್ದ ಗಾಂಧೀಜಿ ದಲಿತ, ಶೋಷಿತರ ಪರವಾಗಿ ಎಂದೂ ಉದಾರವಾದಿಗಳಾಗಿರಲಿಲ್ಲ. ಹಿಂದೂವಾದಿಗಳಿಗೆ ಮಾತ್ರ ಉದಾರವಾದಿಗಳಾಗಿದ್ದರು. ದುಂಡು ಮೇಜಿನ ಪರಿಷತ್ತಿನಲ್ಲಿ ದಲಿತರ ನಿಜವಾದ ವಾರಸುದಾರ ನಾನೇ ಎಂದು ವಾದಿಸಿದ ಗಾಂಧೀಜಿ, ಅದೇ ದಲಿತರಿಗೆ, ಅಂಬೇಡ್ಕರ್

ಅವರ ಪ್ರಯತ್ನದ ಫಲವಾಗಿ ದ್ವಿಮತದಾನದ ಹಕ್ಕು ದೊರೆತಾಗ ಸುಮ್ಮನಿರದೆ, ದಲಿತರ ಏಳಿಗೆಯನ್ನು ಸಹಿಸದೆ ಪೂನದ ಯರವಾಡದ ಜೈಲಿನಲ್ಲಿ ದಲಿತರಿಗೆ ದೊರೆತ ಹಕ್ಕುಗಳ ವಿರುದ್ಧ ಉಪವಾಸ ಕೈಗೊಂಡಿದ್ದು, ಅದರಲ್ಲಿ ಯಶಸ್ವಿಯಾದದ್ದು ವಿಪರ್ಯಾಸ ಅಲ್ಲವೇ?[೩೩]

ಗಾಂಧಿ ಅವರು ಅಂತರಂಗದಲ್ಲಿನ ಮಾರ್ಮಿಕ ಗುಟ್ಟಿನ ಪರಿವೆಯಿಲ್ಲದೆ ಬಹಿರಂಗಪಡಿಸುವಂತೆ ಅಸ್ಪೃಶ್ಯರ ಬೇಡಿಕೆ ಅರ್ಥವಾಗುತ್ತಿಲ್ಲ. ಹಿಂದೂ, ಮುಸ್ಲಿಂ, ಸಿಖ್ಖರ ಬೇಡಿಕೆ ಏನೆಂಬ ಅರಿವು ನನಗಿದೆ. ಅಸ್ಪೃಶ್ಯರ ಬೇಡಿಕೆಯಿಂದ ನನಗೆ ನಿರ್ದಯೆಯ ಇರಿತವಾಗಿದೆ ಎಂದೇಳುವ ಅವರು ಮನಸ್ಸಿಗುಂಟಾದ ಇಂಗಿತವನ್ನು ವ್ಯಕ್ತಪಡಿಸುತ್ತಾರೆ. ಅಸ್ಪೃಶ್ಯರ ಬದುಕು ಬವಣೆಯ ಸ್ವತಃ ಅನುಭವದ ಕೊರತೆಯಿಂದ ವಿಚಲಿತವಾದಂತಿದೆ. ಗಾಂಧೀಜಿ ಅವರಿಗೆ ಉಂಟಾಗಿರುವ ಸಂಕಟದ ಹಿಂದೆ ಹಿಂದೂ ಧರ್ಮದಲ್ಲಿ ಉಂಟಾಗಬಹುದೆಂಬ ಒಡಕಿನ ಜೊತೆಗೆ ಅದರ ಪರಿಣಾಮ ಅವರನ್ನು ನಡುಕಕ್ಕೆ ನೂಕಿರಬಹುದು ಎಂಬುವುದಕ್ಕಿಂತ, ವರ್ಣಾಶ್ರಮ ಧರ್ಮ ಶ್ರೇಣೀಕೃತ ವರ್ಣವ್ಯವಸ್ಥೆಗೆ ಆಗಬಹುದಾದ ಸುಧಾರಣೆ ಅಥವಾ ಬದಲಾವಣೆ ಅವರಿಗೆ ಇಷ್ಟವಿದ್ದಂತಿಲ್ಲ.[೩೪]

ಗಾಂಧೀಜಿಯವರು ಅನೇಕ ಬಾರಿ ಭಾವುಕರಾಗಿ ಸಾರ್ವಜನಿಕ ಸಭೆಗಳಲ್ಲಿ ಹೀಗೆ ಹೇಳುತ್ತಿದ್ದರು. ನಾನು ಮರಣ ಹೊಂದಿದರೆ, ಮುಂದಿನ ಜನ್ಮದಲ್ಲಿ ದಲಿತ ಸಮುದಾಯದಲ್ಲಿ ಹುಟ್ಟಿಸಬೇಕೆಂದು ದೇವರಲ್ಲಿ ನನ್ನ ಪ್ರಾರ್ಥನೆ, ಹಾಗೆ ಆದಲ್ಲಿ ಅವರ ಕಷ್ಟ, ಸುಖ ಮತ್ತು ಅವಮಾನಗಳನ್ನು ನಾನು ಅನುಭವಿಸಿ ಅಂತಹ ಸ್ಥಿತಿಯಿಂದ ನನ್ನನ್ನು ಮತ್ತು ಅವರನ್ನು ಪಾರು ಮಾಡಲು ಸಾಧ್ಯ ಎಂದು ಹೇಳುತ್ತಿದ್ದರು. ಅಂದರೆ ಗಾಂಧೀ ಅವರು ಮರುಜನ್ಮ ತಾಳಿ ಅಸ್ಪೃಶ್ಯನಾಗಿ ಹುಟ್ಟಿ, ಅವರ ಕಷ್ಟ, ಅವಮಾನಗಳನ್ನು ಕಂಡುಂಡು ಅಸ್ಪೃಶ್ಯರ ವಿಮೋಚನೆ ಮಾಡುವವರೆಗೂ ನಾವು ಕಾಯಬೇಕಾಗಿದೆ.[೩೫] ಇಂಥ ಅಂಶಗಳನ್ನು ಗಮನಿಸಿದಾಗ ಗಾಂಧೀ ಅವರ ಅಸ್ಪೃಶ್ಯತಾ ನಿವಾರಣೆ ದಲಿತೋಭಿವೃದ್ಧಿ ಕಾರ್ಯಗಳು ರಾಜಕೀಯದಿಂದ ಕೂಡಿದ್ದವು ಎಂಬ ಪ್ರಶ್ನೆ ಎದುರಾಗುತ್ತದೆ.

೨.೫.೨. ಮೈಸೂರು ಸಂಸ್ಥಾನಕ್ಕೆ ಗಾಂಧೀ ಅವರ ಪ್ರವೇಶ ಮತ್ತು ಅಸ್ಪೃಶ್ಯತಾ ನಿವಾರಣಾ ಕಾರ್ಯಗಳು

ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣೆ ಹೋರಾಟದಲ್ಲಿ ಅಂಬೇಡ್ಕರ್ ಪ್ರಭಾವಕ್ಕಿಂತಲೂ ಗಾಂಧೀಜಿ ಅವರ ಪ್ರಭಾವ ಹೆಚ್ಚಾಗಿಯೇ ಪರಿಣಾಮ ಬೀರಿರುವುದು ಕಂಡು ಬರುತ್ತದೆ. ಗಾಂಧೀ ಒಟ್ಟಾರೆ ಸುಮಾರು ೧೬ ಬಾರಿ ಕರ್ನಾಟಕಕ್ಕೆ ಭೇಟಿ ಕೊಟ್ಟಿದ್ದಾಗಿ ದಾಖಲಾಗಿದೆ. ಮೈಸೂರು ಸಂಸ್ಥಾನದ ಭಾಗವಾಗಿದ್ದಾಗ ಇಲ್ಲಿಯ ಆಡಳಿತ ಅವರನ್ನು ರಾಜ್ಯದ ಅತಿಥಿಯಾಗಿ ಸತ್ಕರಿಸಿ ಬ್ರಿಟಿಶ್‌ರ ಕೆಂಗಣ್ಣಿಗೂ ಗುರಿಯಾಗಿದೆ. ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ದಿವಾನ ಮಿರ್ಜಾ ಇಸ್ಮಾಯಿಲ್ ಅವರಿಗೆ ಗಾಂಧೀಜಿಯನ್ನು ಕಂಡರೆ ಅಚ್ಚುಮೆಚ್ಚು. ಮೈಸೂರು ಸಂಸ್ಥಾನಕ್ಕೆ ಅವರ ಇನ್ನೊಂದು ಪ್ರಮುಖ ಭೇಟಿ ೧೯೩೪ರ

ಸಂದರ್ಭದಲ್ಲಿ ಅದು ವಿಶೇಷವಾಗಿ ಹರಿಜನ ಪ್ರವಾಸದ ಭಾಗವಾಗಿ ಆದದ್ದು.[೩೬] ದಲಿತರ ಉದ್ಧಾರಕ್ಕಾಗಿ ನಾನಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡ ಗಾಂಧೀಜಿಯವರು ಸಂಸ್ಥಾನದಾದ್ಯಂತ ಪ್ರವಾಸ ಕೈಗೊಂಡರು. ಅಸ್ಪೃಶ್ಯತೆ ನಿಜವಾಗಿ ಬೇರು ಸಹಿತ ನಾಶವಾದರೆ, ಹಿಂದೂ ಧರ್ಮದ ಭಯಂಕರವಾದ ಕಳಂಕವೊಂದು ಅಳಿಸಿ ಹೋಗುತ್ತದೆ. ಅಷ್ಟೇ ಅಲ್ಲದೆ ಅದರ ಪರಿಣಾಮ ವಿಶ್ವ ವ್ಯಾಪಕವಾಗುತ್ತದೆ. ಅಸ್ಪೃಶ್ಯತೆಯ ವಿರುದ್ಧ ನನ್ನ ಹೋರಾಟ ಮಾನವ ಕುಲದ ಮಲೀನತೆಯ ವಿರುದ್ಧದ ಹೋರಾಟ ಎಂದು ಸಾರಿದರು.[೩೭] ಅಸ್ಪೃಶ್ಯತಾ ನಿವಾರಣೆಯ ಆಂದೋಲನದ ಸಲುವಾಗಿ ಸಂಸ್ಥಾನದ ವಿವಿಧ ವರ್ಗದ ಜನತೆ ಸೂಕ್ಷ್ಮವಾಗಿಯೇ ಈ ಸಮಸ್ಯೆಗೆ ಸ್ಪಂದಿಸಿತು. ಸಂಸ್ಥಾನ ಎಲ್ಲಾ ಬಗೆಯಲ್ಲಿ ಮಾದರಿಯೆನಿಸಿಕೊಂಡಿದೆ ಎಂಬ ಕಲ್ಪನೆ ಗಾಂಧೀಜಿಯವರಿಗೆ ಸ್ವಲ್ಪ ಸಮಾಧಾನ ತಂದಿತು. ಈ ಪ್ರವಾಸದ ಸಮಯದಲ್ಲಿ ಏರ್ಪಡಿಸುತ್ತಿದ್ದ ಸಭೆಗಳಲ್ಲಿ ಭಾಗವಹಿಸುತ್ತಿದ್ದ ಮಹಿಳೆಯರು ತಮ್ಮ ಮೈಮೇಲಿದ್ದ ಒಡವೆಗಳನ್ನು ಕಳಚಿ ಗಾಂಧೀಜಿಯವರ ದರಿದ್ರ ನಾರಾಯಣ ನಿಧಿಗೆ ಅರ್ಪಿಸುತ್ತಿದ್ದರು. ಗಾಂಧೀಜಿಯವರು ೧೯೩೪ ಜನವರಿ ೪ರಂದು ಹರಿಜನ ಪ್ರವಾಸ ಕೈಗೊಂಡು ತುಮಕೂರಿಗೆ ಭೇಟಿ ನೀಡಿದರು. ಅಂದು ತುಮಕೂರಿನ ಸರ್ಕಾರಿ ಪ್ರೌಢ ಶಾಲೆಯ ಮೈದಾನದಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ, ಈ ಅಸ್ಪೃಶ್ಯತಾ ನಿವಾರಣೆಯ ಚಳುವಳಿಯಲ್ಲಿ ತುಮಕೂರು ಜಿಲ್ಲೆಯ ಪ್ರತಿಯೊಬ್ಬ ನಾಗರಿಕನು ಭಾಗವಹಿಸಬೇಕೆಂದು ಪ್ರಾರ್ಥಿಸಿಕೊಂಡರು. ಈ ಸಂದರ್ಭದಲ್ಲಿ ತುಮಕೂರಿನ ಬೇರೆ ಬೇರೆ ಸಮಾಜದವರು ಭಿನ್ನವತ್ತಳೆಗಳನ್ನು, ಓದಿ ಸಾರ್ವಜನಿಕರು ದಲಿತರ ನಿಧಿಗಾಗಿ ಒಂದು ಸಾವಿರ ರೂಪಾಯಿಗಳನ್ನು ಅರ್ಪಿಸಿದರು. ಇದರಿಂದ ಗಾಂಧೀಜಿಯವರು ಸಾರ್ವಜನಿಕರನ್ನು ಭಾಷಣದಲ್ಲಿ ಅಭಿನಂದಿಸಿದರು.[೩೮] ಈ ಸಂದರ್ಭದಲ್ಲಿ ತುಮಕೂರಿನ ಕೆ. ನಾರಾಯಣಶೆಟ್ಟರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಅಭಿನಂದನಾ ಪತ್ರವನ್ನು ಅರ್ಪಿಸಿ, ದಲಿತೋದ್ಧಾರಕ್ಕಾಗಿ ತಮ್ಮ ಕೈಯಿಂದ ಸಾಧ್ಯವಾದಷ್ಟು ಕಿರುಕಾಣಿಕೆಯನ್ನು ಸಲ್ಲಿಸಿದರು. ಈ ಸಮಾರಂಭದ ಸಮಯದಲ್ಲಿ ತುಮಕೂರು ತಾಲ್ಲೂಕಿನ ಹಲವಾರು ಗ್ರಾಮಗಳ ಮುಖಂಡರುಗಳು ತಾವಾಗಿಯೇ ಮುಂದೆ ಬಂದು ಸ್ವಯಂ ಸೇವಕರಾಗಿ ದಲಿತೋದ್ಧಾರ ಕಾರ್ಯದಲ್ಲಿ ಭಾಗವಹಿಸಲು ಇಚ್ಛಿಸಿದರು.[೩೯]

ಗಾಂಧೀಜಿಯವರು ದಲಿತೋದ್ಧಾರದ ಪ್ರವಾಸ ಕೈಗೊಂಡು ತುಮಕೂರಿಗೆ ಭೇಟಿ ನೀಡಿದ ನಂತರ ಜಿಲ್ಲೆಯ ಕೆಲವು ಸಂಘ ಸಂಸ್ಥೆಗಳು ದಲಿತೋದ್ಧಾರಕ್ಕೆ ಹೆಚ್ಚಿನ ಬೆಂಬಲ ತೋರಿದವು. ಮಧುಗಿರಿಯಲ್ಲಿ ನಂಜಯ್ಯಶೆಟ್ಟರ ನಾಯಕತ್ವದಲ್ಲಿ ವಣಿಕವೃಂದ ಸಂಘವು ಗಾಂಧೀವಾದಿಗಳಿಗೆ ಅಸ್ಪೃಶ್ಯತಾ ನಿವಾರಣೆಗೆ ಸಹಕರಿಸಲು ತಮ್ಮ ಬೆಂಬಲ ನೀಡುತ್ತಿತ್ತು. ಈ ಸಂಘಕ್ಕೆ ಎ.ವಿ. ವೆಂಕಟಸುಬ್ಬಯ್ಯ ಶ್ಯಾಮಶಾಸ್ತ್ರಿ, ಕೆ. ಸುಬ್ಬರಾಯರು ಮಾರ್ಗದರ್ಶಕರಾಗಿದ್ದರು.[೪೦] ಇದೇ ಸಮಯದಲ್ಲಿ ತುಮಕೂರು ನಗರ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಾಗಿದ್ದ ಆರ್.ಎಸ್. ಆರಾಧ್ಯರು ಅಸ್ಪೃಶ್ಯತಾ ನಿವಾರಣೆಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಇದರ ಅಂಗವಾಗಿ ದಲಿತರಿಗೆ ದೇವಾಲಯ ಪ್ರವೇಶ ಚಳವಳಿಯನ್ನು ಆರಂಭಿಸಿದರು.

ಜಿಲ್ಲೆಯಲ್ಲಿರುವ ಸಹಸ್ರಾರು ದಲಿತರು ಅಸಂಖ್ಯಾತ ಸವರ್ಣೀಯರೊಡನೆ ಕೂಡಿ ಬಾಳಬೇಕು ಎಂದು ಜನತೆಯಲ್ಲಿ ಮನವಿ ಮಾಡಿಕೊಂಡರು. ಪತ್ರಿಕೆ ಕರಪತ್ರಗಳ ಮೂಲಕ ಅಸ್ಪೃಶ್ಯತಾ ನಿವಾರಣೆಗಾಗಿ ಸಾರ್ವಜನಿಕರನ್ನು ನಿವೇದಿಸಿಕೊಂಡರು. ಇದು ಅಲ್ಲದೇ ಆರ್.ಎನ್. ಆರಾಧ್ಯರು ತುಮಕೂರು ನಗರ ಕಾಂಗ್ರೆಸ್ ಸಭೆಯನ್ನು ಕರೆದು ತುಮಕೂರಿನ ದಲಿತ ಕಾಲೋನಿಯಲ್ಲಿ ಪುಸ್ತಕ ಭಂಡಾರವನ್ನು ಆರಂಭಿಸಿದರು. ಇವರು ಅಸ್ಪೃಶ್ಯರಲ್ಲಿ ಅಕ್ಷರ ಜ್ಞಾನ, ವ್ಯವಹಾರದ ಜ್ಞಾನವನ್ನು ಬೆಳೆಸಲು ಪ್ರಯತ್ನಿಸಿದರು.[೪೧]

ಗಾಂಧೀ ಅವರು ನಂದಿಗಿರಿಧಾಮದಲ್ಲಿ ತಂಗಿದ್ದ ಸಂದರ್ಭದಲ್ಲಿ ಶ್ರೀಯೋಗನಂದೀಶ್ವರ ದೇವಾಲಯಕ್ಕೆ ಗಾಂಧೀಯವರನ್ನು ದೇವಾಲಯದ ಧರ್ಮದರ್ಶಿಗಳು ಆಹ್ವಾನಿಸಿದರು. ಗಾಂಧೀಯವರು ದಲಿತರಿಗೆ ದೇವಾಲಯಕ್ಕೆ ಪ್ರವೇಶವಿದ್ದರೆ ಮಾತ್ರ ಬರುವುದಾಗಿ ತಿಳಿಸಿದರು. ಧರ್ಮದರ್ಶಿಗಳು ದಲಿತರ ಪ್ರವೇಶಕ್ಕೆ ಒಪ್ಪಲಿಲ್ಲ. ಗಾಂಧೀಯವರು ಹೋಗಲಿಲ್ಲ. ಈ ದೇವಾಲಯದ ಹೊರಭಾಗದಲ್ಲಿ ಸುಮಾರು ೧೮೫೦ರಲ್ಲಿ ಶಿರಸ್ತೆದಾರರಾಗಿದ್ದ ನರಸಿಂಹ ಅಯ್ಯಂಗಾರ್ ಅವರು ನಿರ್ಮಿಸಿದ್ದು, ಆಂಜನೇಯ ದೇವಾಲಯಕ್ಕೆ ನಾರಾಯಣ ಅಯ್ಯರ್ ಅವರು ದಲಿತರಿಗೆ ಪ್ರವೇಶ ಕಲ್ಪಿಸಿ ವಿಶೇಷ ಪೂಜೆಯನ್ನು ಏರ್ಪಡಿಸಿ ಗಾಂಧೀಯವರನ್ನು ಆಹ್ವಾನಿಸಿದರು. ಅವರು ಸಂತೋಷದಿಂದ ಆಗಮಿಸಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.[೪೨] ಅಲಸೂರಿನ ಮರ್ಫಿಟೌನಿನಲ್ಲಿ ಮುತ್ತು ಎಂಬ ಓರ್ವ ದಲಿತ ಕಾರ್ಯಕರ್ತನು ಅಲ್ಲಿನ ಹರಿಜನ ಸಂಘದ ಕಾರ್ಯದ ಬಗ್ಗೆ ಅಸಮಾಧಾನಗೊಂಡು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದುದನ್ನು ತಿಳಿದು ಗಾಂಧೀಜಿಯವರು ಆತನನ್ನು ಭೇಟಿ ಮಾಡಿ ಸಮಸ್ಯೆಯನ್ನು ಬಗೆಹರಿಸುವುದಾಗಿ ತಿಳಿಸಿದರು. ಆನಂತರ ಕೆಂಗೇರಿ ಗ್ರಾಮದಲ್ಲಿ ಹೆದ್ದಾರಿ ಪಕ್ಕದಲ್ಲಿಯೇ ಗುರುಕುಲಾಶ್ರಮದಿಂದ ನಿರ್ಮಿಸಲ್ಪಟ್ಟ ಗ್ರಾಮಸೇವಾ ಕೇಂದ್ರ ಉದ್ಘಾಟನೆಯಾಯಿತು. ಪಕ್ಕದಲ್ಲಿಯೇ ಬೆಂಗಳೂರು ಜಿಲ್ಲಾ ಬೋರ್ಡಿನವರು ದಲಿತರಿಗಾಗಿ ಕಟ್ಟಿಸಿದ್ದ ಬಾವಿಯಿಂದ ಗಾಂಧೀಯವರು ಬೆಳ್ಳಿ ಚಂಬಿನಲ್ಲಿ ನೀರನ್ನು ಸೇದಿ ಅಲ್ಲಿ ನೆರೆದಿದ್ದ ದಲಿತರೆಲ್ಲರಿಗೂ ಆ ನೀರನ್ನು ತೀರ್ಥದಂತೆ ನೀಡಿ ಬಾವಿಯ ಪ್ರಾರಂಭೋತ್ಸವವನ್ನು ಮಾಡಿದರು. ನಂತರ ಅಲ್ಲಿನ ಜನಸಮೂಹವನ್ನು ಉದ್ದೇಶಿಸಿ ದಲಿತರು ಹೇಗಿರಬೇಕು, ಸವರ್ಣೀಯರ ಕರ್ತವ್ಯವೇನು? ಎಂಬುದನ್ನು ತಿಳಿಸಿದರು.[೪೩]

ಮೈಸೂರು ಸಂಸ್ಥಾನದ ಆದಿಜಾಂಬ ಅಭಿವೃದ್ಧಿ ಸಂಘದ ವಿದ್ಯಾರ್ಥಿ ಮಂದಿರದ ಶಂಕು ಸ್ಥಾಪನೆಯನ್ನು ಮಾಗಡಿ ರಸ್ತೆಯಲ್ಲಿ ೭-೧-೧೯೩೪ರ ಭಾನುವಾರ ಬೆಳಿಗ್ಗೆ ಗಾಂಧೀಜಿಯವರು ಮಾಡಿದರು. ಈ ಹೆಸರು ಜಾತಿ ಸೂಚಕವಾಗುತ್ತಿದೆ ಎಂದು ನಂತರದಲ್ಲಿ 'ಬಾಪೂಜಿ ವಿದ್ಯಾರ್ಥಿ ನಿಲಯ' ಎಂದು ಹೆಸರಿಟ್ಟರು.[೪೪] ಶಂಕರಪುರದ ಮಹಿಳಾ ಸೇವಾ ಸಮಾಜದವರು ಗಾಂಧೀಜಿಯವರನ್ನು ಆಹ್ವಾನಿಸಿದರು. ಸಭೆಯಲ್ಲಿ ದಲಿತರ ಏಳ್ಗೆಗಾಗಿ ಎಲ್ಲರೂ ದುಡಿಯಬೇಕೆಂದು ಕರೆಯಿತ್ತರು. ದಲಿತರ ಕಲ್ಯಾಣಕ್ಕೆಂದು ಶೇಖರಿಸಿದ್ದ ೫೬೭ ರೂಪಾಯಿಗಳನ್ನು ಮಹಿಳಾ ಸೇವಾ ಸಮಾಜದವರು ಅರ್ಪಿಸಿದರು. ಕೆಲವು ಮಹಿಳೆಯರು ಆಭರಣಗಳನ್ನು ಕಾಣಿಕೆಯಾಗಿ

ನೀಡಿದರು.[೪೫] ಮಹಾತ್ಮರು ಮೈಸೂರು ಸಂಸ್ಥಾನದಲ್ಲಿ ತಗಡೂರಿಗೆ ಭೇಟಿ ನೀಡಿ ಅಲ್ಲಿ ತಗಡೂರು ರಾಮಚಂದ್ರರಾಯರ ನೇತೃತ್ವದಲ್ಲಿ ನಡೆಯುತ್ತಿದ್ದ ಖಾದಿ ಮತ್ತು ದಲಿತೋದ್ಧಾರ ಕೆಲಸ ಕಾರ್ಯಗಳನ್ನು ವೀಕ್ಷಿಸಿದರು. ನಂತರ ತಗಡೂರು ರಾಮಚಂದ್ರರಾಯರು ದಲಿತೋದ್ಧಾರಕ್ಕಾಗಿ ಸಂಗ್ರಹಿಸಿದ್ದ ಹಣವನ್ನು ಗಾಂಧೀಜಿಯವರಿಗೆ ನೀಡಿದರು. ಮಹಾತ್ಮರು ತಗಡೂರಿಗೆ ಭೇಟಿಕೊಟ್ಟ ನೆನಪಿಗಾಗಿ ಒಂದು ಪಂಚಮ ವಿದ್ಯಾರ್ಥಿ ನಿಲಯವನ್ನು ೧೯೩೪ ಮೇ ೨೦ರಂದು ಪ್ರಾರಂಭಿಸಿದರು.[೪೬] ದಲಿತೋದ್ಧಾರಕ್ಕಾಗಿ ಗಾಂಧೀಯವರು ೧೯೩೬ರಲ್ಲಿ ಎರಡನೆಯ ಬಾರಿ ಮೈಸೂರು ಸಂಸ್ಥಾನಕ್ಕೆ ಭೇಟಿ ನೀಡಿದ್ದರು. ಕೆಂಗೇರಿ ಬಳಿಯಲ್ಲಿನ ಗುರುಕುಲಾಶ್ರಮದಲ್ಲಿ ೧೯೩೬ ಜೂನ್ ೧೦ ರಿಂದ ಮೂರು ದಿವಸ ನಡೆದ ದಕ್ಷಿಣ ಭಾರತ ದಲಿತ ಕೆಲಸಗಾರರ ಸಮ್ಮೇಳನ ನಡೆಯಿತು. ಈ ಮೂರು ದಿವಸಗಳು ಗಾಂಧೀಜಿ ಮತ್ತು ಅವರ ಸಂಗಡಿಗರು ಭಾಗವಹಿಸಿದ್ದರು. ಮೈಸೂರು ಸಂಸ್ಥಾನದ ಹರಿಜನ ಸೇವಕ ಸಂಘದ ಅಧ್ಯಕ್ಷರಾದ ಪಾಮಡಿ ಸುಬ್ಬರಾಮಶೆಟ್ಟರು ಸಂಸ್ಥಾನದಲ್ಲಿ ದಲಿತೋದ್ಧಾರಕ್ಕಾಗಿ ಸೇವೆ ಮಾಡಲಾಗುತ್ತಿರುವವರನ್ನೆಲ್ಲ ವಿವರಿಸಿದರು. ಆ ನಂತರ ಮಹಾತ್ಮರು ಒಂದು ಗಂಟೆಯವರೆಗೆ ಮಾತನಾಡಿ ಅಸ್ಪೃಶ್ಯತೆಯ ವಿರುದ್ಧ ಹಾಗೂ ಸವರ್ಣೀಯರು ತಮ್ಮ ಮನಪರಿವರ್ತನೆಯನ್ನು ಮಾಡಿಕೊಂಡು ಹಿಂದೂ ಧರ್ಮದ ಕಳಂಕವನ್ನು ತೊಡೆದು ಹಾಕುವಂತೆ ಕರೆ ನೀಡಿದರು. ಗಾಂಧೀ ಅವರು ಮೈಸೂರು ಸಂಸ್ಥಾನದಲ್ಲಿ ದಲಿತೋಭಿವೃದ್ಧಿಯ ಪ್ರವಾಸ ಕಾಲದಲ್ಲಿ ಗಣನೀಯ ಸೇವೆಯನ್ನು ಸಲ್ಲಿಸಿದರು. ಬೆಂಗಳೂರಿನಲ್ಲಿ ದೀನ ಸೇವಾ ಸಂಘ, ಶ್ರೀ ರಾಮಪುರದಲ್ಲಿ ಸೇವಾಶ್ರಮ, ದಲಿತರ ಕಾಲೋನಿ, ದಲಿತ ವಿದ್ಯಾರ್ಥಿನಿಲಯ ಹಾಗೂ ಮೈಸೂರು ಸಂಸ್ಥಾನದ ಅನೇಕ ಕಡೆ ಹರಿಜನ ಸೇವಾ ಸಂಘಗಳ ಸ್ಥಾಪನೆ ಮುಖಾಂತರ ಅಸ್ಪೃಶ್ಯತಾ ನಿವಾರಣೆಗೆ ದುಡಿದರು. ಗಾಂಧೀ ಅವರಿಗೆ ಮೈಸೂರು ಸಂಸ್ಥಾನದಲ್ಲಿ ಮಹಾರಾಜರೂ, ದಿವಾನರೂ, ದಲಿತೋದ್ಧಾರದ ಕಾರ್ಯವನ್ನು ಎಡಬಿಡದೆ ಮಾಡುತ್ತಿರುವುದಕ್ಕಾಗಿ ಅವರನ್ನು ಕೊಂಡಾಡಿದರು. ಮೈಸೂರು ಸಂಸ್ಥಾನ ಬಹಳ ಆರೋಗ್ಯಕರ, ಆದಷ್ಟು ಬೇಗ ಮತ್ತೆ ಬರುತ್ತೇನೆ' ಎಂದು ಹೇಳಿ ತಮ್ಮ ಎರಡನೆಯ ದಲಿತೋದ್ಧಾರದ ಪ್ರವಾಸವನ್ನು ಮುಗಿಸಿದರು.[೪೭]

೨.೫.೩. ಮೈಸೂರು ಸಂಸ್ಥಾನಕ್ಕೆ ಗಾಂಧೀಜಿ ಪ್ರವೇಶದ ನಂತರವಾದ ಬದಲಾವಣೆ

ಗಾಂಧೀಜಿಯವರ ವ್ಯಕ್ತಿತ್ವ ಹಾಗೂ ಅವರ ತತ್ವಗಳಿಂದ ಪ್ರಭಾವಿತರಾಗಿ ಅವರ ಕರೆಗೆ ಓಗೊಟ್ಟು ಮೈಸೂರು ಸಂಸ್ಥಾನದ ಬ್ರಾಹ್ಮಣ, ಬ್ರಾಹ್ಮಣೇತರರು ವಿದ್ಯಾರ್ಥಿ ವಿದ್ಯಾರ್ಥಿನಿಯರ ನ್ನೊಳಗೊಂಡಂತೆ ಸಾವಿರಾರು ಯುವ ಜನರು ಸಹ ಸ್ವಾತಂತ್ರ್ಯ ಹೋರಾಟ ಹಾಗೂ ಇತರ ರಾಜಕೀಯ ಚಳವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಅದರಲ್ಲೂ ವಿಶೇಷವಾಗಿ ರಚನಾತ್ಮಕ ಕಾರ್ಯಕ್ರಮಗಳಲ್ಲಿನ ಅಸ್ಪೃಶ್ಯತಾ ನಿವಾರಣೆ ಅಂಶವನ್ನು ಕೈಗೆತ್ತಿಕೊಳ್ಳುವಂತೆ ಗಾಂಧೀಜಿಯವರು ಮೈಸೂರು ಸಂಸ್ಥಾನದ ನಾಯಕರುಗಳಿಗೆ ತಿಳಿಸಿದರು. ಆರಂಭದಲ್ಲಿ ಅವರ ಸಂದೇಶವನ್ನು ಸ್ವೀಕರಿಸಿ ಅನುಷ್ಠಾನಗೊಳಿಸಲು ಹಿಂಜರಿದರಾದರೂ, ಕ್ರಮೇಣ ಆ ಕಾರ್ಯಗಳು ಮುಖಂಡರುಗಳಿಗೆ

ತುಂಬಾ ಹಿತಕರವಾಗಿ ಕಂಡವು[೪೮] ಹಾಗೂ ಎಲ್ಲಾ ಸಮಾಜ ಸೇವಕರು ಗಾಂಧೀಜಿ ಅವರ ಆದರ್ಶ ಹಾಗೂ ತತ್ವಗಳಿಗೆ ಗೌರವ ನೀಡಿ, ಗಾಂಧೀವಾದ ಮತ್ತು ತತ್ವದ ಪ್ರಚಾರಕ್ಕೆ ಮುಂದಾದರು. ಈ ಗಾಂಧೀ ತತ್ವದಲ್ಲಿ ಅಸ್ಪೃಶ್ಯತೆ ನಿವಾರಣೆ ಹಾಗೂ ಅಸ್ಪೃಶ್ಯರ ಅಭಿವೃದ್ಧಿಯೂ ಒಂದಾಗಿತ್ತು.

ಈ ಹಂತದಲ್ಲಿ ಬಹುಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಗಾಂಧೀಜಿ ಅವರ ಸಮಕಾಲೀನರಾಗಿಯೇ ಅಸ್ಪೃಶ್ಯತಾ ನಿವಾರಣೆ ಕುರಿತು ಅಂಬೇಡ್ಕರ್ ಹೇಳಿದ ತತ್ವಸಿದ್ಧಾಂತಗಳು ಸವರ್ಣೀಯರು ಹಾಗೂ ಬ್ರಾಹ್ಮಣರಿಗೆ ಅಪಥ್ಯವಾಗಿತ್ತು. ಆದರೆ ಗಾಂಧೀಜಿ ಅದೇ ಅಸ್ಪೃಶ್ಯತಾ ನಿವಾರಣೆಗಾಗಿ ಕರೆಕೊಟ್ಟ ತಕ್ಷಣ ಸವರ್ಣೀಯರು ಹಾಗೂ ಬ್ರಾಹ್ಮಣರು ಗಾಂಧೀ ಅವರ ಮುಖಂಡತ್ವದಲ್ಲಿ ಅಸ್ಪೃಶ್ಯತೆಯ ವಿರುದ್ಧ ಮಾತನಾಡಲು ಹಾಗೂ ಕ್ರಮಕೈಗೊಳ್ಳಲು ಮುಂದಾದರು.

ಇಲ್ಲಿ ಮೈಸೂರು ಸಂಸ್ಥಾನದ ಬ್ರಾಹ್ಮಣ ಹಾಗೂ ಸವರ್ಣೀಯರು ಅಸ್ಪೃಶ್ಯತೆಯ ವಿರುದ್ಧ ಹೋರಾಡಲು ಕ್ರಮಕೈಗೊಳ್ಳಬೇಕೆಂದು ಇಚ್ಛೆ ಇದ್ದರೂ ಅಸ್ಪೃಶ್ಯರಾಗಿದ್ದ ಅಂಬೇಡ್ಕರ್ ಅವರ ನಾಯಕತ್ವದಲ್ಲಿ ಮುಂದುವರಿಯಲು ಬಯಸಿದವರಾಗಿರಲಿಲ್ಲ.[೪೯] ಇದಕ್ಕೆ ಪರ್ಯಾಯವಾಗಿ ಅವರು ಗುರುತಿಸಿಕೊಂಡದ್ದು ಸ್ಪೃಶ್ಯ ಸಮಾಜದವರಾಗಿದ್ದ ಗಾಂಧೀಜಿ ಅವರನ್ನು ಎಂದು ಹೇಳಬಹುದು. ಗಾಂಧೀಯವರಿಂದ ಪ್ರಭಾವಗೊಂಡ ಮೈಸೂರು ಸಂಸ್ಥಾನದ ಅರಸರು ಹಾಗೂ ಸವರ್ಣೀಯರು ಅಸ್ಪೃಶ್ಯತಾ ನಿವಾರಣೆ ಹಾಗೂ ದಲಿತೋದ್ಧಾರಕ್ಕಾಗಿ ಹಲವು ಕ್ರಾಂತಿಕಾರಕ ಹಾಗೂ ಪ್ರಗತಿಪರ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದರ ಮೂಲಕ ಸಾಮಾಜಿಕ ನ್ಯಾಯ ಮತ್ತು ಸಾಮಾಜಿಕ ಸಮಾನತೆಯ ತತ್ವಗಳನ್ನು ಎತ್ತಿಹಿಡಿದು, ಗಾಂಧೀಜಿಯವರ ಕನಸನ್ನು ನನಸು ಮಾಡಲು ಪ್ರಯತ್ನಿಸಿದರಲ್ಲದೇ ಇತರೆ ಭಾರತೀಯ ಸಂಸ್ಥಾನಗಳಿಗೆ 'ಮಾದರಿ ಅರಸ'ರಾಗಿದ್ದರು.[೫೦]

ಮಹಾತ್ಮಗಾಂಧೀಜಿಯವರು ೧೯೩೨ರಲ್ಲಿ 'ಹರಿಜನ ಸೇವಾ ಸಂಘ' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಹರಿಜನ ಸೇವಾ ಸಂಘದ ಶಾಖೆಯು ಕರ್ನಾಟಕದಲ್ಲಿ ಸ್ಥಾಪಿತವಾಗಿ ಸರ್ದಾರ್ ವೀರನಗೌಡ ಪಾಟೀಲ್ ಮೊದಲ ಅಧ್ಯಕ್ಷರಾಗಿದ್ದರು. ಗಾಂಧೀಜಿಯವರು ೧೯೩೪ ಮತ್ತು ೧೯೩೬ರಲ್ಲಿ ಎರಡು ಬಾರಿ ಕರ್ನಾಟಕಕ್ಕೆ ಬಂದು ಅಸ್ಪೃಶ್ಯತಾ ವಿರೋಧಿ ಆಂದೋಲನಕ್ಕೆ ಚಾಲನೆ ನೀಡಿದರು. ಹಿಂದೂ ಧರ್ಮದಲ್ಲೇ ಜನಿಸಿದರೂ, ಹಿಂದೂ ದೇವಾಲಯಗಳಿಗೆ ಅಸ್ಪೃಶ್ಯರಿಗೆ ಪ್ರವೇಶವಿಲ್ಲದಿರುವುದನ್ನು ಗಾಂಧೀಜಿಯವರು ಟೀಕಿಸಿದರು. ಗಾಂಧೀಜಿಯವರಿಂದ ಪ್ರಭಾವಿತರಾದ ಅವರ ಅನುಯಾಯಿಗಳು ಅಸ್ಪೃಶ್ಯರ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದರು.

ಈ ನಿಟ್ಟಿನಲ್ಲಿ ಮೈಸೂರು ಸಂಸ್ಥಾನದಲ್ಲಿ ಕಾರ್ಯೋನ್ಮುಖರಾದ ತಗಡೂರು ರಾಮಚಂದ್ರ ರಾಯರು ಅಸ್ಪೃಶ್ಯರಿಗೆ ದೇವಾಲಯ ಪ್ರವೇಶ ಕಲ್ಪಿಸಲು ಚಳವಳಿಯನ್ನು ಹಮ್ಮಿಕೊಂಡರು.[೫೧] ಹೀಗೆ ಗಾಂಧೀಜಿ ಅವರ ಪ್ರವೇಶದ ನಂತರ ಮೈಸೂರು ಸಂಸ್ಥಾನದಲ್ಲಿ ಸಾಮಾಜಿಕವಾಗಿ ಬದಲಾವಣೆಯನ್ನು ಕಾಣಲು ಸಾಧ್ಯವಾಯಿತು. ಗಾಂಧೀಯವರ ನಾಯಕತ್ವವನ್ನು ಒಪ್ಪಿ ಅವರ

ರಚನಾತ್ಮಕ ಕಾರ್ಯಗಳಲ್ಲೊಂದಾದ ದಲಿತಾಭಿವೃದ್ಧಿಯನ್ನು ಸಂಸ್ಥಾನದ ಗಾಂಧೀವಾದಿಗಳು ಅವರ ಅನುಯಾಯಿಗಳು ನಿಷ್ಠೆಯಿಂದ ಮಾಡಲು ಮುಂದಾದರು. ಸಮಕಾಲೀನ ಸಂದರ್ಭದಲ್ಲಿ ಗಾಂಧಿ ಅವರಷ್ಟೇ ಅಸ್ಪೃಶ್ಯತೆ ಎಂಬ ಕಳಂಕವನ್ನು ಹೋಗಲಾಡಿಸಲು ಅಂಬೇಡ್ಕರ್ ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದರೂ, ಬ್ರಾಹ್ಮಣ ಮತ್ತು ಸವರ್ಣೀಯರಿಗೆ ಅಪ್ರಸ್ತುತವಾದರು. ಅಕ್ಷರ ಜ್ಞಾನವಿಲ್ಲದ ದಲಿತ ಸಮುದಾಯಗಳಿಗೆ, ಶಿಕ್ಷಣ ಪಡೆದ ದಲಿತ ನಾಯಕರುಗಳು ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ತಿಳಿಸಿಕೊಡುವವರೆಗೂ, ಮೈಸೂರು ಸಂಸ್ಥಾನದಲ್ಲಿ ಅನಕ್ಷರಸ್ಥ ದಲಿತರಿಗೆ ತಿಳಿದಿರಲಿಲ್ಲ. ಒಟ್ಟಾರೆ ಗಾಂಧೀ ಅವರ ಆಲೋಚನೆಗಳು ಏನೇ ಇದ್ದರೂ ಮೈಸೂರು ಸಂಸ್ಥಾನದಲ್ಲಿ ಅವರ ಪ್ರಭಾವದಿಂದ ಸ್ವಲ್ಪಮಟ್ಟಿಗೆ ದಲಿತ ವರ್ಗಗಳು ಏಳಿಗೆಯನ್ನು ಹೊಂದಲು ಸಹಕಾರಿಯಾಯಿತು.

೨.೬. ಮೈಸೂರು ಸಂಸ್ಥಾನದಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪ್ರಭಾವ

೨೦ನೆಯ ಶತಮಾನದಲ್ಲಿ ಮೈಸೂರು ಸಂಸ್ಥಾನದ ದಲಿತ ವರ್ಗದವರಲ್ಲಿ ಅಸ್ಪೃಶ್ಯತೆ, ಶೋಷಣೆ, ದಬ್ಬಾಳಿಕೆ ವಿರುದ್ಧ ಹೋರಾಡಲು ಹಾಗೂ ಶಿಕ್ಷಣ ಪಡೆದು ಮುಖ್ಯವಾಹಿನಿಗೆ ಸೇರಬೇಕೆಂಬ ಮನೋಭಾವನೆಗೆ ಪ್ರೇರಣೆ ನೀಡಿದವರು ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರು. ಅಂಬೇಡ್ಕರ್ ಅನುಯಾಯಿಗಳು ಅಂಬೇಡ್ಕರ್ ಅವರನ್ನು ಹಾಗೂ ಅವರ ಸಾಹಿತ್ಯವನ್ನು ಕನ್ನಡದ ನೆಲಕ್ಕೆ ಕರೆತಂದರು. ಅಂಬೇಡ್ಕರ್ ಅವರ ಚಿಂತನೆ ಬರವಣಿಗೆಗಳನ್ನು ಮರಾಠಿ ಹಾಗೂ ಇಂಗ್ಲಿಶ್‌ನಿಂದ ಕನ್ನಡಕ್ಕೆ ಅನುವಾದಿಸಿದರು. ಇದರಿಂದಾಗಿ ಶಿಕ್ಷಣವಂತ ದಲಿತ ನಾಯಕರು ಅಂಬೇಡ್ಕರ್ ಅವರ ಚಿಂತನೆಗಳನ್ನು ಮೈಗೂಡಿಸಿಕೊಳ್ಳಲು ಸಹಕಾರಿಯಾಯಿತು.[೫೨] ಮೈಸೂರು ಸಂಸ್ಥಾನದ ಪ್ರಗತಿಪರ ದಲಿತ ನಾಯಕರುಗಳು ಅಂಬೇಡ್ಕರ್ ಅವರನ್ನು ಮೈಸೂರು ಸಂಸ್ಥಾನಕ್ಕೆ ಕರೆತಂದು ಅನೇಕ ಸ್ಥಳಗಳಲ್ಲಿ ಉಪನ್ಯಾಸ ನೀಡಿಸಿದರು. ಅವರಿಂದ ಭಾರತದ ಜಡ್ಡುಗಟ್ಟಿದ ಸಾಮಾಜಿಕ ಸಂದರ್ಭದ ನುಡಿಗಳನ್ನು ಕೇಳಿ ಪುಳಕಿತರಾಗಿ ಸ್ವಾಭಿಮಾನದ ಬದುಕಿಗಾಗಿ ಜಡ್ಡುಗಟ್ಟಿದ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಹೋರಾಡಲು ಮುಂದಾದರು. ಮೈಸೂರು ಸಂಸ್ಥಾನದಲ್ಲಿ ಶಿಕ್ಷಣ ಪಡೆದ ದಲಿತ ನಾಯಕರು ಮಹಾರಾಷ್ಟ್ರ ಮಾದರಿಯ ಕೆರೆ ನೀರಿಗಾಗಿ, ದೇವಾಲಯ ಪ್ರವೇಶಕ್ಕಾಗಿ, ಅಸ್ಪೃಶ್ಯತೆ ವಿರುದ್ಧ ಹೋರಾಟ ನಡೆಸಲು ಮುಂದಾದರು. ಆದರೆ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ನಾಲ್ವಡಿ ಮಹಾರಾಜರು ಅಧಿಕೃತವಾಗಿ ಮೈಸೂರು ಸಂಸ್ಥಾನಕ್ಕೆ ಅಂಬೇಡ್ಕರ್ ಅವರನ್ನು ಆಹ್ವಾನಿಸಲೇ ಇಲ್ಲ. ಕೇವಲ ದಲಿತ ನಾಯಕರುಗಳು ಮಾತ್ರ ತಮ್ಮ ನಾಯಕನೆಂದು ಸ್ವೀಕರಿಸಿ ಮೈಸೂರು ಸಂಸ್ಥಾನಕ್ಕೆ ಅಂಬೇಡ್ಕರ್ ಅವರನ್ನು ಆಹ್ವಾನಿಸಿದ್ದರು.[೫೩] ಮೈಸೂರು ಸಂಸ್ಥಾನದ ಬ್ರಾಹ್ಮಣ ಮತ್ತು ಸವರ್ಣೀಯರು ಅಸ್ಪೃಶ್ಯತೆಯ ವಿರುದ್ಧ ಹೋರಾಡಲು ಇಚ್ಛೆ ಇದ್ದರೂ, ಅಸ್ಪೃಶ್ಯರಾಗಿದ್ದ ಅಂಬೇಡ್ಕರ್ ಅವರ ನಾಯಕತ್ವದಲ್ಲಿ ಮುಂದುವರಿಯಲು ಬಯಸಿದವರಾಗಿರಲಿಲ್ಲ. ಇದಕ್ಕೆ ಪರ್ಯಾಯವಾಗಿ ಅವರು ಗುರುತಿಸಿಕೊಂಡಿದ್ದು ಗಾಂಧೀ ಅವರನ್ನು. ಅಂಬೇಡ್ಕರ್ ಯಾರ ಪರ ಬರೆದರೋ ಅವರಿಗೆ ಅಕ್ಷರ ಗೊತ್ತಿರಲಿಲ್ಲ. ಯಾರ ವಿರುದ್ಧ ಬರೆದರೋ ಅವರು ಓದುವ ಗೋಜಿಗೆ ಹೋಗಲಿಲ್ಲ. ಶಿಕ್ಷಣ ಪಡೆದ ಕೆಲವು ದಲಿತ ನಾಯಕರು ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಮೈಸೂರು

ಸಂಸ್ಥಾನದಲ್ಲಿ ಪ್ರಚಾರ ಮಾಡಲು ಮುಂದಾದರು.[೩೪] ಹೀಗೆ ಅಂಬೇಡ್ಕರ್ ಅವರ ಪ್ರಭಾವ ಮೈಸೂರು ಸಂಸ್ಥಾನದ ದಲಿತರಲ್ಲಿ ಪ್ರಮುಖ ಪರಿಣಾಮ ಬೀರಿ ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕವಾಗಿ ಪ್ರೇರಣೆ ನೀಡಲು ಕಾರಣವಾಯಿತು.

೨.೭. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರಭಾವ

ಕರ್ನಾಟಕದ ಚರಿತ್ರೆಯಲ್ಲಿಯೇ ಆದರ್ಶ ಪ್ರಿಯರು, ರಾಜರ್ಷಿ ಎಂಬ ಬಿರುದನ್ನು ಪಡೆದುಕೊಂಡು, ತಮ್ಮ ಸಾಮ್ರಾಜ್ಯ ಭರತಖಂಡದಲ್ಲಿಯೇ ಮಾದರಿ ಸಂಸ್ಥಾನ ಎಂಬ ಪ್ರಶಂಸೆಗೆ ಒಳಪಡಿಸಿದ್ದು, ಮೈಸೂರಿನ ಪ್ರಜೆಗಳು ಹಾಗೂ ಅಲ್ಲಿನ ಸಮಾಜದ ಕೀರ್ತಿಯ ಕಂಪು ಎಲ್ಲೆಡೆ ಹರಡುವಂತೆ ಮಾಡಿದ್ದು ನಾಲ್ವಡಿ ಕೃಷ್ಣರಾಜ ಒಡೆಯರ್. ಅವರ ರಾಜ್ಯಾಡಳಿತ ಕಾಲಕ್ಕೆ ಸಂಬಂಧಪಟ್ಟಿರುವ ಅಧಿಕೃತ ದಾಖಲೆಗಳು, ಪ್ರತ್ಯಕ್ಷದರ್ಶಿ ವರದಿಗಳು ಹಾಗೂ ವಿವರಣೆಗಳು, ಅಂದು ಕೈಗೊಳ್ಳಲಾಗಿದ್ದಂತಹ ಜನೋಪಯೋಗಿ ಕಾರ್ಯಗಳಿಗೆ ಬಲವಾದ ಸಾಕ್ಷಿಗಳಾಗಿ ಉಳಿದು ಬಂದಿವೆ. ಇಲ್ಲಿನ ಶಿಕ್ಷಣ ಸಂಸ್ಥೆಗಳು, ಪಂಚಮರಿಗಾಗಿಯೇ ಪ್ರತ್ಯೇಕ ಶಿಕ್ಷಣ ಸಂಸ್ಥೆಗಳು ಹಾಗೂ ಸ್ಥಳೀಯ ಆಡಳಿತ ವ್ಯವಸ್ಥೆ ಇತ್ಯಾದಿಗಳನ್ನು ಸ್ತ್ರೀಯರ ಹಾಗೂ ಇತರ ಹಿಂದುಳಿದ ವರ್ಗಗಳ ಒಳಿತಿಗಾಗಿ ಕೈಗೊಳ್ಳಲಾಗಿದ್ದ ಕ್ರಮಗಳು ಚರಿತ್ರೆಯಲ್ಲಿ ಅಮೋಘವಾದವುಗಳಾಗಿವೆ.[೩೫] ನಾಲ್ವಡಿ ಅವರ ಆಳ್ವಿಕೆಯಲ್ಲಿ ಮೈಸೂರು ಸಂಸ್ಥಾನವು ದಲಿತ ವರ್ಗದವರಲ್ಲಿ ಇಡೀ ಭರತಖಂಡದಲ್ಲಿಯೇ ಐವತ್ತು ವರ್ಷಗಳಷ್ಟು ಶೈಕ್ಷಣಿಕವಾಗಿ, ರಾಜಕೀಯವಾಗಿ ಹಿರಿತನವನ್ನು ತಂದುಕೊಟ್ಟಿತ್ತು. ಈ ಭಾಗದ ದಲಿತ ವರ್ಗದ ಜನರ ಏಳಿಗೆ ಸಾಧ್ಯವಾಗಿದೆ ಎಂದರೆ ಅದು ನಾಲ್ವಡಿ ಅವರ ಸಮರ್ಥ ಆಡಳಿತದಿಂದ ಮಾತ್ರ ಸಾಧ್ಯವಾಗಿದೆ. ನಾಲ್ವಡಿ ಅವರು ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣೆ ಕೈಗೊಳ್ಳಲು ಪ್ರಮುಖವಾಗಿ ಎರಡು ಕಾರಣಗಳನ್ನು ಗುರುತಿಸಬಹುದು. ಮೊದಲನೆಯದು ರಾಜಕೀಯ ಕಾರಣ. ಎರಡನೆಯದು ಸಾಮಾಜಿಕ ಕಾರಣದಿಂದಾಗಿ ಪಂಚಮರ ಏಳಿಗೆಗೆ ಶ್ರಮಿಸಿದರು.[೩೬]

ಶಿಕ್ಷಣ ಪಡೆದ ಕೆಲವು ದಲಿತ ನಾಯಕರು ತಮ್ಮ ಸಮುದಾಯವನ್ನು ಅಭಿವೃದ್ಧಿಪಡಿಸಲು ಮತ್ತು ಅರಿವನ್ನು ಮೂಡಿಸಲು ಪ್ರಯತ್ನಿಸಿದರು. ಇದರ ಪರಿಣಾಮವಾಗಿ ಮೈಸೂರು ಸಂಸ್ಥಾನದಲ್ಲಿ ಪ್ರಬಲ ಸಮುದಾಯಗಳು ಎಚ್ಚೆತ್ತು ತಾವು ದಲಿತ ವರ್ಗದವರನ್ನು ಕಡೆಗಣಿಸಿದರೆ, ಎಲ್ಲ ದಲಿತ ಸಮುದಾಯವು ಕ್ರೈಸ್ತರಾಗುವರು ಮತ್ತು ಭಾರತೀಯ ಸಮಾಜದ ಅಡಿಪಾಯ ಒಡೆದು ಹೋಗುವುದು ಎಂಬ ಭಯದಿಂದ ಗಾಂಧೀಜಿಯವರ ನಾಯಕತ್ವದಲ್ಲಿ ಅಸ್ಪೃಶ್ಯರ ಪರವಾಗಿ ಕೆಲಸ ಮಾಡಲು ಮುಂದಾದರು. ರಾಷ್ಟ್ರೀಯ ಚಳವಳಿಯು ಗಾಂಧೀಜಿ ಅವರ ನೇತೃತ್ವದಲ್ಲಿ ದಲಿತೋದ್ಧಾರಕ್ಕಾಗಿ ದುಡಿಯಬೇಕೆಂಬ ವಿಶೇಷ ಜವಾಬ್ದಾರಿಯನ್ನು ವಹಿಸಿಕೊಂಡಿತು. ಅಸ್ಪೃಶ್ಯರ ಪರವಾಗಿ ಕ್ರೈಸ್ತ ಮಿಷನರಿಗಳು ಆರಂಭಿಸಿದ ಸೇವೆಯನ್ನು ಈ ಪ್ರಬಲ ಸಮುದಾಯಗಳು ಪ್ರಾರಂಭಿಸಿದವು. ಈ ಸಮಯದಲ್ಲಿ ದಲಿತರು ಅಂಬೇಡ್ಕರ್ ಅವರ ನಾಯಕತ್ವದಲ್ಲಿ ತಮ್ಮನ್ನು

ಸಂಘಟಿಸಿಕೊಂಡು ಸಮಾಜದಲ್ಲಿ ತಮ್ಮ ವಿರುದ್ಧ ನಡೆಯುವ ಶೋಷಣೆಯ ವಿರುದ್ಧ ಹೋರಾಡಲು ಸಹಕಾರಿಯಾಯಿತು.[೫೭]

ಪಾಶ್ಚಾತ್ಯ ಶಿಕ್ಷಣವನ್ನು ಕೆಳವರ್ಗದವರಿಗೆ ನೀಡಿದ್ದರಿಂದ ಭಾರತದಲ್ಲಿ ಕ್ರೈಸ್ತ ಮಿಷನರಿಗಳು ವ್ಯಾಪಕವಾಗಿ ಪ್ರಚಾರ ಪಡೆದವು ಹಾಗೂ ಇದೇ ವೇಳೆಗೆ ಭಾರತದಲ್ಲಿ ಕಾಣಿಸಿಕೊಂಡ ಅಖಿಲ ಭಾರತ ಸುಧಾರಣವಾದಿ ಸಂಸ್ಥೆಗಳಾದ ಬ್ರಹ್ಮ ಸಮಾಜ, ಥಿಯೋಸೊಫಿಕಲ್ ಸೊಸೈಟಿ ಮತ್ತು ರಾಮಕೃಷ್ಣ ಮಿಶನ್‌ಗಳು ಅಸ್ಪೃಶ್ಯತೆಯ ವಿರುದ್ಧ ಹೋರಾಡುವುದರ ಜೊತೆಗೆ ಸಮಾಜದಲ್ಲಿನ ಅನಿಷ್ಟ ಪಿಡುಗುಗಳನ್ನು ವಿರೋಧಿಸಿದವು.[೫೮]

೨.೭.೧. ರಾಜಕೀಯ ಕಾರಣ

ನಾಲ್ವಡಿ ಕೃಷ್ಣರಾಜ ಒಡೆಯರ್ ಮೈಸೂರು ಸಂಸ್ಥಾನದ ೨೪ನೆಯ ಮಹಾರಾಜರು. ಮೈಸೂರು ಆಡಳಿತವನ್ನು ೧೯೦೨ರಲ್ಲಿ ವಹಿಸಿಕೊಂಡು ೧೯೪೦ರವರೆಗೆ ನಾಲ್ಕು ದಶಕಗಳ ಕಾಲ ಆಳ್ವಿಕೆ ನಡೆಸಿದರು. ಇವರು ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ನೆರೆಹೊರೆ ರಾಜ್ಯಗಳು ಬ್ರಿಟಿಶರ ಮತ್ತು ನಿಜಾಮನ ನೇರ ಆಳ್ವಿಕೆಗೆ ಒಳಪಟ್ಟಿತ್ತು. ಆ ಸಮಯದಲ್ಲಿ ಬ್ರಿಟಿಶ್ ಸರ್ಕಾರವು ಮದ್ರಾಸ್ ಪ್ರಾಂತ್ಯದಲ್ಲಿ ಅಸ್ಪೃಶ್ಯರಿಗೆ ಶಿಕ್ಷಣ, ಉದ್ಯೋಗ ಮುಂತಾದ ಮೂಲಭೂತ ಸೌಲಭ್ಯಗಳನ್ನು ನೀಡುತ್ತಿತ್ತು. ಮೈಸೂರಿನ ಮಹಾರಾಜರು ವಸಾಹತುಶಾಹಿಗಳ ಕೂಸಗಿದ್ದರು. ಬ್ರಿಟಿಶ್‌ರ ಅಧೀನದಲ್ಲಿ ಆಡಳಿತವನ್ನು ನಡೆಸುತ್ತಿದ್ದರು. ಮದ್ರಾಸ್ ಪ್ರಾಂತ್ಯದಲ್ಲಿ ಕೈಗೊಂಡ ಸಮಾಜ ಸುಧಾರಣ ಕಾರ್ಯಗಳನ್ನು ಮೈಸೂರು ಅರಸರು ಮಾಡದಿದ್ದರೆ ೧೮೦೦ರಲ್ಲಿ ಮೈಸೂರು ಆಡಳಿತವನ್ನು ಕೊಟ್ಟು ೧೮೩೦ರಲ್ಲಿ ವಾಪಸ್ಸು ಪಡಿದ್ದುದರ ರೀತಿಯಲ್ಲಿಯೇ ನಾಲ್ವಡಿ ಅವರ ಆಡಳಿತವನ್ನು ಸಹ ವಾಪಸ್ಸು ಪಡೆಯುವುದು ಕಷ್ಟದ ಕಾರ್ಯವಾಗಿರಲಿಲ್ಲ. ಇಲ್ಲಿ ನಾಲ್ವಡಿಯವರು ರಾಜಕೀಯವಾಗಿ ಉಳಿಯಬೇಕಾದರೆ ಬ್ರಿಟಿಶ್‌ರ ನೀತಿಯನ್ನು ಅನುಸರಿಸಬೇಕಾಗಿತ್ತು. ಅವರ ನೀತಿಯನ್ನು ಅನುಸರಿಸಬೇಕಾದರೆ ಮದ್ರಾಸ್ ಪ್ರಾಂತ್ಯದಲ್ಲಿ ಕ್ರೈಸ್ತ ಮಿಷನರಿಗಳು ನೀಡಿದ ಶಿಕ್ಷಣದ ರೀತಿಯೇ ನಾಲ್ವಡಿಯವರು ತಮ್ಮ ಮೈಸೂರು ಸಂಸ್ಥಾನದಲ್ಲಿ ದಲಿತರ ಶಿಕ್ಷಣಕ್ಕೆ ಪ್ರೋತ್ಸಾಹಿಸಿದರು. ಅಸ್ಪೃಶ್ಯತಾ ನಿವಾರಣೆಯ ಮತ್ತು ದಲಿತರಿಗೆ ಶಿಕ್ಷಣ ನೀಡುವ ಮನಸ್ಸು ನಾಲ್ವಡಿಯವರಿಗೆ ಇತ್ತು. ಆದರೂ ರಾಜಕೀಯವನ್ನು ಬಿಟ್ಟು ಮಾಡಲು ಸಾಧ್ಯವಾಗಿರಲಿಲ್ಲ. ರಾಜಕೀಯವಾಗಿ ಮುಂದುವರೆಯುವ ಆಸೆ ನಾಲ್ವಡಿಯವರಲ್ಲಿತ್ತು. ಅಧಿಕಾರದಲ್ಲಿ ಮುಂದುವರೆಯುವ ಆಸೆ ಇದ್ದಾಗ ದಲಿತರಿಗೆ ಶಿಕ್ಷಣವನ್ನು, ಹಿಂದುಳಿದ ವರ್ಗಗಳ ಅಭಿವೃದ್ಧಿಯ ಕಡೆ ಕೊಂಡೊಯ್ಯಲು ಸಹಕಾರಿಯಾಯಿತು. ಅಂದಿನ ಸಂದರ್ಭದಲ್ಲಿ ಪ್ರಬಲವಾಗಿದ್ದ ಬ್ರಾಹ್ಮಣ ಸಮುದಾಯ ಮತ್ತು ಬ್ರಾಹ್ಮಣೇತರರ ಪ್ರಭಾವವನ್ನು ತಗ್ಗಿಸಲು ಶೋಷಿತ ಸಮುದಾಯವನ್ನು ತಮ್ಮ ಪರ ಸೆಳೆಯಲು ದಲಿತ ಮತ್ತು ಶೋಷಿತ ಸಮುದಾಯಗಳನ್ನು ಕಡೆಗಣಿಸದೆ ಎಲ್ಲ ರೀತಿಯ ಸೌಲಭ್ಯಗಳನ್ನು ಸಂಸ್ಥಾನದಲ್ಲಿ ನೀಡಿದರು.

ಹೀಗೆ ನಾಲ್ವಡಿಯವರಿಗೆ ದಲಿತಪರ ಕಾಳಜಿಯಿದ್ದರೂ ರಾಜಕೀಯವಾಗಿ ಅಧಿಕಾರವನ್ನು ಉಳಿಸಿಕೊಳ್ಳಲು ಹಾಗೂ ಬ್ರಿಟಿಶ್ ಸರ್ಕಾರದ ಜೊತೆ ಉತ್ತಮ ಸಂಬಂಧ ಹೊಂದಲು ಅಸ್ಪೃಶ್ಯತಾ ನಿವಾರಣೆ ಮತ್ತು ಪಂಚಮರ ಅಭಿವೃದ್ಧಿ ಹೊಂದಲು ಆಡಳಿತಾತ್ಮಕವಾಗಿ ಎಲ್ಲ ರೀತಿಯ ಸಹಕಾರ ನೀಡಿದರು.

೨.೭.೨. ಸಾಮಾಜಿಕ ಕಾರಣ

ನಾಲ್ವಡಿ ಕೃಷ್ಣರಾಜ ಒಡೆಯರು ದೇಶದ ಅನೇಕ ರಾಜ್ಯಗಳಿಗೆ ಪ್ರವಾಸ ಕೈಗೊಂಡು ಆಡಳಿತ ನಡೆಸುವ ನಿಪುಣತೆ ಮತ್ತು ಅಲ್ಲಿನ ಸಂಸ್ಕೃತಿಯನ್ನು ಬಲ್ಲವರಾಗಿದ್ದರು. ಇವರು ಪಾಶ್ಚಾತ್ಯ ಶಿಕ್ಷಣವನ್ನು ಪಡೆದಿದ್ದರ ಫಲವಾಗಿ ವಿದೇಶಗಳಲ್ಲಿರುವಂತೆ ಜಾತಿರಹಿತ ಸಮಾಜವನ್ನು ನಿರ್ಮಿಸುವ ಕನಸನ್ನು ಕಂಡಿದ್ದರು. ಇದರಿಂದಾಗಿಯೇ ದಲಿತಪರ ಕಾರ್ಯಗಳನ್ನು ಮಾಡಲು ಮುಂದಾದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ವತಃ ಕ್ರಿಯಾಶೀಲ ವ್ಯಕ್ತಿಯಾಗಿದ್ದು, ಸಾಮಾಜಿಕ ಕಳಕಳಿ ಹೊಂದಿದ್ದರು. ಸಾಮಾಜಿಕ ಸಮಸ್ಯೆಗಳ ಬಗ್ಗೆ ಅವರ ಮಾನವೀಯ ಧೋರಣೆ ಶೋಷಿತ ಮತ್ತು ನಿಮ್ನ ವರ್ಗದವರ ಹೃದಯದಲ್ಲಿ ಶಾಶ್ವತವಾದ ಸ್ಥಾನವನ್ನು ಕಲ್ಪಿಸಿತು. ಅವರ ದೂರದರ್ಶಿತ್ವದಿಂದಾಗಿಯೇ ಆಧುನಿಕ ಶಿಕ್ಷಣ ಈ ಸಮುದಾಯಗಳಲ್ಲಿ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳನ್ನು ತರುವಲ್ಲಿ ಪರಿಣಾಮಕಾರಿ ಅಸ್ತ್ರವಾಗಿ ಬಳಕೆಯಾಯಿತು. ನಾಲ್ವಡಿ ಕೃಷ್ಣರಾಜರ ಆಳ್ವಿಕೆಯಲ್ಲಿ ದಲಿತರ ಅಭಿವೃದ್ಧಿಗಾಗಿ ಸರ್ಕಾರದ ವತಿಯಿಂದ ಜಾರಿಗೆ ತಂದ ಸಾಮಾಜಿಕ ಕಾನೂನುಗಳನ್ನು ಅವಲೋಕಿಸಿದಾಗ ಅವರಲ್ಲಿ ಆಧುನಿಕತೆಗೆ ಹೊಂದಿಕೊಳ್ಳುವ ಪ್ರಗತಿಪರ ಮನೋಭಾವನೆ, ಜನರ ಸ್ಥಿತಿಗತಿಯನ್ನರಿತು ಪರಿಹರಿಸಲು ನಡೆಸಿದ ಪ್ರಯತ್ನಗಳು ಕಂಡು ಬರುತ್ತವೆ. ಅನೇಕ ಕಾನೂನುಗಳ ಮೂಲಕ ಅಸ್ಪೃಶ್ಯತೆಯ ನಿವಾರಣೆಗೆ ಹಾಗೂ ಅಸ್ಪೃಶ್ಯರ ಏಳ್ಗೆಗೆ ಸರ್ಕಾರ ಮುಂದಾದರೂ ಸಹ ಭೂಮಿಯಲ್ಲಿ ಜೀವಜಂತುಗಳು ಸೃಷ್ಟಿಯಾದಾಗಿನಿಂದಲೂ ಹುಟ್ಟಿಕೊಂಡು ಬಂದಿದ್ದಂಥ ಈ ಅಸ್ಪೃಶ್ಯತೆ ಎಂಬುದು ಕೇವಲ ನಾಲ್ವಡಿ ಅವರ ಕೆಲವೇ ಕೆಲವು ಕಾನೂನುಗಳಿಂದ ಮುಕ್ತವಾಗಿರಲಿಲ್ಲ. ಆದರೆ ಪ್ರಪ್ರಥಮ ಬಾರಿಗೆ ಈ ವರ್ಗದವರಿಗೆ ಶಿಕ್ಷಣ ಹಾಗೂ ಅವರ ರಾಜಕೀಯ-ಆರ್ಥಿಕ-ಸಾಮಾಜಿಕ ಪರಿಸ್ಥಿತಿಗಳನ್ನು ಉತ್ತಮ ಪಡಿಸುವುದಕ್ಕೆ ಹಾಗೂ ಅವರು ಸಮಾಜದ ಮುಖ್ಯವಾಹಿನಿಗೆ ಬರುವುದಕ್ಕೆ ನಾಲ್ವಡಿ ಅವರು ನೀಡಿದ ಪ್ರೋತ್ಸಾಹ ಮಾಡಿದ ಸಹಾಯ, ಕೈಗೊಂಡ ಕಾರ್ಯಕ್ರಮ, ತೋರಿದಂತಹ ಕಳಕಳಿ ಗಮನಾರ್ಹವಾದವು. ಪಂಚಮರಿಗಾಗಿ ಸರ್ಕಾರಿ ಶಾಲೆಗಳನ್ನು ಅಸ್ಪೃಶ್ಯರ ಶಿಕ್ಷಣಕ್ಕಾಗಿಯೇ ಆರಂಭಿಸಲಾಯಿತು. ಸಾರ್ವಜನಿಕ ಶಾಲೆಗಳಿಗೂ ಯಾವುದೇ ಜಾತಿಯ ಧರ್ಮದ ಭೇದಭಾವವಿಲ್ಲದೆ, ಪ್ರವೇಶ ಪಡೆಯುವ ಅವಕಾಶವನ್ನು ಕಲ್ಪಿಸಲಾಯಿತು. ನಾಲ್ವಡಿ ಕೃಷ್ಣರಾಜರ ಈ ದೃಢ ನಿರ್ಧಾರದಿಂದಾಗಿ ೧೯೧೪-೧೫ರ ಅವಧಿಯಲ್ಲಿ ದಲಿತರು ಶಿಕ್ಷಣ ಪಡೆಯುವ ಮಟ್ಟಕ್ಕೆ ಬೆಳೆದು ಬಂದರು. ಇಷ್ಟೆಲ್ಲ ಸಾಧನೆ ಮಾಡಿದ ಮಹಾರಾಜರ ಕಾಲದಲ್ಲಿ ಮೈಸೂರು ಮಾದರಿ ಸಂಸ್ಥಾನ ಎಂಬ ಹೆಸರನ್ನು ಪಡೆಯಿತು.

ಹೀಗೆ ನಾಲ್ವಡಿಯವರು ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತೆ ತೊಡೆದು ಹಾಕಲು ಮತ್ತು ದಲಿತರ ಅಭಿವೃದ್ಧಿಗೋಸ್ಕರ ಸಾಮಾಜಿಕವಾಗಿ ಎಷ್ಟೇ ಒತ್ತಡಗಳಿದ್ದರೂ ಮುಂದುವರಿಸುವ ಮೂಲಕ ಇಂದಿಗೂ ಶೋಷಿತ ಸಮುದಾಯಗಳ ಹೃದಯದಲ್ಲಿ ಸ್ಥಾನ ಪಡೆದಿದ್ದಾರೆ.

೨.೮. ಮೊದಲ ತಲೆಮಾರಿನ ದಲಿತ ಸಾಹಿತಿಗಳ ಪ್ರಭಾವ

ಇಪ್ಪತ್ತೊಂದನೆಯ ಶತಮಾನದ ದಲಿತ ಸಾಹಿತ್ಯದ ನೆಲೆಯಲ್ಲಿ ನಿಂತು, ಇಡೀ ಕನ್ನಡ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದಾಗ ಎರಡು ಸತ್ಯ ಸಂಗತಿಗಳು ಗೋಚರಿಸುತ್ತವೆ. ೧. ಕನ್ನಡ ಸಾಹಿತ್ಯಕ್ಕೆ ಸಾವಿರಾರು ವರ್ಷಗಳ ಚರಿತ್ರೆಯಿದೆ. ೨. ಅದೇ ಸಂದರ್ಭದಲ್ಲಿ ಕರ್ನಾಟಕದಲ್ಲಿ ಸಮಕಾಲೀನ ದಲಿತ ಸಾಹಿತ್ಯ, ಅದೇ ಸಾವಿರಾರು ವರ್ಷಗಳ ಹಿಂದಿನ ದಲಿತ ಲೇಖಕ ಮಾದಾರ ಚೆನ್ನಯ್ಯನಿಂದ ಆರಂಭವನ್ನು ಕಂಡುಕೊಳ್ಳುತ್ತದೆ. ಹೀಗೆ ಎಂಟು ನೂರು ವರ್ಷಗಳ ಹಿಂದೆ ಕರ್ನಾಟಕದಲ್ಲಿ ಆರಂಭವಾದ ಶೈವ ಧರ್ಮದ ಜನಪರ ಆಂದೋಲನದ ಮುಂಚೂಣಿಯಲ್ಲಿ ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯರಂತಹ ಮುಂತಾದ ದಲಿತ ವರ್ಗದ ಹಲವಾರು ಸಂತ ಲೇಖಕರು ಇದ್ದಾರೆ. ಸಾವಿರ ವರ್ಷಗಳ ಹಿಂದೆ ಸಂತ ಲೇಖಕನೇ ಆದ ಮಾದರ ಚೆನ್ನಯ್ಯ ಹಾಕಿಕೊಟ್ಟ ಧಾರ್ಮಿಕ, ಸಾಮಾಜಿಕ ಹಾದಿಯಲ್ಲೇ ಮುನ್ನಡೆದಿದ್ದಾರೆ. ಆದರೆ ಹತ್ತರಿಂದ ಹನ್ನೆರಡನೆಯ ಶತಮಾನದ ಈ ಕಾಲಾಂತರದಲ್ಲಿ ಕರ್ನಾಟಕದಲ್ಲಿ ಕಾಣಿಸಿಕೊಂಡ ಈ ದಲಿತ ಲೇಖಕರ ನಂತರ ರಾಷ್ಟ್ರದ ಸ್ವಾತಂತ್ರ್ಯ ಯುಗದವರೆಗೂ ಕನ್ನಡದಲ್ಲಿ ದಲಿತವರ್ಗದ ಒಬ್ಬನೇ ಒಬ್ಬ ಲೇಖಕನನ್ನು ಕಾಣಲು ಸಾಧ್ಯವಾಗಲಿಲ್ಲ. ಅಂದರೆ ವೈದಿಕ ಧಾರ್ಮಿಕ ಪರಂಪರೆ ಹಾಗೂ ಜಮೀನ್ದಾರಿ ವ್ಯವಸ್ಥೆ ಕಳೆದ ಎಂಟುನೂರು ವರ್ಷಗಳ ಅವಧಿಯಲ್ಲಿ ದಲಿತರ ಮೇಲಿನ ತನ್ನ ಕಪಿಮುಷ್ಠಿಯನ್ನು ಮತ್ತಷ್ಟು ಬಿಗಿಗೊಳಿಸಿಕೊಂಡೇ ಮುನ್ನಡೆದಿದೆ. ಅಲ್ಲದೇ ಅದೇ ಎಂಟುನೂರು ವರ್ಷಗಳ ಅಂತರದಲ್ಲಿ ಕನ್ನಡದಲ್ಲಿ ಸೃಷ್ಟಿಯಾದ ಜೈನ ಸಾಹಿತ್ಯ, ಶೈವ ಸಾಹಿತ್ಯ ಮತ್ತು ವೈದಿಕ ಸಾಹಿತ್ಯಗಳು ದಲಿತ ವರ್ಗಕ್ಕೆ ದಾಸ್ಯವನ್ನು ಬೋಧಿಸಿ ಅವರಿಗೆ ಅಜ್ಞಾನ ಮತ್ತು ಮೂಢನಂಬಿಕೆಗಳ ದಾರಿ ತೋರಿಸಿದವೇ ಹೊರತು, ಅವರ ಬಂಧ ವಿಮೋಚನೆ ಮಾಡಲು ಈ ಸಾಹಿತ್ಯದಿಂದ ಎಂದೂ ಸಾಧ್ಯವಾಗಲಿಲ್ಲ.[೫೯]

೨.೮.೧. ಮೈಸೂರು ಸಂಸ್ಥಾನದ ಮೊದಲ ದಲಿತ ಸಾಹಿತಿಗಳು

ಆಧುನಿಕ ಕನ್ನಡ ಸಾಹಿತ್ಯದ ಮೊದಲ ತಲೆಮಾರಿನ ದಲಿತ ಲೇಖಕರುಗಳಲ್ಲಿ ಕೆಲವರು ಹತ್ತೊಂಬತ್ತನೆಯ ಶತಮಾನದಲ್ಲಿ ಜನಿಸಿದ್ದಾರೆ. ಕೆಲವರು ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಜನಿಸಿದವರಾಗಿದ್ದಾರೆ. ಇವರಲ್ಲಿ ಕೆಲವರು ಮರಳಿನ ಮೇಲೆ ಅಕ್ಷರ ಕಲಿತವರಾಗಿದ್ದಾರೆ. ಒಟ್ಟಾರೆ ಕ್ರೂರ ಜಾತಿವ್ಯವಸ್ಥೆಯ ತಿರಸ್ಕಾರ ನಿರಂತರವಾದ ಅಪಮಾನಗಳ ನಡುವೆಯೂ ಕೂಡ ತಮ್ಮ ಸ್ವಯಂ ಪ್ರೇರಣೆಯಿಂದ ಅಕ್ಷರ ಕಲಿತು, ಜಾಗೃತರಾಗಿ ಮೌಢ್ಯದ ವಿರುದ್ಧ ಹೋರಾಡುತ್ತಲೇ ತಮ್ಮ ಸಮುದಾಯದ ಅರಿವಿಗೆ ಬರಹವನ್ನು ಮಾಧ್ಯಮವನ್ನಾಗಿಸಿಕೊಂಡು

ಸಾಹಿತ್ಯ ಕೃಷಿ ಮಾಡಿರುವುದು ಗಮನಾರ್ಹ ಸಂಗತಿಯೇ ಆಗಿದೆ. ವ್ಯವಸ್ಥಿತವಾದ ಪೂರ್ವಗ್ರಹ ತೀರ್ಮಾನದಿಂದಲೇ ದಲಿತರೆಂದರೆ ಅಸಹಾಯಕರು, ಅಕ್ಷರ ಕಲಿಯಲು ಸಾಧ್ಯವಾಗದವರು, ಸಾಮಾಜಿಕವಾಗಿ ಎಲ್ಲ ರೀತಿಯಿಂದಲೂ ಕೀಳು ಎಂಬಂತೆ ಇರುವವರು. ಅನುಕಂಪಕ್ಕೆ ಒಳಗಾಗಬೇಕಾದವರು ಎಂಬ ಮನೋಭಾವವನ್ನು ಬದಲು ಮಾಡಿಕೊಳ್ಳುವಂತೆ ಇಪ್ಪತ್ತನೆಯ ಶತಮಾನದ ಆದಿಯಲ್ಲಿಯೇ ಈ ನಮ್ಮ ಹಿರಿಯ ತಲೆಮಾರಿನ ಲೇಖಕರು ಸಂಕಷ್ಟಗಳ ನಡುವೆಯೇ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ತೆರೆದಿಟ್ಟಿದ್ದಾರೆ. ತಮ್ಮ ಸ್ಥಿತಿಗತಿಗಳಿಗನುಗುಣವಾಗಿಯೇ ಜಾಗೃತಿಯನ್ನು ಮೂಡಿಸಲು ಹೋರಾಟ ನಡೆಸಿದ್ದಾರೆ.[೬೦] ಇಂತಹ ದಲಿತ ಸಾಹಿತಿಗಳನ್ನು ಪರಿಚಯಿಸುವ ಮತ್ತು ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣೆಗೆ ಪ್ರೇರಣೆಯನ್ನು ನೀಡಿದ ಅಂಶಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಸೋಸಲೆ ಎಸ್. ಸಿದ್ದಪ್ಪ : ಕರ್ನಾಟಕ ರಾಜ್ಯದ ಮೊಟ್ಟಮೊದಲ ದಲಿತ ಲೇಖಕರೆಂದು ಹೆಗ್ಗಳಿಕೆಗೆ ಪಾತ್ರರಾಗಿರುವ ಎಸ್. ಸಿದ್ದಪ್ಪ ಅವರು, ಟಿ. ನರಸೀಪುರ ತಾಲ್ಲೂಕಿನ ಸೋಸಲೆಯ ಗ್ರಾಮದ ಆದಿ ಕರ್ನಾಟಕ ಜನಾಂಗದ ಜವರಯ್ಯನ ಸಿದ್ಧ ಮಲ್ಲಯ್ಯ ಹಾಗೂ ಮಾದಮ್ಮನವರ ಜೇಷ್ಠ ಪುತ್ರರಾಗಿ ೧೯-೮-೧೮೯೨ರಲ್ಲಿ ಜನಿಸಿದರು. ಸೋಸಲೆ ಎಸ್. ಸಿದ್ದಪ್ಪ ಅವರ ವಿದ್ಯಾಭ್ಯಾಸವು ಅವರ ಸ್ವಗ್ರಾಮವಾದ ಸೋಸಲೆಯಲ್ಲಿ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರು ಸ್ಥಾಪಿಸಿದ್ದ ಮೈಸೂರಿನ ಆದಿ ಕರ್ನಾಟಕ ವಸತಿಶಾಲೆ ನಜಬಾದ್‌ನಲ್ಲಿ ಓದಿ ೧೯೦೫ರಲ್ಲಿ ಕರ್ನಾಟಕ ಲೋಯಲ್ ಸೆಕೆಂಡರಿ ಪರೀಕ್ಷೆಯಲ್ಲಿ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾದವರು.[೬೧] ಸಿದ್ದಪ್ಪ ಅವರು ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದರೂ ಬಿಡುವಿನ ವೇಳೆಯಲ್ಲಿ ಜನಾಂಗದ ಕೇರಿಗಳಿಗೆ ಹೋಗಿ ಮಕ್ಕಳನ್ನು ಶಾಲೆಗೆ ಸೇರಿಸುವಂತೆ, ಶುಚಿತ್ವ ಹಾಗೂ ವಿದ್ಯೆಯ ಮಹತ್ವದ ಬಗ್ಗೆ ಜನರಿಗೆ ತಿಳಿಸಿಕೊಡುತ್ತಿದ್ದರು. ಜೊತೆಗೆ ಮೇಲ್ಜಾತಿಯವರ ದಬ್ಬಾಳಿಕೆಯ ವಿರುದ್ಧ ಜಾತಿ ವ್ಯವಸ್ಥೆ ವಿರುದ್ಧ ಸೆಟೆದು ನಿಲ್ಲುವಂತೆ ಮಾಡುತ್ತಿದ್ದರು. ಅಕ್ಷರವನ್ನು ಕಾಣದ ಅಂದಿನ ಸಮುದಾಯದಲ್ಲಿ ಹುಟ್ಟಿ ಸಾಹಿತ್ಯವೆಂಬ ವಿಶಿಷ್ಟವಾದ ಪ್ರವೃತ್ತಿಯಲ್ಲಿ ತೊಡಗಿಸಿಕೊಂಡು ಸಾಹಿತ್ಯದ ಕೃಷಿಯಲ್ಲಿ ಉತ್ತಮ ಸಾಧನೆ ಮಾಡಿರುವುದನ್ನು ಕಾಣಬಹುದು.[೬೨] ಸಿದ್ದಪ್ಪನವರು ತಮ್ಮ ಮೊದಲ ಕೃತಿಯಾದ 'ಜಾಂಗದೇವನ ಚರಿತ್ರೆ'ಯಿಂದ ಕೊನೆಯದಾದ ಬಡವನ ಭಾಗ್ಯ ಎಂಬ ನೀತಿ ಗ್ರಂಥದವರೆಗೂ ಒಟ್ಟು ೧೬ ಕೃತಿಗಳನ್ನು ರಚಿಸಿದ್ದಾರೆ. ಹೀಗೆ ಸೋಸಲೆ ಎಸ್. ಸಿದ್ದಪ್ಪನವರು ತಮ್ಮ ಸಾಹಿತ್ಯದ ಮುಖಾಂತರ ದಲಿತರಲ್ಲಿ ಜಾಗೃತಿಯನ್ನು ಉಂಟುಮಾಡಲು ಪ್ರಯತ್ನಿಸಿದ್ದರು.[೬೩]

ಡಿ. ಗೋವಿಂದದಾಸ್ : ಇವರು ನಮ್ಮ ಆಧುನಿಕ ಕನ್ನಡ ಸಾಹಿತ್ಯದ ಮೊದಲ ದಲಿತ ಕವಿ ಹಾಗೂ ನಾಟಕಕಾರರು. ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ದಮ್ಮನಿಂಗಳದಲ್ಲಿ ಕೆಂಪಮ್ಮ - ದಾಸಪ್ಪ ದಂಪತಿಗಳ ಮಗನಾಗಿ ೧೯೧೦ರಲ್ಲಿ ಜನಿಸಿದರು. ಚನ್ನರಾಯಪಟ್ಟಣ

ತಾಲ್ಲೂಕಿನ ಜಿನ್ನೇನಹಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು, ನಂತರ ಮಾಧ್ಯಮಿಕ ಶಿಕ್ಷಣಕ್ಕಾಗಿ, ನಾಲ್ವಡಿ ಕೃಷ್ಣರಾಜ ಒಡೆಯರು ತುಮಕೂರಿನ ನರಸಿಂಹರಾಜ ವಸತಿ ಶಾಲೆಯನ್ನು ಸೇರಿದರು. ಚಿಕ್ಕವಯಸ್ಸಿನಲ್ಲಿಯೇ ಹಲವು ಬಗೆಯ ಕಷ್ಟಗಳನ್ನು ಅನುಭವಿಸಿದ ಗೋವಿಂದದಾಸರು ಅಸ್ಪೃಶ್ಯತೆಯ ಕಹಿ ಅನುಭವಗಳನ್ನೆಲ್ಲ ಮೂಕವೇದನೆಯಿಂದ ಅನುಭವಿಸುತ್ತಾರೆ. ವಿದ್ಯಾರ್ಥಿ ದೆಸೆಯಿಂದಲೇ ಗಾಂಧೀಜಿಯವರ ಅಸ್ಪೃಶ್ಯತಾ ನಿವಾರಣೆ ಕೆಲಸಗಳು, ಸ್ವದೇಶಿ ಆಂದೋಲನ, ಸ್ವಾತಂತ್ರ್ಯ ಚಳವಳಿ ಮುಂತಾದ ವಿಚಾರಧಾರೆಗಳಿಂದ ತುಂಬ ಗಂಭೀರವಾಗಿ ಪ್ರಭಾವಿತರಾಗುವ ಗೋವಿಂದದಾಸ್ ಅವರು ಸಮಾಜ ಸುಧಾರಣೆ ಮತ್ತು ಬರಹದ ಗೀಳನ್ನು ಹಚ್ಚಿಕೊಳ್ಳುತ್ತಾರೆ.[೬೪] ಇವರ ಸಾಹಿತ್ಯ ಮತ್ತು ಸಮಾಜ ಸೇವೆಯನ್ನು ಗುರುತಿಸಿದ ಸರ್ಕಾರ ೧೯೪೨ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರನ್ನಾಗಿ ನೇಮಕ ಮಾಡಿತು. ಸೆಂಟ್ರಲ್ ಡಿಪ್ರೆಸ್ಡ್ ಕ್ಲಾಸ್ ಕಮಿಟಿಯ ಸದಸ್ಯರಾಗಿ ಕೂಡ ಸೇವೆ ಮಾಡಿದ್ದಾರೆ. ಆರ್. ಗೋಪಾಲಸ್ವಾಮಿ ಅಯ್ಯರ್ ಮತ್ತು ಅಂಬೇಡ್ಕರ್ ಅವರಂತಹ ವ್ಯಕ್ತಿತ್ವದ ಗುಣಗಳನ್ನು ತಮ್ಮಲ್ಲಿ ಅಳವಡಿಸಿಕೊಂಡ ಇವರು ಅಧಿಕಾರವನ್ನು ಎಂದೂ ಸ್ವಾರ್ಥಕ್ಕೆ ಬಳಸಿಕೊಳ್ಳದೇ, ತಮ್ಮ ಮೂಲ ಮನೋಧರ್ಮವಾದ ಸಮಾಜ ಸುಧಾರಣೆಯ ನೆಲೆಯಲ್ಲಿಯೇ ಅಸ್ಪೃಶ್ಯರ ಮತ್ತು ಸಾರ್ವಜನಿಕರ ಹಿತಕ್ಕಾಗಿಯೆ ಶ್ರಮಿಸಿದರು. ಹಾಗಾಗಿ ಇವರು ಸರಳ ಸ್ವಚ್ಛ ಹಾಗೂ ಪ್ರಾಮಾಣಿಕ ವ್ಯಕ್ತಿತ್ವಕ್ಕೆ ಹೆಸರಾಗಿದ್ದಾರೆ.[೬೫]

ಜಿ. ವೆಂಕಟಯ್ಯ: ಕನ್ನಡದ ಮೊದಲ ತಲೆಮಾರಿನ ದಲಿತ ಲೇಖಕರಾದ ಇವರು ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕು ಹೆಮ್ಮನಹಳ್ಳಿಯಲ್ಲಿ ೧೯೧೬ ಏಪ್ರಿಲ್ ೧೦ರಂದು ಗಿರಿಯಯ್ಯ ಮತ್ತು ಸಿದ್ದಮ್ಮ ದಂಪತಿಗಳ ಮಗನಾಗಿ ಜನಿಸಿದರು. ಬೆಂಗಳೂರಿನ ಕೋಟೆ ಹೈಸ್ಕೂಲಿನಲ್ಲಿ ಅಧ್ಯಯನ ಮಾಡಿ ಇಂಟರ್ ಮೀಡಿಯಟ್ ತರಗತಿಗೆ ಪ್ರವೇಶಿಸಿದರು. ಅಲ್ಲಿ ಕುವೆಂಪು, ಡಿ.ಎಲ್. ನರಸಿಂಹಾಚಾರ್, ತೀ.ನಂ. ಶ್ರೀಕಂಠಯ್ಯ ಗುರುಗಳಾಗಿದ್ದರು. ಇವರ ಪ್ರೇರಣೆಯಿಂದಲೇ ವೆಂಕಟಯ್ಯನವರು ಸಾಹಿತ್ಯಲೋಕವನ್ನು ಪ್ರವೇಶಿಸುವಂತಾಯಿತು. ವೆಂಕಟಯ್ಯನವರು ಬರೆದ ಪುಸ್ತಕಗಳು ಹತ್ತು. ಅವುಗಳಲ್ಲಿ ಒಂದು ಕತೆಗಳ ಸಂಗ್ರಹ, ಮಗಳ ಮಾಂಗಲ್ಯ ೧೯೫೭, ಮೂರು ಕಾದಂಬರಿಗಳು ನೊಂದ ಜೀವ, ಮುರಿದ ಮದುವೆ, ಪಂದನದ ಕೊರಕು, ಎರಡು ಜೀವನ ಚರಿತ್ರೆಗಳು ಬುದ್ಧದೇವ, ಶ್ರೀ ಶಾರದಾಮಣಿ ಬುದ್ಧದೇವ. ಹೀಗೆ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ದಲಿತ ಜನಾಂಗದ ಅಭ್ಯುದಯಕ್ಕಾಗಿ ಮೂರು ದಶಕಗಳ ತಮ್ಮ ಜೀವನ ಮುಡುಪಾಗಿಟ್ಟು ಆರ್. ಗೋಪಾಲಸ್ವಾಮಿ ಅಯ್ಯರ್ ಅವರ ಮಾರ್ಗದರ್ಶನದಲ್ಲಿ ಕಾರ್ಯಪ್ರವೃತ್ತರಾದ ವೆಂಕಟಯ್ಯನವರು ಒಬ್ಬ ನಿಷ್ಠಾವಂತ ಸಮಾಜ ಸೇವಕರಾಗಿದ್ದರು. ದಲಿತ ಜನಾಂಗದ ಉನ್ನತಿಗಾಗಿ ಶ್ರಮಿಸುವುದೇ ಅವರ ಮುಖ್ಯ ಧ್ಯೇಯವಾಗಿದ್ದಿತು. ನಿರಂತರ ಬಡತನ, ಕಾಯಿಲೆ, ಕೌಟುಂಬಿಕ ತಾಪತ್ರಯ ಇವುಗಳ ನಡುವೆಯೂ ಅವರು ಶಾಶ್ವತವಾಗಿ ನಿಲ್ಲುವ ಗಮನಾರ್ಹ ಕೃತಿಗಳನ್ನು ರಚನೆ ಮಾಡಿದ್ದಾರೆ. ಇವರ ಸಾಹಿತ್ಯ ಸೇವೆಯನ್ನು ಗಮನಿಸಿದ ಕರ್ನಾಟಕ ಸರ್ಕಾರ ಮಾಸಾಶನವನ್ನು ಮಂಜೂರು ಮಾಡಿತು. ಹಾಗೆಯೇ

೧೯೭೬ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಗೌರವವೂ ಲಭಿಸಿತು. ಹೀಗೆ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡ ಜಿ. ವೆಂಕಟಯ್ಯ ಕನ್ನಡ ಸಾಹಿತ್ಯಕ್ಕೆ ಅಭೂತಪೂರ್ವ ಕೊಡುಗೆ ನೀಡಿದ್ದಾರೆ.[೬೬]

ಎನ್. ನರಸಿಂಹಯ್ಯ: ಇವರು ಹುಟ್ಟಿದ್ದು ೧೮-೯-೧೯೨೫ ಬೆಂಗಳೂರಿನ ಸುಲ್ತಾನ್‌ಪೇಟೆಯಲ್ಲಿ ತಂದೆ ಸಿ. ನಂಜಪ್ಪ, ತಾಯಿ ಯಲ್ಲವ್ವ, ಮೂಲತಃ ಚಿತ್ರದುರ್ಗದ ಕಡೆಯವರಾದ ಇವರು ಆ ಕಾಲದಲ್ಲಿ ಬರಬಂದ ಕಾರಣದಿಂದಾಗಿ ಬೆಂಗಳೂರು ದಾರಿ ಹಿಡಿದರು. ಅವರು ಶಾಲೆ ಕಲಿತಿದ್ದು ನಾಲ್ಕನೇ ತರಗತಿಯವರೆಗೆ. ಆದರೆ ಬರೆದಿದ್ದೂ ೫೫೦ಕ್ಕೂ ಹೆಚ್ಚು ಕಾದಂಬರಿಗಳನ್ನು. ಇವರು ಬರೆದ ಮೊದಲ ಕಾದಂಬರಿ ಪತ್ತೇದಾರ ಪುರುಷೋತ್ತಮ. ೧೯೫೨ರಲ್ಲಿ ತಮ್ಮ ಮೊದಲ ಪ್ರಯತ್ನದಲ್ಲಿ ನರಸಿಂಹಯ್ಯ ಅವರು ಓದುಗರನ್ನು ಗೆದ್ದು ಪತ್ತೇದಾರಿಯ ಪಿತಾಮಹರಾದರು. ಅವರು ಮೇಲ್ಜಾತಿಯವರಾಗಿ ಹುಟ್ಟದಿರುವುದು ಅವರಿಗೆ ದೊಡ್ಡ ಶಾಪವಾಗಿತ್ತು. ಏಕೆಂದರೆ ಇವರು ಬರೆಯುವ ಕಾಲಕ್ಕೆ ಈಗ ಬಾಯಿ ತುಂಬಾ ಹೇಳುವ ಶ್ರೇಷ್ಠ ಕಾದಂಬರಿಕಾರರು ಇವರನ್ನು ಮೂಲೆಗುಂಪು ಮಾಡಲು ಪ್ರಯತ್ನಿಸುತ್ತಿದ್ದರು. ಇವರು ಬರೀ ಪತ್ತೇದಾರಿ ಕಾದಂಬರಿಗಳನ್ನೇ ಬರೆಯಲಿಲ್ಲ. ಸಾಮಾಜಿಕ ಕಾದಂಬರಿಗಳನ್ನು ಬರೆದಿದ್ದಾರೆ. ಈ ಕಾರಣಕ್ಕಾದರೂ ನಮ್ಮ ಸಾಹಿತ್ಯಲೋಕ ಗಂಭೀರವಾಗಿ ಗಮನಿಸಬೇಕಾಗಿತ್ತು.[೬೭]

೨.೮.೨. ಸಾಹಿತ್ಯದ ಮೂಲಕ ಅಸ್ಪೃಶ್ಯತಾ ನಿವಾರಣೆಯ ಅರಿವು

ಮೈಸೂರು ಸಂಸ್ಥಾನ ಅಂದಿನ ಸಮಕಾಲೀನ ರಾಜ್ಯಗಳಲ್ಲಿಯೇ ವಿಭಿನ್ನ ರಾಜ್ಯ ಎಂದು ಹೆಸರು ಪಡೆಯಲು ಹಲವಾರು ಸಂಗತಿಗಳು ಕಾರಣವಾಗಿದ್ದವು. ಅವುಗಳಲ್ಲಿ ಶಾಲಾ ಕಾಲೇಜುಗಳ ಸ್ಥಾಪನೆ, ಮೈಸೂರು ವಿಶ್ವವಿದ್ಯಾನಿಲಯದ ಪ್ರಾರಂಭ, ಪಂಚಮರಿಗಾಗಿ ಪ್ರತ್ಯೇಕ ಶಾಲೆಗಳ ಸ್ಥಾಪನೆ, ಸರಕಾರಿ ನೌಕರಿಯಲ್ಲಿ ಹಿಂದುಳಿದ ವರ್ಗದವರಿಗೆ ಮೀಸಲಾತಿ ಇತ್ಯಾದಿ ಪ್ರಮುಖ ಅಂಶಗಳು. ಆದ್ದರಿಂದಾಗಿಯೇ ಮೈಸೂರು ಸಂಸ್ಥಾನ ಮಹಾತ್ಮಗಾಂಧೀಜಿಯವರ ಗಮನ ಸೆಳೆದು ಆದರ್ಶರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು.

ಶಿಕ್ಷಣವೆಂಬುದು ಬದಲಾವಣೆಯ ಪ್ರಬಲ ಅಸ್ತ್ರವಾಗಿ ಆ ಮೂಲಕ ಲಕ್ಷಾಂತರ ಜನರ ಜೀವನ ಬದಲಾವಣೆಗೆ ಕಾರಣವಾಗಿರುವುದಕ್ಕೆ ಇತಿಹಾಸವೇ ಸಾಕ್ಷಿ. ಇಂದಿನ ಸಮಾಜ ಎದುರಿಸುತ್ತಿರುವ ಸಾಮಾಜಿಕ ಪಿಡುಗುಗಳಿಗೂ ಶಿಕ್ಷಣ ಕ್ರಾಂತಿಯೇ ಮದ್ದು ಎಂದರೆ ಅತಿಶಯೋಕ್ತಿಯಲ್ಲ. ಸಮಾಜದಲ್ಲಿ ಜಾಗೃತಿಯನ್ನು ಉಂಟು ಮಾಡುವುದರ ಜೊತೆಗೆ ಧ್ವನಿ ಇಲ್ಲದವರಿಗೆ ಧ್ವನಿ ನೀಡುವುದರೊಂದಿಗೆ ಸಾಮಾಜಿಕ ಸ್ಥಾನಮಾನವನ್ನು ಗಳಿಸಿ ಮೇಲ್ವರ್ಗದವರ ಸರಿಸಮನಾಗಿ ಜೀವನ ನಡೆಸಲು ಶಿಕ್ಷಣದಿಂದ ಮಾತ್ರ ಸಾಧ್ಯ. ನಿಮ್ನವರ್ಗ ಮತ್ತು ಮಹಿಳೆಯರನ್ನು ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಸಬಲೀಕರಣ ಮಾಡುವ ಮುಖೇನ ಸಾಂಪ್ರದಾಯಿಕ ಜಾತಿವ್ಯವಸ್ಥೆಯಿಂದ ಸಮಾಜದಲ್ಲಿ ಉಂಟಾಗಿರುವ ಪ್ರಕ್ಷುಬ್ಧ ಪರಿಸ್ಥಿತಿಯಿಂದ ಪಾರಾಗಿ ಮೇಲ್ವರ್ಗದ

ಜನರ ಧೋರಣೆಯಲ್ಲಿ ಬದಲಾವಣೆ ತರಲು ಸಾಧ್ಯ.[೬೮] ಶತಶತಮಾನಗಳಿಂದ ತುಳಿತಕ್ಕೆ ಒಳಗಾಗಿರುವವರು ಅಸ್ಪೃಶ್ಯರು, ಕಾರ್ಮಿಕರು, ಅಲೆಮಾರಿಗಳು, ಬಡರೈತರು, ಆದಿವಾಸಿಗಳು ಮೊದಲಾದವರ ನಿರಾಸೆ, ವೇದನೆ, ನಿಟ್ಟುಸಿರು ಇವುಗಳಿಗೆ ಆ ಜನಾಂಗದಿಂದ ಬಂದವರೇ ಮಾತಿನ ರೂಪ ಕೊಡುವ ಪ್ರಯತ್ನ ಮಾಡಿದರು. ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದ ಈ ದಲಿತ ಜನಾಂಗದವರಿಂದ ಅಕ್ಷರವನ್ನು ನಿರ್ಲಕ್ಷಿಸುವುದಾಗಲೀ, ಸಾಹಿತ್ಯವನ್ನು ನಿರೀಕ್ಷಿಸುವುದಾಗಲೀ ಸಾಧ್ಯವಿರಲಿಲ್ಲ. ಇಂಥ ಸಮುದಾಯಗಳಿಂದ ಕೆಲವೇ ಕೆಲವರು ಅಕ್ಷರಸ್ಥರಾಗಿ ಸಾಹಿತ್ಯ ರಚನೆಯಲ್ಲಿ ತೊಡಗುತ್ತ ಬಂದಿದ್ದಾರೆ.[೬೯] ಇಂಥ ಬೆರಳೆಣಿಕೆಯ ಮೊದಲ ದಲಿತ ಲೇಖಕರುಗಳಲ್ಲಿ ಮೈಸೂರು ಜಿಲ್ಲೆಯ ಸೋಸಲೆ ಸಿದ್ದಪ್ಪ, ಮಂಡ್ಯ ಜಿಲ್ಲೆಯ ಜಿ. ವೆಂಕಟಯ್ಯ, ಚನ್ನರಾಯಪಟ್ಟಣದ ಡಿ. ಗೋವಿಂದದಾಸ್, ಬೆಂಗಳೂರಿನ ಎನ್. ನರಸಿಂಹಯ್ಯ ಮುಂತಾದವರು ಆ ತಲೆಮಾರಿನಲ್ಲಿಯೇ ಸಾಹಿತ್ಯ ಕೃಷಿ ಮಾಡಿ ದಲಿತ ಸಮುದಾಯವನ್ನು ಆಕರ್ಷಿಸಲು ದಲಿತರ ಸಾಂಸ್ಕೃತಿಕ ನೆಲೆಗಳಾದ ಚೌಡಿಕೆ ಪದಗಳನ್ನು ಬಳಸಿಕೊಂಡು ತಿಳಿಯಾದ ಹಾಸ್ಯವನ್ನು ಬೆರೆಸಿ ನಾಟಕಗಳನ್ನು ಆಡಿಸುತ್ತಿದ್ದುದು ಇವರ ಸೂಕ್ಷ್ಮ ಸಂವೇದನೆಗೆ ಸಾಕ್ಷಿಯಾಗಿದೆ. ಕ್ರಾಂತಿಕಾರಕವಾಗಿ ಕೆಲಸ ಮಾಡುವ ಸಂದರ್ಭಗಳಲ್ಲಿ ಹಲವು ಸಲ ಸವರ್ಣೀಯರ ಕೆಂಗಣ್ಣಿಗೆ ಗುರಿಯಾಗಿ ಕಿರುಕುಳಗಳನ್ನು ಅನುಭವಿಸಿದ್ದಾರೆ. ಅಸ್ಪೃಶ್ಯ ಜನಾಂಗದಲ್ಲಿದ್ದ ಮೌಢ್ಯವನ್ನು ಹೋಗಲಾಡಿಸಿ ದಲಿತ ಸಾಹಿತಿಗಳ ಅಚಲವಾದ ನಿಲುವು, ಅಪ್ರತಿಮ ನೈತಿಕ ಶಕ್ತಿಯಿಂದ ಅವುಗಳನ್ನೆಲ್ಲ ಎದುರಿಸಿರುವ ಅವರ ಕಾರ್ಯ ವಿಧಾನವೇ ಬಹಳ ದೊಡ್ಡ ಆದರ್ಶ ಎನಿಸುತ್ತದೆ.

ಡಿ. ಗೋವಿಂದಾಸ್ ಅವರು ದಲಿತರಿಗೆ ಶಿಕ್ಷಣ ನೀಡಿ ಸುಧಾರಣೆಗೆ ಕಾರಣರಾದ ಮೈಸೂರು ಮಹಾರಾಜರನ್ನು ಸ್ಮರಿಸಿ ಹೀಗೆ ಒಂದು ಕವನ ಬರೆಯುತ್ತಾರೆ.

ವಿದ್ಯಾದಾನವ ಕರುಣಿಸಿಯೆಮ್ಮನು
ಬುದ್ಧಿವಂತರ ತಾ ಮಾಡು ಉದ್ದೇಶಿಸಿ
ಬುದ್ಧ ಕಂಕಣವನ್ನು ಧರಿಸುತನಿಂದ

ದಲಿತರ ಮಕ್ಕಳ ಶಿಕ್ಷಣಕ್ಕಾಗಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿ ಸುಧಾರಣೆ ಮಾಡಿದ ಆರ್. ಗೋಪಾಲಸ್ವಾಮಿ ಅಯ್ಯರ್ ಮರಣ ಹೊಂದಿದಾಗ

ಹರಿಜನ ಗುರುವರ ಹಾರಿದೆಯೇ
ಹರಿಪಾದವ ನೀ ಸೇರಿದೆಯಾ
ಮಾರೆಮಾಚುತೆ ಕಣ್ಮರೆಯಾದೆಯಾ
ನೆರೆಶೋಕಗೈವ ಪರಿಮಾಡಿದೆಯಾ
ಇನ್ನಾರೆಮ್ಮನು ಕರೆಯುವರು
ಬನ್ನಿ ರಿಲ್ಲೆಂದೊರಲುವರು

ಬಾರದಿರೆಮ್ಮನು ಬೈಯುವರು
ಬಂದರೆ ಚಂದರಿ ಮನ್ನಿಪರು

ಎಂಬ ನಿಧನ ಗೀತೆಯನ್ನು ರಚಿಸಿದರು ಆರ್. ಗೋಪಾಲಸ್ವಾಮಿ ಅಯ್ಯರ್ ಅವರು. ದಲಿತ ಸಮುದಾಯ ಏಳಿಗೆಗೆ ತಮ್ಮ ಜೀವನವನ್ನು ಮೂಡುಪಾಗಿಟ್ಟಿದ್ದು ಅವರ ದಲಿತಪರ ಕಾರ್ಯಗಳನ್ನು ತಿಳಿಸುವುದರ ಮುಖಾಂತರ ಇತರ ಸವರ್ಣೀಯರ ಮನಪರಿವರ್ತನೆಗೆ ಮುಂದಾದರು.[೨೦]

ದಲಿತ ಸಮುದಾಯದಲ್ಲಿದ್ದ ಅಜ್ಞಾನ ಮೂಢನಂಬಿಕೆ ಹೋಗಲಾಡಿಸಿ ಶುಚಿತ್ವವನ್ನು ಕಾಪಾಡಲು, ಸ್ವಾಭಿಮಾನದ ಬದುಕನ್ನು ನಡೆಸುವಂಥ ವಿಚಾರಗಳನ್ನು ನೀಡುತ್ತಾರೆ. ಮುಖ್ಯವಾಗಿ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಸೇರಿಸಬೇಕು ಎಂಬ ಅರಿವನ್ನು ಮೂಡಿಸುತ್ತಾ ತಮ್ಮ ತಾತ್ವಿಕ ಮನೋಧರ್ಮದಿಂದಲೇ ಜಾಗೃತಿಯನ್ನು ಉಂಟು ಮಾಡಲು ಶ್ರಮಿಸುತ್ತಾರೆ. ಆಗ ಬರೆದ 'ಹರಿಜನರಿಗೆ ಹಿತಬೋಧೆ' ಎಂಬ ಪದ್ಯದಲ್ಲಿ

ಏಳಿ ಹರಿಜನರೆಯನ್ನವರೇ
ಏಳಿರಿ ತಾಳದೆ । ಎಚ್ಚರಗೊಳ್ಳಿರಿ
ಸೇವಿಸದಿರಿ ಮದ್ಯಯಿದೆಂದಿಗೂ
ಭಾವಿಸದಿರ ಸದ್ಯ
ಸೇವಿಸಿದೊಡೆಕೆಹಳೆಮ್ಮಯಬಾಳು

ಎಂದು ತುಂಬಾ ಕಳಕಳಿಯಿಂದ ಜಾಗೃತಿಯನ್ನು ಉಂಟು ಮಾಡಲು ಪ್ರಯತ್ನಿಸಿದ್ದಾರೆ. ಇಂತಹ ಅನೇಕ ಕವನಗಳನ್ನು ಅಂದರೆ ಜಾತಿ ಅಸ್ಪೃಶ್ಯತೆಗೆ ಸಂಬಂಧಿಸಿದಂತೆ ವ್ಯಕ್ತಿ ಚಿತ್ರಗಳಾದ ಕವಿತೆಗಳು, ವೈಚಾರಿಕ ಕವಿತೆಗಳು, ನಿಸರ್ಗ ಪರಿಸರದ ಕವಿತೆಗಳು, ಪ್ರಾದೇಶಿಕ ಕೌಟುಂಬಿಕ ಹಿನ್ನೆಲೆಯ ಕವಿತೆಗಳನ್ನು ರಚಿಸಿ ಪಂಚಮರ ಮತ್ತು ಸಾರ್ವಜನಿಕರ ಹಿತಕ್ಕಾಗಿ ಶ್ರಮಿಸಿದರು.[೨೧]

ಮೈಸೂರು ಸಂಸ್ಥಾನದಲ್ಲಿ ಪ್ರಥಮ ತಲೆಮಾರಿನ ಅಕ್ಷರಸ್ಥ ದಲಿತ ಸಾಹಿತಿಗಳು ದಲಿತರ ಅಭಿವೃದ್ಧಿಗೆ ಪ್ರಯತ್ನಿಸಿದರು. ಇವರೆಲ್ಲರೂ ಸಮಾಜ ಸುಧಾರಣೆಯ ಕೆಲಸದಲ್ಲಿಯೇ ಆತ್ಮ ಸಂತೋಷವನ್ನು ಕಾಣುತ್ತಿದ್ದರು. ಶ್ರೇಣೀಕೃತ ಜಾತಿ ವ್ಯವಸ್ಥೆಯ ಈ ಸಮಾಜದಲ್ಲಿ ಯಾವ ಬಗೆಯ ಪ್ರೋತ್ಸಾಹವು ದೊರೆಯದಿದ್ದ ಆ ಕಾಲದಲ್ಲಿಯೇ ತಮ್ಮ ಸ್ವಂತ ಆಸಕ್ತಿ ಪರಿಶ್ರಮದಿಂದಲೇ ಶಿಕ್ಷಣ ಪಡೆದು ಮೇಲೇರಲು ಯತ್ನಿಸುತ್ತಾ ತಮ್ಮ ಸಾತ್ವಿಕ ಚಿಂತನೆಗಳ ಮೂಲಕವೇ ಪ್ರಾಮಾಣಿಕವಾಗಿ ಮಾಡಿರುವ ಸಮಾಜಸೇವೆ ಅವರು ಸೃಷ್ಟಿಸಿರುವ ಸಾಹಿತ್ಯಕ ಕೆಲಸಗಳನ್ನು ಸಾಹಿತ್ಯ ವಲಯ, ವಿಮರ್ಶಾ ಲೋಕಕ್ಕೆ ತೆರೆದಿಡುವ ಮುಖೇನ ನಮ್ಮ ಸಾಂಸ್ಕೃತಿಕ ಚಹರೆಗಳನ್ನು ಗುರುತಿಸಬೇಕಿದೆ. ಅವು ಇಂದಿನ ನಮ್ಮ ಯುವ ಪೀಳಿಗೆಗೆ ಪ್ರೇರಣೆಯಾಗಬಲ್ಲವುಗಳಾಗಿವೆ.

ಕೊನೆ ಟಿಪ್ಪಣಿಗಳು

೧. ಡಾ. ಅರವಿಂದ ಮಾಲಗತ್ತಿ, ೨೦೦೩, **ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪುಟ ೧೯.

೨. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೩, **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೬೬.

೩. ಡಾ. ಎಸ್. ಚಂದ್ರಶೇಖರ್, ೨೦೧೩, **ದಕ್ಷಿಣ ಭಾರತ: ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧೮.

೪. ಡಾ. ಎಸ್. ಚಂದ್ರಶೇಖರ್, ೧೯೮೩, **ಸಾಮಾಜಿಕ ಹಿನ್ನೆಲೆಯಲ್ಲಿ ಮೈಸೂರು ರಾಜಕೀಯ ಕೆಲವು ಒಳನೋಟಗಳು(೧೮೮೧ ರಿಂದ ೧೯೪೦)**, ಬೆಂಗಳೂರು, ಪುಟ ೪೬.

೫. ಡಾ. ಪ್ರೇಮಿಳಾದೇವಿ ಬಿ.ಕೆ., ೨೦೧೦, **ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ವರ್ಗಗಳ ಚಳವಳಿ ಹಾಗೂ ರಾಜಕೀಯ ಜಾಗೃತಿ**, ರೂಪ ಪ್ರಕಾಶನ, ಮೈಸೂರು, ಪುಟ ೨೦.

೬. ಬಿ. ಹೆಟ್ನೆ, ೧೯೭೮, **ಪೊಲಿಟಿಕಲ್ ಎಕಾನಮಿ ಆಫ್ ಇನ್‌ಡೈರೆಕ್ಟ್ ರೂಲ್ ಇನ್ ಮೈಸೂರು(೧೮೮೭-೧೯೪೭)**, ದೆಹಲಿ, ಪುಟ ೧೭೩.

೭. ಡಾ. ಎಸ್. ಚಂದ್ರಶೇಖರ್, ೨೦೦೨, **ಆಧುನಿಕ ಕರ್ನಾಟಕದ ಆಂದೋಲನಗಳು**, ನಮ್ಮ ಪ್ರಕಾಶನ, ತಿಪಟೂರು, ಪುಟ ೪೨.

೮. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೩, **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೬೫-೬೬.

೯. ಡಾ. ಪ್ರೇಮಿಳಾದೇವಿ ಬಿ.ಕೆ., ೨೦೧೦, **ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ವರ್ಗಗಳ ಚಳವಳಿ ಹಾಗೂ ರಾಜಕೀಯ ಜಾಗೃತಿ**, ರೂಪ ಪ್ರಕಾಶನ, ಮೈಸೂರು, ಪುಟ ೨೮.

೧೦. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೩, **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೭೧.

೧೧. ಡಾ. ಎಸ್. ಚಂದ್ರಶೇಖರ್, ೨೦೦೨, **ಆಧುನಿಕ ಕರ್ನಾಟಕದ ಆಂದೋಲನಗಳು**, ನಮ್ಮ ಪ್ರಕಾಶನ, ತಿಪಟೂರು, ಪುಟ ೪೩.

೧೨. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೩, **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೬೯-೭೦.

೧೩. ಮೇಲಿನದೆ, ಪುಟ ೭೨.

೧೪. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೦೭, **ಮೈಸೂರು ಸಂಸ್ಥಾನದಲ್ಲಿ ದಲಿತ ಶಿಕ್ಷಣ(ನಾಲ್ವಡಿ ಕೃಷ್ಣರಾಜ ಒಡೆಯರ ಕಾಲಕ್ಕೆ ಸಂಬಂಧಿಸಿದಂತೆ)**, ಚರಿತ್ರೆ ಅಧ್ಯಯನ, ಸಂಪುಟ-೩, ಸಂಚಿಕೆ-೧(ಸಂ) ಡಾ. ಕೆ. ಮೋಹನ್‌ಕೃಷ್ಣ ರೈ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧೧೫-೧೧೬.

೧೫. **ವಿಜಯ ಕರ್ನಾಟಕ,** ೨೦೧೪, ಭಾನುವಾರ ೫ ಜನವರಿ, ಸಾಪ್ತಾಹಿಕ ಲವಲವಿಕೆ ಸಂಪುಟ–೫, ಸಂಚಿಕೆ–೬೩, ಪುಟ ೨.

೧೬. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೩, **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೨೫.

೧೭. ಮೇಲಿನದೇ, ಪುಟ ೨೭.

೧೮. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೦೭, **ಮೈಸೂರು ಸಂಸ್ಥಾನದಲ್ಲಿ ದಲಿತ ಶಿಕ್ಷಣ(ನಾಲ್ವಡಿ ಕೃಷ್ಣರಾಜ ಒಡೆಯರ ಕಾಲಕ್ಕೆ ಸಂಬಂಧಿಸಿದಂತೆ), ಚರಿತ್ರೆ ಅಧ್ಯಯನ, ಸಂಪುಟ–೩, ಸಂಚಿಕೆ–**೧(ಸಂ) ಡಾ. ಕೆ. ಮೋಹನ್‌ಕೃಷ್ಣ ರೈ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧೧೭.

೧೯. ಮೇಲಿನದೇ, ಪುಟ ೧೧೮.

೨೦. **ವಿಜಯಕರ್ನಾಟಕ, ೨೦೧೪, ಭಾನುವಾರ ೫ ಜನವರಿ, ಸಾಪ್ತಾಹಿಕ ಲವಲವಿಕೆ ಸಂಪುಟ–೫, ಸಂಚಿಕೆ–೬೩,** ಪುಟ ೪.

೨೧. ಮೇಲಿನದೇ, ಪುಟ ೫–೬.

೨೨. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೦೯, **ದಲಿತರು ಮತ್ತು ಮತಾಂತರ ಒಂದು ಚಿಂತನೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೬೪.

೨೩. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೩, **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೪೩–೪೭.

೨೪. ಡಾ. ಲಕ್ಷ್ಮೀಪತಿ ಸಿ.ಜೆ., ೨೦೦೯, **ಮತಾಂತರ ಸತ್ಯಾನ್ವೇಷಣೆ,** ಸಂಚಲನ, ಬೆಂಗಳೂರು, ಪುಟ ೧೯೩.

೨೫. ಡಿ.ಎಲ್. ಅಳಗೋಡಿ, ೨೦೦೧, **ಭಾರತದಲ್ಲಿ ಕ್ರೈಸ್ತ ಧರ್ಮದ ಇತಿಹಾಸ,** ಕನ್ನಡ ದೈವಜ್ಞಾ ಸಾಹಿತ್ಯ ಸಮಿತಿ, ಮಂಗಳೂರು, ಪುಟ ೬೪.

೨೬. ಡಾ. ಹಾಲತಿ ಸೋಮಶೇಖರ್, ೨೦೦೭, **ಮಹಿಳಾ ಸಾಮಾಜಿಕ ಚಳುವಳಿಗಳು, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ,** ವಿಸ್ಮಯ ಪ್ರಕಾಶನ, ಬೆಂಗಳೂರು, ಪುಟ ೧೩೨.

೨೭. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೦೭, **ಮೈಸೂರು ಸಂಸ್ಥಾನದಲ್ಲಿ ದಲಿತ ಶಿಕ್ಷಣ(ನಾಲ್ವಡಿ ಕೃಷ್ಣರಾಜ ಒಡೆಯರ ಕಾಲಕ್ಕೆ ಸಂಬಂಧಿಸಿದಂತೆ), ಚರಿತ್ರೆ ಅಧ್ಯಯನ, ಸಂಪುಟ–೩, ಸಂಚಿಕೆ–**೧(ಸಂ) ಡಾ. ಕೆ. ಮೋಹನ್‌ಕೃಷ್ಣ ರೈ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧೧೮–೧೧೯.

೨೮. ಡಾ. ಎಚ್.ಟಿ. ಪೋತೆ, **ದಲಿತಾಂತರಂಗ,** ತಿಪ್ಪಣಂಬು ಪ್ರಕಾಶನ, ರಾಯಚೂರು, ಪುಟ ೨೫.

೨೯. ಎಸ್. ಚಂದ್ರಶೇಖರ್, ೧೯೯೨, **ಅಂಬೇಡ್ಕರ್ ಮತ್ತು ಗಾಂಧಿ,** ಅಕ್ಷರ ಪ್ರಕಾಶನ, ಸಾಗರ, ಪುಟ ೪೨.

೩೦. ಟಿ.ಆರ್. ಚಂದ್ರಶೇಖರ್, **ದಲಿತ ಅಧ್ಯಯನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫, ಪುಟ ೭೮.

೩೧. ಮೇಲಿನದೇ, ಪುಟ ೨೦೦.

೩೨. **ಸಂವಾದ**, ಮಾಸಪತ್ರಿಕೆ, ೨೦೧೨, ನವೆಂಬರ್, ಪುಟ ೧೩.

೩೩. **ಸಂವಾದ**, ಮಾಸಪತ್ರಿಕೆಗೆ, ಬೆಂಗಳೂರು, ೨೦೧೨, ಅಕ್ಟೋಬರ್, ಪುಟ ೩೬.

೩೪. ಎನ್. ಮೂರ್ತಿ, ೨೦೦೫, **ಕಾಂಗ್ರೆಸ್, ಗಾಂಧಿ ಮತ್ತು ದಲಿತರು**, ದಲಿತ ಸಂಘರ್ಷ ಸಮಿತಿ ಪ್ರಕಾಶನ, ಬೆಂಗಳೂರು, ಪುಟ ೧೦.

೩೫. ಎನ್. ಮೂರ್ತಿ, ೨೦೦೫, **ಜಾತಿ ಮತ್ತು ಮೀಸಲಾತಿ(ಸಮಗ್ರ ಚಿಂತನೆ)**, ದಲಿತ ಸಂಘರ್ಷ ಸಮಿತಿ ಪ್ರಕಾಶನ, ಬೆಂಗಳೂರು, ಪುಟ ೧೮೭.

೩೬. **ಪ್ರಜಾವಾಣಿ ದಿನಪತ್ರಿಕೆ**, ೨೦೧೫, ೪ ಮೇ, ಬೆಂಗಳೂರು, ಪುಟ ೬.

೩೭. ಪಿ.ಎಸ್. ಚಂದ್ರಣ್ಣ(ಸಂ), ೨೦೦೬, **ಗಾಂಧೀಜಿ ಬದುಕು ಬರಹ**, ರೂಪ ಪ್ರಕಾಶನ, ಮೈಸೂರು, ಪುಟ ೩೭.

೩೮. ವಿಶ್ವನಾಥ್. **ತುಮಕೂರು ಜಿಲ್ಲೆಯಲ್ಲಿ ಗಾಂಧೀಜಿಯವರ ರಚನಾತ್ಮಕ ಕಾರ್ಯಗಳು**, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೪೪.

೩೯. ನಂಜುಂಡಸ್ವಾಮಿ ಜಿ.(ಸಂ), ೨೦೦೧, **ಧಾನ್ಯಲಕ್ಷ್ಮಿ ವಜ್ರಮಹೋತ್ಸವದ ಸ್ಮರಣ ಸಂಚಿಕೆ**, ತುಮಕೂರು, ಪುಟ ೧-೨.

೪೦. ಸಿ.ಎನ್. ಭಾಸ್ಕರಪ್ಪ(ಸಂ), ೧೯೯೧, **ತುಮಕೂರು ಜಿಲ್ಲಾ ದರ್ಶನ**, ಟೈಮ್ಸ್ ಪಬ್ಲಿಕೇಷನ್, ತುಮಕೂರು, ಪುಟ ೩೩೬.

೪೧. ಮಾಲಿಮುದ್ದಣ, ೧೯೭೯, **ಮಾಲಿಮರಿಯಪ್ಪ ಜೀವನ ಸಾಧನೆ**, ಸಾಹಿತ್ಯಾಲಯ, ತುಮಕೂರು, ಪುಟ ೩೬.

೪೨. ಕವಿತಾಕೃಷ್ಣ, **ಸ್ವಾತಂತ್ರ್ಯಶ್ರೀ**, ೧೯೯೦, ಕವಿತಾ ಪ್ರಕಾಶನ, ತುಮಕೂರು, ಪು. ೨೫-೨೯.

೪೩. ವೇಮಗಲ್ ಸೋಮಶೇಖರ್, ೨೦೦೪, **ಬೆಂಗಳೂರಿನಲ್ಲಿ ಮಹಾತ್ಮಗಾಂಧಿ**, ಬೆಂಗಳೂರು, ಪುಟ ೧೩೨.

೪೪. ಮೇಲಿನದೇ, ಪುಟ ೧೩೪-೧೩೫.

೪೫. ಬಸವರಾಜು ಕೆ.ಆರ್., ೨೦೧೩, **ಕರ್ನಾಟಕದ ಪ್ರಥಮ ದಲಿತ ಮಂತ್ರಿ ಆರ್. ಚನ್ನಿಗರಾಮಯ್ಯನ ಜೀವನ ಸಾಧನೆ**, ದಲಿತ ಅಭಿವೃದ್ಧಿ ಸಂಸ್ಥೆ, ಹೊಸಪೇಟೆ, ಪುಟ ೬೯.

೪೬. ಸಿದ್ಧವ್ವನಹಳ್ಳಿ ಕೃಷ್ಣಶರ್ಮ, **ಗಾಂಧಿ ಮತ್ತು ಕರ್ನಾಟಕ**, ಪುಟ ೮೦-೮೨.

೪೭. ಎಂ.ಜಿ. ಹನುಮಂತರಾಜು, **ಮೈಸೂರು ಸಂಸ್ಥಾನದಲ್ಲಿ ಗಾಂಧೀಜಿಯವರ ರಾಜಕೀಯ ಚಿಂತನೆಗಳ ಪ್ರಭಾವ(೧೯೨೦-೧೯೪೭)**, ಮೈಸೂರು ವಿಶ್ವವಿದ್ಯಾನಿಲಯದ ಗಾಂಧಿ ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ ಪಿಎಚ್.ಡಿ. ಮಹಾಪ್ರಬಂಧ, ಪುಟ ೧೮೪.

೪೮. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೩, **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೩೬.

೪೯. ಮೇಲಿನದೇ, ಪುಟ ೩೭.

೫೦. ಎಂ.ಜಿ. ಹನುಮಂತರಾಜು, **ಮೈಸೂರು ಸಂಸ್ಥಾನದಲ್ಲಿ ಗಾಂಧೀಜಿಯವರ ರಾಜಕೀಯ ಚಿಂತನೆಗಳ ಪ್ರಭಾವ(೧೯೨೦-೧೯೪೭),** ಮೈಸೂರು ವಿಶ್ವವಿದ್ಯಾನಿಲಯದ ಗಾಂಧಿ ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ ಪಿಎಚ್.ಡಿ. ಮಹಾಪ್ರಬಂಧ, ಪುಟ ೨೦೦.

೫೧. ಸಂತೋಷ್‌ಕುಮಾರ್, **ಮೈಸೂರು ಸಂಸ್ಥಾನದಲ್ಲಿ ತಗಡೂರು ರಾಮಚಂದ್ರರಾಯರ ರಚನಾತ್ಮಕ ಕಾರ್ಯಗಳು,** ಮೈಸೂರು ವಿಶ್ವವಿದ್ಯಾನಿಲಯ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ. ಪ್ರಬಂಧ, ಮೈಸೂರು, ಪುಟ ೮೦.

೫೨. ಪ್ರೊ. ಬಿ.ಪಿ. ಮಹೇಶ್‌ಚಂದ್ರಗುರು(ಸಂ), ೨೦೧೧, **ಅಂತ್ಯೋದಯ,** ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಪುಟ ೧೭೩.

೫೩. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೩, **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೩೮.

೫೪. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೩, **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೩೯.

೫೫. ಡಾ. ಎನ್. ಚಿನ್ನಸ್ವಾಮಿ ಸೋಸಲೆ, **ಮೈಸೂರು ಸಂಸ್ಥಾನದಲ್ಲಿ ಶಿಕ್ಷಣ ಪಡೆದ ಪ್ರಥಮ ದಲಿತ ಮಹನೀಯರು**(ಸಂ), ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೦, **ಸಂಪುಟ-೫, ಸಂಚಿಕೆ-೨,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧೩೦.

೫೬. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೦, **ವಸಾಹತುಕಾಲಘಟ್ಟದ ಮೈಸೂರು ಸಂಸ್ಥಾನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧೫೨.

೫೭. ಪ್ರೊ. ಶಿವರಾಮಯ್ಯ, ೨೦೦೭, **ವಿಮೋಚನೆಗಾಗಿ ಮತಾಂತರ,** ಸಂಚಲನ, ಬೆಂಗಳೂರು, ಪುಟ ೭೮.

೫೮. ಡಾ. ಎಂ.ಆರ್. ರವಿ, ೨೦೧೪, **ಆಧುನಿಕ ಶಿಕ್ಷಣ ಮತ್ತು ಸಾಮಾಜಿಕ ಬದಲಾವಣೆ(೧೮೪೧-೧೯೪೭),** ಸಂವಹನ, ಮೈಸೂರು, ಪುಟ ೯೨.

೫೯. ಡಾ. ಮ.ನ. ಜವರಯ್ಯ, ೧೯೯೪, **ಆಧುನಿಕ ಪರಂಪರೆ ಹಾಗೂ ದಲಿತ ಬಂಡಾಯ ಸಾಹಿತ್ಯ ಸಮಗ್ರ ಅಧ್ಯಯನ,** ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು, ಪುಟ ೨೦೦.

೬೦. ಡಾ. ಎಂ.ಎಸ್. ಶೇಖರ್(ಸಂ), ೨೦೦೬, **ಆಧುನಿಕ ಕನ್ನಡ ಸಾಹಿತ್ಯದ ಮೊದಲ ತಲೆಮಾರಿನ ದಲಿತ ಸಾಹಿತಿಗಳು,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪುಟ ೧೯.

೬೧. ಮೇಲಿನದೇ, ಪುಟ ೭೦.

೬೨. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೩, **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧೪೫.

೬೩. ಮೇಲಿನದೇ, ಪುಟ ೧೪೬.

೬೪. ಮೇಲಿನದೇ, ಪುಟ ೧೪೭.

೬೫. ಡಾ. ಎಂ.ಎಸ್. ಶೇಖರ್, ೨೦೦೬, **ಆಧುನಿಕ ಕನ್ನಡ ಸಾಹಿತ್ಯದ ಮೊದಲ ತಲೆಮಾರಿನ ತಲೆಮಾರಿನ ದಲಿತ ಸಾಹಿತಿಗಳು,** ಪುಟ ೧೮-೧೯.

೬೬. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೩, **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧೭೧-೧೭೨.

೬೭. ಡಾ. ಜಿ.ಆರ್. ತಿಪ್ಪೇಸ್ವಾಮಿ, ೨೦೦೭, **ಜಿ. ವೆಂಕಟಯ್ಯ,** ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು, ಪುಟ ೧-೭.

೬೮. ಡಾ. ಎಂ.ಎಸ್. ಶೇಖರ್, ೨೦೦೬, **ಆಧುನಿಕ ಕನ್ನಡ ಸಾಹಿತ್ಯದ ಮೊದಲ ತಲೆಮಾರಿನ ದಲಿತ ಸಾಹಿತಿಗಳು,** ಪುಟ ೧೦೮-೧೧೦.

೬೯. ಡಾ. ಜಿ.ಆರ್. ತಿಪ್ಪೇಸ್ವಾಮಿ, **ಜಿ. ವೆಂಕಟಯ್ಯ,** ಪುಟ ೬.

೭೦. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೩, **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧೭೨.

೭೧. ಮೇಲಿನದೇ, ಪುಟ ೧೭೩.

❖❖❖

ಅಧ್ಯಾಯ : ಮೂರು

ಮೈಸೂರು ಸಂಸ್ಥಾನದ ಅಸ್ಪೃಶ್ಯತಾ ನಿವಾರಣೆಯಲ್ಲಿ ದಲಿತೇತರರ ಪಾತ್ರ ಕುರಿತ ವಿಶ್ಲೇಷಣೆ

ಅಧ್ಯಾಯ : ಮೂರು

ಮೈಸೂರು ಸಂಸ್ಥಾನದ ಅಸ್ಪೃಶ್ಯತಾ ನಿವಾರಣೆಯಲ್ಲಿ ದಲಿತೇತರರ ಪಾತ್ರ ಕುರಿತ ವಿಶ್ಲೇಷಣೆ

೩.೧. ಪ್ರಸ್ತಾವನೆ

ಮೈಸೂರು ಸಂಸ್ಥಾನದಲ್ಲಿ ಪಾಶ್ಚಾತ್ಯ ಶಿಕ್ಷಣದ ಪರಿಣಾಮವಾಗಿ, ಶೈಕ್ಷಣಿಕವಾಗಿ ವ್ಯಾಪಕವಾದ ಪರಿವರ್ತನೆಗೆ ಕಾರಣವಾಯಿತು. ಇಲ್ಲಿ ಕ್ರೈಸ್ತ ಮಿಷನರಿಗಳ ಪ್ರಚಾರಕ್ಕೆ ಆದ ಪ್ರತಿಕೂಲ, ಪ್ರತಿಕ್ರಿಯೆ ಹಾಗೂ ಈ ದೇಶದಲ್ಲಿ ಕಾಣಿಸಿಕೊಂಡ ಅಖಿಲ ಭಾರತ ಸುಧಾರಣಾವಾದಿ ಸಂಘಟನೆಗಳಾದ ಬ್ರಹ್ಮ ಸಮಾಜ, ಆರ್ಯ ಸಮಾಜ, ಥಿಯೋಸೊಫಿಕಲ್ ಸೊಸೈಟಿ ಮತ್ತು ರಾಮಕೃಷ್ಣ ಮಿಶನ್‌ಗಳ ಪ್ರಭಾವದಿಂದಾಗಿ ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣಾ ಚಳವಳಿ ಕಾಣಿಸಿಕೊಂಡಿತು. ಇಂತಹ ಸಮಾಜ ಸುಧಾರಣಾ ಸಂಸ್ಥೆಗಳಿಂದ ಪ್ರಭಾವಿತರಾದ ಅನೇಕ ಬ್ರಾಹ್ಮಣೇತರರು ಗಾಂಧೀ, ಅಂಬೇಡ್ಕರ್‌ಯುಗಕ್ಕೆ ಪೂರ್ವದಲ್ಲೇ ಅಸ್ಪೃಶ್ಯತಾ ನಿವಾರಣೆಗೆ ಶ್ರಮಿಸಿದರು. ಅಸ್ಪೃಶ್ಯರನ್ನು ಸಾಮಾಜಿಕ ಮತ್ತು ಧಾರ್ಮಿಕ ಶೋಷಣೆಯಿಂದ ಮುಕ್ತಗೊಳಿಸುವುದು, ಅವರಿಗೆ ರಾಜಕೀಯ ಹಾಗೂ ಆರ್ಥಿಕವಾದ ಹಕ್ಕುಗಳನ್ನು ಗಳಿಸಿಕೊಡುವುದು ದಲಿತಪರ ಕಾಳಜಿಯುಳ್ಳ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ಗುರಿಯಾಗಿತ್ತು. ಈ ದಿಸೆಯಲ್ಲಿ ದಲಿತರಲ್ಲಿ ಜಾಗೃತಿ ಮೂಡಿಸುವುದು ಅವರ ಹೋರಾಟದ ಮೊದಲ ಮೆಟ್ಟಿಲಾಗಿತ್ತು. ಶಿಕ್ಷಣ, ಅದಕ್ಕೆ ಪೂರಕವಾದ ವಿದ್ಯಾರ್ಥಿನಿಲಯ ಸ್ಥಾಪನೆ, ಆರ್ಥಿಕ ಪ್ರಗತಿ, ಕುಂದುಕೊರತೆಗಳ ನಿವಾರಣೆ ಇವೇ ಮುಂತಾದ ಮಾರ್ಗಗಳನ್ನು ಕಾರ್ಯಗತಗೊಳಿಸುವುದರ ಮೂಲಕ ದಲಿತೋದ್ಧಾರದ ಕಾರ್ಯಗಳನ್ನು ಮಾಡಲು ಮುಂದಾದರು. ದಲಿತರಿಗೆ ಸಾಮಾಜಿಕ ಸಮಾನತೆಯನ್ನು ಸಂಪಾದಿಸಿಕೊಡುವಲ್ಲಿ ವಿಚಾರವಂತ ದಲಿತೇತರರು ಹಿಂದೆ ಬೀಳಲಿಲ್ಲ. ದಲಿತೇತರರು ದಲಿತರನ್ನು ಅವರ ಜಡತ್ವದಿಂದ ಎಚ್ಚರಗೊಳಿಸಲು ಮಾಡಿದ ಪ್ರಯತ್ನ ದಾಖಲಾರ್ಹ. ಯಾವುದೇ ಸಹಾಯ ಸಹಕಾರಗಳಿಲ್ಲದೆ ಊರೂರು ತಿರುಗಿ ಜನರ ಸಭೆ ಸೇರಿಸಿ ಅವರ ವಿಚಾರಧಾರೆಗಳಿಂದ ದಲಿತರಲ್ಲಿ ಜಾಗೃತಿ ಮೂಡಿಸಿದರು.

೩.೨. ಗಾಂಧೀಯಿಂದ ಪ್ರೇರಿತವಾದ ಅಸ್ಪೃಶ್ಯತಾ ನಿವಾರಣೆ

ಮೈಸೂರು ಸಂಸ್ಥಾನದಲ್ಲಿ ಅಂಬೇಡ್ಕರ್ ಪ್ರಭಾವಕ್ಕಿಂತ ಗಾಂಧೀ ಅವರ ಪ್ರಭಾವಕ್ಕೆ ಒಳಾಗಿದ್ದನ್ನು ಹೆಚ್ಚಾಗಿ ಗುರುತಿಸಬಹುದು. ಅಸ್ಪೃಶ್ಯತಾ ನಿವಾರಣೆಗೆ ಮುಂದಾಗಿದ್ದು, ಬ್ರಾಹ್ಮಣ

ಮತ್ತು ಬ್ರಾಹ್ಮಣೇತರರಿಗೆ, ೨೦ನೆಯ ಶತಮಾನದ ಪ್ರಾರಂಭದಲ್ಲಿಯೇ ಈ ದೇಶದ ಸಾಮಾಜಿಕ ಚರಿತ್ರೆಗೆ ಮುನ್ನುಡಿ ಬರೆದಿದ್ದಂತಹ ಹಾಗೂ ಇಲ್ಲಿನ ಸಮಾಜದ ಅನಿಷ್ಠ ಪದ್ಧತಿಯ ವಿರುದ್ಧ ಧ್ವನಿ ಎತ್ತಿ ಅಸ್ಪೃಶ್ಯರ ದಮನೀತ ಧ್ವನಿಯಾಗಿ ಮುಂದುವರೆಯುತ್ತಿದ್ದ ಬಾಬಾಸಾಹೇಬ್ ಅಂಬೇಡ್ಕರ್ ಅವರು, ಇವರ ಸ್ವಾರ್ಥ ದಲಿತಪರ ಕೆಲಸಕ್ಕೆ ಸ್ಫೂರ್ತಿಯಾಗಲಿಲ್ಲ. ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣರು ದಲಿತರ ಪರವಾಗಿ ಅನೇಕ ಕಾರ್ಯಗಳನ್ನು ಕೈಗೊಂಡರೂ ಸಹ ಅಂದು ರಾಷ್ಟ್ರಾದ್ಯಂತ ದಲಿತರ ಧ್ವನಿಯಾಗಿದ್ದಂತಹ ಮಹಾತ್ಮ ಜ್ಯೋತಿ ಬಾಪುಲೆ, ಪೆರಿಯಾರ್, ನಾರಾಯಣಗುರು, ಡಾ. ಬಿ.ಆರ್. ಅಂಬೇಡ್ಕರ್‌ರು ಬ್ರಾಹ್ಮಣ್ಯ ತುಂಬಿದ ಮನಸ್ಸಿಗೆ ನಾಯಕರಾಗಲು ಸಾಧ್ಯವಾಗಲಿಲ್ಲ. ಆದರೆ ಪ್ರಾರಂಭದ ಪೂನ ಒಪ್ಪಂದದಲ್ಲಿ ಅಂಬೇಡ್ಕರ್ ಅವರ ವಿರುದ್ಧ ಉಪವಾಸ ಸತ್ಯಾಗ್ರಹ ಕೈಗೊಂಡ ನಾಯಕ ಅಸ್ಪೃಶ್ಯತಾ ನಿವಾರಣ ಮಂತ್ರವನ್ನೇ ಜಪಿಸಿದರು. ಗಾಂಧೀಜಿ ಅವರು ಹಿಂದೂಧರ್ಮದ ರಕ್ಷಣೆಗಾಗಿ ಬಹುಸಂಖ್ಯಾತ ಅಸ್ಪೃಶ್ಯ ಜಾತಿಯವರಾಗಿದ್ದ ದಲಿತರನ್ನು ಹರಿಜನ ಎಂದು ಕರೆದರು. ಹರಿಜನೋದ್ಧಾರವೇ ನನ್ನ ಮುಖ್ಯ ಗುರಿ ಎಂದ ತಕ್ಷಣ, ಇಲ್ಲಿನ ದಲಿತಪರವಾಗಿ ಕೆಲಸ ಮಾಡುತ್ತಿದ್ದೇವೆಂದು ತೋರಿಸಿಕೊಳ್ಳುತ್ತಿದ್ದ ಸಮಯ ಸಾಧಕತನದ ವೈದಿಕರು ಹಾಗೂ ಬ್ರಾಹ್ಮಣೇತರರಿಗೆ ಪ್ರಬಲ ನಾಯಕ ದೊರಕಿದಂತಾಯಿತು.[೧]

ಗಾಂಧೀಜಿ ಅವರನ್ನು ಮೈಸೂರಿನ ಬ್ರಾಹ್ಮಣರು ಹಾಗೂ ಕೆಲ ಬ್ರಾಹ್ಮಣೇತರರು ಮೈಸೂರಿಗೆ ಬರುವಂತೆ ಆಹ್ವಾನಿಸಿದರು. ಅಕ್ಷರ ಬಲ್ಲವರಾಗಿದ್ದರಿಂದ ಹಿಂದಿ-ಇಂಗ್ಲೀಷ್‌ನಲ್ಲಿ ತಮ್ಮ ದಲಿತಪರ ಕೆಲಸಗಳನ್ನು ವರ್ಣನಾತ್ಮಕವಾಗಿ ವಿವರಿಸಿ ಮೈಸೂರಿನಲ್ಲಿ ಅಸ್ಪೃಶ್ಯತೆಯೇ ಇಲ್ಲ ಎಂಬಂತೆ ಪತ್ರ ಬರೆದು ಬಿಂಬಿಸಿದರು. ತಗಡೂರು ರಾಮಚಂದ್ರರಾವ್, ಎಂ.ಎನ್. ಜೋಯಸ್‌ರಂಥವರು ಸಬರಮತಿ ಆಶ್ರಮಕ್ಕೆ ಹೋಗಿ ಮೈಸೂರಿಗೆ ಬರುವಂತೆ ಖುದ್ದಾಗಿ ಆಹ್ವಾನಿಸಿದರು. ಗಾಂಧೀಜಿ ಅವರು ಮೈಸೂರಿಗೆ ಬಂದು ನಂದಿಬೆಟ್ಟದಲ್ಲಿ ವಿಶ್ರಾಂತಿಯನ್ನು ಪಡೆದರು. ನಂತರ ಗಾಂಧೀ ಅವರಿಗೆ ತಾವು ಮೈಸೂರಿಗೆ ಬಂದ ಕಾರ್ಯ ನೆನಪಾಗಿ ಹರಿಜನೋದ್ಧಾರಕ್ಕಾಗಿ ಪಾದಯಾತ್ರೆಗೆ ಕರೆಕೊಟ್ಟರು. ಅನೇಕ ಶ್ರೀಮಂತರು ಮೈಸೂರು, ತುಮಕೂರು, ಬೆಂಗಳೂರು, ಹಾಸನ, ಬಳ್ಳಾರಿ ಮುಂತಾದ ಪ್ರದೇಶಗಳಲ್ಲಿ ಅವರ ಜೋಳಿಗೆಗೆ ಹಣ ಹಾಗೂ ಆಸ್ತಿಗಳನ್ನು ದಾನ ನೀಡಿದರು. ಮೈಸೂರಿನ ದಿವಾನರಾಗಿದ್ದ ಸರ್. ಮಿರ್ಜಾ ಇಸ್ಮಾಯಿಲ್ ಅವರು ನಂದಿಬೆಟ್ಟದಲ್ಲಿ ಗಾಂಧೀ ಪರಿವಾರದವರನ್ನು ಗೌರವದಿಂದ ಆಹ್ವಾನಿಸಿ ವಿಶ್ರಾಂತಿ ಕೊಡಿಸಿದರು. ಗಾಂಧೀಜಿ ಅವರು ನಡೆದ ರಸ್ತೆ, ವಾಸ್ತವ್ಯ ಮಾಡಿದ ಸ್ಥಳಗಳನ್ನು ಚಾರಿತ್ರಿಕ ಸ್ಥಳಗಳನ್ನಾಗಿಸಿದರು. ಅಂದಿನ ಪ್ರಮುಖ ಸುದ್ದಿ ಮಾಧ್ಯಮಗಳಾಗಿದ್ದ ಮುದ್ರಿತ ಮಾಧ್ಯಮವೂ ಸಂಪೂರ್ಣವಾಗಿ ಶಿಕ್ಷಣ ಪಡೆದಂತಹ ಬ್ರಾಹ್ಮಣರ ಸ್ವತ್ತಾಗಿಯೇ ಇತ್ತು. ಹಾಗಾಗಿ ಇವುಗಳಲ್ಲಿ ಗಾಂಧೀಜಿ ಅವರ ಕಾರ್ಯಗಳನ್ನು ವಿಜೃಂಭಣೆಯಿಂದ ಬರೆದರು. ದಲಿತರ ರಾಷ್ಟ್ರೀಯ ಉದ್ಧಾರಕರು ನಾವೇನೇ ಎಂಬಂತೆ ಪ್ರಚಾರ ಮಾಡಿದರು. ಗಾಂಧೀ ಅವರು ಶತಶತಮಾನಗಳಿಂದ ಶೋಷಣೆ ಹಾಗೂ ಅನ್ಯಾಯಕೊಳ್ಳಗಾದ ದಲಿತರನ್ನು ಉದ್ಧಾರಕ್ಕೆ ಉದಯಿಸಿದ ದೇವಮಾನವ ಎಂದು ಹೇಳಿ ದಲಿತರನ್ನು ನಂಬಿಸಿದರು.[೨]

ಆದರೆ ಇದೇ ಸಂದರ್ಭದಲ್ಲಿ ದೇಶದ್ಯಾದಂತ ದಲಿತರ ದನಿಯಾಗಿ ಈ ಭರತ ಭೂಮಿಯ ಬುದ್ಧ, ಬಸವರ ನಿಜ ವಾರಸುದಾರರಾಗಿ ಶತಶತಮಾನದಿಂದ ನೊಂದ ದಲಿತರ ಆಶಯ ಹಾಗೂ ಹೃದಯ ತುಂಬಿದ ಹಾರೈಕೆಗಳಿಂದ ದೇಶ ವಿದೇಶಗಳಲ್ಲಿ ಉನ್ನತ ಶಿಕ್ಷಣ ಪಡೆದು ಪ್ರಜಾಪ್ರಭುತ್ವದ ಆಧಾರದ ಮೇಲೆ ತನ್ನ ಜನಾಂಗದ ಸಾಮಾಜಿಕ ಹಕ್ಕಿಗಾಗಿ ಹಗಲಿರುಳು ಶ್ರಮಿಸಿದ ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಮೈಸೂರು ಸಂಸ್ಥಾನಕ್ಕೆ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರು ಒಮ್ಮೆಯೂ ಸಹ ಆಹ್ವಾನಿಸಲಿಲ್ಲ. ಇದಕ್ಕೆ ಪ್ರಮುಖ ಕಾರಣ ಅವರೊಬ್ಬ ಅಸ್ಪೃಶ್ಯ ಎಂಬುದೇ ಆಗಿದೆ.

ಹೀಗೆ ಮೈಸೂರು ಸಂಸ್ಥಾನದಲ್ಲಿ ಗಾಂಧೀಯಿಂದ ಪ್ರೇರಿತರಾದ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರಲ್ಲಿ ಕೆಲವು ಮಂದಿ ಅವರ ರಚನಾತ್ಮಕ ಕಾರ್ಯಗಳಲ್ಲಿ ಒಂದಾಗಿದ್ದ ಅಸ್ಪೃಶ್ಯತಾ ನಿವಾರಣೆಯನ್ನು ಕೈಗೊಳ್ಳಲು ಮುಂದಾದರು. ಅವರ ಸ್ವಾರ್ಥ ಏನೇ ಇದ್ದರೂ ಸಹ ಅಂತಿಮವಾಗಿ ದಲಿತ ವರ್ಗಕ್ಕೆ ಸ್ವಲ್ಪಮಟ್ಟಿನ ಶಿಕ್ಷಣ ಹಾಗೂ ಮೂಲಭೂತ ಸೌಲಭ್ಯಗಳನ್ನು ನೀಡಲು ಮುಂದಾದರು. ಗಾಂಧೀ ಪ್ರೇರಣೆಯಿಂದ ಮಾತ್ರ ಇದು ಸಾಧ್ಯವಾಯಿತು.

೩.೩. ಧರ್ಮಕೇಂದ್ರಿತ ಅಸ್ಪೃಶ್ಯತಾ ನಿವಾರಣೆ

ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣೆ ಮಾಡಲು ಬ್ರಾಹ್ಮಣ ಮತ್ತು ಬ್ರಾಹ್ಮಣೇತರರು ಮುಂದಾಗಲು ಬಹುಮುಖ್ಯ ಕಾರಣವೆಂದರೆ 'ಧರ್ಮ'. ಸಂಸ್ಥಾನವನ್ನು ಪ್ರವೇಶ ಮಾಡಿದ್ದ ಕ್ರೈಸ್ತ ಮಿಷನರಿಗಳು ಇಲ್ಲಿನ ಸಾಮಾಜಿಕ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅರ್ಥೈಸಿಕೊಂಡಿದ್ದರು. ಯಾವ ವರ್ಗಕ್ಕೂ ಬೇಡವಾದಂತಹ ಅಸ್ಪೃಶ್ಯರನ್ನು ತಮ್ಮ ಕಡೆ ಸೆಳೆದು ಮತಾಂತರ ಮಾಡಿ ಕ್ರೈಸ್ತಧರ್ಮ ಪ್ರಸಾರ ಮಾಡುವ ಉದ್ದೇಶ ಈ ಕ್ರೈಸ್ತ ಮಿಷನರಿಗಳಿಗಿತ್ತು. ಈ ಕಾರಣದಿಂದಾಗಿ ಅತ್ಯಂತ ನಿಕೃಷ್ಟ ಸ್ಥಿತಿಯಲ್ಲಿ ಜೀವನ ಸಾಗಿಸುತ್ತಿದ್ದಂತಹ ಅಸ್ಪೃಶ್ಯರನ್ನು ತಮ್ಮ ಕಡೆ ಸೆಳೆಯಲು ತಮ್ಮ ಪ್ರಥಮ ಆದ್ಯತೆಯಲ್ಲಿ ಸೇವಾ ಮನೋಭಾವನೆಯಿಂದ ದಲಿತರಿಗೆ ಹತ್ತಿರವಾಗಲು ಮುಂದಾದರು. ಸನಾತನೀಯರು ಹಾಗೂ ಊಳಿಗಮಾನ್ಯಶಾಹಿಗಳಿಂದ ಶತಶತಮಾನಗಳಿಂದ ಸಾಮಾಜಿಕವಾಗಿ ಕನಿಷ್ಠ ಜೀವನ ನಡೆಸುತ್ತಿದ್ದ ಅಸ್ಪೃಶ್ಯ ಜನಾಂಗದವರಿಗೆ ಈ ಮಿಷನರಿಗಳು ಬಂದು ಪ್ರೀತಿಯ ಧಾರೆ ಸುರಿಸಿದರು. ದಲಿತರು ನಮ್ಮನ್ನು ಮುಟ್ಟಿ ಮಾತನಾಡಿಸುವವರು ನಮ್ಮ ದೇಶದವರಲ್ಲದಿದ್ದರೂ, ವಿದೇಶಿ ಜನ ಇದ್ದಾರೆಂದುಕೊಂಡು ಆಶ್ಚರ್ಯ ಮತ್ತು ಸಂತೋಷಪಟ್ಟರು. ಸಂಸ್ಥಾನದ ಕೆಲವು ಭಾಗದಲ್ಲಿ ವಾಸಿಸುತ್ತಿದ್ದ ಅಸ್ಪೃಶ್ಯರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕುಷ್ಠ ರೋಗದಿಂದ ಬಳಲುತ್ತಿದ್ದವರಾಗಿದ್ದರು. ಮೊದಲೇ ಭಾರತೀಯ ಸಮಾಜದಿಂದ ಅಸ್ಪೃಶ್ಯರೆಂಬ ಪಟ್ಟ ಕಟ್ಟಿಕೊಂಡೆ ಹುಟ್ಟಿದ ಇವರಿಗೆ ಮತ್ತೊಂದು ಈ ಕುಷ್ಠರೋಗ ಎಂಬ ಭೀಕರ ಅಸ್ಪೃಶ್ಯತೆ. ಈ ಎರಡರಿಂದಲೂ ಮನುಷ್ಯರಾಗಿದ್ದರೂ, ಕೀಳು ಪ್ರಾಣಿಗಳಿಗಿಂತಲೂ ಹೀನಾಯ ಬದುಕಿನ ಕರಾಳತನದಲ್ಲಿ ಬದುಕುತ್ತಿದ್ದವರ ಸೇವೆಗೆ ಕ್ರೈಸ್ತ ಮಿಷನರಿಗಳು ಮುಂದಾದವು. ತನ್ನ ಜನರಿಂದಲೇ ಮುಟ್ಟಲು ಯೋಗ್ಯರಲ್ಲರೆನಿಸಿಕೊಂಡಿದ್ದವರನ್ನು ಮುಟ್ಟಿ, ಶುಶ್ರೂಷೆ ಮಾಡಿ ಅವರಿಗೆ ಅವಶ್ಯಕವಾಗಿ

ಬೇಕಾದ ಮೂಲಭೂತ ಸೌಲಭ್ಯ ಹಾಗೂ ಔಷಧೋಪಚಾರವನ್ನು ಉಚಿತವಾಗಿ ನೀಡಿದರು. ಇವರ ಸೇವೆಯಿಂದ ಮನಸೋತ ದಲಿತರು ಯಾವುದೇ ಪ್ರಚೋದನೆಯಿಲ್ಲದೇಯೇ ಸಾವಿರಾರು ಸಂಖ್ಯೆಯಲ್ಲಿ ಕ್ರೈಸ್ತ ಧರ್ಮವನ್ನು ಸ್ವೀಕರಿಸಿದರು. ದಲಿತ ವರ್ಗದವರು ಈ ಸಂದರ್ಭದಲ್ಲಿ ಕ್ರೈಸ್ತ ಧರ್ಮ ಸ್ವೀಕರಿಸುವುದಕ್ಕೆ ಮತ್ತೊಂದು ಪ್ರಮುಖ ಕಾರಣವೆಂದರೆ ಅವರು ನೀಡಿದ ಉಚಿತ ಶಿಕ್ಷಣ. ನೂರಾರು ವರ್ಷಗಳಿಂದ ಶಿಕ್ಷಣದಿಂದ ವಂಚಿತರಾಗಿದ್ದ ದಲಿತವರ್ಗದವರಿಗೆ ಕ್ರೈಸ್ತ ಮಿಷನರಿಗಳು ಇಂಗ್ಲೀಷ್ ಮಾಧ್ಯಮದ ಮೂಲಕವೇ ಶಿಕ್ಷಣ ಕೊಡಲು ಮುಂದಾದವು. ಇವರ ಪ್ರಭಾವ ಈ ಭಾಗದ ದಲಿತವರ್ಗದಲ್ಲಿ ಮೈಸೂರು ಅರಸರು ಶಿಕ್ಷಣ ನೀಡಲು ಮುಂದಾಗುವುದಕ್ಕೆ ಮುಂಚೆಯೇ ನೂರಾರು ಅಸ್ಪೃಶ್ಯರು ಇಂಟರ್ ಮೀಡಿಯಟ್‌ವರೆಗೆ ಓದಿ, ಪ್ರಾಥಮಿಕ ಶಿಕ್ಷಕರ ವೃತ್ತಿಯನ್ನು ಅದೇ ಕ್ರೈಸ್ತ ಮಿಷನರಿಗಳಲ್ಲಿ ಆರಂಭಿಸಿದರು. ೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿಯೇ ಮಂಡ್ಯ ಜಿಲ್ಲೆಯ ಮಳವಳ್ಳಿಯ ದಲಿತಕೇರಿಯಲ್ಲಿ ೨೭ ಅಸ್ಪೃಶ್ಯರು ಶಿಕ್ಷಕ ವೃತ್ತಿಯನ್ನು ಯಶಸ್ವಿಯಾಗಿ ಪೂರೈಸಿ ನಿವೃತ್ತಿ ಜೀವನ ನಡೆಸುತ್ತಿದ್ದರು. ಆದರೆ ಇವರಾರೂ ಪದವಿ ಪಡೆದವರಾಗಿರಲಿಲ್ಲ. ಮೈಸೂರು ಸಂಸ್ಥಾನದಲ್ಲಿ ೧೯೨೫ರಲ್ಲಿ ಸೋಸಲೆ ಬಿ. ರಾಚಪ್ಪ ಅವರು ಪ್ರಥಮ ಬಾರಿಗೆ ಬಿ.ಎ. ಪಾಸ್ ಮಾಡಿದ ದಲಿತ ವಿದ್ಯಾರ್ಥಿಯಾಗಿದ್ದರು. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಬ್ರಾಹ್ಮಣರು ಕ್ರೈಸ್ತ ಮಿಷನರಿಗಳ ಉಚಿತ ಸೇವೆಗೆ ಮನಸೋತು ಕ್ರೈಸ್ತಮತ ಸ್ವೀಕರಿಸುತ್ತಿರುವ ಅಸ್ಪೃಶ್ಯರನ್ನು ಮನವೊಲಿಸಿ ಅವರನ್ನು ಹಿಂದೂಧರ್ಮದ ಒಂದು ಭಾಗವನ್ನಾಗಿಸಿಕೊಳ್ಳುವುದು ಸಹ ಬ್ರಾಹ್ಮಣರ ಕುತಂತ್ರವಾಗಿತ್ತು. ಆದರೆ ಬ್ರಾಹ್ಮಣೇತರರು ಮಾತ್ರ ಜಾತಿಯ ಹಿನ್ನೆಲೆಯನ್ನು ಕಾಪಾಡಿಕೊಂಡು ಬರುವುದರಲ್ಲಿಯೇ ಶ್ರಮವಹಿಸುತ್ತಿದ್ದರು.[೩]

ಮೈಸೂರು ಸಂಸ್ಥಾನದ ಬ್ರಾಹ್ಮಣರು ದಲಿತರಿಗೆ ಶಿಕ್ಷಣ ನೀಡಲು ಇನ್ನೊಂದು ಪ್ರಮುಖ ಕಾರಣವೆಂದರೆ ೧೯ನೆಯ ಶತಮಾನದ ಕೊನೆಯ ಭಾಗದಲ್ಲಿ ದಯಾನಂದ ಸರಸ್ವತಿ ಅವರು ಆರ್ಯ ಸಮಾಜದ ಮೂಲಕ ಶುದ್ಧ ಚಳವಳಿಯನ್ನು ಬಂಗಾಳ ಹಾಗೂ ಇತರ ಕಡೆಗಳಲ್ಲಿ ವಿಶೇಷ ಕಾರ್ಯಕ್ರಮವಾಗಿ ಹಮ್ಮಿಕೊಂಡಿದ್ದು ಮೂಲ ಕಾರಣವಾಗಿತ್ತು. ವಿದೇಶಿಯರ ಪ್ರಭಾವಕ್ಕೆ ಒಳಗಾಗಿ ಕ್ರೈಸ್ತ ಹಾಗೂ ಇಸ್ಲಾಂ ಧರ್ಮಗಳನ್ನು ಸ್ವೀಕರಿಸಿಕೊಂಡಿದ್ದ ಅಸ್ಪೃಶ್ಯ ಜಾತಿಯ ದಲಿತರನ್ನು ಶುದ್ಧೀಕರಿಸಿ ಹಿಂದೂ ಧರ್ಮಕ್ಕೆ ಕರೆದುಕೊಂಡು ಬರುವ ಕಾಯಕದಲ್ಲಿ ತೊಡಗಿದ್ದರು. ಆರ್ಯ ಸಮಾಜದವರ ಪ್ರಕಾರ ಮತಾಂತರ ಹೊಂದಿದವರನ್ನು ಮತ್ತೆ ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳುವುದೇ ಶುದ್ಧ ಚಳವಳಿಯ ಮುಖ್ಯ ಉದ್ದೇಶವಾಗಿತ್ತು. ಇದು ೨೦ನೆಯ ಶತಮಾನದಲ್ಲಿ ಮೈಸೂರು ಸಂಸ್ಥಾನದ ಬ್ರಾಹ್ಮಣರು, ಬ್ರಾಹ್ಮಣೇತರರು ರಾಜಕೀಯ ಪ್ರಭಾವದಿಂದಾಗಿ ಶತ ಶತಮಾನದಿಂದ ಅನುಸರಿಸಿಕೊಂಡು ಬಂದಿದ್ದು. ಅಧಿಕಾರದಿಂದ ವಂಚಿತರಾದಾಗ ಕ್ರೈಸ್ತರ ಉಚಿತ ಸೇವೆ ಹಾಗೂ ಮಾನವ ಪ್ರೀತಿಗೆ ಸೋತು ಕ್ರೈಸ್ತ ಮತ ಸ್ವೀಕಾರ ಮಾಡುವ ಅಸ್ಪೃಶ್ಯರನ್ನು ತಡೆದು ಮೈಸೂರಿನಲ್ಲಿ ದಯಾನಂದ ಸರಸ್ವತಿ ಮಾದರಿಯಲ್ಲಿ ಶುದ್ಧಿ ಚಳವಳಿ

ಮಾಡಲು ಮುಂದಾದರು.[೪] ಹಿಂದೂ ಧರ್ಮವನ್ನು ಈ ಮೂಲಕ ರಕ್ಷಿಸುವುದು ಒಂದು ಪ್ರಮುಖವಾದ ಅಜೆಂಡಾವನ್ನಾಗಿ ಮಾಡಿಕೊಂಡು ಶತಶತಮಾನಗಳಿಂದಲೂ ರಾಜನನ್ನು ಹೊಗಳಿ ಅಟ್ಟಕ್ಕೇರಿಸಿ ಅಪಾರ ಸಂಪತ್ತು ಅಧಿಕಾರ ಪಡೆದಿದ್ದವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಹಿಂದೂ ಧರ್ಮದ ಪಾಠ ಹೇಳಿ ಸಕಲವನ್ನು ಅವರಿಂದ ಪಡೆದರು. ಆ ಮೂಲಕ ತಮ್ಮ ತಂತ್ರಕ್ಕೆ ಸೋತ ನಾಲ್ವಡಿ ಅವರ ಮನಗೆದ್ದು ತಮ್ಮ ಜಾಣ ಬ್ರಾಹ್ಮಣ ಬುದ್ಧಿಯನ್ನು ಕಾಪಾಡಿಕೊಂಡರು. ವೈದಿಕಶಾಹಿ ವರ್ಗದವರು ನಾಲ್ವಡಿ ಕೃಷ್ಣರಾಜ ಒಡೆಯರ ಮನಗೆದ್ದು ದಲಿತರ ಶಿಕ್ಷಣಕ್ಕೆ ಮುಂದಾಗಿ ಅವರ ಸೇವೆಯೇ ದೇವರ ಸೇವೆ ಎಂಬಂತೆ ಮನಮುಟ್ಟುವ ಕಾರ್ಯಕ್ರಮಗಳನ್ನು ರೂಪಿಸಿದರು. ಇದರಲ್ಲಿ ಆರ್ಯ ಸಮಾಜದ ಹಲವಾರು ಸದಸ್ಯರು ಪಂಚಮರ ಸೇವೆ ಮಾಡಲು ಮುಂದಾದರು. ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯರ ಉದ್ಧಾರಕ್ಕೆ ಕ್ರೈಸ್ತ ಮಿಷನರಿಗಳು ತೆರೆದಿದ್ದ ಶಾಲೆಗಳ ಮಾದರಿಯಲ್ಲಿಯೇ ಇವರು ಮಹಾರಾಜರಿಂದ ಒಪ್ಪಿಗೆ ಪಡೆದು, ಅವರ ಮನವೊಲಿಸಿ ಆಯಾ ಕ್ರೈಸ್ತ ಶಿಕ್ಷಣ ಸಂಸ್ಥೆಗಳ ಹತ್ತಿರವೇ ಪಂಚಮರ ಶಾಲೆಗಳನ್ನು ತೆರೆದು ಉಚಿತ ಊಟ, ಬಟ್ಟೆ ಹಾಗೂ ಪುಸ್ತಕಗಳನ್ನು ನೀಡಿ ದಲಿತ ಸಮಾಜ ಸುಧಾರಣ ಕಾರ್ಯಕ್ಕೆ ಹಾಗೂ ಹಿಂದೂ ಧರ್ಮ ಉಳಿಸುವಿಕೆಗೆ ಮುಂದಾದರು. ಮತಾಂತರವನ್ನು ತಡೆದು ಧರ್ಮವನ್ನು ರಕ್ಷಿಸುವ ಸಲುವಾಗಿ ವೈದಿಕವರ್ಗ, ದಲಿತ ಸಮುದಾಯದವರು ಬೇರೆ ಧರ್ಮಕ್ಕೆ ಹೋಗದಂತೆ ಕ್ರೈಸ್ತ ಮಿಷನರಿಗಳ ರೀತಿಯಲ್ಲಿ ಸ್ವಲ್ಪಮಟ್ಟಿನ ಸೌಲಭ್ಯ ನೀಡಿ ಅಸ್ಪೃಶ್ಯತಾ ನಿವಾರಣೆಯ ಮಾತುಗಳನ್ನಾಡಿದರು. ಮನಪೂರ್ವಕವಾಗಿ ಯಾವುದೇ ಕಾರ್ಯ ಕೈಗೊಳ್ಳದೇ ಧರ್ಮಕೇಂದ್ರಿತವಾಗಿ ಕೈಗೊಳ್ಳಲು ಮುಂದಾದುದನ್ನು ನೋಡಬಹುದು.

೫.೪. ಬ್ರಾಹ್ಮಣೇತರರನ್ನು ಗುರಿಯಾಗಿಸಿಕೊಂಡು ಬ್ರಾಹ್ಮಣರು ಕೈಗೊಂಡ ಅಸ್ಪೃಶ್ಯತಾ ನಿವಾರಣಾ ಕ್ರಮಗಳು

೧೮೮೧ರಲ್ಲಿ ಮೈಸೂರು ವಂಶಸ್ಥರಿಗೆ ಅಧಿಕಾರವನ್ನು ಹಸ್ತಾಂತರಿಸಲಾಯಿತು. ೧೦ನೆಯ ಚಾಮರಾಜ ಒಡೆಯರು ಅಧಿಕಾರ ವಹಿಸಿಕೊಂಡರು. ಅವರು ಸಂಸ್ಥಾನದ ದಿವಾನರನ್ನಾಗಿ ಮದ್ರಾಸ್ ಮೂಲದ ಬ್ರಾಹ್ಮಣರನ್ನು ನೇಮಿಸಿಕೊಂಡರು. ಇದು ಮೈಸೂರು ಬ್ರಾಹ್ಮಣರಿಗೆ ಸಹಿಸಲಾರದಾಗಿತ್ತು. ಮೈಸೂರು ಅರಸರಿಗೆ ಮೈಸೂರು ಬ್ರಾಹ್ಮಣರನ್ನೇ ಸಂಸ್ಥಾನಕ್ಕೆ ದಿವಾನರನ್ನಾಗಿ ನೇಮಿಸಬೇಕೆಂದು ಮೈಸೂರಿನ ಬ್ರಾಹ್ಮಣರು ಮನವಿ ಪತ್ರ ನೀಡಿದರು. ಇದೊಂದು ರೀತಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಮೀಸಲಾತಿ ಉಗಮಕ್ಕೆ ಕಾರಣವಾಯಿತು ಎಂದರೆ ತಪ್ಪಾಗದು. ಸೌಮ್ಯ ಸ್ವಭಾವದ ಜಾತಿಯ ಗುಂಪಿಗೆ ಸೇರಿದ್ದ, ಶಿಕ್ಷಣವಂತರೂ ದೂರದೃಷ್ಟಿ ಹೊಂದಿದವರೂ ಆಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ಬ್ರಾಹ್ಮಣರ ಮನವಿ ಪತ್ರಕ್ಕೆ ಸ್ಪಂದಿಸಿ ಮೈಸೂರು ಬ್ರಾಹ್ಮಣ ಸಮುದಾಯಕ್ಕೆ ಸೇರಿದ್ದ ಸರ್.ಎಂ. ವಿಶ್ವೇಶ್ವರಯ್ಯ ಅವರನ್ನು ಮೈಸೂರು ದಿವಾನರನ್ನಾಗಿ ನೇಮಿಸಿಕೊಂಡರು. ಈ ಮೀಸಲಾತಿಯ ಕಲ್ಪನೆ ಭಾರತದಲ್ಲಿ ಅದರಲ್ಲಿಯೂ ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣರೇ ಹುಟ್ಟು ಹಾಕಿದ್ದು. ಸಂಸ್ಥಾನದಲ್ಲಿ ಇದು

ಬ್ರಾಹ್ಮಣರಿಗೆ ಉರುಳಾಗುತ್ತದೆಂದು ಸ್ವತಃ ಬ್ರಾಹ್ಮಣರ್ಯಾರೂ ಊಹಿಸಿರಲಿಲ್ಲ. ಏಕೆಂದರೆ ಇದೇ ಮೀಸಲಾತಿ ಅನ್ವಯ ಸಂಸ್ಥಾನದ ಪ್ರಬಲ ಕೋಮಿನ ಬ್ರಾಹ್ಮಣೇತರ ವರ್ಗವಾದ ಒಕ್ಕಲಿಗರು, ಲಿಂಗಾಯಿತರು, ಮುಸ್ಲಿಂಮರು ಸಂಘಗಳನ್ನು ಸ್ಥಾಪಿಸಿಕೊಂಡು ಸೌಲಭ್ಯಗಳನ್ನು ಕೇಳುವುದರ ಜೊತೆಗೆ ಬ್ರಾಹ್ಮಣೇತರರನ್ನೇ ದಿವಾನರನ್ನಾಗಿ ಮಾಡಿ ಎಂಬ ಪ್ರಬಲ ಕಾರಣವನ್ನು ಮುಂದಿಟ್ಟುಕೊಂಡು ಇದಕ್ಕೆ ಪೂರಕವಾಗಿ ಅನೇಕ ಶೈಕ್ಷಣಿಕ, ರಾಜಕೀಯ ಕ್ಷೇತ್ರಗಳಲ್ಲಿ ಮೀಸಲಾತಿಗಾಗಿ ಚಳವಳಿ ಕೈಗೊಂಡರು.[೫] ಈ ಚಳವಳಿಯೇ ಆಧುನಿಕ ಮೈಸೂರು ಚರಿತ್ರೆಯಲ್ಲಿ ಬ್ರಾಹ್ಮಣೇತರ ಚಳವಳಿ ಎಂದು ದಾಖಲಾಗಿದೆ. ಈ ಚಳವಳಿಯ ಆಶಯವನ್ನು ಗಂಭೀರವಾಗಿ ಪರಿಗಣಿಸಿದ ನಾಲ್ವಡಿ ಕೃಷ್ಣರಾಜರು ಬೇರೆ ಮಾರ್ಗವಿಲ್ಲದೆ ಬ್ರಾಹ್ಮಣೇತರರಿಗೆ ದಿವಾನ್ ಸ್ಥಾನ ನೀಡಲು ಮುಂದಾದರು.[೬] ಇದರ ಫಲವಾಗಿ ಸಂಸ್ಥಾನದ ಪ್ರಥಮ ಬ್ರಾಹ್ಮಣೇತರ ದಿವಾನರಾಗಿ ಎಂ. ಕಾಂತರಾಜ ಅರಸು ಅವರು ನೇಮಕವಾದರು. ದಿವಾನ ಪದವಿಯನ್ನು ಹಾಗೂ ರಾಜ್ಯದ ಸಮಗ್ರ ಆಳ್ವಿಕೆಯನ್ನು ತಲತಲಾಂತರದಿಂದಲೂ ಅಧಿಕಾರವನ್ನು ಕೈಯಲ್ಲಿರಿಸಿಕೊಂಡಿದ್ದ ಬ್ರಾಹ್ಮಣರಿಗೆ ಸಹಿಸಲಾರದಾಗಿತ್ತು.

ಆದರೆ ಶತ ಶತಮಾನಗಳಿಂದಲೂ ರಾಜಾಶ್ರಯ ಪಡೆದಿದ್ದ ಹಾಗೂ ಇಂದಿಗೂ ಪಡೆಯಲು ಹಂಬಲಿಸುತ್ತಿದ್ದ ಮೈಸೂರು ಬ್ರಾಹ್ಮಣರಿಗೆ ಸಂಸ್ಥಾನದಲ್ಲಿನ ಪ್ರಬಲ ಬ್ರಾಹ್ಮಣೇತರರ ವಿರುದ್ಧ ಹೋರಾಡಿ ತಮ್ಮ ಕುತಂತ್ರ ಬುದ್ಧಿ ಶಕ್ತಿಯಿಂದ ದಿಗ್ವಿಜಯ ಸಾಧಿಸಿ ಪುನಃ ದಿವಾನರಾಗುವುದು ಕಷ್ಟದ ಮಾತಾಗಿತ್ತು. ಇದಕ್ಕಾಗಿ ಅವರು ಕೈಕಟ್ಟಿ ಕೂಡುವ ಕೆಲಸಕ್ಕೆ ಹೋಗದೆ ತಾವು ಶತ ಶತಮಾನಗಳಿಂದ ಶೂದ್ರ ಹಾಗೂ ದಲಿತರಿಗೆ ಹೇಳಿದ್ದು ಒಂದು ಊರಿನಲ್ಲಿ ಒಬ್ಬ ಬಡಬ್ರಾಹ್ಮಣನಿದ್ದ, ಆದರೆ ಅವನು ಬುದ್ಧಿಯಲ್ಲಿ ಚಾಣಾಕ್ಷನಾಗಿದ್ದ ಎಂಬ ಮಾತಿನಂತೆ ತಮ್ಮ ಚಾಣಾಕ್ಷ ಬುದ್ಧಿಯನ್ನು ತೋರಿಸಲು ಮುಂದಾದರು. ಅಂದರೆ ಪ್ರಬಲ ಬ್ರಾಹ್ಮಣೇತರ ಕೋಮಿನವರ ವಿರುದ್ಧ ಅಧಿಕಾರಕ್ಕಾಗಿ ಹೋರಾಟ ಮಾಡಲು ಅಥವಾ ಧೈರ್ಯವಾಗಿ ನಿಲ್ಲಲು ದಡ್ಡನಿಗೆ ದೊಣ್ಣೆ ಪೆಟ್ಟು ಜಾಣನಿಗೆ ಮಾತಿನ ಪೆಟ್ಟು ಎಂಬಂತಹ ನೀತಿ ಪ್ರದರ್ಶಿಸಲು ಸನಾತನೀಯರು ಮುಂದಾಗಿ ಗೆದ್ದರು. ಈ ಗೆಲುವಿಗೆ ಅವರು ಮೊದಲು ರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಮನ ಗೆದ್ದು ಸಂಸ್ಥಾನದಲ್ಲಿ ಪ್ರಮುಖ ಹುದ್ದೆಗಳನ್ನು ಅಲಂಕರಿಸಲು ಆಯ್ಕೆ ಮಾಡಿಕೊಂಡ ಕ್ಷೇತ್ರವೇ ಪಂಚಮರ ಶಿಕ್ಷಣದ ಅಭಿವೃದ್ಧಿಗೆ ತಮ್ಮನ್ನು ತೊಡಗಿಸಿಕೊಳ್ಳಲು ಮುಂದಾದ್ದು.[೭]

ಒಂದರ್ಥದಲ್ಲಿ ಸಾಮಾಜಿಕ ಅಂತಃಕರಣ ಹೊಂದಿದ್ದ ರಾಮಕೃಷ್ಣ ಪರಮಹಂಸರು ವಿವೇಕಾನಂದ, ಶಾಹುಮಹಾರಾಜ, ಸಯ್ಯಾಜಿರಾವ್ ಮುಂತಾದವರ ಸಮಾಜಮುಖಿ ಚಿಂತನೆಗಳಿಂದ ಪ್ರಭಾವಿತರಾಗಿದ್ದ ನಾಲ್ವಡಿ ಅವರಿಗೆ ಅಸ್ಪೃಶ್ಯರ ಪರವಾಗಿ ಕೆಲಸ ಮಾಡಬೇಕೆಂದು ಮನಸ್ಸು ಹಾತೊರೆಯುತ್ತಿತ್ತು. ಈ ಕಾರ್ಯಕ್ಕೆ ಅಡ್ಡಿಯಾಗಿದ್ದ ಇದೇ ಬ್ರಾಹ್ಮಣರ ಈ ನಿರ್ಧಾರ ನಾಲ್ವಡಿ ಅವರಿಗೆ ವರವಾಗಿ ಸಂದಿತು.

ಶತ ಶತಮಾನಗಳಿಂದ ಮುಟ್ಟಲು ಯೋಗ್ಯರಲ್ಲವೆಂದು, ಪುರೋಹಿತರೇ ಊರಿನ ಅಮಂಗಲ ದಿಕ್ಕಿರುವ ದಕ್ಷಿಣದ ಕಡೆಗೆ ಇಟ್ಟಿದಂತಹ ಜನಾಂಗದವರನ್ನು ತಾವೇ ಮುಟ್ಟಿ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿ ಶತ ಶತಮಾನದ ಶೋಷಣೆಯಿಂದ ಅವರ ಮೂಕ ಮಾತಿನ ಶಾಪವನ್ನು ಈ ಮೂಲಕ ಕಡಿಮೆ ಮಾಡಿಕೊಳ್ಳಲು ಮುಂದಾದರೆಂದು ಹೇಳಿಕೊಳ್ಳುವುದು ಒಂದಾದರೆ, ಅರಸರಿಗೆ ಹತ್ತಿರವಾಗಿ ಪಂಚಮರಿಗೆ ಶಿಕ್ಷಣ ನೀಡಿ ನಿಮ್ಮ ಘನತೆಯನ್ನು ದೇಶ ವಿದೇಶಗಳಲ್ಲಿ ಪ್ರಖ್ಯಾತಿಗೊಳಿಸುತ್ತೇವೆಂದು ಹೇಳಿ ಪ್ರಮುಖ ಹುದ್ದೆಗಳಲ್ಲಿ ತಮ್ಮ ಚಾಣಾಕ್ಷ ಬುದ್ಧಿಯಿಂದ ಅಲಂಕರಿಸುವುದಾಗಿತ್ತು.[೭]

ಒಟ್ಟಾರೆಯಾಗಿ ಬ್ರಾಹ್ಮಣೇತರರ ಜೊತೆ ಗುರುತಿಸಿಕೊಂಡಿದ್ದ ದಲಿತ ವರ್ಗವನ್ನು ತಮ್ಮ ಕಡೆ ಸೆಳೆಯುವುದು ಮತ್ತು ಬ್ರಾಹ್ಮಣೇತರರ ಪ್ರಭಾವವನ್ನು ಕಡಿಮೆ ಮಾಡುವ ಸಲುವಾಗಿ ಪುರೋಹಿತಶಾಹಿ ವರ್ಗ ಪಂಚಮರಿಗೆ ವಿವಿಧ ರೀತಿಯ ಸವಲತ್ತುಗಳನ್ನು ನೀಡಲು ಮುಂದಾಯಿತು.

೩.೫. ಅಸ್ಪೃಶ್ಯತಾ ನಿವಾರಣೆಯಲ್ಲಿ ಪ್ರಮುಖ ದಲಿತೇತರರ ಮಾಹಿತಿ ಹಾಗೂ ವಿಶ್ಲೇಷಣೆ

ಶತಶತಮಾನಗಳಿಂದ ಭಾರತೀಯ ಸಮಾಜದಲ್ಲಿ ರೂಢಿಯಲ್ಲಿರುವ ಅಸ್ಪೃಶ್ಯತಾಚರಣೆ ಎಂಬ ಭೀಕರ ದೌರ್ಜನ್ಯ ಜನನಾಯಕರ ಮೇಲೆ ಅನೇಕ ಪರಿಣಾಮವನ್ನು ಬೀರಿತು. ಹೀಗಾಗಿ ನಿಮ್ನ ಜಾತಿಗಳ ಶೋಷಣಮುಕ್ತವಾದ ಬಾಳಿಗೆ ಬೆಳಕಾಗಿ, ಹಲವರು ಜಾತಿರಹಿತ ಸಮಾಜದ ಏಳಿಗೆಗಾಗಿ ಶ್ರಮಿಸಿದರು. ಅವರುಗಳಲ್ಲಿ ಆರ್. ಗೋಪಾಲಸ್ವಾಮಿ ಅಯ್ಯರ್. ತಗಡೂರು ರಾಮಚಂದ್ರರಾವ್, ಸಿ.ಆರ್. ರೆಡ್ಡಿ, ತಲಕಾಡು ರಂಗೇಗೌಡ, ವರದರಾಜ್ ಐಯ್ಯಂಗಾರ್, ಹೆಚ್.ಸಿ. ದಾಸಪ್ಪ, ಯಶೋಧರ ದಾಸಪ್ಪ, ಗೋವಿಂದಾಚಾರ್ಯ, ಕೊಂಗಾಡಿಯಪ್ಪ ಇನ್ನೂ ಹಲವಾರು ನಾಯಕರು ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣೆಗಾಗಿ ಶ್ರಮಿಸಿದರು.

ಕೆಲವು ಪ್ರಜ್ಞಾವಂತ ಬ್ರಾಹ್ಮಣೇತರರು ಹಾಗೂ ಬ್ರಾಹ್ಮಣರು ಮೈಸೂರು ಸಂಸ್ಥಾನದಲ್ಲಿ ಗಾಂಧೀಯವರ ಕಟ್ಟಾ ಅನುಯಾಯಿಗಳಾಗಿದ್ದು, ಗಾಂಧೀಜಿ ತಮ್ಮ ರಚನಾತ್ಮಕ ಕಾರ್ಯಗಳಲ್ಲಿ ಒಂದಾದ ಅಸ್ಪೃಶ್ಯತಾ ನಿವಾರಣಾ, ದಲಿತಾಭಿವೃದ್ಧಿಗೆ ಕರೆ ನೀಡಿದ್ದರಿಂದ ಗಾಂಧೀಜಿಯ ಅನುಯಾಯಿಗಳು ಈ ಕಾರ್ಯಕ್ಕೆ ಕೈ ಹಾಕಿದರು. ಇನ್ನೂ ಕೆಲವು ಬ್ರಾಹ್ಮಣ ಸಮುದಾಯದ ನಾಯಕರು ಕ್ರೈಸ್ತ ಮಿಷನರಿಗಳಿಂದ ಆಗುತ್ತಿದ್ದಂತಹ ದಲಿತರ ಮತಾಂತರವನ್ನು ತಡೆಯುವ ಉದ್ದೇಶದಿಂದ ಕ್ರೈಸ್ತ ಮಿಶನರಿಗಳು ನೀಡುತ್ತಿದ್ದಂತಹ ಸೌಲಭ್ಯಗಳನ್ನು ಒಲ್ಲದ ಮನಸ್ಸಿನಿಂದ ನೀಡಲು ಮುಂದಾದರು. ಇವರ ಮುಖ್ಯ ಉದ್ದೇಶ ಹಿಂದೂಧರ್ಮವನ್ನು ರಕ್ಷಿಸುವುದು ಹಾಗೂ ದಲಿತರು ಮತಾಂತರವನ್ನು ಹೊಂದದಂತೆ ಮಾಡುವುದಕ್ಕೋಸ್ಕರ ದಲಿತರಿಗೆ ಶಿಕ್ಷಣ, ಅಸ್ಪೃಶ್ಯತಾ ನಿವಾರಣೆಯನ್ನು ಮಾಡಲು ಮುಂದಾದರು. ಅಂತು ಇಂತು ಕುಂತಿ ಮಕ್ಕಳಿಗೆ ರಾಜ್ಯ ದೊರೆಯಿತು ಎಂಬ ನಾಣ್ಣುಡಿಯಂತೆ ಉದ್ದೇಶ ಯಾವುದೇ ಇರಲಿ ದಲಿತರಿಗೆ ವಿದ್ಯೆ ನೀಡಲು ಮುಂದಾದುದು ದಲಿತರು ಜಾಗೃತಿಗೊಳ್ಳಲು ಸಹಕಾರಿಯಾಯಿತು. ಮೈಸೂರು

ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣೆಗೆ ದುಡಿದ ಕೆಲವು ನಾಯಕರು ಹಿಂದೂಧರ್ಮದ ರಕ್ಷಣೆ, ಮತಾಂತರ ತಡೆಯುವ ಉದ್ದೇಶದಿಂದ ದಲಿತರ ಅಭಿವೃದ್ಧಿ ಕಾರ್ಯ ಮಾಡಿದರು. ಇನ್ನು ಕೆಲವು ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ನಿಸ್ವಾರ್ಥವಾಗಿ ಯಾವುದೇ ಆಸೆ ಆಕಾಂಕ್ಷೆಗಳಿಲ್ಲದೆ ನಿವಾರಣಾ ಕಾರ್ಯವನ್ನು ಕೈಗೊಂಡಿರುವುದನ್ನು ಕಾಣಬಹುದು. ಪ್ರಸ್ತುತ ಅಧ್ಯಯನದಲ್ಲಿ ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣೆಗಾಗಿ ದುಡಿದ ಬ್ರಾಹ್ಮಣೇತರ ಜೀವನ, ಸಮಾಜ ಸುಧಾರಣಾ ಕಾರ್ಯಗಳನ್ನು ವಿಸ್ತೃತವಾಗಿ ಚರ್ಚಿಸಲಾಗಿದೆ.

೩.೬. ದಲಿತೋದ್ಧಾರಕ ಗೋಪಾಲಸ್ವಾಮಿ ಅಯ್ಯರ್

ಮೈಸೂರು ಸಂಸ್ಥಾನದಲ್ಲಿ ದಲಿತೋದ್ಧಾರಕ ಚಟುವಟಿಕೆಗಳು ಸಾಕಾರಗೊಳ್ಳಲು ನಿಜವಾದ ಪ್ರೇರಣೆ ದೊರೆತದ್ದು ಸ್ವಾಮಿ ವಿವೇಕಾನಂದರಿಂದ. ರಾಮಕೃಷ್ಣ ಪರಮಹಂಸರ ಶಿಷ್ಯಂದಿರಲ್ಲಿ ಒಬ್ಬರಾಗಿದ್ದ ಮಹಾರಾಜ ಚಾಮರಾಜ ಒಡೆಯರ್ ಹಾಗೂ ಸ್ವಾಮಿ ವಿವೇಕಾನಂದರ ನಡುವೆ ನಿಕಟ ಬಾಂಧವ್ಯವಿತ್ತು. ೧೮೯೧ರ ರಿಂದ ಶೋಷಿತ ಸಮುದಾಯಗಳ ಅಭಿವೃದ್ಧಿಗೆ ಪೂರಕವಾಗಿ ಜನ ಜಾಗೃತಿ ಮೂಡಿಸಲು ವಿವೇಕಾನಂದರು ಭಾರತದಾದ್ಯಂತ ಅಭಿಯಾನ ಆರಂಭಿಸಿದ್ದರು. ಚಾಮರಾಜ ಒಡೆಯರ್ ಅವರಿಗೆ ಪಾತ್ರ ಮುಖೇನ ದಲಿತೋದ್ಧಾರಕ ಕಾರ್ಯಗಳನ್ನು ಕೈಗೊಳ್ಳುವಂತೆ ತಿಳಿಸಿದ್ದರು. ವಿವೇಕಾನಂದರ ಮಾತುಗಳನ್ನು ಚಾಮರಾಜ ಒಡೆಯರ ದೀಕ್ಷಾ ಮಂತ್ರವಾಗಿ ಸ್ವೀಕರಿಸಿದ್ದರು. ಅನೇಕ ದಲಿತಪರ ಕಾರ್ಯಗಳನ್ನು ಕೈಗೊಂಡರು. ಹೀಗೆ ಚಾಮರಾಜ ಒಡೆಯರ್ ಅವರು ದಲಿತರ ಅಭಿವೃದ್ಧಿಗಾಗಿ ಪ್ರಾರಂಭಿಸಿದ ಕಾರ್ಯಕ್ರಮಗಳು ನಾಲ್ವಡಿ ಕೃಷ್ಣರಾಜ ಒಡೆಯರ್ ಆಡಳಿತಾವಧಿಯಲ್ಲಿ ಮತ್ತಷ್ಟು ಗಟ್ಟಿಗೊಂಡಿದ್ದವು. ಇಂಥ ಯೋಜನೆಗಳನ್ನು ಕಾಯಾ-ವಾಚಾ-ಮನಸಾ ಸಾಕಾರಗೊಳಿಸುವ ದಿಸೆಯಲ್ಲಿ ಹಗಲಿರುಳು ದುಡಿದವರು. ಬ್ರಾಹ್ಮಣ ಸಮುದಾಯದ ಆರ್. ಗೋಪಾಲಸ್ವಾಮಿ ಅಯ್ಯರ್.[೮] ಹಿಂದಿನ ಮದ್ರಾಸ್ ಪ್ರಾಂತ್ಯದ ತಂಜಾವೂರು ಜಿಲ್ಲೆಯಲ್ಲಿ ಕುಂಭ ಕೋಣಂಗೆ ಸಮೀಪದ ಗಣಪತಿ ಅಗ್ರಹಾರದಲ್ಲಿ ರಾಮಸ್ವಾಮಿ ಐಯ್ಯರ್ ಅವರ ಪುತ್ರರಾಗಿ ೨೨.೬.೧೮೮೭ರಲ್ಲಿ ಗೋಪಾಲಸ್ವಾಮಿ ಅಯ್ಯರ್ ಅವರ ಜನನವಾಯಿತು. ೧೯ನೇ ಶತಮಾನದ ಅಂತ್ಯ ಭಾಗದಲ್ಲಿ ಮದ್ರಾಸ್ ಪ್ರಾಂತ್ಯಬಿಟ್ಟು ಮೈಸೂರು ಸಂಸ್ಥಾನಕ್ಕೆ ವಲಸೆ ಬಂದರು. ಮೈಸೂರಿನ ಹೈಕೋರ್ಟ್‌ನಲ್ಲಿ ರಾಮಸ್ವಾಮಿ ಐಯ್ಯರ್ ಅವರು ಸರ್ಕಾರಿ ಪ್ಲೀಕರ್ ಆಗಿ ವೃತ್ತಿನಿರತರಾಗಿದ್ದರು.[೯] ಆರ್ಥಿಕವಾಗಿ ಸ್ಥಿತಿವಂತರಾಗಿದ್ದ ಅವರಿಗೆ, ಮಗ ಉನ್ನತ ವ್ಯಾಸಂಗ ಮಾಡಬೇಕೆನ್ನುವ ಇಚ್ಛೆಯಿತ್ತು. ಆದರೆ, ಅಯ್ಯರ್ ಅವರು ಆಯ್ಕೆ ಮಾಡಿಕೊಂಡಿದ್ದು ದಲಿತೋದ್ಧಾರವನ್ನು, ಗೋಪಾಲಸ್ವಾಮಿ ಅಯ್ಯರ್ ತಮ್ಮ ಜೀವನವನ್ನು ಪಂಚಮರಿಗೆ ಶೈಕ್ಷಣಿಕ ಸವಲತ್ತುಗಳನ್ನು ದೊರಕಿಸಿಕೊಡುವುದಕ್ಕಾಗಿಯೇ ಮುಡುಪಾಗಿಟ್ಟಿದ್ದರು. ಪಂಚಮರನ್ನು ಶಾಲೆಗೆ ಸೇರಿಸಲು ಅವರಿರುವ ಸ್ಥಳಗಳಿಗೆ ಸೈಕಲ್‌ನಲ್ಲಿ ಸುತ್ತಿ ಅವರಲ್ಲಿ ಶೈಕ್ಷಣಿಕ ಪ್ರಜ್ಞೆಯನ್ನು ಬೆಳೆಸಲು ಮುಂದಾಗುತ್ತಿದ್ದರು. ಅಯ್ಯರ್ ಅವರು ೧೮.೧೦.೧೯೨೪ರಲ್ಲಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಕಡ್ಡಾಯ ಶಿಕ್ಷಣದ ಬಗ್ಗೆ ಮಾತನಾಡಿದರು. ಕಡ್ಡಾಯ ಶಿಕ್ಷಣದ ವ್ಯವಸ್ಥೆಯನ್ನು ಭರತಖಂಡದಲ್ಲಿ

ಜಾರಿಗೆ ತಂದ ಸಂಸ್ಥಾನಗಳಲ್ಲಿ ಮೈಸೂರು ಸಂಸ್ಥಾನ ಎರಡನೆಯದು.[೧೦] ದಲಿತ ಮಕ್ಕಳಿಗೆ ಪುಸ್ತಕ, ಊಟವನ್ನು ಕೊಟ್ಟು ಪ್ರೋತ್ಸಾಹಿಸುತ್ತಿದ್ದರು. ಅಸ್ಪೃಶ್ಯರಲ್ಲಿ ವಿಶ್ವಾಸವನ್ನು ತುಂಬಿ ನೀವು ಕೆಳಜಾತಿಯವರು ಎಂದು ಸಂಕುಚಿತ ಮನೋಭಾವನೆಯಿಂದ ಕೀಳರಿಮೆ ಬೆಳೆಸಿಕೊಳ್ಳಬೇಡಿ. ಧೈರ್ಯವಾಗಿ ತಲೆಎತ್ತಿ ಬಾಳಿರಿ. ಇತರರಂತೆ ನೀವು ಮನುಷ್ಯರು. ನಿಮಗೂ ಸಮಾನತೆ ಇದೆ. ನೀವು ವಿದ್ಯಾವಂತರಾದರೆ ನಿಮಗೆ ಅಂಟಿರುವ ಅಸ್ಪೃಶ್ಯರೆಂಬ ಕಳಂಕ ತೊಲಗುತ್ತದೆಂದು ಮಾನಸಿಕ ಧೈರ್ಯ ತುಂಬುತ್ತಿದ್ದರು.[೧೧] ಆದಿ ಕರ್ನಾಟಕ ಸಂಘವನ್ನು ೧೯೨೦ರಲ್ಲಿ ನೋಂದಾಯಿಸಿ ಗೋಪಾಲಸ್ವಾಮಿ ಅಯ್ಯರ್ ಅಧ್ಯಕ್ಷರಾದರು. ಈ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾಗಿ ದಲಿತೇತರರನ್ನು ನೇಮಿಸಲಾಯಿತು. ಈ ಆದಿ ಕರ್ನಾಟಕ ಸಂಘದ ಧ್ಯೇಯೋದ್ದೇಶವೇನೆಂದರೆ ದಲಿತ ವಿದ್ಯಾರ್ಥಿಗಳನ್ನು ಶೈಕ್ಷಣಿಕ ಸಂಸ್ಥೆಗಳಿಗೆ ಸೇರಿಸಿಕೊಳ್ಳಲು ಒತ್ತಾಯಿಸುವುದು. ಕೆರೆ, ಬಾವಿ ನೀರನ್ನು ಮುಟ್ಟುವುದು ಮತ್ತು ದೇವಸ್ಥಾನಗಳ ಪ್ರವೇಶಕ್ಕಾಗಿ ಚಳವಳಿಯವನ್ನು ಮಾಡುವುದು. ಇವರು ೧೯೨೦ರಲ್ಲಿ ಮಹಾರಾಜರಿಗೆ ಮನವಿ ಸಲ್ಲಿಸಿ 'ರಾಜ್ಯದ ಹನ್ನೊಂದು ಲಕ್ಷ ಪಂಚಮರ ಪರವಾಗಿ ಅವರು ಮೂಲ ನಿವಾಸಿಗಳಾಗಿದ್ದು, ನಮ್ಮದೇ ಆದ ನಾಗರಿಕತೆ, ತತ್ವ ಮತ್ತು ಚರಿತ್ರೆಯನ್ನು ಹೊಂದಿದ್ದು, ನ್ಯಾಯಯುತ ಜೀವನದ ಅನುಭವ ಪಡೆದಿದ್ದೇವೆ. ನಮ್ಮ ಅತ್ಯಂತ ಪ್ರಮುಖ ಬೇಡಿಕೆಯೆಂದರೆ ಶಿಕ್ಷಣ ಮತ್ತು ಸಾರ್ವತ್ರಿಕ ಶಿಕ್ಷಣ ನೀಡಬೇಕು. ಒಂದು ತಾಲ್ಲೂಕಿಗೆ ಒಂದು ವಿಶೇಷ ಕೃಷಿ ಯೋಜನೆಯನ್ನು ನೀಡಿ, ಇದರ ಮುಖಾಂತರ ಪ್ರತಿಯೊಬ್ಬ ದಲಿತನಿಗೂ ಕನಿಷ್ಠ ೫ ಎಕರೆ ಒಣಭೂಮಿ ೧ ಎಕರೆ ನೀರಾವರಿ ಭೂಮಿ ಮಂಜೂರು ಮಾಡಿಕೊಡಿ, ಕೃಷಿ ಚಟುವಟಿಕೆಗೆ ಮುಂಗಡ ಧನಸಹಾಯ ಮಾಡಿ ಎಂದು ಮನವಿ ಸಲ್ಲಿಸಿದ್ದರು.[೧೨] ಗೋಪಾಲಸ್ವಾಮಿ ಅಯ್ಯರ್ ಅವರು ದಲಿತ ವಿದ್ಯಾರ್ಥಿಗಳಲ್ಲಿ ಶಿಸ್ತು ಬೆಳೆಸುವುದು ಸೇರಿದಂತೆ ಯಾರಿಗೂ ಕಮ್ಮಿ ಇಲ್ಲದಂತೆ ಓದಬೇಕು ಎಂದು ಹೇಳುತ್ತಿದ್ದರು. ದಲಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಡಲು ನಿರಾಕರಿಸಿದ ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಎನ್.ಎಸ್. ಸುಬ್ಬರಾವ್ ಅವರನ್ನು ಅವರ ಮನೆಗೆ ಹೋಗಿ ಗೋಪಾಲಸ್ವಾಮಿ ಅಯ್ಯರ್ ಅವರು ಕೇಳಿಕೊಳ್ಳುತ್ತಾರೆ. ಆಗ ಕುಲಪತಿಗಳು ಬಹಳ ಗರ್ವದಿಂದ ವರ್ತಿಸಿದ್ದರೆಂದು ಮಹಾರಾಜರಿಗೆ ದೂರು ಸಲ್ಲಿಸಿದಾಗ ಮಹಾರಾಜರು ಆದೇಶ ಹೊರಡಿಸಿ ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮತ್ತು ಪ್ರವೇಶ ಕೊಡಬೇಕೆಂದು ಆಜ್ಞೆ ಹೊರಡಿಸುತ್ತಾರೆ. ಇದರಿಂದ ಅಯ್ಯರ್ ದಲಿತ ವಿದ್ಯಾರ್ಥಿಗಳೊಡನೆ ಸಂತಸಪಡುತ್ತಾರೆ.[೧೩] ಹುಟ್ಟಿದ ಮನೆಯಲ್ಲಿಯೇ ಅಸ್ಪೃಶ್ಯನಾಗಿ ಬದುಕುತ್ತಿದ್ದ ಗೋಪಾಲಸ್ವಾಮಿ ಅಯ್ಯರ್‌ರವರ ದಲಿತ ಪರ ಕಾಳಜಿಯನ್ನು ಅರ್ಥಮಾಡಿಕೊಂಡ ಮಹಾರಾಜರು ಮೈಸೂರು ಸಂಸ್ಥಾನದ ಯಾವುದೇ ಮೂಲೆಯಲ್ಲಿ ಸಂಚರಿಸಲು ಅಯ್ಯರ್ ಅವರಿಗೆ ಎರಡನೇ ದರ್ಜೆ ರೈಲ್ವೆಯ ಉಚಿತ ಪಾಸ್ ನೀಡಿದ್ದರು. ಇದರ ಜತೆ ರೈಲಿನಲ್ಲಿ ತಮ್ಮ ಸೈಕಲ್ ತೆಗೆದುಕೊಂಡು ಹೋಗಲು ಅವಕಾಶ ಕಲ್ಪಿಸಲಾಗಿತ್ತು. ಹೀಗೆ ರೈಲಿನಲ್ಲಿ ಮೈಸೂರು ಸಂಸ್ಥಾನದ ಎಲ್ಲಾ ಜಿಲ್ಲೆಗಳಿಗೆ ಭೇಟಿ ನೀಡುತ್ತಿದ್ದ ಅವರು, ಕನಿಷ್ಠ ಒಂದು ವಾರಗಳ ಕಾಲ ತಾವು ಭೇಟಿ

ಮಾಡಿದ ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನಾದ್ಯಂತ ಸೈಕಲ್‌ನಲ್ಲಿ ಸಂಚರಿಸುತ್ತಿದ್ದರು. ಹಳ್ಳಿಗಳಲ್ಲಿ ವಾಸಿಸುವ ದಲಿತರ ಸಮಸ್ಯೆಗಳನ್ನು ಅಧ್ಯಯನ ಮಾಡುತ್ತಿದ್ದರು. ಶಿಕ್ಷಣ ಪಡೆದವರ ಪಟ್ಟಿ ಶಿಕ್ಷಣ ಪಡೆಯದೆ ಜೀತಗಾರರಾಗಿರುವವರ ಪಟ್ಟಿ ತಯಾರಿಸಿ, ಅವರಿಗೆ ಸರ್ಕಾರದಿಂದ ದೊರೆಯುವ ಸವಲತ್ತುಗಳ ಬಗ್ಗೆ ಅರಿವು ಮೂಡಿಸುತ್ತಿದ್ದರು. ತಾವೇ ಅರ್ಜಿ ಬರೆದು ದಲಿತರ ಮಕ್ಕಳನ್ನು ಪಂಚಮರ ಬೋರ್ಡಿಂಗ್ ಹೋಂಗೆ ಸೇರಿಸುತ್ತಿದ್ದರು.[೧೪] ೧೯೧೪ರಲ್ಲಿ ಪಂಚಮರ ಬೋರ್ಡಿಂಗ್ ಹೋಂ ಸ್ಥಾಪನೆಗೆ ಪೂರಕವಾಗಿ ಯುವರಾಜ ನರಸಿಂಹರಾಜ ಒಡೆಯರ್ ಮನವೊಲಿಸುವಲ್ಲಿ ಅಯ್ಯರ್ ಯಶಸ್ವಿಯಾಗಿದ್ದರು. ಜೊತೆಗೆ, ರಾಜ್ಯದ ಪ್ರಮುಖ ಜಿಲ್ಲೆಗಳಲ್ಲಿ ನರಸಿಂಹರಾಜ ಬೋರ್ಡಿಂಗ್ ಹೋಂಗಳನ್ನು ಸ್ಥಾಪಿಸಲಾಯಿತು. ಪರಿಣಾಮವಾಗಿ ಕೆಲವೇ ವರ್ಷಗಳಲ್ಲಿ ಪಂಚಮ ಬೋರ್ಡಿಂಗ್ ಹೋಂಗೆ ಪ್ರವೇಶ ಪಡೆದ ದಲಿತ ವಿದ್ಯಾರ್ಥಿಗಳ ಸಂಖ್ಯೆ ಎರಡು ಸಾವಿರ ದಾಟಿತು. ದಲಿತರಿಗೆ ಮೀಸಲಾದ ಶಾಲೆಗಳ ಸಂಖ್ಯೆ ೧೨೧ಕ್ಕೇರಿತು. ಗೋಪಾಲಸ್ವಾಮಿ ಅಯ್ಯರ್ ಅವರು ದಲಿತರಿಗೆ ಶಿಕ್ಷಣದ ಜತೆಗೆ ಸ್ವಾವಲಂಬಿಯಾಗಿ ಬದುಕುವುದಕ್ಕೆ ಪೂರಕ ತರಬೇತಿ ನೀಡಬೇಕೆಂದು ಅವರು ನಂಬಿದ್ದರು. ಈ ದಿಸೆಯಲ್ಲಿ ಪ್ರತಿಯೊಂದು ನರಸಿಂಹರಾಜ ಬೋರ್ಡಿಂಗ್ ಹೋಂಗಳಲ್ಲಿ ದಲಿತ ವಿದ್ಯಾರ್ಥಿಗಳಿಗೆ ಮರಗೆಲಸ, ನೇಯ್ಗೆ, ಹೊಲಿಗೆ, ತೋಟಗಾರಿಕೆ ಮುಂತಾದ ವೃತ್ತಿಪರ ಕೆಲಸಗಳ ತರಬೇತಿ ಕೊಡಿಸುತ್ತಿದ್ದರು.[೧೫] ಬೇರೆ ಬೇರೆ ಊರುಗಳಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳ ಪತ್ರಗಳಿಗೆ ಉತ್ತರ ಬರೆಯುವುದು, ಅವರಿಗೆ ಪತ್ರಗಳಲ್ಲಿ ಮಾತಿನ ಮೂಲಕ ಹುರುಪು ತುಂಬುವುದು. ಈ ಎಲ್ಲಾ ಕೆಲಸ ಮಾಡುತ್ತಿದ್ದ ಅವರ ಜೇಬು ವಿವಿಧ ಪತ್ರಗಳಿಂದ ತುಂಬಿದ ಒಂದು ಕಿರು ಪೋಸ್ಟಾಫೀಸಿನಂತೆ ಇರುತ್ತಿತ್ತು.[೧೬] ಅಯ್ಯರ್ ಅವರ ದಲಿತಪರ ಕಾಳಜಿ ಮೆಚ್ಚಿ ೧೯೧೮ರಲ್ಲಿ ಮಹಾರಾಜರು ಅವರನ್ನು ಪ್ರಜಾಪ್ರತಿನಿಧಿ ಸಭೆಗೆ ನಾಮಕರಣ ಮಾಡಿದ್ದರು. ಕೇವಲ ನನ್ನನ್ನು ನಾಮಕರಣ ಮಾಡಿದರೆ ಅದರಿಂದ ದಲಿತರಿಗೆ ನ್ಯಾಯ ದೊರಕಿಸಿದಂತಾಗುವುದಿಲ್ಲ. ಮಹಾರಾಜರು ದಲಿತರನ್ನೇ ಪ್ರಜಾಪ್ರತಿನಿಧಿ ಸಭೆಗೆ ನಾಮಕರಣ ಮಾಡಿದಾಗ ಮಾತ್ರ ದಲಿತರಿಗೆ ನ್ಯಾಯ ದೊರಕಿದಂತಾಗುತ್ತದೆ ಎಂದು ಅಯ್ಯರ್ ಪಟ್ಟು ಹಿಡಿದಿದ್ದರು. ಈ ದಿಸೆಯಲ್ಲಿ ಮಹಾರಾಜರ ಮನವೊಲಿಸಿ ದಲಿತ ಸಮುದಾಯಕ್ಕೆ ಸೇರಿದ ಚಲುವಯ್ಯ ಹಾಗೂ ಮುರುಗೇಶನ್ ಪಿಳ್ಳೆಯವರನ್ನು ಪ್ರಜಾಪ್ರತಿನಿಧಿ ಸಭೆಗೆ ನಾಮಕರಣಗೊಳಿಸುವಲ್ಲಿ ಯಶಸ್ವಿಯಾಗಿದ್ದರು.[೧೭] ಮೈಸೂರು ಸಂಸ್ಥಾನದಲ್ಲಿ ನಾಲ್ವಡಿ ಅವರ ಸರ್ಕಾರವು ನೀಡಿದ ಸಹಕಾರದಿಂದ ಅಯ್ಯರ್ ಅವರ ಸೇವಾಕಾರ್ಯವನ್ನು ಪರಿಗಣಿಸಿ ಅವರ ಸ್ಮರಣಾರ್ಥ ಬೆಂಗಳೂರಿನ ಮಾಗಡಿ ರಸ್ತೆಯಲ್ಲಿದ್ದ ಉಕ್ಕುಡ ಪಾಳ್ಯಕ್ಕೆ ಗೋಪಾಲಪುರ ಎಂದು ಹೆಸರಿಟ್ಟಿರುವುದನ್ನು ಗಮನಿಸಿದರೆ ಅವರ ಸೇವಾ ಕಾರ್ಯತತ್ಪರತೆಯನ್ನು ಕಾಣಬಹುದು..

ಒಟ್ಟಾರೆ ಸಂಸ್ಥಾನದಲ್ಲಿ ದಲಿತರನ್ನು ಮುಖ್ಯವಾಹಿನಿಗೆ ತರಲು ಶ್ರಮಿಸಿದ ಗೋಪಾಲಸ್ವಾಮಿ ಅಯ್ಯರ್ ಅವರು ಕರ್ನಾಟಕ ಚರಿತ್ರೆಯಲ್ಲಿ ಅಗ್ರಗಣ್ಯ ಸ್ಥಾನದಲ್ಲಿ ನಿಲ್ಲುತ್ತಾರೆ. ಅಯ್ಯರ್ ದಲಿತೋದ್ಧಾರಕ್ಕಾಗಿ ಹಗಲಿರುಳೆನ್ನದೆ ಟೊಂಕ ಕಟ್ಟಿ ನಿಂತಿದ್ದರು. ಮಹಾರಾಜ ನಾಲ್ವಡಿ ಕೃಷ್ಣರಾಜ

ಒಡೆಯರ್ ಯುವರಾಜ ನರಸಿಂಹರಾಜ ಒಡೆಯರ್ ಮಾರ್ಗದರ್ಶನದಲ್ಲಿ ಅಯ್ಯರ್ ಅವರ ಗರಡಿಯಲ್ಲಿ ಪಳಗಿದ ಅನೇಕರು ನ್ಯಾಯಾಂಗ ಶಾಸಕಾಂಗ, ಕಾರ್ಯಾಂಗದಲ್ಲಿ ತಮ್ಮ ಛಾಪು ಮೂಡಿಸುವಲ್ಲಿ ಯಶಸ್ವಿಯಾಗಿದ್ದರು. ದಸರಾ ಮಹೋತ್ಸವದ ಮೂಲಕ ನಾಡಿನ ಸಂಸ್ಕೃತಿ ಎತ್ತಿಹಿಡಿದಿದ್ದ ಮೈಸೂರು ಅರಸರು ಸಮಾಜದ ಕಟ್ಟಕಡೆಯ ವ್ಯಕ್ತಿಯ ಅಭ್ಯುದಯದ ವಿಷಯದಲ್ಲಿಯೂ ತಾವು ಯಾರಿಗೇನು ಕಡಿಮೆಯಿಲ್ಲ ಅನ್ನುವುದನ್ನು ಜಗತ್ತಿಗೆ ಶತಮಾನಗಳ ಮೊದಲೇ ತೋರಿಸಿಕೊಟ್ಟಿದ್ದರು.

೩.೭. ತಲಕಾಡಿನ ಆರ್. ರಂಗೇಗೌಡರು

ಮೈಸೂರು ಸಂಸ್ಥಾನದಲ್ಲಿ ದಲಿತರಿಗೆ ಕನ್ನಡವನ್ನು ಕಲಿಸಿದ ಮೊದಲ ಗುರು ತಲಕಾಡಿನ ಆರ್. ರಂಗೇಗೌಡರು. ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದ ಗೋಪಾಲಸ್ವಾಮಿ ಅಯ್ಯರ್ ಸ್ವಾತಂತ್ರ್ಯ ಪೂರ್ವದಲ್ಲಿಯೇ ಅಸ್ಪೃಶ್ಯರಿಗೆ ಶಿಕ್ಷಣ ನೀಡಲು ಮುಂದಾದರು. ಅಯ್ಯರ್ ಅಸ್ಪೃಶ್ಯರ ಕೇರಿಗೆ ಭೇಟಿಕೊಟ್ಟ ವೇಳೆಯಲ್ಲಿ ಅಸ್ಪೃಶ್ಯರಿಗೆ ಶುಚಿತ್ವ ಹಾಗೂ ವಿದ್ಯೆ ಕಲಿಯುವುದರ ಬಗ್ಗೆ ತಿಳುವಳಿಕೆ ನೀಡಿದರು. ಸತ್ತ ಪ್ರಾಣಿ ಮಾಂಸ ತಿನ್ನಬಾರದೆಂದು ಪ್ರಚಾರ ಮಾಡಿ ಸ್ವಾಭಿಮಾನದಿಂದ ತಲೆಯೆತ್ತಿ ಬಾಳಬೇಕೆಂದು ಹಳ್ಳಿಗಳಲ್ಲಿ ಈ ಜನರ ಕೇರಿಗಳಲ್ಲಿ ಸಾರಿದರು. ಹೊಲಗದ್ದೆಗಳಲ್ಲಿ ದನ, ಕುರಿ, ಮೇಯಿಸುವ, ಬೆಟ್ಟಕಾಡುಗಳಲ್ಲಿ ಕೆಲಸ ಮಾಡಿ, ದಣಿಗಳ ಮನೆಯಲ್ಲಿ ಜೀತ ಮಾಡಿ ಮನೆಗೆ ಬಂದ ಹುಡುಗರನ್ನು ಒಂದು ಕಡೆಗೆ ಸೇರಿಸಿ ಅವರಿಗೆ ವಿದ್ಯೆಯ ಮಹತ್ವದ ಬಗ್ಗೆ ತಿಳಿಸಿದರು. ಅಲ್ಲದೇ ಅವರ ತಂದೆ ತಾಯಿಯರನ್ನು ಅಂದು ಮೈಸೂರು ಸಂಸ್ಥಾನದಲ್ಲಿ ದಲಿತರಿಗಾಗಿ ಸ್ಥಾಪಿತವಾಗಿದ್ದ ಶಾಲೆಗಳಿಗೆ ಸೇರಿಸುತ್ತಿದ್ದರು. ಶಾಲೆಗಳಿಗೆ ಅರ್ಜಿಯನ್ನು ತಾವೇ ಬರೆದು ಪೋಷಕರ ಸಹಿ ಮಾಡಿ ದಾಖಲು ಮಾಡುತ್ತಿದ್ದರು. ಅಂದರೆ ೧೯೧೦ರಲ್ಲಿ ಸಂಸ್ಥಾನದಲ್ಲಿ ಸ್ಥಾಪಿತವಾಗಿದ್ದ ಪಂಚಮರ, ಬೋರ್ಡಿಂಗ್ ಹೋಮ್‌ಗೆ ದಾಖಲು ಮಾಡಲಾಗಿದ್ದ ೧೮೬ ವಿದ್ಯಾರ್ಥಿಗಳೆಲ್ಲರೂ ಗೋಪಾಲಸ್ವಾಮಿ ಅವರು ಸೇರಿಸಿದವರಾಗಿದ್ದರು. ಆದರೆ ಸವರ್ಣೀಯರ ದೃಷ್ಟಿಯಲ್ಲಿ ಸಮಾಜ ಬಾಹಿರವಾದ ಈ ವಿದ್ಯಾರ್ಥಿಗಳಿಗೆ ವಿದ್ಯೆ ಕಲಿಸಿಕೊಡಲು ಶಿಕ್ಷಕರಾರು ಮುಂದೆ ಬರಲಿಲ್ಲ. ಸರ್ಕಾರವು ಹೆಚ್ಚಿನ ವೇತನ ಹಾಗೂ ಸವಲತ್ತುಗಳನ್ನು ನೀಡುವುದಾಗಿ ಘೋಷಿಸಿದರೂ ಕೂಡ ಯಾರು ಮುಂದೆ ಬರಲಿಲ್ಲ. ಕೊನೆಗೆ ದಲಿತೇತರರಾದ ತಲಕಾಡಿನ ಆರ್. ರಂಗೇಗೌಡ ಅವರು ಪ್ರಥಮ ಬಾರಿಗೆ ಅಸ್ಪೃಶ್ಯ ೨೧ ವಿದ್ಯಾರ್ಥಿಗಳಿಗೆ ಕನ್ನಡ ಪಾಠವನ್ನು ಕಲಿಸಿಕೊಡಲು ಮುಂದೆ ಬಂದ ಮೊದಲಿಗರು. ಇವರು ಮಳವಳ್ಳಿ ನಾಲ್ವಡಿ ಅವರೇ ಅವರನ್ನು ನೇಮಿಸಿ ಕಳುಹಿಸಿದ್ದರು.

ರಂಗೇಗೌಡರು ದಲಿತರ ಮನೆಗಳಿಗೆ ಹೋಗಿ ಪೋಷಕರ ಮನವೊಲಿಸಿ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ವಿನಂತಿಸಿಕೊಳ್ಳುತ್ತಿದ್ದರು. ಇವರ ಒತ್ತಾಯದ ಮೇರೆಗೆ ಮಕ್ಕಳು ಶಾಲೆಗೆ ಬರಲು ಪ್ರಾರಂಭಿಸಿದರು. ನಂತರ ೧೯೧೩ರಲ್ಲಿ ಮೈಸೂರಿನ ಪಂಚಮ ವಸತಿ ಶಾಲೆಯ ಮುಖ್ಯೋಪಾಧ್ಯಾಯರನ್ನಾಗಿ ನೇಮಿಸಲಾಯಿತು. ಇದರಿಂದ ಹರ್ಷಿತರಾದ ಅಯ್ಯರ್

ತಲಕಾಡು ರಂಗೇಗೌಡರನ್ನು ಅಭಿನಂದಿಸಿದರು. ಮೊಟ್ಟಮೊದಲ ಬಾರಿಗೆ ಮೈಸೂರು ಸಂಸ್ಥಾನದಲ್ಲಿ ವಿದ್ಯೆಯೆಂಬುದು ಅಸ್ಪೃಶ್ಯರ ಬಾಳಿಗೆ ಬೆಳಕಾಗಿ ಬಂತು. ತಲಕಾಡು ರಂಗೇಗೌಡರು ಅಸ್ಪೃಶ್ಯರಿಗೆ ಕನ್ನಡ ಕಲಿಸಿದ ಪ್ರಪ್ರಥಮ ಗುರುಗಳಾದರು.[೧೮]

೩.೮. ವರದರಾಜ್ ಅಯ್ಯಂಗಾರ್

ಮೈಸೂರು ಸಂಸ್ಥಾನದಲ್ಲಿ ದಲಿತ ವಿದ್ಯಾರ್ಥಿಗಳಿಗೆ ಇಂಗ್ಲೀಷ್ ಭಾಷೆ ಕಲಿಸಿದ ಪ್ರಥಮ ಗುರುಗಳು ವರದರಾಜ್ ಅಯ್ಯಂಗಾರ್ ಅವರು. ದಲಿತರ ಬೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಮೈಸೂರಿನ ಟೌನ್‌ಹಾಲ್‌ನಲ್ಲಿ ಒಂದು ಸಭೆಯನ್ನು ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ ದಲಿತರಿಗೆ ಇಂಗ್ಲೀಷ್ ಭಾಷೆಯನ್ನು ಬೋಧಿಸಬೇಕೆ ಬೇಡವೇ ಎಂಬ ವಿಷಯ ಕುರಿತು ಚರ್ಚೆ ನಡೆಸಲಾಯಿತು. ಈ ಸಭೆಯಲ್ಲಿ ವಾದ - ಪ್ರತಿವಾದಗಳು ನಡೆದರೂ ಏಕಾಭಿಪ್ರಾಯಕ್ಕೆ ಬರಲು ಸಾಧ್ಯವಾಗಲಿಲ್ಲ. ಅಂದಿನ ಸಂದರ್ಭದಲ್ಲಿ ಯಾವ ಸವರ್ಣೀಯನು ಸಹ ಈ ವಿಷಯವನ್ನು ಒಪ್ಪಿಕೊಳ್ಳಲು ಸಿದ್ಧನಿರಲಿಲ್ಲವೆಂದು ಹೇಳಬಹುದು.

ಏಕೆಂದರೆ ದಲಿತರು ವಿದ್ಯೆಯನ್ನು ಕಲಿತರೆ ತಮ್ಮ ಮನೆ-ಮಠಗಳಲ್ಲಿ ಕೆಲಸ ಮಾಡುವರ್‍ಯಾರು ಎಂಬ ಕಾರಣಕ್ಕಾಗಿಯೇ ಅಥವಾ ನಮ್ಮ ಸರಿ ಸಮಾನರಾಗಿ ಬೌದ್ಧಿಕ-ರಾಜಕೀಯ-ಸಾಂಸ್ಕೃತಿಕವಾಗಿ ಪ್ರಗತಿ ಸಾಧಿಸಿಬಿಡುತ್ತಾರೆ ಎಂಬ ಕಾರಣಕ್ಕಾಗಿ ಒಪ್ಪದೆ ಇರಬಹುದು. ಈ ದಿಕ್ಕಿನಲ್ಲಿ ಚರ್ಚೆಯ ವಾತಾವರಣ ಬಿಗಡಾಯಿಸಿತು ಮತ್ತು ನಿರಾಶಾದಾಯಕವಾಯಿತು. ಮುಂದುವರಿದು ದಲಿತರಿಗೆ ಇಂಗ್ಲೀಷ್ ಭಾಷೆಯನ್ನು ಕಲಿಸಲು ಯಾರು ಮುಂದೆ ಬರಲಿಲ್ಲ. ಈ ಕುರಿತು ಚರ್ಚೆ ನಡೆಯುತ್ತಿತ್ತು. ಇವೆಲ್ಲವನ್ನು ಗಂಭೀರವಾಗಿ ಗಮನಿಸುತ್ತಿದ್ದ ಮೈಸೂರಿನ ಚಾಮರಾಜಪುರಂ ಬಡಾವಣೆಯ ನಿವಾಸಿಗಳಾದ ವರದರಾಜ್ ಅಯ್ಯಂಗಾರ್ ಎದ್ದು ನಿಂತು ನಾನು ದಲಿತರಿಗೆ ಇಂಗ್ಲೀಷ್ ಭಾಷೆಯನ್ನು ಕಲಿಸಲು ಹಾಗೂ ಬೋಧಿಸಲು ಸಿದ್ಧನಿದ್ದೇನೆ ಎಂದು ಹೇಳಿದರು. ಇದರಿಂದಾಗಿ ಸಭೆಯಲ್ಲಿ ಭಾಗವಹಿಸಿದಂತಹ ಎಲ್ಲರ ಮುಖದಲ್ಲಿ ಬೆಳಕಿನ ಹೊಸ ಛಾಯೆ ಮೂಡಿತು. ಜೊತೆಗೆ ಆಶ್ಚರ್ಯವೂ ಆಗಿರಬಹುದು. ವರದರಾಜ ಐಯ್ಯಂಗಾರ್ ಅವರ ಮೇಲೆ ಅವರ ಸಹೋದ್ಯೋಗಿಗಳಿಗೆ ಹಾಗೂ ಮಿತ್ರರಿಗೆ ಸಹಜವಾಗಿ ಕೋಪ-ಅಸಹನೆ-ದ್ವೇಷ ಎಲ್ಲರ ಮುಖದಲ್ಲಿ ಕಂಡು ಬಂದಿತು. ಆದರೆ ದಲಿತರಿಗೆ ಜ್ಞಾನದ ಬೆಳಕನ್ನು ನೀಡುವ ಪ್ರಯತ್ನದಲ್ಲಿದ್ದ ಗೋಪಾಲಸ್ವಾಮಿ ಅಯ್ಯರ್ ಅವರಿಗೆ ಆನಂದವನ್ನುಂಟು ಮಾಡಿತು. ತ್ಯಾಗಮಯಿಯಾದ ವರದರಾಜ್ ಐಯ್ಯಂಗಾರ್ ಅಂದಿನಿಂದಲೇ ದಲಿತರ ಬೋರ್ಡಿಂಗ್ ಹೋಂನಲ್ಲಿ ಜೀವನೋಪಾಯವನ್ನು ವಿದ್ಯಾರ್ಜನೆಯ ಮೂಲಕ ಪ್ರಾರಂಭಿಸಿ ತಮ್ಮ ಸೇವಾವಧಿಯ ಕೊನೆಯವರೆಗೂ ಬೇಸರಪಟ್ಟುಕೊಳ್ಳದೆ, ವರ್ಗಾವಣೆ ಬಯಸದೆ ದಲಿತರ ಅಭ್ಯುದಯಕ್ಕಾಗಿ ದುಡಿದರು. ವರದರಾಜ್ ಐಯ್ಯಂಗಾರ್ ನಿವೃತ್ತಿ ಹೊಂದಿದಾಗ ನಾನೇ ಪಂಚಮರಿಗೆ ಇಂಗ್ಲೀಷ್ ಕಲಿಸಿದ ಮೊದಲ ಮೇಷ್ಟ್ರು ಎಂದು ಸಂತೋಷಪಟ್ಟರು. ಅಲ್ಲದೆ ತಮ್ಮ ಜೀವನದುದ್ದಕ್ಕೂ

ದಲಿತರ ಅಭ್ಯುದಯಕ್ಕಾಗಿ ದುಡಿದರು. ಹಾಗಾಗಿ ಅಂದಿನ ಸಂದರ್ಭದ ಎಲ್ಲ ಸಂಕೋಲೆಗಳನ್ನು ತೊರೆದು ತೆಗೆದುಕೊಂಡ ದೃಢ ನಿರ್ಧಾರ ನಿಜವಾಗಿಯೂ ಗಮನಾರ್ಹವಾದುದು" ಎಂದೇ ಹೇಳಬಹುದು. ಹಾಗಾಗಿ ಮೈಸೂರು ಸಂಸ್ಥಾನದಲ್ಲಿ ದಲಿತರಿಗೆ ಇಂಗ್ಲೀಶ್ ಶಿಕ್ಷಣ ಕಲಿಸಿದ ಪ್ರಥಮ ಗುರು ವರದರಾಜ್ ಅಯ್ಯಂಗಾರ್.

೩.೯. ಸಿ.ಆರ್. ರೆಡ್ಡಿ(ಕಟ್ಟಮಂಚಿ ರಾಮಲಿಂಗರೆಡ್ಡಿ)

ಹತ್ತನೇ ಚಾಮರಾಜ ಒಡೆಯರ್ ಕಾಲದಲ್ಲಿ ಗೋಪಾಲಸ್ವಾಮಿ ಅಯ್ಯರ್ ಹಚ್ಚಿದ ದಲಿತೋದ್ಧಾರದ ಹಣತೆಯನ್ನು ನಂತರದಲ್ಲಿ ಅಷ್ಟೇ ಶ್ರದ್ಧೆ, ಕಾಳಜಿಯಿಂದ ಕಾಯ್ದ ಹಲವು ಮಹನೀಯರು ಅಯ್ಯರ್ ಅವರಂತೆಯೇ ಕನ್ನಡಗರಿಗೆ ಅನಾಮಿಕರಾಗಿಯೇ ಉಳಿದದ್ದು ಶೋಚನೀಯ. ಆ ಪೈಕಿ ಸರ್. ಸಿ.ಆರ್. ರೆಡ್ಡಿ, ಗೋಪಾಲಸ್ವಾಮಿ ಅಯ್ಯರ್ ಹಚ್ಚಿಟ್ಟ ದಲಿತೋದ್ಧಾರದ ಹಣತೆಯನ್ನು ಕಾಯುವುದರ ಜತೆಗೆ ಅದರ ಬೆಳಕನ್ನು ಹೆಚ್ಚಿಸಿದ ಮಹನೀಯರೂ ಹೌದೆನ್ನುವುದು ಗಮನಾರ್ಹ.

ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯಲ್ಲಿ ಕಟ್ಟಮಂಚಿ ಎಂಬ ಪುಟ್ಟ ಗ್ರಾಮದಲ್ಲಿ ಜನಿಸಿದ ರೆಡ್ಡಿಯವರು ಕನ್ನಡಿಗರಿಗೆ ಕರ್ನಾಟಕಕ್ಕೆ ಸಲ್ಲಿಸಿದ ಸೇವೆ ಅನನ್ಯ. ಅಯ್ಯರ್ ಅವರಂತೆಯೇ ಥಿಯೋಸೊಫಿಕಲ್ ಸೊಸೈಟಿಯ ಸಂಸ್ಥಾಪಕಿ ಶ್ರೀಮತಿ ಅನಿಬೆಸೆಂಟ್ ಅವರ ಪ್ರಭಾವಕ್ಕೆ ಒಳಗಾಗಿ ಹಿಂದುಳಿದ ಮತ್ತು ದಲಿತಪರ ಕಾಳಜಿಯನ್ನು ಮೈಗೂಡಿಸಿಕೊಂಡಿದ್ದ ರೆಡ್ಡಿಯವರು ಪ್ರಧಾನ ಶಿಕ್ಷಣಾಧಿಕಾರಿಯಾಗಿ ಜಾರಿಗೆ ತಂದ ಹಲವು ಯೋಜನೆಗಳು ಸಹಸ್ರಾರು ಯುವಕರ ಬದುಕನ್ನು ಬದಲಿಸಿವೆ. ಇಂತಹ ಚೈತನ್ಯದ ಯುವಕರನ್ನು ಶಿಕ್ಷಣದ ಮೂಲಕ ಚಳವಳಿಯ ತುಡಿತವನ್ನು ಬಡಿದೆಬ್ಬಿಸಿದ ಕೀರ್ತಿ ರೆಡ್ಡಿಯವರದು. ಸಮಾಜದ ಸಮಸ್ತ ಜನಾಂಗದ ಶಿಕ್ಷಣದ ಹಸಿವು ತಣಿಸಲು ಕಂಕಣ ಕಟ್ಟಿ ನಿಂತ ರೆಡ್ಡಿಯವರು, ವಿಶೇಷವಾಗಿ ದಲಿತರ ಏಳಿಗೆಗಾಗಿ ರೂಪಿಸಿದ ಕಾರ್ಯಕ್ರಮಗಳು ಮುಖ್ಯವಾದವುಗಳು.[೨೦] ಸಿ.ಆರ್. ರೆಡ್ಡಿ ಅವರು ದಲಿತರ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು ಮತ್ತು ದಕ್ಷ ಅಧಿಕಾರಿಗಳಾಗಿದ್ದರು. ಮೈಸೂರು ಸಂಸ್ಥಾನದ ಶಿಕ್ಷಣ ಇಲಾಖೆಯ ಅಧಿಕಾರಿಗಳಾಗಿದ್ದ ವೇಳೆಯಲ್ಲಿ ಸರ್ಕಾರದಿಂದ ಅನುದಾನ ಪಡೆಯುತ್ತಿದ್ದ ಎಲ್ಲಾ ಶಾಲೆಗಳಲ್ಲಿ ಅಸ್ಪೃಶ್ಯರಿಗೆ ಪ್ರವೇಶ ಕಲ್ಪಿಸುವುದರ ಜೊತೆಗೆ ಉದಾರವಾದ ಶಿಕ್ಷಣದ ಸೌಲಭ್ಯಗಳನ್ನು ಮತ್ತು ಉಚಿತ ಊಟ, ವಸತಿ ಮತ್ತು ವಿದ್ಯಾರ್ಥಿವೇತನಗಳನ್ನು ನಾಲ್ವಡಿ ಅವರ ಸಹಕಾರದಿಂದ ದೊರಕಿಸಿಕೊಟ್ಟರು. ೧೯೧೬ರಲ್ಲಿ ಅಸ್ತಿತ್ವಕ್ಕೆ ಬಂದ ಜಸ್ಟೀಸ್ ಪಾರ್ಟಿಯ ಪ್ರಣಾಳಿಕೆಯಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಎಂದಿತ್ತು. ಇದನ್ನು ಮನಗಂಡ ರೆಡ್ಡಿ ಅವರು ಈ ಪಕ್ಷದ ಸದಸ್ಯರಿಗೆ ಪತ್ರ ಬರೆದು ನಿಮ್ಮ ಸಾಮಾಜಿಕ ನ್ಯಾಯ, ಕಲ್ಪನೆಯ ಪರಿಧಿಯಲ್ಲಿ ದಲಿತರೂ ಸೇರುತ್ತಾರೆಂದು ಭಾವಿಸುತ್ತೇನೆ ಮತ್ತು ಅವರ ಏಳಿಗೆಗೆ ನೀವೆಲ್ಲಾ ದುಡಿಯಬೇಕು ಹಾಗೂ ಅವರ ಅಭಿವೃದ್ಧಿಗೆ ನಿಮ್ಮ ಪ್ರಣಾಳಿಕೆಯಲ್ಲಿರುವ ಕಾರ್ಯಕ್ರಮಗಳೇನು? ಎಂದು ಆಗ್ರಹ ಪಡಿಸಿದರು.[೨೧]

ಪಂಚಮರಿಗಾಗಿ ಮೈಸೂರು, ತುಮಕೂರು, ಚಿಕ್ಕಮಗಳೂರು, ಬೆಂಗಳೂರು ಮುಂತಾದ ಕಡೆಗಳಲ್ಲಿ ವಸತಿ ಶಾಲೆಗಳನ್ನು ತೆರೆದು ತರಬೇತಿ ನೀಡಲಾಗುತ್ತಿತ್ತು. ಆದರೆ, ನಾಲ್ವಡಿಯವರ ಉದಾತ್ತ ಕಳಕಳಿ ಹಾಗೂ ಸಿ.ಆರ್. ರೆಡ್ಡಿಯವರ ಪರಿಶ್ರಮದ ಫಲವಾಗಿ ಹಿಂದುಳಿದ ಮತ್ತು ದಲಿತ ವರ್ಗಗಳ ಮಕ್ಕಳು ತಮ್ಮ ಜೀವನಶೈಲಿಯನ್ನು ಬದಲಿಸಿಕೊಂಡು, ಸಮಾಜದ ಮುಖ್ಯವಾಹಿನಿಯಲ್ಲಿ ಸೇರುವಂತಾಗಲಿ ಎಂಬ ಸದುದ್ದೇಶದಿಂದ ಮಹಾರಾಜರು ೧೯೧೮ರ ನವೆಂಬರ್ ೨೯ರಂದು ಒಂದು ಗೆಜೆಟ್ ಪ್ರಕಟಣೆಯನ್ನು ಹೊರಡಿಸಿದರು. ಸದರಿ ಸುತ್ತೋಲೆಯಲ್ಲಿ 'ಜಾತಿ ಆಧಾರದ ಮೇಲೆ ಯಾರನ್ನು ಸಾರ್ವಜನಿಕ ಶಾಲೆಗಳಿಂದ ದೂರವಿಡುವ ಪರಿಪಾಠವನ್ನು ಸರಕಾರ ಸಹಿಸಲಾರದು. ಸಾರ್ವಜನಿಕ ಶಾಲೆಗಳನ್ನು ಲೋಕೋದ್ಧಾರಕ್ಕಾಗಿ ನಡೆಸುತ್ತಿರುವುದರಿಂದ ಶಿಕ್ಷಣವು ಸಹ ಆಸ್ಪತ್ರೆ, ನ್ಯಾಯಾಲಯ, ರೈಲು ಪ್ರಯಾಣ ಇತ್ಯಾದಿ ಸಾರ್ವಜನಿಕ ಕ್ಷೇತ್ರಗಳಲ್ಲಿ ಇರುವಂತೆಯೇ ರಾಜ್ಯದ ಎಲ್ಲ ವರ್ಗದ ಜನರಿಗೂ ಲಭ್ಯವಾಗಲೇಬೇಕು ಎಂದು ಉದ್ದೇಶಿಸಲಾಗಿದೆ' ಎಂದು ಘೋಷಿಸಲಾಯಿತು. ಈ ಘೋಷಣೆ ಆಧಾರದ ಮೇಲೆ ದಲಿತ ಹಾಗೂ ಹಿಂದುಳಿದ ಎಲ್ಲ ವರ್ಗದ ಮಕ್ಕಳನ್ನು ಸಾರ್ವಜನಿಕ ಶಾಲೆಗಳಿಗೆ ನಿರಾತಂಕವಾಗಿ ಸೇರಿಸಿಕೊಳ್ಳಬೇಕೆಂಬ ಆಜ್ಞೆಯನ್ನು ಜಾರಿಗೆ ತರಲಾಯಿತು. ಇದಕ್ಕೆ ಪ್ರೇರಕರಾಗಿ ಸಿ.ಆರ್. ರೆಡ್ಡಿಯವರು, ಶಾಲಾ ಪ್ರವೇಶ ಎಲ್ಲರ ಹಕ್ಕು ಎಂದು ಘಂಟಾಘೋಷವಾಗಿ ಸಾರಿದರು. ಮುಂದೆ ದಲಿತರ ಮಕ್ಕಳಿಗೆ ವಿದ್ಯಾರ್ಥಿವೇತನ ಉಚಿತ ಭೋಜನ-ವಸತಿ ಸೌಕರ್ಯ, ಉಚಿತವಾಗಿ ಪುಸ್ತಕ-ಉಡುಪುಗಳನ್ನು ಒದಗಿಸುವ ಯೋಜನೆ ಹಮ್ಮಿಕೊಂಡಿದ್ದಲ್ಲದೆ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಮನವೊಲಿಸುವುದಕ್ಕಾಗಿ ತಂದೆ ತಾಯಂದಿರಿಗೆ ಹಣದ ಸಹಾಯವನ್ನು ಸಹ ಮಾಡಿದರು. ಈ ಎಲ್ಲಾ ಕ್ರಾಂತಿಕಾರಿ ಕಾರ್ಯಗಳಿಗೆ ಮಹಾರಾಜರ ಸಂಪೂರ್ಣ ಬೆಂಬಲ, ಪ್ರೋತ್ಸಾಹ ನಿರಂತರವಾಗಿತ್ತು. ಇದರಿಂದಾಗಿ ಸಿ.ಆರ್. ರೆಡ್ಡಿಯವರು ದಲಿತರ ಏಳಿಗೆಯಲ್ಲಿ ಇನ್ನೂ ಹೆಚ್ಚಿನ ಆಸಕ್ತಿ ವಹಿಸಿ, ಮಕ್ಕಳನ್ನು ಶಾಲೆಗೆ ಕಳುಹಿಸುವ ದಲಿತ ವಿದ್ಯಾರ್ಥಿಗಳ ಪೋಷಕರಿಗೆ ಹಣವನ್ನು ಕೊಡುವ ವ್ಯವಸ್ಥೆಯನ್ನು ಕೂಡ ಸರಕಾರದ ಮುಖಾಂತರ ಮಾಡಿಸಿದರು.[೨೨]

ಹೀಗೆ ಶಿಕ್ಷಣವೆಂದರೆ ಕೈಗೆಟುಕದ ಮರೀಚಿಕೆ ಅಂದುಕೊಂಡಿದ್ದ ಈ ವರ್ಗದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಕಾರಣರಾದರು. ಗೋಪಾಲಸ್ವಾಮಿ ಅಯ್ಯರ್ ಅವರ ಸೇವಾ ಕಾರ್ಯಕ್ಕೆ ಬೆನ್ನೆಲುಬಾಗಿ ನಿಂತ ಸಿ.ಆರ್. ರೆಡ್ಡಿ ಅವರು ಅನೇಕ ಸುಧಾರಣಾ ಕಾರ್ಯಗಳನ್ನು ದಲಿತರ ಅಭಿವೃದ್ಧಿಗೋಸ್ಕರ ಮೈಸೂರು ಸಂಸ್ಥಾನದಲ್ಲಿ ಕೈಗೊಂಡರು.

೩.೧೦. ಗೋವಿಂದಾಚಾರ್ಯಸ್ವಾಮಿ

ಮೈಸೂರು ಸಂಸ್ಥಾನದಲ್ಲಿ ಜನತೆಯ ರಾಜಕೀಯ ಜಾಗೃತಿಗೆ ಹಲವಾರು ಚಳವಳಿಗಳು ಪ್ರೇರಣೆಯಾದವು. ರಾಷ್ಟ್ರಪ್ರೇಮದ ಭಾವನೆಗಳನ್ನು ಬೆಳೆಸಿಕೊಂಡಿದ್ದ ಅನೇಕ ಮಹನೀಯರು ಈ ಚಳವಳಿಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ದಲಿತರ ಉದ್ಧಾರಕ್ಕಾಗಿ ಮಹಾತ್ಮ ಗಾಂಧೀಜಿಯವರು ಮೈಸೂರು ಸಂಸ್ಥಾನದಲ್ಲಿ ಕೈಗೊಂಡ ಪ್ರವಾಸಗಳಿಂದ ಪ್ರಭಾವಿತರಾದ

ಅನೇಕರು ೧೯೩೦ರ ದಶಕದಲ್ಲಿ ದಲಿತರ ಅಭ್ಯುದಯಕ್ಕಾಗಿ ಪ್ರಗತಿದಾಯಕ ಪ್ರಯತ್ನಗಳನ್ನು ನಡೆಸಿದರು.

ಮೈಸೂರು ಜಿಲ್ಲೆಯಲ್ಲಿ ದಲಿತೋದ್ಧಾರಕ್ಕಾಗಿ ಸಕ್ರಿಯವಾಗಿ ಶ್ರಮಿಸಿದ ಪ್ರಮುಖರೆಂದರೆ ಎಂ. ವೆಂಕಟಕೃಷ್ಣಯ್ಯ, ತಗಡೂರು ರಾಮಚಂದ್ರರಾಯರು, ಆರ್. ಗೋಪಾಲಸ್ವಾಮಿ ಅಯ್ಯರ್, ಎಂ.ಎನ್. ಜೋಯಿಸ್ ಮತ್ತು ಗೋವಿಂದಾಚಾರ್ಯಸ್ವಾಮಿಯವರು. ದಲಿತರಿಗೆ ಆರೋಗ್ಯದ ಮಹತ್ವದ ಬಗ್ಗೆ ತಿಳುವಳಿಕೆ ನೀಡುವುದು ಶಾಲೆಗಳಿಗೆ ಮತ್ತು ದೇವಸ್ಥಾನಗಳಿಗೆ ಪ್ರವೇಶಾವಕಾಶ ಒದಗಿಸುವುದು, ಕ್ರೈಸ್ತ ಮತಾಂತರ ವಿರೋಧ ಮುಂತಾದ ಚಟುವಟಿಕೆಗಳನ್ನು ಇವರು ಹಮ್ಮಿಕೊಂಡರು. ಕ್ರೈಸ್ತ ಪಾದ್ರಿಗಳ ಒತ್ತಾಯಕ್ಕೆ ಸಿಲುಕಿ ಕ್ರೈಸ್ತಧರ್ಮ ಸ್ವೀಕರಿಸಿದ ಮೈಸೂರು ಜಿಲ್ಲೆಯ ಅನೇಕ ದಲಿತ ಹಿಂದೂಗಳ 'ಶುದ್ಧಿ' ಕಾರ್ಯವನ್ನು ತಗಡೂರು ರಾಮಚಂದ್ರರಾಯರು ಕೈಗೊಂಡರು. ಈ ಕಾರ್ಯಗಳಲ್ಲಿ ರಾಮಚಂದ್ರರಾಯರಿಗೆ ಬೆಂಬಲಿಗರಾಗಿ ನಿಂತು ಅತ್ಯಂತ ಉತ್ಸಾಹದಿಂದ ದಲಿತ ಹಿಂದೂಗಳ ಶುದ್ಧಿ ಮತ್ತು ಮುದ್ರಾಧಾರಣೆ ನಡೆಸಿಕೊಟ್ಟವರು ಮೈಸೂರಿನ ಗೋವಿಂದಾಚಾರ್ಯಸ್ವಾಮಿಯವರು.[೨೩]

ಗೋವಿಂದಾಚಾರ್ಯರು ಆಲ್ಕೊಂಡವಿನಲ್ಲಿ ೧೮೫೬ರಲ್ಲಿ ಜನಿಸಿದರು. ಬೆಂಗಳೂರಿನ 'ಸ್ಕೂಲ್ ಆಫ್ ಎಂಜಿನಿಯರಿಂಗ್ ಮತ್ತು ನ್ಯಾಚುರಲ್ ಸೈನ್ಸ್'ನಲ್ಲಿ ೧೮೭೮ರಲ್ಲಿ ಪ್ರಥಮ ರ್‍ಯಾಂಕ್ ಗಳಿಸಿ ಉತ್ತೀರ್ಣರಾದರು. ನಂತರ ಮೈಸೂರು ಸರ್ಕಾರದ ಮರಾಮತ್ ಇಲಾಖೆಯಲ್ಲಿ ಎಂಜಿನಿಯರ್ ಆಗಿ ನೇಮಕ ಹೊಂದಿದರು. ಇವರ ತಂದೆ ಎ. ಶ್ರೀನಿವಾಸ ಅಯ್ಯಂಗಾರ್‌ರು ಮೈಸೂರು ಸರ್ಕಾರದ ಅಧೀನ ಕಾರ್ಯದರ್ಶಿಯಾಗಿ ಸೇವೆಸಲ್ಲಿಸುತ್ತಿದ್ದರು ಹಾಗೂ ಮೈಸೂರಿನ ಮಹಾರಾಜರಾಗಿದ್ದ ೧೦ನೇ ಜಯಚಾಮರಾಜೇಂದ್ರ ಒಡೆಯರ್ ಅವರಿಗೆ ಕೆಲವು ಕಾಲ ಇಂಗ್ಲೀಷ್ ಪಾಠ ಹೇಳುತ್ತಿದ್ದರು.

ಇವರು ತೆಂಗಲೆ ಪಂಗಡಕ್ಕೆ ಸೇರಿದ ಶ್ರೀ ವೈಷ್ಣವ ಬ್ರಾಹ್ಮಣರು. ಶ್ರೀ ರಾಮಾನುಜಾರ್ಯರ ವಿಶಿಷ್ಟಾದ್ವೈತ ಸಿದ್ಧಾಂತದಿಂದ ಪ್ರಭಾವಿತರಾಗಿದ್ದ ಗೋವಿಂದಾಚಾರ್ಯರು ಕೆಲವು ಗ್ರಂಥಗಳನ್ನು ರಚಿಸಿದ್ದಾರೆ. ಇದರಲ್ಲಿ ಪ್ರಮುಖವಾದವು 'ಲೈಪ್ ಆಫ್ ರಾಮಾನುಜ', 'ಎ ಮೆಟಫಿಸಿಕ್ಸ್ ಆಫ್ ಮಿಸ್ಟಿಸಿಸಮ್', 'ಹೋಲಿ ಲೈಪ್ ಆಫ್ ದಿ ಆಳ್ವಾರ್ಸ್', 'ಐಡ್ಸ್ ಆಫ್ ಇಂದ್' ಇತ್ಯಾದಿ. ಭೂತದಯಾ ಪ್ರವೃತ್ತಿಯುಳ್ಳ ಈ ಕುಟುಂಬದಲ್ಲಿ ಇವರೊಡನೆ ಇಂತಹ ಕಾರ್ಯಗಳಲ್ಲಿ ಪಾಲ್ಗೊಂಡವರು. ಇವರ ಪತ್ನಿ ವೇದನಾಯಕಮ್ಮ ಮತ್ತು ಆಚಾರ್ಯರ ಸಹೋದರಿ ವೆಂಕಟ ಕೃಷ್ಣಮ್ಮ ಹಾಗೂ ಆಕೆಯ ಪತಿ ಶ್ರೀನಿವಾಸ ಅಯ್ಯಂಗಾರ್ ಸಹ ಬೆಂಗಳೂರಿನ ಅನಾಥ ಬಾಲಕಿಯರ ಏಳಿಗೆಗಾಗಿ 'ಶ್ರೀನಿವಾಸ ಮಂದಿರಂ ಚಾರಿಟೀಸ್' ಎಂಬಾ ಸೇವಾಸಂಸ್ಥೆಯನ್ನು ಸ್ಥಾಪಿಸಿ ಶ್ರಮಿಸಿದರು. ಮೈಸೂರು ಜಿಲ್ಲೆಯಲ್ಲಿ ೧೯೨೫ರಲ್ಲಿ ಸಮಾಜ ಸುಧಾರಣೆಯ ಆಂದೋಲನದಲ್ಲಿ ಜರುಗಿದ ಮುಖ್ಯ ಘಟನೆಯೆಂದರೆ 'ಕಣಿಯರು' ಎಂಬ ಜಾತಿಯ ಜನರಿಗೆ ಮುದ್ರಾಧಾರಣೆ ಮಾಡಿ ಹಿಂದೂಗಳಾಗಿ ಪರಿವರ್ತಿಸುವ ಕಾರ್ಯ. ಈ ಜನರಿಗೆ ಮುದ್ರಾಧಾರಣೆ

ಮಾಡಿ ಇವರ ಸಾಮಾಜಿಕ ಅಭ್ಯುದಯಕ್ಕಾಗಿ ಗೋವಿಂದಾಚಾರ್ಯರು ವಹಿಸಿದ ಶ್ರಮ ಅಪಾರ. ತಿರುಮಕೂಡ್ಲು ನರಸೀಪುರದಲ್ಲಿ ಸೆಪ್ಟೆಂಬರ್ ೫, ೧೯೨೫ರಲ್ಲಿ ಗಾಂಧೀ ಮೈದಾನದಲ್ಲಿ ಜರುಗಿದ ಅಖಿಲ ಕರ್ನಾಟಕದ ಕಣಿಯರ ಮಹಾಸಮ್ಮೇಳನದ ಅಧ್ಯಕ್ಷತೆಯನ್ನು ಮೈಸೂರಿನ ಎಂ. ವೆಂಕಟಕೃಷ್ಣಯ್ಯ ವಹಿಸಿದ್ದರು. ಕಣಿಯರ ಜನಾಂಗಕ್ಕೆ ಸಾಮಾಜಿಕ ನ್ಯಾಯ ದೊರಕಿಸಿಕೊಡಲು ಕಾತರರಾಗಿದ್ದ ಎ. ಗೋವಿಂದಚಾರ್ಯಸ್ವಾಮಿ, ತಿ.ತಾ. ಶರ್ಮ, ಜಿ.ಆರ್.ಎಸ್. ರಾವ್, ವಿ.ಎಸ್. ಸಂಜೀವರಾವ್, ಪಿ.ಆರ್. ರಾಮಯ್ಯ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಅಗರಂ ರಂಗಯ್ಯ, ತಗಡೂರು ರಾಮಚಂದ್ರರಾವ್ ಮುಂತಾದವರು ಇಲ್ಲಿ ಸೇರಿದ್ದರು. ಕಣಿಯ ಜನಾಂಗದ ೨೬ ಜನರು ಒಂದು ಸಭೆಯನ್ನು ಮಾಡಿ, ಪ್ರತಿ ಸದಸ್ಯನು ತನ್ನ ಕ್ಷೇತ್ರದ ಕಣಿಯರ ಅಭಿವೃದ್ಧಿಗೆ ಶ್ರಮಿಸಬೇಕೆಂದು ಮತ್ತು ವರದಿಯನ್ನು ತಗಡೂರು ರಾಮಚಂದ್ರರಾಯರಿಗೆ ಸಲ್ಲಿಸಬೇಕೆಂದು ಇಲ್ಲಿ ನಿರ್ಣಯವಾಯಿತು. ಕಣಿಯರ್ ಪಡೆದ ಈ ಸಾಮಾಜಿಕ ನ್ಯಾಯವನ್ನು ಜನತೆಯ ಗಮನಕ್ಕೆ ತರಲು ಫೆಬ್ರವರಿ ೧೪, ೧೯೨೬ರಂದು ಬೆಂಗಳೂರಿನ ಮುಖ್ಯಬೀದಿಗಳಲ್ಲಿ ಕಣಿಯರು ಭಜನೆ ಮಾಡಿಕೊಂಡು ಮೆರವಣಿಗೆ ಹೋಗಿ ಕವಿ ಗಂಗಾಧರೇಶ್ವರಸ್ವಾಮಿ, ಶ್ರೀನಿವಾಸ ಮಂದಿರ ಮುಂತಾದ ದೇವಸ್ಥಾನಗಳಲ್ಲಿ ತೀರ್ಥ ಪ್ರಸಾದ ತೆಗೆದುಕೊಳ್ಳುವ ಮುಖಾಂತರ ಕಾರ್ಯಕ್ರಮ ಏರ್ಪಟ್ಟಿತು. ಈ ಕಾರ್ಯಕ್ರಮದ ಮುಂದಾಳತ್ವ ವಹಿಸಿದವರು ಗೋವಿಂದಾಚಾರ್ಯ ಸ್ವಾಮಿ ಮತ್ತು ಇವರ ಪತ್ನಿ ವೇದನಾಯಕಮ್ಮ ಬೆಂಗಳೂರಿನಲ್ಲಿ ಕಣಿಯರಿಗೆ ದೊರೆತ ಇತರ ಸ್ಥಾನಮಾನಗಳನ್ನು ಇತರ ಪ್ರದೇಶಗಳಲ್ಲಿಯೂ ದೊರಕಿಸಿಕೊಡಬೇಕೆಂದು ಮುಂದಿನ ಗಾಂಧೀ ಮೈದಾನದಲ್ಲಿ ನಡೆದ ಸಭೆಯಲ್ಲಿ ತೀರ್ಮಾನವಾಗಿ ಈ ಕಾರ್ಯಕ್ಕಾಗಿ ಗೋವಿಂದಾಚಾರ್ಯಸ್ವಾಮಿ ಕೆ. ಸಂಪದ್ಗಿರಿರಾವ್, ಸಿಂಗಮ್ಮ, ದೇವುಡು ನರಸಿಂಹಶಾಸ್ತ್ರೀ ನೇಮಿಸಲ್ಪಟ್ಟರು. ನಂತರ ಬೆಂಗಳೂರಿನಲ್ಲಿ ಜುಲೈ ೨೫, ೧೯೨೬ರಂದು ಕಣಿಯರ ಸಂಘ ಏರ್ಪಟ್ಟು ಆಗಸ್ಟ್ ೧೦, ೧೯೨೬ರಂದು ಅದು ಸರ್ಕಾರದಲ್ಲಿ ರಿಜಿಸ್ಟರಾಯಿತು.

ಗೋವಿಂದಾಚಾರ್ಯರು ಮೊಟ್ಟಮೊದಲು ೧೯೨೫ರಲ್ಲಿ ಕೈಗೊಂಡ ಮುದ್ರಾಧಾರಣ ಕಾರ್ಯಕ್ರಮವು ಮೈಸೂರು ಜಿಲ್ಲೆಯ ತಗಡೂರಿನ ಕಿರಗುಂದ ಗ್ರಾಮದಲ್ಲಿ ಸಂತೆಯೊಂದರ ದಿನ ಬೃಹತ್ ಸಮಾರಂಭದೊಂದಿಗೆ ಪ್ರಾರಂಭವಾಯಿತು. ಸುತ್ತಮುತ್ತಲಿನ ೧೩-೧೪ ಗ್ರಾಮಗಳಿಂದ ಮುದ್ರಾಧಾರಣೆಗಾಗಿ ಕಣಿಯರು ಬಂದು ಸೇರಿದ್ದರು. ಸರ್ಕಾರದ ಅಧಿಕಾರಿಗಳು, ಪೊಲೀಸರು ಕ್ರೈಸ್ತ ಪಾದ್ರಿಗಳು ಸಹ ಅಂದು ಹಾಜರಿದ್ದರು. ಇಂತಹ ಬಿಗುವಿನ ವಾತಾವರಣದಲ್ಲಿ ಸಮಾರಂಭಕ್ಕೆ ಬಂದಿದ್ದ ಎಲ್ಲ ಕಣಿಯರಿಗೂ ಗೋವಿಂದಾಚಾರ್ಯರು ಮುದ್ರಾಧಾರಣೆ ಮಾಡಿಸಿ ನೆರೆದ ಜನಸಮೂಹಕ್ಕೆ ಊಟ ಹಾಕಿಸಿ ಸರ್ಕಾರಿ ಅಧಿಕಾರಿಗಳಿಗೆ ದಿಗ್ಭ್ರಾಂತಿಯನ್ನುಂಟು ಮಾಡಿದರು. ಇಲ್ಲಿಂದ ಮುಂದೆ ಚಾಮರಾಜನಗರ, ಯಳಂದೂರು ಮತ್ತು ಕೊಳ್ಳೇಗಾಲ ತಾಲ್ಲೂಕುಗಳಲ್ಲಿ ಆಚಾರ್ಯರು ಕಣಿಯರ ಮುದ್ರಾಧಾರಣ ಕಾರ್ಯದಲ್ಲಿ ಯಶಸ್ವಿಯಾದರು. ಯಳಂದೂರು ತಾಲ್ಲೂಕಿನಲ್ಲಿ ಆಚಾರ್ಯರಿಗೆ ಆಶ್ರಯ ಕೊಡಬಾರದೆಂಬ ಸರ್ಕಾರಿ ಆಜ್ಞೆ ಜಾರಿಯಲ್ಲಿದ್ದರೂ

ಇವರಿಗೆ ರಾತ್ರಿ ಆಶ್ರಯ ನೀಡಿದ ಶ್ರೀನಿವಾಸಯ್ಯನೆಂಬ ಶ್ಯಾನುಭೋಗರು ಸರ್ಕಾರದ ಕೋಪಕ್ಕೆ ತುತ್ತಾಗಿ ಕೆಲಸದಿಂದಲೇ ತೆಗೆಯಲ್ಪಟ್ಟರು. ಇದರಿಂದ ಹೆದರಿದ ಕಣಿಯರು ಮುದ್ರಾಧಾರಣೆಗೆ ಒಂದೇ ನದಿಯ ದಡದಲ್ಲೇ ಇರುವುದನ್ನು ನೋಡಿದ ಆಚಾರ್ಯರು ಆ ದಡಕ್ಕೆ ಹೋಗಿ ತೋರೆವೊಂದರ ಮಧ್ಯೆ ಕುಳಿತು ಮುದ್ರಾಧಾರಣೆ ಕಾರ್ಯ ನೆರವೇರಿಸಿದರು.[೨೪]

ಮುಂದೆ ತಿರುಮಕೂಡಲು ನರಸೀಪುರದಲ್ಲಿ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಮೇ ೧೬, ೧೯೨೫ರಂದು ಕಣಿಯರಿಗೆ ತೀರ್ಥ ಪ್ರಸಾದ ನೀಡುವಂತಾಗಿದ್ದು ಸಮಾಜ ಸುಧಾರಣೆಯ ಒಂದು ದೊಡ್ಡ ಹಂತ. ಅಂದು ಆಚಾರ್ಯರು ನೆರವೇರಿಸಿದ ಕಣಿಯರ ಮುದ್ರಾಧಾರಣೆ ಮತ್ತು ದೇವಸ್ಥಾನದ ಪ್ರವೇಶಕ್ಕೆ ಪರೋಕ್ಷವಾಗಿ ಬೆಂಬಲ ಸಿಕ್ಕಿದ್ದು ಮೈಸೂರಿನ ಸಬ್ ಡಿವಿಜನಲ್ ಆಫೀಸರ್ ಆಗಿದ್ದ ಶ್ರೀ ವೈಷ್ಣವ ಮತಸ್ಥರಾದ ಅಪ್ಪಣ್ಣಯ್ಯಂಗಾರ್‌ರಿಂದ. ಅಂದು ಅಪ್ಪಣ್ಣರು ಕಣಿಯರಿಗೆ ತೀರ್ಥ ಪ್ರಸಾದ ಹಂಚಿದ ನಂತರ ದೇವಸ್ಥಾನದ ಮುಂದೆ ಇದ್ದ ಮೈದಾನದ ಮಂಟಪದಲ್ಲಿ ಕಣಿಯರ ಸತ್ಯಾಗ್ರಹ ೮ ದಿನಗಳ ಕಾಲ ನಡೆಯಿತು. ಅದೇ ಸಮಯದಲ್ಲಿ ಜರುಗಿದ ಪ್ರಜಾಪ್ರತಿನಿಧಿ ಸಭೆಯಲ್ಲಿ ಹೊಸಕೊಪ್ಪ ಕೃಷ್ಣರಾಯರು ನೀಲಗಿರಿ ಸಂಜೀವಯ್ಯ, ಎಸ್.ಸಿ. ಮಲ್ಲಯ್ಯ ಮುಂತಾದ ಸದಸ್ಯರು ಕಣಿಯರ ಸತ್ಯಾಗ್ರಹ ಮತ್ತು ದೇವಸ್ಥಾನದ ಪ್ರವೇಶ ಕುರಿತು ಚರ್ಚೆ ನಡೆಸಿದರು. ಅನೇಕ ಸದಸ್ಯರು ತಿರುಮಕೂಡಲು ನರಸೀಪುರಕ್ಕೆ ಬಂದು ಸತ್ಯಾಗ್ರಹಿಗಳನ್ನು ಭೇಟಿ ಮಾಡಿ ಸರ್ಕಾರದ ಗಮನ ಸೆಳೆಯುವ ಭರವಸೆ ಕೊಟ್ಟ ಮೇಲೆ ಸತ್ಯಾಗ್ರಹ ನಿಲ್ಲಿಸಲ್ಪಟ್ಟಿತು.

ಕಣಿಯರ ಸಾಮಾಜಿಕ ಸುಧಾರಣೆಯನ್ನು ಕೈಗೆತ್ತಿಕೊಂಡು ಕಣಿಯರ ನೆಲೆಗಳಿಗೆ ಭೇಟಿ ಕೊಟ್ಟು ಅವರಿಗೆ ಮುದ್ರಾಧಾರಣೆ ದೇವಸ್ಥಾನದ ಪ್ರವೇಶಾವಕಾಶ ಮತ್ತು ತೀರ್ಥ ಪ್ರಸಾದಗಳನ್ನು ವಿನಿಯೋಗಿಸುವ ಕ್ರಾಂತಿಕಾರಿ ಆಂದೋಲನದಲ್ಲಿ ಭಾಗವಹಿಸಿ ದುಡಿದ ಕೀರ್ತಿ ಆಚಾರ್ಯರಿಗೆ ಸಲ್ಲುತ್ತದೆ.

೩.೧೧. ತಗಡೂರು ರಾಮಚಂದ್ರರಾಯರು

ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ತಗಡೂರು ರಾಮಚಂದ್ರರಾಯರು ಮೈಸೂರು ಕಾಂಗ್ರೆಸ್‌ನ ಆದ್ಯ ಪ್ರವರ್ತಕರಲ್ಲೊಬ್ಬರು. ರಾಜರಹಿತ ಪ್ರಜಾಪ್ರಭುತ್ವಬೇಕೆಂದು ವಾದಿಸಿದವರು. ಮೈಸೂರಿನ ತಾತಯ್ಯ ವೆಂಕಟಕೃಷ್ಣಯ್ಯ ಅವರ ಗರಡಿಯಲ್ಲಿ ತರಬೇತಿ ಪಡೆದು ಅನಂತರ ಸ್ವತಂತ್ರ ಪತ್ರಿಕಾ ಪ್ರಕಾಶನ ಕೈಗೊಂಡರು. ಸರ್ಕಾರದ ವಿರುದ್ಧ ಹೋರಾಟದ ಮಾಧ್ಯಮವಾಗಿ ಇವರು ಪತ್ರಿಕೆಯನ್ನು ಬಳಸಿಕೊಂಡರು. ರಾಮಚಂದ್ರರಾಯರು ತಮ್ಮ ಬಾಳಿನುದ್ದಕ್ಕೂ ಹೋರಾಟ ನಡೆಸಿದ್ದು ಜಾತ್ಯತೀತತೆ, ಬಡತನ, ಅಸ್ಪೃಶ್ಯತಾ ನಿವಾರಣೆ, ದಲಿತೋದ್ಧಾರ ಮತ್ತು ಅಜ್ಞಾನದ ವಿರುದ್ಧ. ಈ ಹೋರಾಟಕ್ಕಾಗಿ ಇವರು ಆರಿಸಿಕೊಂಡಿದ್ದು ತಗಡೂರು.

ಇವರು ನಂಜನಗೂಡು ತಾಲ್ಲೂಕಿನ ಹನುಮಪುರದಲ್ಲಿ ಅಕ್ಟೋಬರ್ ೧೯, ೧೮೯೭ರಲ್ಲಿ ಜನಿಸಿದರು. ತಂದೆ ಸೂರ್ಯನಾರಾಯಣಪ್ಪ, ತಾಯಿ ಲಕ್ಷ್ಮಮ್ಮ. ಇವರು ಭಾರತಯಾತ್ರೆ ಕೈಗೊಂಡು ಹಲವು ಅನುಭವಗಳನ್ನು ಪಡೆದರು. ಆದರೆ ವಿದ್ಯೆಯಿಂದ ವಂಚಿತರಾದರು.

ಮೈಸೂರಿಗೆ ಮುದವೀಡು ಕೃಷ್ಣರಾಯರು ಬಂದಾಗ ಅವರಿಂದ ಪ್ರಭಾವಿತರಾದರು. ತಮ್ಮ ಸೇವಾಕೇಂದ್ರವಾಗಿ ತಗಡೂರನ್ನು ಆರಿಸಿಕೊಂಡು ಅಲ್ಲಿಗೆ ತೆರಳಿದರು. ದಲಿತರ ಹಾಗೂ ಕಣಿಯರ ಏಳಿಗೆಗಾಗಿ ಶ್ರಮಿಸಿದರು.[೨೫]

ತಗಡೂರು ರಾಮಚಂದ್ರರಾಯರ ಅಸ್ಪೃಶ್ಯತಾ ನಿವಾರಣಾ ಕಾರ್ಯಗಳು

ಇವರು ಗಾಂಧೀಜಿಯವರ ಅನುಯಾಯಿಯಾಗಿ ತಮ್ಮನ್ನು ತಾವು ಅಸ್ಪೃಶ್ಯತಾ ನಿವಾರಣ ಹೋರಾಟದಲ್ಲಿ ತೊಡಗಿಸಿಕೊಂಡರು. ಅಸ್ಪೃಶ್ಯತಾ ನಿವಾರಣೆ, ಅಸ್ಪೃಶ್ಯರ ಮಕ್ಕಳನ್ನು ಶಾಲೆಗೆ ಸೇರಿಸುವುದು, ಸ್ವರಾಜ್ಯ ಮಂದಿರದ ಸ್ಥಾಪನೆ, ಅಸ್ಪೃಶ್ಯರು ಮತ್ತು ಕಣಿಯರುಗಳಿಗೆ ದೇವಾಲಯ ಪ್ರವೇಶಾವಕಾಶ, ಮತಾಂತರ ನಿಷೇಧಕ್ಕಾಗಿ ಹೋರಾಟ ನಡೆಸಿದರು. ಅಲ್ಲದೇ ಭೂಹೀನ ಶೋಷಿತರಿಗೆ ಗ್ರಾಮದಾನ, ಭೂದಾನ ಚಳವಳಿಯಲ್ಲಿ ವಿನೋಬಾಭಾವೆಯವರೊಂದಿಗೆ ಸಕ್ರಿಯ ನಾಯಕರಾಗಿ ತೊಡಗಿಸಿಕೊಂಡರು. ಜೊತೆಗೆ ಕೆಳಜಾತಿಗಳಿಗೆ ಸಾರ್ವಜನಿಕ ಕೆರೆ, ಬಾವಿ, ಕಾಲುವೆಗಳಲ್ಲಿ ಕುಡಿಯುವ ನೀರಿಗೆ ಮುಕ್ತ ಪ್ರವೇಶವನ್ನು ಒದಗಿಸಲು ಶ್ರಮಿಸಿದರು.[೨೬] ೧೯೨೦ರ ಸಮಯದಲ್ಲಿ ತಗಡೂರು ರಾಮಚಂದ್ರರಾಯರು ಮೈಸೂರು ಸಂಸ್ಥಾನಕ್ಕೆ ಸೇರಿದ್ದ ಮಂಡ್ಯ ಜಿಲ್ಲೆಯ ಹಳ್ಳಿಯಲ್ಲಿ ದಲಿತರು ನೀರು ಉಪಯೋಗಿಸಲು ಅವಕಾಶ ಕೊಡಬೇಕೆಂದು ಮೇಲ್ವರ್ಗದವರ ವಿರುದ್ಧ ಚಳವಳಿ ಹೂಡಿದ್ದರು. ಅಸ್ಪೃಶ್ಯಾತಾಚರಣೆಗಳನ್ನು ಒಂದೊಂದಾಗಿ ಮುರಿಯಲು ಪ್ರಾರಂಭಿಸಿದರು. ಸ್ವರಾಜ್ಯ ಮಂದಿರವೆಂಬ ಹೆಸರಿನ ಮುಖಾಂತರ ದಲಿತೋದ್ಧಾರ ಕಾರ್ಯಕ್ರಮವನ್ನು ಆರಂಭಿಸಿದರು. ಮೊದಲು ತಗಡೂರು ರಾಮಚಂದ್ರರಾಯರು ದಲಿತರು ತಮ್ಮಲ್ಲಿಯೇ ಧೈರ್ಯವನ್ನು ಪಡೆಯಬೇಕೆಂದು ತಿಳಿಸಿದರು. ಸಂಪ್ರದಾಯಬದ್ಧವಾದ ಮೈಸೂರು ಸಂಸ್ಥಾನದಲ್ಲಿ ನೆಲೆಗೊಂಡಿದ್ದ ಅನೇಕ ಮೂಢನಂಬಿಕೆಗಳನ್ನು, ಅರ್ಥರಹಿತ ಪದ್ಧತಿಗಳನ್ನು ಸುಧಾರಿಸಲು ರಾಮಚಂದ್ರರಾಯರು ಪ್ರಯತ್ನಿಸಿದರು. ಏಕೆಂದರೆ ಆ ವೇಳೆಗೆ ದಲಿತರಿಗೆ ತಮ್ಮ ಕತ್ತಲೆಯ ಕೋಣೆಯಿಂದ ಹೊರಕ್ಕೆ ಬರುವುದು ಇಷ್ಟವಿರಲಿಲ್ಲ. ಹಾಗೆಯೇ ಎಲ್ಲಾ ಸವರ್ಣೀಯರ ಜೊತೆಯಲ್ಲಿ ತಾವು ಬೆರೆಯುವುದೆಂದರೆ ತಮಗೆ ಅದೊಂದು ಮಹಾಪಾಪವೆಂದೂ, ಅದೂ ದೇವರ ಅಪ್ಪಣೆಯೆಂದು ಅದಕ್ಕೆ ವಿರುದ್ಧವಾಗಿ ವರ್ತಿಸುವುದಾದರೆ ತಮಗೆ ವಿಪತ್ತು ತಪ್ಪಿದ್ದಲ್ಲವೆಂದು ತಿಳಿಯುವಷ್ಟರಮಟ್ಟಿಗಿನ ಅಜ್ಞಾನ ದಲಿತರಲ್ಲಿ ತುಂಬಿತ್ತು.[೨೭] ದಲಿತರ ಏಳಿಗೆಗಾಗಿ ಹಲವಾರು ಕಾರ್ಯಗಳನ್ನು ಕೈಗೊಂಡ ತಗಡೂರರು ಶೋಷಿತರನ್ನು ಸಾಲಗಾರರ ಕಪಿಮುಷ್ಟಿಯಿಂದ ಬಿಡಿಸಿ ಜಪ್ತಿಯಾದ ಅವರ ಮನೆ, ಆಸ್ತಿಗಳನ್ನು ವಾಪಸ್ಸು ಕೊಡಿಸಿದ್ದರು. ಜೊತೆಗೆ ಅಸ್ಪೃಶ್ಯರಿಗೆ ಜೀವನ ಕಲ್ಪಿಸಲು ಗ್ರಾಮ ಕೈಗಾರಿಕೆಗಳನ್ನು ಸ್ಥಾಪಿಸಿ ಅವರಿಗೆ ಉದ್ಯೋಗಗಳನ್ನು ದೊರಕಿಸಿಕೊಟ್ಟರು. ೧೯೨೪ರಲ್ಲಿ ಬೆಳಗಾವಿಯಲ್ಲಿ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆದ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ದಲಿತರ ಶ್ರೇಯೋಭಿವೃದ್ಧಿಗಾಗಿ ಕೈಗೊಳ್ಳಬೇಕಾದ ಕಾರ್ಯಗಳ ಬಗ್ಗೆ ತಮ್ಮ ನಿಲುವನ್ನು ವ್ಯಕ್ತಪಡಿಸಿದ್ದರು. ಇದರಿಂದ ಬಡತನ, ಹಸಿವು, ಕಿರುಕುಳದ ವೇದನೆಗಳಿಂದ ಕಂಗಾಲಾಗಿದ್ದ ದಲಿತರ ಸ್ಥಿತಿಯನ್ನು ಕಂಡು ಮರುಗಿದ ಬ್ರಿಟಿಶರು ತಮ್ಮ ಕ್ರಿಶ್ಚಿಯನ್ ಧರ್ಮಕ್ಕೆ

ಇವರನ್ನು ಮತಾಂತರಗೊಳಿಸಲು ಪ್ರಯತ್ನಿಸಿದ್ದರು. ಇದನ್ನೇ ಮನಗಂಡ ತಗಡೂರರು ದಲಿತರನ್ನು ಮತಾಂತರ ಮಾಡುವ ಪ್ರಕ್ರಿಯೆಯಿಂದ ದೂರ ಉಳಿಸಿದರು.[೨೮] ಅಂದಿನ ದಿನಗಳಲ್ಲಿ ದಲಿತ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡಲು ಅಪಾರ ಆರ್ಥಿಕ ತೊಂದರೆಯನ್ನು ಅನುಭವಿಸುತ್ತಿದ್ದರು. ಇದನ್ನೇ ಮನಗಂಡ ತಗಡೂರರು ತಗಡೂರಿನಲ್ಲಿಯೇ ೧೯೩೪ರ ಮೇ ೨೦ರಂದು ದಲಿತ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದರು. ಈ ವಿದ್ಯಾರ್ಥಿನಿಲಯವನ್ನು ನಡೆಸಲು ತಗಡೂರು ರಾಮಚಂದ್ರರಾಯರು ಸಾರ್ವಜನಿಕರಿಂದ ಐದು ಸಾವಿರ ರೂಪಾಯಿಗಳನ್ನು ಸಂಗ್ರಹಿಸಿದರು. ಈ ಹಣವನ್ನು ಇವರು ಬಡದಲಿತರಿಗೆ ನೂರು ರೂಪಾಯಿಗಳ ಬಡ್ಡಿಗೆ ಇಂತಿಷ್ಟು ದವಸ-ಧಾನ್ಯವೆಂದು ನಿಗದಿ ಮಾಡಿ ಸಾಲವನ್ನು ನೀಡಿ ಅದರಿಂದ ಬಂದ ಧಾನ್ಯದಲ್ಲಿ ವಿದ್ಯಾರ್ಥಿನಿಲಯವನ್ನು ನಡೆಸುತ್ತಿದ್ದರು. ಹೀಗೆ ದಲಿತ ಮಕ್ಕಳ ಉದ್ಧಾರಕ್ಕಾಗಿ ತಗಡೂರು ರಾಮಚಂದ್ರರಾಯರು ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದರು.[೨೯] ರಾಮಚಂದ್ರರಾಯರು ತಗಡೂರಿನಲ್ಲಿ ೧೯೩೧ ಜುಲೈ ೨೬ರಂದು ಸತ್ಯಾಗ್ರಹ ಆಶ್ರಮವನ್ನು ಸ್ಥಾಪಿಸಿದರು. ಇದರ ಉದ್ದೇಶವೇನೆಂದರೆ ಸರ್ವರ ಸಮಾನತೆಯನ್ನು ಅಭ್ಯಸಿಸಬೇಕೆಂಬುದೇ ಆಗಿತ್ತು. ಅದರಲ್ಲೂ ವಿಶೇಷವಾಗಿ ದಲಿತರಿಗೆ ಸಮಾನತೆಯನ್ನು ದೊರಕಿಸಿಕೊಡಬೇಕೆಂಬ ಉದ್ದೇಶದಿಂದ ತಗಡೂರು ರಾಮಚಂದ್ರರಾಯರು ಈ ಸತ್ಯಾಗ್ರಹ ಆಶ್ರಮವನ್ನು ಸ್ಥಾಪಿಸಿದರು. ಅವರು ತಗಡೂರಿನ ದಲಿತ ಕೇರಿಯಲ್ಲಿ ದಲಿತರು ಪೂಜೆ ಮಾಡುವ ಸಲುವಾಗಿ ಗಣಪತಿ ದೇವಾಲಯವೊಂದನ್ನು ೧೯೩೩ ಅಕ್ಟೋಬರ್ ೧೩ರಂದು ನಿರ್ಮಿಸಿದರು. ಈ ಪೂಜಾ ಕಾರ್ಯವು ಅಂದಿನಿಂದ ಇಂದಿನವರೆಗೂ ನಡೆದುಕೊಂಡು ಬರುತ್ತಿವೆ. ತಗಡೂರು ರಾಮಚಂದ್ರರಾಯರು ೧೯೨೬ರ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಚಾಮರಾಜನಗರ, ಯಳಂದೂರು, ಬಿಳಿಗಿರಿರಂಗನಬೆಟ್ಟ, ಕೊಳ್ಳೇಗಾಲ, ಮಳವಳ್ಳಿ ಇನ್ನೂ ಮುಂತಾದ ಸ್ಥಳಗಳ ಸುತ್ತ ಇರುವ ಕಣಿಯರನ್ನು ಅಲ್ಲಲ್ಲಿಯೇ ಗುಂಪುಗೂಡಿಸಿ ಆಯಾ ದೇವಸ್ಥಾನಗಳಿಗೆ ಕರೆದುಕೊಂಡು ಹೋಗುವ ಕಾರ್ಯಕ್ರಮವನ್ನೇ ಹಾಕಿಕೊಂಡರು. ಅಂದಿನ ಕಾಲದಲ್ಲಿ ಈ ಕಣಿಯರ ದೇವಸ್ಥಾನ ಪ್ರವೇಶ, ಊರಿನ ಮುಖ್ಯ ಬೀದಿಗಳಲ್ಲಿ ಇವರ ಸಾಮೂಹಿಕ ಭಜನೆ ಅಷ್ಟೇನೂ ಸುಲಭ ಸಾಧ್ಯವಾಗಿರಲಿಲ್ಲ. ಆದಕ್ಕೆ ಜನತೆ, ಅಧಿಕಾರಿ ವರ್ಗದವರ ವಿರೋಧವಿತ್ತು. ಟಿ. ನರಸೀಪುರದ ಗುಂಜಾ ನರಸಿಂಹಸ್ವಾಮಿ ದೇವಸ್ಥಾನಕ್ಕೆ ಕಣಿಯರ ಪ್ರವೇಶವನ್ನು ಕುರಿತು ಮಾಡಿದ ಪ್ರಯತ್ನಗಳು ಫಲಪ್ರದವಾಗಲಿಲ್ಲ. ಅದಕ್ಕಾಗಿ ತಗಡೂರು ರಾಮಚಂದ್ರರಾಯರು ೧೯೨೬ ಮೇ ೧೪ರಂದು ಸತ್ಯಾಗ್ರಹವನ್ನು ಆರಂಭಿಸುವುದು ಅನಿವಾರ್ಯವಾಯಿತು. ಕಣಿಯರ ಸತ್ಯಾಗ್ರಹದ ಅವಧಿಯಲ್ಲಿ ಅಧಿಕಾರಿಗಳ ಕಿರುಕುಳ, ಅವಮಾನ ಹಿಂಸೆಗಳನ್ನು ಸಹಿಸಿಕೊಂಡರು. ಇದು ತಗಡೂರು ರಾಮಚಂದ್ರರಾಯರ ಕಣಿಯರ ಸತ್ಯಾಗ್ರಹಕ್ಕೆ ಸ್ಫೂರ್ತಿಯಾಯಿತು.[೩೦]

ಒಟ್ಟಿನಲ್ಲಿ ತಗಡೂರು ರಾಮಚಂದ್ರರಾಯರ ಶೋಷಿತ ಮತ್ತು ದಲಿತೋದ್ಧಾರದ ಕಾರ್ಯಕ್ರಮಗಳು ಎಂದೆಂದಿಗೂ ಪ್ರಸ್ತುತವಾಗಿವೆ. ಅವರೊಬ್ಬ ಧೀಮಂತ ವ್ಯಕ್ತಿ. ನಿಸ್ವಾರ್ಥ

ಜನಸೇವಕ. ಅಧಿಕಾರಕ್ಕಾಗಿ ಎಂದೂ ಆಸೆಪಟ್ಟವರಲ್ಲ. ದಲಿತಪರ ಕಾಳಜಿಯುಳ್ಳ ಪ್ರಗತಿಪರ ಚಿಂತಕರು. ಎಲ್ಲಾ ಶೋಷಿತ ಸಮುದಾಯದ ಶ್ರೇಯೋಭಿವೃದ್ಧಿಯ ಕೆಲಸಗಳಿಗೆ ಗಾಂಧೀಜಿಯವರ ದಲಿತೋದ್ಧಾರದ ರಚನಾತ್ಮಕ ಕಾರ್ಯಕ್ರಮಗಳೇ ಸ್ಫೂರ್ತಿಯಾಗಿತ್ತು. ಆದ್ದರಿಂದಲೇ ಗಾಂಧೀಜಿಯವರ ತತ್ವಾದರ್ಶಗಳಿಂದ ಪ್ರಭಾವಿತಗೊಂಡ ಈ ನಾಯಕರು ಸ್ವಾತಂತ್ರ್ಯಪೂರ್ವದ ಮೈಸೂರು ಸಂಸ್ಥಾನದಲ್ಲಿ ದಲಿತರ ಪರವಾದ ತಮ್ಮ ಚಿಂತನೆ ಸಿದ್ಧಾಂತಗಳ ಮೂಲಕ ಸವರ್ಣೀಯರ ದಬ್ಬಾಳಿಕೆಯ ವಿರುದ್ಧ ಹೋರಾಡುವ ನೈತಿಕ ಶಕ್ತಿಯನ್ನು ಶೋಷಿತರಲ್ಲಿ ತುಂಬುವಲ್ಲಿ ಯಶಸ್ವಿಯಾದರು.

೩.೧೨. ಲೋಕ ಸೇವಾನಿರತ ಡಿ. ಕೊಂಗಾಡಿಯಪ್ಪ

ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತೆ ನಿವಾರಣೆಗಾಗಿ ಶ್ರಮಿಸಿದ ಹಲವಾರು ಮಹನೀಯರಲ್ಲಿ ಡಿ. ಕೊಂಗಾಡಿಯಪ್ಪನವರು ಸಹ ಪ್ರಮುಖರು. ತಮ್ಮ ನಿಸ್ವಾರ್ಥ ಸೇವೆ, ನಿಷ್ಕಲ್ಮಶ, ಸತ್ಯನಿಷ್ಠತೆ, ಪರೋಪಕಾರಿ ಗುಣದ ಕೊಂಗಾಡಿಯಪ್ಪನವರು ಜಾತ್ಯತೀತರಾಗಿ ಬಾಳಿ, ಎಲ್ಲಾ ಸಮುದಾಯದ ಉದ್ಧಾರಕ್ಕಾಗಿ ಸರ್ವತೋಮುಖವಾಗಿ ಶ್ರಮಿಸಿದ ಇವರು ದೊಡ್ಡಬಳ್ಳಾಪುರದ ಹೇಮಾವತಿ ಪೇಟೆಯಲ್ಲಿ ೨೨.೬.೧೮೬೧ರಲ್ಲಿ ಕೊಂಗಾಡಿಯಪ್ಪನವರು ಜನಿಸಿದರು. ತಂದೆ ಕೊಂಗಾಡಿ ಶಿವಪ್ಪ, ತಾಯಿ ಸರಸಮ್ಮ.

ಪೇಟೆ ಕನ್ನಡ ಶಾಲೆಯಲ್ಲಿ ಅಮಾವಾಸ್ಯೆ ಮಲ್ಲಪ್ಪ ಎಂಬುವರಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದರು. ನಂತರ ಆಂಗ್ಲೋ ವರ್ನಾಕ್ಯೂಲರ್ ಶಾಲೆಯಲ್ಲಿ ಶಿಕ್ಷಣವನ್ನು ಮುಂದುವರಿಸಿ, ತಾನು ಓದುತ್ತಿದ್ದ ಶಾಲೆಯಲ್ಲಿಯೇ ಐದು ರೂಪಾಯಿ ಸಂಬಳದ ಮೇಲೆ ಶಿಕ್ಷಕರಾಗಿ ಸೇವೆಯಾರಂಭಿಸಿದರು. ವೃತ್ತಿಯನ್ನು ಪವಿತ್ರ ಕರ್ತವ್ಯವೆಂದು ಭಾವಿಸಿ ಸುಮಾರು ನಾಲ್ಕು ದಶಕಗಳ ಕಾಲ ದಕ್ಷ ಹಾಗೂ ನಿಸ್ವಾರ್ಥ ಸೇವೆ ಸಲ್ಲಿಸಿದ್ದರು. ಆಂಗ್ಲ ದೇಶೀಯ ಶಾಲಾ ಮುಖ್ಯೋಪಾಧ್ಯಾಯರಾಗಿ ೧೯೧೯ರಲ್ಲಿ ನಿವೃತ್ತರಾದರು. ನಂತರ ಗುರುಕುಲವಾಸ ಪದ್ಧತಿಯನ್ನು ಅನುಸರಿಸಿ ಬಡ ಕುಟುಂಬಕ್ಕೆ ಸೇರಿದ ಅನೇಕ ವಿದ್ಯಾರ್ಥಿಗಳನ್ನು ತಮ್ಮ ನಿವಾಸದಲ್ಲಿರಿಸಿಕೊಂಡು ವಿದ್ಯಾಭ್ಯಾಸ ಕೊಡಿಸಿ ಅವರ ಶ್ರೇಯೋಭಿವೃದ್ಧಿಗೆ ಕಾರಣರಾದರು.[೫೧]

ಸಾಮಾಜಿಕ ಕಾರ್ಯಗಳು

ಮೈಸೂರು ಸಂಸ್ಥಾನದಲ್ಲಿ ಮೊಟ್ಟಮೊದಲ ಪುರಸಭೆಯ ಗೌರವ ಅಧ್ಯಕ್ಷರಾಗಿ ಕೊಂಗಾಡಿಯಪ್ಪನವರು ನೇಮಕವಾದರು. ಪುರಸಭೆಯಲ್ಲಿ ತಾವು ಜನತೆಗೆ ಉಪಕಾರ ಮಾಡಲೆಂದು ಕೈಗೊಂಡ ಅನೇಕ ಕಾರ್ಯಗಳು ಮತ್ತು ನಿರ್ವಹಣೆಯ ವಿಚಾರವಾಗಿ ಪುರಸಭೆ ಸದಸ್ಯರ ಟೀಕೆಗಳಿಗೆ ಗುರಿಯಾಗುತ್ತಿದ್ದರು. ಹಾಗೆಯೇ ಇಡೀ ಮೈಸೂರು ಸಂಸ್ಥಾನದಲ್ಲಿ ಆರಂಭವಾದ ಎರಡು ಪುರಸಭೆಯ ಪ್ರೌಢಶಾಲೆಗಳಲ್ಲಿ ದೊಡ್ಡಬಳ್ಳಾಪುರದ್ದು ಒಂದು. ಇದನ್ನು ಬಾಡಿಗೆ ಮನೆಯಲ್ಲಿಯೇ ಆರಂಭಿಸಿದರು.

ಗಾಂಧೀಜಿಯವರು ಹರಿಜನೋದ್ಧಾರವನ್ನು ಕೈಗೆತ್ತಿಕೊಳ್ಳುವ ಮುಂಚೆಯೇ ಕೊಂಗಾಡಿಯಪ್ಪನವರು ದಲಿತರಿಗೆ ತಮ್ಮ ಮನೆಯಲ್ಲೇ ಪಾಠ ಹೇಳುತ್ತಿದ್ದರು. ದಲಿತರ ಕೇರಿಗಳಿಗೆ ಭೇಟಿ ಕೊಡುತ್ತ ಅವರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿದ್ದರು. ಯಾವುದೇ ಭೇದಭಾವವಿಲ್ಲದೆ ಅಗತ್ಯ ಬಿದ್ದವರಿಗೆ ಎಲ್ಲಾ ವಿಧದಲ್ಲಿಯೂ ಸಹಾಯ ಮಾಡುತ್ತಿದ್ದರು. ಕೆಲವು ವೇಳೆ ಸರ್ಕಾರದಿಂದ ಸಹಾಯವಾಗಬೇಕಿದ್ದರೆ ಸಂಬಂಧಿಸಿದ ಸರ್ಕಾರಿ ಅಧಿಕಾರಿಯನ್ನು ಭೇಟಿ ಮಾಡುತ್ತಿದ್ದರು. ಕುಂದುಕೊರತೆಗಳನ್ನು ಮನಮುಟ್ಟುವಂತೆ ಸಲ್ಲಿಸುತ್ತಿದ್ದರು. ಪರಿಹಾರವನ್ನು ಶೀಘ್ರದಲ್ಲಿಯೇ ದೊರಕಿಸಿ ಕೊಡಲು ಪ್ರಯತ್ನಿಸುತ್ತಿದ್ದರು. ದಲಿತರ ಉದ್ಧಾರ ಕಾರ್ಯದಲ್ಲಿ ಭಾಗವಹಿಸಿ ಅವರ ಅಭಿವೃದ್ಧಿಗಾಗಿ ನಾನಾ ವಿಧವಾಗಿ ಸಹಾಯ ಮಾಡುತ್ತಿದ್ದರು. ಅವರ ವಿದ್ಯಾಭ್ಯಾಸಕ್ಕೂ ಆರೋಗ್ಯಕರವಾದ ವಸತಿಗೂ ತಕ್ಕ ಏರ್ಪಾಡು ಮಾಡಿ ಅವರು ಸಚ್ಚರಿತ್ರರಾಗಿ ಬಾಳುವುದಕ್ಕೆ ಎಲ್ಲಾ ರೀತಿಯ ಸಹಕಾರ ನೀಡಿದರು. ಇದರಿಂದಾಗಿ ದಲಿತ ವರ್ಗಕ್ಕೆ ಸೇರಿದ ಎಷ್ಟೋ ಮಂದಿ ಯುವಕರು ಉತ್ತಮ ನೌಕರಿ ಮತ್ತು ಅಧಿಕಾರವನ್ನು ಪಡೆಯಲು ಸಹಾಯವಾಯಿತು. ಸಂಸ್ಥಾನದ ನಾನಾ ಕಡೆಗಳಿಂದ ವ್ಯಾಸಂಗಕ್ಕಾಗಿ ತಮ್ಮ ಊರಿಗೆ ಬರುವ ವಿದ್ಯಾರ್ಥಿಗಳನ್ನು ತಮ್ಮ ಮನೆಯಲ್ಲಿಯೇ ಇರಿಸಿಕೊಂಡು ಅವರ ವಸತಿ ಮತ್ತು ಊಟಕ್ಕೆ ಏರ್ಪಾಡು ಮಾಡುತ್ತಿದ್ದರು.[೨೧]

ಲೋಯರ್ ಸೆಕೆಂಡರಿ ಪರೀಕ್ಷೆಗಾಗಿ ಪ್ರತಿವರ್ಷವೂ ದೊಡ್ಡಬಳ್ಳಾಪುರದ ಕೇಂದ್ರಕ್ಕೆ ಬರುವ ನೂರಾರು ಮಂದಿ ವಿದ್ಯಾರ್ಥಿಗಳಿಗೆ ಊಟ, ವಸತಿ ಮುಂತಾದವುಗಳನ್ನು ಏರ್ಪಾಡು ಮಾಡುತ್ತಿದ್ದರು. ತಮ್ಮ ಮನೆಯಲ್ಲಿಯೇ ಪುಸ್ತಕ ಭಂಡಾರ ತೆರೆದು ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಸಹಾಯ ಮಾಡುತ್ತಿದ್ದರು. ದೊಡ್ಡಬಳ್ಳಾಪುರದ ಮುನಿಸಿಪಲ್ ಪ್ರೌಢಶಾಲೆಗೆ ರಂಗರಾಮಯ್ಯ ಎಂಬ ದಲಿತ ಉಪಾಧ್ಯಾಯರು ಹೊಸದಾಗಿ ಕೆಲಸಕ್ಕೆ ಬಂದರು. ಅವರನ್ನು ತಮ್ಮ ಮನೆಗೆ ಕರೆಸಿ ಎಲ್ಲಾ ರೀತಿಯ ಸಹಾಯ ನೀಡಿ ನಮ್ಮ ವಿದ್ಯಾರ್ಥಿಗಳಿಗೆ ಗುರುಗಳಾಗಿ ಬಂದಿದ್ದೀರಿ, ನಿಮ್ಮ ಆಶೀರ್ವಾದ ನಮ್ಮ ವಿದ್ಯಾರ್ಥಿಗಳ ಮೇಲಿರಲಿ ಎಂದು ಫಲಪುಷ್ಪ ತಾಂಬೂಲ ನೀಡಿ ಗೌರವಿಸಿದರು. ದಲಿತರು ಸವರ್ಣೀಯರ ಮನೆಗಳಿಗಾಗಲೀ, ದೇವಾಲಯಕ್ಕಾಗಲೀ ಪ್ರವೇಶಿಸುವಂತಿರಲಿಲ್ಲ. ಇದರಿಂದಾಗಿ ಅವರು ತೀವ್ರ ವಿರೋಧವನ್ನು ವ್ಯಕ್ತಪಡಿಸುತ್ತಿದ್ದರು. ಸವರ್ಣೀಯರಿಗೆ ತಿಳುವಳಿಕೆ ನೀಡುತ್ತಿದ್ದರು. ದಲಿತರಿಗೆ ಶಾಲೆಯನ್ನು ನಿರ್ಮಿಸಲು ತಮ್ಮ ಜಮೀನನ್ನು ನೀಡಿದ್ದರು. ಕೊಂಗಾಡಿಯಪ್ಪನವರು ವಾರದಲ್ಲಿ ಎರಡೂ ಬಾರಿಯಾದರೂ ಊರಿನ ದಲಿತ ಕೇರಿಗಳಿಗೆ ಭೇಟಿ ನೀಡಿ ಅಲ್ಲಿನ ಜನತೆಗೆ ವಿದ್ಯಾಭ್ಯಾಸ ಮಾಡಲು ಪ್ರೋತ್ಸಾಹಿಸುತ್ತಿದ್ದುದಲ್ಲದೆ ಅವರ ಕುಂದುಕೊರತೆಗಳನ್ನು ವಿಚಾರಿಸುತ್ತಾ ಅವುಗಳನ್ನು ನಿವಾರಿಸಲು ತಮ್ಮ ಕೈಲಾದ ಸಹಾಯವನ್ನು ಮಾಡುತ್ತಿದ್ದರು. ಅವರ ಸರ್ವತೋಮುಖ ಏಳಿಗೆಗಾಗಿ ಶ್ರಮಿಸುತ್ತಿದ್ದರು. ಅಂತ್ಯಜರ ನಡುವೆ ತಿರುಗಾಡಿ, ಅಸ್ಪೃಶ್ಯರ ಭುಜದ ಮೇಲೆ ಕೈ ಹಾಕಿ ನಡೆದವರು. ಪಾನ ನಿಷೇಧವನ್ನು, ಶಾಲೆಗೆ ಹೋಗಬೇಕೆಂಬುದನ್ನು ಸ್ವಚ್ಛವಾಗಿರಬೇಕೆಂಬುದನ್ನು, ಅವರಿಗೆ ಹಾಡು, ಭಜನೆಗಳ ಮೂಲಕ ತಿಳಿಸಿಕೊಡುತ್ತಿದ್ದರು.[೨೨]

ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಇವರ ನಿಸ್ವಾರ್ಥ ಸೇವೆಯನ್ನು ಗಮನಿಸಿ 'ಲೋಕ ಸೇವಾನಿರತ' ಎಂಬ ಬಿರುದನ್ನು ನೀಡಿ ಗೌರವಿಸಿದರು. ಹೀಗೆ ಕೊಂಗಾಡಿಯಪ್ಪನವರು ಮಹಾತ್ಮ ಗಾಂಧೀಯವರಂತೆ ಸರಳಜೀವನವನ್ನು ನಡೆಸುತ್ತ, ಸತ್ಯ, ಅಹಿಂಸೆ ಸೇವಾ ಮನೋಭಾವಗಳನ್ನು ರೂಢಿಸಿಕೊಂಡಿದ್ದರು. ತಾವು ಹಿಡಿದ ಕೆಲಸ ಕಾರ್ಯಗಳನ್ನು ಮಾಡುವುದರಲ್ಲಿ ಅನನ್ಯ ಶ್ರದ್ಧೆ, ಆಸಕ್ತಿ ಅರ್ಪಣಾ ಮನೋಭಾವವನ್ನು ತೋರುತ್ತಿದ್ದರು. ಇಂಥ ಕೊಂಗಾಡಿಯಪ್ಪನವರು ೧೯೫೩ರಲ್ಲಿ ನಿಧನರಾದರು.

೩.೧೩. ವೆಂಕಟಕೃಷ್ಣಯ್ಯ(ಮೈಸೂರು ತಾತಯ್ಯ)

ಮೈಸೂರು ಸಂಸ್ಥಾನದಲ್ಲಿ ಸಮಾಜ ಸುಧಾರಣೆ ಮತ್ತು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೆಂಕಟಕೃಷ್ಣಯ್ಯ ತಮ್ಮ ಬಾಳಿನುದ್ದಕ್ಕೂ ಹೋರಾಟ ನಡೆಸಿದ್ದು ಜಾತ್ಯತೀತತೆ, ಬಡತನ ಮತ್ತು ಅಜ್ಞಾನದ ವಿರುದ್ಧ. ಇವರು ಹೆಗ್ಗಡದೇವನಕೋಟೆ ತಾಲ್ಲೂಕಿನ ಮಗ್ಗೆ ಎಂಬ ಗ್ರಾಮದಲ್ಲಿ ೫.೯.೧೮೪೪ರಲ್ಲಿ ಜನಿಸಿದರು. ತಂದೆ ಸುಬ್ಬಯ್ಯ ತಾಯಿ ಭಾಗೀರಥಮ್ಮ. ವೆಂಕಟಕೃಷ್ಣಯ್ಯನವರು ಬಹಳ ಸೂಕ್ಷ್ಮ ಬುದ್ಧಿಯುಳ್ಳವರು. ಯಾವ ವಿಷಯವನ್ನಾದರೂ ಪ್ರಶ್ನೆ ಮಾಡಿ ವಿವರವಾಗಿ ತಿಳಿದುಕೊಳ್ಳುತ್ತಿದ್ದರು. ಇವರು ರಾಜಾಸ್ ಫ್ರೀ ಸ್ಕೂಲಿನಲ್ಲಿ ಮೂರು ವರ್ಷಗಳ ಕಾಲ ವ್ಯಾಸಂಗ ಮಾಡಿ ವೆಸ್ಲಿಯನ್ ಮಿಷನ್ ಸ್ಕೂಲಿಗೆ ಸೇರಿದರು. ಈ ಶಾಲೆಗೆ ಇಂಗ್ಲೆಂಡಿನಿಂದ ಬಂದಿದ್ದ ಐರೋಪ್ಯ ಉಪಾಧ್ಯಾಯರು ರಾಜಕೀಯ, ಸಾಮಾಜಿಕ, ಆರ್ಥಿಕ ವಿಷಯಗಳ ಮೇಲೆ ಉಪನ್ಯಾಸ ನೀಡುತ್ತಿದ್ದರು. ವೆಂಕಟಕೃಷ್ಣಯ್ಯನವರು ಈ ಉಪನ್ಯಾಸದಿಂದ ಪ್ರಭಾವಿತರಾಗಿ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಂಡರು. ಐರೋಪ್ಯ ಉಪಾಧ್ಯಾಯರು ಇವರ ಮೇಲೆ ಬಹಳ ಪ್ರಭಾವ ಬೀರಿದರು. ವೆಂಕಟಕೃಷ್ಣಯ್ಯನವರು ಮತೀಯ ವಿಚಾರದಲ್ಲಿ ವಿಶಾಲ ಭಾವನೆಯುಳ್ಳವರಾಗಿದ್ದರು. ಅವರು ವಿವಿಧ ಮತಗ್ರಂಥಗಳನ್ನು ಅಭ್ಯಾಸ ಮಾಡಿದ್ದರು. ಇದರಿಂದ ಎಲ್ಲಾ ಮತಗಳ ತಿರುಳು ಒಂದೇ ಎಂದು ಭಾವಿಸಿದರು. ಅನ್ಯಮತವನ್ನು ದ್ವೇಷಿಸದೆ, ಸ್ವಧರ್ಮದಂತೆ ನಡೆಯಬೇಕು. ಎಲ್ಲರೂ ಸಹೋದರ ಭಾವದಿಂದ ಮೈತ್ರಿಯಿಂದ ಬಾಳಬೇಕು ಎನ್ನುತ್ತಿದ್ದರು. ವೆಂಕಟಕೃಷ್ಣಯ್ಯನವರು ಪುಟ್ಟಲಕ್ಷ್ಮಮ್ಮನವರನ್ನು ಮದುವೆಯಾದರು.[೫೪] ಅವರು ತಮ್ಮ ಪತಿಯ ಇಷ್ಟದಂತೆ ಇಂಗ್ಲೀಷ್ ಶಾಲೆಗೆ ಸೇರಿ ಇಂಗ್ಲೀಷ್, ಭೌತಶಾಸ್ತ್ರ ಮತ್ತು ವಾಸ್ತುಶಾಸ್ತ್ರವನ್ನು ಕಲಿತರು. ಮಹಾರಾಣಿ ಬಾಲಿಕಾ ಪಾಠಶಾಲೆಯಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದರು. ಇವರು ಸ್ತ್ರೀಯರ ವಿದ್ಯಾಭ್ಯಾಸ ಮತ್ತು ಅವರ ಏಳಿಗೆಗೆ ಹೆಚ್ಚಿನ ಕೆಲಸ ಮಾಡಿದರು.

ಶಿಕ್ಷಣ ಕ್ಷೇತ್ರದಲ್ಲಿ ವೆಂಕಟಕೃಷ್ಣಯ್ಯನವರು ಅಪಾರ ಸೇವೆ ಸಲ್ಲಿಸಿದರು. ಆಗ ಮೈಸೂರು ರಾಜ್ಯದಲ್ಲಿ ಹೆಚ್ಚು ಶಾಲಾ ಕಾಲೇಜುಗಳಿರಲಿಲ್ಲ. ವೆಂಕಟಕೃಷ್ಣಯ್ಯನವರು ಅನೇಕ ಶಾಲೆಗಳ ಸ್ಥಾಪನೆಗೆ ಕಾರಣರಾದರು. ಮೈಸೂರಿನ ಶಾರದಾ ವಿಲಾಸ ಹೈಸ್ಕೂಲ್, ಮಹಾರಾಣಿ ಬಾಲಿಕಾ ಪಾಠಶಾಲೆಗಳನ್ನು ಸ್ಥಾಪಿಸಲು ಕಾರಣರಾಗಿ ಅದರ ಏಳಿಗೆಗೆ ಶ್ರಮಿಸಿದರು. ಹೆಣ್ಣು ಮಕ್ಕಳ

ವಿದ್ಯಾಭ್ಯಾಸಕ್ಕೆ ವಿಶೇಷ ಪ್ರೋತ್ಸಾಹ ನೀಡಿದರು. ಸಂಸ್ಥಾನದ ಅಭಿವೃದ್ಧಿಗೆ ದಲಿತರ ಏಳಿಗೆ ಬಹಳ ಮುಖ್ಯವಾದುದೆಂದು ಭಾವಿಸಿದ್ದರು. 'ಮೈಸೂರಿನ ಪಂಚಮ ಎಜುಕೇಷನ್ ಲೀಗ್' ಎಂಬ ವಿದ್ಯಾಸಮಿತಿಯನ್ನು ಸ್ಥಾಪಿಸಿ ಈಗಿನ ಅಶೋಕಪುರಂನಲ್ಲಿ ಶಾಲೆಯನ್ನು ಪ್ರಾರಂಭಿಸಿದರು. ಕೇವಲ ಅಕ್ಷರಾಭ್ಯಾಸದಿಂದ ದಲಿತರ ಅಭಿವೃದ್ಧಿ ಸಾಧ್ಯವಿಲ್ಲವೆಂದು ಇದನ್ನು 'ಪಂಚಮ ಕೈಗಾರಿಕಾ ಸಂಸ್ಥೆ'ಯನ್ನಾಗಿ ಮಾರ್ಪಡಿಸಿ ಅವರ ಆರ್ಥಿಕಾಭಿವೃದ್ಧಿಗೆ ಸಹಾಯವಾಗುವಂತೆ ಮಾಡಿದರು. ವೆಂಕಟಕೃಷ್ಣಯ್ಯನವರು 'ದಿ ಮೈಸೂರು ಹೆರಾಲ್ಡ್' ಎಂಬ ಇಂಗ್ಲೀಷ್ ಪತ್ರಿಕೆ "ವೃತ್ತಾಂತ ಚಿಂತಾಮಣಿ' ಎಂಬ ಮಾಸಪತ್ರಿಕೆ, 'ಸಾಧ್ವಿ' ಎಂಬ ದಿನಪತ್ರಿಕೆಯನ್ನು ಪ್ರಾರಂಭಿಸಿದರು. ತಮ್ಮ ಪತ್ರಿಕೆಗಳಲ್ಲಿ ರಾಜ್ಯದಲ್ಲಿ ನಡೆಯುತ್ತಿದ್ದ ಸರ್ವಾಧಿಕಾರ, ಸಾಮಾಜಿಕ ಅನ್ಯಾಯಗಳನ್ನು, ಆಡಳಿತದ ಲೋಪದೋಷಗಳನ್ನು ಉಗ್ರವಾಗಿ ಖಂಡಿಸಿ ಬರೆಸುತ್ತಿದ್ದರು. ವೆಂಕಟಕೃಷ್ಣಯ್ಯನವರು ಸಾಮಾಜಿಕ ಕಾರ್ಯಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಬಡ ವಿದ್ಯಾರ್ಥಿಗಳ ಊಟ, ವಸತಿಗಾಗಿ 'ಅನಾಥಾಲಯ' ದಲಿತೋದ್ಧಾರಕ್ಕಾಗಿ ಪಂಚಮ ಸ್ಕೂಲು, ಶಿಶು ಸಂರಕ್ಷಣಾಲಯ, ಸಿವಿಲ್ ಮತ್ತು ಸೋಷಿಯಲ್ ಸಂಸ್ಥೆಯನ್ನು ಸ್ಥಾಪಿಸಿ ಜನತೆಯ ಒಳಿತಿಗಾಗಿ ಶ್ರಮಿಸಿದರು. ರಾಜ್ಯದಲ್ಲಿ ಸ್ಥಾಪಿತವಾದ ಪ್ರಜಾಪ್ರತಿನಿಧಿ ಸಭೆ, ನ್ಯಾಯ ವಿಧಾಯಕ ಸಭೆ ಶಕ್ತಿಯುತವಾಗಿ ಕೆಲಸ ಮಾಡಿ ಜನರ ಹಿತಚಿಂತನೆ ಮಾಡುವಂತಹ ಕಾರ್ಯಕ್ರಮಗಳಿಗಾಗಿ ವೆಂಕಟಕೃಷ್ಣಯ್ಯನವರು ಅವಿರತವಾಗಿ ಶ್ರಮಿಸಿದರು.[೩೫]

ವೆಂಕಟಕೃಷ್ಣಯ್ಯನವರು ವಿಶಾಲ ಹೃದಯಿಗಳು, ಕಷ್ಟದಲ್ಲಿರುವವರನ್ನು ಕಂಡರೆ ಅನುಕಂಪ, ಅವರಿಗೆ ಸಹಾಯ ಮಾಡುವ ಔದಾರ್ಯ, ದಲಿತಪರ ಕಾಳಜಿ, ಅವರು ಬ್ರಾಹ್ಮಣರಾದರೂ ಎಲ್ಲಾ ಮತದವರನ್ನು ಸಮಾನತೆಯಿಂದ ಕಾಣುವ ವ್ಯಕ್ತಿತ್ವದವರು. ಇವರು ೮೯ ವರ್ಷಗಳ ತುಂಬುಜೀವನ ಸಾಗಿಸಿ ೮.೧.೧೯೩೩ರಲ್ಲಿ ನಿಧನರಾದರು.

೩.೧೪. ಸಮಾಜ ಸುಧಾರಣಾ ಹೋರಾಟಗಾರ ಕೆಂಚಪ್ಪ

ಮೈಸೂರು ಸಂಸ್ಥಾನದ ಸಮಾಜ ಸುಧಾರಣಾ ಹೋರಾಟಗಾರರಲ್ಲಿ ಹರಿಹರದ ಕೆಂಚಪ್ಪನವರು ಒಬ್ಬರು. ಇವರು ೧೯೦೪ ಏಪ್ರಿಲ್ ೧ರಂದು ಹರಿಹರದಲ್ಲಿ ಜನಿಸಿದರು. ತಂದೆ ತಿಮ್ಮಪ್ಪ ಮತ್ತು ತಾಯಿ ಗಿರಿಯಮ್ಮ. ಇವರು ಮೈಸೂರಿನಲ್ಲಿ ಬಿ.ಎ. ಮುಗಿಸಿ ಇವರ ಇಷ್ಟದಂತೆ ಪುಣೆಯ ಫರ್ಗೂಸನ್ ಕಾಲೇಜಿನಲ್ಲಿ ಎಂ.ಎ. ತರಗತಿಗೆ ಸೇರಿದರು. ಸಂಜೆ ಕಾನೂನು ಕಾಲೇಜಿಗೂ ಸೇರಿಕೊಂಡು ಎರಡು ವ್ಯಾಸಂಗವನ್ನು ಒಟ್ಟಿಗೆ ನಡೆಸಿದರು. ಚಿತ್ರದುರ್ಗದಲ್ಲಿ ಕೆಂಚಪ್ಪನವರು ವಕೀಲಿ ವೃತ್ತಿಯನ್ನಾರಂಭಿಸಿದ ಮೇಲೆ ಇವರ ಸಮಾಜ ಸೇವಾಕಾರ್ಯ ಮುಂದುವರಿಯಿತು. ೧೯೩೩ರಲ್ಲಿ ಇವರು ಕುಂಚಿಟಿಗರ ಸಾರ್ವಜನಿಕ ಹಾಸ್ಟಲನ್ನು ಪ್ರಾರಂಭಿಸಿದರು. ಇದು ಯಾವ ಒಂದು ಜಾತಿಗೂ ಸೀಮಿತವಾಗಿರಲಿಲ್ಲ. ದಲಿತ ವಿದ್ಯಾರ್ಥಿಗಳಿಂದ ಹಿಡಿದು ಎಲ್ಲ ಕೋಮುಗಳ ವಿದ್ಯಾರ್ಥಿಗಳಿಗೂ ಇಲ್ಲಿ ವಸತಿ, ಊಟದ ಅವಕಾಶ ಕಲ್ಪಿಸಲಾಗಿತ್ತು.[೩೬]

ವಿದ್ಯಾರ್ಥಿನಿಲಯದ ಅಭಿವೃದ್ಧಿಗಾಗಿ ಇವರು ಹಳ್ಳಿ ಹಳ್ಳಿಗಳನ್ನು ಸುತ್ತಾಡಿ ದವಸ ಧಾನ್ಯಗಳನ್ನು ಸಂಗ್ರಹಿಸುತ್ತಿದ್ದರು. ೧೯೩೪ರಲ್ಲೇ ವಿದ್ಯಾರ್ಥಿನಿಲಯದಲ್ಲಿ ಈ ವರ್ಷಕ್ಕೆ ಸುಮಾರು ೩೫ ವಿದ್ಯಾರ್ಥಿಗಳು ಓದಿ ತೇರ್ಗಡೆಯಾಗುತ್ತಿದ್ದರು. ಹೆಸರು ಮಾತ್ರ ಕುಂಚಿಟಗರ ವಿದ್ಯಾರ್ಥಿನಿಲಯವಾದರೂ ಇದರಲ್ಲಿ ದಲಿತರು, ಒಕ್ಕಲಿಗರು, ಮುಸಲ್ಮಾನರು ಎಲ್ಲ ಜಾತಿಯವರೆಗೂ ಅವಕಾಶ ಕಲ್ಪಿಸಲಾಗಿತ್ತು. ಈ ವಸತಿನಿಲಯದಲ್ಲಿ ವ್ಯಾಸಂಗ ಮಾಡಿದ ಅನೇಕರು ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಕೆಂಚಪ್ಪನವರು ಪ್ರತಿನಿತ್ಯ ಬೆಳಗ್ಗೆ ೪.೩೦ಕ್ಕೆ ವಿದ್ಯಾರ್ಥಿನಿಲಯಕ್ಕೆ ಬಂದು ವ್ಯಾಸಂಗದಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುತ್ತಿದ್ದರು. ಯಾವ ಭೇದಭಾವವೂ ಇಲ್ಲದೆ ಇದು ಸರಾಗವಾಗಿ ನಡೆದುಕೊಂಡು ಹೋಗುತ್ತಿತ್ತು. ಕೆಂಚಪ್ಪನವರು ನಡೆಸುತ್ತಿದ್ದ ವಿದ್ಯಾರ್ಥಿನಿಲಯಕ್ಕಾಗಿ ಇವರು ಮಾತ್ರವೇ ಅಲ್ಲ, ಇವರ ಪತ್ನಿ ದೇವಮ್ಮನವರೂ ಇವರ ಜೊತೆ ದುಡಿದರು. ಆ ವಿದ್ಯಾರ್ಥಿನಿಲಯ ಸರಿಯಾಗಿ ನಡೆಯುತ್ತಿದ್ದರೆ ಅದು ಆಕೆಯ ಫಲ ಎಂದು ಕೆಂಚಪ್ಪನವರು ಸ್ಮರಿಸಿರುವುದು ದಾಖಲಾರ್ಹವೇ ಸರಿ. ದೇವಮ್ಮನವರು ವಿದ್ಯಾರ್ಥಿನಿಲಯಕ್ಕಾಗಿ ಮನೆಯಲ್ಲಿದ್ದ ದವಸ, ಧಾನ್ಯ, ಹಣ ಎಲ್ಲವನ್ನು ಕೊಡುತ್ತಿದ್ದುದಲ್ಲದೆ ಅನೇಕ ಬಾರಿ ಅವರೇ ಅಡುಗೆ ಮಾಡಿಯೂ ಬಡಿಸುತ್ತಿದ್ದರು. ನಿಲಯದ ಹುಡುಗರನ್ನು ತಮ್ಮ ಮಕ್ಕಳಂತೆಯೇ ನೋಡಿಕೊಂಡರು.[೬೭] ೧೯೩೫ರಿಂದ ೧೯೫೭ರ ತನಕ ಕೆಂಚಪ್ಪನವರು ಜಿಲ್ಲಾ ಬೋರ್ಡ್ ಸದಸ್ಯರಾಗಿದ್ದರಲ್ಲದೆ ೧೯೪೭ರಿಂದ ಅವರು ಅಧ್ಯಕ್ಷರಾಗಿದ್ದು ಅಪಾರ ಸೇವೆ ಸಲ್ಲಿಸಿದರು. ತಮ್ಮ ಸುತ್ತಮುತ್ತಲಿನ ಹಳ್ಳಿಗೂ ರಸ್ತೆ ಸೌಕರ್ಯ, ಕುಡಿಯಲು ಅನುಕೂಲವಾಗಲು ಬಾವಿ, ಶಿಕ್ಷಣಕ್ಕಾಗಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳನ್ನು ತೆರೆದರು. ಬಡವರ ಉದ್ಧಾರವೇ ಇವರ ಮುಖ್ಯ ಗುರಿ. ಅಧಿಕಾರಕ್ಕೆ ಅಂಟಿಕೊಳ್ಳದೆ ನಿಸ್ವಾರ್ಥವಾಗಿ ಸೇವೆ ಸಲ್ಲಿಸಿದರು.

ಹೀಗೆ ಕೆಂಚಪ್ಪನವರು ತಮ್ಮ ಜೀವನದುದ್ದಕ್ಕೂ ದಲಿತರ, ಹಿಂದುಳಿದವರ, ಬಡವರ ಅಭಿವೃದ್ಧಿಗಾಗಿ ಶ್ರಮಿಸಿದರು. ಕೆಂಚಪ್ಪನವರಂಥವರ ಆದರ್ಶ, ನಿಸ್ವಾರ್ಥ ಸೇವೆಯ ಗುಣಗಳು ಮುಂದಿನ ಪೀಳಿಗೆಗೆ ದಾರಿದೀಪವಾಗಿವೆ.

೩.೧೫. ತಗಡೂರು ಸಾರ್ವಜನಿಕ ಸುಬ್ಬಣ್ಣ

ತಗಡೂರು ಎಂಬುದು ಪುಟ್ಟ ಗ್ರಾಮ. ಇಲ್ಲಿನ ಇಬ್ಬರು ಪ್ರಮುಖರಿಂದ ಈ ಗ್ರಾಮ ಸುಪ್ರಸಿದ್ಧವಾಯಿತು. ಇವರೇ ತಗಡೂರು ರಾಮಚಂದ್ರರಾಯರು ಮತ್ತು ತಗಡೂರು ಸುಬ್ಬಣ್ಣನವರು. ಸಂಪ್ರದಾಯಸ್ಥ ಬಡ ಕುಟುಂಬವೊಂದರಲ್ಲಿ ೧೯೩೦ರಲ್ಲಿ ಜನ್ಮ ತಾಳಿದ ಸುಬ್ಬಣ್ಣನವರು ತಮ್ಮ ಜೀವನವನ್ನೇ ಸಾರ್ವಜನಿಕ ಸೇವೆಗಾಗಿ ಮುಡುಪಾಗಿಟ್ಟಿದ್ದರು. ಗಾಂಧೀ ಅನುಯಾಯಿಗಳಾದ ಇವರು ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳಿಂದ ಪ್ರಭಾವಿತರಾಗಿ ಅಸ್ಪೃಶ್ಯತಾ ನಿವಾರಣೆ, ದಲಿತೋದ್ಧಾರದಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸಿದ್ದರು. ತಗಡೂರು ರಾಮಚಂದ್ರರಾಯರಿಗೆ ಬೆಂಬಲವಾಗಿ ನಿಂತು, ತಗಡೂರಿನಲ್ಲಿ ಖಾದಿ ಕೇಂದ್ರದ ಕೆಲಸ, ದಲಿತರ ಕೇರಿಯಲ್ಲಿ ಗಣಪತಿ ದೇವಸ್ಥಾನದ ಸ್ಥಾಪನೆ, ದಲಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯ ಸ್ಥಾಪನೆ ಮುಂತಾದ

ಕೆಲಸಗಳಲ್ಲಿ ನೆರವಾದುದಲ್ಲದೆ, ಮಹಾತ್ಮಗಾಂಧೀಯವರನ್ನು ತಗಡೂರಿಗೆ ಕರೆತಂದು, ಮೈಸೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳವಳಿ ಮತ್ತು ಅದರ ಅಂಗವಾದ ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮಗಳು ಗ್ರಾಮಾಂತರ ಪ್ರದೇಶಗಳಲ್ಲೂ ಪ್ರಭಾವ ಬೀರಿವೆ ಎಂಬುದನ್ನು ಹೊರಪ್ರಪಂಚಕ್ಕೆ ಮನದಟ್ಟು ಮಾಡಿದರು. ಆಗ ರಾಮಚಂದ್ರರಾಯರೊಡನೆ ಸುಬ್ಬಣ್ಣನವರು ಸ್ಥಾಪಿಸಿದ ಗಾಂಧೀ ಆಶ್ರಮ ಈಗಲೂ ತಗಡೂರಿನಲ್ಲಿ ಸ್ಮಾರಕವಾಗಿ ಉಳಿದಿದೆ. ಶಿಕ್ಷಣವಿಲ್ಲದೆ ವಂಚಿತರಾದ ದಲಿತ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗುವಂತೆ ತಮ್ಮ ಕೈಲಾದ ಸೇವೆ ಮಾಡಬೇಕೆಂದು ಸಂಕಲ್ಪಿಸಿ ಕಾರ್ಯೋನ್ಮುಖರಾದರು. ಆ ಕಾಲದಲ್ಲಿ ಪ್ರೌಢಶಿಕ್ಷಣಕ್ಕಾಗಿ ಹಳ್ಳಿಗಳಿಂದ ಪಟ್ಟಣಗಳಿಗೆ ಬರುವ ವಿದ್ಯಾರ್ಥಿಗಳಿಗೆ ಜಾತಿಭೇದವಿಲ್ಲದೆ ವಸತಿ, ಊಟದ ಸೌಕರ್ಯ ಇರಲಿಲ್ಲ. ಹಾಸ್ಟೆಲ್‌ಗಳೆಲ್ಲವೂ ಮತೀಯ ಸಂಸ್ಥೆಗಳಿಂದ ನಡೆಸಲ್ಪಡುತ್ತಿದ್ದು, ಅಸ್ಪೃಶ್ಯ, ಹಿಂದುಳಿದ ಜಾತಿಯ ವಿದ್ಯಾರ್ಥಿಗಳಿಗೆ ಅವುಗಳಲ್ಲಿ ಪ್ರವೇಶವಿಲ್ಲದಿದ್ದುದರಿಂದ ಎಷ್ಟೋ ಅಸ್ಪೃಶ್ಯ ಮತ್ತು ಹಿಂದುಳಿದ ಮಕ್ಕಳು ಪ್ರೌಢಶಿಕ್ಷಣದಿಂದ ಶಾಶ್ವತವಾಗಿ ವಂಚಿತರಾಗಬೇಕಾಗಿತ್ತು. ಈ ಪರಿಸ್ಥಿತಿಯನ್ನು ಬದಲಿಸಬೇಕೆಂಬ ಸುಬ್ಬಣ್ಣನವರ ಉತ್ಕಟ ಹಂಬಲವೇ ಅವರ 'ಸಾರ್ವಜನಿಕ' ವಿದ್ಯಾರ್ಥಿನಿಲಯದ ಕಲ್ಪನೆಗೆ ನಾಂದಿಯಾಯಿತು. ಕಲ್ಪನೆಯನ್ನು ಕಾರ್ಯರೂಪಕ್ಕಿಳಿಸುವುದರಲ್ಲಿ ಗಾಂಧೀಜಿಯವರ ಸ್ಫೂರ್ತಿಯೇ ಕೆಲಸ ಮಾಡಿತು. ೧೯೩೬ರಲ್ಲಿ ವಸತಿನಿಲಯವನ್ನು ಪ್ರಾರಂಭಿಸಿದರು. ಪ್ರಾರಂಭದಲ್ಲಿ ೧೦-೧೨ ಮಂದಿ ವಿದ್ಯಾರ್ಥಿಗಳು ಮಾತ್ರ ಇದ್ದರು. ವಸತಿನಿಲಯಕ್ಕೆ ಬೇಕಾದ ದವಸ-ಧಾನ್ಯ ಮತ್ತು ಹಣ ಸಂಗ್ರಹಕ್ಕಾಗಿ ಭಿಕ್ಷಾಪಾತ್ರೆಯನ್ನು ಹಿಡಿದು ವಿದ್ಯಾರ್ಥಿಗಳೊಂದಿಗೆ ಹೊರಡುತ್ತಿದ್ದರು. ಸುಬ್ಬಣ್ಣನವರ ಪಾರದರ್ಶಕ ಪ್ರಾಮಾಣಿಕತೆ, ತ್ಯಾಗ ಮನೋಭಾವನೆ ಅರ್ಥವಾಗತೊಡಗಿದಂತೆಲ್ಲಾ ಅವರ ಕೆಲಸಕ್ಕೆ ಹೆಚ್ಚು ಹೆಚ್ಚು ಪ್ರೋತ್ಸಾಹ ಕೊಡುತ್ತಾ ಬಂದರು.[೩೮]

ಸಾರ್ವಜನಿಕ ಸೇವೆಯೆನ್ನುವುದು ಒಂದು ವ್ರತದಂತೆ. ಅದರಲ್ಲಿ ತೊಡಗುವವರಿಗೆ ಲೇಶಮಾತ್ರವೂ, ಸ್ವಾರ್ಥದ ಸೋಂಕು ಇರಬಾರದು ಮಾತ್ರವಲ್ಲ, ಇಲ್ಲವೆಂಬುದು ಜನರ ಕಣ್ಣಿಗೆ ಕಾಣಿಸಬೇಕು ಎಂಬುದು ಸುಬ್ಬಣ್ಣನವರ ಮಾತಾಗಿತ್ತು. ವಿದ್ಯಾರ್ಥಿನಿಲಯಗಳಿಗೆ ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ಬರತೊಡಗಿದಂತೆ ಸಂಖ್ಯಾಬಲಕ್ಕೆ ಅನುಗುಣವಾಗಿ ಹೆಚ್ಚು ಸ್ಥಳಾವಕಾಶವಿರುವ ಮನೆಗಳನ್ನು ಬಾಡಿಗೆಗೆ ತೆಗೆದುಕೊಳ್ಳಬೇಕಾಯಿತು. ಮೈಸೂರಿನಲ್ಲಿ ಮಾತ್ರವಲ್ಲದೆ ಜಿಲ್ಲೆಯ ಇನ್ನೂ ಒಂದೆರಡು ಕಡೆಗಳಲ್ಲಿ ವಸತಿನಿಲಯಗಳನ್ನು ಸ್ಥಾಪಿಸಿ ಅವುಗಳ ಮೇಲ್ವಿಚಾರಣೆಗಾಗಿ ಬೇರೆ ವ್ಯಕ್ತಿಗಳನ್ನು ನೇಮಿಸಿದರು. ಈ ಹಾಸ್ಟೆಲ್‌ಗಳ ನಿರ್ವಹಣೆಗಾಗಿ ನೂರಾರು ಎಕರೆ ಜಮೀನುಗಳನ್ನು ಪಡೆದರು. ಕೊನೆಗೆ ೧೯೫೪ರಲ್ಲಿ ಮೈಸೂರಿನ ವಿದ್ಯಾರಣ್ಯಪುರದಲ್ಲಿ ಸಾರ್ವಜನಿಕ ವಿದ್ಯಾರ್ಥಿನಿಲಯದ ಬೃಹತ್ ಕಟ್ಟಡವನ್ನು ಕಟ್ಟಿದರು. ಹೀಗೆ ಅಲ್ಪವಾಗಿ ಆರಂಭವಾದ ಕಾರ್ಯ ಬೃಹದಾಕಾರವಾಗಿ ಬೆಳೆದು ತಮ್ಮ ಸಂಕಲ್ಪ ಕೈಗೂಡಿತೆಂದು ಸುಬ್ಬಣ್ಣನವರು ಕೈಕಟ್ಟಿ ಕೊಡಲಿಲ್ಲ. ಮೈಸೂರು ಜಿಲ್ಲೆಯ ಬೇರೆ ಬೇರೆ ಗ್ರಾಮಗಳಲ್ಲಿ ಸರ್ಕಾರವು ಶಾಲೆಗಳನ್ನು ತೆರೆಯಲು ಹಿಂಜರಿಯುತ್ತಿದ್ದಂತಹ ಸ್ಥಳಗಳಲ್ಲಿ ತಾವೇ ಪ್ರೌಢಶಾಲೆಗಳನ್ನು ತೆರೆಯಲು ಮುಂದಾದರು.

ವಸತಿನಿಲಯಗಳು ಮತ್ತು ಪ್ರೌಢಶಾಲೆಗಳನ್ನೊಳಗೊಂಡ ಸಾರ್ವಜನಿಕ ಎಜುಕೇಶನ್ ಟ್ರಸ್ಟನ್ನು ಸ್ಥಾಪಿಸಿದರು. ಇದರಿಂದಾಗಿ ಅಕ್ಷರದಿಂದ ವಂಚಿತವಾದ ಸಮುದಾಯಗಳಿಗೆ ಅನುಕೂಲವಾಯಿತು.[೩೯]

ಸುಬ್ಬಣ್ಣನವರು ಮೇಲ್ವರ್ಗದ ಸಮಾಜ ಸುಧಾರಕರಾದರೂ ಅಸ್ಪೃಶ್ಯತೆಯ ಆಚರಣೆಯನ್ನು ತಮ್ಮ ಜೀವನದಿಂದ ಬಹು ಚಿಕ್ಕ ವಯಸ್ಸಿನಲ್ಲೇ ಕಿತ್ತು ಹಾಕಿ ತಮ್ಮ ಜಾತಿಗೆ ಸೇರಿದ ಮಡಿವಂತರಿಂದ ಬಹಿಷ್ಕಾರಕ್ಕೆ ಒಳಗಾದರು. ಸ್ತ್ರೀಯರ ಬಗ್ಗೆ ಅವರಿಗೆ ಅತ್ಯಂತ ಗೌರವವಿತ್ತು. ಅವರು ಸ್ತ್ರೀ ಶೋಷಣೆಯನ್ನು ಕಂಡರೆ ಸಹಿಸುತ್ತಿರಲಿಲ್ಲ. ಸ್ತ್ರೀಯರ ಶಿಕ್ಷಣಕ್ಕೆ ಒತ್ತು ನೀಡಿದ್ದರು. ವಸತಿನಿಲಯದ ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಯಮ, ಸ್ವಚ್ಛತೆಯನ್ನು ಬೆಳೆಸಲು ಸುಬ್ಬಣ್ಣನವರು ಶ್ರಮಿಸುತ್ತಿದ್ದರು. ಅಡುಗೆ ಮನೆ, ಸ್ನಾನದ ಗೃಹ ಮತ್ತು ಶೌಚಾಲಯವನ್ನು ಸ್ವಚ್ಛವಾಗಿಡುವುದು ಗೋಸೇವೆ ಮುಂತಾದ ಎಲ್ಲ ಕೆಲಸಗಳನ್ನು ತಾವೇ ಮಾಡಿ ತೋರಿಸಿ ದೇಹಾಶ್ರಮದ ಗೌರವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಲು ಪ್ರಯತ್ನ ಪಡುತ್ತಿದ್ದರು.[೪೦]

ಹೀಗೆ ಸುಬ್ಬಣ್ಣನವರು ತಮ್ಮ ಜೀವನದುದ್ದಕ್ಕೂ ಸಾರ್ವಜನಿಕ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡು ಸಾರ್ವಜನಿಕ ವಸತಿನಿಲಯ ಮತ್ತು ಸಾರ್ವಜನಿಕ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ದಲಿತ ವರ್ಗಗಳ ಮತ್ತು ಹಿಂದುಳಿದ ವರ್ಗದ ಸಮುದಾಯಕ್ಕೆ ಆಸರೆಯಾಗಿದ್ದರು. ಇಂತಹ ಸುಬ್ಬಣ್ಣನವರು ೧೯೯೧ ಸೆಪ್ಟೆಂಬರ್ ೧೩ರಂದು ನಿಧನರಾದರು.

೩.೧೬. ಎಚ್.ಸಿ. ದಾಸಪ್ಪ

ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟದ ಜೊತೆ ಜೊತೆಯಲ್ಲಿ ಸಮಾಜ ಸೇವೆಯನ್ನು ಸಲ್ಲಿಸಿದ ಎಚ್.ಸಿ. ದಾಸಪ್ಪ ರಾವ್‌ಸಾಹೇಬ್ ಚನ್ನಯ್ಯ ಮತ್ತು ತಿಮ್ಮಮ್ಮನವರ ಪುತ್ರರಾಗಿ ೫.೧೨.೧೮೯೪ರಲ್ಲಿ ಮಡಿಕೇರಿಯಲ್ಲಿ ಜನಿಸಿದರು. ದಾಸಪ್ಪನವರ ಪ್ರೌಢಶಾಲಾ ಶಿಕ್ಷಣ ಮಡಿಕೇರಿಯಲ್ಲಿ ಆಯಿತು. ನಂತರ ಅವರು ಮೈಸೂರು ಮಹಾರಾಜ ಕಾಲೇಜಿನಲ್ಲಿ ಓದಿ ಇಂಟರ್‌ಮೀಡಿಯೇಟ್ ಪರೀಕ್ಷೆ ಉತ್ತೀರ್ಣರಾದವರು. ಬಿ.ಎ. ಪದವಿ ಶಿಕ್ಷಣಕ್ಕಾಗಿ ಮದರಾಸಿಗೆ ಹೋಗಿ ಅಲ್ಲಿನ ಕ್ರಿಶ್ಚಿಯನ್ ಕಾಲೇಜಿಗೆ ಸೇರಿದರು. ಇತಿಹಾಸ, ಅರ್ಥಶಾಸ್ತ್ರ, ತತ್ವಶಾಸ್ತ್ರ ವಿಷಯಗಳಲ್ಲಿ ಶ್ರದ್ಧೆಯಿಂದ ವ್ಯಾಸಂಗ ಮಾಡಿದರು. ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಗಾಂಧೀಜಿಯವರ ಆಂದೋಲನದಿಂದ ದಾಸಪ್ಪನವರು ಪ್ರಭಾವಿತರಾದರು. ಕೆ.ಎಚ್. ರಾಮಯ್ಯನವರ ಹಿರಿಯ ಪುತ್ರಿ ಯಶೋಧರಾರೊಡನೆ ದಾಸಪ್ಪನವರ ವಿವಾಹ ೧೯೨೬ರಲ್ಲಿ ನಡೆಯಿತು. ವಕೀಲಿ ವೃತ್ತಿಯಿಂದ ಕೈತುಂಬ ಹಣ ಸಂಪಾದಿಸುತ್ತಿದ್ದ ದಾಸಪ್ಪನವರು ಶ್ರೀಮಂತ ಜೀವನ ನಡೆಸಿಕೊಂಡು ಇರಬಹುದಾಗಿದ್ದಿತು. ಆದರೆ ಅಂತಹ ವೈಭವದ ಜೀವನದ ಆಸೆ ದಾಸಪ್ಪನವರಿಗಾಗಲೀ ಅವರ ಪತ್ನಿ ಯಶೋಧರಿಗಾಗಲೀ ಇರಲಿಲ್ಲ. ದಾಸಪ್ಪನವರಿಗೆ ರಾಜಕೀಯ ಹಾಗೂ ಸಾಮಾಜಿಕ ಹೋರಾಟದ ಗೀಳಿತ್ತು. ಯಶೋಧರಾಗೆ ಸಮಾಜಸೇವೆ, ಕಲೆ ಮತ್ತು ಸಾಹಿತ್ಯದಲ್ಲಿ ವಿಶೇಷ ಆಸಕ್ತಿ ಇದ್ದಿತು.[೪೧]

ದಾಸಪ್ಪನವರು ಪುರಸಭೆಯ ಸದಸ್ಯರಾಗಿ ಸಾರ್ವಜನಿಕ ಜೀವನಕ್ಕೆ ಪಾದಾರ್ಪಣೆ ಮಾಡಿದರು. ನಾಗರಿಕ ಸಮಸ್ಯೆಗಳಿಗೆ ಸ್ಪಂದಿಸಿ ಜನಪ್ರಿಯರಾದರು. ರಾಜಕಾರಣಕ್ಕೆ ಸಮಾಜಸೇವೆಯ ಬುನಾದಿಯಿದ್ದರೆ ರಾಜಕೀಯ ಜೀವನ ತೃಪ್ತಿಕರವೂ ಫಲಪ್ರದವೂ ಆಗುವುದೆಂಬುದರಲ್ಲಿ ದಾಸಪ್ಪನವರಿಗೆ ಆರಂಭದಿಂದಲೇ ದೃಢವಾದ ನಂಬಿಕೆ ಮೂಡಿತ್ತು. ಒಕ್ಕಲಿಗರ ಸಂಘದ ಪದಾಧಿಕಾರಿಯಾಗಿ ರೈತಾಪಿ ಮಕ್ಕಳ, ದಲಿತರ ವಿದ್ಯಾಭ್ಯಾಸಕ್ಕಾಗಿ ಅನಾಥಾಲಯ ಮುಂತಾದ ಸಂಸ್ಥೆಗಳ ಬೆಳವಣಿಗೆಗೆ ಕಾರಣಕರ್ತರಾದರು. ರಾಮಕೃಷ್ಣಾಶ್ರಮದೊಡನೆ ನಿಕಟ ಸಂಪರ್ಕ ಹೊಂದಿದ್ದು ಆಶ್ರಮದ ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದರು. ಅವರ ನಿಷ್ಠೆ ಮತ್ತು ಕಾರ್ಯತತ್ಪರತೆಯನ್ನು ಮೆಚ್ಚಿ ಮೈಸೂರು ರಾಮಕೃಷ್ಣಾಶ್ರಮದ ಕಾರ್ಯದರ್ಶಿಯಾಗಿ ಅವರನ್ನು ನೇಮಿಸಲಾಗಿದ್ದಿತು.

ಸಿ.ಆರ್. ರೆಡ್ಡಿಯವರಿಂದ ಪ್ರೇರಿತರಾಗಿ ಹಿಂದುಳಿದ ಜಾತಿ ಹಾಗೂ ನಿಮ್ನವರ್ಗಗಳ ಶೈಕ್ಷಣಿಕ ಹಾಗೂ ರಾಜಕೀಯ ಮುನ್ನಡೆಗಾಗಿ ದಾಸಪ್ಪನವರು ಅವಿರತವಾಗಿ ದುಡಿದರು. ದಲಿತ, ಹಿಂದುಳಿದ ವರ್ಗಗಳ ಜಾಗೃತಿ ಮತ್ತು ಮುನ್ನಡೆಗಾಗಿ ಸ್ಥಾಪಿತವಾಗಿದ್ದ ಪ್ರಜಾಮಿತ್ರ ಮಂಡಲಿಯ ಪದಾಧಿಕಾರಿಯಾಗಿ, ಹಿರಿಯ ನಾಯಕರಾಗಿ ದಾಸಪ್ಪನವರು ಗಣ್ಯತೆ ಪಡೆದರು. ನಂತರ ಹಿಂದುಳಿದವರ ತೀವ್ರ ಹಾಗೂ ಪ್ರಗತಿಪರ ಚಳವಳಿಗಾಗಿ ರೂಪುಗೊಂಡ ಪ್ರಜಾಪಕ್ಷದ ಸ್ಥಾಪಕರಲ್ಲಿ ದಾಸಪ್ಪನವರು ಒಬ್ಬರಾಗಿದ್ದರು. ಈ ಪಕ್ಷದ ವತಿಯಿಂದ ದಾಸಪ್ಪನವರು ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆ ಹಾಗೂ ನ್ಯಾಯ ವಿಧಾಯಕ ಸಭೆಯ ಸದಸ್ಯರಾಗಿ ಚುನಾಯಿಸಲ್ಪಟ್ಟರು. ಸುಮಾರು ಹದಿನೈದು ವರ್ಷಗಳ ಕಾಲ ಈ ಶಾಸನ ಮಂಡಲದ ಸದಸ್ಯರಾಗಿ, ರಾಜಕೀಯ ಮತ್ತು ಸಾಮಾಜಿಕ ಸುಧಾರಣೆಗಳ ಬಗ್ಗೆ ಪ್ರಗತಿಪರ ಧೋರಣೆಯನ್ನು ತಾಳಿದ ದಾಸಪ್ಪನವರು ಒಳ್ಳೆಯ ಸಂಸದೀಯ ಪಟುವಾಗಿಯೂ ಸಮಾಜ ಸುಧಾರಕರಾಗಿಯೂ ಹಿಂದುಳಿದ, ದಲಿತ ವರ್ಗಗಳ ವಕ್ತಾರರಾಗಿಯೂ ವಿಜೃಂಭಿಸಿದರು.

ವಿಧವೆಯರ ಪುನರ್‌ವಿವಾಹಕ್ಕೆ ಅವಕಾಶ ಮಾಡಿಕೊಡುವ ಮಸೂದೆ, ವಿಧವೆಯರು ದತ್ತುಮಕ್ಕಳನ್ನು ಸ್ವೀಕರಿಸುವ ಹಾಗೂ ಆಸ್ತಿಯ ಹಕ್ಕನ್ನು ಕೊಡುವ ಮಸೂದೆ, ಹೆಣ್ಣುಮಕ್ಕಳಿಗೂ, ಅಂಗವಿಕಲ ಮಕ್ಕಳಿಗೂ ಆಸ್ತಿಯಲ್ಲಿ ಪಾಲು ನೀಡುವ ವಿಧಿ ಇತ್ಯಾದಿ ಮಸೂದೆಗಳು ಅಂದಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ವಿಪುಲವಾಗಿ ಚರ್ಚಿಸಲ್ಪಟ್ಟವು. ಈ ಮಸೂದೆಗಳನ್ನು ಸಾಮಾನ್ಯವಾಗಿ ಸಂಪ್ರದಾಯ ಶರಣರು ಪ್ರಬಲವಾಗಿ ವಿರೋಧಿಸಿದರು. ದಾಸಪ್ಪನವರ ನಾಯಕತ್ವದ ಪ್ರಜಾ ಪಕ್ಷದ ಸದಸ್ಯರೂ ಇತರ ಪ್ರಗತಿಪರ ಸದಸ್ಯರೂ ಈ ಸಾಮಾಜಿಕ ಸುಧಾರಣೆಗಳ ಮಸೂದೆಗಳಿಗೆ ಬಲವಾದ ಸಮರ್ಥನೆ ನೀಡಿದ್ದರಿಂದ ಈ ಮಸೂದೆಗಳು ಅಂಗೀಕರಿಸಲ್ಪಟ್ಟವು.[೨]

ಹೀಗೆ ಸಮಾಜ ಸುಧಾರಣೆಗೆ ಸಂಬಂಧಿಸಿದ ವಿಷಯವಾಗಲೀ ಭಾಷಾ ಸಮಸ್ಯೆಯಾಗಲೀ ಮತ್ಯಾವುದೇ ವಿವಾದಾತ್ಮಕ ವಿಷಯಗಳಾಗಲೀ ತಮ್ಮ ಮುಂದೆ ಬಂದಾಗ ಅವುಗಳ ಪರಿಹಾರಕ್ಕೆ ಸೂತ್ರವನ್ನು ರೂಪಿಸುವ ಕಲೆ ದಾಸಪ್ಪನವರಿಗೆ ಕರಗತವಾಗಿದ್ದಿತು.

೩.೧೨. ಯಶೋಧರಮ್ಮ ದಾಸಪ್ಪ

ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣಾ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ ಯಶೋಧರಮ್ಮ ದಾಸಪ್ಪನವರು ಗಾಂಧೀ ಅವರ ಅನುಯಾಯಿಗಳಾಗಿದ್ದರು. ಯಶೋಧರಾ, ಕೆ.ಎಚ್. ರಾಮಯ್ಯನವರ ಮಗಳು. ಚೊಚ್ಚಲ ಮಗು ಹೆಣ್ಣಾದರೇನು ಯಾವ ಪುರುಷನಿಗೂ ಕಡಿಮೆ ಇಲ್ಲದಂತೆ ತಮ್ಮ ಮಗಳು ಬೆಳೆದು ದೊಡ್ಡವಳಾಗಿ ಮಹತ್ತರ ಕೆಲಸಗಳನ್ನು ಮಾಡಬೇಕೆಂಬುದು ರಾಮಯ್ಯನವರ ಆಶಯವಾಗಿತ್ತು. ಅಂತೆಯೇ ಅವರು ಯಶೋಧರರ ವಿದ್ಯಾಭ್ಯಾಸಕ್ಕೆ ವಿಶೇಷ ಗಮನ ಕೊಟ್ಟರು. ಅದು ಹಿಂದುಳಿದ ವರ್ಗಗಳ ಗಂಡುಮಕ್ಕಳನ್ನು ಶಾಲೆಗಳಿಗೆ ಕಳುಹಿಸದೇ ಇದ್ದ ಕಾಲ. ಇನ್ನು ಹೆಣ್ಣುಮಕ್ಕಳ ಪಾಲಿಗೆ ವಿದ್ಯಾಭ್ಯಾಸ ಎನ್ನುವುದು ದೂರದ ಸಂಗತಿ. ಸಮಾಜ ಸುಧಾರಕರಾಗಿದ್ದ ರಾಮಯ್ಯನವರು ಮಹಿಳೆಯರ ವಿದ್ಯಾಭ್ಯಾಸದಿಂದಲೇ ಸಮಾಜದ ಮುನ್ನಡೆ ಸಾಧ್ಯ ಎಂದು ಬಲವಾಗಿ ನಂಬಿದ್ದರು. ಅದರಂತೆ ತಮ್ಮ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಿದರು.[೪೩]

ಎಸ್.ಎಸ್.ಎಲ್.ಸಿ. ನಂತರ ಉನ್ನತ ವಿದ್ಯಾಭ್ಯಾಸಕ್ಕಾಗಿ ಮದ್ರಾಸಿನ ಕ್ವೀನ್ಸ್ ಮೇರಿ ಕಾಲೇಜಿನಲ್ಲಿ ಸೇರಿ ಎರಡು ವರ್ಷ ಓದಿದ ನಂತರ ಯಶೋಧರಾ ಬೆಂಗಳೂರಿಗೆ ಮರಳಿದರು. ರಾಮಯ್ಯನವರು ಸಮಾಜಸೇವಾ ಕಾರ್ಯಗಳಿಗೆ ಹೋಗುತ್ತಿದ್ದಾಗ ಜೊತೆಯಲ್ಲಿ ಯಶೋಧರಾಳನ್ನು ಕರೆದುಕೊಡು ಹೋಗುತ್ತಿದ್ದರು. ಸಾರ್ವಜನಿಕ ಸಭೆಗಳಲ್ಲಿ ಅದರಲ್ಲೂ ಮುಗ್ಧ ಗ್ರಾಮೀಣ ಜನರ ಸಮುದಾಯದ ಕಾರ್ಯಕ್ರಮಗಳಲ್ಲಿ ರಾಮಯ್ಯನವರು ಮಾಡುತ್ತಿದ್ದ ಭಾಷಣಗಳು ಕೈಗೊಳ್ಳುತ್ತಿದ್ದ ಸುಧಾರಣಾ ಕ್ರಿಯೆಗಳನ್ನು ಕಂಡು ಯಶೋಧರಾ ತುಂಬಾ ಪ್ರಭಾವಿತರಾಗುತ್ತಿದ್ದರು. ರಾಮಯ್ಯನವರಿಗೂ ಅಷ್ಟೇ ತಮ್ಮ ಮಗಳು ಮುಂದೆ ದೊಡ್ಡವಳಾದ ಮೇಲೆ ಸಮಾಜಸೇವೆಯಲ್ಲಿ ತೊಡಗಿ ಬಡಜನರನ್ನು ಮುಂದಕ್ಕೆ ತರುವ ಕೆಲಸ ಮಾಡಲಿ ಎಂದು ಬಯಸುತ್ತಿದ್ದರು. ಅದನ್ನು ಸಂದರ್ಭ ಬಂದಾಗಲೆಲ್ಲಾ ಹೇಳುತ್ತಿದ್ದರು. ಹೀಗೆ ತಂದೆಯಿಂದ ಪ್ರಭಾವಿತರಾದ ಯಶೋಧರಾ ಅವರು ಸಮಾಜಸೇವೆಗೆ ಮುಂದಾಗಲು ಕಾರಣವಾಯಿತು.

ಕಸ್ತೂರಬಾ ಗಾಂಧೀ ಸ್ಮಾರಕ ಟ್ರಸ್ಟ್‌ನ ಕೆಲಸ ಕಾರ್ಯಗಳನ್ನು ಭಾರತದ ಎಲ್ಲಾ ಪ್ರಾಂತ್ಯಗಳಲ್ಲೂ ಹಮ್ಮಿಕೊಳ್ಳಲು ಕಾರ್ಯಕ್ರಮ ಹಾಕಿಕೊಳ್ಳಲಾಯಿತು. ಒಂದೊಂದು ಪ್ರಾಂತ್ಯಕ್ಕೆ ಒಬ್ಬೊಬ್ಬ ಸಮರ್ಥ ಮಹಿಳಾ ನಾಯಕಿಯನ್ನು ಟ್ರಸ್ಟಿನ ಪ್ರತಿನಿಧಿಯನ್ನಾಗಿ ಗಾಂಧೀಜಿ ನೇಮಿಸಿದರು. ಅದರಂತೆ ಮೈಸೂರು ಸಂಸ್ಥಾನಕ್ಕೆ ಯಶೋಧರಾ ದಾಸಪ್ಪನವರೂ ಪ್ರತಿನಿಧಿಯಾಗಿ ನೇಮಿಸಲ್ಪಟ್ಟರು. ಎಲ್ಲಾ ಪ್ರಾಂತೀಯ ಪ್ರತಿನಿಧಿಗಳಿಗೂ ತರಬೇತಿ ನೀಡಲು ಪೂನಾ ಬಳಿ ಶಿಬಿರವೊಂದನ್ನು ನಡೆಸಲಾಯಿತು. ಈ ಶಿಬಿರದಲ್ಲಿ ಗಾಂಧೀಜಿ ಮತ್ತು ಥಕ್ಕರ್‌ಬಾಬಾ ಅವರುಗಳೇ ಖುದ್ದಾಗಿ ಹಾಜರಿದ್ದು ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರ, ಮಕ್ಕಳ ಅಭಿವೃದ್ಧಿಗೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂಬುದನ್ನು ಗೊತ್ತುಪಡಿಸಿದರು. ಪ್ರತಿನಿಧಿಗಳ ಶಿಬಿರದಲ್ಲಿ ಶಿಕ್ಷಣ ಪಡೆದು ವಾಪಸು ಬರುತ್ತಿದ್ದ ಹಾಗೆಯೇ ಯಶೋಧರಾ ದಾಸಪ್ಪನವರು ಮೈಸೂರು

ಸಂಸ್ಥಾನದಲ್ಲಿ ಕಸ್ತೂರಬಾ ಗಾಂಧೀ ಟ್ರಸ್ಟ್‌ನ ಸೇವಾಕಾರ್ಯವನ್ನು ಸಂಘಟಿಸಲು ಅತೀ ಉತ್ಸಾಹದಿಂದ ಕಾರ್ಯೋನ್ಮುಖರಾದರು.[೪೪]

ಇದೇ ಸಂದರ್ಭದಲ್ಲಿ ಯಶೋಧರಾ ತಾನು ಒಬ್ಬ ದಲಿತ ಮಗುವನ್ನು ದತ್ತು ತೆಗೆದುಕೊಂಡು ಸಾಕುತ್ತಿರುವುದಾಗಿ ಹೇಳಿ ಗಾಂಧೀಜಿಯ ಆಶೀರ್ವಾದ ಬೇಡಿದರು ಹಾಗೂ ಮಗುವಿಗೆ ಸೂಕ್ತ ಹೆಸರನ್ನು ಗಾಂಧಿಯೇ ಇಟ್ಟು ನಾಮಕರಣ ಮಾಡಬೇಕೆಂದರು. ಮಗುವಿಗೆ ಪ್ರಭಾ ಎಂದು ಮಹಾತ್ಮರು ನುಡಿದರು. ಅಂದು ಮಹಾತ್ಮರೊಡನೆ ನಡೆಸಿದ ಸಂದರ್ಶನ ಮತ್ತು ಅವರು ಆಡಿದ ಮಾತುಗಳನ್ನು ಯಶೋಧರಾ ತಮ್ಮ ಜೀವನಪರ್ಯಂತ ಮೆಲುಕು ಹಾಕಿ ಕೃತಜ್ಞತೆಯ ಭಾವನೆಯನ್ನು ಅಭಿವ್ಯಕ್ತಗೊಳಿಸುತ್ತಿದ್ದರು.

ಹೀಗೆ ಸ್ವಾತಂತ್ರ್ಯ ಪೂರ್ವದಲ್ಲಿಯೇ ಮೈಸೂರು ಸಂಸ್ಥಾನದಲ್ಲಿ ಒಬ್ಬ ಆದರ್ಶ ಮಹಿಳೆಯಾಗಿ ದಲಿತರ, ಸ್ತ್ರೀಯರ ಅಭಿವೃದ್ಧಿಗೆ ಮುಂದಾದರು.

೩.೧೮. ಆರ್. ಕಲ್ಯಾಣಮ್ಮ

ಮೈಸೂರು ಸಂಸ್ಥಾನದಲ್ಲಿ ಮಹಿಳೆಯರ ಮತ್ತು ದಲಿತರ ಪರವಾಗಿ ಮಕ್ಕಳ ಮತ್ತು ಹಿಂದುಳಿದವರ ಕಲ್ಯಾಣಕ್ಕೆ ಶ್ರಮಿಸಿದ ಧೀಮಂತ ಮಹಿಳೆ. ನಿಷ್ಕಲ್ಮಶ ಹೃದಯದ ಕೆಚ್ಚೆದೆಯ ಪತ್ರಕರ್ತೆ ಹಾಗೂ ಸೃಜನಾತ್ಮಕ ಸಾಹಿತಿ, ನಿಷ್ಠಾವಂತ ಸಮಾಜ ಸೇವಕಿ. ಆರ್. ಕಲ್ಯಾಣಮ್ಮನವರ ವ್ಯಕ್ತಿತ್ವ ಹಾಗೂ ಅವರ ಅಪಾರ ಸಾಧನೆಗಳು ಆದರ್ಶ ಜೀವನಕ್ಕೆ ಮಾದರಿಯಾಗಿದೆ. ವಿವಿಧ ಕ್ಷೇತ್ರಗಳಲ್ಲಿ ತನ್ನನ್ನು ತಾನು ಸಕ್ರಿಯವಾಗಿ ತೊಡಗಿಸಿಕೊಂಡು ಅರ್ಪಣಾ ಮನೋಭಾವದಿಂದ ಅವಿರತ ಸೇವೆಯನ್ನು ಸಲ್ಲಿಸಿದ ಮಹಿಳೆಯಾಗಿದ್ದಾರೆ.

೧೯೩೩ರಲ್ಲಿ ಮೈಸೂರು ರಸ್ತೆಯಲ್ಲಿನ ದೊಡ್ಡಪಾಳ್ಯದಲ್ಲಿನ ಆದಿಕರ್ನಾಟಕ ಕೇರಿಯಲ್ಲಿ ಆದಿಕರ್ನಾಟಕದ ಸ್ತ್ರೀಯರ ಸಭೆಯನ್ನು ನಡೆಸಿ ಅವರಲ್ಲಿ ಜಾಗೃತಿಯನ್ನು ಮೂಡಿಸಲು ಪ್ರಯತ್ನಿಸಿದರು. ಈ ಸಭೆಯಲ್ಲಿ ಜಾತಿಗಳ ಕಲ್ಪನೆಯ ವಿಚಾರ, ಹೆಣ್ಣುಮಕ್ಕಳ ವಿದ್ಯಾಭ್ಯಾಸ ಚೊಕ್ಕಟವಾಗಿರುವಿಕೆ, ಈ ವಿಚಾರದಲ್ಲಿ ಮಾತನಾಡುತ್ತಾ ಗಂಡಸರ ದುರಾಭ್ಯಾಸಗಳನ್ನು ಹೆಂಗಸರು ಹರತಾಳಗಳನ್ನು ಆಚರಿಸುವುದರ ಮೂಲಕ ಬಹು ಸುಲಭದಲ್ಲಿ ತ್ಯಜಿಸುವಂತೆ ಮಾಡಿ ತನ್ಮೂಲಕ ಅವರನ್ನೇ ಉತ್ತಮ ಸ್ಥಿತಿಗೆ ತಂದು ತಾವು ಸುಖವಾಗಿ ಜೀವಿಸಬಹುದು ಎಂದು ದಲಿತ ಮಹಿಳೆಯರಲ್ಲಿ ಅರಿವನ್ನು ಮೂಡಿಸುತ್ತಿದ್ದರು. ೧೯೩೮ರ ಹೊತ್ತಿಗೆ ಕಲ್ಯಾಣಮ್ಮನವರ ಕಾರ್ಯಕ್ಷೇತ್ರ ವಿಸ್ತಾರಗೊಂಡಿತ್ತು. ಸಮಾಜದಲ್ಲಿ ಅವರಿಗೆ ಉತ್ತಮ ಸ್ಥಾನಮಾನ ಲಭ್ಯವಾಗಿತ್ತು. ಪತ್ರಿಕೆಯ ಸಂಪಾದಕಿಯಾಗಿ, ಸಮಾಜ ಸೇವಕಿಯಾಗಿ, ದೀನದಲಿತ ಮಹಿಳೆಯರ ಮುಖಂಡರಾಗಿ ಅವರು ನಾಡಿನಾದ್ಯಂತ ಗೌರವಾನ್ವಿತರಾಗಿದ್ದರು. ಸ್ತ್ರೀಯರ ಶೋಷಣೆಗೆ ಮುಖ್ಯ ಕಾರಣ ಅವರು ಶಿಕ್ಷಣದಿಂದ ವಂಚಿತಳಾಗಿರುವುದು ಎಂಬುವುದನ್ನು ಮನಗಂಡ ಕಲ್ಯಾಣಮ್ಮ ೧೯೧೩ರಲ್ಲಿ ಶಾರದ ಸ್ತ್ರೀ ಸಮಾಜವನ್ನು ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಆರಂಭಿಸಿದರು. ಅಕ್ಷರಾಭ್ಯಾಸದ ಜೊತೆಜೊತೆಗೆ ಬೆತ್ತದ ಸಾಮಾನುಗಳನ್ನು ತಯಾರಿಸುವುದು ಮುಂತಾದ ಕೈ ಕಸಬುಗಳನ್ನು

ಕಲಿಸುವುದು ಈ ಸಂಸ್ಥೆಯ ಉದ್ದೇಶವಾಗಿತ್ತು. ಈ ಸಂಸ್ಥೆಯಿಂದ ಅನೇಕ ದಲಿತ ಹಿಂದುಳಿದ ಮಹಿಳೆಯರಿಗೆ ಅನುಕೂಲವಾಯಿತು.

ಶಾರದ ಸ್ತ್ರೀ ಸಮಾಜ ನಡೆಸುತ್ತಿರುವಾಗಲೇ ಮಹಿಳೆಯರಿಗಾಗಿ ಒಂದು ಪತ್ರಿಕೆ ನಡೆಸಬೇಕೆಂದು ೧೯೧೯ರಲ್ಲಿ ಸರಸ್ವತಿ ಎನ್ನುವ ಪತ್ರಿಕೆಯನ್ನು ಪ್ರಕಟಿಸಲು ಆರಂಭಿಸಿದರು. ಮಹಿಳೆಯರು ಮನೆಯಿಂದ ಹೊರಗಡೆ ಬಾರದ ಪರಿಸ್ಥಿತಿ ಇದ್ದಂತಹ ಆ ಸಂದರ್ಭದಲ್ಲೇ ಪತ್ರಿಕೆ ಆರಂಭಿಸಿ ದೀರ್ಘಕಾಲ ಸೇವೆ ಸಲ್ಲಿಸಿದ್ದರು. ಇಷ್ಟೆಲ್ಲಾ ಕಾರ್ಯ ಚಟುವಟಿಕೆಗಳ ನಡುವೆಯೂ ಕಲ್ಯಾಣಮ್ಮ ಸಾಹಿತ್ಯ ರಚನೆಯನ್ನು ಮಾಡಿದ್ದಾರೆ. ಸಾಮಾಜಿಕ ಮತ್ತು ಐತಿಹಾಸಿಕ ಕಾದಂಬರಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಭಕ್ತಿ ಧೀರಾ, ಸತೀ ಪದ್ಮಿನಿ, ರಣಕೇಸರಿ, ನಿರ್ಭಾಗ್ಯ ವನಿತೆ, ಪ್ರಿಯಂವದೆ ಮುಂತಾದ ಕಾದಂಬರಿಗಳನ್ನು ರಚಿಸಿ ಅವುಗಳಲ್ಲಿ ಸ್ತ್ರೀ, ದಲಿತ ಸಂವೇದನೆಯನ್ನು ಚಿತ್ರಿಸಿದ್ದಾರೆ. ತಾವೇ ಆರಂಭಿಸಿದ ಶಾರದ ಸ್ತ್ರೀ ಸಮಾಜ 'ಮಕ್ಕಳ ಕೂಟ'ಗಳಲ್ಲದೆ ಇನ್ನು ಅನೇಕ ಸಂಘ-ಸಂಸ್ಥೆಗಳಲ್ಲಿ ಕಲ್ಯಾಣಮ್ಮನವರು ಕಾರ್ಯ ನಿರ್ವಹಿಸಿದ್ದಾರೆ. ಅವರು ೧೯೩೫ರಲ್ಲಿ ಪ್ರಜಾಪ್ರತಿನಿಧಿ ಸಭೆಗೆ ಆರಿಸಲ್ಪಟ್ಟರು. ೧೯೩೮ರಲ್ಲಿ ಬೆಂಗಳೂರು ನಗರಸಭೆಯ ಉಪಾಧ್ಯಕ್ಷೆಯಾಗಿ ಕಾರ್ಯ ನಿರ್ವಹಿಸಿದರು.[೪೫]

ಹೀಗೆ ಕಲ್ಯಾಣಮ್ಮನವರು ದಲಿತರು, ಸ್ತ್ರೀಯರ, ಬಡಮಕ್ಕಳ ಉದ್ಧಾರಕ್ಕಾಗಿ ಶ್ರಮಿಸಿ ದೀನದಲಿತರ ಅಭಿವೃದ್ಧಿಗಾಗಿ ಸದಾ ದುಡಿಯುತ್ತಿದ್ದರು. ಮಹಿಳೆಯರಿಗೆ ಮೈಸೂರು ಸಂಸ್ಥಾನದಲ್ಲಿ ಸ್ಫೂರ್ತಿಯಾಗಿ ಕಾರ್ಯ ನಿರ್ವಹಿಸಿದ್ದರು. ಇವರ ಸೇವೆ ಸ್ಮರಣೀಯವಾದುದು. ಬಹುಮುಖ ಪ್ರತಿಭೆ, ಕ್ರಿಯಾಶೀಲರಾಗಿದ್ದ ಅವರು ಇಂದಿನ ನಾಗರಿಕ ಮಹಿಳೆಯರಿಗೆ ಆದರ್ಶಪ್ರಾಯರಾಗಿದ್ದಾರೆ.

೩.೧೯. ಅಸ್ಪೃಶ್ಯತಾ ನಿವಾರಣಾ ಹೋರಾಟಗಾರ ವಿಠಲ್‌ರಾಮ್ ಶಿಂಧೆ

ಇಪ್ಪತ್ತನೆಯ ಶತಮಾನದ ಹಲವಾರು ಚಳವಳಿಗಳನ್ನು ಗಮನಿಸಿದಾಗ ಎಲೆಮರೆಯ ಕಾಯಂತೆ, ಸಮಾಜಸೇವೆ ಮಾಡಿದ ಹಾಗೂ ಅಸ್ಪೃಶ್ಯತಾ ನಿವಾರಣೆಯಲ್ಲಿ ತೊಡಗಿಸಿಕೊಂಡಿದ್ದ ವಿಠಲರಾಮ್ ಶಿಂಧೆಯವರ ಹೆಸರು ಹೆಚ್ಚು ಪ್ರಚಲಿತದಲ್ಲಿಲ್ಲ. ವಿಠಲರಾಮ್ ಶಿಂಧೆಯವರು ಜಮಖಂಡಿಯಲ್ಲಿ ೨೩.೪.೧೮೭೩ರಲ್ಲಿ ಜನಿಸಿದರು. ಪ್ರಾರ್ಥನಾ ಸಮಾಜಕ್ಕೆ ಸೇರಿದ ಶಿಂಧೆಯವರು ತಮ್ಮ ವಿದ್ಯಾಭ್ಯಾಸವನ್ನು ಪುಣೆಯಲ್ಲಿ ಮತ್ತು ಹೆಚ್ಚಿನ ವಿದ್ಯಾಭ್ಯಾಸವನ್ನು ಇಂಗ್ಲೆಂಡಿನ ಮ್ಯಾಂಚೆಸ್ಟರ್ ಕಾಲೇಜಿನಲ್ಲಿ ಮುಂದುವರಿಸಿದರು. ಹಿಂದುಳಿದವರ ಹಾಗೂ ದಲಿತರ ಸೇವೆಗೆ ಅವರ ಇಡೀ ಜೀವನವನ್ನು ಅರ್ಪಿಸಿದರು.

ಬಾಲ್ಯದಲ್ಲೇ ಭಾಗವತ ಧರ್ಮದಿಂದ ಪ್ರೇರೇಪಿತರಾದ ಶಿಂಧೆಯವರು ವಿಗ್ರಹಾರಾಧನೆಯನ್ನು ಖಂಡಿಸಿ ಬ್ರಹ್ಮ ಸಮಾಜಕ್ಕೆ ಸೇರಿದ್ದರು. ಬ್ರಹ್ಮತತ್ವ ಮತ್ತು ಸಮಾನತೆಯಿಂದ ಮಾನವತೆಯನ್ನು ಪ್ರಚಾರ ಮಾಡಲು ಸಾಕಷ್ಟು ಶ್ರಮವನ್ನು ಪಟ್ಟರು. ಅವರ ಪ್ರಕಾರ 'ಅಸ್ಪೃಶ್ಯತೆಯನ್ನು ಹೋಗಲಾಡಿಸುವುದು ನನ್ನ ಧರ್ಮ ಎಂದು ನಂಬಿದ್ದೇನೆ' ಎಂಬುದಾಗಿತ್ತು. ದಲಿತ ಸಂಘಟನೆಗಳನ್ನು ಗಮನಿಸಿದಾಗ ಸ್ವತಂತ್ರವಾದ ಸಂಘಟನೆ ೧೯೦೬ಕ್ಕೆ ಮೊದಲು ಕಂಡುಬಂದಿಲ್ಲ.

ಅಲ್ಲೊಂದು ಇಲ್ಲೊಂದು ಪ್ರಯತ್ನ ನಡೆದಿದೆಯಷ್ಟೆ. ಅದು ಮಹರ್ ಜಾತಿಯವರ 'ಸೋಮವಂಶೀಯ' ಎಂಬ ಉಪಜಾತಿಯ ಪ್ರಯತ್ನ. ಈ ಪ್ರಯತ್ನದಿಂದ ಹೆಚ್ಚಿನ ಸುಧಾರಣೆ ಮಾಡಲಾಗದಿದ್ದರೂ, ವಿದ್ಯಾಭ್ಯಾಸ ಮತ್ತಿತರ ಉಪಯುಕ್ತವಾದ ಸುಧಾರಣೆಗೆ ಹೆಚ್ಚು ಇಂಬು ಕೊಟ್ಟಿತ್ತು. ಶಿಂಧೆಯವರು ತಮ್ಮ ಅಸ್ಪೃಶ್ಯತಾ ಸಮಾಜ ಸಂಸ್ಥೆಯನ್ನು ಆರಂಭಿಸಿದಾಗ ಇದೆಲ್ಲವನ್ನು ಗಮನಿಸಿದ್ದರು.

ಅಸ್ಪೃಶ್ಯತಾ ನಿವಾರಣ ಸಂಸ್ಥೆ

ವಿಠಲರಾಮ್ ಶಿಂಧೆಯವರು ಅಸ್ಪೃಶ್ಯತಾ ನಿವಾರಣ ಸಂಸ್ಥೆಯನ್ನು ಆರಂಭಿಸಿದ್ದು ೧೯೦೬ರಲ್ಲಿ. ಇದಕ್ಕೆ ಮೊದಲು ಜ್ಯೋತಿಬಾಪುಲೆ ೧೮೧೫ರಲ್ಲಿ ಒಂದು ಶಾಲೆಯನ್ನು ಸ್ಥಾಪಿಸಿದ್ದರು. ಆದರೆ ಅವರು ಹೆಚ್ಚಿನ ಸಂಕಷ್ಟಕ್ಕೆ ಒಳಪಟ್ಟರು. ಆ ಕಾಲದಲ್ಲಿ ಮಧ್ಯಮವರ್ಗದ ಜನ ಇದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಂತೆ ಕಾಣುವುದಿಲ್ಲ.

ಮುಂಬೈ ಪ್ರಾರ್ಥನಾ ಸಮಾಜ ಅಸ್ಪೃಶ್ಯರಿಗೆಂದು ಸಂಜೆಯ ಶಾಲೆ ಮತ್ತು ಬರೋಡದಲ್ಲಿ ತೆರದ ಶಾಲೆ ಮತ್ತು ಥಿಯೋಸೊಫಿಕಲ್ ಸಭೆಗೆ ಸೇರಿದ ಓಲ್‌ಕಟಾರವರು ಮದ್ರಾಸಿನಲ್ಲಿ ಸ್ಥಾಪಿಸಿದ ಶಾಲೆ ಮತ್ತು ಕೆ. ರಂಗರಾವ್ ಮಂಗಳೂರಿನಲ್ಲಿ ಸ್ಥಾಪಿಸಿದ ಶಾಲೆ ಇವೆಲ್ಲಾ ಸ್ಥಳೀಯ ಪ್ರಯತ್ನಗಳು. ಆದರೆ ಶಿಂಧೆಯವರು ಮೊದಲ ಬಾರಿಗೆ ತಮ್ಮ ಪ್ರಯತ್ನದಿಂದ 'ಅಸ್ಪೃಶ್ಯತಾ ನಿವಾರಣ ಸಂಸ್ಥೆ'ಯನ್ನು ಅಖಿಲ ಭಾರತದ ಮಟ್ಟಕ್ಕೆ ಒಯ್ದರು. ಈ ಪ್ರಯುತ್ನದಲ್ಲಿ ಮುಂಬಯಿಯ ಪ್ರಾರ್ಥನಾ ಸಮಾಜ ಮತ್ತು ಜಸ್ಟೀಸ್ ಚಂದಾವರ್ಕರ್‌ರವರ ಬೆಂಬಲ ಇವರಿಗಿತ್ತು.[೪೬]

ಈ ಸಂಸ್ಥೆಯ ಮುಖ್ಯ ಉದ್ದೇಶ ವಿದ್ಯಾಭ್ಯಾಸ ಮತ್ತು ಜೀವನೋಪಾಯಕ್ಕೊಂದು ಉದ್ಯೋಗ ಮತ್ತು ಸಾಮಾಜಿಕ ಚಿಂತನೆ, ಆರೋಗ್ಯ ಇವು ಮೂಲ ಉದ್ದೇಶಗಳಾದರೂ, ಸಾಮಾನ್ಯ ಮನುಷ್ಯನ ನಿಲುವಿಗೆ ತಿಳಿಯುವಂತೆ ಕೀರ್ತನೆ, ಭಜನೆ, ಪ್ರಾರ್ಥನೆ ಇವುಗಳು ದೈನಿಕ ಅಂಗದಲ್ಲಿ ಸೇರಿದ್ದವು. ಸೇವಾ ಸಂಘದಲ್ಲಿ ನಿರಾಶ್ರಿತ ಮಹಿಳೆಯರಿಗೆ ಆಶ್ರಯವಿತ್ತು. ಇದರ ಉಪಸಂಸ್ಥೆ ಭಾರತದ ಹಲವು ಭಾಗಗಳಲ್ಲಿ ಪ್ರಚಾರದಲ್ಲಿತ್ತು. ೧೯೦೯ರ ಹೊತ್ತಿಗೆ ಸಂಸ್ಥೆಯು ೧೨ ಉಪಭಾಗವನ್ನು ಹೊಂದಿದ್ದು ೧೨ ಶಾಲೆಗಳನ್ನು ನಡೆಸುತ್ತಿತ್ತು ಮತ್ತು ೧೦೧೮ ಮಕ್ಕಳು ವಿದ್ಯಾಭ್ಯಾಸದಲ್ಲಿ ತೊಡಗಿದ್ದರು.

ಶಿಂಧೆಯವರ ಈ ಪ್ರಯತ್ನದಲ್ಲಿ ಹಲವಾರು ಮಹಾರಾಜರುಗಳು, ರಾಜಕಾರಣಿಗಳು, ಸಮಾಜ ಸುಧಾರಕರು ಸಹಕರಿಸಿದರು. ೧೯೦೮ರ ಹೊತ್ತಿಗೆ ಹಲವಾರು ಗಣ್ಯ ವ್ಯಕ್ತಿಗಳು ಆರ್ಥಿಕ ಬೆಂಬಲ ಅಸ್ಪೃಶ್ಯತಾ ಸಂಸ್ಥೆಗೆ ಒದಗಿತ್ತು. ಮೊದಲನೇ ಬಾರಿ ೧೯೧೨ರಲ್ಲಿ ಸಮಾಜ ಸೇವಕರ ಸಮ್ಮೇಳನ ನಡೆಯಿತು. ಮೂರು ದಿನದ ಸಮ್ಮೇಳನದಲ್ಲಿ ೨೬೦ ಜನ ಭಾಗವಹಿಸಿದ್ದು, ಅಲ್ಲದೇ ಮುಖ್ಯವಾಗಿ ವಿಮರ್ಶೆ ಮಾಡಿದಾಗ ಸಂಸ್ಥೆಯು ೨೫ ಶಾಲೆಗಳನ್ನು ೧೪ ಷೆಡ್‌ಗಳಲ್ಲಿ

ನಡೆಸುತ್ತಿದ್ದು, ಅದರಲ್ಲಿ ೧೧೦೦ ವಿದ್ಯಾರ್ಥಿಗಳು ಕಲಿಯುತ್ತಿದ್ದು, ೩೫ ಜನ ಬೋಧಕರಿದ್ದರು. ಇದಲ್ಲದೆ ೫ ವಸತಿ ನಿಲಯಗಳು ಅಸ್ಪೃಶ್ಯರಿಗಾಗಿ ಕಾರ್ಯನಿರ್ವಹಿಸುತ್ತಿದ್ದವು.

ವಿಠಲರಾಮ್ ಶಿಂಧೆಯವರು ತಮ್ಮ ಅಸ್ಪೃಶ್ಯತಾ ನಿವಾರಣಾ ಸಂಸ್ಥೆಯಿಂದ ಕರ್ನಾಟಕದಲ್ಲಿ ಪ್ರಭಾವ ಬೀರಿದರು. ಮಂಗಳೂರು, ಬೆಳಗಾವಿ, ಹುಬ್ಬಳ್ಳಿ, ಬೆಂಗಳೂರಿನಲ್ಲಿರುವ ಸಂಸ್ಥೆಗಳ ಅಭಿವೃದ್ಧಿಗೆ ಗಮನ ಹರಿಸಿದರು.

ಬೆಂಗಳೂರಿನ ಹಲವು ಪ್ರಜ್ಞಾವಂತ ಸ್ಥಳೀಯ ನಾಗರಿಕರ ಸಹಾಯದಿಂದ ೧೯೧೩ರಲ್ಲಿ ದಲಿತ ವರ್ಗದವರಿಗೆಂದೆ ಒಂದು ಶಾಲೆಯನ್ನು ತೆರೆದರು. ಆದರೆ ಒಂದು ವರ್ಷದ ನಂತರ ಜಾಗ ಮತ್ತು ಹಣದ ಸಹಾಯವಿಲ್ಲದೆ ಶಾಲೆ ಮುಚ್ಚಲ್ಪಟ್ಟಿತು. ಆದರೆ ಈ ಸ್ಥಿತಿ ಹೆಚ್ಚಿನ ಕಾಲವಿರಲಿಲ್ಲ. ಶಿಂಧೆಯವರ ಹಳೇ ಮಿತ್ರ ನಾರಾಯಣ ದೇವಲ್ ಅವರ ಶ್ರಮದಿಂದ ಬೆಂಗಳೂರಿನ ಟ್ಯಾನರಿ ರೋಡಿನಲ್ಲಿ ೧ ಜುಲೈ ೧೯೧೫ರಂದು ಒಂದು ಶಾಲೆ ಶುರುವಾಯಿತು. ಉಪಾಧ್ಯಾಯರಿಗೆ ತರಬೇತಿ ಶಿಕ್ಷಣ ಇಲ್ಲದಿದ್ದರೂ, ಶ್ರಮದಿಂದ ಶಾಲೆಯನ್ನು ನಡೆಸಿದ್ದರಿಂದ ಶಾಲೆ ಯಶಸ್ವಿಯಾದದ್ದೇ ಅಲ್ಲದೆ, ವಿದ್ಯಾರ್ಥಿ ಸಂಖ್ಯೆ ಮೊದಲು ೨೫ ಇದ್ದುದು, ೧೯೧೭ರಲ್ಲಿ ೭೪ಕ್ಕೆ ಏರಿತು. ಈ ಡಿಪ್ರೆಸ್ಡ್ ಕ್ಲಾಸ್ ಸಂಸ್ಥೆಯವರು ಬೆಂಗಳೂರಿನಲ್ಲಿ ಕಾಲರ ಪಿಡುಗಿನಿಂದ ಬಳಲಿದ ಜನರಿಗೆ ಸಹಾಯ ಮಾಡಿದರು. ಬೆಂಗಳೂರು ಸುತ್ತಮುತ್ತ ಇದ್ದ ಕಾಲರ ಪೀಡಿತರ ನೆರವಿಗೆ ಸಮಾಜ ಸೇವಕರು ಶ್ರಮಿಸಿದರು. ಇದರಲ್ಲಿ ಗೋಪಾಲಸ್ವಾಮಿ ಅಯ್ಯರ್, ಚಲುವರಾಯ ಮೊದಲಿಯರ್, ಡಾ. ಅಮೃತರಾವ್ ವಿಶೇಷವಾಗಿ ಸಹಾಯ ಮಾಡಿದರು. ಒಬ್ಬ ಔಷಧಿ ವ್ಯಾಪಾರಿ ಉಚಿತವಾಗಿ ಔಷಧಿಯನ್ನು ಒದಗಿಸಿದನು.[೯೭]

೧೯೧೫ರ ವೇಳೆಗೆ ಹಿಂದುಳಿದ ಮಕ್ಕಳಿಗಾಗಿ ೩ ಪೂರ್ಣ ಶಾಲೆ ಮತ್ತು ೨ ರಾತ್ರಿ ಶಾಲೆಗಳು ಕೆ.ಸಿ. ದೇವಲ್, ವಿ. ವೆಂಕಟರಂಗನ್ ಮತ್ತು ವಿ.ಕೆ. ನಾಯಕರವರ ಪ್ರಯತ್ನದಿಂದ ನಡೆದಿದ್ದವು. ಶಿಂಧೆಯವರು ಸ್ಕೂಲಿಗೆಂದು ೫೦೦೦ ರೂಪಾಯಿ ಧನ ಸಹಾಯ ಬೇಡಿದರು. ಆದರೆ ೧೦೦೦ ರೂಪಾಯಿ ಮಾತ್ರ ಸಂದಿತು. ೧೯೧೯ರಲ್ಲಿ ಕೃಷ್ಣಜಿ ಗೋವಿಂದರಾವ್ ಪಾಕಾಡೆಯವರ ಸಂಗಡ ಶಿಂಧೆಯವರು ೧೯೧೯ರಲ್ಲಿ ಬೆಂಗಳೂರಿಗೆ ಭೇಟಿಕೊಟ್ಟರು. ಮುಂಬೈಯಿಂದ ಪ್ರಚಾರ ಸಂಘವನ್ನು ಸ್ಥಳಾಂತರಿಸಲಾಯಿತು. ಸರ್ಕಾರದ ಸಹಾಯ ಒದಗಿತು ಮತ್ತು ಸಂಸ್ಥೆಗೆ ಕಟ್ಟಡದ ಅವಶ್ಯಕತೆ ಇತ್ತು. ಅಹಲ್ಯಾಶ್ರಮದ ಕೆಲಸ ನಡೆದಿದ್ದಾಗ ಶಿಂಧೆಯವರ ಮೇಲೆಯೇ ಆರೋಪದ ಹೊರೆ ಹೊರಿಸಲಾಯಿತು. ಶಿಂಧೆಯವರು ಸಂಸ್ಥೆಗೆ ರಾಜಿನಾಮೆ ಸಲ್ಲಿಸಿದರು. ಆದರೆ ದಲಿತ ನಿವಾರಣ ಕೆಲಸದಿಂದ ಮಾತ್ರ ಹಿಂದೆ ಸರಿಯಲಿಲ್ಲ.

ಪುಣೆಯ ಅಹಲ್ಯಾಶ್ರಮದ ಶಂಕುಸ್ಥಾಪನೆ ಮಾಡಲು ಮೈಸೂರಿನ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಕರೆಯಲು ೧೯೨೧ರಲ್ಲಿ ಶಿಂಧೆಯವರು ಮೈಸೂರಿಗೆ ಭೇಟಿ ನೀಡಿದರು. ಮೈಸೂರಿನ ರಾಜರನ್ನು ನೋಡಲು ಮೈಸೂರು ದರ್ಬಾರ್ ಉಡುಪಿನಲ್ಲಿ

ಬಂದು ಕಾಣಬೇಕೆಂದೂ ಮಹಾರಾಜರ ಕಾರ್ಯದರ್ಶಿಯವರು ಆದೇಶ ಮಾಡಿದರು. ಆದರೆ ಇವರ ಹತ್ತಿರ ಉಡುಪು ಇಲ್ಲದಿದ್ದರಿಂದ ಮತ್ತು ನಾಲ್ವಡಿಯವರಿಗೆ ಬಂದಿರುವ ವಿಷಯ ತಿಳಿದಿದ್ದರಿಂದ ಇವರನ್ನು ಗಂಭೀರವಾಗಿ ಬರಮಾಡಿಕೊಂಡರು ಮತ್ತು ಶಿಂಧೆಯವರನ್ನು ಕೂಡಿಸಿ ಹತ್ತಿರ ಕೂತರು. ನಮ್ರತೆಯಿಂದ ಶಿಂಧೆಯವರು 'ಮಹಾರಾಜ ಈ ಪೋಷಾಕು ನಮ್ಮಂಥವರು ಧರಿಸೇ ನಿಮ್ಮನ್ನು ನೋಡಬೇಕೆ?' ಎಂದರು. ಇದನ್ನು ಕೇಳಿ ಸಂಕೋಚಗೊಂಡ ನಾಲ್ವಡಿಯವರು ಇದೆಲ್ಲಾ ನಿಮಗೆ ಬೇಕಾಗಿರಲಿಲ್ಲ ತಪ್ಪಾಯಿತು ಎಂದರು. ಶಿಂಧೆಯವರು ತಾವು ಬಂದ ಕಾರಣ ತಿಳಿಸಿದರು. ಮಹಾರಾಜರು ಯುವರಾಜರನ್ನು ಸಮಾರಂಭಕ್ಕೆ ಕಳುಹಿಸುವುದಾಗಿ ತಿಳಿಸಿದರು. ಆಗ ಮೈಸೂರು, ಮದ್ರಾಸ್ ಪ್ರಾಂತ್ಯದಲ್ಲಿ ಅಸ್ಪೃಶ್ಯರನ್ನು ಬಿಷಪ್ ವೈಟ್ ಹೆಡ್ ಎಂಬಾತ ಮತಾಂತರಿಸುತ್ತಿದ್ದ, ಆಗ ಚಳವಳಿ ನಡೆಸಿದ್ದರ ಬಗ್ಗೆ ತಿಳಿಸಿದರು. ತಮಗೆ ಇಂತಹ ವಿಷಯಗಳೆಲ್ಲಾ ಕಿವಿಗೆ ಬರುವುದಿಲ್ಲವೆಂದೂ ಮತ್ತು ತಿಳಿಸಿದ್ದಕ್ಕೆ ಅಭಾರಿ ಯಾಗಿದ್ದೇನೆಂದು ತಿಳಿಸಿದರು. ಡಿಪ್ರೆಸ್ಡ್ ಮಿಷನ್ ಕೆಲಸವನ್ನೇ ಮಹಾರಾಜರು ಮೆಚ್ಚಿದ್ದಲ್ಲದೆ ಮುಂಬೈನ ಸಮ್ಮೇಳನಕ್ಕೆ ಬರುವೆನೆಂದು ಆಶ್ವಾಸನೆ ಕೊಟ್ಟು ಅದರಂತೆ ನಡೆದುಕೊಂಡರು.[೪೮]

ಅಖಿಲ ಭಾರತದ ಮಟ್ಟಿಗೆ ದಲಿತ ಪ್ರಶ್ನೆಯನ್ನು ಒಯ್ದು ಭಾರತದಲ್ಲೆಲ್ಲಾ ತಮ್ಮ ಡಿಪ್ರೆಸ್ಡ್ ಕ್ಲಾಸ್ ಮಿಷನ್ ಸಂಘಟನೆಯನ್ನು ಒಗ್ಗೂಡಿಸಿ ಅದರ ಏಳ್ಗೆಗೆ ದುಡಿದು ಅದನ್ನೇ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ಗೆ ಕೊಂಡೊಯ್ದರು. ಅಸ್ಪೃಶ್ಯತಾ ನಿವಾರಣ ಕಾರ್ಯದಲ್ಲಿ ಶಿಂಧೆಯವರಿಗಿದ್ದ ತ್ಯಾಗ ಅಸಾಧಾರಣವಾದದ್ದು. ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ಕೆ ತಮ್ಮ ಸಮಯವನ್ನು ವಿನಿಯೋಗಿಸಿ, ಧರ್ಮ ಪ್ರಚಾರ ಕಾರ್ಯಕ್ಕೆ ರಾಜೀನಾಮೆ ನೀಡಿದರು. 'ದಲಿತರ ಪ್ರಶ್ನೆಯನ್ನು ಅವರು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ದೃಷ್ಟಿಯಿಂದ ನೋಡಿದರು. ಆರ್ಥಿಕ ಬೆಂಬಲ ದಲಿತರ ಪೋಷಣೆಗೆ ಅತ್ಯಂತ ಮುಖ್ಯ ಎಂದು ಮನಗಂಡಿದ್ದರಿಂದ ಅವರು ಸ್ವಾವಲಂಬಿಗಳಾಗಿರಬೇಕೆಂದೂ ಮತ್ತು ಸಮಾಜದಲ್ಲಿ ಎಲ್ಲೊರಡನೆಯೂ ಬೆರೆತು ಒಂದಾಗಲು ಶ್ರಮಿಸಿದರು. ಶಿಂಧೆಯವರು ತಮಗಾಗಿ ಏನನ್ನು ಬಯಸಿದವರಲ್ಲ. ಇಂತಹ ಶಿಂಧೆಯವರು ೨ ಜನವರಿ ೧೯೪೪ರಂದು ನಿಧರಾದರು.

೩.೨೦. ಎಚ್.ವಿ. ನಂಜುಂಡಯ್ಯ

ಇವರು ೧೮೬೦ ಅಕ್ಟೋಬರ್ ೧೩ರಂದು ಬ್ರಾಹ್ಮಣರ ಮುಲಕನಾಡು ವಂಶದ ಒಂದು ಬಡ ಕುಟುಂಬದಲ್ಲಿ ಜನಿಸಿದರು. ತಂದೆ ಸುಬ್ಬಯ್ಯ, ತಾಯಿ ಅನ್ನಪೂರ್ಣಮ್ಮ ಇವರಿಬ್ಬರ ಮೊದಲನೆಯ ಮಗನಾಗಿ ಜನಿಸಿದರು. ಇವರಿಗೆ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಆಸಕ್ತಿ ಇದ್ದುದರಿಂದ ಎಲ್ಲಾ ಪರೀಕ್ಷೆಗಳಲ್ಲಿಯೂ ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಿ, ವಿದ್ಯಾರ್ಥಿ ಜೀವನದುದ್ದಕ್ಕೂ ವಿದ್ಯಾರ್ಥಿ ವೇತನವನ್ನು ದೊರಕಿಸಿಕೊಂಡರು. ಬಡ ವಿದ್ಯಾರ್ಥಿಯೆಂದು ಅರಮನೆಯಿಂದ ಆರು ರೂಪಾಯಿ ಮಾಸಾಶನವನ್ನು ಪಡೆಯುತ್ತಿದ್ದರು. ಮೈಸೂರಿನ ವೆಸ್ಲಿಯನ್ ಮಿಷನ್

ಪ್ರೌಢಶಾಲೆ ಮತ್ತು ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಓದಿ ೧೮೮೦ರಲ್ಲಿ ಬಿ.ಎ. ಡಿಗ್ರಿ ಪಡೆದರು. ನಂತರ ಕೊಳ್ಳೇಗಾಲದಲ್ಲಿ ಸಬ್ ರಿಜಿಸ್ಟಾರ್ ಮತ್ತು ಮದರಾಸಿನ ಅಕೌಂಟೆಂಟ್ ಜನರಲ್ ಕಛೇರಿಯಲ್ಲಿ ಗುಮಾಸ್ತರಾಗಿ ಕೆಲಸ ಮಾಡುತ್ತಲೆ, ೧೮೮೩ರಲ್ಲಿ ಬಿ.ಎಲ್. ಮಾಡಿಕೊಂಡು ೧೮೮೫ರಲ್ಲಿ ಮೈಸೂರು ಸರ್ಕಾರದ ಕೆಲಸಕ್ಕೆ ಸೇರಿ, ನಂಜನಗೂಡು ಮತ್ತು ಹಾಸನದಲ್ಲಿ ಅಸಿಸ್ಟೆಂಟ್ ಕಮೀಷನರ್ ಆಗಿ ಸೇವೆ ಸಲ್ಲಿಸಿದ್ದರು.

ನಂಜುಂಡಯ್ಯನವರು ಕೌನ್ಸಿಲ್ ಮೆಂಬರ್ ಹುದ್ದೆಯ ಜೊತೆಗೆ ವಿದ್ಯಾಭ್ಯಾಸ ವಿಭಾಗದ ಅಧ್ಯಕ್ಷರಾಗಿ ಅಧಿಕಾರವನ್ನು ವಹಿಸಿಕೊಂಡರು. ಇವರು ಹಳ್ಳಿ ಹಳ್ಳಿಗಳನ್ನು ತಿರುಗಿ ವಿದ್ಯಾ ಸಂಸ್ಥೆಗಳನ್ನು ಕಂಡು ಅವುಗಳಲ್ಲಿರುವ ಲೋಪದೋಷಗಳನ್ನು ನಿವಾರಿಸಲು ಪ್ರಯತ್ನಿಸಿದರು. ಈ ಅವಧಿಯಲ್ಲಿ ಅವರ ದಿನಚರಿಯ ಪುಸ್ತಕದ ತುಂಬ ಬಡ ಉಪಾಧ್ಯಾಯರ ಬೇಡಿಕೆಗಳು, ಶಾಲೆಯ ಕಟ್ಟಡಗಳು ಸ್ಥಿತಿ ಅವುಗಳನ್ನು ಉತ್ತಮಗೊಳಿಸುವ ಯೋಜನೆಗಳನ್ನು ಹಾಕಿಕೊಂಡರು. ದೇಶ ಉದ್ಧಾರವಾಗಬೇಕಾದರೆ ವಿದ್ಯಾಭ್ಯಾಸದಿಂದಲೇ ಹಾಗಾಗಿ ಮೈಸೂರು ಸಂಸ್ಥಾನ ಈ ವಿಚಾರದಲ್ಲಿ ಮಾದರಿಯಾಗಬೇಕು. ಹುಡುಗ ಹುಡುಗಿಯರೆಲ್ಲಾ ವಿದ್ಯಾವಂತರಾಗಬೇಕು. ಶಾಲಾ ಪುಸ್ತಕಗಳನ್ನು ಪರಿಷ್ಕರಿಸಲು ಒಂದು ನಿಯೋಗವಿರಬೇಕು ಎಂದಿದ್ದಾರೆ.[೪]

ಹರಿಜನೋದ್ಧಾರ, ಗಿರಿಜನೋದ್ಧಾರಗಳೆಂದು ಸಮಾಜ ಎಚ್ಚೆತ್ತಿದೆ. ಅಸ್ಪೃಶ್ಯತೆ ಶಿಕ್ಷಾರ್ಹವಾದ ಅಪರಾಧವೆಂದು ಸರ್ಕಾರ ವಿಧಿಸಿದೆ. ಆದರೆ ಅವರು ಅಸ್ಪೃಶ್ಯತೆ ಎಂಬುದು ಮೂಢನಂಬಿಕೆಯೆಂದು ತಿಳಿದಿದ್ದರು. ತಮ್ಮ ಗಾಡಿ ನಡೆಸಲು ತಂಬು ಎಂಬ ಒಬ್ಬ ಹರಿಜನನನ್ನು ನೇಮಿಸಿಕೊಂಡು ಅವನ ಸಂಸಾರದ ಭಾರವನ್ನು ನಂಜುಂಡಯ್ಯ ಹೊತ್ತಿದ್ದರು. ಅವನ ಮಕ್ಕಳನ್ನು ನಂಜುಂಡಯ್ಯನವರು ಮನೆ ಮಕ್ಕಳಂತೆ ನೋಡಿಕೊಳ್ಳುತ್ತಿದ್ದರು. ದಲಿತರ ಸ್ಥಿತಿ ಸುಧಾರಿಸುವ ಅವಕಾಶ ಸಿಕ್ಕಾಗ ಅವರಿಗಾಗಿ ಒಂದು 'ಸೆಂಟ್ರಲ್ ಬೋರ್ಡಿಂಗ್ ಸ್ಕೂಲ್' ಸ್ಥಾಪಿಸಿ ವಸತಿ, ಶಾಲೆ, ಕೈಕಸುಬಿನ ತರಗತಿಗಳನ್ನು ಒಳಗೊಂಡಂತೆ ಎಲ್ಲವನ್ನು ಒದಗಿಸಿದರು. ಸ್ತ್ರೀ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿ ೧೯೦೪ರಲ್ಲಿ ಮಹಾರಾಣಿ ಶಾಲೆಯ ವ್ಯವಸ್ಥಾಪಕ ಮಂಡಳಿಯ ಅಧ್ಯಕ್ಷರಾಗಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಶ್ರಮಿಸಿದರು. ವಿಧವೆಯರು, ಅನಾಥ ಹೆಂಗಸರು ಬೇರೊಬ್ಬರ ಹಂಗಿನ ಕೂಳಿಗೆ ಒಳಗಾಗದೆ ಸ್ವತಂತ್ರವಾಗಿ ವಿದ್ಯಾರ್ಜನೆ ಮಾಡಲು, ಕಸುಬುಗಳನ್ನು ಕಲಿಯಲು ಅನುಕೂಲವಾಗುವಂತೆ 'ವಿಡೋಸ್ ಹೋಮ್' ಎಂಬ ಮಂದಿರವನ್ನು ಸ್ಥಾಪಿಸಿ ದಕ್ಷರೂ ಯೋಗ್ಯರೂ ಆದ ಹೆಂಗಸರನ್ನೇ ಅದರ ಮೇಲ್ವಿಚಾರಣೆಗೆ ನೇಮಿಸಿದರು.

ಹೀಗೆ ನಂಜುಂಡಯ್ಯನವರು ತಮ್ಮ ಬದುಕಿನುದ್ದಕ್ಕೂ ಹಿಂದೂಳಿದವರ ಅಸ್ಪೃಶ್ಯರ ಪರವಾಗಿ ಅನೇಕ ಯೋಜನೆಗಳನ್ನು ಕೈಗೊಂಡು ಅವುಗಳನ್ನು ಕಾರ್ಯಗತಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದರು. ತಮ್ಮ ಕೆಲಸಗಳಲ್ಲಿ ಆಡಂಬರ ತೋರದೆ, ನಂಬಿಕೆ ವಿಶ್ವಾಸ ಒಮ್ಮತಗಳಿಂದ ಶಾಂತಿಯುತ ಜೀವನ ನಡೆಸಿದರು. ಇಂತಹ ದಲಿತಪರ ವ್ಯಕ್ತಿಗಳನ್ನು ನೆನಪಿಸಿಕೊಳ್ಳುವುದು ಇಂದು ಅಗತ್ಯವಿದೆ.

೩.೨೧. ಮಾಗನೂರು ಬಸಪ್ಪ

ಇವರು ರಾಣಿಬೆನ್ನೂರಿನ ಹಿರೇಮಾಗನೂರು ಎಂಬಲ್ಲಿ ದಿನಾಂಕ ೩೦-೩-೧೯೦೦ರಲ್ಲಿ ಚನ್ನಬಸಪ್ಪಗೌಡ, ಸಾವಮ್ಮ ಎಂಬ ದಂಪತಿಗಳ ಮಗನಾಗಿ ಜನಿಸಿದರು. ಇವರು ವಿದ್ಯಾಭ್ಯಾಸ ಮಾಡಿದ್ದು ಕಡಿಮೆಯಾದರೂ, ಅವರ ಅನುಭಾವ ಮತ್ತು ಪ್ರಗತಿಪರ ಚಿಂತನೆಗಳು ಯಾವ ಶಿಕ್ಷಿತರಿಗಿಂತಲೂ ಕಡಿಮೆಯಿರಲಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ ಅನೇಕ ಬಾರಿ ಸೆರೆಮನೆ ವಾಸವನ್ನು ಅನುಭವಿಸಿದ್ದರು. ಇವರ ಪ್ರಗತಿಪರ ಮನೋಭಾವದಿಂದ ದಾವಣಗೆರೆಯಲ್ಲಿ ದಲಿತ ವರ್ಗದವರ ಅಭಿವೃದ್ಧಿಗೆ ಶ್ರಮಿಸಿದರು. ದಾವಣಗೆರೆ ವರ್ತಕರ ಸಂಘ, ದಾವಣಗೆರೆ ಎಜ್ಯುಕೇಷನ್ ಅಸೋಷಿಯೇಷನ್ ಸ್ಥಾಪಿಸಿ ಅದರ ಮುಖಾಂತರ ದೀನದಲಿತರ ಶಿಕ್ಷಣಕ್ಕೆ ನೆರವಾದರು.

೧೯೩೮ರಲ್ಲಿ 'ಅಶಕ್ತ ಪೋಷಕರ ಸಂಘ'ವನ್ನು ಸ್ಥಾಪಿಸಿ ಅದರ ಮುಖಾಂತರ ಸಮಾಜ ಸೇವಾ ಕಾರ್ಯಗಳನ್ನು ಮಾಡಿದರು. ಇವರ ಪರಿಶ್ರಮದಿಂದ ದಾವಣಗೆರೆಗೆ ಶಿಕ್ಷಣಕ್ಕಾಗಿ ಬಂದ ಬಡವರ, ದೀನ-ದಲಿತರ ಮಕ್ಕಳು ನಿರಾಶರಾಗದಂತೆ ನೋಡಿಕೊಂಡರು. ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯ ಮೂಲಭೂತ ಸೌಲಭ್ಯಗಳನ್ನು ನೀಡಿ ಶಿಕ್ಷಣ ಪಡೆಯುವಂತೆ ಮಾಡಿದರು. ಈ ಸಂಘಕ್ಕೆ ಕೊಂಡಜ್ಜಿ ಬಸಪ್ಪನವರ ಸಹಾಯ ಮತ್ತು ಜಿಲ್ಲಾಡಳಿತದ ನೆರವಿನಿಂದ ಬಿಲ್ಡಿಂಗ್ ಸಹಿತ ಖಾಲಿ ಜಾಗ ಪಡೆದು ವಸತಿ ನಿಲಯವನ್ನು ಪ್ರಾರಂಭಿಸಿದರು. ದಾವಣಗೆರೆಯ ಬಸ್‌ನಿಲ್ದಾಣದ ಬಳಿ ಇದ್ದ ನಿವೇಶನಕ್ಕೆ ದೂರವಾಗಿ ಕೇಂದ್ರ ಪ್ರಾರಂಭಿಸಿದ್ದರ ವಿರುದ್ಧವಾಗಿ ತಲೆದೋರಿದ ಸಮಸ್ಯೆಗಳನ್ನು ಅತ್ಯಂತ ತಾಳ್ಮೆಯಿಂದ ಮತ್ತು ಕರ್ತವ್ಯ ನಿಷ್ಠೆಯಿಂದ ಪೂರ್ಣ ನಿವೇಶನ ಅಶಕ್ತ ಪೋಷಕರ ಸಂಘಕ್ಕೆ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾದರು.

ಆ ನಿವೇಶನದಲ್ಲಿ ಅನೇಕ ವರ್ತಕರು ಪೆಟ್ಟಿಗೆ ಅಂಗಡಿಗಳನ್ನು ಹಂಗಾಮಿಯಾಗಿ ಹಾಕಿಕೊಂಡು ಗಲಾಟೆ ಮಾಡಿದರು. ಅವರಲ್ಲಿ ಕೆಲವರು ನೆಲ ಬಾಡಿಗೆಗೆ ತೆಗೆದುಕೊಂಡು ಹಂಗಾಮಿಯಾಗಿ ಕಟ್ಟಡ ಕಟ್ಟಲು ತೊಡಗಿದರು. ಆಗ ಇವರು ಸರ್ವೋಚ್ಚ ನ್ಯಾಯಾಲಯದವರೆಗೂ ಕೇಸ್‌ನ್ನು ತೆಗೆದುಕೊಂಡು ಹೋಗಿ ಅವರನ್ನು ಖಾಲಿ ಮಾಡಿಸುವಲ್ಲಿ ಯಶಸ್ವಿಯಾದರು. ನಂತರ ನಿವೇಶನದ ಸುತ್ತಲೂ ಮಳಿಗೆಗಳನ್ನು ಕಟ್ಟಿಸಿ ಅವುಗಳಿಂದ ಬರುವ ಬಾಡಿಗೆಯಿಂದ ಅಶಕ್ತ. ದೀನದಲಿತ ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ಏರ್ಪಾಟನ್ನು ಮಾಡಿದರು.

ಹರಿಜನ ಹಾಸ್ಟಲ್-೧೯೪೨

ಸ್ವಾತಂತ್ರ್ಯ ಪೂರ್ವದಲ್ಲಿ ೧೯೪೨ರಲ್ಲಿ ಹರಿಜನ ವಸತಿ ನಿಲಯಕ್ಕೆ ಭೇಟಿಕೊಟ್ಟು ಪರಿಶೀಲಿಸಿದಾಗ ಅಲ್ಲಿಯ ಅವ್ಯವಸ್ಥೆಯನ್ನು ಕಂಡು ಮನನೊಂದು ಹೋದರು. ವಿದ್ಯಾರ್ಥಿಗಳಿಗೆ ಆಗುವ ತೊಂದರೆ ಕಂಡು ಅಲ್ಲಿ ಅಡಿಗೆಮನೆ ಅತ್ಯಾವಶ್ಯಕವಾಗಿ ಬೇಕಾಗಿದೆ ಎಂದು ಮನಗಂಡು ತಮ್ಮ ಸ್ವಂತ ಹಣ ೧೦,೦೦೦/- ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಅಡುಗೆ ಮನೆಯನ್ನು ನಿರ್ಮಿಸಿಕೊಟ್ಟರು.

ಛಲವಾದಿ ನಿಲಯ

ಛಲವಾದಿ ವಿದ್ಯಾರ್ಥಿಗಳಿಗೆ ವಸತಿ ನಿಲಯವನ್ನು ಕಟ್ಟಲು ೩೦,೦೦೦/- ರೂಪಾಯಿಗಳು ಅವಶ್ಯಕತೆ ಇತ್ತು. ಆದರೆ ಸರ್ಕಾರದಿಂದ ಕೇವಲ ೭,೫೦೦/- ರೂಪಾಯಿಗಳು ಮಾತ್ರ ಅನುದಾನ ಮಂಜೂರು ಮಾಡಿದರು. ಉಳಿದ ಹಣವನ್ನು ಮಾಗನೂರು ಬಸಪ್ಪನವರೇ ಹೊಂದಿಸಿ ವಸತಿ ನಿಲಯವನ್ನು ಕಟ್ಟಿಸಿ, ಅದರ ಉಸ್ತುವಾರಿ ಎಲ್ಲವನ್ನು ಕೌಸಲ ಶ್ರೀನಿವಾಸ ಶೆಟ್ಟರು ಮತ್ತು ಇವರು ನೋಡಿಕೊಳ್ಳುತ್ತಿದ್ದರು.

ಭೋವಿ ವಸತಿ ನಿಲಯ

ಸಮುದಾಯಕ್ಕೊಂದು ವಸತಿ ನಿಲಯಗಳನ್ನು ಮಾಗನೂರು ಬಸಪ್ಪನವರು ಸರ್ಕಾರದಿಂದ ಮಂಜೂರು ಮಾಡಿಸಿದರು. ಆದರೆ ಸರ್ಕಾರದ ಕಡಿಮೆ ಅನುದಾನದಿಂದ ವಸತಿ ನಿಲಯಗಳನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತಿರಲಿಲ್ಲ. ಇದಕ್ಕೆ ಪೂರಕವಾಗಿ ಎಲ್ಲಾ ರೀತಿಯ ಆರ್ಥಿಕ ಸಂಪನ್ಮೂಲಗಳನ್ನು ಒದಗಿಸಿ ವಸತಿ ನಿಲಯಗಳನ್ನು ಪೂರ್ಣಗೊಳಿಸಿ, ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಅನಾನುಕೂಲ ಉಂಟಾಗದ ರೀತಿಯಲ್ಲಿ ನೋಡಿಕೊಳ್ಳುತ್ತಿದ್ದರು.[೫೦]

ಹೀಗೆ ಮಾಗನೂರು ಬಸಪ್ಪನವರು ದಲಿತರ ಬಗ್ಗೆ ಅಪಾರವಾದ ಕಾಳಜಿಯನ್ನು ಹೊಂದಿದ್ದು ದೀನದಲಿತರ ಅಭಿವೃದ್ಧಿಗೆ ತಮ್ಮ ಸ್ವಂತ ಹಣವನ್ನು ಉಪಯೋಗಿಸಿ ಅವರ ಅಭಿವೃದ್ಧಿಗೆ ಶ್ರಮಿಸಿದರು.

೩.೨೨. ಎಂ. ಆರ್ಯಮೂರ್ತಿ

ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣೆಗಾಗಿ ಮೊದಲಿಗೆ ಮುಂದಾದವರೆಂದರೇ ಕಚ್ಚ ಮುಂಚಿರಾಯರಂಗ ರೆಡ್ಡಿ ಅವರು(ಕೆ.ಸಿ. ರೆಡ್ಡಿ). ಇಂಗ್ಲೆಂಡಿನ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಎಂ.ಎ. ಪದವಿ ಪಡೆದು ಪ್ರತಿಭಾನ್ವಿತರಾಗಿದ್ದ ಇವರು ಮದರಾಸಿನ ಜಸ್ಟೀಸ್ ಪಾರ್ಟಿಯಿಂದ ಪ್ರಭಾವಿತರಾಗಿದ್ದರು. ಮೈಸೂರಿನಲ್ಲಿ ಆರ್. ಗೋಪಾಲಸ್ವಾಮಿ ಅಯ್ಯರ್ ಅವರು ದಲಿತ ಅಭಿವೃದ್ಧಿಗೆ ತಮ್ಮ ಸಂಪೂರ್ಣ ಬದುಕನ್ನು ತೊಡಗಿಸಿಕೊಂಡಿದ್ದರು. ಇವರಿಗೆ ಮಹಾರಾಜರ ಸಹಕಾರ ಸಹ ಇತ್ತು. ೧೯೩೦ರಲ್ಲಿ ಡಾ. ಅಂಬೇಡ್ಕರ್ ಅವರು ಮೈಸೂರು ಸಂಸ್ಥಾನದ ಮುಖ್ಯ ಕಾನೂನು ಸಲಹೆಗಾರರಾಗಿ ಒಂದು ಸಮಿತಿ ರಚನೆಯಾಯಿತು. ಸೋಲಂಕಿ, ಟಕ್ಕರ್ ಬಾಷಾ ಇದರ ಸದಸ್ಯರಾಗಿದ್ದರು. ಇದರ ಮುಖ್ಯ ಉದ್ದೇಶ ಅಸ್ಪೃಶ್ಯ ಜಾತಿಗಳಿಗೆ ಸೇರಿದ ಜನಾಂಗಗಳ ಕಲೆ, ಸಂಸ್ಕೃತಿ, ಸಾಹಿತ್ಯ ಮುಂತಾದವನ್ನು ಗುರುತಿಸಿ ಅವುಗಳನ್ನು ಉಳಿಸಿ ಪ್ರೋತ್ಸಾಹಿಸುವುದು ಹಾಗೂ ಸಾರ್ವಜನಿಕ ಕೆರೆ, ಕಟ್ಟೆ, ಬಾವಿ ಮುಂತಾದ ಸಾರ್ವಜನಿಕ ಸ್ಥಳಗಳನ್ನು ಎಲ್ಲಾ ಜನಾಂಗದವರಂತೆ ದಲಿತರೂ ಸಹ ಎಲ್ಲವನ್ನೂ ಬಳಸಲು ಮುಕ್ತ ಅವಕಾಶ ಕಲ್ಪಿಸಿಕೊಡುವುದು ಆಗಿತ್ತು.[೫೧]

ಗಾಂಧೀಜಿ ಅವರು ಶೋಷಣೆಗೊಳಗಾಗಿ ತಿರಸ್ಕರಿಸಲ್ಪಟ್ಟ ಕೆಳವರ್ಗದ ಜನರನ್ನು ಹರಿಜನರೆಂದು ಕರೆದು ಅವರ ಏಳ್ಗೆಗಾಗಿ ಅನೇಕ ರಚನಾತ್ಮಕ ಕಾರ್ಯಕ್ರಮಗಳನ್ನೂ ಅನುಷ್ಠಾನಕ್ಕೆ

ತಂದರು. ಅಲ್ಲದೆ ಹರಿಜನ ನಿಧಿ ಸಂಗ್ರಹಣೆಗಾಗಿ ಅಸ್ಪೃಶ್ಯತೆ ನಿವಾರಣೆಗಾಗಿ, ಭಾರತದಾದ್ಯಂತ ಪ್ರವಾಸ ಕೈಗೊಂಡರು. ಗಾಂಧೀಜಿ ರಚನಾತ್ಮಕ ಕಾರ್ಯಕ್ರಮಗಳಿಂದ ಹಾಗೂ ಸ್ವಾತಂತ್ರ್ಯ ಚಳವಳಿಯಿಂದ ಪ್ರಭಾವಿತರಾದ ಅನೇಕರು ಸಂಘ-ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಅದರಡಿಯಲ್ಲಿ ಹರಿಜನೋದ್ಧಾರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಹೀಗೆ ಕಾರ್ಯೋನ್ಮುಖರಾದವರಲ್ಲಿ ಚನ್ನಪಟ್ಟಣದ ದಲಿತೇತರರಾದ ಆರ್ಯಮೂರ್ತಿ ಅವರು ಒಬ್ಬರು. ಗ್ರಾಮಾಂತರ ಪ್ರದೇಶದಲ್ಲಿ ಆದಿಕರ್ನಾಟಕ ಕಾನ್ಫರೆನ್ಸುಗಳನ್ನು ಏರ್ಪಡಿಸಿ ಜನರಲ್ಲಿದ್ದ ಅಜ್ಞಾನ, ಅಂಧಕಾರ, ಮೌಢ್ಯ ತೊಲಗಿಸಿ ಗ್ರಾಮೀಣ ಪರಿಸರದಲ್ಲಿ ಅಸ್ಪೃಶ್ಯತೆ ನಿವಾರಣೆಗೆ ಎದುರಾದ ಎಲ್ಲಾ ಸವಾಲುಗಳನ್ನು ಸ್ವೀಕರಿಸಿ ಸೇವಾ ಕೈಂಕರ್ಯ ಕೈಗೊಂಡು ಗಾಂಧೀಜಿ ಅವರ ಮೆಚ್ಚುಗೆಗೆ ಪಾತ್ರರಾಗಿದ್ದರು.

ಚನ್ನಪಟ್ಟಣದಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ ಎಂ. ಆರ್ಯಮೂರ್ತಿ ಮತ್ತವರ ಪತ್ನಿ ಸರಸ್ವತಮ್ಮ, ಹೆದ್ದಾರಿಯ ಪಕ್ಕದಲ್ಲಿ(ಈಗಿನ ಗಾಂಧೀ ಭವನ) ಅರ್ಧ ಎಕರೆ ತೋಟದ ಜಮೀನನ್ನು ಹೊಂದಿದ್ದರು. ಆ ತೋಟದ ಮಧ್ಯೆ ಎರಡು ಗುಡಿಸಲುಗಳನ್ನು ನಿರ್ಮಿಸಿ ಅದಕ್ಕೆ **ಅಭಯಕುಟಿರ** ಎಂಬ ಹೆಸರಿಟ್ಟು ಅಲ್ಲಿಯೇ ಮುಂದೆ **ಹರಿಜನ ಸೇವಾಸಂಘ** ಸ್ಥಾಪಿಸಿದರು. ಅಧ್ಯಕ್ಷರಾಗಿ ತಿಟ್ಟಮಾರನಹಳ್ಳಿ ವೆಂಕಟಪ್ಪನವರು, ಕಾರ್ಯದರ್ಶಿಯಾಗಿ ಆರ್ಯಮೂರ್ತಿ ಅವರು ದುಡಿದರು. ಸರಳ ಜೀವನ ನಡೆಸುತ್ತಾ ಗಾಂಧೀ ಅನುಯಾಯಿಯಾಗಿ, ರಾಷ್ಟ್ರಾಭಿಮಾನಿಯಾಗಿ, ಮೈಸೂರಿನ ಗೋಪಾಲಸ್ವಾಮಿ ಅಯ್ಯರ್‌ರೊಡನೆ ನಿಕಟ ಸಂಬಂಧ ಹೊಂದಿದ್ದ ಆರ್ಯಮೂರ್ತಿ ಅವರು ಹರಿಜನರ ಸಂಕಷ್ಟ ನಿವಾರಣೆ, ಹಳ್ಳಿಗರ ವಿದ್ಯಾಭ್ಯಾಸ, ವಿದ್ಯಾರ್ಥಿಗಳಲ್ಲಿ ಶಿಸ್ತು, ಹಿಂದಿ ಪ್ರಚಾರ, ವಿಧವಾ ವಿವಾಹ, ಅನಾಥ ಮಕ್ಕಳ ಸಂರಕ್ಷಣೆ, ಪ್ರಾಣಬಲಿ ನಿಷೇಧ ಮುಂತಾದ ಸಾಮಾಜಿಕ ಸೇವಾ ಕಾರ್ಯಗಳಲ್ಲಿ ತೊಡಗಿದ್ದರು.

ಪತ್ನಿ ಸರಸ್ವತಮ್ಮ ಅವರು ಮಹಿಳಾ ಸೇವಾ ಸಮಾಜ, ಶಿಶುವಿಹಾರಗಳನ್ನು ಸ್ಥಾಪಿಸಿ ಪತಿಯ ಎಲ್ಲಾ ಕಾರ್ಯಗಳಲ್ಲಿಯೂ ಸಹಕರಿಸುತ್ತಿದ್ದರು. ಆರ್ಯಮೂರ್ತಿ ಅವರು ಸುತ್ತಲಿನ ಗ್ರಾಮಗಳ ಹರಿಜನಕೇರಿಗೆ ತೆರಳಿ ಶುಚಿತ್ವ, ಶಿಕ್ಷಣದ ಮಹತ್ವ, ಮದ್ಯಪಾನದಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ತಿಳುವಳಿಕೆ ನೀಡುತ್ತಿದ್ದರು. ಅಲ್ಲದೆ ಅವರಲ್ಲಿ ಜಾಗೃತಿಯನ್ನು ಮೂಡಿಸಲು, ಅನೇಕ ಉಪನ್ಯಾಸ ಕಾರ್ಯಕ್ರಮಗಳನ್ನು, ಆದಿ ಕರ್ನಾಟಕದ ಕಾನ್ಫರೆನ್ಸುಗಳನ್ನು ನಡೆಸಿದರು. ಇವರ ಎಲ್ಲಾ ಕಾರ್ಯಕ್ಕೆ ತಿಟ್ಟಮಾರನ ಹಳ್ಳಿ ವೆಂಕಟಪ್ಪನವರು ಬೆನ್ನೆಲುಬಾಗಿ ನಿಂತು ಸಹಾಯ ಮಾಡುತ್ತಿದ್ದರು.

೨೪ ಆಗಸ್ಟ್ ೧೯೩೧ರಂದು ಚನ್ನಪಟ್ಟಣ ತಾಲ್ಲೂಕಿನ ದೇವರ ಹೊಸಹಳ್ಳಿಯಲ್ಲಿ ಆರ್ಯಮೂರ್ತಿ ಅವರ ಅಧ್ಯಕ್ಷತೆಯಲ್ಲಿ ತಾಲ್ಲೂಕಿನ ಸುತ್ತಮುತ್ತಲ ೨೦ ಗ್ರಾಮಗಳ ಆದಿಕರ್ನಾಟಕದವರನ್ನೊಳಗೊಂಡ **ಆದಿಕರ್ನಾಟಕರ ಕಾನ್ಫರೆನ್ಸು** ನಡೆಯಿತು. ಅತಿಥಿಗಳಾಗಿ ಎಚ್.ಪಿ. ಲಿಂಗಪ್ಪನವರು, ಮುನ್ಸಿಪಾಲ್ ಕೌನ್ಸಿಲರಾಗಿದ್ದ ದಾಸಪ್ಪನವರು, ಕೊಮನಹಳ್ಳಿ ಕೆಂಜೇಗೌಡ,

ಹೊಬಾಳಯ್ಯನವರು ಭಾಗವಹಿಸಿದ್ದರು. ಮದ್ಯಪಾನ, ಮಾಂಸ ಭಕ್ಷಣೆಯನ್ನು ತ್ಯಜಿಸಬೇಕು ಎಂದು ಹೇಳಿ ಅವರ ಪುರೋಭಿವೃದ್ಧಿಗೆ ಅವಶ್ಯಕವಾದ ಅನೇಕ ಅಂಶಗಳನ್ನು ಸ್ವಾರಸ್ಯಕರವಾಗಿ ತಿಳಿಸಿದರು. ಆರ್ಯಮೂರ್ತಿ ಅವರು ಸ್ವಾವಲಂಬಿ ಬದುಕಿಗೆ ಚರ್ಮ ಕೈಗಾರಿಕಾಕಲೆ ಇತರ ಕುಶಲ ವಿದ್ಯೆಗಳನ್ನು ಕಲಿಯಬೇಕೆಂದರು. ಚನ್ನಪಟ್ಟಣದ ಇಂಡಸ್ಟ್ರೀಯಲ್ ಸ್ಕೂಲಿನಲ್ಲಿ ಅನೇಕ ಆದಿ ಕರ್ನಾಟಕದ ವಿದ್ಯಾರ್ಥಿಗಳು ಸೇರಿ ತಿಂಗಳಿಗೆ ೨೫ ರಿಂದ ೩೫ ರೂಪಾಯಿನಂತೆ ಸಂಪಾದಿಸುತ್ತಿರುವವರನ್ನು ತೋರಿಸಿ ಬೇರೆಯವರ ಮನೆಯಲ್ಲಿ ಊಟಕ್ಕಾಗಿ ದನಕಾಯುವುದನ್ನು ಬಿಟ್ಟು ಮಕ್ಕಳು ಶಾಲೆಗೆ ಬರಬೇಕೆಂದು ಒತ್ತಾಯಿಸಿದರು. ಅಲ್ಲದೆ ಸಂಪಾದನೆ ಶಕ್ತಿಯಿಲ್ಲದ ಚಿಕ್ಕಮಕ್ಕಳಿಗೆ ವಿವಾಹ ಮಾಡಿ ಅನೇಕ ಕಷ್ಟಗಳಿಗೆ ಗುರಿ ಮಾಡುವ ಪದ್ಧತಿಯನ್ನು ಬಿಡುವಂತೆ ಹೇಳಿದರು. ನಾಲ್ವಡಿ ಕೃಷ್ಣರಾಜರ ಸರ್ಕಾರವು ಆದಿ ಕರ್ನಾಟಕ ಸಮುದಾಯವರಿಗೆ ಕೃಪಾಪೂರ್ವಕವಾಗಿ ಕೊಟ್ಟಿರುವ ಅನುಕೂಲಗಳನ್ನು ಉಪಯೋಗಿಸಿಕೊಂಡು ತನ್ಮೂಲಕ ಮುಂದುವರಿಯಬೇಕೆಂದರು. ಇವರ ಸಂಘದ ಪ್ರಮುಖ ತೀರ್ಮಾನಗಳೆಂದರೆ,

೧. ಗೋಮಾಂಸ ಭಕ್ಷಣೆ, ಕುಡುಕುತನವನ್ನು ಅಸ್ಪೃಶ್ಯರು ಬಿಡಬೇಕೆಂದು.

೨. ಚನ್ನಪಟ್ಟಣದಲ್ಲಿ ಆದಿಕರ್ನಾಟಕದ ಸಂಘ ಸ್ಥಾಪಿಸಿ ಇದರ ಮೂಲಕ ಶಿಕ್ಷಣಕ್ಕೆ ಆದ್ಯತೆ ನೀಡಲು ಶ್ರಮಿಸುವುದು.

೩. ಆದಿಕರ್ನಾಟಕ ಹೆಣ್ಣುಮಕ್ಕಳನ್ನು ಇಂಡಸ್ಟ್ರೀಯಲ್ ಸ್ಕೂಲಿಗೆ ಕಳುಹಿಸಿ ವಿದ್ಯಾಭ್ಯಾಸ ಮಾಡಿಸಬೇಕೆಂದು ಸಂಘದ ಮುಖ್ಯ ಉದ್ದೇಶವಾಗಿತ್ತು.

೪. ತಾಲೂಕಿನ ಆದಿಕರ್ನಾಟಕ ಸಂಘಕ್ಕೆ ಪ್ರತಿ ಗ್ರಾಮದಿಂದ ಒಬ್ಬೊಬ್ಬರನ್ನು ಸದಸ್ಯರನ್ನಾಗಿ ನೇಮಿಸಿಕೊಳ್ಳಲು ತೀರ್ಮಾನಿಸಲಾಯಿತು.

ದಿನಾಂಕ ೨೦-೯-೧೯೩೨ರಂದು ನೀಲಕಂಠನಹಳ್ಳಿಯಲ್ಲಿ ಸಾಯಂಕಾಲ ೩ ಗಂಟೆಗೆ ಏರ್ಪಡಿಸಲಾಗಿದ್ದ ಸಭೆಯಲ್ಲಿ ೨೦೦ ಜನ ಭಾಗವಹಿಸಿದ್ದರು. ಮಲ್ಲಯ್ಯ, ದೇವರಗುಡ್ಡಯ್ಯ, ಕಲ್ಯಾಣಯ್ಯ ಇವರ ನೇತೃತ್ವದಲ್ಲಿ ಆರ್ಯಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಭಜನೆಯ ನಂತರ ಎಚ್. ಲಿಂಗಪ್ಪನವರು ಆದಿಕರ್ನಾಟಕರ ಪುರೋಭಿವೃದ್ಧಿಗೆ ಅಡ್ಡಿಯಾಗಿರುವ ಕೆಟ್ಟ ಪದ್ಧತಿಗಳನ್ನು ಬಿಡುವಂತೆ ಒತ್ತಾಯಿಸಿದರು. ಆರ್ಯಮೂರ್ತಿ ಅವರು ಬಾಲ್ಯವಿವಾಹ, ಮದ್ಯಪಾನ ಇವುಗಳಿಂದಾಗುವ ದುಷ್ಪರಿಣಾಮಗಳನ್ನು ವಿವರಿಸಿದರು. ವಿದ್ಯೆ ಕುಶಲಕಲೆ ಕಲಿಯಲು ಒತ್ತಾಯಿಸಿದರು. ಅಂತಿಮವಾಗಿ ಅಲ್ಲಿದ್ದ ಸಭೆಯ ೧೫ ಮಂದಿ ಎದ್ದು ನಿಂತು ಮಾಂಸಾಹಾರಿ ಮದ್ಯವನ್ನು ತ್ಯಜಿಸುತ್ತೇವೆಂದು ಪ್ರತಿಜ್ಞೆ ಮಾಡಿದರು.

ದಿನಾಂಕ ೨೧-೯-೧೯೩೨ರಂದು ಮಂಗಳವಾರ ಪೇಟೆಯಲ್ಲಿ ಸಭೆ ನಡೆದು ಸ್ತ್ರೀ ಪುರುಷರಾಧಿಯಾಗಿ ಸೇರಿದ್ದರು. ನರಸಿಂಹರೆಡ್ಡಿ ಎಂಬುವರು ವ್ಯಾಪಾರ ಮತ್ತು ಚರ್ಮ ಕೈಗಾರಿಕೆ ಕುರಿತು ಭಾಷಣ ಮಾಡಿದರು. ಲಿಂಗಪ್ಪನವರು ಬಾಲಕಿಯರ ವಿದ್ಯಾಭ್ಯಾಸ ಮಹತ್ವವನ್ನು

ಮನವರಿಕೆ ಮಾಡಿದರು. ದಿನಾಂಕ ೨೨-೯-೧೯೩೨ರಂದು ಎಲೇಕೇರಿಯಲ್ಲಿ ಭಜನಾ ಮಂದಿರದ ಬಳಿ ಸಭೆ ಸೇರಿದರು. ಇದರ ತಯಾರಿಗಾಗಿ ಚನ್ನಯ್ಯ, ದಾಸಯ್ಯ, ಗಿರಿಯಯ್ಯ, ಸಿದ್ಧು ಮುಂತಾದವರು ಶ್ರಮಿಸಿದರು. ಚನ್ನಯ್ಯ, ಕ್ಯಾತಯ್ಯ ಮಾತನಾಡಿ ಸಭೆಯ ಉದ್ದೇಶವನ್ನು ತಿಳಿಸಿದರು. ಆರ್ಯಮೂರ್ತಿ ಅವರು ಮಾತನಾಡಿ ಈ ಸಮಯದಲ್ಲಿ ಎಚ್ಚರಗೊಂಡು ಆದಿಕರ್ನಾಟಕದವರು ಬದುಕನ್ನು ರೂಪಿಸಿಕೊಳ್ಳದೆ ಹೋದರೆ ಮುಂದೆ ಕಷ್ಟವಾಗುವುದೆಂದಾಗ

ನಿಮ್ಮ ಮಕ್ಕಳು ಸಮಸ್ಯೆಗೆ ಸಿಲುಕುವಂತೆ ಮಾಡಬೇಡಿ.
ಮಕ್ಕಳಿಗಾಗಿಯಾದರೂ ದುರ್ನಡೆಯಿಂದ ದೂರ ಇರಿ

ಎಂದರು. ದಿನಾಂಕ ೨೩-೯-೧೯೩೨ರಂದು ಚನ್ನಪಟ್ಟಣದ ಟೌನ್ ಹಾಲಿನಲ್ಲಿ ಸಭೆ ಏರ್ಪಡಿಸಲಾಗಿತ್ತು. ನಾನಾ ಗ್ರಾಮಗಳಿಂದ ೫೦೦ ಜನಕ್ಕೆ ಮೇಲ್ಪಟ್ಟು ಆದಿಕರ್ನಾಟಕದ ಜನರು ಸೇರಿದ್ದರು. ಮುನ್ಸಿಪಲ್ ಸ್ಪೆಷಲ್ ಆಫೀಸರ್ ಸಿ. ಶೆಟ್ಟಿ ಅವರು ಅಧ್ಯಕ್ಷತೆ ವಹಿಸಿದ್ದರು. ಅಮುಲ್ದಾರರು ಸಭೆಗೆ ಆಗಮಿಸಿ ಮಧ್ಯದಲ್ಲಿಯೇ ನಿರ್ಗಮಿಸಿದರು. ರಾಮಕೃಷ್ಣಶೆಟ್ಟಿ ಮಾತನಾಡಿ ಗಾಂಧೀಜಿ ಅವರು ಹರಿಜನರೆಂದು ಹೆಸರಿಟ್ಟ ವಿಷಯವಾಗಿ, ಇದುವರೆಗೆ ನೀವು ಹಿಂದುಳಿಯಲು ಕಾರಣ, ಮುಂದೆ ಏನು ಮಾಡಬೇಕೆಂದು ಬಹಳ ಸ್ವಾರಸ್ಯಕರವಾಗಿ ಮಾತನಾಡಿದರು. ಕೆ. ಹನುಮಂತಯ್ಯ ಅವರು ಮಾತನಾಡಿ ಭರತಖಂಡದಲ್ಲಿರುವ ೭ ಕೋಟಿ ನಿಮ್ಮ ಜನರು ಸ್ಪೃಶ್ಯರಾಗಿ ದೇಶಸೇವೆಗೆ ಮುಂದಾದರೆ ಎಲ್ಲ ಸಮಸ್ಯೆಗಳು ಮಾಯವಾಗುತ್ತವೆ ಎಂದರೆ, ಆರ್ಯಮೂರ್ತಿ ಅವರು ಬಾಲಕರಿಗಾಗಿ ಚನ್ನಪಟ್ಟಣದಲ್ಲಿ ವಿದ್ಯಾರ್ಥಿನಿಲಯ ಸ್ಥಾಪಿಸುವಂತೆ ಒತ್ತಾಯಿಸಿದರು.[೫೨]

ದಿನಾಂಕ ೨೪-೯-೧೯೩೨ರ ಶನಿವಾರ ಹೊಂಗನೂರು ಸ್ಕೂಲ್ ಕಟ್ಟಡದಲ್ಲಿ ಮಧ್ಯಾಹ್ನ ಸಭೆ ನಡೆಯಿತು. ಸುತ್ತಲಿನ ಹಳ್ಳಿಗಳಿಂದ ೨೦೦ ಜನ ಆಗಮಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಆರ್. ಗೋಪಾಲಸ್ವಾಮಿ ಅಯ್ಯರ್ ವಹಿಸಿದ್ದರು. ಸ್ಥಳೀಯ, ಆದಿಕರ್ನಾಟಕದ ಜನರುಗಳಾದ ಸತ್ಯಕೀರ್ತಿ ಮಾತನಾಡಿ ನಾವು ಹಿಂದುಳಿಯಲು ಕಾರಣವನ್ನು ಹಾಗೂ ಮುಂದುವರಿಯಲು ಶಿಕ್ಷಣ ಹೇಗೆ ಅತ್ಯವಶ್ಯಕ ಎಂಬ ವಿಚಾರವಾಗಿ ಮಾತನಾಡಿದರು. ಆರ್ಯಮೂರ್ತಿ ಅವರು ಮಾತನಾಡಿ ಚನ್ನಪಟ್ಟಣದ ಇಂಡಸ್ಟ್ರೀಯಲ್ ಟ್ರೈನಿಂಗ್ ಸ್ಕೂಲ್‌ಗೆ ಮಕ್ಕಳನ್ನು ಕಳುಹಿಸಿ, ಕುಡಿತಕ್ಕಾಗಿ ಹಣ ಖರ್ಚು ಮಾಡಿ ಬಡನತವನ್ನು ತಂದುಕೊಳ್ಳುವುದು ಸರಿಯಲ್ಲ. ಮದ್ಯಪಾನವನ್ನು ಬಿಡಿ ಮಕ್ಕಳನ್ನು ಶಾಲೆಗೆ ಕಳುಹಿಸಿ ಎಂದರು. ಆರ್. ಗೋಪಾಲಸ್ವಾಮಿ ಅಯ್ಯರ್ ಅವರು ಹರಿಜನರಲ್ಲಿ ಜಾಗೃತಿ ಮೂಡಿಸಲು ಶ್ರಮಿಸುತ್ತಿರುವ ಆರ್ಯಮೂರ್ತಿ ಅವರನ್ನು ಅಭಿನಂದಿಸಿದರು.

ದಿನಾಂಕ ೨೫-೧೧-೧೯೩೪ರಂದು ಚನ್ನಪಟ್ಟಣ ಟೌನ್‌ಹಾಲ್ ಕಟ್ಟಡದಲ್ಲಿ ಟಿ. ರಂಗಸ್ವಾಮಿ ಅವರ ಅಧ್ಯಕ್ಷತೆಯಲ್ಲಿ **ಮದ್ಯಪಾನ ವಿರೋಧ** ವಿಷಯವನ್ನು ಕುರಿತು ಉಪನ್ಯಾಸ ಜರುಗಿತು. ಮಮ್ತಾಜ್ ಸಾಹೇಬರು ಆರ್ಯಮೂರ್ತಿ ಅವರು ಸಂಶುದ್ದೀನ್ ಖಾನ್ ಸಾಹೇಬರು, ಎಂ. ಸ್ಟಿಪನ್ ಅವರು ಮಾತನಾಡಿದರು. ಸುಮಾರು ೨೦೦ ಜನ ಭಾಗವಹಿಸಿದ್ದು ಈ ಸಭೆಯಲ್ಲಿ

ಊರಿನ ಒಕ್ಕಲಿಗ ಹಾಸ್ಟಲಿನ ವಿದ್ಯಾರ್ಥಿಗಳು ಮದ್ಯಪಾನ ಸೇವನೆಯ ಅಸಯ್ಯತೆಯನ್ನು ಅಭಿನಯಿಸಿ ತೋರಿಸಿದರು. ತಕ್ಷಣ ೧೭ ಜನರು ಕೈ ಎತ್ತಿ

> ನಾವು ಇನ್ನು ಮುಂದೆ ಚನ್ನಪಟ್ಟಣದ ಮದ್ಯಪಾನ ವಿರೋಧ ಸಂಸ್ಥೆಯ ಸದಸ್ಯರಾಗಿದ್ದುಕೊಂಡು ಪ್ರಜಾ ಸೇವೆ ಮಾಡುತ್ತೇವೆಂದು ಸಮ್ಮತಿ ಕೊಟ್ಟರು.

ಹರಿಜನ ಸೇವಾ ಸಂಘಕ್ಕೆ ಗಾಂಧೀಜಿ ಭೇಟಿ

ಗಾಂಧೀಜಿ ಭಾರತದಾದ್ಯಂತ ಹರಿಜನೋದ್ಧಾರ ಪ್ರವಾಸ ಕೈಗೊಂಡು ದಿನಾಂಕ ೪-೧-೧೯೩೪ ಬೆಳಿಗ್ಗೆ ಹಿಂದೂಪುರದಿಂದ ದೊಡ್ಡಬಳ್ಳಾಪುರಕ್ಕೆ ಆಗಮಿಸಿ ಅಲ್ಲಿಂದ ತುಮಕೂರು, ನಂತರ ತ್ಯಾಮಗೊಂಡ್ಲು, ನೆಲಮಂಗಲ, ಬೆಂಗಳೂರಿನ ರೇಸ್‌ವ್ಯೂ ಎಂಬಲ್ಲಿ ತಂಗಿದ್ದರು. ದಿನಾಂಕ ೫-೧-೧೯೩೪ ರಂದು ಮೈಸೂರಿಗೆ ತೆರಳಿ ಬದಾನವಾಲು ಹಾಗೂ ನಂಜನಗೂಡಿಗೆ ಭೇಟಿ ನೀಡಿ ಮೈಸೂರಿನಲ್ಲಿ ತಂಗಿದ್ದು, ದಿನಾಂಕ ೬-೧-೧೯೩೪ರಂದು ಮೈಸೂರಿನಿಂದ ಮಂಡ್ಯ, ಮದ್ದೂರು, ಚನ್ನಪಟ್ಟಣಕ್ಕೆ ಬೆಳಿಗ್ಗೆ ೧೧ ಗಂಟೆಗೆ ಆಗಮಿಸಿದರು. ಅವರ ಜೊತೆ ಮೀರಾಬೆನ್ ಜಮ್ನಲಾಲ್ ಬಜಾಬ್ ಅವರ ಮಗಳು ಹೊಬಾಯಿ, ಶ್ರೀಮತಿ ಕೃಷ್ಣ ಬಾಯಿ ಪಂಜೇಕರ, ಶ್ರೀಮತಿ ಮಾಗಂಟಿ ಅನ್ನಪೂರ್ಣಮ್ಮ ಮುಂತಾದವರಿದ್ದರು. ಆರ್ಯಮೂರ್ತಿ ಅವರು ಅಭಯಕುಟೀರಕ್ಕೆ ಪುಷ್ಪಹಾರ ಅರ್ಪಿಸಿ ಗಾಂಧೀಜಿ ಅವರನ್ನು ಸ್ವಾಗತಿಸಿದರು. ಜೊತೆಯಲ್ಲಿಯೇ ಇದ್ದ ತಿಟ್ಟಮಾರನಹಳ್ಳಿ ವೆಂಕಟಪ್ಪ ಅವರು ಆರ್ಯಮೂರ್ತಿಯರೆಂಬುದನ್ನು, ಅವರ ಸೇವಾಕಾರ್ಯವನ್ನು ಗಾಂಧೀಜಿ ಅವರಿಗೆ ಪರಿಚಯ ಮಾಡಿಕೊಟ್ಟರು. ನಂತರ ಅಲ್ಲಿಂದ ಮಂಗಳವಾರ ಪೇಟೆಯ ಆದಿಜಾಂಬುವರ ಕೇರಿಗೆ ತೆರಳಿ ಅಲ್ಲಿನ ಬಾವಿಯಿಂದ ನೀರು ಸೇದಿ ತೀರ್ಥವೆಂದು ಎಲ್ಲರೂ ಕುಡಿಯಬೇಕೆಂದರು. ನಂತರ ಹೈಸ್ಕೂಲ್ ಮೈದಾನಕ್ಕೆ ತೆರಳಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಭಾಷಣ ಮಾಡಿ ಅಸ್ಪೃಶ್ಯತಾ ಆಚರಣೆ ಕೈಬಿಟ್ಟು ಖಾದಿ ಬಳಸಬೇಕೆಂದರು. ಸಭೆಯಲ್ಲಿ ಭಿನ್ನವತ್ತಳೆ ಹಾಗೂ ಹರಿಜನ ನಿಧಿಗೆ ೧೨೫/- ರೂ.ಗಳನ್ನು ಅರ್ಪಿಸಲಾಯಿತು. ಅಭಯ ಕುಟೀರಕ್ಕೆ ಹಿಂದಿರುಗಿ ಬಂದಾಗ ಊಟದ ಸಮಯವಾಗಿತ್ತು. ಮುಂಚಿತವಾಗಿ ದ್ಯಾವಪಟ್ಟಣದ ದೇವರ ಗುಡ್ಡಯ್ಯನವರು ಮನೆಯಿಂದ ಮೇಕೆಹಾಲು ತಂದಿದ್ದರು. ಊಟ ವಿಶ್ರಾಂತಿಯ ನಂತರ ಆರ್ಯಮೂರ್ತಿ ಅವರ ಕುಟುಂಬದವರೆಲ್ಲರೊಡನೆ ಮಾತಾಡಿ ಪತಿಯ ಎಲ್ಲಾ ಸೇವಾ ಕಾರ್ಯಗಳಲ್ಲಿ ನೆರವಾಗುತ್ತಿದ್ದ ಸರಸ್ವತಮ್ಮ ಅವರ ವಿಷಯ ತಿಳಿದು ಸಂತೋಷಪಟ್ಟರು. ಆರ್ಯಮೂರ್ತಿ ಅವರು ಹರಿಜನ ಸೇವೆಯಿಂದ ಒದಗಿದ್ದ ಅಡ್ಡಿ ಆತಂಕಗಳನ್ನು ತಿಳಿಸಿದಾಗ ಗಾಂಧಿ ಅವರು ಸಮಾಜ ಸುಧಾರಣೆಗೆ ಭಯ ಪಡುವವರು ಶುದ್ಧ ಅಯೋಗ್ಯರು ಎಂದು ಧೈರ್ಯ ತುಂಬಿದರು. ಎಳೆಯ ಮಗುವನ್ನು ಎತ್ತಿಕೊಂಡಿದ್ದ ಸರಸ್ವತಮ್ಮ ನನ್ನ ಮಗುವಿಗೆ ನೀವೇ ಹೆಸರಿಡಬೇಕೆಂದಾಗ ಅಭಯ ಕುಟೀರಕ್ಕೆ ಭೇಟಿ ನೀಡಿದ ನೆನಪಿಗಾಗಿ ಅಭಯ ಎಂದು ಹೆಸರಿಟ್ಟು, 'ಅಭಯ ಕುಟೀರದ ಪ್ರಶಾಂತ ವಾತಾವರಣ ನನಗೆ ಹಿಡಿಸಿತು ಎಂದೇಳಿ' ನಿರ್ಗಮಿಸಿದರು. ೧೯೩೪ರಲ್ಲಿ ಬೆಂಗಳೂರು ಜಿಲ್ಲೆ

ಹರಿಜನ ಸೇವಾಸಂಘ ಸ್ಥಾಪನೆಯಾಗಿ ಆರ್ಯಮೂರ್ತಿ ಅವರೆ ಕಾರ್ಯದರ್ಶಿಯಾಗಿ ನೇಮಕಗೊಂಡು ತಮ್ಮ ಕಾರ್ಯಕ್ಷೇತ್ರ ಬೆಂಗಳೂರು ಜಿಲ್ಲೆಗೆ ವಿಸ್ತರಿಸಿದರು. ಇವರ ಪ್ರಭಾವದಿಂದ ಚನ್ನಪಟ್ಟಣದಲ್ಲಿ ಸರ್ವೈಕ್ಯಮತ್ಯ ಸಂಘ, ವಿಧವಾ ವಿವಾಹ ಸಂಘ ಮುಂತಾದವು ಸ್ಥಾಪನೆಗೊಂಡು ಸಾಮಾಜಿಕ ಸೇವಾಕಾರ್ಯದಲ್ಲಿ ನಿರತವಾದವು. ಆರ್ಯಮೂರ್ತಿ ಸೇವಾಕಾರ್ಯಗಳನ್ನು ಮೆಚ್ಚಿ ಗಾಂಧೀಜಿ ಕಾಗದ ಬರೆದಿರುವುದನ್ನು ಕಾಣಬಹುದಾಗಿದೆ. ಚನ್ನಪಟ್ಟಣದಲ್ಲಿ ಅಭಯ ಕುಟೀರವಿದ್ದ ಸ್ಥಳದಲ್ಲಿ ಈಗ ಗಾಂಧೀ ಸ್ಮಾರಕಭವನ ನಿರ್ಮಾಣವಾಗಿದೆ. ಗಾಂಧೀಜಿ ಭೇಟಿ ನೀಡಿದ ಆದಿಜಾಂಬವರ ಕೇರಿಯಲ್ಲಿ ಈಗಲೂ ಭಜನಾ ಮಂದಿರವಿದೆ. ಗಾಂಧೀ ಹೆಸರಿನ ಸ್ಮಾರಕ ಕಲ್ಲು ಹಾಕಲಾಗಿದ್ದು ಗಾಂಧೀಜಿ ಅವರ ಭೇಟಿಯನ್ನು ನೆನಪಿಸುತ್ತಿದೆ.[೫೩]

ಕೊನೆ ಟಿಪ್ಪಣಿಗಳು

೧. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೬, **ಕರ್ನಾಟಕದ ಸಮಗ್ರ ದಲಿತ ಚರಿತ್ರೆ,** ನವಕರ್ನಾಟಕ ಪ್ರಕಾಶನ, ಬೆಂಗಳೂರು, ಪುಟ ೧೯೩.

೨. ಅದೇ, ಪುಟ ೧೯೮.

೩. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೬, **ದಲಿತ ಚರಿತ್ರೆ ರಚನೆಯಲ್ಲಿ ಕಾಡಲೇಬೇಕಾದ ಪ್ರಶ್ನೆಗಳು,** ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ, ಪುಟ ೨೪೨.

೪. ಅದೇ, ಪುಟ ೨೪೩.

೫. ಅದೇ, ಪುಟ ೨೩೯.

೬. ಅದೇ, ಪುಟ ೨೪೦.

೭. ಅದೇ, ಪುಟ ೨೪೧.

೮. **ವಿಜಯ ಕರ್ನಾಟಕ,** ೨೦೧೩, ಬುಧವಾರ ೯ ಅಕ್ಟೋಬರ್, ಪುಟ ೬.

೯. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೩, **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೩೦.

೧೦. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೩, **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೮೩.

೧೧. ಸದಾನಂದ ಜೆ.ಎಸ್., **ಬ್ರಾಹ್ಮಣೇತರ ಚಳವಳಿ ಮತ್ತು ಮಿಲ್ಲರ್ ವರದಿ,** ಅರಿವು-ಬರಹ ಪ್ರಕಾಶನ, ಬೆಂಗಳೂರು, ೧೯೯೨, ಪುಟ ೨೮.

೧೨. ಡಾ. ಎಸ್. ಚಂದ್ರಶೇಖರ್, ೧೯೮೩, **ಸಾಮಾಜಿಕ ಹಿನ್ನೆಲೆಯಲ್ಲಿ ಮೈಸೂರು ರಾಜಕೀಯ ಕೆಲವು ಒಳನೋಟಗಳು(೧೮೮೧ ರಿಂದ ೧೯೪೦),** ಬೆಂಗಳೂರು, ಪುಟ ೬೭.

೧೩. ಪ್ರೊ. ದಯಾನಂದ ಮಾನೆ, ೨೦೦೭, **ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ದಲಿತ ಚಳವಳಿ,** ಡಾ. ಬಿ.ಆರ್. ಅಂಬೇಡ್ಕರ್ ರೀಸರ್ಚ್ ಅಕಾಡೆಮಿ, ಮೈಸೂರು, ಪುಟ ೫೪೯.

೧೪. **ವಿಜಯ ಕರ್ನಾಟಕ,** ೨೦೧೩, ಬುಧವಾರ ೯ ಅಕ್ಟೋಬರ್, ಪುಟ ೬.

೧೫. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೩, **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೩೪-೩೫.

೧೬. **ಇತಿಹಾಸ ದರ್ಪಣ,** ೨೦೦೬, ಪುಟ ೪೪.

೧೭. ಅದೇ, ಪುಟ ೪೫.

೧೮. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೩, **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧೦೮-೧೦೯.

೧೯. ಅದೇ, ಪುಟ ೧೦೯-೧೧೦.

೨೦. **ವಿಜಯ ಕರ್ನಾಟಕ,** ೨೦೧೩, ಬುಧವಾರ ೯ ಅಕ್ಟೋಬರ್, ಪುಟ ೭.

೨೧. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೩, **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೭೮-೭೯.

೨೨. **ವಿಜಯ ಕರ್ನಾಟಕ,** ೨೦೧೩, ೫ ಅಕ್ಟೋಬರ್, ಪುಟ ೭.

೨೩. **ಇತಿಹಾಸ ದರ್ಪಣ,** ೨೦೦೬, ಪುಟ ೧೧೧-೧೧೪.

೨೪. ಅದೇ, ಪುಟ ೧೧೪-೧೧೫.

೨೫. ಜಿ.ಎಸ್. ಭಟ್, ೨೦೦೬, **ಆಯ್ದ ವ್ಯಕ್ತಿ ಚಿತ್ರಗಳು,** ದೇಜಗೌ ಸಾಹಿತ್ಯ ಮಾಲೆ, ಮೈಸೂರು, ಪುಟ ೧೩೨.

೨೬. ತಗಡೂರು ರಾಮಚಂದ್ರರಾವ್, ೧೯೮೬, **ಗ್ರಾಮದಾನ ಗ್ರಾಮ ಸ್ವರಾಜ್ಯ,** ಮೈಸೂರು, ಪುಟ ೭.

೨೭. ಎಚ್.ಬಿ. ಸೋಮಶೇಖರ, **ಸ್ವಾತಂತ್ರ್ಯ ಹೋರಾಟ ಹಾಗೂ ರಚನಾತ್ಮಕ ಕಾರ್ಯಕ್ರಮಗಳಲ್ಲಿ ತಗಡೂರು ರಾಮಚಂದ್ರರಾಯರ ಪಾತ್ರ-ಒಂದು ಅಧ್ಯಯನ,** ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಪಿಎಚ್.ಡಿ. ಮಹಾಪ್ರಬಂಧ, ಪುಟ ೧೪೯-೧೫೦.

೨೮. ಎಂ.ಎನ್. ಜೋಯಿಸ್, ೧೯೭೪, **ಕರ್ಮಯೋಗಿ ತಗಡೂರರ ಆತ್ಮಕಥನ ಮತ್ತು ಅಭಿನಂದನಾ ಗ್ರಂಥ,** ಪುಟ ೮೬-೮೯.

೨೯. ಎಚ್.ಬಿ. ಸೋಮಶೇಖರ್, **ಸ್ವಾತಂತ್ರ್ಯ ಹೋರಾಟ ಹಾಗೂ ರಚನಾತ್ಮಕ ಕಾರ್ಯಕ್ರಮಗಳಲ್ಲಿ ತಗಡೂರು ರಾಮಚಂದ್ರರಾಯರ ಪಾತ್ರ,** ಪುಟ ೧೩೪-೧೪೦.

೩೦. ಅದೇ, ಪುಟ ೧೫೨.

೩೧. ಎಂ. ವಿಶ್ವನಾಥ್(ಸಂ), ೧೯೯೨, **ಲೋಕ ಸೇವಾನಿರತ ಡಿ. ಕೊಂಗಾಡಿಯಪ್ಪ,** ಕೊಂಗಾಡಿಯಪ್ಪ ಸ್ಮಾರಕ ಗ್ರಂಥ ಸಮಿತಿ ಪ್ರಕಾಶನ, ಬೆಂಗಳೂರು, ಪುಟ ೫೪-೫೬

೩೨. ಅದೇ, ಪುಟ ೬೬-೬೭.

೩೩. ಅದೇ, ಪುಟ ೬೮-೬೯.

೩೪. ಪ್ರೊ. ಕೆ. ಭೈರವಮೂರ್ತಿ(ಸಂ), ೧೯೯೯, **ಶಿವಮಯ,** ತಳಗವಾದಿ ಪ್ರಕಾಶನ, ಮೈಸೂರು, ಪುಟ ೧೦೧೪-೧೦೧೭.

೩೫. ಅದೇ, ಪುಟ ೧೦೧೨-೧೦೧೩.

೩೬. ಪಿ.ಆರ್. ತಿಪ್ಪೇಸ್ವಾಮಿ, ೧೯೭೯, **ಹೋರಾಟಗಾರ ಕೆಂಚಪ್ಪ**, ತಳುಕಿನ ವೆಂಕಟಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, ಪುಟ ೧೮-೨೩.

೩೭. ಅದೇ, ಪುಟ ೫೦-೫೪.

೩೮. ಪ್ರೊ. ಕೆ. ಭೈರವಮೂರ್ತಿ, **ಶಿವಮಯ**, ಪುಟ ೧೦೮೩, ೧೦೮೭.

೩೯. ಅದೇ, ಪುಟ ೧೦೮೯.

೪೦. ಬಿ.ಆರ್. ಪ್ರಾಣೇಶ್, ೧೯೯೭, **ಯಶೋಧರ ದಾಸಪ್ಪ ಮತ್ತು ಎಚ್.ಸಿ. ದಾಸಪ್ಪ**, ಭಾರತಿ ಪ್ರಕಾಶನ, ಮೈಸೂರು, ಪುಟ ೧೭-೨೧.

೪೧. ಅದೇ, ಪುಟ ೨೪.

೪೨. ಅದೇ, ಪುಟ ೭೩-೭೫.

೪೩. ಅದೇ, ಪುಟ ೮೫-೮೬

೪೪. ಸಿ. ಸುಶೀಲಮ್ಮ, **ಮೈಸೂರು ರಾಜ್ಯದಲ್ಲಿ ಮಹಿಳಾ ಕಲ್ಯಾಣ: ಒಂದು ಅಧ್ಯಯನ(೧೮೮೧-೧೯೫೬)**, ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಪುಟ ೨೧೧-೨೧೫.

೪೫. ಡಾ. ಎನ್. ಚಿನ್ನಸ್ವಾಮಿ ಸೋಸಲೆ(ಸಂ), **ಕರ್ನಾಟಕದ ಸಮಗ್ರ ದಲಿತ ಚರಿತ್ರೆ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೬, ಪುಟ ೨೩೩.

೪೬. ಅದೇ, ಪುಟ ೨೩೫.

೪೭. ಅದೇ, ಪುಟ ೨೩೬.

೪೮. ಎಚ್.ವಿ. ಸಾವಿತ್ರಮ್ಮ, **ಎಚ್.ವಿ. ನಂಜುಂಡಯ್ಯ ಜೀವನ ಮತ್ತು ಕಾರ್ಯ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪುಟ ೪೩.

೪೯. ಅದೇ, ಪುಟ ೪೪.

೫೦. ವಕ್ತೃವಿವರ, ಕೃಷ್ಣಪ್ಪ, ನಿವೃತ್ತ ಶಿಕ್ಷಕರು, ದಾವಣಗೆರೆ.

೫೧. ಡಾ. ಎನ್. ಚಿನ್ನಸ್ವಾಮಿ ಸೋಸಲೆ, **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೩, ಪುಟ ೨೦೩.

೫೨. ಅದೇ, ಪುಟ ೨೦೪.

೫೩. ಅದೇ, ಪುಟ ೨೦೫.

❖❖❖

අ

ಅಧ್ಯಾಯ : ನಾಲ್ಕು

ಮೈಸೂರು ಸಂಸ್ಥಾನದ ಅಸ್ಪೃಶ್ಯತಾ ನಿವಾರಣೆಯಲ್ಲಿ ದಲಿತ ಹೋರಾಟಗಾರರ ಪಾತ್ರ ಕುರಿತ ವಿಶ್ಲೇಷಣೆ

ಅಧ್ಯಾಯ : ನಾಲ್ಕು

ಮೈಸೂರು ಸಂಸ್ಥಾನದ ಅಸ್ಪೃಶ್ಯತಾ ನಿವಾರಣೆಯಲ್ಲಿ ದಲಿತ ಹೋರಾಟಗಾರರ ಪಾತ್ರ ಕುರಿತ ವಿಶ್ಲೇಷಣೆ

೪.೧. ಪ್ರಸ್ತಾವನೆ

ಭಾರತೀಯ ಚರಿತ್ರೆಯಲ್ಲಿ ಹಲವು ಜನವರ್ಗಗಳು ಸಾಮಾಜಿಕ ಮೌಲ್ಯ, ರಾಜಕೀಯ ಹಕ್ಕುಗಳು, ಆರ್ಥಿಕ ಸಾಮರ್ಥ್ಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಹಕ್ಕುಗಳನ್ನು ಹೊಂದಿರುವುದು ದಾಖಲಾಗಿದೆ. ಆದರೆ ಅದೇ ಹಿಂದೂ ಸಮಾಜದಲ್ಲಿ ಕೆಳವರ್ಗದವರ, ದಲಿತರ ಹಾಗೂ ಶೋಷಿತರ ಜೀವನ ಪ್ರಾಣಿಗಳಿಗಿಂತಲೂ ನಿಕೃಷ್ಟವಾಗಿದ್ದ ಸ್ಥಿತಿಯನ್ನು ಅದೇ ದಾಖಲೆಗಳು ಬಿಂಬಿಸುತ್ತವೆ. ಸಮಾಜದಲ್ಲಿ ವೈದಿಕರ, ಪ್ರಬಲ ವರ್ಗದವರ ಅಧಿಕಾರ, ಹಕ್ಕುಗಳ ಅವರ ಸಾಧನೆಗಳ ಬಗ್ಗೆ ಹೆಚ್ಚಿನ ವಿವರಗಳು ಸಿಗುತ್ತವೆ. ಅವರ ಬಗ್ಗೆ ಸಮಗ್ರ ಅಧ್ಯಯನಗಳು ನಡೆದಿವೆ. ಆದರೆ ಸಮಾಜದಲ್ಲಿ ದಲಿತ ವರ್ಗದವರು ಅನೇಕ ರೀತಿಯಲ್ಲಿ ಸಮಾಜಮುಖಿ ಕಾರ್ಯಗಳನ್ನು ಮಾಡಿದ್ದರೂ ಆ ಚರಿತ್ರೆಯಲ್ಲಿ ಎಲ್ಲೂ ಬೆಳಕಿಗೆ ಬಂದಿಲ್ಲ. ದಲಿತ ವರ್ಗದವರು ತಮ್ಮನ್ನು ಗುರುತಿಸಿಕೊಳ್ಳುವಂತಹ ಯಾವುದೇ ಕಾರ್ಯದಲ್ಲಿ ಭಾಗಿಗಳಾದವರಲ್ಲ ಎಂಬಂತೆ ಚರಿತ್ರೆಯಲ್ಲಿ ಬಿಂಬಿಸಲಾಗಿದೆ.

ಭಾರತೀಯ ಸ್ವಾತಂತ್ರ್ಯ ಹೋರಾಟದ ಕಾಲವನ್ನು ತೆಗೆದುಕೊಂಡಾಗಲೂ ದಲಿತ ಚರಿತ್ರೆ ಎಂಬುದು ಸ್ಥಗಿತಗೊಂಡ ಅಧ್ಯಾಯವಾಗಿದೆ. ಅಲ್ಲಿ ಅವರ ಬದುಕು-ಹೋರಾಟದ ಕುರಿತು ಯಾವುದೇ ಬರಹಗಳು ಆ ಕಾಲಘಟ್ಟದ ಚರಿತ್ರೆ ಬರಹಗಳಲ್ಲಿ ಉಲ್ಲೇಖಿತವಾಗಿಲ್ಲ. ಮೇಲ್ವರ್ಗ ತಮಗೆ ಅನುಕೂಲವಾಗುವ ರೀತಿಯಲ್ಲಿ ಚರಿತ್ರೆಯನ್ನು ರಚಿಸಿಕೊಂಡು ದಲಿತರ ಬಗ್ಗೆ ವಕ್ರದೃಷ್ಟಿ, ನಿಕೃಷ್ಟಭಾವ, ತಿರಸ್ಕಾರ ಮನೋಭಾವದಿಂದ ಚರಿತ್ರೆಯಿಂದಲೂ ಸಹ ಅಸ್ಪೃಶ್ಯರನ್ನಾಗಿಸಿರುವುದು ಸತ್ಯ ಸಂಗತಿ. ಇತ್ತೀಚಿನ ದಿನಗಳಲ್ಲಿ ಇತಿಹಾಸವನ್ನು ಮರುಕಟ್ಟುವಿಕೆ ಅಂದರೆ ವಾಸ್ತವ ಸಂಗತಿಗಳನ್ನು ಎಕ್ಕಿ ತೆಗೆಯುವ ಮುಖೇನ ಬರೆಹ ರೂಪಕ್ಕೆ ತರುತ್ತಿರುವುದರಿಂದ ಬೌದ್ಧಿಕ ವಲಯ ಇತ್ತ ನೋಡುವಂತೆ ಮಾಡಿದೆ.

ಭಾರತೀಯ ಸಮಾಜದ ಪುರೋಹಿತಶಾಹಿ ವ್ಯವಸ್ಥೆಯಲ್ಲಿ ಯಾವುದೇ ಪ್ರತಿರೋಧವಿಲ್ಲದೇ ಸರಾಗವಾಗಿ ಸಾಗಿ ಹೋಗುತ್ತಿದ್ದ ಜಾತಿ ವ್ಯವಸ್ಥೆಗೆ, ಪ್ರತಿಭಟನೆಗಳು ಎದುರಾಗಿದ್ದು ತೀರಾ ವಿರಳ. ಅಂತಹ ವಿರಳ ಪ್ರತಿಭಟನೆಗಳಲ್ಲಿ ಕೆಲವು ಸಮಾಜದಲ್ಲಿನ ಅಸಮಾನತೆಯ ಒಳ ಹುಳುಕುಗಳನ್ನು ತೆರೆದು ತೋರಿಸಿದವು. ಚರಿತ್ರೆಯಲ್ಲಿ ಅಂತಹ ಪ್ರತಿಭಟನೆಯನ್ನು ಹನ್ನೆರಡನೆಯ ಶತಮಾನದ ಬಸವಣ್ಣನವರ ಕಾಲದಲ್ಲಿ ಕಾಣಬಹುದು.

ಬಸವಣ್ಣನವರು ಮತ್ತು ಅವರ ಅನುಯಾಯಿಗಳು ತಮ್ಮ ವಚನಗಳ ಮೂಲಕ ಅಂದಿನ ವರ್ಣವ್ಯವಸ್ಥೆಯ ವಿರುದ್ಧ ಪ್ರತಿಭಟನೆಗಿಳಿದರು. ಹನ್ನೆರಡನೆಯ ಶತಮಾನದ ಅಂದಿನ ದಿನಗಳಲ್ಲೆ ಅತ್ಯಂತ ಕ್ರಾಂತಿಕಾರಿ ಮತ್ತು ವೈಚಾರಿಕ ನಿಲುವುಗಳಿಂದ ಬಸವಣ್ಣನವರು ಹಿಂದೂ ಧರ್ಮದಲ್ಲಿನ ಅನಿಷ್ಟತೆಯನ್ನು ತೊಡೆದು ಹಾಕಲು ಯತ್ನಿಸಿದರು. ಸಮಾಜದಲ್ಲಿನ ಹೀನ ಪದ್ಧತಿಗಳನ್ನು ನೇರವಾಗಿ ಖಂಡಿಸುವುದರ ಜೊತೆಗೆ ವರ್ಣನೀತಿಗೆ ವಿರೋಧ ವ್ಯಕ್ತಪಡಿಸಿದರು. ದಲಿತರಿಗೆ ಲಿಂಗದೀಕ್ಷೆ ನೀಡಿ ಸರ್ವರ ಒಳಿತಿಗಾಗಿ ಧರ್ಮವಿದೆಯೇ ಹೊರತು, ಕೇವಲ ಕೆಲವರ ಉದ್ಧಾರಕ್ಕಲ್ಲ ಎಂದು ವರ್ಣಜಾತಿಗಳ ಸಂಕೋಲೆಗಳನ್ನು ಕಳಚಿದರು. ದಲಿತ ಮಹಿಳೆಯರನ್ನು ಸಮಾನತೆಯ ಹಾದಿಗೆ ಕರೆತರುವ ಕಾಯಕ ಮಂತ್ರ ಜಪಿಸುವ ಮೂಲಕ ವಾಸ್ತವಿಕ ಬದುಕಿನಲ್ಲಿ ಸ್ವಾಭಿಮಾನ ಆತ್ಮಾಭಿಮಾನದ ಜೊತೆಗೆ ಸ್ವಾತಂತ್ರ್ಯ ಸಮಾನತೆ ಮತ್ತು ಸಹೋದರತೆಯ ತತ್ವವನ್ನು ಸಾರಿದರು.

೧೨ನೆಯ ಶತಮಾನದ ವಚನ ಚಳವಳಿಯ ನಂತರ ಸಾಮಾಜಿಕ ವ್ಯವಸ್ಥೆಯ ವಿರುದ್ಧದ ಹೋರಾಟ ನಡೆಸಿದ ಹಾಗೂ ಬಸವಣ್ಣನವರಷ್ಟು ಪ್ರಭಾವ ಬೀರಿದ ವ್ಯಕ್ತಿಗಳನ್ನು ಗುರುತಿಸಲು ಸಾಧ್ಯವಿಲ್ಲ.

ಇನ್ನು ಆಧುನಿಕ ಕಾಲಘಟ್ಟಕ್ಕೆ ಸಂಬಂಧಿಸಿದಂತೆ ನೆರೆಹೊರೆಯ ಪ್ರಾಂತ್ಯಗಳಲ್ಲಿ ಅಸ್ಪೃಶ್ಯತಾ ನಿವಾರಣೆಯ ವಿರುದ್ಧ ಹೋರಾಡಿದಂತಹ ಅನೇಕ ನಾಯಕರುಗಳನ್ನು ಗುರುತಿಸಬಹುದು. ಉದಾಹರಣೆಗೆ ಮಹಾರಾಷ್ಟ್ರದಲ್ಲಿ ಮಹಾತ್ಮಾ ಜ್ಯೋತಿ ಬಾಪುಲೆ, ಅಂಬೇಡ್ಕರ್, ತಮಿಳುನಾಡಿನಲ್ಲಿ ಪೆರಿಯಾರ್, ಕೇರಳದಲ್ಲಿ ಅಯ್ಯನ್‌ಕಾಳಿ, ನಾರಾಯಣಗುರು ಮುಂತಾದವರು ಶೋಷಿತರ ಪರ ಹೋರಾಟ ನಡೆಸಿದರು. ಈ ಸಮಕಾಲೀನ ಸಂದರ್ಭದಲ್ಲಿ ಮೈಸೂರು ಸಂಸ್ಥಾನದಲ್ಲಿ ಯಾವೊಬ್ಬ ನಾಯಕರನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ನಮಗೆ ಏಕೆ ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ.

ಶತಶತಮಾನಗಳಿಂದಲೂ ರಾಜಾಶ್ರಯ ಪಡೆದಿದ್ದ ಮೈಸೂರು ಬ್ರಾಹ್ಮಣರಿಗೆ ಸಂಸ್ಥಾನದಲ್ಲಿನ ಪ್ರಬಲ ಬ್ರಾಹ್ಮಣೇತರರ ವಿರುದ್ಧ ಹೋರಾಡಿ ತಮ್ಮ ಕುತಂತ್ರ ಬುದ್ಧಿಶಕ್ತಿಯಿಂದ ದಿಗ್ವಿಜಯ ಸಾಧಿಸಿ ಪುನಃ ದಿವಾನರಾಗುವುದು ಕಷ್ಟದ ಮಾತಾಗಿತ್ತು. ಇದಕ್ಕಾಗಿ ಅವರು ಕೈಕಟ್ಟಿ ಕೂರುವ ಬದಲು ತಾವು ಶತಶತಮಾನಗಳಿಂದ ಶೂದ್ರ ಹಾಗೂ ದಲಿತರಿಗೆ ಹೇಳಿದ್ದ 'ಒಂದು ಊರಿನಲ್ಲಿ

ಒಬ್ಬ ಬಡ ಬ್ರಾಹ್ಮಣನಿದ್ದ. ಆದರೆ ಅವನು ಬುದ್ಧಿಯಲ್ಲಿ ಚಾಣಾಕ್ಷನಾಗಿದ್ದ' ಎಂಬ ಮಾತನ್ನು ಹೇಳುತ್ತಲೇ ತಮ್ಮ ಚಾಣಾಕ್ಷ ಬುದ್ಧಿಯನ್ನು ತೋರಿಸಲು ಮುಂದಾದರು. ಅಂದರೆ ಪ್ರಬಲ ಬ್ರಾಹ್ಮಣೇತರ ಕೋಮಿನವರ ವಿರುದ್ಧ ಅಧಿಕಾರಕ್ಕಾಗಿ ಹೋರಾಟ ಮಾಡಲು ಪರಸ್ಪರರಲ್ಲಿಯೇ ಕುತಂತ್ರ ರಾಜಕೀಯ ತಂತ್ರಗಳನ್ನು ಪ್ರದರ್ಶಿಸಿ ಸನಾತನೀಯರೂ ಮುಂದಾಗಿ ಗೆದ್ದರು. ಈ ಗೆಲುವಿಗೆ ಅವರು ನಾಲ್ವಡಿಯವರ ಮನಗೆದ್ದು ಸಂಸ್ಥಾನದಲ್ಲಿ ಪ್ರಮುಖ ಹುದ್ದೆಗಳನ್ನು ಅಲಂಕರಿಸಲು ಆಯ್ಕೆ ಮಾಡಿಕೊಂಡ ಕ್ಷೇತ್ರವೇ ಪಂಚಮರ ಶಿಕ್ಷಣದ ಅಭಿವೃದ್ಧಿಗೆ ತಮ್ಮನ್ನು ತೊಡಗಿಸಿಕೊಳ್ಳಲು ಮುಂದಾದದ್ದು. ಜೊತೆಗೆ ಕ್ರೈಸ್ತ ಮಿಷನರಿಗಳು ಮೈಸೂರು ಸಂಸ್ಥಾನದ ಪ್ರವೇಶ ಹಾಗೂ ತಮ್ಮದೇ ಆದ ಕಾರ್ಯಕ್ರಮಗಳನ್ನು ಕೈಗೊಂಡರು. ಶಿಕ್ಷಣ, ವೈದ್ಯಕೀಯ ಸೌಲಭ್ಯ, ಮುದ್ರಣ ಹಾಗೂ ಸಾಹಿತ್ಯ ಸಾಕಷ್ಟು ಬೆಳವಣಿಗೆಯಾಯಿತು. ಅಸ್ಪೃಶ್ಯರ ಶಿಕ್ಷಣಕ್ಕಾಗಿ ಹಲವಾರು ಶಾಲೆಗಳನ್ನು ತೆರೆದು ಪಂಚಮರಿಗೆ ಶಿಕ್ಷಣ ನೀಡಲು ಮುಂದಾದರು. ಅಲ್ಲದೇ ಬ್ರಾಹ್ಮಣರು ಸಹ ಕ್ರೈಸ್ತ ಮಿಷನರಿಗಳು ತೆರೆದಿದ್ದ ಶಾಲೆಗಳ ಮಾದರಿಯಲ್ಲಿಯೇ ಮಹಾರಾಜರಿಂದ ಒಪ್ಪಿಗೆ ಪಡೆದು, ಅವರ ಮನವೊಲಿಸಿ ಆಯಾ ಕ್ರೈಸ್ತ ಶಿಕ್ಷಣ ಸಂಸ್ಥೆಗಳ ಹತ್ತಿರವೇ ಮೈಸೂರು ಸಂಸ್ಥಾನದಲ್ಲಿ ಪಂಚಮರ ಶಾಲೆಗಳನ್ನು ತೆರೆದು ಉಚಿತ ಊಟ, ಬಟ್ಟೆ ಹಾಗೂ ಪುಸ್ತಕಗಳನ್ನು ನೀಡಿ ದಲಿತ ಸಮಾಜ ಸುಧಾರಣ ಕಾರ್ಯಕ್ಕೆ ಮುಂದಾದರು.

ಪರಿಣಾಮವಾಗಿ ಶತಶತಮಾನಗಳಿಂದ ಸಾಮಾಜಿಕ, ತೊತ್ತುಗಳಾಗಿ, ಜೀತದ ಆಳುಗಳಾಗಿ, ಊರಿನ ಜಮೀನ್ದಾರನ ಮನೆಯ ಬಿಟ್ಟಿ ಚಾಕರಿಯ ಆಳಾಗಿ ಶಿಕ್ಷಣ ನಮ್ಮದಲ್ಲ, ನಾವು ಹುಟ್ಟಿರುವುದೇ ದಣಿಗಳ ಮನೆಯಲ್ಲಿ ದುಡಿಯಲು ಎಂದುಕೊಂಡಿದ್ದ. ಅಸ್ಪೃಶ್ಯ ಜನಾಂಗದವರಿಗೆ ಶಿಕ್ಷಣ ದೊರೆತದ್ದು ಅವರಲ್ಲಿ ಜಾಗೃತಿಯನ್ನು ಉಂಟುಮಾಡಲು ಸಹಕಾರಿಯಾಯಿತು. ಹೀಗೆ ಶಿಕ್ಷಣ ಪಡೆದ ಮೊದಲ ತಲೆಮಾರಿನ ದಲಿತ ಶಿಕ್ಷಣವಂತರು ಸಾಮಾಜಿಕ, ಶೈಕ್ಷಣಿಕ ಹಾಗೂ ಬೌದ್ಧಿಕವಾಗಿ ಪ್ರಗತಿಯನ್ನು ಸಾಧಿಸಿದರು. ಇಂಗ್ಲೀಷ್ ಶಿಕ್ಷಣ ಪಡೆದಿದ್ದರಿಂದ ಪ್ರಪಂಚದ ಹಲವಾರು ಸಾಮಾಜಿಕ ಸಂದರ್ಭಗಳನ್ನು ಜ್ಞಾನಾರ್ಜನೆ ಮಾಡಿಕೊಳ್ಳಲು ಸಹಕಾರಿಯಾಯಿತು. ದಲಿತರ ಶೋಷಿತರ ಏಳಿಗೆಗೆ ಪ್ರಾಮಾಣಿಕವಾಗಿ ದುಡಿಯಲು ಮುಂದಾದರು.

ಇವರ ಮೌಢ್ಯ, ಅಂಧಾಚರಣೆ, ಜೀತಪದ್ಧತಿಯಿಂದ ಮುಕ್ತಗೊಳಿಸಿ, ಜಾಗೃತಿಯನ್ನು ಉಂಟುಮಾಡಲು ಮತ್ತು ಅಂದಿನ ಸಂದರ್ಭದಲ್ಲಿ ದಲಿತರಿಗೆ ಬೇಕಾದ ನೀರು, ಭೂಮಿ, ದೇವಾಲಯ ಪ್ರವೇಶ, ಅಸ್ಪೃಶ್ಯತಾ ಆಚರಣೆಯ ವಿರುದ್ಧ ಅನೇಕ ಹೋರಾಟಗಳನ್ನೆ ನಡೆಸಿ, ದಲಿತರಿಗೆ ಸಮಾನತೆಯ ಅವಕಾಶವನ್ನು ಕಲ್ಪಿಸಲು ಮುಂದಾದ ಅನೇಕ ದಲಿತ ಮಹನೀಯರ ಚರಿತ್ರೆಯನ್ನು, ಎಲ್ಲೂ ಸಹ ದಾಖಲಿಸದೇ ಅವರನ್ನು ಚರಿತ್ರೆ ಹೀನರನ್ನಾಗಿಸಿರುವ ಹುನ್ನಾರಗಳೇನು? ಸ್ವಾತಂತ್ರಪೂರ್ವದ ದಲಿತ ಹೋರಾಟಗಾರರ ಬಗ್ಗೆ ಇತಿಹಾಸ ಚಿತ್ರಿಸದ, ನೆಲದ ಮರೆಯಲ್ಲಿ ಜನರೊಂದಿಗೆ ಜೀವಂತವಿರುವ ಶಿಷ್ಟ ಮತ್ತು ತೋಂಡಿ ಆಕರಗಳನ್ನು ಬಳಸಿಕೊಂಡು ಅವರ

ಚರಿತ್ರೆ ಕಟ್ಟಿಕೊಡುವುದಾಗಿದೆ. ಅವರ ಅಂದಿನ ಸಾಮಾಜಿಕ ಪರಿಸ್ಥಿತಿ, ಮೇಲ್ವರ್ಗದವರ ದಬ್ಬಾಳಿಕೆಯನ್ನು ಸಹಿಸಿಕೊಂಡು ಹಲವಾರು ಅಸ್ಪೃಶ್ಯತಾ ನಿವಾರಣಾ ಹೋರಾಟಗಳಲ್ಲಿ ತೊಡಗಿ ಅನೇಕ ಹಲ್ಲೆ, ದೌರ್ಜನ್ಯಗಳಿಗೆ ಒಳಗಾದರೂ ತಮ್ಮ ಸಮುದಾಯದ ಹಿತಕ್ಕೋಸ್ಕರ ದುಡಿದ ಮಹನೀಯರ ಜೀವನ ಚರಿತ್ರೆಯನ್ನು ಈ ಪ್ರಸ್ತುತ ಬರೆಹದಲ್ಲಿ ಸಂಕ್ಷಿಪ್ತವಾಗಿ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

೪.೨. ಗಟ್ರಿಸಿದ್ದಯ್ಯ

ಇವರು ಹಾಸನದಲ್ಲಿ ದಲಿತ ಕುಟುಂಬವೊಂದರಲ್ಲಿ ಜನಿಸಿದರು. ಹಾಸನದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢ ಶಾಲಾ ಶಿಕ್ಷಣವನ್ನು ಪೂರೈಸಿದರು. ವಿದ್ಯಾರ್ಥಿ ದಿಶೆಯಲ್ಲಿದ್ದಾಗಲೇ ಅಸ್ಪೃಶ್ಯರ ಮೇಲೆ ನಡೆಯುತ್ತಿದ್ದ ಶೋಷಣೆ, ದೌರ್ಜನ್ಯಗಳನ್ನು ಕಣ್ಣಾರೆ ಕಂಡು ಅವುಗಳನ್ನು ವಿರೋಧಿಸಿದವರು. ಬಿಟ್ಟಿ ಚಾಕರಿ ಕೆಲಸಗಳಿಗೆ ದಲಿತರನ್ನು ಬಳಸಿಕೊಳ್ಳುತ್ತಿರುವುದನ್ನು ಕಂಡಾಗ ಕೆಂಡ ಕಾರುತ್ತಿದ್ದರು. ಹಾಸನ ಜಿಲ್ಲೆಯ ವ್ಯಾಪ್ತಿಯಲ್ಲಿ ನೆಲೆಸಿರುವ ದಲಿತ ಸಮುದಾಯದವರು ಊರ ಹೊರಗಡೆ ಕೊಳಚೆ ಪ್ರದೇಶಗಳಲ್ಲಿರುವುದನ್ನು ಕಂಡು ಆ ಜನರ ಬದುಕನ್ನು ಬದಲಾವಣೆ ಮಾಡಬೇಕೆಂದು ನಿರ್ಧರಿಸಿದ್ದರು. ಅದಕ್ಕಾಗಿ ತನ್ನ ಜನಾಂಗದ ಅನೇಕ ಯುವಕರನ್ನು ಒಟ್ಟುಗೂಡಿಸಿ ದಲಿತ ಸಮುದಾಯದ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರಲು ಪ್ರಯತ್ನಿಸುತ್ತಿದ್ದರು.

ಅದೇ ಸಂದರ್ಭದಲ್ಲಿ ದೇಶದ ಸ್ವಾತಂತ್ರ್ಯ ಚಳುವಳಿಯ ಕಾವು ಎಲ್ಲ ಕಡೆಗೂ ವಿಸ್ತರಿಸಿತ್ತು. ಗಟ್ರಿಸಿದ್ದಯ್ಯನವರು ಸ್ವಾತಂತ್ರ್ಯ ಚಳವಳಿಯ ಪ್ರಭಾವಕ್ಕೆ ಒಳಗಾದರು. ಆಗ ಜಿಲ್ಲೆಯ ದಲಿತ ಮುಖಂಡರಾಗಿದ್ದ ಪುಟ್ಟಯ್ಯ, ತೋಪಯ್ಯ, ಶಿವಯ್ಯ, ಸಿದ್ಧಲಿಂಗಯ್ಯ ಮುಂತಾದವರೊಂದಿಗೆ ಸೇರಿ ಜಿಲ್ಲೆಯಾದ್ಯಂತ ಚಳವಳಿಯಲ್ಲಿ ಭಾಗವಹಿಸಿದ್ದರು. ಇವರು ಜಿಲ್ಲೆಯ ದಲಿತ ನಾಯಕತ್ವವನ್ನು ಪಡೆದ ನಂತರ ದಲಿತರ ಏಳಿಗೆಗೆ ಶ್ರಮಿಸಿದರು. ವಸತಿ ಇಲ್ಲದವರಿಗೆ ವಸತಿಯನ್ನು, ವ್ಯವಸಾಯಕ್ಕಾಗಿ ಭೂಮಿಯನ್ನು ದಲಿತರಿಗೆ ಕೊಡಿಸಿದರು. ದಲಿತರ ಉದ್ಧಾರಕ್ಕಾಗಿ ಶ್ರಮಿಸಿದರು. ತಮ್ಮ ಜನಾಂಗದವರಿಗೆ ಅಕ್ಷರದ ಮಹತ್ವವನ್ನು ತಿಳಿಸಿ ಕಡ್ಡಾಯವಾಗಿ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಮಾಡಿದರು. ಹಾಗಾಗಿ ತಮ್ಮ ಜನಾಂಗದ ಮಕ್ಕಳಿಗೆ ಶಿಕ್ಷಣ ನೀಡುವ ಉದ್ದೇಶದಿಂದಾಗಿ ೧೯೩೪ರಲ್ಲಿ ಹಾಸನದಲ್ಲಿ ಶಾಲೆಯನ್ನು ಪ್ರಾರಂಭಿಸಿದರು. ಇದು ಎ.ಕೆ. ಸ್ಕೂಲ್ ಎಂದೇ ಪ್ರಸಿದ್ಧವಾಯಿತು. ಸುತ್ತಮುತ್ತಲಿನ ಹಳ್ಳಿಗಳಿಗೆಲ್ಲಾ ಇದು ಒಂದೇ ಪ್ರಥಮ ಶಾಲೆಯಾಗಿದ್ದರಿಂದ ಹಳ್ಳಿಗಳಿಂದ ದಲಿತ ಮಕ್ಕಳು ಶಾಲೆಗೆ ಬರಲಾರಂಭಿಸಿದರು. ಇದರ ಮೊದಲ ಗುರುವಾಗಿ ಸಂಪತ್ ಅಯ್ಯಂಗಾರ್ ಎಂಬುವವರನ್ನು ನೇಮಿಸಲಾಯಿತು. ತಮ್ಮ ಸಮುದಾಯದವರು ವಾಸಿಸುವ ಹಳ್ಳಿಗಳಿಗೆ ಭೇಟಿ ನೀಡಿ ಅವರಲ್ಲಿ ಜಾಗೃತಿಯನ್ನು ಮೂಡಿಸಲು ಪ್ರಯತ್ನಿಸುತ್ತಿದ್ದರು. ಸತ್ತ ದನಗಳ ಮಾಂಸವನ್ನು ತಿನ್ನದಂತೆ, ಮದ್ಯಪಾನದಿಂದ ದೂರವಿರುವಂತೆ ಹಾಗೂ ಮಲ ಹೊರುವ ಪದ್ಧತಿಯನ್ನು ಕೈಬಿಡುವಂತೆ ಮನವಿ ಮಾಡುತ್ತಿದ್ದರು. ಹಾಸನದಲ್ಲಿ

ಪ್ರಬಲ ಕೋಮಿನವರ ಮನೆಗಳಲ್ಲಿ ದಲಿತ ಜನಾಂಗದವರು ಜೀತ ಮಾಡುವುದು ಸಾಮಾನ್ಯವಾಗಿತ್ತು. ಗಟ್ರಿಸಿದ್ದಯ್ಯನವರು ಭೂಮಾಲೀಕರ ಮನೆಗಳಲ್ಲಿ ಜೀತದಾಳುಗಳಾಗಿ ದುಡಿಯುತ್ತಿದ್ದ ದಲಿತರನ್ನು ಜೀತದಿಂದ ಮುಕ್ತಗೊಳಿಸಿದರು. ಭೂಮಾಲೀಕರಲ್ಲಿ ಇದ್ದ ಹೆಚ್ಚುವರಿ ಭೂಮಿಯನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡು, ಜೀತದಾಳುಗಳಿಗೆ ಆ ಭೂಮಿಗಳನ್ನು ವಿತರಿಸಿ ಭೂಒಡೆಯರನ್ನಾಗಿ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ದಲಿತರ ಕುಡಿಯುವ ನೀರಿನ ಸಮಸ್ಯೆಯನ್ನು ಅರಿತು, ಅನೇಕ ಕುಡಿಯುವ ನೀರಿನ ಬಾವಿಗಳನ್ನು ತೋಡಿಸಿದರು. ಇವರ ನಿಸ್ವಾರ್ಥ ಸೇವೆ ಮತ್ತು ಪ್ರಾಮಾಣಿಕತೆಯಿಂದಾಗಿ ಹಾಸನ ಜಿಲ್ಲೆಯಾದ್ಯಂತ ದಲಿತ ನಾಯಕರೆಂಬ ಹೆಗ್ಗಳಿಕೆಗೆ ಪಾತ್ರರಾದರು.

ಹೀಗೆ ತಮ್ಮ ಜನಾಂಗಕ್ಕೆ ಶಿಕ್ಷಣ, ಪ್ರತ್ಯೇಕ ಕಾಲೋನಿ, ಕುಡಿಯುವ ನೀರಿನ ವ್ಯವಸ್ಥೆ, ದಲಿತರಲ್ಲಿ ಜಾಗೃತಿ ಮುಂತಾದವುಗಳನ್ನು ಕಲ್ಪಿಸಿಕೊಟ್ಟು ಒಬ್ಬ ರಾಜಕಾರಣಿಯಾಗಿ ಹೊರಹೊಮ್ಮಿ ಬೇಲೂರು-ಸಕಲೇಶಪುರ ಮೀಸಲು ವಿಧಾನಸಭಾ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿ ತಮ್ಮ ಜೀವನದ ಉದ್ದಕ್ಕೂ ದಲಿತರ ಏಳಿಗೆಗಾಗಿ ಶ್ರಮಿಸಿದರು. ಇವರ ನಿಸ್ವಾರ್ಥ ಸೇವೆ ಮತ್ತು ಪ್ರಾಮಾಣಿಕತೆಯನ್ನು ಮೆಚ್ಚಿ ಹಾಸನದ ದಲಿತ ಸಮುದಾಯದವರು ತಮ್ಮ ಕಾಲೋನಿಗೆ ಸಿದ್ದಯ್ಯನಗರವೆಂದು ಹೆಸರು ಇಟ್ಟು ಅವರ ಸೇವೆಯನ್ನು ಪ್ರತಿನಿತ್ಯ ಸ್ಮರಿಸುತ್ತಾರೆ. ಇಂದಿಗೂ ಕೂಡ ಈ ಸಿದ್ದಯ್ಯನಗರವೆಂದು ಪ್ರಸಿದ್ಧಿ ಪಡೆದಿದೆ.[೧]

೪.೩. ದಲಿತ ಸ್ವಾತಂತ್ರ್ಯ ಹೋರಾಟಗಾರ್ತಿ ವೆಂಕಟಮ್ಮ

ಶಿವಮೊಗ್ಗ ತಾಲ್ಲೂಕಿನ ನವಿಲೆ ಗ್ರಾಮದ ದಲಿತ ಕುಟುಂಬವೊಂದರಲ್ಲಿ ೧೯೩೦ರಲ್ಲಿ ಜನಿಸಿದರು. ಇವರು ತಮ್ಮ ಬಾಲ್ಯದ ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢ ಶಿಕ್ಷಣವನ್ನು ಶಿವಮೊಗ್ಗದಲ್ಲಿ ಮುಗಿಸಿದರು. ಆ ಸಮಯದಲ್ಲಿ ನಾಗರತ್ನಮ್ಮ ಎಂಬ ಪ್ರಗತಿಪರ ಬ್ರಾಹ್ಮಣ ಹೆಣ್ಣುಮಗಳ ಪರಿಚಯವಾಗಿ ಅವರ ಸಾಮಾಜಿಕ ಕಳಕಳಿ ಚಿಂತನೆಗಳನ್ನು ಅಳವಡಿಸಿಕೊಳ್ಳಲು ಸಹಕಾರಿ ಯಾಯಿತು. ತಮ್ಮ ಸಮುದಾಯದ ಅಭಿವೃದ್ಧಿಗೆ ಮುಂದಾಗಲು ನಾಗರತ್ನಮ್ಮನವರ ಪ್ರೇರಣೆ ವೆಂಕಟಮ್ಮನವರಿಗೆ ತುಂಬಾ ಅನುಕೂಲವಾಯಿತು.

ಆ ಸಂದರ್ಭದಲ್ಲಿ ಅಸ್ಪೃಶ್ಯರ ಸ್ಥಿತಿಗತಿಗಳು ಶೋಚನೀಯ ಸ್ಥಿತಿಯಲ್ಲಿದ್ದವು. ಅಜ್ಞಾನ, ಅಂಧಶ್ರದ್ಧೆ, ಮದ್ಯಪಾನ, ಮೂಢನಂಬಿಕೆಗಳ ತೊಳಲಾಟದಲ್ಲಿ ಮುಳುಗಿ ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಜರ್ಜರಿತರಾಗಿದ್ದರು. ಊರ ಹೊರಗಡೆ ಹುಲ್ಲಿನ ಗುಡಿಸಲು- ಜೋಪಡಿಗಳಲ್ಲಿ ವಾಸ ಮಾಡುತ್ತಾ, ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವ ಯೋಚನೆಯೇ ಇಲ್ಲದ ದಲಿತರು ತಾವು ಜೀತ ಮಾಡುವಂತೆ ತಮ್ಮ ಮಕ್ಕಳನ್ನು ಜೀತಕ್ಕೆ ತೊಡಗಿಸುವ ಪರಿಪಾಠ ಇಟ್ಟುಕೊಂಡಿದ್ದರು. ಶುಚಿತ್ವ ಇಲ್ಲದೆ ಅನಾಗರಿಕರಂತೆ ಜೀವನ ನಡೆಸುತ್ತಿದ್ದ ದಲಿತರ ಸ್ಥಿತಿಗತಿಗಳನ್ನು ವೆಂಕಟಮ್ಮನವರು ಅನುಭವಿಸಿ ಕಣ್ಣಾರೆ ಕಂಡು ಅವುಗಳಿಂದ ತಮ್ಮ ಸಮುದಾಯವನ್ನು ಮುಕ್ತಗೊಳಿಸಬೇಕೆಂಬ ಹಂಬಲ ಅವರಲ್ಲಿತ್ತು. ಈ ದಲಿತ ಸಮುದಾಯದವರಲ್ಲಿ ನೈತಿಕ

ಸ್ಥೈರ್ಯ, ಅರಿವನ್ನು ಮೂಡಿಸಲು ನಾಗರತ್ನಮ್ಮರಂತಹ ಪ್ರಗತಿಪರ ಬ್ರಾಹ್ಮಣ ಹೆಣ್ಣು ಮಗಳನ್ನು ಕರೆಸಿ ತಮ್ಮ ಕೇರಿಯಲ್ಲಿ ತಿಳಿವಳಿಕೆ ಕೊಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರು.

ಶಿವಮೊಗ್ಗದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಪ್ರವೇಶ ಚಳವಳಿ ಮತ್ತು ಹುಣಸೋಡು ಬಾವಿ ನೀರಿನ ಹೋರಾಟದಲ್ಲಿ ಧೈರ್ಯವಾಗಿ ಭಾಗವಹಿಸಿ ದಲಿತ ಸಮುದಾಯದವರಲ್ಲಿ ಜಾಗೃತಿ ಮೂಡಿಸಿ ತಮ್ಮ ಚಿಂತನೆಗಳ ಮುಖಾಂತರ ತಮ್ಮ ಸಮಾಜದವರಲ್ಲಿ ಆತ್ಮವಿಶ್ವಾಸ ಮಾಡಿಸುವ ಪ್ರಯತ್ನ ಮಾಡುತ್ತಿದ್ದರು.

ಮಹಿಳೆಯರ ಬಗ್ಗೆ ಅಪಾರವಾದ ಕಾಳಜಿ ಹೊಂದಿದ್ದ ಇವರು ಮಹಿಳೆಯರ ಹಿತಕೋಸ್ಕರ ದುಡಿಯುತ್ತಿದ್ದರು. ಮೊದಲು ಮಹಿಳೆಯರು ಶಿಕ್ಷಣವಂತರಾಗಬೇಕೆಂಬ ಕನಸನ್ನು ಕಂಡಿದ್ದರು. ಹಾಗೆಯೇ ಮಹಿಳೆಯರ ಅನುಕೂಲಕ್ಕಾಗಿ ಬಾಲಕಿಯರ ಶಾಲೆಗಳನ್ನು ಮಂಜೂರು ಮಾಡಿಸುವಲ್ಲಿ ಯಶಸ್ವಿಯಾದರು. ಜೊತೆಗೆ ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧ ಸದಾ ಹೋರಾಟ ಮಾಡುತ್ತಾ ಬಂದಿದ್ದರು.

ಇವರು ವಿವಾಹವಾದ ನಂತರ ಕೇವಲ ಕುಟುಂಬಕ್ಕೆ ಮಾತ್ರ ಸೀಮಿತವಾಗದೆ ನಾಗರತ್ನಮ್ಮನವರ ಪ್ರೇರಣೆಯಿಂದ ರಾಜಕೀಯ ಪ್ರವೇಶಿಸಿ, ಮಂಡಲ ಪಂಚಾಯ್ತಿಯಲ್ಲಿ ಸತತವಾಗಿ ಐದು ಬಾರಿ ಸದಸ್ಯರಾಗಿ ಆಯ್ಕೆಯಾದರು. ಗ್ರಾಮೀಣ ಮಟ್ಟದ ದಲಿತರ, ಮಹಿಳೆಯರ ಪರವಾಗಿ ಕಾರ್ಯ ನಿರ್ವಹಿಸಿದರು. ಅಲ್ಲದೇ ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಕ್ವಿಟ್ ಇಂಡಿಯಾ ಚಳವಳಿ ಸ್ವಾತಂತ್ರ್ಯಕೋಸ್ಕರ ನಡೆದ ಹಲವಾರು ಪ್ರತಿಭಟನೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ದಲಿತ ಸ್ವತಂತ್ರ ಹೋರಾಟಗಾರ್ತಿಯಾಗಿ ತಮ್ಮ ಜೀವನದ ಕೊನೆಯವರೆಗೆ ಶೋಷಿತರ ಪರವಾಗಿ ಹೋರಾಟ ಮಾಡಿ ಜನವರಿ ೨೦ರಂದು ತಮ್ಮ ತೊಂಬತ್ತನೆಯ ವಯಸ್ಸಿನಲ್ಲಿ ೨೦೧೬-ನಿಧನರಾದರು.[೨]

೪.೪. ಧರ್ಮವಾರಪಲ್ಲಿ ವೆಂಕಟರಾಮಣ್ಣ

ಇವರು ಕೋಲಾರ ಜಿಲ್ಲೆಯಲ್ಲಿ ಜನಿಸಿ ಸ್ವಾತಂತ್ರ್ಯ ಪೂರ್ವದಲ್ಲಿಯೇ ಉತ್ತಮ ನಾಯಕನಾಗಿ ಹೆಸರುವಾಸಿಯಾಗಿದ್ದಾರೆ. ಅವರ ತಂದೆಯ ಮಾರ್ಗದರ್ಶನದಂತೆ ಬಾಲ್ಯದಲ್ಲೇ ಒಳ್ಳೆಯತನ, ಸುಸಂಸ್ಕೃತಿಯನ್ನು ಮೈಗೂಡಿಸಿಕೊಂಡ ಅವರು ದಲಿತ ಜನಾಂಗದ ಯಜಮಾನರಾಗಿ ಸುತ್ತಮುತ್ತಲಿನ ಹಳ್ಳಿಗಳ ಗಲಾಟೆ, ಜಮೀನು ಮುಂತಾದ ವಿಷಯಕ್ಕೆ ಸಂಬಂಧಿಸಿದ ವ್ಯಾಜ್ಯಗಳನ್ನು ಅಂತಿಮವಾಗಿ ಬಗೆಹರಿಸುತ್ತಿದ್ದರು. ಶಿಕ್ಷಣವನ್ನು ಪಡೆದಿದ್ದು ಕಡಿಮೆಯಾದರೂ, ಅನುಭವ, ಸೇವಾನಿಷ್ಠೆ, ದೇಶಪ್ರೇಮ ಅವರಿಗೆ ಅಪಾರ ಜ್ಞಾನವನ್ನು ಹಾಗೂ ಲೋಕಾನುಭವವನ್ನು ಕೊಟ್ಟಿದ್ದವು. ಮನೆ ಕಟ್ಟುವ ಮತ್ತು ಕೆರೆ ನಿರ್ಮಿಸುವ ಕಾಯಕ ಇವರ ವಂಶದ ಕಸುಬಾಗಿದ್ದರಿಂದ ಮೈಸೂರು ಮಹಾರಾಜರ ಸೂಚನೆಯಂತೆ ಕೃಷ್ಣರಾಜ ಸಾಗರ ಅಣೆಕಟ್ಟನ್ನು ಕಟ್ಟಲು ಹೋಗುತ್ತಾರೆ. ಕೋಲಾರ ಜಿಲ್ಲೆಯಾದ್ಯಂತ ಕೂಲಿಕಾರ್ಮಿಕರನ್ನು ಅಣೆಕಟ್ಟು ಕಟ್ಟುವ ಸಲುವಾಗಿ ಒಗ್ಗೂಡಿಸಿ

ಅವರ ನಾಯಕತ್ವವನ್ನು ಧರ್ಮವಾರಪಲ್ಲಿ ವೆಂಕಟರಾಮಣ್ಣನವರು ವಹಿಸಿ ಉತ್ತಮವಾಗಿ ಕೆಲಸ ಮಾಡಿ ಮಹಾರಾಜರಿಂದ ಮತ್ತು ದಿವಾನರಿಂದ ಪ್ರಶಂಸೆಗೆ ಪಾತ್ರರಾಗುವರು.

ಇದೇ ಸಂದರ್ಭದಲ್ಲಿ ಸ್ವತಂತ್ರ ಚಳುವಳಿಯಲ್ಲಿಯೂ ಸಕ್ರಿಯವಾಗಿ ಭಾಗವಹಿಸಿ ಕೈವಾರ ತಾತಯ್ಯ ಅವರ ಸಮಾಧಿಯನ್ನು ನಿರ್ಮಿಸುತ್ತಾರೆ. ಕೈವಾರ ತಾತಯ್ಯನವರ ಬೆಟ್ಟಕ್ಕೆ ಕಲ್ಲುಗಳಿಂದ ಮೆಟ್ಟಿಲುಗಳನ್ನು ನಿರ್ಮಿಸುವ ಕಾರ್ಯಕ್ಕೆ ಇವರನ್ನು ಬಳಸಿಕೊಳ್ಳುತ್ತಾರೆ. ಆಗ ಅದೇ ಬೆಟ್ಟದ ಮೇಲೆ ಬ್ರಿಟಿಶ್‌ರ ವಿರುದ್ಧ ಸಭೆ ಸಮಾರಂಭಗಳು ಗುಪ್ತವಾಗಿ ನಡೆಯುತ್ತಿರುತ್ತವೆ. ಈ ಸಮಯದಲ್ಲಿ ಇವರ ಸಭೆಯನ್ನು ವಿರೋಧಿಸಿದ ಎಂಟು ಜನ ಬ್ರಿಟೀಶ್‌ರನ್ನು ಬೆಟ್ಟದ ಮೇಲೆ ಕಟ್ಟಿ ಹಾಕಲಾಗುತ್ತದೆ. ಎಲ್ಲ ಕಡೆ ಸ್ವಾತಂತ್ರ್ಯ ಹೋರಾಟದ ಕಾವು ಹೆಚ್ಚಾಗಿರುತ್ತದೆ. ಈ ಬ್ರಿಟೀಶ್‌ರನ್ನು ಕಟ್ಟಿಹಾಕಿದ ನಂತರ ಇವರನ್ನು ಹುಡುಕಲು ಇತರೆ ಬ್ರಿಟೀಶ್ ಅಧಿಕಾರಿಗಳು ಪ್ರಯತ್ನಿಸುತ್ತಿದ್ದಾಗ ಅಲ್ಲಿಂದ ತಪ್ಪಿಸಿಕೊಂಡು ಸುಮಾರು ಮೂವತ್ತು ನಲವತ್ತು ಕೀಲೋಮೀಟರ್ ಇರುವ ತಮ್ಮ ಊರಾದ ತುಳುವನೂರಿಗೆ ಬರುತ್ತಾರೆ. ಈ ರೀತಿ ತಪ್ಪಿಸಿಕೊಳ್ಳುವ ವೆಂಕಟರಾಮಣ್ಣನವರು ಅಲ್ಲಿಯೇ ನೆಲೆಸಿ ಸಮಾಜ ಕಾರ್ಯಗಳನ್ನು ಮಾಡಲು ಮುಂದಾಗುತ್ತಾರೆ. ದಲಿತರ ಅಭಿವೃದ್ಧಿ ಏಳಿಗೆಯ ಬಗ್ಗೆ ಅಪಾರವಾದ ಕಾಳಜಿಯನ್ನು ಹೊಂದಿದ್ದ ವೆಂಕಟರಾಮಣ್ಣ ನವರು ದಲಿತ ಮಹಿಳೆಯರು ಸ್ವಾವಲಂಬಿಗಳಾಗಲು ಗೃಹಕೈಗಾರಿಕೆ, ಸ್ವಯಂ ಉದ್ಯೋಗ ಕರಕುಶಲಗಳಿಗೆ ಸಂಬಂಧಿಸಿದ ಸಣ್ಣ ಕೈಗಾರಿಕೆಗಳನ್ನು ನಡೆಸಲು ಎಲ್ಲ ರೀತಿಯ ಸಹಾಯವನ್ನು ನೀಡಲು ದಿವಾನರಿಗೆ ಮನವಿ ನೀಡುವುದರ ಮೂಲಕ ನೆರವು ಪಡೆಯುವಲ್ಲಿ ಯಶಸ್ವಿಯಾಗುತ್ತಾರೆ. ಇವರು ತಮ್ಮ ಜೀವಿತದ ಅವಧಿಯಲ್ಲಿ ಸ್ವಾರ್ಥಕ್ಕಿಂತ ಸಾಮಾಜಿಕ ನ್ಯಾಯಕ್ಕೆ ಹೆಚ್ಚು ಮಹತ್ವ ನೀಡಿದ್ದರು. ಅದರಲ್ಲೂ ಅವರು ಅಸ್ಪೃಶ್ಯತೆಯನ್ನು ಬಲವಾಗಿ ವಿರೋಧಿಸಿ ಅದರ ನಿವಾರಣೆಗಾಗಿ ಪ್ರಯತ್ನಿಸುತ್ತಿದ್ದರು. ಅನಿಷ್ಟ ಪದ್ಧತಿಗಳಿಂದ ಮೂಢನಂಬಿಕೆ, ಅಂಧಶ್ರದ್ಧೆಗಳಿಂದ ದೂರ ಇರುವಂತೆ ಸಲಹೆ ನೀಡುತ್ತಿದ್ದರು. ದಲಿತರು ಪ್ರತಿಯೊಂದು ಊರುಗಳ ಹೊರಗಡೆ ವಾಸಿಸುತ್ತಾ, ಎಲ್ಲಾ ವಿಧಗಳಲ್ಲೂ ಸವರ್ಣೀಯರನ್ನು ಆಶ್ರಯಿಸುತ್ತಾ ಜೀವನ ನಡೆಸುತ್ತಿದ್ದುದನ್ನು ಕಣ್ಣಾರೆ ಕಂಡಿದ್ದ ವೆಂಕಟರಾಮಣ್ಣ ಅವರು ದಲಿತರನ್ನು ಸವರ್ಣೀಯರ ಹಿಡಿತದಿಂದ ಬಿಡುಗಡೆಗೊಳಿಸಲು ಚಿಂತನೆ ಮಾಡುತ್ತಿದ್ದರು.

ವಿನಯ, ಸಜ್ಜನಿಕೆ, ನಿಷ್ಠೆ, ಶಿಸ್ತು, ಸಂಸ್ಕಾರದ ವ್ಯಕ್ತಿತ್ವದವರಾದ ಇವರು ಹಸಿದವರಿಗೆ ಆಸರೆಯಾದವರು, ಶೋಷಿತ ಸಮುದಾಯಗಳ ಬಿಡುಗಡೆ ಮತ್ತು ಅಭಿವೃದ್ಧಿ ಶಿಕ್ಷಣದಿಂದ ಮಾತ್ರ ಸಾಧ್ಯ ಎಂಬುದನ್ನು ಪ್ರತಿಪಾದಿಸುತ್ತಿದ್ದರು. ಸಹಾಯ ಬೇಡಿ ಬರುತ್ತಿದ್ದ ಎಲ್ಲಾ ಹಿಂದುಳಿದ ಶೋಷಿತ ಸಮುದಾಯದವರಿಗೆ ಊಟ ಮಾಡಿಸಿ, ಅವರ ಸಮಸ್ಯೆ ಏನೆಂಬುದನ್ನು ಕೇಳಿ, ಬಗೆಹರಿಸಿ ಮತ್ತೇ ಊರಿಗೆ ಹೋಗಲು ಬಸ್ ಚಾರ್ಜ್ ಕೊಟ್ಟು ಕಳುಹಿಸುತ್ತಿದ್ದರು.

ಧರ್ಮವಾರಪಲ್ಲಿ ವೆಂಕಟರಾಮಣ್ಣನವರು ಅವಮಾನವನ್ನು ನುಂಗಿಕೊಂಡು, ವ್ಯವಸ್ಥೆಯೊಟ್ಟಿಗಿನ ಸಾಮರಸ್ಯದಿಂದಲೇ ಸಮುದಾಯದ ಅಸ್ತಿತ್ವಕ್ಕಾಗಿ ದುಡಿಯುತ್ತಾರೆ. ತಮ್ಮ ಸೌಜನ್ಯದ ನಡವಳಿಕೆಯ

ಮೂಲಕ ದಲಿತೇತರರನ್ನು ಪಶ್ಚಾತ್ತಾಪಕ್ಕೆ ಒಳಗು ಮಾಡುತ್ತಲೇ ಅವರಲ್ಲೊಂದು ಬಗೆಯ ಮಾನಸಿಕ ಬದಲಾವಣೆಗೆ ಕಾರಣರಾಗುತ್ತಾರೆ. ಜಾತೀಯತೆ ಪ್ರಬಲವಾಗಿದ್ದ ಆ ಕಾಲದಲ್ಲೆ ಇವರ ವ್ಯಕ್ತಿತ್ವಕ್ಕೆ ಮಾರು ಹೋದ ರೆಡ್ಡಿ ಸವರ್ಣೀಯ ಸಾಹುಕಾರರು ಇವರನ್ನು ತಮ್ಮ ಮನೆಗೆ ಆಹ್ವಾನಿಸಿ ಎಲ್ಲಾ ರೀತಿಯ ಸಹಾಯ ಮಾಡಿ ತಾವು ಈ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಳ್ಳಲು ಮುಂದಾಗುತ್ತಾರೆ.

ಜನಪರ ಕೆಲಸ ಮಾಡಿದ ವೆಂಕಟರಾಮಣ್ಣನವರು ಸಮಾಜದ ಎಲ್ಲಾ ಬಡವರು ಶೋಷಿತ ಸಮುದಾಯದವರು ಗೌರವದಿಂದ ಬದುಕುವಂತಾಗಬೇಕೆಂದು ಪ್ರಾಮಾಣಿಕವಾಗಿ ದುಡಿದ ವ್ಯಕ್ತಿ. ಅಂತಹ ಕಠಿಣ ಪರಿಸ್ಥಿತಿಯಲ್ಲಿ ಇದ್ದಂತಹ ಸಮಸ್ಯೆ ಹಾಗೂ ಸವಾಲನ್ನು ಸ್ವೀಕರಿಸಿದ ರೀತಿ ಅವರು ಬೆಳೆದು ಬಂದ ಬಗೆ ನಮಗೆಲ್ಲರಿಗೂ ದಾರಿದೀವಿಗೆಯಾಗಿದೆ. ಅವರು ಜಿಲ್ಲೆಯ ಎಲ್ಲಾ ವರ್ಗದ ಜನರೊಡನೆ ಬೆರೆತು ಅವರಿಂದ ಪ್ರೀತಿ ಪುರಸ್ಕಾರವನ್ನು ಪಡೆದಿದ್ದರು. ಸಮಾಜದಲ್ಲಿ ಸಾವಿರಾರು ವರ್ಷಗಳಿಂದ ಬೇರೂರಿಕೊಂಡು ಬಂದಿರುವ ಜಾತಿ, ಮತ, ಸ್ಪೃಶ್ಯ, ಅಸ್ಪೃಶ್ಯ, ಮೇಲು, ಕೀಳೆಂಬ, ಕಳಂಕಗಳನ್ನು ಹೋಗಲಾಡಿಸಿ ಜಾತ್ಯತೀತ ಸಮಾಜ ಸೃಷ್ಟಿಸಲು ನುಡಿದಂತೆ ನಡೆದರು. ಸಮಾಜ ಸುಧಾರಕರ ತತ್ವ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡು ಆದರ್ಶದಂತೆ ಬಾಳಿದವರು. ದಲಿತರ ಅಭಿವೃದ್ಧಿಗೋಸ್ಕರ ತಮ್ಮಿಂದ ಆದ ಎಲ್ಲ ರೀತಿಯ ನೆರವನ್ನು ನೀಡಿದರು. ದಲಿತರು ಕೇವಲ ಪ್ರಬಲ ಜಾತಿಗಳ ಗುಲಾಮರಲ್ಲ ತಮಗೂ ಎಲ್ಲರಂತೆ ಬಾಳಿ ಬದುಕುವ ಹಕ್ಕಿದೆ ಎಂದು ತೋರಿಸಿಕೊಟ್ಟರು. ಅಜ್ಞಾನದಲ್ಲಿ ಮೈಮರೆತ ಮುಗ್ಧ ದಲಿತ ವರ್ಗದ ಜನತೆಯನ್ನು ಎಚ್ಚರಿಸಿದರು. ಅವರಲ್ಲಿ ಅಪೂರ್ವವಾದ ಸ್ವಾಭಿಮಾನವನ್ನು ಸ್ವಯಂ ಪ್ರಜ್ಞೆಯನ್ನು ಅನ್ಯಾಯದ ವಿರುದ್ಧದ ಸೆಟೆದೇಳುವ ಬಂಡಾಯ ಮನೋಧರ್ಮವನ್ನು ಬೆಳೆಸಿದರು.[೩]

೪.೫. ಕೊತ್ತನಗಟ್ಟದ ಕೆಂಪಯ್ಯ(ಹಾಸನ ಜಿಲ್ಲೆಯ ಪ್ರಥಮ ಪದವೀಧರ)

ಇವರು ಹಾಸನ ಜಿಲ್ಲೆಯ ಕೊತ್ತನಗಟ್ಟ ಗ್ರಾಮದಲ್ಲಿ ಜನಿಸಿದರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ತಮ್ಮ ಗ್ರಾಮದಲ್ಲಿ ಮುಗಿಸಿ ಮೈಸೂರಿನ ಮಹಾರಾಜರ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದರು. ಇದರಿಂದಾಗಿ ಹಾಸನ ಜಿಲ್ಲೆಯಲ್ಲಿ ದಲಿತ ಜನಾಂಗದ ವ್ಯಕ್ತಿ ಬಿ.ಎ. ಪದವಿ ಪಡೆದ ಕೆಂಪಯ್ಯನವರು ಹಾಸನ ಜಿಲ್ಲೆಯ ಪ್ರಥಮ ದಲಿತ ಪದವೀಧರ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ.

ವಿದ್ಯಾರ್ಥಿ ದಿಸೆಯಲ್ಲಿದ್ದಾಗಲೇ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾದ ಕೆಂಪಯ್ಯನವರು ಖಾದಿಧಾರಿಯಾಗುವುದರ ಜೊತೆಗೆ ಗಾಂಧೀಜಿಯವರ ರಚನಾತ್ಮಕ ಕಾರ್ಯಗಳನ್ನು ಅನುಷ್ಠಾನಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದರು.

ಶಿಕ್ಷಣದ ಮಹತ್ವವನ್ನು ಅರಿತಿದ್ದ ಇವರು ದಲಿತರಿಗೆ ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸುವಂತೆ ಮನವೊಲಿಸುವ ಪ್ರಯತ್ನ ಮಾಡುತ್ತಿದ್ದರು. ಅಂದು ಶಿಕ್ಷಣವೆನ್ನುವುದು ಉಳ್ಳವರ ಸೊತ್ತಾಗಿತ್ತು. ವಿಶೇಷವಾಗಿ ಪುರೋಹಿತಶಾಹಿ ವರ್ಗದವರ ಕೈಯಲ್ಲಿತ್ತು. ಸುಶಿಕ್ಷಿತರಾದ ಕೆಂಪಯ್ಯನವರು

ತಮ್ಮ ಜಿಲ್ಲೆಯಾದ್ಯಂತ ಸಂಚರಿಸಿ ಶಿಕ್ಷಣದ ಅಗತ್ಯತೆ ಮತ್ತು ಅದರಿಂದ ಆಗಬಹುದಾದ ಸಾಮಾಜಿಕ ಬದಲಾವಣೆಗಳ ಬಗ್ಗೆ ಜಾಗೃತಿ ಮೂಡಿಸುತ್ತಿದ್ದರು. ಅಸ್ಪೃಶ್ಯರು ಉದ್ಧರವಾಗಬೇಕಾದರೆ ಶಿಕ್ಷಣದಷ್ಟೇ ಮಹತ್ವ ಭೂ ಒಡೆತನವನ್ನು ಹೊಂದುವುದು. ಇದರಿಂದ ಆರ್ಥಿಕವಾಗಿ, ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ಸಹಾಯವಾಗುತ್ತದೆ ಎಂದು ಅನೇಕ ಸರ್ಕಾರಿ ಭೂಮಿಗಳನ್ನು ದಲಿತರಿಗೆ ದೊರಕಿಸಿಕೊಟ್ಟಿದ್ದರು. ದಲಿತರ ದಾರಿದ್ರ್ಯಕ್ಕೆ ಮತ್ತು ಅವರು ಸಮಾಜದಿಂದ ಕೀಳಾಗಿ ಕಾಣಲ್ಪಡುವುದಕ್ಕೆ ಕಾರಣ ಅವರು ತಿನ್ನುತ್ತಿದ್ದ ಸತ್ತ ದನಗಳ ಮಾಂಸ ಕೆಂಪಯ್ಯನವರು ಸತ್ತ ದನದ ಮಾಂಸ ತಿನ್ನದಿರಲು ಹಾಗೂ ಶುಚಿತ್ವದಿಂದಿರಲು ಮತ್ತು ಸುತ್ತಮುತ್ತಲಿನ ವಾತಾವರಣವನ್ನು ಸ್ವಚ್ಛತೆಯಿಂದಿಡಲು ದಲಿತರಿಗೆ ಮನವಿ ಮಾಡುತ್ತಿದ್ದರು. ಎಷ್ಟೇ ವಿನಂತಿಸಿಕೊಂಡರೂ ಅಸ್ಪೃಶ್ಯರು ಸತ್ತ ದನದ ಮಾಂಸ ತಿನ್ನುವುದನ್ನು ಬಿಡಲು ಸಿದ್ಧರಿರಲಿಲ್ಲ. ಹೀಗಾಗಿ ಕೆಂಪಯ್ಯನವರು ಕೆಲವು ಯುವಕರನ್ನು ಸಂಘಟಿಸಿಕೊಂಡು ಪ್ರತಿ ಹಳ್ಳಿ ಹಳ್ಳಿಗೂ ಭೇಟಿ ನೀಡಿ ದಲಿತರಲ್ಲಿ ಪ್ರಜ್ಞೆ ಮೂಡಿಸಲು ಪ್ರಯತ್ನಿಸುತ್ತಿದ್ದರು. ಯಾವುದೇ ಹಳ್ಳಿಯಲ್ಲಿ ದನ ಸತ್ತಿದ್ದು ತಿಳಿದು ಬಂದರೆ, ಕೂಡಲೇ ಅಲ್ಲಿಗೆ ಧಾವಿಸಿ ಸತ್ತ ದನದ ಮಾಂಸವನ್ನು ತಿನ್ನದಂತೆ ಓಲೈಸಿ ಭೂಮಿಯಲ್ಲಿ ಊಳುವಂತೆ ಮಾಡುತ್ತಿದ್ದರು. ಈ ರೀತಿಯ ಕಾರ್ಯಾಚರಣೆಯಿಂದ ಸ್ವಲ್ಪಮಟ್ಟಿಗೆ ದಲಿತರಲ್ಲಿ ಪ್ರಜ್ಞೆ ಮೂಡಿ ಅದನ್ನು ನಿಷೇಧಿಸಲು ಪ್ರಾರಂಭಿಸಿದರು.[೪]

೪.೬. ಟಿ.ಎ. ದಾಸಪ್ಪನವರು

ಇವರು ತುಮಕೂರು ಜಿಲ್ಲೆ ತಿಪಟೂರಿನಲ್ಲಿ ದಲಿತ ಜನಾಂಗದ ಅಡೆವಪ್ಪ ಮತ್ತು ಕರಿಯಮ್ಮ ಎಂಬ ದಂಪತಿಗಳ ಮಗನಾಗಿ ೧೯೨೭ ಜುಲೈ ೧೦ರಂದು ಜನಿಸಿದರು. ಮೈಸೂರು ಮಹಾರಾಜರಿಂದ ಅಸ್ಪೃಶ್ಯರ ಮಕ್ಕಳಿಗೆಂದೇ ಸ್ಥಾಪಿಸಲಾಗಿದ್ದ ಪಂಚಮ ಶಾಲೆಗೆ ದಾಸಪ್ಪನವರು ೧೯೩೨ರಲ್ಲಿ ಸೇರಿದರು. ಈ ಪಂಚಮ ಶಾಲೆಯಲ್ಲಿ ಕೊರಟಗೆರೆಯ ಕೆ. ದೊಡ್ಡಯ್ಯ ಎಂಬುವರು ಮುಖ್ಯೋಪಾಧ್ಯಾಯರಾಗಿದ್ದರು. ಇವರು ಕರ್ನಾಟಕ ರಾಜ್ಯದ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಗಳಾಗಿದ್ದ ಕೆ. ಭೀಮಯ್ಯನವರ ತಂದೆಯವರು. ಇವರು ವೃತ್ತಿ ಶಿಕ್ಷಕರಾಗಿದ್ದರಿಂದ ಚಪ್ಪಲಿ ಹೊಲಿಯುವುದು ಜೊತೆಗೆ ಬಟ್ಟೆ ಹೊಲಿಗೆ ತರಬೇತಿ ನೀಡುತ್ತಿದ್ದರು. ದಾಸಪ್ಪನವರು ಪ್ರಾಥಮಿಕ ಶಿಕ್ಷಣ ಪಡೆಯುತ್ತಿದ್ದ ಕಾಲದಲ್ಲಿ ಪ್ರಭಾವ ಬೀರಿದ್ದ ಗುರುಗಳಲ್ಲಿ ಮುಖ್ಯವಾದವರು. ನಂತರ ದಾಸಪ್ಪನವರು ಕೋಟೆ ಸರ್ಕಾರಿ ಶಾಲೆಗೆ ಸೇರಿದರೂ, ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದರಿಂದ ೪ನೇ ತರಗತಿಗೆ ಓದು ನಿಲ್ಲಿಸಿ, ಕೂಲಿ ಕೆಲಸ ಮಾಡಲು ತೊಡಗಿದರು.

೧೯೪೨ರಲ್ಲಿ ಬ್ರಿಟೀಶರ ವಿರುದ್ಧ ಕ್ವಿಟ್ ಇಂಡಿಯಾ ಚಳವಳಿ ದೇಶಾದ್ಯಂತ ವ್ಯಾಪಕವಾಗಿ ನಡೆಯುತ್ತಿತ್ತು. ಮೈಸೂರು ಸಂಸ್ಥಾನದಲ್ಲಿ ಇದರ ಕಾವು ಹಬ್ಬಿತ್ತು. ತಿಪಟೂರಿನಲ್ಲಿ ಗಾಂಧೀಯವರ ಕರೆಗೆ ಜನರು ಮನಸೋತು, ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದ್ದರು. ಅದರಂತೆ ದಾಸಪ್ಪನವರು

ಸ್ವತಂತ್ರ ಚಳವಳಿಯಲ್ಲಿ ಭಾಗವಹಿಸಿದ್ದರು. ಆ ಸಂದರ್ಭದಲ್ಲಿ ಭಿಕ್ಷುಕನ ವೇಷಧರಿಸಿ ಪೋಲೀಸರಿಂದ ಬ್ರಿಟೀಶ್ ಅಧಿಕಾರಿಗಳಿಂದ ತಪ್ಪಿಸಿಕೊಳ್ಳಲು ರೈಲು ಹತ್ತಿ ಮೈಸೂರು ಸೇರಿದರು. ಆದರೂ ಅಲ್ಲಿ ಬಂಧನಕ್ಕೆ ಒಳಗಾಗಿ ಕಾರಗೃಹ ಸೇರಿದರು.

ದಾಸಪ್ಪನವರು ಸ್ವಾಭಿಮಾನಿಯಾದ ಪ್ರಸಂಗವೊಂದು ತನ್ನ ಊರಿನಲ್ಲೇ ನಡೆಯಿತು. ತಿಪಟೂರಿನ ಗ್ರಾಮದೇವತೆ ತಿಪಟೂರಮ್ಮನ ಜಾತ್ರೆ ಪ್ರತಿವರ್ಷ ನಡೆಯುತ್ತದೆ. ಅದರಂತೆ ೧೯೪೮ರಲ್ಲಿ ನಡೆದ ತಿಪಟೂರಮ್ಮನ ಜಾತ್ರೆಯ ರಥೋತ್ಸವದ ಸಂದರ್ಭದಲ್ಲಿ ದಾಸಪ್ಪನವರು ತೇರಿನ ಹಗ್ಗ ಹಿಡಿದೆಳೆದರು. ಆಗ ದಲಿತನೊಬ್ಬ ದೇವಿಯ ತೇರಿನ ಹಗ್ಗ ಹಿಡಿದೆಳೆದದ್ದು ದೊಡ್ಡ ಅಪರಾಧವಾಗಿತ್ತು. ದೇವರಿಗೆ ಮತ್ತು ಊರಿನ ಜನರಿಗೆ ಮೈಲಿಗೆ ಆಯಿತೆಂದು, ದಾಸಪ್ಪನವರ ದಲಿತಕೇರಿಗೆ ಸವರ್ಣೀಯರು ನುಗ್ಗಿ ಹಲ್ಲೆ ನಡೆಸಿದರು. ದಲಿತರಿಗೆ, ದಾಸಪ್ಪನವರಿಗೆ ಗಾಯಗಳಾದವು. ಪೊಲೀಸರು ಮಧ್ಯ ಪ್ರವೇಶಿಸಿ ತಿಪಟೂರಮ್ಮ ದೇವಿಯ ಗುಡಿಗೆ ಬೀಗ ಹಾಕಿ ಪ್ರಕರಣಕ್ಕೆ ತೆರೆ ಎಳೆದರು.

ಈ ಘಟನೆಯಿಂದಾಗಿ ದಾಸಪ್ಪನವರು ಅವಮಾನಕ್ಕೊಳಗಾದರು. ಇದರಿಂದಾಗಿ ಅಸ್ಪೃಶ್ಯತೆಯ ವಿರುದ್ಧ ಹೋರಾಡಲು ನಿರ್ಧರಿಸಿದರು. ರಾಜಕೀಯ ಅಧಿಕಾರವೊಂದೇ ಇದೆಲ್ಲದಕ್ಕೂ ಮದ್ದು ಎಂದರಿತು, ರಾಜಕೀಯ ಪ್ರವೇಶ ಮಾಡಿ, ದೀನದಲಿತರ ಧ್ವನಿಯಾಗಿ ನಿಲ್ಲುವ ಸಂಕಲ್ಪ ಮಾಡಿದರು. ದಲಿತರನ್ನು ಸವರ್ಣೀಯರು ತಮ್ಮ ಮನೆಗಳಿಗೆ, ದೇವಾಲಯಗಳಿಗೆ ಪ್ರವೇಶ ನೀಡುತ್ತಿರಲಿಲ್ಲ. 'ದಲಿತರು ದೇವಾಲಯಗಳನ್ನು ಪ್ರವೇಶಿಸಿದರೆ ಗುಡಿಯೊಳಗಿನ ದೇವರೇನು ಓಡಿ ಹೋಗುವುದಿಲ್ಲ; ಯಾವ ಕೇಡೂ ಆಗುವುದಿಲ್ಲ' ಎಂದು ದಾಸಪ್ಪನವರು ಹೇಳುತ್ತಾ ತಾವೇ ಮೊದಲು ದೇವಾಲಯದೊಳಕ್ಕೆ ಹೋಗುತ್ತಿದ್ದರು. ದಲಿತರ ಅಭಿವೃದ್ಧಿಯಾಗಬೇಕಾದರೆ ಮೊದಲು ವಿದ್ಯಾವಂತರಾಗಬೇಕು ಎಂದು ಶಿಕ್ಷಣದ ಬಗ್ಗೆ ಅಪಾರವಾದ ನಂಬಿಕೆ ದಾಸಪ್ಪನವರು ಹೊಂದಿದ್ದರು.[೫]

೧೯೪೯ ತಿಪಟೂರು ಪುರಸಭೆಗೆ ನಡೆದ ಚುನಾವಣೆಯಲ್ಲಿ ಟಿ.ಎ. ದಾಸಪ್ಪನವರು ಸ್ಪರ್ಧಿಸಿ ಅಧಿಕ ಬಹುಮತದೊಂದಿಗೆ ಜಯಗಳಿಸಿದರು. ಪುರಸಭಾ ಸದಸ್ಯರಾದ ಮೇಲೆ ದಲಿತರ ಸಮಸ್ಯೆಗಳು ಸಾಲು ಸಾಲಾಗಿ ಎದುರಾದವು. ಮೊದಲು ದಲಿತರಿಗೆ ಮೂಲಭೂತ ಸೌಲಭ್ಯಗಳನ್ನು ದೊರಕಿಸಿಕೊಡಲು ತೀರ್ಮಾನಿಸಿದರು. ಅಸ್ಪೃಶ್ಯತೆ ಎಂಬ ಶಾಪದಿಂದ ಮಾನವನ ಮೂಲಭೂತಹಕ್ಕುಗಳಿಂದಲೇ ದಲಿತರು ವಂಚಿತರಾಗಿದ್ದರು. ದಾಸಪ್ಪನವರು ತಿಪಟೂರಿನ ಮಟ್ಟಿಗೆ ದಲಿತರಿಗೆ ಹೊಟೇಲ್ ಪ್ರವೇಶ, ದೇವಾಲಯ ಪ್ರವೇಶ, ಸಾಮೂಹಿಕ ಭೋಜನ ಮುಂತಾದ ಸ್ಥಾನಮಾನಗಳನ್ನು ದೊರಕಿಸಿಕೊಡಲು ಶ್ರಮಿಸಿದರು.

ಇವರು ತಿಪಟೂರಿನಲ್ಲಿ ನೆಲೆಸಿರುವ ದಲಿತರಿಗೆ ನಿವೇಶನಗಳನ್ನು ಅಂದಿನ ಸಚಿವರಾಗಿದ್ದ ಹೆಚ್. ಸಿದ್ಧವೀರಪ್ಪನವರ ಮೂಲಕ ಕೊಡಿಸಿ, ನೀರಿನ ಸಮಸ್ಯೆಯನ್ನು ಬಗೆಹರಿಸಿದರು. ಪುರಸಭೆಯಿಂದ ದಲಿತರಿಗಾಗಿ ಐದುವರೆ ಎಕರೆ ಭೂಮಿಯನ್ನು ಮಂಜೂರು ಮಾಡಿಸಿದರು.

ಇದರ ಪ್ರತಿಫಲವೇ ತಿಪಟೂರಿನಲ್ಲಿ ಈಗಿನ ಗಾಂಧೀನಗರ ಬಡಾವಣೆ. ಶಿಕ್ಷಣದ ಅರಿವೇ ಇಲ್ಲದ ತುಂಬಾ ಬಡತನದಲ್ಲಿದ್ದ ದಲಿತರು ಮಕ್ಕಳನ್ನು ಶಾಲೆಗೆ ಕಳುಹಿಸದೇ ಊರಿನ ಸವರ್ಣೀಯರ ಮನೆಗಳಲ್ಲಿ ಜೀತದಾಳುಗಳಾಗಿ ದುಡಿಯಲು ಕಳುಹಿಸುತ್ತಿದ್ದರು. ಇದರಿಂದಾಗಿ ದಲಿತ ಮಕ್ಕಳಿಗೆ ಶಿಕ್ಷಣ ನೀಡುವ ಉದ್ದೇಶದಿಂದ ವಸತಿ, ಊಟ, ಬಟ್ಟೆ ಸಮೇತ ಉಚಿತ ಶಿಕ್ಷಣ ನೀಡಲು ೧೯೫೫ರಲ್ಲಿ ಹಾಸ್ಟೆಲ್ ಸ್ಥಾಪಿಸಿದರು. ಊರೂರು ಸುತ್ತಿ ವಿದ್ಯಾರ್ಥಿಗಳಿಗೆ ದವಸ-ಧಾನ್ಯ, ಬಟ್ಟೆ, ಪುಸ್ತಕಗಳಿಗಾಗಿ ಭಿಕ್ಷೆ ಬೇಡಿದರು. ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳನ್ನು ತಮ್ಮ ಸ್ವಂತ ಮಕ್ಕಳಂತೆ ನೋಡಿಕೊಂಡು ರಾಷ್ಟ್ರೀಯ ಐಕ್ಯತೆ, ಸಹೋದರತ್ವ, ಓದುವ ಹವ್ಯಾಸಗಳನ್ನು ಬೆಳೆಸಿ ಮಕ್ಕಳಲ್ಲಿ ಜ್ಞಾನ ಬೆಳೆಸಲು ಶ್ರಮಿಸಿದರು.

ವಿನೋಬಾ ಭಾವೆ ಮತ್ತು ಜಯಪ್ರಕಾಶ ನಾರಾಯಣ ಅವರು ಪ್ರತಿಪಾದಿಸಿದ ಸರ್ವೋದಯದ ಪರಿಕಲ್ಪನೆಯನ್ನು ದಾಸಪ್ಪನವರು ಬಹುವಾಗಿ ಮೆಚ್ಚಿಕೊಂಡಿದ್ದರು. ಅದರ ಸಲಹೆಯ ಮೇರೆಗೆ ೧೯೭೫ರಲ್ಲಿ ಶಾಲೆಯೊಂದನ್ನು ತೆರೆದು 'ಸರ್ವೋದಯ ಶಾಲೆ' ಎಂದು ನಾಮಕರಣ ಮಾಡಿದರು. ೧೯೮೦ರಲ್ಲಿ ಜಯಪ್ರಕಾಶ್ ನಾರಾಯಣ ಅವರ ಹೆಸರಿನಲ್ಲಿ ಇನ್ನೊಂದು ಶಾಲೆಯನ್ನು ಪ್ರಾರಂಭಿಸಿದರು. ತುಮಕೂರಿನ ಎನ್.ಆರ್. ಕಾಲೋನಿಯಲ್ಲಿ ಹೆಚ್ಚಾಗಿ ವಾಸವಾಗಿರುವ ದಲಿತ ಮಕ್ಕಳಿಗಾಗಿ ಜೆ.ಪಿ. ಶಾಲೆಗಳನ್ನು ತೆರೆದರು. ದಾಸಪ್ಪನವರು ಭಿಕ್ಷೆ ಬೇಡಿ ಕಟ್ಟಿರುವ ಶಿಕ್ಷಣ ಸಂಸ್ಥೆಗಳು ಸಾವಿರಾರು ದಲಿತ ವಿದ್ಯಾರ್ಥಿಗಳಿಗೆ ಜ್ಞಾನವನ್ನು ನೀಡುತ್ತಾ ಬಂದಿವೆ; ಬರುತ್ತಲಿವೆ.

ಇವರು ತಿಪಟೂರಿನಲ್ಲಿ ವಿಶೇಷ ಹೋಂಗಾರ್ಡ್‌ದಳದ ಸ್ಥಾಪನೆ ಮಾಡಿದ್ದರು. ಅಖಿಲ ಭಾರತ ವಯಸ್ಕ ಶಿಕ್ಷಣ ಸಮಿತಿ ಮಹಾಸಮ್ಮೇಳನವು ದೆಹಲಿಯಲ್ಲಿ ನಡೆಯಿತು. ಇದರಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ರಾಜ್ಯ ಬಸವ ಸಮಿತಿ ಸದಸ್ಯರಾಗಿ, ಬೆಂಗಳೂರು ವಿಶ್ವವಿದ್ಯಾಲಯ ಸೆನೆಟ್ ಸದಸ್ಯರಾಗಿ, ತಿಪಟೂರಿನಲ್ಲಿ ಗೋಶಾಲೆ ಸ್ಥಾಪನೆ ಮಾಡಿ ತಮ್ಮ ಕೊನೆ ಅವಧಿಯವರೆಗೂ ದಲಿತರ ಅಭಿವೃದ್ಧಿಗಾಗಿ ಶ್ರಮಿಸಿದರು.[೬]

೪.೭. ಆಟದ ಪೆನ್ನಯ್ಯನವರು

ಇವರು ಚಿತ್ರದುರ್ಗ ತಾಲ್ಲೂಕಿನ ದೊಡ್ಡ ಸಿದ್ಧವ್ವನಹಳ್ಳಿಯಲ್ಲಿ ೧೮೬೪ರಂದು ದಲಿತ ಕುಟುಂಬವೊಂದರಲ್ಲಿ ಜನಿಸಿದರು. ತಮ್ಮ ಬಾಲ್ಯದ ಪ್ರಾಥಮಿಕ ಶಿಕ್ಷಣವನ್ನು ತಮ್ಮ ಊರಿನಲ್ಲಿ ಮುಗಿಸಿ, ಚಿತ್ರದುರ್ಗದಲ್ಲಿ ಪ್ರೌಢ ಶಿಕ್ಷಣವನ್ನು ಆರಂಭಿಸಿದರು. ಆ ವೇಳೆಗೆ ಫೋಟೋಗ್ರಾಫರ್ ದೊಡ್ಡಯ್ಯನವರು ಚಿತ್ರದುರ್ಗ ಜಿಲ್ಲೆಯಲ್ಲಿ ದಲಿತರನ್ನು ಶೋಷಣೆ ಮಾಡುತ್ತಿರುವ ಬಗ್ಗೆ ಕಿಡಿಕಾರಿ ಅನೇಕ ಯುವಕರನ್ನು ಸಂಘಟಿಸಿದ್ದರು. ಆಗ ಪೆನ್ನಯ್ಯನವರು ದೊಡ್ಡಯ್ಯನವರಿಗೆ ಬೆಂಬಲ ವ್ಯಕ್ತಪಡಿಸಿ ಅವರ ನೆಚ್ಚಿನ ಶಿಷ್ಯರಾದರು.

ಆ ಸಂದರ್ಭದಲ್ಲಿ ಅಸ್ಪೃಶ್ಯರ ಸ್ಥಿತಿಗತಿಗಳು ಶೋಚನೀಯ ಸ್ಥಿತಿಯಲ್ಲಿದ್ದವು. ಅಜ್ಞಾನ, ಅಂಧಶ್ರದ್ಧೆ, ಮದ್ಯಪಾನ, ಗೋಮಾಂಸ ಭಕ್ಷಣೆ, ಮೂಢನಂಬಿಕೆಗಳ ತೊಳಲಾಟದಲ್ಲಿ ಮುಳುಗಿ

ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ನೈತಿಕವಾಗಿ ಜರ್ಜರಿತರಾಗಿದ್ದರು. ಊರುಗಳ ಆಚೆ ಹುಲ್ಲಿನ ಜೋಪಡಿಗಳಲ್ಲಿ ವಾಸ ಮಾಡುತ್ತಾ, ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವ ಯೋಚನೆಯೇ ಇಲ್ಲದ ಅಸ್ಪೃಶ್ಯರು ತಾವು ಜೀತ ಮಾಡುವಂತೆ, ತಮ್ಮ ಮಕ್ಕಳನ್ನು ಜೀತಕ್ಕೆ ತೊಡಗಿಸುವ ಪರಿಪಾಠ ಇಟ್ಟುಕೊಂಡಿದ್ದನ್ನು ಪೆನ್ನಯ್ಯನವರು ಕಣ್ಣಾರೆ ಕಂಡಿದ್ದರು. ಶುಚಿತ್ವ ಇಲ್ಲದ ಅನಾಗರಿಕರಂತೆ ಜೀವಿಸುತ್ತಿದ್ದನ್ನು ಅರಿತ ಇವರು ಈ ಜನರಲ್ಲಿ ನೈತಿಕ ಸ್ಥೈರ್ಯ ತುಂಬಲು ಅವರಿಂದ ನಾಟಕಗಳನ್ನು ಪ್ರದರ್ಶಿಸುವ ಕಾಯಕ ಮಾಡಲು ಪ್ರಾರಂಭಿಸಿದ್ದರು. ಅದಕ್ಕಾಗಿ ಊರುಗಳನ್ನು ಸುತ್ತಾಡಿ ಒಂದೊಂದು ಊರಿನಲ್ಲಿ ಒಂದೊಂದು ಕಥೆಯ ಪೌರಾಣಿಕ ನಾಟಕಗಳನ್ನು ತನ್ನ ದಲಿತ ಜನರಿಂದ ಪ್ರದರ್ಶಿಸಿ ಅವರಲ್ಲಿ ಹೊಸತನದ ಲೋಕವೊಂದನ್ನು ಸೃಷ್ಟಿ ಮಾಡಿದರು. ಆದ್ದರಿಂದಲೇ ಅವರನ್ನು ನಾಟಕದ ಪೆನ್ನಯ್ಯ, ಆಟದ ಪೆನ್ನಯ್ಯ ಎಂದು ಕರೆಯಲಾಗುತ್ತಿತ್ತು.[೭]

ಇವರು ದಲಿತರ ಶ್ರೇಯೋಭಿವೃದ್ಧಿಗಾಗಿ ಅನೇಕ ಸಮ್ಮೇಳನಗಳನ್ನು ನಡೆಸಿದ್ದರು. ತಮ್ಮ ಜನಾಂಗದ ಜನರಿಗೆ ನಿವೇಶನಗಳನ್ನು ಮತ್ತು ಮನೆಗಳನ್ನು ಕೊಡಿಸುವಲ್ಲಿ ಮಹತ್ತರವಾದ ಪಾತ್ರ ವಹಿಸಿದ್ದರು. ಪೆನ್ನಯ್ಯನವರು ದಲಿತರ ಸರ್ವತೋಮುಖ ಅಭಿವೃದ್ಧಿಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದರು. ಇವರ ಕಾಳಜಿಯನ್ನು ಗುರುತಿಸಿದ ಮೈಸೂರು ಸಂಸ್ಥಾನದಲ್ಲಿ ಮಹಾರಾಜರು ಮೈಸೂರು ಪ್ರಜಾಪ್ರತಿನಿಧಿಸಭೆಗೆ ಸದಸ್ಯರನ್ನಾಗಿ ಪೆನ್ನಯ್ಯ ಅವರನ್ನು ನಾಮಕರಣ ಮಾಡಿ ಆದೇಶ ಹೊರಡಿಸಿದ್ದರು. ಇವರು ಹರಿಜನ ಸಮ್ಮೇಳನದ ಸ್ವಾಗತ ಕಮಿಟಿಯ ಅಧ್ಯಕ್ಷರಾಗಿದ್ದರು. ಚಿತ್ರದುರ್ಗದಲ್ಲಿ ೭-೪-೧೯೪೮ರಲ್ಲಿ ನಡೆದ ಹರಿಜನ ಸಮ್ಮೇಳನದ ಬಗ್ಗೆ ಹಲವಾರು ಗಣ್ಯಮಾನ್ಯರು ಶುಭಾಶಯ ಕೋರಿದ್ದರು. ಇವರು ೧೭.೭.೧೯೪೮ರಲ್ಲಿ ನಡೆದ ಮೈಸೂರು ಹರಿಜನ ಮಹಾಸಮ್ಮೇಳನದ ಸ್ವಾಗತ ಭಾಷಣದ ಸಾರಾಂಶ ಈ ಕೆಳಗಿನಂತಿದೆ.

ಭಾರತ ದೇಶದ ರಾಜಕೀಯ, ಸಾಮಾಜಿಕ, ಇತಿಹಾಸದಲ್ಲಿ ದಲಿತರ ಸಮಸ್ಯೆ ಬಹುಮುಖ್ಯವಾದುದೆಂದು, ರಾಜಕಾರಣಿಗಳಿಂದಲೂ, ಸಮಾಜಶಾಸ್ತ್ರಜ್ಞರಿಂದಲೂ ಪರಿಗಣಿಸಲ್ಪಟ್ಟಿದೆ. ಹಿಂದೂ ಸಮಾಜದ ಸವರ್ಣೀಯರು ದಲಿತರನ್ನು ಸಮಾಜದಿಂದ ಬಹಿಷ್ಕಾರ ತಿರಸ್ಕಾರಗಳಿಗೆ ಗುರಿಯಾಗಿಸಿದ್ದಾರೆ. ರಾಜಕೀಯ, ಆರ್ಥಿಕ, ನೈತಿಕ, ಶೈಕ್ಷಣಿಕ ಮೊದಲಾದ ದೃಷ್ಟಿಗಳಲ್ಲಿ ಹಿಂದುಳಿದಿದ್ದರು. ಈ ಪರಿಸ್ಥಿತಿಯನ್ನು ನಿವಾರಿಸಿ ದಲಿತರಿಗೆ ಸಮಾಜದಲ್ಲಿ ಯೋಗ್ಯ ಸ್ಥಾನ ಗಳಿಸಿಕೊಡಲು ಮಹಾತ್ಮಗಾಂಧೀಯವರ ನೇತೃತ್ವದಲ್ಲಿ ಅಖಿಲಭಾರತ ಕಾಂಗ್ರೆಸ್ ದುಡಿಯುತ್ತಿದೆ.

ಮೈಸೂರಿನ ಪ್ರಜೆಗಳ ಅಖಂಡ ತ್ಯಾಗ, ಹುತಾತ್ಮರ ಬಲಿದಾನ, ಆಳುವ ಮಹಾರಾಜರ ಔದಾರ್ಯದ ಫಲವಾಗಿ, ದೇಶದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿತವಾದ ಮೇಲೆ ದಲಿತೋದ್ಧಾರದ ಕೆಲಸ ಮಿಂಚಿನ ವೇಗದಿಂದ ನಡೆಯುತ್ತಿದೆ ಎಂದು ನಾವು ನಿರೀಕ್ಷಿಸಿದ್ದೆವು. ಜವಾಬ್ದಾರಿ ಸರ್ಕಾರ ಸ್ಥಾಪಿತವಾದ ಅಲ್ಪ ಕಾಲಾವಧಿಯಲ್ಲಿ ಕೆಲವು ಉತ್ತಮ ಶಾಸನಗಳನ್ನು ಮಾಡಿದೆ.

ದಲಿತರಿಗೆ ದೇವಾಲಯ ಪ್ರವೇಶಾಧಿಕಾರವಿದೆಯೆಂದು ಶಾಸನವಾಗಿದೆ. ದಲಿತರ ಅವನತಿಗೆ ಕಾರಣವಾಗಿದ್ದ ಮದ್ಯಪಾನವನ್ನು ಕೆಲವು ಜಿಲ್ಲೆಗಳಲ್ಲಿ ಪ್ರತಿಬಂಧಿಸುವ ಆಜ್ಞೆಯಾಗಿದೆ.

ದೇವಾಲಯ ಪ್ರವೇಶಾಧಿಕಾರ ದಲಿತರಿಗೆ ಇದೆಯೆಂದು ಆಜ್ಞೆಯಾಗಿದ್ದರೂ, ಅದನ್ನು ಕಾರ್ಯಗತ ಮಾಡುವ ಕಾರ್ಯಕ್ರಮಗಳನ್ನು ಕೈಗೊಂಡಿಲ್ಲವೆಂಬ ಅಂಶವನ್ನು ತಮ್ಮ ಗಮನಕ್ಕೆ ತರಲು ನಾವು ಬಯಸುತ್ತೇವೆ. ಅಲ್ಲದೆ ಸಾರ್ವಜನಿಕ ಬಾವಿ, ಕೆರೆಗಳಿಗೆ ದಲಿತರಿಗೆ ಮುಕ್ತವಾಗಿ ಪ್ರವೇಶಾವಕಾಶ ದೊರೆಯಬೇಕೆಂದು ಎಷ್ಟೋ ವರ್ಷಗಳಿಂದಲೂ ಒತ್ತಾಯ ಮಾಡುತ್ತಿದ್ದರು. ಈ ಬಗ್ಗೆ ಸರಿಯಾದ ಸರಕಾರಿ ಆಜ್ಞೆ ಹೊರಬಿದ್ದಿಲ್ಲ.[೮]

ವಿದ್ಯಾಭ್ಯಾಸದ ದೃಷ್ಟಿಯಿಂದಲೂ ಹರಿಜನರು ಹೆಚ್ಚಿನ ಪ್ರಗತಿಯನ್ನು ಸಾಧಿಸಿಲ್ಲ. ಸರ್ಕಾರದವರು ಹರಿಜನರಿಗೆ, ಉಚಿತ ಶಿಕ್ಷಣದ ಸವಲತ್ತನ್ನು ಕೊಟ್ಟಿದ್ದಾರೆ. ದಲಿತರ ವಿದ್ಯಾರ್ಥಿನಿಲಯಗಳಿಗೆ ಕಡಿಮೆ ಹಣವನ್ನೇ ಕೊಡುತ್ತಿದ್ದಾರೆ. ಆದರೆ ಅಂಥ ವಿದ್ಯಾರ್ಥಿನಿಲಯಗಳನ್ನು ಆರಂಭಿಸಿ ನಡೆಸಲೂ ದಲಿತರಿಗೆ ಆರ್ಥಿಕ ಚೈತನ್ಯವಿಲ್ಲ. ಆದುದರಿಂದ ಸರ್ಕಾರದವರು ಕೆಲವು ವರ್ಷಗಳ ಕಾಲದ ಮಟ್ಟಿಗಾದರೂ, ಸಕಲ ವೆಚ್ಚವನ್ನು ತಾವೇ ಭರಿಸಿಕೊಂಡು, ದಲಿತ ವಿದ್ಯಾರ್ಥಿ-ವಿದ್ಯಾರ್ಥಿನಿಯರ ವಸತಿ ನಿಲಯಗಳನ್ನು ಸ್ಥಾಪಿಸಿ ನಡೆಸುವುದು ಅಗತ್ಯವಾಗಿದೆ. ಚಿತ್ರದುರ್ಗದಲ್ಲಿ ೫೦ ಬಾಲಕಿಯರಿಗೆ ಉಚಿತ ವಸತಿ ಊಟದ ವ್ಯವಸ್ಥೆಯುಳ್ಳ ಎರಡು ದಲಿತ ವಿದ್ಯಾರ್ಥಿನಿಲಯಗಳನ್ನು ಸರ್ಕಾರದವರು ಆದಷ್ಟು ಬೇಗ ಆರಂಭಿಸಬೇಕು. ಸರ್ಕಾರದ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಬಹುಸಂಖ್ಯಾತರಾಗಿ ಅನಕ್ಷರಸ್ಥರಿರುವವರು ದಲಿತ ಸಮಾಜದಲ್ಲಿ ಅರಿವನ್ನು ಮೂಡಿಸುವ ಕೆಲಸವಾಗಬೇಕಿದೆ. ಸಂಸ್ಥಾನದಲ್ಲಿ ೧೪ ಲಕ್ಷ ದಲಿತರಿದ್ದಾರೆ. ಆದರೆ ರಾಜ್ಯಾಂಗ ಸಭೆಯಲ್ಲಿ ಇವರ ಸಂಖ್ಯೆಗನುಗುಣವಾಗಿ ದೊರೆಯಬೇಕಾದಷ್ಟು ಸ್ಥಾನ ದೊರೆಯದೆ, ಕೇವಲ ಒಂಬತ್ತು ಸ್ಥಾನಗಳು ಮಾತ್ರ ಕೊಡಲ್ಪಟ್ಟಿವೆ. ಇದೇ ರೀತಿಯಲ್ಲಿ ನ್ಯಾಯ ವಿಧೇಯತಾ ಸಭೆ, ಪ್ರಜಾಪ್ರತಿನಿಧಿ ಸಭೆಗಳಿಗೆ ದಲಿತರನ್ನು ಆರಿಸಲು ಈಗ ಜಾರಿ ಇರುವ ವ್ಯವಸ್ಥೆಯಲ್ಲೂ ಲೋಪದೋಷಗಳಿವೆ.

ಸಂಸ್ಥಾನದ ಸಾಮೂಹಿಕ ಆರ್ಥಿಕ ಪ್ರಗತಿಗೆ, ತ್ರೈವಾರ್ಷಿಕ, ಪಂಚವಾರ್ಷಿಕ ಯೋಜನೆಗಳನ್ನು ರಚಿಸುವಂತೆಯೇ ದಲಿತರ ಆರ್ಥಿಕ ಪ್ರಗತಿಯನ್ನು ಸಾಧಿಸಿ, ಅವರಿಗೆ ಉದ್ಯೋಗ ಕಲ್ಪಿಸಲು, ಉದ್ಯಮಶೀಲರಾಗುವಂತೆ ಮಾಡಲು ಸರ್ಕಾರದವರು ಒಂದು ನಿಗದಿಯಾದ ವಿಶಿಷ್ಟ ಆರ್ಥಿಕ ಯೋಜನೆಗಳನ್ನು ತಯಾರಿಸುವುದು ಅಗತ್ಯವಾಗಿದೆ. ಈ ಎಲ್ಲಾ ಲೋಪದೋಷಗಳನ್ನು ನಿವಾರಿಸಿ ದಲಿತರ ಪ್ರಗತಿಗೆ ಇರುವ ಎಲ್ಲ ಅಡತಡೆಗಳನ್ನು ತೊಲಗಿಸಿ, ಅವರ ಪ್ರಗತಿ ಮಿಂಚಿನ ವೇಗದಲ್ಲಿ ಮುಂದುವರಿಯಲು ಸಹಕಾರ ನೀಡುವಂತೆ ಸರ್ಕಾರವನ್ನು ಕೋರುತ್ತಿದ್ದೇನೆ ಎಂದು ತಮ್ಮ ಸ್ವಾಗತ ಭಾಷಣವನ್ನು ಮುಗಿಸಿದರು.[೯] ಹೀಗೆ ಆಟದ ಪೆನ್ನಯ್ಯನವರು ತಮ್ಮ ಬದುಕಿನುದ್ದಕ್ಕೂ ದಲಿತರ ಸೇವೆಯನ್ನೇ ನಂಬಿಕೊಂಡು, ದಲಿತರ ಅಭಿವೃದ್ಧಿಗಾಗಿ ದುಡಿದರು.

೪.೮. ಹೆಚ್. ಬಸವಯ್ಯ

ಇವರು ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ಕಲ್ಲೂರು ಗ್ರಾಮದ ಒಂದು ದಲಿತ ಕುಟುಂಬದಲ್ಲಿ ಜನಿಸಿದರು. ತಂದೆ ಹುಚ್ಚಪ್ಪನವರು ಮಗನನ್ನು ವಿದ್ಯಾವಂತನನ್ನಾಗಿ ಮಾಡಬೇಕೆಂಬ ಆಸೆ ಹೊತ್ತು ಆ ಗ್ರಾಮದಲ್ಲಿ ಸವರ್ಣೀಯರ ಬೀದಿಯಲ್ಲಿ ನಡೆಯುತ್ತಿದ್ದ ಪ್ರಾಥಮಿಕ ಶಾಲೆಗೆ ಸೇರಿಸಿದರು. ಅಲ್ಲಿದ್ದ ಬ್ರಾಹ್ಮಣ ಉಪಾಧ್ಯಾಯರು ಅಸ್ಪೃಶ್ಯರ ಮಕ್ಕಳು ಶಾಲೆಗೆ ಬಂದರೆ ಪಾಠ ಮಾಡುವುದಿಲ್ಲವೆಂಬ ಬೆದರಿಕೆವೊಡ್ಡಿದ್ದರು. ಆದ್ದರಿಂದ ಸವರ್ಣೀಯರು ಅಸ್ಪೃಶ್ಯರ ಮಕ್ಕಳನ್ನು ಶಾಲೆಗೆ ಹೋಗದಂತೆ ತಡೆದರು. ನಂತರ ಅಸ್ಪೃಶ್ಯರೆಲ್ಲಾ ಸೇರಿ ಸವರ್ಣೀಯರ ಕೇರಿಯ ಪಕ್ಕದಲ್ಲಿ ಒಂದು ಹುಲ್ಲು ಜೋಪಡಿ ಹಾಕಿ ಅಲ್ಲಿ ತಮ್ಮ ಹುಡುಗರಿಗೆ ಪಾಠ ಬೋಧಿಸಲು ವ್ಯವಸ್ಥೆ ಮಾಡಿದರು. ಈ ಅನ್ಯಾಯ ಮತ್ತು ಅವಮಾನವನ್ನು ಸಹಿಸಲಾರದ ಚಿಕ್ಕ ವಯಸ್ಸಿನ ಬಾಲಕ ಬಸವಯ್ಯನವರು ಒಂದು ದಿನ ಸಂಜೆ ಆ ಜೋಪಡಿಗೆ ಬೆಂಕಿ ಹಚ್ಚಿದರು. ಜೋಪಡಿ ಎಲ್ಲಾ ಬೆಂದು ಬೂದಿಯಾಯಿತು. ಮಾರನೇ ದಿನ ತುಮಕೂರಿನ ಡಿ.ಪಿ.ಐ.ಟಿ. ವಾಸುದೇವಯ್ಯ ಅವರು ಸ್ಥಳಕ್ಕೆ ಬಂದು ತಪಾಸಣೆ ಮಾಡಿ ಯಾರು ಈ ಕೃತ್ಯ ಎಸಗಿದವರೆಂದು ವಿಚಾರಿಸುತ್ತಿರುವಾಗ ಬಸವಯ್ಯ ಅವರು ಧೈರ್ಯವಾಗಿ ಮುಂದೆ ಬಂದು 'ಸ್ವಾಮಿ ಬೇರೆಯವರ ಮಕ್ಕಳು ಓದಲು, ಹೆಂಚಿನಮನೆ ನಾವು ಓದಲು ಹುಲ್ಲಿನ ಜೋಪಡಿ ಅವರಿಗೆ ಬ್ರಾಹ್ಮಣ ಶಿಕ್ಷಕರು ನಮಗೆ ಕೂಲಿ ಶಿಕ್ಷಕರು ಏಕೆ ಈ ವ್ಯತ್ಯಾಸ? ಚೋಪಡಿ ಸುಟ್ಟರೆ, ಸರ್ಕಾರದವರು ನಮಗೂ ಒಂದು ಶಾಲೆಯನ್ನು ಕಟ್ಟಿಸಿಕೊಡುತ್ತಾರೆಂದು ನಾನೇ ಬೆಂಕಿ ಹಚ್ಚಿದೆ' ಎಂದು ಹೇಳಿದರು. ಇದನ್ನು ಕೇಳಿದ ಅಲ್ಲಿದ್ದ ಎಲ್ಲರೂ ಬೆರಗಾದರು. ಹುಡುಗನ ಧೈರ್ಯವನ್ನು ಅವನ ಮಾತನ್ನು ಕೇಳಿದ ಡಿ.ಪಿ.ಐ.ಟಿ. ಅವರು ಅವನ ಬೆನ್ನು ತಟ್ಟಿ ಇನ್ನು ಮುಂದೆ ಅಸ್ಪೃಶ್ಯರನ್ನು ಶಾಲೆಗೆ ಸೇರಿಸದಿದ್ದರೆ, ಇಲ್ಲಿಂದ ಶಾಲೆಯನ್ನು ಮತ್ತು ಉಪಾಧ್ಯಾಯರನ್ನು ಬೇರೆ ಊರಿಗೆ ಬದಲಾಯಿಸಬೇಕಾದೀತು ಎಂದು ಎಚ್ಚರಿಸಿದರು. ಅಂದಿನಿಂದ ಎಲ್ಲಾ ವಿದ್ಯಾರ್ಥಿಗಳಿಗೂ ಅದೇ ಪಾಠಶಾಲೆಯಲ್ಲಿ ತರಗತಿಯನ್ನು ನಡೆಸುವ ಅವಕಾಶ ಮಾಡಿಕೊಟ್ಟರು. ನಂತರ ಬಸವಯ್ಯನವರು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಿ ಪೊಲೀಸ್ ಇಲಾಖೆಯಲ್ಲಿ ನೌಕರಿಯನ್ನು ಪಡೆದು ತಮ್ಮ ಸಮುದಾಯದ ಹಿತಕೋಸ್ಕರ ದುಡಿದರು. ತಮ್ಮ ಹಾಗೂ ತಮ್ಮ ಕೈಲಾದ ಸೇವೆಯನ್ನು ಅಸ್ಪೃಶ್ಯರ ಉದ್ಧಾರಕ್ಕಾಗಿ ಮಾಡಿದರು.

ಇವರ ಕಾರ್ಯವೈಖರಿಯನ್ನು ಕಂಡ ಸರ್ಕಾರ ಇವರನ್ನು ದೆಹಲಿಯಲ್ಲಿ ನಡೆದ ಅಖಿಲ ಭಾರತ ನಿಮ್ನ ಜಾತಿ ಮತ್ತು ಬುಡಕಟ್ಟು ಜನರ ಸಮ್ಮೇಳನಕ್ಕೆ ಕರ್ನಾಟಕದ ಪ್ರತಿನಿಧಿಯಾಗಿ ಕಳುಹಿಸಿಕೊಟ್ಟಿತು. ಅಲ್ಲಿ ಬಸವಯ್ಯನವರು ನಿಮ್ನ ಜನರ ಬಗ್ಗೆ ಭಾಷಣವನ್ನು ಮಾಡಿ ಎಲ್ಲರ ಮೆಚ್ಚುಗೆಯನ್ನು ಪಡೆದರು. ಹೀಗೆ ಸದಾ ದಲಿತರ ಅಭಿವೃದ್ಧಿಗೋಸ್ಕರ ಶ್ರಮಿಸಿದರು.[೧೦]

೪.೯. ಬಿ.ಎಚ್. ಲಕ್ಷ್ಮಣಯ್ಯ

ಇವರು ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಬನವಾಸಿ ಗ್ರಾಮದಲ್ಲಿ ಅಕ್ಟೋಬರ್, ೨೩, ೧೯೩೪ರಲ್ಲಿ ಹುಚ್ಚಯ್ಯ ಮತ್ತು ಮಲ್ಲಮ್ಮ ದಂಪತಿಗಳ ಮಗನಾಗಿ ಬಡ ದಲಿತ

ಕುಟುಂಬದಲ್ಲಿ ಜನಿಸಿದರು. ಇವರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಅಸ್ಪೃಶ್ಯರಿಗಾಗಿ ಹಾಸನದಲ್ಲಿ ವಿದ್ಯಾರ್ಥಿನಿಲಯ ಸ್ಥಾಪಿಸುವ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿ ಪಂಚಮರ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದರು. ಈ ಹೋರಾಟ ಇವರಿಗೆ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಲು ಸಹಕಾರಿಯಾಯಿತು. ಇದರಿಂದಾಗಿ ಹಾಸನ ಜಿಲ್ಲೆಯಾದ್ಯಂತ ಅಸ್ಪೃಶ್ಯತಾ ಆಚರಣೆಯ ವಿರುದ್ಧ ಹಲವಾರು ಹೋರಾಟಗಳನ್ನು ನಡೆಸಿ, ದೇವಾಲಯ ಪ್ರವೇಶ, ಕೆರೆ ನೀರಿಗಾಗಿ ಹಾಕಿದ್ದ ನಿರ್ಬಂಧಗಳನ್ನು ತೆರೆವುಗೊಳಿಸುವುದರ ಜೊತೆಗೆ ದಲಿತರಿಗೆ ಸಾಮಾಜಿಕ ಹಕ್ಕುಗಳನ್ನು ಕೊಡಿಸುವಲ್ಲಿ ಶ್ರಮಿಸಿದರು. ನಂತರದಲ್ಲಿ ರಾಜಕೀಯ ಪ್ರವೇಶಿಸಿ ಬೇಲೂರು ಮೀಸಲು ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿ ವಿಧಾನಸಭಾ ಕ್ಷೇತ್ರ ಪ್ರವೇಶಿಸಿದರು. ಶಾಸಕರಾದ ನಂತರ ಬೇಲೂರಿನ ಅಕ್ಕಪಕ್ಕ ಇರುವ ಸರ್ಕಾರ ಜಾಗವನ್ನು ದಲಿತರಿಗೆ ಕೊಡಿಸಿ ಅದರ ಮುಖಾಂತರ ಅಭಿವೃದ್ಧಿಗಾಗಿ ಶ್ರಮಿಸಿದರು. ಬೇಲೂರಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಿದರು. ಹಳೆಬೀಡು, ಅರೆಹಳ್ಳಿ ಹೋಬಳಿ ಕೇಂದ್ರಗಳಲ್ಲಿ ಶಾಲಾ, ಕಾಲೇಜುಗಳನ್ನು ಪ್ರಾರಂಭಿಸಿದರು. ದಲಿತ ಹೆಣ್ಣು ಮತ್ತು ಗಂಡು ಮಕ್ಕಳಿಗಾಗಿ ಪ್ರತ್ಯೇಕ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದರು. ಹೀಗೆ ಇವರು ಸ್ವಾತಂತ್ರ್ಯ ಪೂರ್ವದಲ್ಲಿಯೇ ದಲಿತ ನಾಯಕರಾಗಿ ಸ್ವಾತಂತ್ರ್ಯ ನಂತರದಲ್ಲಿ ರಾಜಕೀಯ ಪ್ರವೇಶಿಸಿ ದಲಿತ ಪರವಾದ ಕಾರ್ಯಗಳನ್ನು ಕೈಗೊಂಡು ಯಶಸ್ವಿಯಾದರು.[೧೧]

೪.೧೦. ಬಿ. ರಂಗಪ್ಪನವರು

ಇವರು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಮಾಳೇನಹಳ್ಳಿ ಎಂಬಲ್ಲಿ ಆದಿಕರ್ನಾಟಕ ಜನಾಂಗದಲ್ಲಿ ಜನಿಸಿದರು. ಇವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ತಮ್ಮ ಊರಿನಲ್ಲಿ ಪೂರೈಸಿ, ಪ್ರೌಢ ಶಿಕ್ಷಣವನ್ನು ಅಭ್ಯಾಸ ಮಾಡುವ ವೇಳೆಗೆ ದೇಶದ ಸ್ವಾತಂತ್ರ ಚಳವಳಿ ಭರದಿಂದ ನಡೆಯುತ್ತಿತ್ತು. ಮಹಾತ್ಮ ಗಾಂಧೀಜಿಯವರ ತತ್ವಸಿದ್ಧಾಂತಗಳಿಗೆ ಮನಸೋತು ೧೯೩೦ರಲ್ಲಿ ನಡೆದ ಸ್ವಾತಂತ್ರ ಚಳವಳಿಯಲ್ಲಿ ಭಾಗವಹಿಸಿದ್ದ ಇವರನ್ನು ಬಂಧಿಸಿ ದಾವಣಗೆರೆ ಉಪಕಾರಗೃಹದಲ್ಲಿ ಬಂಧನದಲ್ಲಿಯಿರಿಸಲಾಯಿತು. ಜೈಲಿನಿಂದ ಬಿಡುಗಡೆಯಾದ ನಂತರ ಸಾರ್ವಜನಿಕರ ಸೇವೆ ಮಾಡಲು ಮುಂದಾದರು. ಆಗಿನ ಸಂದರ್ಭದಲ್ಲಿ ಅಸ್ಪೃಶ್ಯರ ಸ್ಥಿತಿಗತಿಗಳು ಶೋಚನಿಯವಾಗಿದ್ದವು. ಸಮಾಜ ಅವರನ್ನು ಅತ್ಯಂತ ಕನಿಷ್ಠ ಕೆಲಸಗಳಿಗೆ ತೊಡಗಿಸಿ ಶೋಷಣೆ ಮಾಡುವುದನ್ನು ನೋಡಿದ ರಂಗಪ್ಪ ಜಿಲ್ಲೆಯಾದ್ಯಂತ ಸಂಚರಿಸಿ ತಮ್ಮ ಸಮುದಾಯದ ಜನರಿಗೆ ಧೈರ್ಯ ತುಂಬುವ ಕೆಲಸ ಮಾಡಿದರು.

ದೇಶಕ್ಕೆ ಸ್ವಾತಂತ್ರ್ಯ ಎಷ್ಟು ಮುಖ್ಯವೋ ಅದೇ ರೀತಿ ಅಸ್ಪೃಶ್ಯತೆಯ ವಿಮೋಚನೆ ಕೂಡಾ ಅಷ್ಟೇ ಮುಖ್ಯ ಎಂದು ವಾದಿಸುತ್ತಾ ತನ್ನ ಜಿಲ್ಲೆಯ ಪ್ರಮುಖರೊಂದಿಗೆ ಸದಾ ಒಡನಾಟದಲ್ಲಿದ್ದು ಅಸ್ಪೃಶ್ಯರ ಏಳಿಗೆಯನ್ನು ಚರ್ಚಿಸುತ್ತಿದ್ದರು. ತಮ್ಮ ದಲಿತ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಾಸ್ಟಲ್‌ಗಳನ್ನೇ ತೆರೆದರು. ದಲಿತರಿಗೆ ನಿವೇಶನ, ಭೂಮಿ ಕೊಡಿಸುವುದರ ಮುಖಾಂತರ ದಲಿತ ಕುಟುಂಬಗಳು ಸುರಕ್ಷಿತವಾಗಿರುವಂತೆ ನೋಡಿಕೊಳ್ಳುತ್ತಿದ್ದರು.

೧೯೩೯ರಲ್ಲಿ ಚಿತ್ರದುರ್ಗದ ನಂಜಪ್ಪ, ಎಸ್. ನಿಜಲಿಂಗಪ್ಪ ಇನ್ನು ಅನೇಕ ಸ್ವಾತಂತ್ರ್ಯ ಚಳವಳಿಗಾರರೊಂದಿಗೆ ರಂಗಾಪುರದಲ್ಲಿ ನಡೆದ ಅರಣ್ಯ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಈಚಲುಮರ ಗಳನ್ನು ಕಡಿದಿದ್ದರಿಂದ ಬ್ರಿಟಿಶ್ ಅಧಿಕಾರಿಗಳಿಂದ ಬಂಧನಕ್ಕೊಳಗಾಗಿ ಬೆಂಗಳೂರಿನ ಕೇಂದ್ರ ಕಾರಗೃಹದಲ್ಲಿ ಶಿಕ್ಷೆಯನ್ನು ಅನುಭವಿಸಿದರು. ೧೯೪೨ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯರಾಗಿ ಭಾಗವಹಿಸಿದ್ದರು. ಇವರು ಹೊಳಲ್ಕೆರೆ ತಾಲ್ಲೂಕಿನ ಆದಿಕರ್ನಾಟಕ ಜನಾಂಗ ಸಂಘದ ಕಾರ್ಯದರ್ಶಿಯಾಗಿ ಹೊಳಲ್ಕೆರೆ ತಾಲ್ಲೂಕಿನ ದಲಿತರ ಸೇವೆ ಮಾಡಿದವರು.[೨]

೪.೧೧. ಗೌರಮ್ಮ

ಗೌರಿಬಿದನೂರು ತಾಲ್ಲೂಕಿನ ಗಂಗಸಂದ್ರ ಕೋಲಾರದ ಚರಿತ್ರೆಯಲ್ಲಿ ಮಹತ್ವ ಸ್ಥಾನ ಪಡೆಯಲು ಕಾರಣ ಅಲ್ಲಿ ಹುಟ್ಟಿ ಬೆಳೆದ ಗೌರಮ್ಮ. ಗಂಗಸಂದ್ರದ ಗೌರಮ್ಮ ಎಂದೇ ಖ್ಯಾತಿವೆತ್ತ ಈ ಮಹಿಳೆ ಹಲವು ರಂಗಗಳಲ್ಲಿ ತೊಡಗಿಸಿಕೊಂಡು ಇಪ್ಪತ್ತನೆಯ ಶತಮಾನದಲ್ಲಿ ಪ್ರಮುಖರಾಗಿದ್ದಾರೆ. ಗೌರಮ್ಮ ಹುಟ್ಟಿದ್ದು ಸಾಧಾರಣ ಕುಟುಂಬದಲ್ಲಿ, ಬೆಳೆದಿದ್ದು ಇಪ್ಪತ್ತನೆಯ ಶತಮಾನದ ಆದಿಭಾಗದ ಸಾಧಾರಣ ಪರಿಸರದಲ್ಲಿ, ರೂಢಿಸಿಕೊಂಡಿದ್ದು ಮಾತ್ರ ಅಸಾಧಾರಣ ದೇಶಭಕ್ತಿ, ಮುನ್ನೋಟ, ಆದರ್ಶಗಳನ್ನು ಮೈಗೂಡಿಸಿಕೊಂಡ ಗೌರಮ್ಮನವರಿಗೆ ಅದೇ ತಾನೇ ಉಂಟಾಗಿದ್ದ ಮೈಸೂರು ಕಾಂಗ್ರೆಸ್ ಸಮಿತಿಯ ಬಗ್ಗೆ ಪ್ರೀತಿ, ಮಮತೆ, ಧ್ವಜ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು. ಪಕ್ಕದಲ್ಲಿಯೇ ಇದ್ದ ವಿದುರಾಶ್ವತ್ಥದಲ್ಲಿ ನಡೆದ ಕಾಂಗ್ರೇಸ್ ಜಿಲ್ಲಾ ಅಧಿವೇಶನದಲ್ಲಿ ಭಾಗವಹಿಸಿದ್ದರು. ಯಶೋಧರಮ್ಮ ದಾಸಪ್ಪ, ಕಮಲಾದೇವಿ ಮೊದಲಾದವರು ಅಂದಿನ ಯುವಕ-ಯುವತಿಯರಲ್ಲಿ ರಾಷ್ಟ್ರಪ್ರೇಮದ ಪ್ರತೀಕವಾಗಿದ್ದರು. ಅಂಥ ಮಹನೀಯರಿಂದ ಪ್ರೇರಣೆ ಪಡೆದು ಶಿವಪುರಕ್ಕೆ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಲು ಗೌರಮ್ಮನವರು ಹೊರಟರು. ಪರಿಣಾಮ ಪೊಲೀಸರಿಂದ ದಸ್ತಗಿರಿಯಾಗಿ ಚಿಕ್ಕಬಳ್ಳಾಪುರದ ಸಬ್ ಜೈಲಿನಲ್ಲಿ ಇಡಲಾಯಿತು. ಶಿವಪುರದ ಸತ್ಯಾಗ್ರಹದ ಸುದ್ದಿ ಮಹಾತ್ಮಗಾಂಧೀಯವರೆಗೂ ಹೋಯಿತು. ಗಾಂಧೀಯವರು ಈಕೆಯ ಕೆಚ್ಚು, ಸ್ವಾತಂತ್ರ್ಯ ಪ್ರೇಮಗಳ ಬಗ್ಗೆ ತಿಳಿದು ಸಂತಸಪಟ್ಟರು. ಈಕೆಯನ್ನು ನೋಡಿ ಮಾತನಾಡಿಸಬೇಕು ಎಂಬ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದರು. ಜೈಲಿನಿಂದ ಹೊರಬಂದ ಗೌರಮ್ಮ ಮಹಾತ್ಮರು ಮದರಾಸಿಗೆ ಬಂದಿರುವ ಸುದ್ದಿ ತಿಳಿದು ಅವರನ್ನು ನೋಡಲು ಮದರಾಸಿಗೆ ಹೋದರು.

ಅಂದಿನ ಜಡ್ಡುಗಟ್ಟಿದ ಸಾಂಪ್ರದಾಯ ಕಾಲದಲ್ಲಿ ಗೌರಮ್ಮನವರು ಊರಮಧ್ಯೆ ದಲಿತರಿಗೆ ಉಪಯೋಗಕ್ಕೆಂದು ಬಾವಿಯನ್ನು ಕಟ್ಟಿಸಿದ್ದು ಅಲ್ಲದೆ, ಕಸ್ತೂರಿಬಾ ಹೆಸರಿನಲ್ಲಿ ದಲಿತರ ಹೆಣ್ಣು ಮಕ್ಕಳಿಗೊಂದು ತಮ್ಮ ಜಮೀನಿನಲ್ಲಿಯೇ ವಿದ್ಯಾರ್ಥಿನಿಲಯವನ್ನು ನಿರ್ಮಿಸಿದರು. ದಲಿತೋದ್ಧಾರದ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಕೆಲಸಕ್ಕೆ ಹೋಗುವ ಕೂಲಿಕಾರ ಮಹಿಳೆಯರ ಮಕ್ಕಳನ್ನು ನೋಡಿಕೊಳ್ಳುವ ಮಕ್ಕಳ ಮನೆಯನ್ನು ಆರಂಭಿಸಿದರು. ದಲಿತ ಮಹಿಳೆಯರು

ಗುಡಿಕೈಗಾರಿಕೆಗಳಲ್ಲಿ ತೊಡಗಿಸಿಕೊಳ್ಳಲು ತಕ್ಕ ತರಬೇತಿಯನ್ನು ನೀಡುತ್ತಾ ಕರಕುಶಲಕಲೆಗಳನ್ನು ಪ್ರೋತ್ಸಾಹಿಸಿದರು. ಈ ಎಲ್ಲದರ ಪರಿಣಾಮವಾಗಿ ಗಂಗಸಂದ್ರ ಮಾದರಿ ಗ್ರಾಮವಾಗಿ ಮಾರ್ಪಾಡಾಯಿತು. ಗೌರಮ್ಮನವರನ್ನು ಸ್ವತಂತ್ರ ಭಾರತ ಗೌರವಿಸಲು ಬಯಸಿತು. ಗೌರಮ್ಮನವರು ಅದನ್ನು ನಿರಾಕರಿಸಿದರು. 'ಸಮಾಜಸೇವೆ ನನ್ನ ಕರ್ತವ್ಯ'. 'ಉಸಿರು ಅದಕ್ಕೆ ಯಾವ ತಾಮ್ರಪತ್ರವು ಬೇಕಿಲ್ಲ' ಎಂದು ಕೊನೆಯವರೆಗೂ ದಲಿತರ ಸೇವೆ ಮಾಡಿದರು.[೧೩]

೪.೧೨. ನಿಮ್ನವರ್ಗದ ಪ್ರತಿನಿಧಿ ಚಿಕ್ಕಯಲ್ಲಪ್ಪ

ಚಿಕ್ಕಯಲ್ಲಪ್ಪನವರು ಬೆಂಗಳೂರು ನಗರ ಉಕ್ಕಡಪಾಳ್ಯದಲ್ಲಿ(ಈಗಿನ ಮಾಗಡಿ ರಸ್ತೆಯಲ್ಲಿ ಗೋಪಾಲಪುರ) ದಲಿತ ಕುಟುಂಬದಲ್ಲಿ ಜನಿಸಿದ್ದರು. ಇವರು ತಮ್ಮ ವಿದ್ಯಾಭ್ಯಾಸವನ್ನು ಮಾಗಡಿ ರಸ್ತೆಯಲ್ಲಿನ ಶಾಲೆಯೊಂದರಲ್ಲಿ ಮುಗಿಸಿದರು. ಅವರ ಕುಟುಂಬ ಪೋಷಣೆಗಾಗಿ ಮಿಲ್ಲಿನಲ್ಲಿ ಕಾರ್ಮಿಕರಾಗಿ ಸೇರಿಕೊಂಡರು. ಆ ಕಾಲದಲ್ಲಿ ಅಸ್ಪೃಶ್ಯರಿಂದ ದುಡಿಸಿಕೊಳ್ಳುತ್ತಿದ್ದು, ಶೋಷಣೆಯನ್ನು ವಿರೋಧಿಸುತ್ತಿದ್ದ ಅವರು ಆ ಬಗ್ಗೆ ತಮ್ಮ ಜನಾಂಗದ ಪ್ರಮುಖರಾಗಿದ್ದ ಚಿಕ್ಕ ಹನುಮಂತಯ್ಯ, ಎಂ. ಗೋವಿಂದರಾಜು, ಚನ್ನಿಗರಾಮಯ್ಯ ಅವರೊಂದಿಗೆ ಅಸ್ಪೃಶ್ಯತಾ ನಿವಾರಣೆ ಬಗ್ಗೆ ಚರ್ಚಿಸುತ್ತಿದ್ದರು. ದಲಿತರಿಗೆ ಕುಡಿಯುವ ನೀರು, ಮನೆ, ಶೌಚಾಲಯ ಮುಂತಾದ ಸೌಕರ್ಯಗಳಿಗಿಂತ ನಮ್ಮ ಮಕ್ಕಳಿಗೆ ಶಿಕ್ಷಣ ಒದಗಿಸಿದರೆ ನಮ್ಮ ಸಮಾಜ ಪರಿವರ್ತನೆಯಾಗುತ್ತದೆ ಎಂದು ನಂಬಿದ್ದರು. ಇವರು ತನ್ನ ಜನಾಂಗದವರು ವಾಸಿಸುತ್ತಿದ್ದ ಪ್ರದೇಶಗಳಲ್ಲಿನ ದಲಿತರನ್ನು ಸಂಘಟಿಸಿ ಆದಿಜಾಂಬವ ಕೋ-ಅಪರೇಟಿವ್ ಸೊಸೈಟಿಯನ್ನು ಪ್ರಾರಂಭಿಸಿದರು.

ಚಿಕ್ಕಯಲ್ಲಪ್ಪನವರ ಸಂಘಟನಾ ಸಾಮರ್ಥ್ಯವನ್ನು ಗುರುತಿಸಿ ೧೯೪೦ರಲ್ಲಿ ನಿಮ್ನವರ್ಗದ ಪ್ರತಿನಿಧಿಯನ್ನಾಗಿ ಬೆಂಗಳೂರು ನಗರಸಭೆಗೆ ನಾಮಕರಣ ಮಾಡಲಾಯಿತು. ಇವರು ತನ್ನ ಸಮುದಾಯದವರು ವಾಸ ಮಾಡುವ ಕೇರಿಗಳಿಗೆ ಭೇಟಿ ಕೊಟ್ಟು ಅವರಿಗೆ ಜೋಪಡಿ, ಗುಡಿಸಲು, ಕೊಳಚೆ ಪ್ರದೇಶಗಳ ಸ್ಥಿತಿಗತಿಗಳು ಮತ್ತು ಅವರ ಮಕ್ಕಳ ಭವಿಷ್ಯದ ಬಗ್ಗೆ ಶಿಕ್ಷಣದ ಅಗತ್ಯತೆಯನ್ನು ಮನವರಿಕೆ ಮಾಡಿಕೊಟ್ಟಿದ್ದರು. ಅದೇ ಸಂದರ್ಭದಲ್ಲಿ ನಗರಸಭಾ ಸದಸ್ಯರುಗಳನ್ನು ಕುರಿತು ದಲಿತರಿಗೆ ಕುಡಿಯುವ ನೀರು, ಮನೆ, ವಿದ್ಯುತ್ ಮುಂತಾದ ಸೌಕರ್ಯಗಳನ್ನು ನೀಡುವಂತೆ ನಾನು ಕೇಳಿಲ್ಲ. ಈ ಜನರ ಮಕ್ಕಳು ವಿದ್ಯಾವಂತರಾಗಲು ಶಿಕ್ಷಣದ ಮೂಲಭೂತ ಸೌಕರ್ಯ ಒದಗಿಸಲು ಶಾಲೆಯೊಂದನ್ನು ಮಂಜೂರು ಮಾಡಿದರೆ, ಮುಂದೆ ವಿದ್ಯಾವಂತರಾದ ಈ ಮಕ್ಕಳಿಂದ ಉತ್ತಮ ಸಮಾಜ ನಿರ್ಮಾಣ ಮಾಡಬಹುದೆಂದು ವಿನಂತಿಸಿದ್ದರು. ಇವರ ಕೋರಿಕೆ ಮೇರೆಗೆ ಬೆಂಗಳೂರು ನಗರಸಭೆ ಉಕ್ಕಡಪಾಳ್ಯಕೆ ಶಾಲೆಯನ್ನು ಮಂಜೂರು ಮಾಡುವ ನಿರ್ಣಯವನ್ನು ಕೈಗೊಂಡಿತು. ಶಿಕ್ಷಣದ ಮಹತ್ವವನ್ನು ಚಿಕ್ಕಯಲ್ಲಪ್ಪನವರು ತಿಳಿದಿದ್ದರು. ೧೯೩೪ರಲ್ಲಿ ನಡೆದ ಹರಿಜನ ಸಮ್ಮೇಳನದ ಸಲುವಾಗಿ ಉಕ್ಕಡಪಾಳ್ಯಕ್ಕೆ ಆಗಿನ

ಮುಖ್ಯಮಂತ್ರಿಗಳಾಗಿದ್ದ ಕೆ. ಹನುಮಂತಯ್ಯನವರು ಆಗಮಿಸಿದ್ದಾಗ ಚಿಕ್ಕಯಲ್ಲಪ್ಪ ಅವರು ಸ್ವಾಗತ ಕೋರಿ ಉಕ್ಕಡಪಾಳ್ಯದ ಕಿರುಪರಿಚಯ ಮಾಡಿಕೊಡುವ ಮೂಲಕ ಅಲ್ಲಿನ ಮೂಲಭೂತ ಸಮಸ್ಯೆಗಳ ಬಗ್ಗೆ ಮನವಿಯನ್ನು ಸಲ್ಲಿಸಿದ್ದರು.

ಬೆಂಗಳೂರು ಸಮೀಪದ ತಿಪ್ಪಗೊಂಡನಹಳ್ಳಿ ಜಲಾಶಯದ ಪ್ರಾರಂಭೋತ್ಸವ ಸಮಾರಂಭಕ್ಕೆ ಬಂದಿದ್ದ ಮೈಸೂರು ಸಂಸ್ಥಾನದ ಮಹಾರಾಜರಲ್ಲಿ ಚಿಕ್ಕಯಲ್ಲಪ್ಪನವರು ತಮ್ಮ ಜನಾಂಗದ ಪರವಾಗಿ ಕುಂದುಕೊರತೆಗಳನ್ನು ಬರೆದು ಮಹಾರಾಜರಿಗೆ ಭಿನ್ನವತ್ತಳ ರೂಪದಲ್ಲಿ ಮನವಿ ಅರ್ಪಿಸಿದ್ದರು. ಮೈಸೂರು ಸಂಸ್ಥಾನದ ದಿವಾನರು ಮತ್ತು ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿಗಳಾದ ಕೆ.ಸಿ. ರೆಡ್ಡಿ ಅವರನ್ನು ಖುದ್ದು ಭೇಟಿ ಮಾಡಿ ದಲಿತ ಸಮುದಾಯದವರ ಸಮಸ್ಯೆಗಳು ಮತ್ತು ಅಸ್ಪೃಶ್ಯತೆ ಆಚರಣೆ ವಿರುದ್ಧ ಕ್ರಮಕೈಗೊಳ್ಳುವಂತೆ ಚರ್ಚಿಸಿ ದಲಿತರ ಅಭಿವೃದ್ಧಿಗೋಸ್ಕರ ಹಲವಾರು ಕಾರ್ಯಕ್ರಮ, ಸವಲತ್ತುಗಳನ್ನು ಕೊಡಿಸುವಲ್ಲಿ ಸಫಲರಾಗಿದ್ದರು.[೧೪]

೪.೧೩. ಎಂ.ಸಿ. ಚಿಕ್ಕಲಿಂಗಯ್ಯ

ಇವರು ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ೧೯೦೧ರಲ್ಲಿ ಜನಿಸಿದರು. ತಂದೆ ದೊಡ್ಡಲಿಂಗಯ್ಯ ಸಣ್ಣ ರೈತ ಕುಟುಂಬದವರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ೧೯೩೦ರಲ್ಲಿ ಬಿ.ಎ. ಪದವಿ ಪಡೆದರು. ಮೈಸೂರು ಸಂಸ್ಥಾನದಲ್ಲಿ ದಲಿತ ಸಮುದಾಯದ ವ್ಯಕ್ತಿಯೊಬ್ಬ ಆ ಸಂದರ್ಭದಲ್ಲಿ ಬಿ.ಎ. ಪದವಿಯನ್ನು ಪಡೆದಿದ್ದರಿಂದ ಮೈಸೂರಿನ ಮಹಾರಾಜರು ಚಿಕ್ಕಲಿಂಗಯ್ಯ ಅವರನ್ನು ಸನ್ಮಾನಿಸಿದ್ದರು. ಮೈಸೂರು ಸಂಸ್ಥಾನದಲ್ಲಿ ವಿಶೇಷ ಅಧಿಕಾರಿಯಾಗಿ ನಾಲ್ವಡಿಯವರಿಂದ ೧೯೩೨ರಲ್ಲಿ ನೇಮಕಗೊಂಡರು. ಮಳವಳ್ಳಿಯ ಅಸ್ಪೃಶ್ಯರಿಗೆ ಸವರ್ಣೀಯರು ಕುನ್ನೀರುಕಟ್ಟೆಯ ನೀರನ್ನು ಬಳಸಲು ನಿಷೇಧಿಸಿದ್ದರು. ಕುನ್ನೀರುಕಟ್ಟೆ ನೀರನ್ನು ಬಳಸುವ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದರು. ಅಸ್ಪೃಶ್ಯರು ಮತ್ತು ಸವರ್ಣೀಯರ ನಡುವೆ ಗಲಾಟೆ ಉಂಟಾಯಿತು. ಈ ವಿಷಯವನ್ನು ಮೈಸೂರು ಸಂಸ್ಥಾನದ ಅಧಿಕಾರಿಗಳಿಗೆ ಮುಟ್ಟಿಸಿದರು. ಅವರ ಸೂಚನೆ ಮೇರೆಗೆ ಬೆಂಗಳೂರಿನ ಪೊಲೀಸ್ ಮಹಾನಿರ್ದೇಶಕರಿಗೆ ವಿಷಯ ತಿಳಿಸಿದರು. ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವಂತೆ ಒತ್ತಾಯಿಸಿದರು. ಇದರ ಪರಿಣಾಮವಾಗಿ ತಪ್ಪಿತಸ್ಥರು ಪ್ರಬಲ ಕೋಮಿನವರಾಗಿದ್ದರೂ ಪೊಲೀಸರು ಅವರನ್ನು ಬಂಧಿಸಿ ಶಿಕ್ಷೆಗೆ ಗುರಿಪಡಿಸಿದರು. ಅಂದಿನಿಂದ ಮಳವಳ್ಳಿಯ ಕುನ್ನೀರುಕಟ್ಟೆ ನೀರು ಎಲ್ಲ ಜಾತಿಯವರಿಗೂ ಮುಕ್ತವಾಯಿತು. ಈ ಹೋರಾಟದ ಮೂಲಕ ಚಿಕ್ಕಲಿಂಗಯ್ಯ ಅವರು ತಮ್ಮ ನಾಯಕತ್ವವನ್ನು ವೃದ್ಧಿಸಿಕೊಂಡು, ೧೯೫೧ರಲ್ಲಿ ಸರ್ಕಾರಿ ವೃತ್ತಿಗೆ ರಾಜೀನಾಮೆ ನೀಡಿ, ೧೯೫೧-೫೨ರಲ್ಲಿ ಮೈಸೂರು ರಾಜ್ಯದ ಪ್ರಥಮ ವಿಧಾನಸಭೆ ಚುನಾವಣೆಗೆ ಮಳವಳ್ಳಿ ದ್ವಿ-ಸದಸ್ಯ ಕ್ಷೇತ್ರದಿಂದ ಅಂಬೇಡ್ಕರ್ ಅವರ ಪಕ್ಷವಾದ ಷೆಡ್ಯೂಲ್ ಕ್ಯಾಸ್ಟ್ ಫೆಡೆರೇಷನ್‌ನಿಂದ ಸ್ಪರ್ಧಿಸಿ ಜಯಶೀಲರಾಗುವ ಮೂಲಕ ರಾಜಕೀಯ ಜೀವನಕ್ಕೆ ಪ್ರವೇಶ ಮಾಡಿದರು.

ಆದರೆ ಎರಡನೆಯ ವಿಧಾನಸಭೆ ಚುನಾವಣೆ ೧೯೫೭ರಲ್ಲಿ ಅದೇ ಪಕ್ಷದಿಂದ ಸ್ಪರ್ಧಿಸಿ ಸವರ್ಣೀಯರ ರಾಜಕೀಯ ಕುತಂತ್ರದಿಂದ ಪರಾಭವಗೊಂಡರು. ಶಾಸಕರಾಗಿದ್ದ ಸಂದರ್ಭದಲ್ಲಿ ವಿಧಾನಸಭೆಯ ಒಳಗೆ ದಲಿತ ಸಮುದಾಯದ ಪರವಾಗಿ ಧ್ವನಿ ಎತ್ತುವ ಮೂಲಕ ಅವರ ಏಳಿಗೆಗಾಗಿ ಶ್ರಮಿಸಿದರು. ಇವರು ತಮ್ಮ ಅಧಿಕಾರ ಅವಧಿಯಲ್ಲಿ ಹಲವಾರು ಸಾಮಾಜಿಕ ಕಾರ್ಯಗಳನ್ನು ಕೈಗೊಂಡು ಮಳವಳ್ಳಿಯಲ್ಲಿ ಅಸ್ಪೃಶ್ಯ ಗಂಡು ಮತ್ತು ಹೆಣ್ಣುಮಕ್ಕಳಿಗೆ ಪ್ರತ್ಯೇಕ ವಿದ್ಯಾರ್ಥಿನಿಲಯಗಳನ್ನು ತೆರೆದರು. ಅಸ್ಪೃಶ್ಯರಿಗೆ ಮಳವಳ್ಳಿಯ ದೇವಸ್ಥಾನಕ್ಕೆ ಪ್ರವೇಶ ನೀಡದಿದ್ದ ಸಂದರ್ಭದಲ್ಲಿ ಪೊಲೀಸರ ಸಹಾಯ ಪಡೆದು ದೇವಸ್ಥಾನಕ್ಕೆ ಮುಕ್ತ ಪ್ರವೇಶವನ್ನು ಕಲ್ಪಿಸಿದರು. ಇವರು ತಮ್ಮ ಕೊನೆ ದಿನಗಳವರೆಗೆ ದಲಿತರ ಅಭಿವೃದ್ಧಿಯ ಬಗ್ಗೆ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡು ಅವರಿಗೆ ಮೂಲಭೂತ ಸೌಕರ್ಯಗಳನ್ನು ಕೊಡಿಸಲು ಶ್ರಮಿಸಿದರು.[೧೫]

೪.೧೪. ಕೆರೋಹಟ್ಟಿ ಎನ್.ಕೆ. ನಂಜಯ್ಯ

ಇವರು ಮೈಸೂರು ಸಂಸ್ಥಾನದಲ್ಲಿ ಶಿಕ್ಷಣ ಪಡೆದ ಪ್ರಥಮ ತಲೆಮಾರಿನ ದಲಿತ ಜನಾಂಗದವರಲ್ಲಿ ಒಬ್ಬರು. ಇವರು ೨೫.೭.೧೯೨೩ರಂದು ನಂಜಯ್ಯ ಮತ್ತು ಕಾಳಮ್ಮ ಎಂಬ ದಂಪತಿಗೆ ಮೈಸೂರು ಜಿಲ್ಲೆ ಟಿ. ನರಸೀಪುರ ತಾಲ್ಲೂಕಿನ ಕೆರೋಹಟ್ಟಿ ಎಂಬ ಗ್ರಾಮದಲ್ಲಿ ಜನಿಸಿದರು. ಬಡತನ, ಶೋಷಣೆಯಿಂದ ಬಳಲಿದ್ದ ನಂಜಯ್ಯನವರ ಕುಟುಂಬ ಇವರನ್ನು ಶಿಕ್ಷಣಕ್ಕಾಗಿ ಸ್ವಂತ ಗ್ರಾಮದ ಸರಕಾರಿ ಶಾಲೆಗೆ ಸೇರಿಸಿದರು. ಅವರು ಸರಕಾರಿ ಶಾಲೆಯ ಬಾಗಿಲ ಬಳಿಯ ಮೂಲೆಯಲ್ಲಿಯೇ ಕುಳಿತು ಅಕ್ಷರ ಲೋಕಕ್ಕೆ ತಮ್ಮನ್ನು ತೆರೆದುಕೊಂಡರು. ಮಾಧ್ಯಮಿಕ ಶಿಕ್ಷಣಕ್ಕೆ ೧೯೩೨ರಲ್ಲಿ ಪಂಚಮರ ಬೋರ್ಡಿಂಗ್ ಹೋಂ ಮೈಸೂರಿನ ನಜರಾಬಾದ್ ವಸತಿ ಶಾಲೆಗೆ ಪ್ರವೇಶ ಪಡೆದರು. ೧೯೩೨ರಿಂದ ೧೯೩೫ರವರೆಗೆ ಮಾಧ್ಯಮಿಕ ಶಾಲೆಯಲ್ಲಿ ಓದಿ ತೇರ್ಗಡೆ ಹೊಂದಿದಾಗ, ಇವರು ತೇರ್ಗಡೆ ಹೊಂದಿದ ಮಾಹಿತಿ ಹಾಗೂ ನೋಂದಣಿ ಸಂಖ್ಯೆಯೊಂದಿಗೆ ಅಂದಿನ ದಿನಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಈ ಮಾಹಿತಿಯ ಆಧಾರದಿಂದ ದಲಿತರ ಶಿಕ್ಷಣಕ್ಕಾಗಿಯೇ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದ ಪಂಚಮರ ಆರ್. ಗೋಪಾಲಸ್ವಾಮಿ ಅಯ್ಯರ್ ಅವರು ಅಂದಿನ ದಿನದಲ್ಲಿಯೇ ಟಿ. ನರಸೀಪುರದಿಂದ ೧೦ ಕಿ.ಮೀ. ದೂರದಲ್ಲಿರುವ ಕೆರೋಹಟ್ಟಿ ಗ್ರಾಮಕ್ಕೆ ಬಂದು ನಂಜಯ್ಯನವರ ಮನೆಗೆ ಖುದ್ದು ಹೋಗಿ ಮುಂದಿನ ಪ್ರೌಢಶಾಲೆಯ ವಿದ್ಯಾಭ್ಯಾಸಕ್ಕೆ ಹಾಸನದ ಪಂಚಮರ ಬೋರ್ಡಿಂಗ್ ಹೋಂಗೆ ಪ್ರವೇಶ ದೊರಕಿಸಿಕೊಡುವುದಾಗಿ ತಿಳಿಸಿದರು. ನಂತರ ೧೯೩೬ರಿಂದ ೧೯೩೯ರವರೆಗೆ ಹಾಸನದಲ್ಲೆ ಪ್ರೌಢಶಾಲೆ ಮುಗಿಸಿ ಎಸ್.ಎಸ್.ಎಲ್.ಸಿ.ಯಲ್ಲಿ ಪ್ರಥಮ ಪ್ರಯತ್ನದಲ್ಲಿಯೇ ತೇರ್ಗಡೆಹೊಂದಿ, ಇಂಟರ್ ಮೀಡಿಯಟ್ ಶಿಕ್ಷಣಕ್ಕಾಗಿ ಮೈಸೂರಿನ ಯುವರಾಜ ಕಾಲೇಜಿಗೆ ೧೯೪೦ರಲ್ಲಿ ಸೇರಿ ೧೯೪೨ರಲ್ಲಿ ಪೂರ್ಣಗೊಳಿಸಿದರು.

ಓದಬೇಕೆಂಬ ಬಯಕೆಯಿದ್ದರೂ ಬಡತನದಿಂದಾಗಿ ಓದನ್ನು ಮೊಟಕುಗೊಳಿಸಿ ೧೯೪೨ರಲ್ಲಿ ಗುಂಡ್ಲುಪೇಟೆಯ ತಾಲ್ಲೂಕು ಕಛೇರಿಯಲ್ಲಿ ನೌಕರಿಗೆ ಸೇರಿ ೧೯೪೫ರವರೆಗೆ ಸೇವೆ ಸಲ್ಲಿಸಿದರು.

ನಂತರ ೧೯೪೫ರಿಂದ ೧೯೪೬ರವರೆಗೆ ಕೃಷ್ಣರಾಜನಗರದ ಅಬಕಾರಿ ಕಛೇರಿಯಲ್ಲಿ ಸೇವೆ ಸಲ್ಲಿಸಿದರು. ೧೯೪೬ರಿಂದ ೧೯೪೮ರವರೆಗೆ ತಾವು ಓದಿದ ನಜರಬಾದ್‌ನಲ್ಲಿನ ಪಂಚಮರ ಬೋರ್ಡಿಂಗ್ ಹೋಂನ ಕಾರ್ಯನಿರ್ವಹಣಾಧಿಕಾರಿಗಳಾಗಿ ನೇಮಕ ಹೊಂದಿ ಅನೇಕ ದಲಿತ ವಿದ್ಯಾರ್ಥಿಗಳಿಗೆ ಮಹತ್ವದ ಸೇವೆ ಸಲ್ಲಿಸಿದ್ದರು. ನಂಜಯ್ಯ ಅವರು ಸಹ ಈ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಯೇ ಆಗಿದ್ದರಿಂದ ಅವರಿಗೆ ಈ ಕೆಲಸದಲ್ಲಿ ಆಸಕ್ತಿ ಹೆಚ್ಚಾಗಿಯೇ ಇತ್ತು.

ದಲಿತಪರ ಕೆಲಸವನ್ನು ತನ್ನ ಸ್ವಂತ ಕೆಲಸವೆಂದೇ ಭಾವಿಸಿದ್ದ ನಂಜಯ್ಯ ಅವರು ಮಾಜಿ ಲೋಕಸಭಾ ಸದಸ್ಯರು ಹಾಗೂ ಅವರ ಬಂಧುಗಳೂ ಆಗಿದ್ದ ಸೋಸಲೆ ಎಸ್.ಎಂ. ಸಿದ್ಧಯ್ಯನವರು ಮೈಸೂರಿನಲ್ಲಿ ದಲಿತ ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿಯೇ ಸ್ಥಾಪಿಸಿದ ಯಶೋಧರ ಗರ್ಲ್ಸ್ ಹಾಸ್ಟೆಲ್‌ನ ವಾರ್ಡನ್ ಮತ್ತು ಸಂಸ್ಥಾಪನಾ ಕಾರ್ಯದರ್ಶಿಗಳಾಗಿ ಮಹತ್ವದ ಸೇವೆ ಸಲ್ಲಿಸಿದರು.

ನಂತರ ಅಶೋಕಪುರಂನಲ್ಲಿಯೇ ಎಸ್.ಎಂ. ಸಿದ್ದಯ್ಯ, ಡಿ.ಆರ್. ನಂಜಯ್ಯ, ಎಂ. ಮಾದಯ್ಯ ಮುಂತಾದ ಮಹನೀಯರ ಆಶಯದಂತೆ ದಲಿತರ ಶಿಕ್ಷಣಕ್ಕಾಗಿ ಸ್ಥಾಪನೆಯಾದ ಸಿದ್ಧಾರ್ಥ ವಸತಿ ಪ್ರೌಢ ಶಾಲೆಯ ಖಾಯಂ ಸದಸ್ಯತ್ವ ಪಡೆದು ನಂತರ ಕಾರ್ಯದರ್ಶಿಗಳಾಗಿ, ಉಪಾಧ್ಯಕ್ಷರಾಗಿ, ಖಜಾಂಚಿಯಾಗಿ ಆ ಸಂಸ್ಥೆಯ ಶ್ರೇಯೋಭಿವೃದ್ಧಿಗೆ ಹಗಲಿರುಳು ಶ್ರಮಿಸಿದರು. ಗ್ರಾಮೀಣ ಪ್ರದೇಶದಿಂದ ಶಿಕ್ಷಣ ಪಡೆದು, ಅನೇಕ ಶೋಷಣೆ ಸಂಕೋಲೆಗಳನ್ನು ಧೈರ್ಯದಿಂದ ಎದುರಿಸಿ ತಮ್ಮ ಸ್ವಂತ ಬೌದ್ಧಿಕ ಶಕ್ತಿಯಿಂದಲೇ ಉನ್ನತ ವಿದ್ಯಾಭ್ಯಾಸದ ಜೊತೆಗೆ ಉನ್ನತ ಹುದ್ದೆಗಳನ್ನು ಪಡೆದು ಸಮಾಜಸೇವೆ ಮಾಡಿದವರು ನಂಜಯ್ಯನವರು. ೯೦ ವಸಂತಗಳನ್ನು ಪೂರೈಸಿರುವ ಇವರು ಇಂದಿಗೂ ದಲಿತ ಸಂಘಟಕರಾಗಿ, ಬಡವರಿಗೆ ಮಾರ್ಗದರ್ಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.[೧೬]

೪.೧೫. ಫೋಟೋಗ್ರಾಫರ್ ದೊಡ್ಡಯ್ಯ

ಇವರು ಚಿತ್ರದುರ್ಗ ಜಿಲ್ಲೆಯ ಬೆಟ್ಟದ ನಾಗೇನಹಳ್ಳಿ ಎಂಬ ಗ್ರಾಮದಲ್ಲಿ ಆದಿಕರ್ನಾಟಕ ಜನಾಂಗದ ಕುಟುಂಬವೊಂದರಲ್ಲಿ ಜನಿಸಿದರು. ತಮ್ಮ ಹುಟ್ಟೂರಿನಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ, ಚಿತ್ರದುರ್ಗದಲ್ಲಿ ಪ್ರೌಢ ಶಿಕ್ಷಣ ಮುಂದುವರಿಸಿದರು. ವಿದ್ಯಾರ್ಥಿಯಾಗಿದ್ದಾಗಲೇ ಅಸ್ಪೃಶ್ಯರ ಮೇಲೆ ನಡೆಯುತ್ತಿದ್ದ ಶೋಷಣೆ, ದೌರ್ಜನ್ಯಗಳನ್ನು ಕಣ್ಣಾರೇ ಕಂಡು ಅವುಗಳನ್ನು ವಿರೋಧಿಸಿದರು. ಚಾಕರಿ ಕೆಲಸಗಳಿಗೆ ದಲಿತರನ್ನು ತೊಡಗಿಸಿಕೊಂಡಿರುತ್ತಿದ್ದನ್ನು ಕಂಡು ಇದರಿಂದ ಅವರಿಗೆ ಮುಕ್ತಿ ಕೊಡಿಸಲು ಪ್ರಯತ್ನಿಸಿದರು. ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಯಲ್ಲಿ ನೆಲೆಸಿರುವ ದಲಿತ ಸಮುದಾಯದವರು ಊರುಗಳಾಚೆಯಲ್ಲಿನ ಕೊಳಚೆ ಪ್ರದೇಶಗಳಲ್ಲಿರುತ್ತಿದ್ದನ್ನು ಕಂಡು ಆ ಜನರ ಬದುಕಿನ ಬವಣೆಯನ್ನು ನಿವಾರಿಸಬೇಕೆಂದು ನಿರ್ಧರಿಸಿದರು. ಅದಕ್ಕಾಗಿ ತನ್ನ ಜನಾಂಗದ ಅನೇಕ ಯುವಕರನ್ನು ಒಂದುಗೂಡಿಸಿಕೊಂಡು ಸಂಘಟನೆ ಮಾಡಿ ದಲಿತರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವುದರಲ್ಲಿ ಯಶಸ್ವಿಯಾಗಿದ್ದರಿಂದ ಅವರು ಸಮಾಜ

ಸೇವಕರಾಗಿ ರೂಪುಗೊಂಡರು. ಅದೇ ಸಂದರ್ಭದಲ್ಲಿ ದೇಶದ ಸ್ವಾತಂತ್ರ್ಯ ಚಳವಳಿಯ ಕಾವು ಎಲ್ಲಾ ಕಡೆಗೂ ವ್ಯಾಪಿಸಿತ್ತು. ದೊಡ್ಡಯ್ಯನವರು ಈ ಚಳವಳಿಯ ಪ್ರಭಾವಕ್ಕೆ ಒಳಗಾದರು. ಮುಖಂಡರಾಗಿದ್ದ ಕೊಂಡಜ್ಜಿ ಬಸಪ್ಪ, ಕೊಟ್ರಪ್ಪ, ಆಟದ ಪೆನ್ನಯ್ಯ, ಟಿ. ಹನುಮಯ್ಯ, ಮಂಡಿಹಳ್ಳಿ ಭೀಮಪ್ಪ ಮುಂತಾದವರೊಂದಿಗೆ ಜಿಲ್ಲೆಯಾದ್ಯಂತ ಚಳವಳಿ ನಡೆಸಿದರು. ಅನೇಕ ಸಾರಿ ಜೈಲಿಗೆ ಹೋಗಿ ಬಂದ ದೊಡ್ಡಯ್ಯನವರು ದಲಿತ ನಾಯಕನಾಗಿ ಗುರುತಿಸಿಕೊಂಡ ಮೇಲೆ ರಾಜಕೀಯ ಪ್ರವೇಶಿಸಿ ಜಿಲ್ಲಾ ಬೋರ್ಡಿನ ಸದಸ್ಯರಾಗಿ ಆಯ್ಕೆಯಾದರು. ಆ ವೇಳೆ ಶಕ್ತಿ ಮೀರಿ ದಲಿತರ ಏಳಿಗೆಗೆ ಶ್ರಮಿಸಿದರು. ದಲಿತರಿಗೆ ನಿವೇಶನ ಹಂಚಿಕೆ ಮಾಡಿ ಗೃಹನಿರ್ಮಾಣ ಮಾಡಿಸಿದರು. ಆಗಿನ ಕಾಲದ ಹುಲ್ಲು ಗುಡಿಸಲುಗಳು ಇದ್ದುದರಿಂದ ಬೆಂಕಿ ಬಿದ್ದು ತೊಂದರೆಗೆ ಒಳಗಾಗಬಹುದೆಂಬ ದೂರದೃಷ್ಟಿಯಿಂದ ಸರ್ಕಾರದ ಮೂಲಕ ಮಣ್ಣಿನ ಗೋಡೆಗಳನ್ನು ನಿರ್ಮಾಣ ಮಾಡಿಸಿ ಹೆಂಚು, ಮರದ ಬಾಗಿಲು ಮುಂತಾದವುಗಳನ್ನು ಮಂಜೂರು ಮಾಡಿಸಿದರು. ಇವರ ಈ ದಲಿತ ಸೇವೆಯನ್ನು ಗುರುತಿಸಿ ಮೈಸೂರು ಸಂಸ್ಥಾನದ ಅರಸರು ಇವರನ್ನು ಪ್ರಜಾಪ್ರತಿನಿಧಿ ಸಭೆಗೆ ನಾಮಕರಣ ಮಾಡಿದರು. ಬೆಂಗಳೂರಿನ ಮಾಗಡಿ ರಸ್ತೆಯ ಗೋಪಾಲಪುರದ ಈಗಿನ ಬಾಪೂಜಿ ವಿದ್ಯಾರ್ಥಿನಿಲಯದ ಸ್ಥಳದಲ್ಲಿ ಮಹಾತ್ಮಗಾಂಧೀ ಅವರಿಂದ ಶಂಕುಸ್ಥಾಪನೆ ಮಾಡಿಸುವಾಗ ದೊಡ್ಡಯ್ಯನವರು ಆದಿಜಾಂಬವಾಭಿವೃದ್ಧಿ ಸಂಘದ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದರು.

ದೊಡ್ಡಯ್ಯನವರು ಚಿತ್ರದುರ್ಗ ಜಿಲ್ಲೆಯಲ್ಲಿ ದಲಿತ ಸಮುದಾಯ ವಾಸಿಸುತ್ತಿದ್ದ ಮೂವತ್ಮೂರು ಹಳ್ಳಿಗಳಲ್ಲಿ ಸವರ್ಣೀಯರು ನೀಡುತ್ತಿದ್ದ ಕಿರುಕುಳ, ದೌರ್ಜನ್ಯ ಮುಂತಾದವುಗಳ ಬಗ್ಗೆ ವಿವಾದಗಳನ್ನು ಬಗೆಹರಿಸುವ ಮುಂದಾಳತ್ವವನ್ನು ವಹಿಸಿದ್ದರು. ತಮ್ಮ ಸಮುದಾಯದವರ ಸರ್ವತೋಮುಖ ಅಭಿವೃದ್ಧಿಗೆ ೧೯೨೭ರಲ್ಲಿ ದರಿದ್ರನಾರಾಯಣ ಆಶ್ರಮ ಸ್ಥಾಪನೆಗಾಗಿ ತನ್ನ ಸ್ವಂತ ೧೦೦ ಎಕರೆ ಜಮೀನನ್ನು ೪೦ ದನ ಕರುಗಳನ್ನು ದಾನ ಮಾಡಿದ್ದರು.[೯೭]

ಹೀಗೆ ಸದಾ ದಲಿತರ ಅಭಿವೃದ್ಧಿಯ ಏಳಿಗೆ ಕುರಿತಂತೆ ಮತ್ತು ಆಲೋಚಿಸುತ್ತಲೇ ಜೀವಿತದ ಕೊನೆಯವರೆಗೂ ಬಂದರು. ಒಂದು ರೀತಿಯಲ್ಲಿ ದಲಿತರ ಏಳಿಗಾಗಿ ಅವರದು ಹೋರಾಟದ ಬದುಕು.

೪.೧೬. ಮಳವಳ್ಳಿ ಎಂ. ಶಂಕರಯ್ಯ

ಆರ್. ಗೋಪಾಲಸ್ವಾಮಿ ಅಯ್ಯರ್ ಅವರ ಶಿಷ್ಯರಲ್ಲಿ ಒಬ್ಬರು ಮತ್ತು ದಲಿತ ಜನಾಂಗದಲ್ಲಿ ಶಿಕ್ಷಣ ಪಡೆದ ಪ್ರಥಮ ವ್ಯಕ್ತಿಗಳಲ್ಲಿ ಒಬ್ಬರಾದ ಎಂ. ಶಂಕರಯ್ಯ ಅವರು ಚಿಕ್ಕ ಪಾಪಯ್ಯ ಮತ್ತು ಪುಟ್ಟಮ್ಮ ಎಂಬ ರೈತ ದಂಪತಿಗಳ ಕುಟುಂಬದಲ್ಲಿ ದಿನಾಂಕ ೧.೯.೧೯೧೭ರಲ್ಲಿ ಮಳವಳ್ಳಿಯಲ್ಲಿ ಜನಿಸಿದರು. ಇವರು ಶಂಕರಯ್ಯ ಅವರಿಗೆ ಮಳವಳ್ಳಿಯ ಸರ್ಕಾರಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕೊಡಿಸಿದರು. ಈ ಪ್ರಾಥಮಿಕ ಶಿಕ್ಷಣವನ್ನು ಪಡೆಯುತ್ತಿರುವಾಗಲೇ

ತಂದೆಯನ್ನು ಕಳೆದುಕೊಂಡರು. ನಂತರ ಶಿಕ್ಷಣವನ್ನು ಮುಂದುವರೆಸಿ ಮಳವಳ್ಳಿಯಲ್ಲಿಯೇ ಮಾಧ್ಯಮಿಕ ಶಿಕ್ಷಣವನ್ನು ಪಡೆದರು. ಏಳನೆಯ ತರಗತಿಯಲ್ಲಿ ಅನುತ್ತೀರ್ಣಗೊಂಡರೂ, ಗೋಪಾಲಸ್ವಾಮಿ ಅಯ್ಯರ್ ಅವರ ಪ್ರಭಾವಕ್ಕೊಳಗಾಗಿ ಪುನಃ ಪರೀಕ್ಷೆಯನ್ನು ತೆಗೆದುಕೊಂಡು ಉತ್ತೀರ್ಣರಾದರು. ನಂತರ ಬೆಂಗಳೂರಿನ ನರಸಿಂಹರಾಜ ವಿದ್ಯಾರ್ಥಿನಿಲಯಕ್ಕೆ ಸೇರಿ ಅಯ್ಯರ್ ಅವರ ಶಿಷ್ಯರಾಗಿ ೧೯೩೦ರಲ್ಲಿ ಪ್ರೌಢಶಾಲಾ ಶಿಕ್ಷಣವನ್ನು ಪಡೆದರು. ಇದೇ ಸಂದರ್ಭದಲ್ಲಿ ಮಳವಳ್ಳಿಯಲ್ಲಿ ನಡೆದ ಕುನ್ನೀರುಕಟ್ಟೆ ವಿವಾದದಲ್ಲಿ ಇವರು ನಿರ್ಣಾಯಕ ಪಾತ್ರ ವಹಿಸಿದರು. ಈ ವೇಳೆಗಾಗಲೇ ಅಯ್ಯರ್ ಅವರ ಸಮಾಜ ಸುಧಾರಣಾ ಕಾರ್ಯಗಳಿಂದ ಪ್ರಭಾವಿತರಾಗಿದ್ದರು.

ಉತ್ತಮ ವಾಗ್ಮಿಗಳಾದ ಶಂಕರಯ್ಯ ಶಿಕ್ಷಣವನ್ನು ಮುಂದುವರೆಸಿ ಕಾಲೇಜು ಮಟ್ಟದಲ್ಲಿ ಕೃಷಿ ಶಾಲೆಗೆ ಸೇರಿ ಚಿನ್ನದ ಪದಕ ಪಡೆದು ಉತ್ತೀರ್ಣರಾದರು. ನಂತರ ೧೯೩೪ರಲ್ಲಿ ಮೂಡಿಗೆರೆಯಲ್ಲಿ ಕೃಷಿ ತನಿಖಾಧಿಕಾರಿಯಾಗಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದರು. ಚನ್ನಪಟ್ಟಣ, ಹೊಸನಗರ, ಸಾಗರ, ಚಿಕ್ಕಮಗಳೂರಿನಲ್ಲಿ ಸೇವಾನಿರತರಾಗಿದ್ದರು. ಅವರ ಅಜ್ಜಿಯ ಅನಾರೋಗ್ಯದ ನಿಮಿತ್ತ ಮಳವಳ್ಳಿಗೆ ಬಂದಾಗ, ಕೆಲವು ಜನ ಕಿಡಿಗೇಡಿಗಳು ಕಛೇರಿಯಲ್ಲಿನ ಕೆಲವು ಪ್ರಮುಖ ಕಡತಗಳನ್ನು ಸುಟ್ಟು ಹಾಕಿದರು. ಪರಿಣಾಮವಾಗಿ ಶಂಕರಯ್ಯನವರನ್ನು ಸೇವೆಯಿಂದ ಅಮಾನತ್ತಿನಲ್ಲಿಡಲಾಯಿತು. ಇದರಿಂದ ಮನನೊಂದ ಅವರು ಹೈಕೋರ್ಟ್‌ನಲ್ಲಿ ದಾವೆ ಹೂಡಿದರು. ಆದರೆ ಇವರ ಮೇಲೆಯೇ ಆಪಾದನೆ ಹೊರಿಸಿ ವೃತ್ತಿಯಿಂದ ವಜಾ ಮಾಡಲಾಯಿತು. ಇಷ್ಟಕ್ಕೆ ಸುಮ್ಮನಿರದ ಶಂಕರಯ್ಯ ಅವರು ಸುಪ್ರಿಂಕೋರ್ಟ್‌ಗೆ ದಾವೆ ಹೂಡಿ ನ್ಯಾಯ ದೊರಕಿಸಿಕೊಂಡರು. ಹೀಗೆ ಬದುಕಿನ ಜಂಜಾಟದಲ್ಲಿ ಬಳಲಿದ ಶಂಕರಯ್ಯ ಅವರು ಕೃಷಿ ತನಿಖಾಧಿಕಾರಿಯಾಗಿ ಸೇವೆ ಪ್ರಾರಂಭಿಸಿ ಕೊನೆಗೆ ೧೯೭೬ರಲ್ಲಿ ನಿವೃತ್ತಿ ಹೊಂದಿದರು. ಸರ್ಕಾರಿ ಸೇವೆಯಲ್ಲಿದ್ದುಕೊಂಡೇ ಶಂಕರಯ್ಯ ಅವರು ತಮ್ಮ ಜನಾಂಗದವರಿಗೆ ಅಕ್ಷರ ಮಹತ್ವವನ್ನು ತಿಳಿಸಿ ಕಡ್ಡಾಯವಾಗಿ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಮಾಡಿದರು. ಹಾಗಾಗಿ ತಮ್ಮ ಜನಾಂಗದ ಮಕ್ಕಳಿಗೆ ಶಿಕ್ಷಣ ನೀಡುವ ಉದ್ದೇಶದಿಂದ ೧೯೭೭ರಲ್ಲಿ ತುಮಕೂರಿನ ಶಿಕ್ಷಣತಜ್ಞ-ಅಕ್ಷರದಾಸೋಹಿ ಎನಿಸಿಕೊಂಡಿರುವ ಎಚ್.ಎಂ. ಗಂಗಾಧರಯ್ಯ ಅವರೊಡನೆ ಜೊತೆಗೂಡಿ ಮಳವಳ್ಳಿಯಲ್ಲಿ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ ಜೀವಿತದ ಕೊನೆಯವರೆಗೂ ಈ ಸಂಸ್ಥೆಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು. ನಿವೃತ್ತಿ ನಂತರ ಶಂಕರಯ್ಯ ಅವರು ಪುರಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಅಧ್ಯಕ್ಷರಾಗಿ ಆಯ್ಕೆಗೊಂಡು ಒಳಚರಂಡಿ ವ್ಯವಸ್ಥೆ ವಿದ್ಯುತ್‌ದೀಪ, ಕುಡಿಯುವ ನೀರು, ರಸ್ತೆ ನಿರ್ಮಾಣ ಕಾರ್ಯಗಳನ್ನು ಕೈಗೊಂಡು ಜನಪ್ರಿಯರಾದರು. ನಂತರ ರುದ್ರಪ್ಪ, ಮಲ್ಲಿಕಾರ್ಜುನಸ್ವಾಮಿ, ಅವರು ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಯಾಗಲು ಕಾರಣಕರ್ತರಾದರು. ಹಾಗಾಗಿ ಚುನಾವಣೆಯ ಸಂದರ್ಭದಲ್ಲಿ ಶಂಕರಯ್ಯ ಅವರು ಪ್ರಮುಖ ಕೇಂದ್ರಬಿಂದುವಾಗಿದ್ದರು. ನಿರರ್ಗಳವಾಗಿ ಆಂಗ್ಲ ಭಾಷೆಯನ್ನು ಮಾತನಾಡ ಬಲ್ಲವರಾಗಿದ್ದ ಇವರು ನೇರ ಹಾಗೂ ನಿಷ್ಠುರವಾದಿಗಳಾಗಿದ್ದರು. ದಲಿತ ಸಮುದಾಯದ ಬಗ್ಗೆ

ಅಪಾರವಾದ ಕಾಳಜಿ ಹೊಂದಿದ್ದರು. ಇವರು ಅಸ್ಪೃಶ್ಯರಿಗಾಗಿ ಒಂದು ಪ್ರತ್ಯೇಕ ಕಾಲೋನಿಯನ್ನು ನಿರ್ಮಿಸಿಕೊಟ್ಟಿರುವುದು ದಾಖಲಾಗಿದೆ.

ಅಯ್ಯರ್ ಅವರಿಂದ ಪ್ರಭಾವಿತರಾದ ಶಂಕರಯ್ಯ ತಮ್ಮ ಜನಾಂಗದ ಏಳಿಗೆಗಾಗಿ ದುಡಿದರು. ತಮ್ಮ ಜನಾಂಗಕ್ಕೆ ಶಿಕ್ಷಣ, ಪ್ರತ್ಯೇಕ ಕಾಲೋನಿ, ಕುಡಿಯುವ ನೀರಿನ ವ್ಯವಸ್ಥೆ ಮೊದಲಾದವುಗಳನ್ನು ಕಲ್ಪಿಸಿಕೊಟ್ಟು ಒಬ್ಬ ರಾಜಕಾರಣಿಯಾಗಿ ಹೊರಹೊಮ್ಮಿದ ಶಂಕರಯ್ಯ ಅವರು ೨೫.೯.೧೯೯೭ರಂದು ನಿಧನರಾದರು.[೧೮]

೪.೧೭. ಕರ್ನಾಟಕದ ಪ್ರಥಮ ದಲಿತಮಂತ್ರಿ ಆರ್. ಚನ್ನಿಗರಾಮಯ್ಯ

ಆರ್. ಚನ್ನಿಗರಾಮಯ್ಯ ಅವರು ಕರ್ನಾಟಕದ ಒಬ್ಬ ಅಪರೂಪದ ರಾಜಕಾರಣಿ. ಬದುಕಿರುವಷ್ಟು ದಿನ ಪ್ರಾಮಾಣಿಕತೆ, ಸರಳತೆ ಮತ್ತು ಪರಿಶುದ್ಧತೆಯನ್ನು ಕಾಪಾಡಿಕೊಂಡಿದ್ದಲ್ಲದೇ, ರಾಜಕಾರಣವನ್ನು ಸಮಾಜದ ಒಳಿತಿಗಾಗಿ ಬಳಸಿದ ಒಳ್ಳೆಯ ಆಡಳಿತಗಾರ. ಇಂತಹ ಆರ್. ಚನ್ನಿಗರಾಮಯ್ಯ ಅವರು ತುಮಕೂರು ಜಿಲ್ಲೆಯ ಕೊರಟಗೆರೆಯಲ್ಲಿ ಜೂನ್ ೪, ೧೯೧೧ರಂದು ಸಾಮಾನ್ಯ ದಲಿತ ಕುಟುಂಬದಲ್ಲಿ ತಂದೆಗೆ ಏಕಮಾತ್ರ ಪುತ್ರರಾಗಿ ಜನಿಸಿದರು. ಇವರ ತಂದೆ ರಾಮಹನುಮಯ್ಯನವರು ನಿವೃತ್ತ ಶಿಕ್ಷಕರಾಗಿದ್ದು, ತಾಲ್ಲೂಕಿನ ದಲಿತ ಜನಾಂಗದ ಯಜಮಾನರಾಗಿದ್ದರು. ಆರ್. ಚನ್ನಿಗರಾಮಯ್ಯ ಅವರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಸ್ವಂತ ಊರಿನಲ್ಲಿ ಮುಗಿಸಿ ಕೆಲಕಾಲ ವ್ಯವಸಾಯವನ್ನು ಮಾಡಿ ೧೯೨೯ರಲ್ಲಿ ಬೆಂಗಳೂರಿನ ಕೋಟೆ ಪ್ರೌಢಶಾಲೆ ಸೇರಿ ನರಸಿಂಹರಾಜ ಹಾಸ್ಟೆಲ್ ವಿದ್ಯಾರ್ಥಿಯಾಗಿ ಎಸ್.ಎಸ್.ಎಲ್.ಸಿ.ಯನ್ನು ಪಾಸು ಮಾಡಿದರು. ಅಲ್ಲಿಗೆ ಅವರ ಶಾಲಾ ವಿದ್ಯಾಭ್ಯಾಸ ಮುಗಿಯಿತು. ಮುಂದೆ ಆರ್ಥಿಕ ಸಂಕಷ್ಟಗಳಿಂದಾಗಿ ಉನ್ನತ ಶಿಕ್ಷಣ ದೊರೆಯದಂತಾಯಿತು. ಅವರು ಶಿಕ್ಷಣವನ್ನು ಪಡೆದದ್ದು ಕಡಿಮೆಯಾದರೂ ಅನುಭವ, ಸೇವಾನಿಷ್ಠೆ, ದೇಶಪ್ರೇಮ ಇವುಗಳು ಅವರಿಗೆ ಅಪಾರ ಜ್ಞಾನ ಹಾಗೂ ಲೋಕಾನುಭವವನ್ನು ಕೊಟ್ಟಿದ್ದವು. ಇವರ ತಂದೆಯವರು ಸ್ವತಃ ಶಿಕ್ಷಕರಾಗಿದ್ದರಿಂದ ಅವರ ಮಾರ್ಗದರ್ಶನದಂತೆ ಬಾಲ್ಯದಲ್ಲಿಯೇ ಒಳ್ಳೆಯತನ, ಸುಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಬೆಳೆದರು.

ಇವರು ವಿದ್ಯಾಭ್ಯಾಸ ಮುಗಿದ ನಂತರ ಮೈಸೂರು ರಾಜ್ಯ ಜನಗಣತಿಯ ಇಲಾಖೆಯಲ್ಲಿ ಕೇವಲ ಮೂರು ತಿಂಗಳ ಕಾಲ ಗುಮಾಸ್ತರಾಗಿ ಸೇವೆ ಸಲ್ಲಿಸಿದರು. ಆಗ ದೇಶದ ಸ್ವಾತಂತ್ರ್ಯ ಚಳವಳಿ ತುಂಬಾ ಬಿರುಸಾಗಿತ್ತು. ಗಾಂಧೀಜಿ ಅವರು ಭಾರತ ರಾಷ್ಟ್ರೀಯ ಕಾಂಗ್ರೆಸ್ ನಾಯಕತ್ವವನ್ನು ಪಡೆದು ರಾಷ್ಟ್ರೀಯ ಚಳವಳಿಯಲ್ಲಿ ರಚನಾತ್ಮಕ ಕಾರ್ಯಕ್ರಮಗಳ ಮೂಲಕ ಗುರಿಯನ್ನು ಸಾಧಿಸಲು ಮುಂದಾದರು. ಗಾಂಧೀ ಅವರ ಸ್ವಾತಂತ್ರ್ಯ ಚಳವಳಿ ಹಾಗೂ ಅಂಬೇಡ್ಕರ್ ಅವರು ಅಸ್ಪೃಶ್ಯತೆಯ ನಿವಾರಣೆಗಾಗಿ ನಡೆಸಿದ ಹೋರಾಟಗಳಿಂದ ಪ್ರಭಾವಿತರಾಗಿ ಮತ್ತು ದಲಿತರ ಸಂಕಷ್ಟಗಳು ಚನ್ನಿಗರಾಮಯ್ಯ ಅವರ ಮೇಲೆ ಪ್ರಭಾವ ಬೀರಿದವು. ನಂತರ ಅವರು ಕೆಲಸಕ್ಕೆ ರಾಜೀನಾಮೆ ನೀಡಿ ತಮ್ಮ ಊರಿಗೆ ಹಿಂತಿರುಗಿ ರಾಷ್ಟ್ರೀಯ ಚಳವಳಿಯಲ್ಲಿ

ಭಾಗವಹಿಸಿದ್ದರು. ಗಾಂಧೀಜಿ ಅವರು ಬ್ರಿಟೀಷರ ದಾಸ್ಯದಿಂದ ವಿಮುಕ್ತಿ ಹೊಂದಲು ನಡೆಸಿದ ಅಸಹಕಾರ ಚಳವಳಿ, ನಾಗರಿಕ ಕಾನೂನುಭಂಗ ಚಳವಳಿ, ಕ್ವಿಟ್ ಇಂಡಿಯಾ ಚಳವಳಿ ಹಾಗೂ ಮೈಸೂರು ಸಂಸ್ಥಾನದಲ್ಲಿ ನಡೆದ ಮೈಸೂರು ಚಲೋ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ ಆರ್. ಚನ್ನಿಗರಾಮಯ್ಯ ಅವರನ್ನು ಕೊರಟಗೆರೆಯಲ್ಲಿ ಬಂಧಿಸಿ, ಬೆಂಗಳೂರಿನ ಸೆಂಟ್ರಲ್ ಜೈಲಿಗೆ ಕರೆತಂದರು. ಅಲ್ಲಿ ಇವರ ಆರೋಗ್ಯ ಕೆಟ್ಟದ್ದರಿಂದ ಕ್ಷಮಾಪಣೆ ಬರೆದುಕೊಟ್ಟು ಮನೆಗೆ ತೆರಳುವಂತೆ ಅನೇಕ ಮಿತ್ರರು ಒತ್ತಾಯಿಸಿದರೂ, ಇವರು ಹಾಗೆ ಮಾಡದೆ 'ನಾನು ಸ್ವಾತಂತ್ರ್ಯ ಹೋರಾಟಕ್ಕಾಗಿ ಬಂದಿರುವೆ, ಸ್ವಾತಂತ್ರ್ಯ ಸಿಗುವ ತನಕ ಹೋಗುವುದಿಲ್ಲ. ಜೈಲಿನಲ್ಲೇ ದೇಶಕೋಸ್ಕರ ಪ್ರಾಣ ಬಿಡಲು ಸಿದ್ಧವಾಗಿದ್ದೇನೆ' ಎಂದು ಹೇಳಿದರು. ಜೈಲಿನಿಂದ ಸರಕಾರ ತಾವಾಗಿ ಬಿಡುಗಡೆ ಮಾಡುವತನಕ ಅನಾರೋಗ್ಯ ಸಹಿಸಿ ಜೈಲಿನಲ್ಲಿ ಉಳಿದರು.[೯]

ಆರ್. ಚನ್ನಿಗರಾಮಯ್ಯ ಅವರು ಗಾಂಧೀಜಿ ಅವರ ರಚನಾತ್ಮಕ ಕಾರ್ಯಗಳನ್ನು ಜಾರಿಗೆ ತರಬೇಕೆಂಬ ಉತ್ಸಾಹ ಹೊಂದಿದ್ದರು. ಗಾಂಧೀ ಅವರ ಸ್ಫೂರ್ತಿಯಿಂದ ಸಂಪೂರ್ಣ ಖಾದಿಧಾರಿಗಳಾಗಿದ್ದರು. ಜಿಲ್ಲೆಯಾದ್ಯಂತ ಸಂಚರಿಸಿ ದಲಿತ ಸಮುದಾಯದವರಲ್ಲಿ ಜಾಗೃತಿ ಉಂಟು ಮಾಡುತ್ತಿದ್ದರು. ದೇವದಾಸಿ ಪದ್ಧತಿ, ಬಾಲ್ಯವಿವಾಹ, ಗೋಮಾಂಸ ಭಕ್ಷಣೆ, ಮದ್ಯಪಾನ ಮುಂತಾದವುಗಳನ್ನು ತ್ಯಜಿಸುವಂತೆ ಮತ್ತು ಸುಶಿಕ್ಷಿತರಾಗುವಂತೆ ಮನವಿ ಮಾಡುತ್ತಿದ್ದರು. ಸಾರ್ವಜನಿಕ ಸ್ಥಳಗಳಾದ ದೇವಸ್ಥಾನ, ಕುಡಿಯುವ ನೀರಿನ ಬಾವಿ, ಕೆರೆಗಳ ಪ್ರವೇಶ ಮಾಡುವುದಕ್ಕೆ ವಿಧಿಸಿದ್ದ ನಿರ್ಬಂಧವನ್ನು ತೀವ್ರವಾಗಿ ಪ್ರತಿಭಟಿಸಿ ಸಾರ್ವಜನಿಕ ಸ್ಥಳಗಳಿಗೆ ದಲಿತರಿಗೆ ಪ್ರವೇಶ ಕಲ್ಪಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ದೀನದಲಿತರ ಅಭಿವೃದ್ಧಿ ಬಗ್ಗೆ ಸದಾ ಚಿಂತಿಸುತ್ತಿದ್ದರು. ಅಸ್ಪೃಶ್ಯತೆಯನ್ನು ನಿರ್ಮೂಲನೆ ಮಾಡಲು ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡು ಗಾಂಧೀ ಅವರ ತತ್ವಸಿದ್ಧಾಂತ ಹಾಗೂ ರಚನಾತ್ಮಕ ಕಾರ್ಯಗಳನ್ನು ಅನುಷ್ಠಾನಗೊಳಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿದರು.

ಚನ್ನಿಗರಾಮಯ್ಯ ಅವರು ೧೯೩೭ರಲ್ಲಿ ಕೊರಟಗೆರೆ ಪುರಸಭೆಯ ಸದಸ್ಯರಾಗಿ ಆಯ್ಕೆಯಾಗುವುದರ ಮೂಲಕ ರಾಜಕೀಯವನ್ನು ಪ್ರವೇಶಿಸಿದರು. ನಂತರ ತುಮಕೂರು ಜಿಲ್ಲಾ ಬೋರ್ಡಿನ ಸದಸ್ಯರಾಗಿ ಕಾರ್ಯನಿರ್ವಹಿಸಿದರು. ೧೯೩೭ರಲ್ಲಿ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ, ಮಹಾರಾಜರೊಂದಿಗೆ ಈ ಸಂಸ್ಥಾನದ ಅಭಿವೃದ್ಧಿಗಾಗಿ ಶ್ರಮಿಸಿದರು. ೧೯೩೮-೪೦ರಲ್ಲಿ ಮೈಸೂರು ಸುಧಾರಣಾ ಸಮಿತಿ, ಡಿಲಿಮಿಟೇಷನ್ ಸಮಿತಿ ಸದಸ್ಯರಾಗಿ ಆರಿಸಲ್ಪಟ್ಟರು. ೧೯೪೧ರಲ್ಲಿ ಲೆಜಿಸ್ಲೇಟಿವ್ ಕೌನ್ಸಿಲ್‌ನ ಸದಸ್ಯರಾಗಿ ನಾಮಕರಣ ಮಾಡಲ್ಪಟ್ಟರು.

ಸ್ವಾತಂತ್ರ್ಯ ನಂತರ ಕೊರಟಗೆರೆ-ಮಧುಗಿರಿ ಮೀಸಲು ವಿಧಾನಸಭಾ ಕ್ಷೇತ್ರದಿಂದ ೧೯೪೭ರಲ್ಲಿ ವಿಧಾನಸಭೆಯ ಸದಸ್ಯರಾಗಿ ಆಯ್ಕೆಗೊಂಡರು. ನಂತರ ೧೯೪೭ ಅಕ್ಟೋಬರ್ ೨೪ರಂದು ಹೊಸ ಮಂತ್ರಿಮಂಡಲ ಸದಸ್ಯರಾಗಿ ಮೈಸೂರಿನ ಅಠಾರ ಕಛೇರಿಯಲ್ಲಿ ಅಧಿಕಾರ ವಹಿಸಿಕೊಂಡರು. ಮೈಸೂರು ಚಲೋ ಚಳವಳಿ ಯಶಸ್ವಿಯಾಗಿ ಜವಾಬ್ದಾರಿ ಸರ್ಕಾರವನ್ನು ರಾಜ್ಯಕ್ಕೆ ತಂದುಕೊಟ್ಟಿದ್ದರ ಫಲವಾಗಿ ಮೊದಲನೆಯ ಮಂತ್ರಿಮಂಡಲದಲ್ಲಿ ಒಂಬತ್ತು ಮಂದಿ ಶಾಸಕರು ಮಂತ್ರಿಗಳಾದರು. ಕೆ.ಸಿ. ರೆಡ್ಡಿಯವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು. ಈ ಒಂಬತ್ತು ಮಂದಿ ಮಂತ್ರಿಗಳಲ್ಲಿ ಆರ್. ಚನ್ನಿಗರಾಮಯ್ಯನವರು ಒಬ್ಬರಾಗಿ ಅಧಿಕಾರ ವಹಿಸಿಕೊಂಡು 'ಕರ್ನಾಟಕದ ಪ್ರಥಮ ದಲಿತ ಮಂತ್ರಿ' ಎಂಬ ಹೆಗ್ಗಳಿಕೆಗೆ ಪಾತ್ರರಾದರು.[೨೦]

ಇವರು ಮಂತ್ರಿಯಾದ ನಂತರ ದಲಿತರಲ್ಲಿ ಸ್ವಾಭಿಮಾನ, ಅನ್ಯಾಯದ ವಿರುದ್ಧ ಹೋರಾಡುವ ಮನೋಭಾವನೆಯನ್ನು ಬೆಳೆಸಲು ಮುಂದಾದರು. ಯಾವಾಗಲೂ ದಲಿತರ, ಅಲ್ಪಸಂಖ್ಯಾತರ, ಹಿಂದುಳಿದವರ ಅಭಿವೃದ್ಧಿಯ ಬಗ್ಗೆ ಕಳಕಳಿಯಿಂದ ಚಿಂತಿಸಿ, ಈ ಚಿಂತನೆಯನ್ನು ಅನುಷ್ಠಾನಗೊಳಿಸಿದ ಚನ್ನಿಗರಾಮಯ್ಯ ಅವರು ದಲಿತರ ಉದ್ಧಾರಕ್ಕೆ ಕಾರಣರಾದರು. ಹುಟ್ಟಿನಿಂದಲೇ ದಲಿತ ಕುಟುಂಬದಿಂದ ಬಂದ ಚನ್ನಿಗರಾಮಯ್ಯನವರಿಗೆ ದಲಿತರ ಕಷ್ಟ ಸುಖಗಳು ಹಾಗೂ ಅಸ್ಪೃಶ್ಯತಾಚರಣೆಯ ಮಜಲುಗಳು ಗೊತ್ತಿದ್ದರಿಂದಾಗಿ ಅವುಗಳ ವಿರುದ್ಧ ಹೋರಾಡಲು ಕಾರಣವಾಯಿತು. ಚನ್ನಿಗರಾಮಯ್ಯ ಅವರು ಅಸ್ಪೃಶ್ಯತಾ ನಿವಾರಣೆಗಾಗಿ ಹಲವು ಕಾರ್ಯಕ್ರಮಗಳನ್ನು ರೂಪಿಸಿದರು. ತುಮಕೂರು ಜಿಲ್ಲೆಯ ನಾಯಕರು ದಲಿತೋದ್ಧಾರದ ಬಗ್ಗೆ ಬಹಳ ಕಾಳಜಿಯನ್ನು ಹೊಂದಿದ್ದರು. ಮಾಲಿಮರಿಯಪ್ಪ, ಸಿ.ಟಿ. ಹನುಮಂತಯ್ಯ ಮುಂತಾದ ನಾಯಕರು ಸಂಸ್ಥಾನದ ಹಲವು ನಾಯಕರನ್ನು ಆಹ್ವಾನಿಸಿ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದರು. ಇದರಿಂದಾಗಿ ಜನತೆಗೆ ದಲಿತೋದ್ಧಾರದ ಬಗ್ಗೆ ತಿಳುವಳಿಕೆ ಮೂಡಿಸುತ್ತಿದ್ದರು.

ಸಿ.ಟಿ. ಹನುಮಂತಯ್ಯ ಅವರು ದಲಿತರಿಗೆ ಸಾರ್ವಜನಿಕ ಬಾವಿ, ಕೆರೆ, ಹೋಟೇಲ್‌ಗಳಿಗೆ ಮುಕ್ತವಾದ ಪ್ರವೇಶಕ್ಕೆ ಹೋರಾಟ ನಡೆಸಿದರು. ದೇವಸ್ಥಾನಗಳಿಗೆ ದಲಿತರ ಪ್ರವೇಶದ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಿದ್ದ ಆರ್. ಚನ್ನಿಗರಾಮಯ್ಯ ಹಾಗೂ ಸಿ.ಟಿ. ಹನುಮಂತಯ್ಯ ಅವರು ದೇವಸ್ಥಾನ ಶ್ರಮಿಕ ವರ್ಗದಿಂದ ನಿರ್ಮಾಣವಾಗುತ್ತದೆ, ಆದರೆ ದೇವಾಲಯಗಳಿಗೆ ಶ್ರಮಿಕರಿಗೆ ಪ್ರವೇಶ ನಿರಾಕರಿಸಲಾಗುತ್ತದೆ. ದೇವಾಲಯಗಳನ್ನು ಶುದ್ಧೀಕರಿಸುತ್ತಾರೆ. ವಿಗ್ರಹ ಪೂಜಾರಿಯ ಸೊತ್ತಾಗುತ್ತದೆ. ಗುಡಿ ಕಟ್ಟುವಾಗ, ಪ್ರತಿಮೆ ಕೆತ್ತುವಾಗ ಇಲ್ಲದ ಪೂಜಾರಿ ಹತ್ತಿರವಾಗುತ್ತಾನೆ. ಗುಡಿಗೋಪುರ ವಿಗ್ರಹ ಮಾಡಿದ ಶ್ರಮಿಕರು ದೂರವಾಗುತ್ತಾರೆ. ಮೈಲಿಗೆ ಎಂಬ ಭಯ ಹುಟ್ಟಿಸುತ್ತಾರೆ. ಈ ರೀತಿ ಸವರ್ಣೀಯರು ದಲಿತರನ್ನು ವಂಚಿಸುತ್ತಲೇ ಬಂದಿದ್ದಾರೆ ಎಂದು ಹಲವಾರು ದೇವಾಲಯಗಳನ್ನು ಪ್ರವೇಶಿಸಿದರು. ನಂತರ ಶಿರಾ ತಾಲ್ಲೂಕಿನಲ್ಲಿ ಟಿ. ತಾರಾಗೌಡರು ದಲಿತೋದ್ಧಾರದ ಪ್ರಯುಕ್ತವಾಗಿ ೧೯೪೭ರಲ್ಲಿ ಶಿರಾ ತಾಲ್ಲೂಕಿನ ತಾವರೆಕೆರೆ ದೇವಸ್ಥಾನ ಹಾಗೂ ಬಂಡಿರಂಗನಾಥ ಸ್ವಾಮಿ ದೇವಸ್ಥಾನಗಳಿಗೆ ಅಂದಿನ ಶಿಕ್ಷಣ ಮಂತ್ರಿಯಾಗಿದ್ದ

ಚನ್ನಿಗರಾಮಯ್ಯ ಅವರ ಜೊತೆ ಸೇರಿ ದಲಿತರೊಂದಿಗೆ ಪ್ರವೇಶ ಮಾಡಿದರು. ಜೊತೆಗೆ ದಲಿತರಿಗೆ ಸಾರ್ವಜನಿಕ ಹೊಟೇಲ್‌ಗಳಿಗೆ ಪ್ರವೇಶ ನಿಷಿದ್ಧವಾಗಿದ್ದರಿಂದ ತಿಪಟೂರಿನ ಟಿ. ದಾಸಪ್ಪನವರೊಂದಿಗೆ ಹೊಟೇಲ್ ಪ್ರವೇಶ ಚಳವಳಿಯನ್ನು ಹಮ್ಮಿಕೊಂಡರು.[೨೧]

ಚನ್ನಿಗರಾಮಯ್ಯ ಅವರು ಶ್ರವಣಬೆಳಗೊಳದ ಗೊಮ್ಮಟನ ದರ್ಶನಕ್ಕೆ ಹೋದಾಗ ಜೈನರು ದಲಿತರಿಗೆ ಪ್ರವೇಶ ನೀಡುವುದಿಲ್ಲವೆಂದು ಶ್ರವಣಬೆಳಗೊಳದ ಗೊಮ್ಮಟನ ದರ್ಶನಕ್ಕೆ ಅನುಮತಿ ನಿರಾಕರಿಸಿದಾಗ 'ನಾನು ಮಂತ್ರಿ ಆದರೂ ನಿಮ್ಮ ಮನಸ್ಸು ನೋಯಿಸಿ ದೇವಾಲಯ ಪ್ರವೇಶ ಮಾಡುವುದು ನನಗೆ ಇಷ್ಟವಿಲ್ಲ' ಎಂದು ಹೇಳಿದಾಗ ಆಡಳಿತ ಮಂಡಳಿಯವರು ಚನ್ನಿಗರಾಮಯ್ಯ ಅವರ ಕ್ಷಮೆ ಕೇಳಿ ತಲೆ ತಗ್ಗಿಸಿದರು. ಸವರ್ಣೀಯರ ಮನಪರಿವರ್ತನೆ ಆಗದ ಹೊರತು, ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಸಾಧ್ಯವಿಲ್ಲ ಎಂಬುದನ್ನು ಅರಿತಿದ್ದರು. ಆದ್ದರಿಂದ ಸಮಾಜದಲ್ಲಿ ಸಮಾನತೆಯನ್ನು ಉಂಟು ಮಾಡಲು, ಪ್ರತ್ಯೇಕತೆ ಮನೋಭಾವನೆಯನ್ನು ಹೋಗಲಾಡಿಸಲು ಹೆಚ್ಚು ಶ್ರಮಿಸಿದರು. ದಲಿತರ ಬಗ್ಗೆ ಅವರ ಅಭಿವೃದ್ಧಿಯ ಬಗ್ಗೆ ಸದಾ ಚಿಂತನೆ ನಡೆಸುತ್ತಾ ದಲಿತರು ಸ್ವಾವಲಂಬಿಗಳಾಗಿ ಬದುಕಬೇಕು. ಅವರನ್ನು ಅನಿಷ್ಟ ಪದ್ಧತಿಗಳಿಂದ ಮುಕ್ತಗೊಳಿಸಬೇಕೆಂಬ ಕನಸನ್ನು ಕಂಡಿದ್ದರು.

ಚನ್ನಿಗರಾಮಯ್ಯ ಅವರು ಅನೇಕ ಸಂಘಸಂಸ್ಥೆಗಳ ಸ್ಥಾಪಕ ಸದಸ್ಯರಾಗಿ ದುಡಿದರು. ಅವುಗಳಲ್ಲಿ ಮೈಸೂರು ರಾಜ್ಯ ಆದಿಜಾಂಬವ ಅಭಿವೃದ್ಧಿ ಸಂಸ್ಥೆ, ಬೆಂಗಳೂರಿನ ಬಾಪೂಜಿ ವಿದ್ಯಾರ್ಥಿನಿಲಯ ಸಂಘ, ಆದಿಜಾಂಬವ ಹರಿಜನ ವಿದ್ಯಾಭಿವೃದ್ಧಿ ಟ್ರಸ್ಟ್, ಮೈಸೂರು ರಾಜ್ಯ ಹರಿಜನ ಸೇವಕ ಸಂಘ ಮತ್ತು ಬಸವ ಸಮಿತಿ ಮುಖ್ಯವಾದವು. ಬಿ.ಡಿ. ಜತ್ತಿ ಅವರು ಅಧ್ಯಕ್ಷರಾಗಿದ್ದ ಸಮಯದಲ್ಲಿ ಬಸವ ಸಮಿತಿ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ದೀನದಲಿತರ ಬಗ್ಗೆ ಅಪಾರವಾದ ಕಾಳಜಿಯನ್ನು ಹೊಂದಿದ್ದ ಚನ್ನಿಗರಾಮಯ್ಯ ಅವರು ದಲಿತರ ಅಭಿವೃದ್ಧಿ, ಏಳಿಗೆಗಾಗಿ ಸದಾ ಚಿಂತಿಸುತ್ತಿದ್ದರು. ಸರ್ಕಾರದಿಂದ ದೊರೆಯುವ ಎಲ್ಲಾ ರೀತಿಯ ಸವಲತ್ತುಗಳನ್ನು ದೊರಕಿಸಿಕೊಡುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದರು. ಇವರು ಹೌಸಿಂಗ್ ಬೋರ್ಡ್ ಕಮಿಟಿ ಛೇರ್ಮನ್ ಆಗಿದ್ದ ಸಂದರ್ಭದಲ್ಲಿ ದಲಿತ ಕುಟುಂಬಗಳಿಗೆ ಸರ್ಕಾರದ ವತಿಯಿಂದ ಉಚಿತ ನಿವೇಶನ ಮತ್ತು ಮನೆಕಟ್ಟಲು ಅವಶ್ಯವಿರುವ ಸಾಮಗ್ರಿಗಳನ್ನು ಕೊಡಿಸಿದ್ದರು. ಸತತವಾಗಿ ಹೋರಾಟ ನಡೆಸಿ ಕೊರಟಗೆರೆಯ ಜಂಪೇನಹಳ್ಳಿ ಕೆರೆಯನ್ನು ನಿರ್ಮಿಸಲು ಸಹಕರಿಸಿದರು. ಇದರಿಂದಾಗಿ ವ್ಯವಸಾಯವನ್ನೇ ನಂಬಿದ್ದ ನೂರಾರು ದಲಿತ ಕುಟುಂಬಗಳಿಗೆ ಸಹಕಾರವಾಯಿತು. ದೈವಭಕ್ತರಾದ ಇವರು ವೈಜ್ಞಾನಿಕ ವಿಚಾರವುಳ್ಳವರಾಗಿದ್ದು, ಮೂಢನಂಬಿಕೆಗಳನ್ನು ವಿರೋಧಿಸುತ್ತಿದ್ದರು. ಕೊರಟಗೆರೆ ಪಾಳೇಗಾರರಾದ ರಣಭೈರೇಗೌಡರಿಂದ ಸ್ಥಾಪಿತವಾದ ಪುರಾತನ ದೇವಾಲಯ ಗುಂಡಾಂಜನೇಯಸ್ವಾಮಿ ದೇವಾಲಯ ತುಂಬಾ ಶಿಥಿಲವಾಗಿತ್ತು. ಇವರು ಸಾರ್ವಜನಿಕರಿಂದ ಚಂದಾ ಪಡೆದು ನಲವತ್ತೈದು ಸಾವಿರ ರೂಪಾಯಿಗಳನ್ನು ಖರ್ಚು

ಮಾಡಿ ದೇವಾಲಯವನ್ನು ನವೀಕರಿಸಿ ಜೀರ್ಣೋದ್ಧಾರ ಮಾಡಿಸಿ ದೇವಾಲಯದ ಧರ್ಮದರ್ಶಿ ಮಂಡಲದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಾ ಬಂದರು.[೨೨]

ಇವರು ದಲಿತರ ಅಭಿವೃದ್ಧಿ ಏಳಿಗೆಗಾಗಿ ಹೆಚ್ಚಿನ ಆಸಕ್ತಿ ವಹಿಸಿ ದಲಿತ ಮಹಿಳೆಯರು ಸ್ವಾವಲಂಬಿಗಳಾಗಲು ಗೃಹಕೈಗಾರಿಕೆ, ಸ್ವಯಂ ಉದ್ಯೋಗ ಕರಕುಶಲಗಳಿಗೆ ಸಂಬಂಧಿಸಿದ ಸಣ್ಣ ಕೈಗಾರಿಕೆಗಳನ್ನು ಮಂಜೂರು ಮಾಡಿದರು. ಅಲ್ಲದೇ ಮೈಸೂರು ರಾಜ್ಯದಲ್ಲಿ ಸರ್ಕಾರದ ವಶದಲ್ಲಿದ್ದ ಶೇಂದಿವನಗಳನ್ನು ತೆರವುಗೊಳಿಸಿ, ಕಾಲೋನಿಗಳನ್ನಾಗಿ ಪರಿವರ್ತಿಸಿ ಆ ಪ್ರದೇಶದಲ್ಲಿ ದಲಿತರಿಗೆ ಮಾತ್ರ ಅವಕಾಶವನ್ನು ಮೀಸಲಿಟ್ಟು ವ್ಯವಸಾಯದ ಕಾಲೋನಿಗಳನ್ನಾಗಿ ಪರಿವರ್ತಿಸಿದರು. ಅಲ್ಲಿ ನೆಲೆಸುವ ಕುಟುಂಬಗಳಿಗೆ ಎಲ್ಲ ವಿಧವಾದ ಸೌಕರ್ಯಗಳನ್ನು ಸರ್ಕಾರದಿಂದಲೇ ಒದಗಿಸಿದರು. ಇದರ ಪರಿಣಾಮವಾಗಿ ಅನೇಕ ನಿರ್ಗತಿಕ ದಲಿತ ಕುಟುಂಬಗಳು ಸ್ವಾಲಂಬಿಗಳಾಗಿ ಜೀವನ ನಡೆಸಲು ಅನುಕೂಲವಾಯಿತು.

ಗಾಂಧೀ ಅವರ ಅನುಯಾಯಿಗಳಾದ ಚನ್ನಿಗರಾಮಯ್ಯ ಅವರು ಗಾಂಧೀಯವರ ಜನ್ಮಶತನೋತ್ಸವ ಅಂಗವಾಗಿ ೧೯೬೯ರಲ್ಲಿ ಕೊರಟಗೆರೆಯಲ್ಲಿ ಮೈಸೂರು ರಾಜ್ಯಮಟ್ಟದ ಪರಿಶಿಷ್ಟ ಜಾತಿ ಸಮ್ಮೇಳನವನ್ನು ಮಾಡಿದರು. ಇದು ಅವರ ಜೀವಿತ ಕಾಲಾವಧಿಯಲ್ಲಿ ಸ್ವಂತ ಊರಿನಲ್ಲಿ ನಡೆಸಿದ ಕಟ್ಟಕಡೆಯ ಸಮ್ಮೇಳನ. ಇದು ರಾಜ್ಯದಲ್ಲಿಯೇ ಮೊದಲ ಹಾಗೂ ದೊಡ್ಡ ಪ್ರಮಾಣದ ಸಮ್ಮೇಳನವಾಗಿತ್ತು. ತುಮಕೂರಿನ ಸಿದ್ಧಗಂಗಾಮಠದ ಶಿವಕುಮಾರಸ್ವಾಮಿ ಅವರು ಈ ಸಮ್ಮೇಳನಕ್ಕೆ ಆಗಮಿಸಿ ಈ ಅಧಿವೇಶನವನ್ನು ಪ್ರೋತ್ಸಾಹಿಸಿದ್ದರು. ಸಮ್ಮೇಳನಕ್ಕೆ ರಾಜ್ಯದ ಅನೇಕ ಮಂತ್ರಿಗಳು ಆಗಮಿಸಿ ಅಂದಿನ ಪರಿಶಿಷ್ಟ ಜನಾಂಗದ ಸ್ಥಿತಿಗತಿಗಳನ್ನು ವಿಸ್ತೃತವಾಗಿ ಚರ್ಚೆ ಮಾಡಿ ಅವರ ಅಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದರು.

ಹೀಗೆ ಆರ್. ಚನ್ನಿಗರಾಮಯ್ಯ ಅವರು ರಾಜ್ಯದ ಪ್ರಥಮ ದಲಿತ ಮಂತ್ರಿಯಾಗಿ ಸುಮಾರು ನಾಲ್ಕು ದಶಕಗಳ ಕಾಲ ರಾಜ್ಯದಲ್ಲಿ ದಲಿತರ ಹಾಗೂ ಸವರ್ಣೀಯರ ಅಭಿವೃದ್ಧಿಗಾಗಿ ಶ್ರಮಿಸಿದರು. ತಮ್ಮ ಜೀವನದುದ್ದಕ್ಕೂ ಪ್ರಾಮಾಣಿಕತೆ, ನಿಷ್ಠೆ, ದೇಶಪ್ರೇಮವನ್ನು ಮೈಗೂಡಿಸಿಕೊಂಡಿದ್ದ ಇವರು ೭೫ ವರ್ಷಗಳ ಕಾಲ ತುಂಬು ಜೀವನವನ್ನು ನಡೆಸಿ ಜನವರಿ ೨೧, ೧೯೭೬ರಂದು ನಿಧಾನರಾದರು.[೨೩]

೪.೧೮. ಶಿಕ್ಷಣ ತಜ್ಞ ಎಚ್.ಎಂ. ಗಂಗಾಧರಯ್ಯ

ತುಮಕೂರು ಜಿಲ್ಲೆ ಕುಣಿಗಲ್ ತಾಲೂಕಿನ ಅಮೃತೂರು ಗ್ರಾಮದ ಮರಿಯಪ್ಪ ಮತ್ತು ಹುಚ್ಚಮ್ಮ ದಂಪತಿಗಳಿಗೆ ಗಂಗಾಧರಯ್ಯ ಅವರು ೧೯೧೫ರಲ್ಲಿ ಜನಿಸಿದರು. ಇವರು ಶಿಕ್ಷಣ ಪಡೆದದ್ದು ಅಮೃತೂರಿನಲ್ಲಿ ದಲಿತರಿಗಾಗಿ ಮೀಸಲಾದ ಶಾಲೆಯಲ್ಲಿ. ನಂತರ ತುಮಕೂರಿನ ಪಂಚಮ ಬೋರ್ಡಿಂಗ್ ಹೋಂನಲ್ಲಿ ಪ್ರೌಢ ಶಿಕ್ಷಣವನ್ನು ಮುಂದುವರಿಸಿದರು. ಮೂಲತಃ ಇವರು ಚಿತ್ರಕಲೆಯಲ್ಲಿ ಹೆಚ್ಚಿನ ಆಸಕ್ತಿ ಹೊಂದಿದವರಾಗಿದ್ದರು. ಅಂದಿನ ಸಂದರ್ಭದಲ್ಲಿ ಅಂಬೇಡ್ಕರ್ ಅವರ ತತ್ವ, ಸಿದ್ಧಾಂತಗಳಿಗೆ ಒಳಗಾಗಿ ಅವರ ಮೂಲತತ್ವವಾದ ಶಿಕ್ಷಣದ ಕಡೆಗೆ

ಕೊಂಡೊಯ್ಯಲು ಮುಂದಾದರು. ದಲಿತರ ಸ್ಥಿತಿಗತಿಯನ್ನು ಕಂಡು ಇವರ ಅಭಿವೃದ್ಧಿಗೆ ಶಿಕ್ಷಣವೊಂದೇ ಮಾರ್ಗಸೂಚಿ ಎಂದು ಮನಗಂಡು ಸರ್ಕಾರಿ ಕೆಲಸ ಹಾಗೂ ಚುನಾಯಿತ ವಿಧಾನಸಭಾ ಸದಸ್ಯತ್ವಕ್ಕೆ ವಿದಾಯ ಹೇಳಿ ದಲಿತರಲ್ಲಿ ಶೈಕ್ಷಣಿಕ ಕ್ರಾಂತಿಯನ್ನುಂಟು ಮಾಡಲು ತಮ್ಮನ್ನು ತೊಡಗಿಸಿಕೊಂಡರು. ಅದರ ಫಲವೇ ಇಂದು ಡೀಮ್ಡ್ ವಿಶ್ವವಿದ್ಯಾಲಯ ಎನಿಸಿಕೊಂಡಿರುವ ತುಮಕೂರಿನ ಸಿದ್ಧಾರ್ಥ ಶಿಕ್ಷಣ ಸಂಸ್ಥೆ.

ವಿದ್ಯೆಯಿಂದ ವಂಚಿತವಾಗಿರುವ ದುರ್ಬಲ ವರ್ಗಗಳ ಜನಾಂಗದವರಿಗೆ ವಿದ್ಯೆಯ ಎಲ್ಲಾ ಸೌಲಭ್ಯಗಳು ದೊರೆಯುವಂತೆ ಮಾಡಬೇಕೆಂದು ಗಂಗಾಧರಯ್ಯ ಅವರು ಚಿಂತಿಸಿದರು. ಈ ಮೊದಲು ಗಂಗಾಧರಯ್ಯ ಅವರು ವಿದ್ಯಾರ್ಥಿನಿಲಯಗಳನ್ನಷ್ಟೇ ಸ್ಥಾಪನೆ ಮಾಡಿದ್ದರು. ಈ ಎಲ್ಲ ವಿದ್ಯಾರ್ಥಿನಿಲಯಗಳನ್ನು ಒಳಗೊಂಡಂತೆ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿದರು. ೧೯೫೮ರ ಜೂನ್ ತಿಂಗಳಲ್ಲಿ ಗೊಲ್ಲಹಳ್ಳಿಯಲ್ಲಿ ಶ್ರೀ ಸಿದ್ಧಾರ್ಥ ಪ್ರೌಢಶಾಲೆ ಪ್ರಾರಂಭವಾಯಿತು. ಸಿದ್ಧಗಂಗಾ ಕ್ಷೇತ್ರದ ಡಾ. ಶಿವಕುಮಾರ ಸ್ವಾಮಿಗಳವರೇ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಮೊದಲನೆ ಪ್ರೌಢ ಶಾಲೆಯನ್ನು ಉದ್ಘಾಟಿಸಿದರು. ಚಿಕ್ಕಬಳ್ಳಾಪುರದಲ್ಲಿ ಮುಖ್ಯೋಪಾಧ್ಯಾಯರಾಗಿದ್ದ ಹಾಗೂ ಪರಿಚಿತರಾಗಿದ್ದ ವೀರರಾಘವಾಚಾರ್ ಈ ಪ್ರೌಢಶಾಲೆಯ ಮೊದಲನೆಯ ಮುಖ್ಯೋಪಾಧ್ಯಾಯರು. ಅನೇಕ ಸಾರ್ವಜನಿಕರು ದವಸ, ಧಾನ್ಯ, ಭೂಮಿ, ಹಣ ಮುಂತಾದವುಗಳನ್ನು ಸಿದ್ಧಾರ್ಥ ಶಿಕ್ಷಣ ಸಂಸ್ಥೆಗೆ ನೀಡುವುದರ ಮೂಲಕ ಅದರ ಅಭಿವೃದ್ಧಿಯಲ್ಲಿ ಸಹಕರಿಸಿದರು.[೨]

೧೯೫೯ ಜೂನ್ ೧ರಂದು ಡಾ. ಟಿ.ಎಸ್. ಮಲ್ಲಿಕಾರ್ಜುನಯ್ಯ ಅವರ ಅಧ್ಯಕ್ಷತೆಯಲ್ಲಿ ಸಿದ್ಧಾರ್ಥ ವಿದ್ಯಾ ಸಂಸ್ಥೆ ಪ್ರಾರಂಭವಾಯಿತು. ಸಂಸ್ಥೆಯ ಕೆಲಸ ಕಾರ್ಯಗಳನ್ನು ನಿರ್ವಹಿಸುವ ದೃಷ್ಟಿಯಿಂದ ಹೆಚ್.ಎಂ. ಗಂಗಾಧರಯ್ಯ ಅವರು ಪ್ರಥಮ ಕಾರ್ಯದರ್ಶಿಗಳಾದರು. ಗೊಲ್ಲಹಳ್ಳಿಯಲ್ಲಿನ ಪ್ರೌಢಶಾಲೆಯ ಸಮೀಪದಲ್ಲಿಯೇ ಉಚಿತ ವಿದ್ಯಾರ್ಥಿನಿಲಯವನ್ನು ಸ್ಥಾಪನೆ ಮಾಡಲಾಯಿತು. ಮುಂದೆ ಅಲ್ಲಿನ ಬೋಧಕ ವರ್ಗಕ್ಕೆ ವಸತಿಗೃಹಗಳನ್ನು ಕಟ್ಟಿಸಿಕೊಡಲಾಯಿತು. ಈ ಎಲ್ಲ ಸೌಲಭ್ಯಗಳನ್ನು ಹೊಂದಿರುವುದರಿಂದ ಇಂದಿಗೂ ಶ್ರೀ ಸಿದ್ಧಾರ್ಥ ಪ್ರೌಢಶಾಲೆ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಪ್ರಮುಖ ವಿದ್ಯಾಕೇಂದ್ರವಾಗಿ ಪರಿವರ್ತನೆಗೊಂಡಿದೆ. ಹೀಗೆ ಗಂಗಾಧರಯ್ಯ ಅವರು ಗೊಲ್ಲಹಳ್ಳಿಯಲ್ಲಿ ಒಂದು ಪುಟ್ಟ ಶಾಂತಿನಿಕೇತನ ತಲೆಯೆತ್ತುವಂತೆ ಶ್ರಮಿಸಿದರು.

ಗಂಗಾಧರಯ್ಯ ಅವರು ವ್ಯಾಸಂಗ ಮಾಡುತ್ತಿದ್ದ ಸಂದರ್ಭದಲ್ಲಿ ಅವರಿಗೆ ಸಂಸ್ಕೃತವನ್ನು ಕಲಿಯಲೇಬೇಕೆಂಬ ವಿಶೇಷವಾದ ಛಲವಿತ್ತು. ಆದರೆ ದುರಂತವೆಂದರೆ ಬ್ರಿಟೀಶ್‌ರು ನಡೆಸುತ್ತಿದ್ದ ಶಾಲೆಗಳಲ್ಲಿ ವೇದ ಭಾಷೆಯಾದ ಸಂಸ್ಕೃತವನ್ನು ಕಲಿಸುವ ಅಥವಾ ಅಭ್ಯಸಿಸುವ ಅವಕಾಶ ಇರಲಿಲ್ಲ. ಸಂಸ್ಕೃತ ಭಾಷೆ ಕಲಿಯಬೇಕಾದರೆ, ಸವರ್ಣೀಯ ಜಾತಿಗಳ ಹಿಡಿತದಲ್ಲಿರುತ್ತಿದ್ದ

ಖಾಸಗಿ ಸಂಸ್ಕೃತ ಭಾಷಾ ಅಧ್ಯಯನ, ವೇದಾಧ್ಯಯನ ಕಲಿಕಾ ಕೇಂದ್ರಗಳಿಗೆ ಹೋಗಬೇಕಿತ್ತು ಅಥವಾ ಮಠಗಳಿಗೆ ಹೋಗಿ ಕಲಿಯಬಹುದಿತ್ತು. ಈ ಎರಡೂ ಅವಕಾಶಗಳು ಅಸ್ಪೃಶ್ಯ ಹಿನ್ನೆಲೆಯ ಅವರಿಗೆ ಇರಲಿಲ್ಲವಾದ್ದರಿಂದ ಈ ಸೌಲಭ್ಯದಿಂದ ವಂಚಿತರಾಗಿದ್ದರು. ಆದರೆ ಅವರಿಗೆ ಸಂಸ್ಕೃತವನ್ನು ಕಲಿಯಬೇಕು. ಆ ಮೂಲಕ ಸಂಸ್ಕೃತದಲ್ಲಿರುವ ಮಹಾಕಾವ್ಯವನ್ನೆಲ್ಲ ಓದಿ ತಿಳುವಳಿಕೆ ಪಡೆಯಬೇಕೆಂಬ ಹಂಬಲ ಮಾತ್ರ ಕಡಿಮೆಯಾಗಲಿಲ್ಲ. ತಾವು ವ್ಯಾಸಂಗ ಮಾಡುವಾಗ ಅನುಭವಿಸಿದ ತೊಂದರೆಗಳನ್ನು ತಮ್ಮ ನಂತರದ ಪೀಳಿಗೆಯವರು ಅನುಭವಿಸ ಬಾರದೆಂಬ ಉದ್ದೇಶದಿಂದ ಅವರು ತಮ್ಮ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯಿಂದ ೯ ಸಂಸ್ಕೃತ ಪಾಠಶಾಲೆಗಳನ್ನು ತೆರೆದರು. ಆ ಮೂಲಕ ಎಲ್ಲಾ ವರ್ಗದ ವಿದ್ಯಾರ್ಥಿಗಳು ಈ ಶಾಲೆಗಳಲ್ಲಿ ಸಂಸ್ಕೃತವನ್ನು ಕಲಿಯುವ ಅವಕಾಶವನ್ನು ಕಲ್ಪಿಸಿಕೊಟ್ಟರು.

ವಿನೋಬಾಭಾವೆ ಅವರ ಆಶೀರ್ವಚನದ ಮೇರೆಗೆ ೧೯೫೬ರಲ್ಲಿ ಗೊಲ್ಲಹಳ್ಳಿಯಲ್ಲಿ ಪ್ರಾರಂಭವಾದ ಸಿದ್ಧಾರ್ಥ ಶಿಕ್ಷಣ ಸಂಸ್ಥೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಹಲವಾರು ಶಾಖೆಗಳನ್ನು ಹೊಂದುವುದರ ಮೂಲಕ ಯಶಸ್ವಿಯಾಗಿ ಮುನ್ನಡೆಯುತ್ತಿದೆ. ಗಂಗಾಧರಯ್ಯ ಅವರು ಬರೀ ಮಾತಿನ ಮನುಷ್ಯರಾಗಿ ಎಂದೂ ಉಳಿದಿಲ್ಲ. ಅವರು ತಮಗನಿಸಿದ್ದರ ಬಗ್ಗೆ ಏನೂ ಹೇಳದೆಯೇ ಕ್ರಿಯಾರೂಪದಲ್ಲಿ ತೋರಿಸಿಬಿಡುವ ಅಪರೂಪದ ವ್ಯಕ್ತಿತ್ವದವರಾಗಿದ್ದರು. ೧೯೯೧ರಲ್ಲಿ ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ ಜನ್ಮಶತಮಾನೋತ್ಸವವನ್ನು ಆಚರಿಸಲಾಯಿತು. ಅದೇ ಸಂದರ್ಭದಲ್ಲಿ ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆ 'ಶತಮಾನದ ಅಂಬೇಡ್ಕರ್' ಎಂಬ ಗ್ರಂಥವನ್ನು ಸಂಪಾದಿಸಿ ಪ್ರಕಟಿಸಿತು.[೨೫]

ಹೀಗೆ ಪ್ರಗತಿಪರ ಬೆಳವಣಿಗೆಗೆ ಕಾರಣರಾದ ಗಂಗಾಧರಯ್ಯ ಅವರು ಅನೇಕ ಸಂದರ್ಭಗಳಲ್ಲಿ ಎಲೆಮರೆಯ ಕಾಯಿಯಂತೆ ಇದ್ದು, ಸಮಾಜ ಸೇವೆಗಾಗಿಯೇ ತಮ್ಮ ಬದುಕನ್ನು ಮೀಸಲಾಗಿರಿಸಿದ್ದಾ ರೆಂಬುದು ಗಮನಾರ್ಹ.

೪.೧೯. ಜಿ. ದುಗ್ಗಪ್ಪ

ಇವರು ದಾವಣಗೆರೆಯಲ್ಲಿ ಪರಿಶಿಷ್ಟ ಜಾತಿಯ ಆದಿಕರ್ನಾಟಕದ ಗುನ್ನಿಹನುಮಪ್ಪ ಮತ್ತು ದುರ್ಗಮ್ಮ ಎಂಬ ದಂಪತಿಗಳ ಮಗನಾಗಿ ದಿನಾಂಕ ೧.೯.೧೯೨೧ರಲ್ಲಿ ಜನಿಸಿದರು. ಇವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ತಮ್ಮ ಹುಟ್ಟೂರಿನಲ್ಲಿ ಮುಗಿಸಿ, ಪ್ರೌಢಶಿಕ್ಷಣವನ್ನು ಬೆಂಗಳೂರಿನಲ್ಲಿ ಆರಂಭಿಸಿದರು. ಆಗ ಎಸ್. ರಾಜಯ್ಯ, ಬಿ. ಶಂಕರಾನಂದ, ಮುಖ್ಯನ್ಯಾಯಮೂರ್ತಿ ಕೆ. ಭೀಮಯ್ಯನವರು ಸಹಪಾಠಿಗಳಾಗಿದ್ದರು. ೧೯೪೫ರಲ್ಲಿ ಚಿತ್ರದುರ್ಗ ತಾಲ್ಲೂಕಿನ ಸಿರಿಗೆರೆಯ ತರಳಬಾಳು ಮಠದ ಸ್ವಾಮೀಜಿ ಅವರ ಅಶೀರ್ವಾದ ಪಡೆದು ಅಲ್ಲಿಯ ಪ್ರೌಢ ಶಾಲೆಯಲ್ಲಿ ಅಧ್ಯಾಪಕರಾಗಿ ನೇಮಕವಾದರು. ಅಲ್ಲಿಂದ ಅವರು ತಮ್ಮ ವ್ಯಾಸಂಗವನ್ನು ಮುಂದುವರಿಸಬೇಕೆಂದು ನಿರ್ಧಾರ ಮಾಡಿ, ಮುಂಬೈ ವಿಶ್ವವಿದ್ಯಾಲಯದಿಂದ

ನ್ಯಾಯಶಾಸ್ತ್ರದ ಕಾನೂನು ಪದವಿಯನ್ನು ಪಡೆದುಕೊಂಡರು. ದುಗ್ಗಪ್ಪನವರು ಚಿತ್ರದುರ್ಗ ಜಿಲ್ಲೆಯಲ್ಲಿ ಜರುಗಿದ ಅನೇಕ ಹರಿಜನ ಸಮ್ಮೇಳನಗಳಲ್ಲಿ ಭಾಗವಹಿಸಿದ್ದರು. ತನ್ನ ಜನಾಂಗದ ಪ್ರಮುಖರೊಂದಿಗೆ ಒಡನಾಟ ಇಟ್ಟುಕೊಂಡಿದ್ದ ಅವರು ದಲಿತರ ಸಮಸ್ಯೆಗಳೇನು? ಎಂಬುದನ್ನು ಅರಿತುಕೊಂಡು ತನ್ನ ಜನಾಂಗದವರ ಸ್ಥಿತಿಗತಿಗಳ ಬಗ್ಗೆ ಪರಿಹಾರ ಕಲ್ಪಿಸುವಲ್ಲಿ ಮಾಡಿಕೊಂಡಿದ್ದು ದಲಿತರ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವುದು. ಅದಕ್ಕಾಗಿ ಚಿತ್ರದುರ್ಗ ನಗರದಲ್ಲಿ ವಿದ್ಯಾರ್ಥಿನಿಲಯಗಳನ್ನು ತೆರೆದರು. ಹೆಣ್ಣುಮಕ್ಕಳಿಗಾಗಿ ಪ್ರತ್ಯೇಕ ಬಾಲಕಿಯರ ವಸತಿನಿಲಯಗಳನ್ನು ತೆರೆದು ಜಿಲ್ಲೆಯ ಸುತ್ತಮುತ್ತಲಿನ ಹಳ್ಳಿಗಳ ಹೆಣ್ಣುಮಕ್ಕಳನ್ನು ಶಾಲೆಗೆ ಸೇರಿಸಿದರು. ಆ ಮೂಲಕ ಇಡೀ ಜಿಲ್ಲೆಯಲ್ಲಿಯೇ ದುಗ್ಗಪ್ಪರ ಹಾಸ್ಟೆಲ್ ಎಂಬ ಖ್ಯಾತಿ ಪಡೆದು ಸಾರ್ವಜನಿಕರ ಗಮನ ಸೆಳೆದರು.

ನಂತರ ರಾಜಕೀಯ ಪ್ರವೇಶಿಸಿ ಚಿತ್ರದುರ್ಗ ಜಿಲ್ಲಾ ಬೋರ್ಡಿನ ಸದಸ್ಯರಾಗಿ ಆಯ್ಕೆಯಾದರು. ೧೯೫೨ರಲ್ಲಿ ಎಂ.ಪಿ.ಸಿ.ಸಿ. ಸದಸ್ಯರಾಗಿ ನೇಮಕರಾದರು. ೧೯೫೨ರ ಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ಚುನಾಯಿತರಾದರು. ೧೯೫೨-೧೯೬೭ರವರೆಗೆ ಕಾಂಗ್ರೆಸ್ ಪಕ್ಷದಿಂದ ಮತ್ತು ೧೯೬೭ರಲ್ಲಿ ಸಮಾಜವಾದಿ ಪಕ್ಷದಿಂದ ಆಯ್ಕೆಯಾಗಿ ಶಾಸಕರಾಗಿ ಸೇವೆ ಸಲ್ಲಿಸಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿ ಕಾರ್ಯನಿರ್ವಹಿಸಿದರು. ಬ್ಯಾಂಕ್‌ವೊಂದನ್ನು ಸ್ಥಾಪಿಸಿ, ಪ್ರಾರಂಭೋತ್ಸವಕ್ಕೆ ಮಹಾರಾಜ ಜಯಚಾಮರಾಜ ಒಡೆಯರನ್ನು ಕರೆಸಿದ್ದರು. ಇವರ ನಿಸ್ವಾರ್ಥ ಸೇವೆ ಕಾರ್ಯನಿಷ್ಠೆ ಮತ್ತು ದಕ್ಷತೆಯನ್ನು ಗುರುತಿಸಿದ ಆಗಿನ ಮುಖ್ಯಮಂತ್ರಿ ಡಿ. ದೇವರಾಜ್ ಅರಸು ಅವರು ತಮ್ಮ ಸರ್ಕಾರವು ಪ್ರಪ್ರಥಮವಾಗಿ ಅಸ್ತಿತ್ವಕ್ಕೆ ತಂದಿದ್ದ ದುಗ್ಗಪ್ಪನವರೇ ಸೂಚಿಸಿದ್ದ ಲಿಡ್‌ಕರ್ ಸಂಸ್ಥೆಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಿದರು. ದುಗ್ಗಪ್ಪನವರು ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿ ಅನುಭವ ಹೊಂದಿದ್ದನ್ನು ಮತ್ತು ಜನಪರ ಕಾಳಜಿಯನ್ನು ಗುರುತಿಸಿದ ರಾಜ್ಯ ಸರ್ಕಾರ ೧೯೭೩ರಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರನ್ನಾಗಿ ನೇಮಿಸಿತು. ಆ ಸಂದರ್ಭದಲ್ಲಿ ದುಗ್ಗಪ್ಪನವರು ಲೋಕಸೇವಾ ಆಯೋಗದ ಬಗ್ಗೆ ಸಾರ್ವಜನಿಕರಲ್ಲಿ ನಂಬಿಕೆ ಬರುವಂತೆ ಕಾರ್ಯನಿರ್ವಹಿಸಿದ್ದರಿಂದ ಸರ್ಕಾರ ಲೋಕಸೇವಾ ಆಯೋಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿತು.

ಬೆಂಗಳೂರಿನ ಮಾಗಡಿ ರಸ್ತೆಯಲ್ಲಿರುವ ಆದಿಕರ್ನಾಟಕದ ವಿದ್ಯಾಭಿವೃದ್ಧಿ ಟ್ರಸ್ಟ್‌ನ ಅಧ್ಯಕ್ಷರಾಗಿದ್ದು ಇವರು ತಮ್ಮ ಆಡಳಿತ ಅವಧಿಯಲ್ಲಿ ಬಾಪೂಜಿ ಪದವಿಪೂರ್ವ ಕಾಲೇಜನ್ನು ಆರಂಭಿಸಿದರು. ಅದರ ಕಾರ್ಯದರ್ಶಿಗಳಿಗಾಗಿ ಎಂ.ಸಿ. ಮುನಿಸ್ವಾಮಿ ಅವರು ಸೇವೆ ಸಲ್ಲಿಸಿದರು.

ಇಂತಹ ಸರಳ ಸಜ್ಜನಿಕೆಯ ಗುಣಗಳನ್ನು ಹೊಂದಿದ್ದ ದುಗ್ಗಪ್ಪನವರು ೧೯೫೮ರಲ್ಲಿ ದಲಿತ ಬಾಲಕ-ಬಾಲಕಿಯರ ವಸತಿ ನಿಲಯಗಳನ್ನು ಸ್ಥಾಪಿಸಿದರು. ಇಂದು ಈ ಹಾಸ್ಟೆಲ್‌ನಲ್ಲಿ ಇತರೆ ವರ್ಗದ ಹೆಣ್ಣು ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿರುವುದು ವಿಶೇಷ ಸಂಗತಿ.[೨೬]

೪.೨೦. ಬಿ. ಬಸವಲಿಂಗಪ್ಪ

ಇವರು ಚಿತ್ರದುರ್ಗ ಜಿಲ್ಲೆಯ ಇಂದಿನ ದಾವಣಗೆರೆ ಜಿಲ್ಲೆಯ ಹರಿಹರದಲ್ಲಿ ದಿನಾಂಕ ೨೧.೪.೧೯೨೪ರಲ್ಲಿ ಜನಿಸಿದರು. ತಂದೆ ಜವಳಿಬಸಪ್ಪ ತಾಯಿ ಸಿದ್ದಲಿಂಗಮ್ಮ. ಪ್ರಾಥಮಿಕ ಶಿಕ್ಷಣವನ್ನು ಹರಿಹರದಲ್ಲಿ ಪೂರೈಸಿ, ಹೈಸ್ಕೂಲ್ ಮತ್ತು ಇಂಟರ್ ಮೀಡಿಯೆಟ್ ಶಿಕ್ಷಣವನ್ನು ಬೆಂಗಳೂರಿನಲ್ಲಿ ಪಡೆದರು. ನಂತರ ಪದವಿ ಶಿಕ್ಷಣವನ್ನು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಮುಗಿಸಿ ಕಾನೂನು ಪದವಿಯ ಶಿಕ್ಷಣವನ್ನು ಬೆಳಗಾವಿಯ ರಾಜಾ ಲಖಮನಗೌಡ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಎಲ್.ಎಲ್.ಬಿ. ಪದವಿಯನ್ನು ಪಡೆದುಕೊಂಡರು.

ಕಾನೂನು ಪದವಿ ಪಡೆದ ಬಸವಲಿಂಗಪ್ಪನವರಿಗೆ ಅಸ್ಪೃಶ್ಯತೆಯ ಕರಾಳತೆ ಮತ್ತು ಅಸ್ಪೃಶ್ಯರ ಮಾನರಹಿತ ಹೀನಾಯ ಬದುಕು ಗುಡ್ಡದಂತೆ ಎದುರಿಗಿತ್ತು. ಉತ್ತಮ ನೌಕರಿ ಪಡೆಯುವ ಸ್ಥಿತಿಯಲ್ಲಿದ್ದ ಬಸವಲಿಂಗಪ್ಪನವರಿಗೆ ದಲಿತ ಜನಾಂಗದ ಏಳ್ಗೆಗಾಗಿ ಚಡಪಡಿಕೆ ಸಂಕಟ ಶುರುವಾಗಿತ್ತು. ಹಕ್ಕುಗಳಿಂದ ವಂಚಿತವಾದ ಜನಾಂಗಕ್ಕೆ ಅಧಿಕಾರವನ್ನು ಪರಿವರ್ತನೆಯ ಮಾರ್ಗವೆಂದು ಸ್ಪಷ್ಟ ತೀರ್ಮಾನಕ್ಕೆ ಬಂದಿದ್ದ ಅವರು ದಲಿತರ ಜಾಗೃತಿಗಾಗಿ ಹಳ್ಳಿ ಹಳ್ಳಿಗಳಿಗೆ ಹೋಗಿ ಅರಿವನ್ನು ಮೂಡಿಸುವ ಕಾರ್ಯ ಮಾಡುತ್ತಾರೆ. ಅವರ ಮನಸ್ಸೆಲ್ಲ ರಾಜಕೀಯ ಅಧಿಕಾರದೆಡೆಗೆ ಇರುತ್ತದೆ. ಪರಿಣಾಮವಾಗಿ ೧೯೪೯ರಲ್ಲಿ ಕಾಂಗ್ರೆಸ್ ಪಕ್ಷ ಸೇರುವುದರೊಂದಿಗೆ ರಾಜಕೀಯ ಪ್ರವೇಶ ಮಾಡಿದ ಬಸವಲಿಂಗಪ್ಪನವರು ೧೯೫೮ರಲ್ಲಿ ಬಿ.ಡಿ. ಜತ್ತಿ ಅವರ ಸರಕಾರದ ಮಂತ್ರಿಮಂಡಲದಲ್ಲಿ ಉಪಗೃಹ ಸಚಿವರಾಗಿ ದಕ್ಷತೆಯಿಂದ ಆ ಹುದ್ದೆಯನ್ನು ನಿರ್ವಹಿಸುತ್ತಾರೆ. ೩೬ ವರ್ಷದ ದಲಿತ ಯುವಕ ರಾಜ್ಯದ ಗೃಹಖಾತೆಯ ಉಪಮಂತ್ರಿಯಾಗಿ ರಾಜ್ಯದ ತುಂಬ ಸಂಚರಿಸಿ ದಲಿತರ, ಮಹಿಳೆಯರ ಮೇಲಾಗುವ ಶೋಷಣೆಯನ್ನು ಕಾನೂನಿನ ಕಟ್ಟೆಚ್ಚರದಲ್ಲಿ ನಿಗ್ರಹಿಸುತ್ತಾರೆ.

ಇಲ್ಲಿಯವರೆಗೆ ಕಾನೂನಿನ ರಕ್ಷಣೆ ಮಾಡುವ ಹುದ್ದೆಗಳೆಲ್ಲ ಮೇಲ್ಜಾತಿಯ ದಬ್ಬಾಳಿಕೆ, ದರ್ಪದ ಸ್ವಭಾವದ ಜನರ ಪಾಲಾಗಿದ್ದವು. ದಲಿತರ ಬಡವರ ಶೋಷಣೆಗೆ ಈ ಮನಸ್ಸುಗಳಿಂದ ನ್ಯಾಯ ಸಿಗುವುದರ ಬದಲಿಗೆ ಹಿಂಸೆಯೇ ದೊರೆಯುತ್ತಿತ್ತು. ದೌರ್ಜನ್ಯಕ್ಕೊಳಗಾಗುವ ದೀನ-ದಲಿತರು ದೂರು ಕೊಡಲು ಪೋಲೀಸ್ ಠಾಣೆಗಳಿಗೆ ಹೋಗುತ್ತಿರಲಿಲ್ಲ. ಇದನ್ನರಿತ ಬಸಲಿಂಗಪ್ಪನವರು ಸಮಾಜದ ಶೋಷಿತ ಎಲ್ಲಾ ವರ್ಗದವರಿಗೆ ನ್ಯಾಯ ಸಿಗುವಂತಾಗಬೇಕು. ಪೋಲೀಸ್ ಇಲಾಖೆಯಲ್ಲಿ ನಂಬಿಕೆಯಿಡುವಂತಾಗಬೇಕು ಎಂದು ದಲಿತ ಮತ್ತು ಕೆಳವರ್ಗದ ವಿದ್ಯಾವಂತರನ್ನು ಪೋಲೀಸ್ ಇಲಾಖೆಯಲ್ಲಿ ನೇಮಕ ಮಾಡಿಕೊಂಡು ನ್ಯಾಯದ ಭರವಸೆ ಮೂಡಿಸಿದರು.

ಡಾ. ಬಾಬಾಸಾಹೇಬ್ ಅಂಬೇಡ್ಕರರು ದಲಿತರ ಹಿಂದುಳಿದವರ ಏಳಿಗೆ ಮತ್ತು ಅಭಿವೃದ್ಧಿಗೆ ಶಿಕ್ಷಣದ ಅವಶ್ಯಕತೆಯನ್ನು ಮನಗಂಡು ೧೯೨೯ರಲ್ಲಿ ಮುಂಬಯಿಯಲ್ಲಿ ಪೀಪಲ್ಸ್ ಎಜ್ಯುಕೇಷನ್ ಸೊಸೈಟಿಯನ್ನು ಮತ್ತು ಉತ್ತರ ಕರ್ನಾಟಕದ ಧಾರವಾಡದಲ್ಲಿ ವಸತಿ ನಿಲಯವನ್ನು

ಪ್ರಾರಂಭಿಸಿದ್ದರು. ಈ ಧಾರವಾಡದ ವಸತಿನಿಲಯಕ್ಕೆ ಬಸವಲಿಂಗಪ್ಪನವರು ಅಧ್ಯಕ್ಷರಾಗಿ ನೇಮಕರಾದರಲ್ಲದೆ, ೧೯೬೪ರಲ್ಲಿ ಮುಂಬಯಿಯ ಪೀಪಲ್ಸ್ ಎಜ್ಯುಕೇಷನ್ ಸೊಸೈಟಿಯ ಟ್ರಸ್ಟಿ ಹಾಗೂ ಆಡಳಿತ ಮಂಡಳಿಯ ಸದಸ್ಯರಾಗಿ ಆಯ್ಕೆಗೊಂಡರು. ಇವರು ಅಂಬೇಡ್ಕರ್ ಅವರ ಸಿದ್ಧಾಂತದಲ್ಲಿ ನಂಬಿಕೆಯಿಟ್ಟವರು. ದಲಿತರ ಹೀನಾಯ ಸ್ಥಿತಿಗೆ ಬಡತನ ಅಜ್ಞಾನಗಳಷ್ಟೇ ಕಾರಣವಲ್ಲ. ತಾವಿರುವ ಹಿಂದೂ ಧರ್ಮದ ವ್ಯವಸ್ಥೆಯೇ ಕಾರಣವೆಂದೂ ಆ ಹಿಂದೂ ಧರ್ಮ ನಿಂತಿರುವುದು ಮತ್ತು ಪ್ರಚಾರದಲ್ಲಿರುವುದಕ್ಕೆ ಧರ್ಮ ಗ್ರಂಥಗಳು ಮತ್ತು ದೇವರುಗಳೇ ಕಾರಣವೆಂದು ಶೋಧಿಸಿದ್ದ ಅಂಬೇಡ್ಕರ್ ಚಿಂತನೆಯನ್ನು ಬಸವಲಿಂಗಪ್ಪ ಕೂಡ ಗ್ರಹಿಸಿದ್ದರು. ಹಿಂದೂಧರ್ಮ ಆಘಾತಕ್ಕೊಳಗಾಗುವಂತೆ ಮಾಡುವ ಉದ್ದೇಶದಿಂದ ಪ್ರೇರಿತಗೊಂಡ ಬಸವಲಿಂಗಪ್ಪನವರಿಗೆ ನೆರೆಯ ತಮಿಳುನಾಡಿನ ಪೆರಿಯಾರ್ ಅವರ 'ಸ್ವಾಭಿಮಾನ ಚಳವಳಿ'ಗೆ ಮಾರುಹೋಗಿ 'ದೇವರುಗಳನ್ನು ಚರಂಡಿಗೆ ಎಸೆಯಿರಿ' ಎಂದು ಕರೆಕೊಟ್ಟು ವಿವಾದ ಸೃಷ್ಟಿಸಿದರು. ಅದರ ಬೆನ್ನಲ್ಲೇ ಸಂಪ್ರದಾಯದ ಕೊಳಕನ್ನು ಬಹುಪಾಲು ಎತ್ತಿಹಿಡಿಯುತ್ತ ಬಂದ ಕನ್ನಡ ಸಾಹಿತ್ಯದ ಒಂದು ಮಗ್ಗುಲನ್ನು ಗುರುತಿಸಿ ೧೯.೧೧.೧೯೭೩ರಲ್ಲಿ ಮೈಸೂರಿನ ಸಮಾರಂಭವೊಂದರಲ್ಲಿ "ಕನ್ನಡ ಸಾಹಿತ್ಯದಲ್ಲಿ ಬೂಸಾನೇ ಹೆಚ್ಚಿದೆ' ಎಂದು ತಮ್ಮ ವೈಯಕ್ತಿಕ ಅಭಿಪ್ರಾಯ ಮಂಡಿಸಿದ್ದರು. ಆದರೆ ರಾಜಕೀಯ ಕುತಂತ್ರದಿಂದಾಗಿ ಆ ಮಾತಿನ ಅರ್ಥ ಬೇರೆ ಸ್ವರೂಪ ಪಡೆದುಕೊಂಡು ಕರ್ನಾಟಕದ ಉದ್ದಗಲಕ್ಕೂ ಅವರ ಪರ ಮತ್ತು ವಿರೋಧವಾಗಿ ತೀವ್ರ ತರಹದ ಚಳವಳಿಗಳು ಹುಟ್ಟಿಕೊಂಡವು. ಇದರಿಂದ ಬಸವಲಿಂಗಪ್ಪ ಸುಮಾರು ತಿಂಗಳ ಕಾಲ ನಡೆದ ಈ ಸಂಘರ್ಷಕ್ಕೆ ಸೊಪ್ಪು ಹಾಕದೆ ದೆಹಲಿಯಿಂದಲೇ ರಾಜೀನಾಮೆ ಕಳುಹಿಸಿಕೊಟ್ಟರು. ಈ ಬೂಸಾ ಪ್ರಕರಣ ಮುಂದೆ ಕರ್ನಾಟಕದಲ್ಲಿ ಒಂದು ಪ್ರಗತಿಪರ ಸಾಂಸ್ಕೃತಿಕ ಚಟುವಟಿಕೆಗೆ ಸಾಮಾಜಿಕ ಬದಲಾವಣೆಯ ಸಂಘರ್ಷಕ್ಕೆ ದಾರಿ ಮಾಡಿಕೊಟ್ಟಿತು.[೨]

೧೯೭೮ರ ಸಾರ್ವತ್ರಿಕ ಚುನಾವಣೆಯಲ್ಲಿ ಸೋತ ಬಸವಲಿಂಗಪ್ಪನವರು ಮತ್ತೆ ಸಾರ್ವಜನಿಕ ಶೈಕ್ಷಣಿಕ ಕಾರ್ಯಗಳಲ್ಲಿ ತೊಡಗಿಕೊಂಡರು. ಮೈಸೂರಿನ ಒಡೆಯರಿಗೆ ಕಾನೂನು ಸಲಹೆಗಾರರಾಗಿದ್ದ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಮಹಾರಾಜರು ಬೌದ್ಧ ಧರ್ಮದ ಕಾರ್ಯ ಚಟುವಟಿಕೆಗಳಿಗಾಗಿ ಬೆಂಗಳೂರಿನ ರಾಜಮಹಲ್ ವಿಲಾಸ ಬಡವಾಣೆಯಲ್ಲಿ ೫ ಎಕರೆ ಭೂಮಿ ಕೊಟ್ಟಿದ್ದರು. ಅಂಬೇಡ್ಕರ್ ನಿಧನದ ಬಳಿಕ ಆ ಜಾಗದ ಉಪಯೋಗ ನಿಂತುಹೋಗಿತ್ತು. ಅದನ್ನು ಬಸವಲಿಂಗಪ್ಪನವರು ಪೀಪಲ್ಸ್ ಎಜ್ಯುಕೇಷನ್ ಸೊಸೈಟಿಗೆ ಅಧೀನವಾಗಿಸಿದರು. ಅಲ್ಲಿ ೧೯೮೮ರಲ್ಲಿ ನಾಗಸೇನ ವಿದ್ಯಾಲಯ ಆರಂಭಿಸಿ ಆ ಸ್ಥಳಕ್ಕೆ 'ಬುದ್ಧ ಭೂಮಿ' ಎಂದು ನಾಮಕರಣ ಮಾಡಿದರು. ಅವರು ಪೌರಾಡಳಿತ ಸಚಿವರಾಗಿದ್ದಾಗ ಮಲ ಹೊತ್ತು ಸಾಗಿಸುವ ಪದ್ಧತಿ ಇನ್ನು ಚಾಲ್ತಿಯಲ್ಲಿತ್ತು. ತಮ್ಮ ಮಲ-ಮೂತ್ರದ ವಾಸನೆಗೆ ಮೂಗು ಮುಚ್ಚಿ ವಾಂತಿ ಮಾಡಿಕೊಳ್ಳುವ ಊರ ಜನರೆಲ್ಲರ ಮಲ-ಮೂತ್ರಗಳನ್ನು ಕೈಯಿಂದ ಬಳಸಿ, ಬಕೆಟ್ ಮತ್ತು ಬುಟ್ಟಿಯಲ್ಲಿ ತುಂಬಿ ತಲೆಯ ಮೇಲೆ ಹೊತ್ತುಕೊಂಡು ಎಲ್ಲೋ ದೂರ ಚೆಲ್ಲಿ ಬರುವುದು

ಎಂಥ ಅಮಾನವೀಯ ಆಚರಣೆಯಾಗಿದೆ ಎಂಬುದನ್ನು ಮನಗಂಡ ಬಸವಲಿಂಗಪ್ಪನವರು ಇಂಥ ಹೇಯ ಪದ್ಧತಿಯನ್ನು ೧೯೭೩ರಲ್ಲಿ ಇಡೀ ರಾಷ್ಟ್ರದಲ್ಲಿಯೇ ಪ್ರಪ್ರಥಮ ಬಾರಿಗೆ ರದ್ದುಗೊಳಿಸಿದರು. ಬಸವಲಿಂಗಪ್ಪನವರು ರದ್ದುಗೊಳಿಸಿದ ೨೦ ವರ್ಷಗಳ ಬಳಿಕ ಕೇಂದ್ರ ಸರಕಾರ ಕೂಡ ಪಿ.ವಿ. ನರಸಿಂಹರಾವ್ ಕಾಲದಲ್ಲಿ ತಲೆ ಮೇಲೆ ಮಲ ಹೊರುವ ಪದ್ಧತಿಯನ್ನು ರದ್ದು ಮಾಡಿ ಕಾನೂನು ರೂಪಿಸುವ ಮೂಲಕ ಬಸವಲಿಂಗಪ್ಪನವರು ಹಾಕಿಕೊಟ್ಟ ಮಾರ್ಗದಲ್ಲಿ ತಾನೂ ಹೆಜ್ಜೆ ಹಾಕಿತು. ಇದು ಬಸವಲಿಂಗಪ್ಪನವರ ಅತ್ಯಂತ ಕ್ರಾಂತಿಕಾರಕ ಸಾಧನೆಯಾಗಿದೆ.

ಉಳುವವನೇ ಭೂಮಿಯ ಒಡೆಯ ಎಂಬ ಕಾನೂನಿನ ಮುಖಾಂತರ ವಸತಿ ಹೀನರಿಗೆ ನಿವೇಶನ ಕೊಡಿಸುವುದು, ದಲಿತರು, ಬಡವರು ಮತ್ತು ಮಹಿಳೆಯರಿಗೆ ಸ್ವಂತ ಮನೆ ನಿರ್ಮಿಸಿಕೊಳ್ಳಲು ನೆರವು, ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಅಧ್ಯಕ್ಷ-ಉಪಾಧ್ಯಕ್ಷ ಹುದ್ದೆಗಳನ್ನು ಮೀಸಲಾತಿಗೆ ಒಳಪಡಿಸಿದರು. ಭೂ ಮಂಜೂರಾತಿ ನಿಯಮ ಇನ್ನು ಅನೇಕ ಸಾಧನೆಗಳನ್ನು ಮಾಡಿದರು.[೨೮]

ಡಾ. ಬಾಸಾಸಾಹೇಬ್‌ರು ತಮ್ಮ ಜೀವಿತದ ಕೊನೆಯ ದಿನಗಳಲ್ಲಿ ಬೌದ್ಧ ಧರ್ಮಕ್ಕೆ ಹೆಚ್ಚು ಹೆಚ್ಚು ವಾಲಿದಂತೆ ಬಸವಲಿಂಗಪ್ಪನವರು ಕೂಡ ಬೌದ್ಧಧರ್ಮ ಪ್ರಚಾರ ಮತ್ತು ಸ್ವೀಕಾರ ಕಾರ್ಯಕ್ರಮಗಳಿಗೆ ಒಲವು ತೋರಿಸಿದರು. ದಲಿತರನ್ನು ಬೌದ್ಧ ಧರ್ಮಕ್ಕೆ ಪರಿವರ್ತಿಸಲು 'ಕರ್ನಾಟಕ ಬುದ್ಧ ಧರ್ಮ ಸಮಿತಿ' ಸ್ಥಾಪಿಸಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಹಿಂದೂ ಧರ್ಮದ ಕೊಳಕನ್ನು ಅದರ ಅನಾಗರಿಕ ನಡೆಯನ್ನು ಉಗ್ರವಾಗಿ ಖಂಡಿಸುತ್ತಿದ್ದರಲ್ಲದೆ, ಬೌದ್ಧ ಧರ್ಮದ ಮಹತ್ವ, ಪರಂಪರೆಯನ್ನು ದಲಿತ ಜನತೆಗೆ ಮನವರಿಕೆ ಮಾಡಿಕೊಟ್ಟರು. ಬೌದ್ಧಧರ್ಮ ಸ್ವೀಕರಿಸಿದ ಬಸವಲಿಂಗಪ್ಪನವರು ಹಿಂದುವಾಗಿ ಸಾಯಲಿಲ್ಲ. ಬೌದ್ಧರಾಗಿ ೨೬ ಡಿಸೆಂಬರ್ ೧೯೯೨ರಂದು ನಿಧನರಾದರು.

೪.೨೧. ಕೋಲಾರದ ಟಿ. ಚೆನ್ನಯ್ಯ

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಟಿ. ಚೆನ್ನಯ್ಯ ಅವರು ಪ್ರಮುಖರು. ಪ್ರಶ್ನಾತೀತ ರಾಷ್ಟ್ರೀಯ ನಾಯಕರಾದ ಇವರು ಸ್ವಾತಂತ್ರ್ಯ ಹೋರಾಟಗಾರರಾಗಿ, ಸಮಾಜ ಸೇವಕರಾಗಿ, ಸಂವಿಧಾನ ಕರಡು ರಚನಾ ಸಮಿತಿಯ ಸದಸ್ಯರಾಗಿ, ರಾಜ್ಯಸಭಾ ಸದಸ್ಯರಾಗಿ ಮೈಸೂರು ರಾಜ್ಯದ ಶಾಸಕರಾಗಿ, ಸಚಿವರಾಗಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಮತ್ತು ಬೆಂಗಳೂರು ನಗರಾಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ಐತಿಹಾಸಿಕ ಕಾರ್ಯಗಳನ್ನು ಮಾಡಿದ್ದಾರೆ.

ಟೈಲ್‌ತಿಮ್ಮಪ್ಪ ಮತ್ತು ತಿಮ್ಮಕ್ಕ ದಂಪತಿಗಳ ಮಗನಾದ ಟಿ. ಚೆನ್ನಯ್ಯ ಅವರು ೩ ಅಕ್ಟೋಬರ್ ೧೯೧೨ರಂದು ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಕೋಲಾರದಲ್ಲಿ ಆರಂಭಿಸಿದ ಚೆನ್ನಯ್ಯ ಅವರು ಮೆಟ್ರಿಕ್ಯೂಲೇಷನ್ ಮುಗಿಸಿದ ತರುವಾಯ ಮನೆಯ ಬಡತನದ ಕಾರಣ ಜೀವವಿಮಾ ಇಲಾಖೆಯಲ್ಲಿ ಗುಮಾಸ್ತ ಹುದ್ದೆಗೆ ಸೇರಿಕೊಂಡರು. ಗುಮಾಸ್ತರಾಗಿ ಸೇವೆ ಸಲ್ಲಿಸಿದ ಚೆನ್ನಯ್ಯ ಅವರು ಪದವೀಧರನಾಗಬೇಕೆಂಬ ಹಂಬಲದಿಂದ ತಮ್ಮ ಗುಮಾಸ್ತ

ಹುದ್ದೆಗೆ ರಾಜೀನಾಮೆ ನೀಡಿ, ತಾವು ಸಂಪಾದಿಸಿ ಕೂಡಿಟ್ಟ ಸಂಬಳದ ಹಣದಿಂದ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ತೆರಳಿ, ಬಿ.ಎಸ್ಸಿ ಪದವಿಯನ್ನು ಗಳಿಸಿದರು. ಮೈಸೂರು ಸಂಸ್ಥಾನದಲ್ಲಿ ಪ್ರಥಮ ಬಿ.ಎಸ್ಸಿ. ಪದವಿ ಪಡೆದ ದಲಿತನೆಂಬ ಕೀರ್ತಿಗೆ ಭಾಜನರಾದರು. ಪದವಿ ಶಿಕ್ಷಣದ ಸಂದರ್ಭದಲ್ಲಿ ಇವರ ಸಹಪಾಠಿಯಾಗಿದ್ದವರು ಮೈಸೂರಿನ ಮಹಾರಾಜರಾದ ಜಯಚಾಮರಾಜೇಂದ್ರ ಒಡೆಯರ್ ಎಂಬುದು ವಿಶೇಷ. ವಿದ್ಯಾಭ್ಯಾಸ ಮುಗಿದ ತರುವಾಯ ಅಂದಿನ ಮೈಸೂರು ಸಂಸ್ಥಾನದ ದಿವಾನರಾಗಿದ್ದ ರಾಮಸ್ವಾಮಿ ಮೊದಲಿಯಾರ್ ಅವರನ್ನು ಭೇಟಿಯಾದಾಗ ಇವರಿಗೆ ಸ್ಪೆಷಲ್ ಆಫೀಸರ್ ಹುದ್ದೆ ನೀಡಿ ಚಿಕ್ಕಮಗಳೂರು ಜಿಲ್ಲೆಗೆ ನೇಮಕ ಮಾಡಿದರು. ಎರಡು ವರ್ಷಗಳ ಕಾಲ ಸೇವೆ ಸಲ್ಲಿಸಿದ ಚೆನ್ನಯ್ಯ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ೧೯೪೬ರಿಂದ ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ಮಾಕಳಿದುರ್ಗ, ವಿದುರಾಶ್ವತ್ಥ ಚಳವಳಿಗಳಲ್ಲಿ ಭಾಗವಹಿಸಿದ ಇವರು ಅನೇಕ ಬಾರಿ ಜೈಲು ಶಿಕ್ಷೆಗೆ ಗುರಿಯಾದರು. ಕರ್ನಾಟಕ ಏಕೀಕರಣ ಹಾಗೂ ಗೋವಾ ವಿಮೋಚನಾ ಚಳವಳಿಗಳಲ್ಲಿಯೂ ಭಾಗವಹಿಸಿ ಜನಮನ್ನಣೆಗೆ ಪಾತ್ರರಾದರು.

ಗಾಂಧೀಜಿಯವರ ಕಟ್ಟಾ ಅನುಯಾಯಿಗಳಾಗಿದ್ದ ಚೆನ್ನಯ್ಯ ಅವರು ಮೈಸೂರು ಸಂಸ್ಥಾನದ ಹರಿಜನ-ಗಿರಿಜನ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ಗಾಂಧೀಜಿಯವರು ವಿಶ್ರಾಂತಿಗೆಂದು ನಂದಿ ಬೆಟ್ಟಕ್ಕೆ ಬಂದಿದ್ದ ಸಂದರ್ಭದಲ್ಲಿ ಅವರನ್ನು ಕೋಲಾರದ ಗಾಂಧೀ ನಗರಕ್ಕೆ ಕರೆತಂದು ಅಲ್ಲಿನ ಜನರಿಗೆ ಭೇಟಿ ಮಾಡಿಸಿದರು. ಆಚಾರ್ಯ ವಿನೋಭಾ ಭಾವೆಯವರ ಭೂದಾನ ಚಳವಳಿಯಲ್ಲೂ ಭಾಗವಹಿಸಿದ್ದರು. ೧೯೫೦-೫೧ರಲ್ಲಿ ರಾಜ್ಯಸಭಾ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾದರು. ಚೆನ್ನಯ್ಯ ಅವರು ಸಂಸತ್ ಸದಸ್ಯರಾಗಿದ್ದಾಗ ರಾಜ್ಯ ಸಭೆಯಲ್ಲಿ ಈ ದೇಶದ ಶೋಷಿತ ವರ್ಗಗಳಿಗೆ ಆಗುತ್ತಿರುವ ಅನ್ಯಾಯವನ್ನು ಕುರಿತು ಸುದೀರ್ಘವಾದ ಭಾಷಣವನ್ನು ಮಂಡಿಸಿದಾಗ ಅಂದಿನ ಪ್ರಧಾನಿಗಳಾದ ನೆಹರು ಅವರಿಂದ ಮೆಚ್ಚುಗೆಗೆ ಪಾತ್ರರಾದರು. ಡಾ. ಬಿ.ಆರ್. ಅಂಬೇಡ್ಕರ್ ಅವರ ಆತ್ಮೀಯ ಒಡನಾಡಿಗಳಾಗಿದ್ದ ಇವರು ಸಂವಿಧಾನ ರಚನೆಯ ಸಂದರ್ಭದಲ್ಲಿ ಮಹತ್ವದ ಪಾತ್ರ ನಿರ್ವಹಿಸಿದ್ದರು. ಆಂಧ್ರಪ್ರದೇಶದ ಸಚಿವರಾಗಿ ಕೆಲಸ ಮಾಡಲು ಆಹ್ವಾನ ಬಂದಾಗ ನಯವಾಗಿ ತಿರಸ್ಕರಿಸಿದ ಇವರು ೧೯೫೨ರಲ್ಲಿ ಪ್ರಥಮ ಬಾರಿಗೆ ಮುಳಬಾಗಿಲು ಮೀಸಲು ಕ್ಷೇತ್ರದಿಂದ ಅವಿರೋಧವಾಗಿ ವಿಧಾನಸಭೆಗೆ ಆಯ್ಕೆಯಾದರು. ಮೈಸೂರು ರಾಜ್ಯದ ಮುಖ್ಯಮಂತ್ರಿಯಾಗಿದ್ದ ಕೆಂಗಲ್ ಹನುಮಂತಯ್ಯನವರು ಕೋಲಾರಕ್ಕೆ ಖುದ್ದಾಗಿ ಬಂದು ಆತ್ಮೀಯ ಸ್ನೇಹಿತರಾದ ಟಿ. ಚೆನ್ನಯ್ಯನವರನ್ನು ತಮ್ಮ ಜೊತೆಯಲ್ಲಿಯೇ ಬೆಂಗಳೂರಿಗೆ ಕರೆತಂದು, ಸಚಿವ ಸ್ಥಾನ ನೀಡಿ ಸಂಪುಟಕ್ಕೆ ಸೇರಿಸಿಕೊಳ್ಳುವ ಮೂಲಕ ಗೌರವಿಸಿದರು.

ಆರೋಗ್ಯ, ಪೌರಾಡಳಿತ, ಅಬಕಾರಿ, ಅರಣ್ಯ, ಯೋಜನೆ, ವ್ಯವಸಾಯ, ಗೃಹರಕ್ಷಕದಳ ಹಾಗೂ ಬಂದೀಖಾನೆ ಸಚಿವರಾಗಿದ್ದ ಟಿ. ಚೆನ್ನಯ್ಯ ಅವರು ಹಲವಾರು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ. ಸಾವಿರಾರು ಜನ ಬಡವರಿಗೆ ಉದ್ಯೋಗದ ಅವಕಾಶಗಳನ್ನು ಕಲ್ಪಿಸಿದ್ದಾರೆ.

ಕೆಂಗಲ್ ಹನುಮಂತಯ್ಯನವರು ವಿಧಾನಸೌಧವನ್ನು ಕಟ್ಟಿಸುವ ಸಂದರ್ಭದಲ್ಲಿ ಮಹತ್ವದ ಪಾತ್ರ ನಿರ್ವಹಿಸಿದ್ದಾರೆ. ವಿಧಾನಸೌಧದ ಮಾದರಿಯಲ್ಲಿ ದಲಿತ ವಿದ್ಯಾರ್ಥಿಗಳಿಗಾಗಿ ಕೋಲಾರದ 'ನಚಿಕೇತಾನಿಲಯ' ಹಾಗೂ ಮೈಸೂರಿನ ಅಶೋಕಪುರಂನಲ್ಲಿ 'ಸಿದ್ಧಾರ್ಥನಿಲಯ' ಹಾಸ್ಟೆಲ್‌ಗಳನ್ನು ಕಟ್ಟಿಸಿದರು. ಸುಸಜ್ಜಿತವಾದ ಹಲವಾರು ಹೊಸನಗರ, ಬಡಾವಣೆ, ಮಾರುಕಟ್ಟೆ ಹಾಗೂ ಉದ್ಯಾನವನಗಳನ್ನು ನಿರ್ಮಿಸಿದ ಇವರು ಅನೇಕ ವಿದ್ಯಾರ್ಥಿನಿಲಯಗಳು, ಕುಡಿಯುವ ನೀರಿನ ವ್ಯವಸ್ಥೆ, ನೀರು ಸರಬರಾಜು ಕೇಂದ್ರಗಳು ಮುನಿಸಿಪಾಲ್ ಬಸ್‌ಸ್ಟ್ಯಾಂಡ್‌ಗಳು, ಮಾರ್ಕೆಟ್‌ಗಳು, ಗ್ರಾಮಾಂತರ ಪೋಲೀಸ್ ಠಾಣೆಗಳು, ಮಕ್ಕಳ ಆಟದ ಮೈದಾನಗಳು, ಸೇತುವೆಗಳು, ನಿರಾಶ್ರಿತರಿಗೆ ಮನೆಗಳು ಮುಂತಾದ ಸೌಕರ್ಯಗಳನ್ನು ಒದಗಿಸಿದ್ದಾರೆ. ಅನೇಕ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕಲ್ಪಿಸಿಕೊಟ್ಟ ಕಾರಣ ಇವರನ್ನು ಜನ 'ಕರೆಂಟ್ ಚೆನ್ನಯ್ಯ' ಎಂದು ಕರೆಯುತ್ತಿದ್ದುದ್ದುಂಟು. ಚೆನ್ನಯ್ಯನವರು ರಾಜಕಾರಣ ಎಂಬುದು ಜನರ ಸೇವೆ ಮಾಡಲು ಇರುವ ಮಹತ್ವದ ಅವಕಾಶ ಎಂದು ನಂಬಿದ್ದವರು.

ಕೋಲಾರಕ್ಕೆ ಮಾರ್ಕಾಂಡೇಯ ಡ್ಯಾಂ ಹಾಗೂ ಕಾವೇರಿ ನೀರು ಸರಬರಾಜು ಮಾಡಲು ಸರ್ವೆ ಮಾಡಿಸಿ ಯೋಜನಾ ಪಟ್ಟಿಯನ್ನು ತಯಾರಿಸಿ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಿ, ಹಣಕಾಸು ಒಪ್ಪಿಗೆಯನ್ನು ಪಡೆದಿದ್ದರು. ದಲಿತ ಸಚಿವರಾದ ಚೆನ್ನಯ್ಯನವರು ಜನಪ್ರಿಯ ರಾಗುತ್ತಾರೆಂದು ಕೆಲವು ರಾಜಕಾರಣಿಗಳು ಕುತಂತ್ರದಿಂದ ಆ ಯೋಜನೆ ಕಾರ್ಯಗತವಾಗದ ಹಾಗೆ ನೋಡಿಕೊಂಡರು.

ಚೆನ್ನಯ್ಯ ಅವರನ್ನು 'ಕೋಲಾರ ನಗರ ನಿರ್ಮಾತೃ' ಎಂಬುದಾಗಿಯು ಕರೆಯುತ್ತಾರೆ. ೧೯೬೭ರಿಂದ ೧೯೭೨ರವರೆಗೆ ವಿಧಾನಸಭಾ ಸದಸ್ಯರಾಗಿದ್ದ ಇವರು, ೧೯೭೦ರಿಂದ ೧೯೭೨ರವರೆಗೆ ಬೆಂಗಳೂರು ನಗರಾಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ಐತಿಹಾಸಿಕ ಸೇವೆ ಸಲ್ಲಿಸಿದ್ದಾರೆ. ಈ ಅವಧಿಯಲ್ಲಿ ಸಾವಿರಾರು ಜನರಿಗೆ ನಿವೇಶನಗಳನ್ನು ಕೊಟ್ಟು ಹೌಸಿಂಗ್ ಬೋರ್ಡಿನಿಂದ ಅಸಂಖ್ಯಾತ ಜನರಿಗೆ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ.[೨೯]

ಕೃಷಿಯ ಬಗೆಗೆ ಅಪಾರ ಒಲವಿದ್ದ ಚೆನ್ನಯ್ಯನವರು ಬಿಡುವಿನ ವೇಳೆಯಲ್ಲಿ ತಮ್ಮ ಹೊಲದಲ್ಲಿ ವ್ಯವಸಾಯ ಮಾಡುತ್ತಿದ್ದರು. ಊರಿನ ಬಡಮಕ್ಕಳಿಗೆ ಸ್ನಾನ ಮಾಡಿಸುವುದು, ಅವರ ಬಟ್ಟೆಗಳನ್ನು ಒಗೆದು ಕೊಡುವುದು, ಉಚಿತವಾಗಿ ಪಾಠ ಹೇಳಿಕೊಡುವುದು ಇವರ ನೆಚ್ಚಿನ ಕಾಯಕಗಳಾಗಿದ್ದವು. ಹೀಗೆ ರಾಜಕಾರಣಿಯಾಗಿ, ಸಮಾಜ ಸೇವಕರಾಗಿ, ಬಡವರ ಬಂಧುವಾಗಿ ತಮ್ಮ ಜೀವಮಾನವಿಡೀ ದುಡಿದ ಟಿ. ಚೆನ್ನಯ್ಯನವರು ೧೮ ಜನವರಿ ೧೯೮೫ರಂದು ನಿಧನರಾದರು.

೪.೨೨. ಲೋಕಸೇವಾನಿರತ ಎಂ. ಹನುಮಂತಯ್ಯ

ಇವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲದಲ್ಲಿ ದಲಿತ ಕುಟುಂಬದಲ್ಲಿ ಮಾರಯ್ಯನವರ ಏಕೈಕ ಪುತ್ರರಾಗಿ ೧೮೮೭ರಲ್ಲಿ ಜನಿಸಿದರು.

ಎಂ. ಹನುಮಂತಯ್ಯನವರ ತಂದೆ ಮಾರಯ್ಯನವರು ಆ ಕಾಲದಲ್ಲೇ ನೆಲಮಂಗಲದಲ್ಲಿ ದೊಡ್ಡ ಜಮೀನ್ದಾರರಾಗಿದ್ದರು. ನೆಲಮಂಗಲದಲ್ಲಿದ್ದ ತಮ್ಮ ದಲಿತ ಸಮುದಾಯದವರ ಕುಂದುಕೊರತೆಗಳನ್ನು ನಿವಾರಿಸುವುದರ ಮೂಲಕ ಮಾರಯ್ಯನವರ ಮನೆತನ ಹೆಸರುವಾಸಿಯಾಗಿತ್ತು. ಆದರೂ ಅವರು ಮಗನಿಗೆ ಶಿಕ್ಷಣ ಕೊಡಸಲಿಕ್ಕಾಗದೆ ಪರಿತಪಿಸುತ್ತಿದ್ದರು. ಏಕೆಂದರೆ ಆ ಕಾಲದಲ್ಲಿ ಅಸ್ಪೃಶ್ಯರನ್ನು ಸಾರ್ವಜನಿಕ ಸ್ಥಳಗಳಿಗೆ, ಶಾಲೆಗೆ ಪ್ರವೇಶ ನೀಡುತ್ತಿರಲಿಲ್ಲವಾದ್ದರಿಂದ ದಲಿತರಿಗೆ ಶಿಕ್ಷಣ ಎಂಬುದು ಗಗನ ಕುಸುಮವಾಗಿತ್ತು. ಅಸ್ಪೃಶ್ಯರು ಮೇಲ್ವರ್ಗದವರ ಕಪಿಮುಷ್ಠಿಯಲ್ಲೇ ಜೀವಂತ ಶವವಾಗಿ ಬದುಕುತ್ತಿದ್ದರು. ಇಂತಹ ಪರಿಸ್ಥಿತಿಯಲ್ಲಿ ಹನುಮಂತಯ್ಯನವರು ಕೇವಲ ಪ್ರಾಥಮಿಕ ಶಿಕ್ಷಣವನ್ನಷ್ಟೇ ಪಡೆಯಲು ಸಾಧ್ಯವಾಯಿತು.

ಇವರು ದಲಿತ ಸಮುದಾಯದವರ ಗುಡಿಸಲುಗಳಲ್ಲಿ ವಾಸಿಸುತ್ತಾ ರೋಗರುಜಿನಗಳಿಂದ ಕಷ್ಟಕರವಾದ ಜೀವನವನ್ನು ಸಾಗಿಸುತ್ತಿದ್ದನ್ನು ಕಣ್ಣಾರೆ ಕಂಡು ಮರುಗುತ್ತಿದ್ದರು. ಮದ್ಯಪಾನ, ಬಸವಿಪದ್ಧತಿ, ಬಾಲ್ಯವಿವಾಹಗಳಂತಹ ಅನಾಗರಿಕ ಪ್ರವೃತ್ತಿಗಳ ಸಂಕೋಲೆಯೊಳಗೆ ಸಿಲುಕ್ಕಿದ್ದ ತನ್ನ ಸಮುದಾಯವನ್ನು ಅವುಗಳಿಂದ ದೂರ ಮಾಡುವ ಸಂಕಲ್ಪ ಮಾಡಿ, ಧೈರ್ಯದಿಂದ ಈ ಸಮಾಜ ಸುಧಾರಣೆಯ ಕಾರ್ಯದಲ್ಲಿ ತೊಡಗಿಕೊಂಡರು. ಹುಲ್ಲುಗುಡಿಸಲು, ಜೋಪಡಿಗಳು ಬೆಂಕಿ ಮಳೆಗೆ ಆಹುತಿಯಾಗಿ ಅದೆಷ್ಟೋ ದಲಿತ ಕುಟುಂಬಗಳು ಸರ್ವನಾಶವಾಗಿದ್ದನ್ನು ನೋಡಿದ್ದ ಹನುಮಂತಯ್ಯನವರು ಮಣ್ಣಿನ ಗೋಡೆಗಳನ್ನು ನಿರ್ಮಿಸಲು ಸಹಾಯ ಮಾಡಿದರು. ಮರದ ಬಾಗಿಲುಗಳುಳ್ಳ ಮನೆಗಳನ್ನು, ಕುಡಿಯುವ ನೀರಿನ ಬಾವಿಗಳನ್ನು ಸರ್ಕಾರದ ಮೂಲಕ ನಿರ್ಮಾಣ ಮಾಡಿಸುವಲ್ಲಿ ಯಶಸ್ವಿಯಾದರು. ಅವರು ನೆಲಮಂಗಲದಲ್ಲಿ ದಲಿತರಿಗಾಗಿ ಮಾದರಿ ಮನೆಗಳನ್ನು ನಿರ್ಮಿಸಿದರು.

ಬೆಂಗಳೂರು ನಗರದ ದೊಡ್ಡಪಾಳ್ಯ, ಉಕ್ಕಡಪಾಳ್ಯ, ಗುಟ್ಟಹಳ್ಳಿ ಮುಂತಾದ ಕಡೆಗಳಲ್ಲಿ ವಾಸಿಸುತ್ತಿದ್ದ ದಲಿತ ಕೇರಿಗಳಿಗೆ ಭೇಟಿ ನೀಡಿ ಅಲ್ಲಿನ ದಲಿತ ಮುಖಂಡರೊಂದಿಗೆ ಚರ್ಚಿಸಿ ದಲಿತರ ಸಮಸ್ಯೆಗಳ ಪರಿಹಾರಕ್ಕಾಗಿ ಚಿಂತನೆ ನಡೆಸುತ್ತಿದ್ದರು. ಅವರು ನೆಲಮಂಗಲದ ಪುರಸಭೆಯ ಸದಸ್ಯರಾಗಿ ಅನೇಕ ಸಾರ್ವಜನಿಕ ಉಪಯೋಗ ಕಾರ್ಯಗಳನ್ನು ಮಾಡಿದರು. ಎಲ್ಲ ರಾಜಕೀಯ ಪಕ್ಷದವರಿಗೂ ಆಕರ್ಷಕ ವ್ಯಕ್ತಿ ಎನಿಸಿದ್ದ ಅವರು ದಲಿತರಿಂದ ಮಾತ್ರವಲ್ಲದೆ ಸಾರ್ವಜನಿಕರಿಂದಲೂ ಪುರಸ್ಕೃತಗೊಂಡವರಾಗಿದ್ದರು.

ಇವರ ನಿರಂತರ ಜನಸೇವೆ ಮೈಸೂರು ಮಹಾರಾಜರ ಗಮನಕ್ಕೆ ಬಂದು ಪ್ರಥಮ ದರ್ಜೆಯ ಸಾರ್ವಜನಿಕ ಸೇವಾ ಪದಕವನ್ನು ಕರುಣಿಸಿ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಸದಸ್ಯರನ್ನಾಗಿ ಜಯಚಾಮರಾಜೇಂದ್ರ ಒಡೆಯರ್ ಅವರು ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿಸಭೆಗೆ ನಾಮಕರಣ ಮಾಡಿದ್ದರು. ಹನುಮಂತಯ್ಯನವರು ರಾಜ್ಯಾಂಗ ರಚನಾಸಭೆಯ ನ್ಯಾಯ ವಿಧಾಯಕ ಸಭೆಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. ಇವರು ಮೈಸೂರು ರಾಜ್ಯ ಆದಿಜಾಂಬವಾಭಿವೃದ್ಧಿ ಸಂಘದ ಸಂಸ್ಥಾಪಕ ಸದಸ್ಯರಾಗಿ, ಅಧ್ಯಕ್ಷರಾಗಿ ಅಧಿಕಾರ ನಡೆಸಿದರು. ಹಳ್ಳಿಗಳಲ್ಲಿ ದಲಿತರಿಗೆ ದೇವಸ್ಥಾನ, ಕುಡಿಯುವ ನೀರಿನ ಬಾವಿ, ಶಾಲೆಗಳಿಗೆ

ಪ್ರವೇಶ ಇಲ್ಲದ ಆ ಸಂದರ್ಭದಲ್ಲಿಯೆ ಎಂ. ಹನುಮಂತಯ್ಯನವರು ಅರಮನೆ ಪ್ರವೇಶಿಸುತ್ತಿದ್ದರು. ನೆಲಮಂಗಲದ ದಲಿತ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ದಯಾನಂದ ವಸತಿ ನಿಲಯವನ್ನು ಪ್ರಪ್ರಥಮ ಬಾರಿಗೆ ಸ್ಥಾಪಿಸಿ ಹಾಸ್ಟೆಲಿನ ಸಂಸ್ಥಾಪಕ ಅಧ್ಯಕ್ಷರಾಗಿದ್ದರು. ವಸತಿ ನಿಲಯದ ಪೋಷಣೆಗಾಗಿ ೬೦ ಸಾವಿರ ರೂಪಾಯಿಗಳನ್ನು ದಾನವಾಗಿ ನೀಡಿದ್ದರು. ನೆಲಮಂಗಲದಲ್ಲಿ ಕಲ್ಯಾಣ ಮಂಟಪವೊಂದನ್ನು ನಿರ್ಮಿಸಿ ಶೋಷಿತ ಸಮುದಾಯಗಳ ವಿವಾಹ ಕಾರ್ಯಗಳು ನೆರವೇರಲು ಸಹಾಯ ಮಾಡಿದರು.[೫೦]

ಇಂತಹ ನಿಸ್ವಾರ್ಥ, ದಲಿತ ನಾಯಕ ಯಾವ ಮುಲಾಜಿಗೂ ಹೆದರದೆ ಕಂಡಿದ್ದನ್ನು ನೇರವಾಗಿ ಮಾತಾಡುವ, ದಲಿತ ವಿರೋಧಿಗಳನ್ನು ತರಾಟೆ ತೆಗೆದುಕೊಳ್ಳುತ್ತಿದ್ದು, ತಮ್ಮ ಮಾತಿನಿಂದಲೇ ಸರ್ಕಾರಿ ಅಧಿಕಾರಿಗಳಿಗೆ ಅಂಕುಶ ಹಾಕುತ್ತಿದ್ದರು. ಹನುಮಂತಯ್ಯನವರ ಈ ಸೇವೆಯನ್ನು ಗುರುತಿಸಿ ನೆಲಮಂಗಲದಲ್ಲಿ 'ಲೋಕಸೇವಾನಿರತ ಎಂ. ಹನುಮಂತಯ್ಯ ಸರ್ಕಲ್' ಎಂಬ ಹೆಸರಿಟ್ಟು ಅವರನ್ನು ಜ್ಞಾಪಿಸುವಂತೆ ಮಾಡಿರುವುದು ಅಭಿನಂದನಾರ್ಹವಾಗಿದೆ.

ಒಟ್ಟಾರೆಯಾಗಿ ಮೊದಲ ತಲೆಮಾರಿನ ಶಿಕ್ಷಣವಂತರು ಸ್ವಾತಂತ್ರಪೂರ್ವದಲ್ಲಿ ಶಿಕ್ಷಣ ಪಡೆದು ಜಾಗೃತರಾಗಿ ತಮ್ಮ ಸಮುದಾಯದ ಬದುಕು ಬವಣೆಯನ್ನು ನಿವಾರಿಸುವ ಮುಖೇನ ಸಂಸ್ಕೃತಿಯ ಬದಲಾವಣೆಯನ್ನು ಬಯಸಿದರು. ಸಾಮಾಜಿಕವಾಗಿ ಪ್ರತ್ಯೇಕಿಸಲ್ಪಟ್ಟ ದಲಿತರು ಪಡೆದ ಅತ್ಯಲ್ಪ ಶಿಕ್ಷಣದಿಂದ ಅಂದಿನ ಪರಿಸ್ಥಿತಿ, ಬದುಕಿನ ಬಗ್ಗೆ ಆಲೋಚಿಸಲು ಆರಂಭಿಸಿದರು. ತಮಗೆ ನಿರಾಕರಿಸಲ್ಪಟ್ಟ ಮಾನವೀಯ ಹಕ್ಕು, ಶಿಕ್ಷಣ, ಸಮಾನತೆ, ಸ್ವಾತಂತ್ರ್ಯದ ನ್ಯಾಯಯುತ ಬೇಡಿಕೆಯೊಂದಿಗೆ ಹೋರಾಟ ನಡೆಸಲು ಮುಂದಾದರು. ದಲಿತರು ಒಗ್ಗೂಡಿ ಸಂಘಟಿತ ಹೋರಾಟ ನಡೆಸಿದರೆ ಮಾತ್ರ ಉದ್ದೇಶಿತ ಗುರಿ ಸಾಧಿಸಲು ಸಾಧ್ಯವೆಂದರಿತವರು. ಸಂಘಟನೆಯ ಮೂಲಕವೇ ಶಿಕ್ಷಣ, ಕುಡಿಯುವ ನೀರು, ರಸ್ತೆ ಮತ್ತು ದೇವಾಲಯ ಪ್ರವೇಶದ ಹಕ್ಕುಗಳಿಗಾಗಿ ಸವರ್ಣೀಯರ ವಿರುದ್ಧ ಹೋರಾಟ ನಡೆಸಿದರು. ಈ ಹಲವಾರು ಹೋರಾಟಗಳಿಂದ ಪ್ರಭಾವಿತರಾದ ಮತ್ತು ದಲಿತ ನಾಯಕರಿಂದ ಸ್ಫೂರ್ತಿಗೊಂಡು ದಲಿತ ಸಮುದಾಯ ಜಾಗೃತಿ ಹೊಂದಿ, ಸಂಘಟನೆಗಳ ಮೂಲಕ ಹೋರಾಟಕ್ಕೆ ಮುಂದಾದರು.

ನಾಲ್ವಡಿ ಕೃಷ್ಣರಾಜ ಒಡೆಯರ್, ಗೋಪಾಲಸ್ವಾಮಿ ಅಯ್ಯರ್ ಹಾಗೂ ಅನೇಕ ದಲಿತೇತರ ಗುರುಗಳ ಪ್ರೀತಿ ಸಹಕಾರದಿಂದ ಕೆಲವರು ಮರಳಿನ ಮೇಲೆ ಅಕ್ಷರ ಕಲಿತರು. ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದ ದಲಿತ ಜನಾಂಗದವರಲ್ಲಿ ಕೆಲವು ಅಕ್ಷರಸ್ಥರಾಗಲು ಮುಂದಾದರು. ಕ್ರೂರ ಜಾತಿ ವ್ಯವಸ್ಥೆಯ ತಿರಸ್ಕಾರ, ನಿರಂತರ ಅಪಮಾನಗಳ ನಡುವೆಯೂ ಕೂಡ ಅಯ್ಯರ್ ಅವರ ಪ್ರೇರಣೆಯಿಂದ ಕಲಿತು ಜಾಗೃತರಾಗಿ ಮೌಢ್ಯತೆಯ ವಿರುದ್ಧ ಹೋರಾಡುತ್ತಲೇ ತಮ್ಮ ಸಮುದಾಯವನ್ನು ಜಾಗೃತಿಗೊಳಿಸಿ ವೈಚಾರಿಕತೆಯನ್ನು ಬೆಳೆಸುವತ್ತ ದಲಿತ ಶಿಕ್ಷಣ ಪಡೆದ ಮಹನೀಯರು ಮುಂದಾದರು. ಶಿಕ್ಷಣ ಪಡೆದ ಅನೇಕ ದಲಿತರು ಪ್ರಾಥಮಿಕ ಶಾಲೆ ಶಿಕ್ಷಕರಾಗಿ, ಜವಾನರಾಗಿ, ಪೋಲೀಸರಾಗಿ, ಇನ್ನು ಹಲವಾರು ಇಲಾಖೆಗಳಲ್ಲಿ ನೌಕರಿಗೆ ಸೇರಿ ಸಮಾಜದಲ್ಲಿ

ಮುಖ್ಯವಾಹಿನಿಗೆ ಬಂದು ಎಲ್ಲರಂತೆ ಬದುಕುವ ಜೀವನ ರೂಪಿಸಿಕೊಂಡರು. ಶಿಕ್ಷಣ ಪಡೆದ ದಲಿತರು ತಮ್ಮ ಜನಾಂಗದ ಅಭಿವೃದ್ಧಿ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಈ ಎಲ್ಲಾ ಹಿನ್ನೆಲೆಯಲ್ಲಿ ಪ್ರಥಮ ತಲೆಮಾರಿನ ಶಿಕ್ಷಣ ಪಡೆದ ಸ್ವಾತಂತ್ರ್ಯಪೂರ್ವದ ದಲಿತ ಹೋರಾಟಗಾರರ ಜೀವನ, ಸಾಧನೆ ಮತ್ತು ಅವರ ಅಸ್ಪೃಶ್ಯತಾ ನಿವಾರಣ ಹೋರಾಟಗಳು, ದಲಿತರಿಗಾಗಿ ಮಾಡಿದ ಸೇವೆ, ಕಾರ್ಯಗಳನ್ನು ಚರಿತ್ರೆಯಿಂದ ದೂರ ಉಳಿದಿರುವ ಸಂದರ್ಭದಲ್ಲಿ ಅವುಗಳನ್ನು ಚಾರಿತ್ರಿಕ ನೆಲೆಯಲ್ಲಿ ಕಟ್ಟುವ ಅನಿವಾರ್ಯತೆಯಿದೆ. ಇಂದಿನ ಯುವಪೀಳಿಗೆಗೆ ಆ ಮಹನೀಯರ ಜೀವನ ಚರಿತ್ರೆಯು ಬೌದ್ಧಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದರ ಜೊತೆಗೆ ಉತ್ತಮ ಜೀವನಕ್ಕೆ ಪ್ರೇರಣೆಯಾಗಬಲ್ಲವುಗಳಾಗಿವೆ.

ಕೊನೆ ಟಿಪ್ಪಣಿಗಳು

೧. ವಕ್ತೃವಿವರ: ಕೃಷ್ಣದಾಸ್, ವಯಸ್ಸು-೬೦, ಹಿರಿಯ ದಲಿತ ಹೋರಾಟಗಾರರು, ಹಾಸನ.

೨. ವಕ್ತೃವಿವರ: ಪದ್ಮನಾಭ, ವಯಸ್ಸು-೬೫, ಹಿರಿಯ ದಲಿತ ಹೋರಾಟಗಾರರು, ಶಿವಮೊಗ್ಗ.

೩. ವಕ್ತೃವಿವರ: ಶಂಕರಪ್ಪ, ವಯಸ್ಸು-೫೫, ಹೈಕೋರ್ಟ್ ನ್ಯಾಯವಾದಿಗಳು ಹಾಗೂ ಸಾಹಿತಿಗಳು, ಬೆಂಗಳೂರು.

೪. ವಕ್ತೃವಿವರ: ನಾಗರಾಜ್ ಹೆತ್ತೂರು, ವಯಸ್ಸು-೪೦, ಲೇಖಕರು ಹಾಗೂ ಪತ್ರಕರ್ತರು, ಹಾಸನ.

೫. ವಕ್ತೃವಿವರ: ರಾಜಮ್ಮ(ಟಿ.ಎ. ದಾಸಪ್ಪನವರ ಪತ್ನಿ), ವಯಸ್ಸು-೮೦, ದಲಿತ ನಾಯಕರು, ತಿಪಟೂರು.

೬. ಕವಿತಾ ಕೃಷ್ಣ, ೨೦೦೧, ಸರ್ವೋದಯ ಕಿರಣ, ಟಿ.ಎ. ದಾಸಪ್ಪ, ರಾಜಶ್ರೀ ಪ್ರಕಾಶನ, ತುಮಕೂರು, ಪುಟ ೩೫-೩೬.

೭. ಶಾರದ ಶಂಕರ್, ೨೦೧೧, ಮಗಳ ನೆನಪಿನಾಳದಲ್ಲಿ ಆರ್.ಸಿ., ಆಟದ ಬುಕ್ ಹೌಸ್, ಬೆಂಗಳೂರು, ಪುಟ ೨೨.

೮. ಅದೇ, ಪುಟ ೨೪.

೯. ಅದೇ, ಪುಟ ೨೫.

೧೦. ವಕ್ತೃವಿವರ: ತಿಮ್ಮಣ್ಣ, ವಯಸ್ಸು-೪೦, ಶಿಕ್ಷಕರು, ಗುಬ್ಬಿ.

೧೧. ವಕ್ತೃವಿವರ: ಚಲುವರಾಜು, ವಯಸ್ಸು-೪೦, ಡಿ.ಎಸ್.ಎಸ್. ಮುಖಂಡರು, ಹಾಸನ.

೧೨. ಭರಂಪುರ ಕಣುಮಪ್ಪ, ಮಾತಂಗ ಸಮಾಜದ ದಿಗ್ದರ್ಶಕರು, ಆದಿಜಾಂಬವ ವಿದ್ಯಾಭಿವೃದ್ಧಿ ಟ್ರಸ್ಟ್, ೨೦೧೦, ಬೆಂಗಳೂರು, ಪುಟ ೪೨.

೧೩. ಚಿನ್ನಸ್ವಾಮಿ ಸೋಸಲೆ ಎನ್.(ಸಂ), ಕರ್ನಾಟಕದ ಸಮಗ್ರ ದಲಿತ ಚರಿತ್ರೆ, ನವಕರ್ನಾಟಕ ಪ್ರಕಾಶನ, ೨೦೧೬, ಬೆಂಗಳೂರು, ಪುಟ ೧೫೦.

೧೪. ಭರಂಪುರ ಕಣುಮಪ್ಪ, ೨೦೧೦, ಮಾತಂಗ ಸಮಾಜದ ದಿಗ್ದರ್ಶಕರು, ಆದಿಜಾಂಬವ ವಿದ್ಯಾಭಿವೃದ್ಧಿ ಟ್ರಸ್ಟ್, ಬೆಂಗಳೂರು, ಪುಟ ೬೪.

೧೫. ದಲಿತ ಚಳವಳಿ, **ದಲಿತರ ಅನನ್ಯತೆ ಮತ್ತು ಭಾರತೀಯ ಸ್ವಾತಂತ್ರ್ಯ ಹೋರಾಟ,** ೧೮೮೫-೧೯೪೭, ಮಹೇಶ್ ಕುಮಾರ್, ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಪಿಎಚ್.ಡಿ.ಗೆ ಸಲ್ಲಿಸಿದ ಮಹಾಪ್ರಬಂಧ, ಪುಟ ೧೯೮.

೧೬. ಚಿನ್ನಸ್ವಾಮಿ ಸೋಸಲೆ ಎನ್.(ಸಂ), ೨೦೧೬, **ಕರ್ನಾಟಕದ ಸಮಗ್ರ ದಲಿತ ಚರಿತ್ರೆ,** ಪುಟ ೧೧೩-೧೧೪.

೧೭. ವಕ್ತೃವಿವರ: ಸಿದ್ದಯ್ಯ, ವಯಸ್ಸು-೫೮, **ಸರ್ಕಾರಿ ನೌಕರರು,** ಚಿತ್ರದುರ್ಗ.

೧೮. ಚಿನ್ನಸ್ವಾಮಿ ಸೋಸಲೆ ಎನ್.(ಸಂ), **ಕರ್ನಾಟಕದ ಸಮಗ್ರ ದಲಿತ ಚರಿತ್ರೆ,** ೨೦೧೬, ಪುಟ ೧೧೦.

೧೯. ಬಸವರಾಜು ಕೆ.ಆರ್., ೨೦೧೪, **ಕರ್ನಾಟಕದ ಪ್ರಥಮ ದಲಿತ ಮಂತ್ರಿ ಆರ್. ಚನ್ನಿಗರಾಮಯ್ಯ ಅವರ ಜೀವನ ಸಾಧನೆ,** ದಲಿತ ಅಭಿವೃದ್ಧಿ ಸಂಸ್ಥೆ, ಹೊಸಪೇಟೆ, ಪುಟ ೪.

೨೦. ಅದೇ, ಪುಟ ೭.

೨೧. ಅದೇ, ಪುಟ ೧೨.

೨೨. ಅದೇ, ಪುಟ ೧೮-೨೦.

೨೩. ಅದೇ, ಪುಟ ೪೯.

೨೪. ಚಿನ್ನಸ್ವಾಮಿ ಸೋಸಲೆ ಎನ್., ೨೦೧೩, **ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೨೦೦೦.

೨೫. ಅದೇ, ಪುಟ ೨೦೬.

೨೬. ಅದೇ, ಪುಟ ೨೩೩-೨೩೪.

೨೭. ಚಿನ್ನಸ್ವಾಮಿ ಸೋಸಲೆ ಎನ್.(ಸಂ), ೨೦೧೬, **ಧೀಮಂತ ಕ್ರಾಂತಿಕಾರಿ ಬಿ. ಬಸವಲಿಂಗಪ್ಪ ಸಂಸ್ಮರಣ ಸಂಪುಟ,** ಕ್ರಾಂತಿಕಾರಿ ಬಿ. ಬಸವಲಿಂಗಪ್ಪ ಜಯಂತಿ ಆಚರಣಾ ಸಮಿತಿ(ರಿ) ಪ್ರಕಾಶನ, ಬೆಂಗಳೂರು, ಪುಟ ೨೮೮-೨೯೦.

೨೮. ಅದೇ, ಪುಟ ೪೩೦.

೨೯. ಚಿನ್ನಸ್ವಾಮಿ ಸೋಸಲೆ, ಎನ್., ೨೦೧೬, **ಕರ್ನಾಟಕದ ಸಮಗ್ರ ದಲಿತ ಚರಿತ್ರೆ,** ನವಕರ್ನಾಟಕ ಪ್ರಕಾಶನ, ಬೆಂಗಳೂರು, ಪುಟ ೪೧-೪೨.

೩೦. ಭರಂಪುರ ಕಣುಮಪ್ಪ, ೨೦೧೦, **ಮಾತಂಗ ಸಮಾಜದ ದಿಗ್ದರ್ಶಕರು,** ಆದಿಜಾಂಬವ ವಿದ್ಯಾಭಿವೃದ್ಧಿ ಟ್ರಸ್ಟ್, ಬೆಂಗಳೂರು, ಪುಟ ೮೪.

❖❖❖

ಅಧ್ಯಾಯ : ಐದು

ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣಾ ಹೋರಾಟಗಳು

ಅಧ್ಯಾಯ : ಐದು

ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣಾ ಹೋರಾಟಗಳು

೫.೧. ಪ್ರಸ್ತಾವನೆ

ಆಧುನಿಕ ಭಾರತದ ಚರಿತ್ರೆ ಬರವಣಿಗೆಯನ್ನಿಟ್ಟು ಅವಲೋಕಿಸಿದಾಗ ದಲಿತ ಚರಿತ್ರೆ ಎಷ್ಟರಮಟ್ಟಿಗೆ ನಿರ್ಲಕ್ಷ್ಯಕ್ಕೆ ಒಳಗಾಗಿದೆ ಎನ್ನುವುದು ತಿಳಿದು ಬರುತ್ತದೆ. ಇತ್ತೀಚಿನ ದಲಿತ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಅಧ್ಯಯನಗಳು ನಡೆದಿದ್ದರೂ ಅವುಗಳಲ್ಲಿ ಹೆಚ್ಚಿನವು ಬಾಬಾಸಾಹೇಬ್‌ರ ಕುರಿತ ಮತ್ತು ಅವರ ನೇತೃತ್ವದ ದಲಿತ ಚಳವಳಿಯ ಅಧ್ಯಯನಗಳಾಗಿದ್ದು ಪೂರ್ಣವಾಗಿ ಆಧುನಿಕ ಭಾರತದ ದಲಿತ ಚರಿತ್ರೆಯನ್ನು ಪ್ರತಿನಿಧಿಸುವಲ್ಲಿ ವಿಫಲವಾಗಿವೆ. ಅದರಲ್ಲೂ ದಕ್ಷಿಣ ಭಾರತದ ದಲಿತ ಚರಿತ್ರೆಯಂತೂ ದೂರವೇ ಉಳಿದಿದೆ. ದಲಿತ ಚರಿತ್ರೆ ಎನ್ನುವುದು ಭಾರತೀಯ ಇತಿಹಾಸದ ಅವಿಭಾಜ್ಯ ಅಂಗವಾಗಿದ್ದು ಅದನ್ನು ಕಡೆಗಣಿಸಲಾಗಿದೆ. ಭಾರತೀಯ ಸ್ವಾತಂತ್ರ ಹೋರಾಟದ ಅವಧಿ ಪ್ರಮುಖವಾಗಿದ್ದು ಆ ಯುಗದಲ್ಲಿ ದಲಿತ ವರ್ಗ ಕತ್ತಲೆ ಬದುಕಿನಿಂದ ಹೊಸ ಬದುಕಿನಡೆಗೆ ನಡೆದದ್ದು, ಮೌನ ಮುರಿದು ದಾಸ್ಯದ ಸಂಕೋಲೆಗಳನ್ನು ತುಂಡರಿಸಿ ಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭಿಸಿರುವ ಸ್ವರೂಪ ಸ್ಪಷ್ಟವಾಗುತ್ತದೆ. ಆದರೆ ದಲಿತರು ನಡೆಸಿದ ಹಲವಾರು ಹೋರಾಟಗಳನ್ನು ಚರಿತ್ರೆಯಿಂದ ನಿರ್ಲಕ್ಷ್ಯಕ್ಕೆ ಒಳಪಡಿಸಿರುವುದು ಆಶ್ಚರ್ಯದ ಸಂಗತಿಯಾಗಿದೆ.

ಈ ನಿಟ್ಟಿನಲ್ಲಿ ಸ್ವಾತಂತ್ರಪೂರ್ವ ಮತ್ತು ಅಂಬೇಡ್ಕರ್ ಯುಗದ ಸಂದರ್ಭದ ಮೈಸೂರು ಸಂಸ್ಥಾನದಲ್ಲಿ ನಡೆದ ಹಲವಾರು ಅಸ್ಪೃಶ್ಯತಾ ನಿವಾರಣ ಹೋರಾಟಗಳನ್ನು ಚರಿತ್ರೆಯಿಂದ ಕಡೆಗಣಿಸಿ ಕೇವಲ ಸ್ವಾತಂತ್ರ್ಯ ಹೋರಾಟವೇ ಪ್ರಮುಖವಾದುದು ಎಂಬಂತೆ ಅಂದಿನ ಬರವಣಿಗೆ ಬಲ್ಲ ಚರಿತ್ರೆಕಾರರು ಬಿಂಬಿಸಿರುವುದನ್ನು ಕಾಣಬಹುದು.

ಅಸ್ಪೃಶ್ಯರು ಅಂಬೇಡ್ಕರ್ ಪೂರ್ವಯುಗದಲ್ಲಿ ಶಿಕ್ಷಣ ಪಡೆದ ಅನೇಕ ದಲಿತರು ಜಾಗೃತಗೊಂಡು ಕೆಲವಾರು ಸಂಘಟನೆ, ನಾಯಕತ್ವದ ಮೂಲಕ ತಮ್ಮ ಮೂಲಭೂತ ಹಕ್ಕುಗಳಿಗೆ ಹೋರಾಟವನ್ನು ನಡೆಸಿರುವುದು ಕಂಡುಬರುತ್ತದೆ. ಅದರಲ್ಲೂ ಮೈಸೂರು ಸಂಸ್ಥಾನದಲ್ಲಿ ದಲಿತ ಹೋರಾಟದ ಸ್ವರೂಪ ಹೆಚ್ಚು ಎಂಬುದು ಅಧ್ಯಯನದ ಚರ್ಚೆಯಿಂದಲೇ ಕಂಡುಬರುತ್ತದೆ. ಅಂಬೇಡ್ಕರ್ ಯುಗದಲ್ಲೂ ಮೈಸೂರು ಸಂಸ್ಥಾನದಲ್ಲಿ ಪ್ರಬಲವಾದ ಹೋರಾಟವನ್ನು ಸಾಮಾಜಿಕ, ರಾಜಕೀಯ,

ಆರ್ಥಿಕ, ಶೈಕ್ಷಣಿಕ ಮತ್ತು ಮೂಲಭೂತ ಹಕ್ಕುಗಳಿಗಾಗಿ ಸಂಘಟನೆಗಳ ಮೂಲಕ ನಡೆಸಿದ್ದಾರೆ ಎಂಬುದನ್ನು ಆಧಾರಗಳಿಂದ ನಿರೂಪಿಸಬಹುದಾಗಿದೆ.

ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣೇತರರ ಚಳವಳಿ ತುತ್ತತುದಿ ತಲುಪಿದ್ದರೆ ಅಂದಿನ ಸಂದರ್ಭದಲ್ಲಿ ದಲಿತ ವರ್ಗಗಳ ಚಳವಳಿ ಇನ್ನು ತನ್ನ ಶೈವಾವಸ್ಥೆಯಲ್ಲಿತ್ತು. ಆದರೂ ಸಂಸ್ಥಾನದಲ್ಲಿ ಹಲವಾರು ಹೋರಾಟಗಳನ್ನು ನಡೆಸಿ ಚಳವಳಿಗಳಲ್ಲಿ ಸಫಲತೆ ಮತ್ತು ವಿಫಲತೆಯನ್ನು ಕಂಡು ದಲಿತ ವರ್ಗಗಳ ಒಗ್ಗಟ್ಟಿಗೆ ಕಾರಣವಾಯಿತು. ದೇವಾಲಯ, ಶಿಕ್ಷಣ ಸಂಸ್ಥೆಗಳು, ಕೆರೆಬಾವಿ, ಆಸ್ಪತ್ರೆಗಳು ಮೊದಲಾದ ಸಾರ್ವಜನಿಕ ಸೌಲಭ್ಯಗಳನ್ನೇ ದಲಿತ ವರ್ಗದ ಜನ ನಿರಾಂತಕವಾಗಿ ಪಡೆಯುವಂತಿರಬೇಕೆಂಬ ಉದ್ದೇಶದಿಂದ ದಲಿತ ವರ್ಗದ ನಾಯಕರು ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಆಂದೋಲನಗಳನ್ನೇ ನಡೆಸುತ್ತಿದ್ದರು. ಇದರ ಪರಿಣಾಮವಾಗಿ ಸಾರ್ವಜನಿಕ ಸ್ಥಳಗಳಲ್ಲಿ ದಲಿತರಿಗೆ ಪೂರ್ಣ ಪ್ರವೇಶಾವಕಾಶವಿರಬೇಕೆಂಬುದಾಗಿ ಶಾಸನಸಭೆ ನಿರ್ಣಯ ಮಾಡಿದ್ದರೂ ಸರ್ಕಾರ ಆಜ್ಞೆ ಹೊರಡಿಸಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಅವನ್ನು ಕಾರ್ಯಗತಗೊಳಿಸುತ್ತಿರಲಿಲ್ಲ. ಸವರ್ಣೀಯರು ತಮ್ಮ ಸಾಂಪ್ರದಾಯಿಕ ವಿರೋಧವನ್ನು ನಿಲ್ಲಿಸಲಿಲ್ಲ. ಈ ದಿಶೆಯಲ್ಲಿ ಹಲವಾರು ಹೋರಾಟಗಳನ್ನು ಕುರಿತು ಪ್ರಸ್ತುತ ಅಧ್ಯಾಯದಲ್ಲಿ ಸಮಗ್ರವಾಗಿ ಚರ್ಚಿಸಲಾಗಿದೆ.

"ನಮಗೀಗ ದೇವರನ್ನು ಪೂಜಿಸುವುದರಿಂದೊದಗಿಸುವ ತೃಪ್ತಿ ಮುಖ್ಯವಲ್ಲ. ಅಸ್ಪೃಶ್ಯರ ಸಂಪರ್ಕದಿಂದ ದೇವರಾಗಲೀ ದೇವ ಮಂದಿರವಾಗಲೀ ಅಪವಿತ್ರವಾಯಿತೆನ್ನುವ ಭಾವನೆಯನ್ನು ನಿರ್ಮೂಲನೆ ಮಾಡುವುದೇ ನಮ್ಮ ಗುರಿ. ಅಸ್ಪೃಶ್ಯರು ಹಿಂದುಗಳೆನ್ನುವುದಾದರೆ ಅವರನ್ನು ದೇವಾಲಯಗಳಿಂದ ಹೊರಗಿರಿಸುವುದು ನ್ಯಾಯವಲ್ಲ" ಎಂಬ ಬಾಬಾಸಾಹೇಬ್ ಅಂಬೇಡ್ಕರ್ ಮಾತಿನಂತೆ ಮೈಸೂರು ಸಂಸ್ಥಾನದಲ್ಲಿ ದೇವಾಲಯ ಪ್ರವೇಶ ಚಳವಳಿ ಹೆಚ್ಚಿನ ಪ್ರಮಾಣದಲ್ಲಿ ನಡೆದವಾದರೂ ಬೆರಳಣಿಕೆಯಷ್ಟು ಮಾತ್ರ ಫಲ ನೀಡಿದವು. ಸವರ್ಣೀಯರ ಕುತಂತ್ರ ಬುದ್ಧಿಯಿಂದ ಮೌಢ್ಯ ತುಂಬಿದ ದಲಿತರಲ್ಲಿ ದೇವಾಲಯ ಪ್ರವೇಶಿಸಿದಂತೆ ತಡೆದು ಅವರಲ್ಲಿ ಅಂಧಾಚರಣೆ ಮೂಢನಂಬಿಕೆಗಳನ್ನು ಬಿತ್ತುವಲ್ಲಿ ಯಶಸ್ವಿಯಾದರೂ, ಕೆರೆ-ಬಾವಿ ನೀರಿಗಾಗಿ, ದೇವಾಲಯ ಪ್ರವೇಶ, ಶಾಲೆ, ಜಾತ್ರೆ ಮುಂತಾದ ಅಂಶಗಳಿಗೆ ನಡೆದ ಅನೇಕ ಹೋರಾಟಗಳನ್ನು ಚರಿತ್ರೆಯಿಂದ ನಿರ್ಲಕ್ಷಿಸಿದಂತಹ ಘಟನೆಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೫.೨. ತಿಪಟೂರಿನ ಗ್ರಾಮದೇವತೆ ತಿಪಟೂರಮ್ಮ ಜಾತ್ರಾ ಗಲಾಟೆ

ತಿಪಟೂರಿನ ಗ್ರಾಮದೇವತೆಯಾದ ತಿಪಟೂರಮ್ಮನ ಜಾತ್ರೆ ಪ್ರತಿವರ್ಷ ಏಪ್ರಿಲ್ ತಿಂಗಳಿನಲ್ಲಿ ನಡೆಯುತ್ತದೆ. ಬೇಸಿಗೆಯಲ್ಲಿ ಒಂದು ವಾರ ನಡೆಯುವ ಈ ದೇವಿಯ ಜಾತ್ರೆ ಬಹು ಹಿಂದಿನಿಂದಲೂ ನಡೆದುಕೊಂಡು ಬಂದಿತ್ತು. ೧೯೪೦ರ ಏಪ್ರಿಲ್‌ನಲ್ಲಿ ಬಂದ ಜಾತ್ರೆಯಲ್ಲಿ ತುಮಕೂರು ಜಿಲ್ಲೆಯ ಪ್ರಮುಖ ದಲಿತ ಹೋರಾಟಗಾರ ಟಿ.ಎ. ದಾಸಪ್ಪ ಅವರು ತೇರನ್ನು

ಎಳೆಯಲು ಹಗ್ಗಕ್ಕೆ ಕೈ ಹಾಕಿದ್ದು ಊರಿನ ಮುಖಂಡರ ದೃಷ್ಟಿಯಲ್ಲಿ ಮಹಾ ಅಪರಾಧವಾಯಿತು. ಹಲವಾರು ಮಂದಿ ಸವರ್ಣೀಯರು ದಲಿತನೊಬ್ಬ ತಿಪಟೂರಮ್ಮನ ತೇರಿನ ಹಗ್ಗವನ್ನು ಹಿಡಿದು ಮೈಲಿಗೆ ಮಾಡಿದನೆಂದು ನಿಂದಿಸಿ ದಾಸಪ್ಪನವರ ಮೇಲೆ ಹಲ್ಲೆ ಮಾಡಿದರು.

ಊರಿನ ದಲಿತಕೇರಿಯಲ್ಲಿ ಸುಮಾರು ೩೦ ಮನೆಗಳಿದ್ದವು. ದಾಸಪ್ಪನವರ ಮೇಲೆ ಹಲ್ಲೆ ಮಾಡಿದ್ದರಿಂದ ಅವರಿಗೂ ಕೋಪ ಬಂತು. ಆದರೆ ಸವರ್ಣೀಯರ ಅಸಂಖ್ಯಾತ ಗುಂಪು ಕಂಡು ಅವರು ಕೋಪವನ್ನು ತಡೆದುಕೊಳ್ಳದೆ ವಿಧಿಯಿರಲಿಲ್ಲ. ದಾಸಪ್ಪನವರು ಪೆಟ್ಟಿನಿಂದ ಆಘಾತಗೊಂಡಿದ್ದರೂ, ತಮ್ಮ ಸಮುದಾಯದ ಜನರಿಗೆ ಧೈರ್ಯ ತುಂಬುತ್ತಿದ್ದರು. ಪೋಲೀಸರು ಮಧ್ಯೆ ಪ್ರವೇಶಿಸಿ ದಲಿತ ಜನಾಂಗದವರದ್ದೇ ತಪ್ಪು ಎಂಬಂತೆ ಬಿಂಬಿಸಿ ಸವರ್ಣೀಯರ ಪರ ನಿಂತರು. ಆದರೂ ದಲಿತರು ಮೊದಲ ಬಾರಿಗೆ ಒಗ್ಗೂಡಿದ್ದನ್ನು ಕಂಡು ಪೋಲೀಸರು ಹೆದರಿದರು. ಕೊನೆಗೆ ತಿಪಟೂರಮ್ಮನ ಗುಡಿಗೆ ಬೀಗ ಹಾಕಿ ಪ್ರಕರಣಕ್ಕೆ ತೆರೆ ಎಳೆದರು.

ದೇವರಗುಡಿಗೆ ದಲಿತರು ಬೀಗ ಹಾಕಿಸಿದ ಪ್ರಕರಣ ಸವರ್ಣೀಯರ ಕೆಂಗಣ್ಣಿಗೆ ಗುರಿಯಾಯಿತು. ಹಲವಾರು ದಲಿತರ ಮನೆಗಳನ್ನು ಸುಟ್ಟು ಹಲ್ಲೆ ನಡೆಸಿದರು. ದಾಸಪ್ಪನವರು ತಮಗೆ ಬಿದ್ದ ಪೆಟ್ಟಿನ ಜೊತೆಗೆ ತನ್ನ ಸಮುದಾಯಕ್ಕೆ ಬಿದ್ದ ಹೊಡೆತದಿಂದ ಎಚ್ಚೆತ್ತರು. ಅಮಾನವೀಯವಾದ ಈ ಅಸ್ಪೃಶ್ಯತೆ ವಿರುದ್ಧ ಹೋರಾಡಲು ನಿರ್ಧರಿಸಿದರು. ದಲಿತರಲ್ಲಿ ಸ್ವಾಭಿಮಾನದ ಅರಿವನ್ನು ಮೂಡಿಸಲು ಮುಂದಾದರು.[೧]

೫.೩. ತಿಪಟೂರಿನ ಸರ್ಕಾರಿ ಪ್ರೌಢಶಾಲೆಯ ಪ್ರಕರಣ

ದಾಸಪ್ಪನವರು ಪ್ರಾಥಮಿಕ ಶಾಲೆಯನ್ನು ಮುಗಿಸಿದ ನಂತರ ತಿಪಟೂರಿನ ಪ್ರೌಢಶಾಲೆಗೆ ಸೇರಿದರು. ಆ ಶಾಲೆಯು ಪಂಚಮ ಶಾಲೆಗಿಂತಲೂ ವಿಭಿನ್ನವಾಗಿತ್ತು. ದಲಿತ ವಿದ್ಯಾರ್ಥಿಗಳನ್ನು ಹಿಂದೆ ಕೂರಿಸುತ್ತಿದ್ದರು. ಅವರು ಯಾರೊಡನೆಯೂ ಬೆರೆಯುವಂತಿರಲಿಲ್ಲ. ಸವರ್ಣೀಯರ ವಿದ್ಯಾರ್ಥಿಗಳನ್ನು ಮುಟ್ಟಿಸಿಕೊಳ್ಳುವಂತಿರಲಿಲ್ಲ. ಗುರುಗಳ ಬಳಿಗೆ ಈ ವರ್ಗದ ವಿದ್ಯಾರ್ಥಿಗಳು ಸುಳಿಯುವಂತೆಯೇ ಇರಲಿಲ್ಲ.

ಈ ಶಾಲೆಯಲ್ಲಿ ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಕೆಲವು ಶಿಕ್ಷಕರಿದ್ದರು. ಅವರು ದಲಿತ ಸಮುದಾಯದ ವಿದ್ಯಾರ್ಥಿಗಳನ್ನು ಎಲ್ಲಾರಂತೆ ಕಾಣುತ್ತಿರಲಿಲ್ಲ. ಇವರನ್ನು ಶಿಕ್ಷಿಸಬೇಕಾದರೆ ದೂರದಲ್ಲಿ ನಿಂತು ಅವರತ್ತ ಬೆತ್ತ ಎಸೆಯುತ್ತಿದ್ದರು. ಮತ್ತೆ ಬೆತ್ತ ತಂದು ಮುಂದಿರಿಸಿದರೆ ನೀರಿನಿಂದ ಶುದ್ಧಿ ಮಾಡಿಕೊಳ್ಳುತ್ತಿದ್ದರು. ಯಾವುದೇ ಶಾಲಾ ಸಮಾರಂಭಗಳಲ್ಲಿ ನೇರವಾಗಿ ಭಾಗವಹಿಸುವಂತಿರಲಿಲ್ಲ. ಹೀಗೆ ತುಚ್ಛವಾಗಿ ಕಾಣುತ್ತಿದ್ದ ಅಂದಿನ ಮಡಿವಂತ ಶಿಕ್ಷಕರ ನಡೆ ನುಡಿ ಕಂಡು ದಾಸಪ್ಪನವರು, ಕೆ. ದೊಡ್ಡಯ್ಯ ಎಂಬ ದಲಿತ ಜನಾಂಗದ ವಿದ್ಯಾರ್ಥಿಗಳು ಮುಖ್ಯ ಶಿಕ್ಷಕರಿಗೆ ದೂರು ನೀಡಿ ಪ್ರತಿಭಟಿಸಲು ಮುಂದಾದರು. ಇದರಿಂದಾಗಿ ಸಿಟ್ಟಿಗೆದ್ದ ಅಲ್ಲಿನ ಬ್ರಾಹ್ಮಣ ಶಿಕ್ಷಕರು ಅವರ ಮೇಲೆ ಹಲ್ಲೆ ಮಾಡಿ ಪರೀಕ್ಷೆಯಲ್ಲಿ ಅನುತ್ತೀರ್ಣಗೊಳಿಸಿದರು. ಇದನ್ನು ಖಂಡಿಸಿ ಕೆ. ದೊಡ್ಡಯ್ಯ ಅವರ ಅಂದಿನ ಶಿಕ್ಷಣಾಧಿಕಾರಿಗಳಿಗೆ ಪತ್ರ ಬರೆದು ವಾಸ್ತವ

ಸತ್ಯವನ್ನು ವಿವರಿಸಿದರು. ಅಸ್ಪೃಶ್ಯತೆಯಿಂದ ಬೇಸತ್ತ ದಾಸಪ್ಪನವರು ಶಾಲೆಯನ್ನು ಬಿಟ್ಟರು. ನಂತರ ಶಿಕ್ಷಣಾಧಿಕಾರಿಗಳ ಜೊತೆಗೂಡಿ ದೊಡ್ಡಯ್ಯನವರು ಅಲ್ಲಿನ ಶಾಲೆಗೆ ಭೇಟಿ ನೀಡಿ ಎಚ್ಚರಿಸಿದರು. ದಾಸಪ್ಪನವರ ಮನವೊಲಿಸಿ ಮತ್ತೆ ಶಾಲೆಗೆ ಬರುವಂತೆ ಮಾಡಿದರು. ಅಂದಿನಿಂದ ಸ್ವಲ್ಪಮಟ್ಟಿಗೆ ಅಸ್ಪೃಶ್ಯತಾ ಆಚರಣೆ ಸ್ವಲ್ಪ ಮಟ್ಟಿಗೆ ಕಡಿಮೆಯಾಯಿತು.[೨]

೫.೪. ಹಾಸನಾಂಭ ದೇವಾಲಯದ ಘಟನೆ

ಗಟ್ರಿಸಿದ್ಧಯ್ಯನವರ ದಲಿತೋದ್ಧಾರ ಕಾರ್ಯಗಳಲ್ಲಿ ಹಾಸನದ ಹಾಸನಾಂಭ ದೇವಾಲಯ ಪ್ರವೇಶದ ಘಟನೆ ಪ್ರಮುಖವಾದುದಾಗಿದೆ. ಹಾಸನ ಜಿಲ್ಲೆಯ ಪ್ರಸಿದ್ಧ ಹಾಸನಾಂಭ ದೇವಾಲಯದ ಬಾಗಿಲನ್ನು ವರ್ಷಕ್ಕೆ ಒಮ್ಮೆ ಮಾತ್ರ ತೆರೆಯಲಾಗುತ್ತದೆ. ಈ ದೇವಾಲಯದ ಬಾಗಿಲು ತೆಗೆಯುವ ಮುಂಚೆ ದೇವಾಲಯದ ಸ್ವಚ್ಛತಕಾರ್ಯ, ಹೊರಂಗಣ ಅಲಂಕಾರ ಪ್ರತಿಯೊಂದನ್ನು ಮಾಡುವುದು ದಲಿತರೆ. ಆದರೂ ಬಾಗಿಲು ತೆಗೆದ ಸಂದರ್ಭದಲ್ಲಿ ಹಾಸನಾಂಭ ದೇವಿಯ ದರ್ಶನವನ್ನು ದಲಿತರಿಗೆ ನಿರಾಕರಿಸಲಾಗಿತ್ತು. ಇದರಿಂದಾಗಿ ರೊಚ್ಚಿಗೆದ್ದ ದಲಿತ ನಾಯಕರಾದ ಹಟ್ಟಿ ಸಿದ್ಧಯ್ಯ, ಪುಟ್ಟಯ್ಯ, ತೋಪಯ್ಯ, ರೇವಯ್ಯ, ಸಿದ್ಧಲಿಂಗಯ್ಯ ಮುಂತಾದ ಮುಖಂಡರ ನೇತೃತ್ವದಲ್ಲಿ ಹಾಸನಾಂಭ ದೇವಾಲಯ ಪ್ರವೇಶವನ್ನು ಮಾಡಲು ಮುಂದಾದರು. ವಿಷಯ ತಿಳಿದ ಸವರ್ಣೀಯರು ತೀವ್ರ ವಿರೋಧ ವ್ಯಕ್ತಪಡಿಸಿ, ದಲಿತರ ಮೇಲೆ ದೈಹಿಕ ಹಲ್ಲೆ ನಡೆಸಿದರು. ಇದರಿಂದ ಕೋಪಗೊಂಡು ದಲಿತರು ಸಹ ಸವರ್ಣೀಯರ ಮೇಲೆ ಹಲ್ಲೆ ನಡೆಸಲು ಮುಂದದಾಗ ಗಟ್ರಿಸಿದ್ಧಯ್ಯನವರು ದಲಿತ ಯುವಕರನ್ನು ತಡೆದು ಆಗುವ ಅನಾಹುತವನ್ನು ತಪ್ಪಿಸಿ ತಮ್ಮ ಕೇರಿಗೆ ಕರೆದೊಯ್ದರು. ಕೇರಿಯ ಎಲ್ಲ ಜನರನ್ನು ಒಗ್ಗೂಡಿಸಿ ಅವರಲ್ಲಿ ಒಂದು ಮನವಿಯನ್ನು ಮಾಡಿದರು. ಇನ್ನು ಮುಂದೆ ಸವರ್ಣೀಯರ ಮನೆಗಳಲ್ಲಿ ಜೀತ ಮಾಡುವುದು, ಅವರ ಮನೆಗಳಲ್ಲಿನ ಸತ್ತ ದನಗಳನ್ನು ಮುಟ್ಟುವುದಾಗಲೀ, ಅವರ ಅನಿಷ್ಟ ಕಾರ್ಯಗಳನ್ನು ಇನ್ನು ಮುಂದೆ ಯಾರು ಮಾಡಬಾರದೆಂದು ಆ ಸಭೆಯಲ್ಲಿ ಎಲ್ಲಾ ಮುಖಂಡರು ತೀರ್ಮಾನ ತೆಗೆದುಕೊಂಡರು. ನಂತರದಲ್ಲಿ ಈ ತೀರ್ಮಾನ ಸವರ್ಣೀಯರಿಗೆ ತಿಳಿದು ಅವರನ್ನು ಸಮಾಧಾನ ಮಾಡಿ ಅವರ ತೀರ್ಮಾನ ಕೈ ಬಿಡಲು ಸವರ್ಣೀಯ ಮುಖಂಡರುಗಳಾದ ನಂಜೇಗೌಡ, ಪಾಪಯ್ಯರನ್ನೂ ಒಳಗೊಂಡಂತೆ ಇನ್ನೂ ಅನೇಕ ಸವರ್ಣೀಯ ಮುಖಂಡರು ದಲಿತ ಕೇರಿಗೆ ಪ್ರವೇಶಿಸಿ, ದಲಿತ ಮುಖಂಡರ ನೇತೃತ್ವದಲ್ಲಿ ಸಭೆ ನಡೆಸಿ ಅವರ ಮನವೊಲಿಸಿ ತೀರ್ಮಾನವನ್ನು ಹಿಂತೆಗಿಸಿದರು ಹಾಗೂ ಸವರ್ಣೀಯರ ಕಾರ್ಯಗಳು ಸುಗಮವಾಗಿ ಆಗುವಂತೆ ನೋಡಿಕೊಂಡರು. ಆದರೂ ದೇವಾಲಯ ಪ್ರವೇಶವನ್ನು ಮಾತ್ರ ದೇವರ ಹೆಸರಲ್ಲಿ ನಿರಾಕರಿಸಿದರು.[೩]

೫.೫. ಕೋಲಾರ ಜಿಲ್ಲೆ ವಕ್ಕಲೇರಿ ಹೋಬಳಿಯ ಮಾರ್ಕಾಂಡಯ್ಯ ದೇವಸ್ಥಾನ ಪ್ರವೇಶ ಚಳವಳಿ

ಕೋಲಾರ ಜಿಲ್ಲೆಯ ವಕ್ಕಲೇರಿ ಮರ್ಕಾಂಡಯ್ಯ ದೇವಸ್ಥಾನದ ಪ್ರವೇಶಕ್ಕೆ ಸಂಬಂಧಿಸಿದಂತೆ ನಡೆದ ಈ ಹೋರಾಟವು ಅಸ್ಪೃಶ್ಯತೆ ನಿವಾರಣೆ ನಿಟ್ಟಿನಲ್ಲಿ ಪ್ರಮುಖ ಘಟನೆಯಾಗಿದೆ. ಸ್ವಾತಂತ್ರ

ಪೂರ್ವದಲ್ಲಿಯೇ ಪ್ರಮುಖ ಧಾರ್ಮಿಕ ಕೇಂದ್ರವಾಗಿದ್ದ ಈ ದೇವಾಲಯವು, ಹಲವು ಕಡೆಗಳಿಂದ ಅಪಾರ ಸಂಖ್ಯೆಯ ಭಕ್ತರನ್ನು ಆಕರ್ಷಿಸುತ್ತಿದ್ದ ಐತಿಹಾಸಿಕ ದೇವಾಲಯವಾಗಿತ್ತು. ಆದರೆ ಈ ದೇವಾಲಯಕ್ಕೆ ದಲಿತರಿಗೆ ಮಾತ್ರ ಪ್ರವೇಶಕ್ಕೆ ಅವಕಾಶವಿರಲಿಲ್ಲ. ಇದರಿಂದಾಗಿ ವಕ್ಕಲೇರಿಯ ಕೆಲವು ಪ್ರಜ್ಞಾವಂತ ದಲಿತರು ದೇವಾಲಯ ಪ್ರವೇಶ ಮಾಡುವ ನಿರ್ಧಾರಕ್ಕೆ ಬಂದರು. ನಂತರ ಹಲವು ದಲಿತ ಯುವಕರು ದೇವಸ್ಥಾನದ ಮುಂಭಾಗದಲ್ಲಿ ಒಂದುಗೂಡಿದರು. ಅಷ್ಟರೊಳಗೆ ದೇವಸ್ಥಾನದ ಪ್ರಮುಖರಿಗೆ, ದಲಿತರೆಲ್ಲರೂ ಸೇರಿ ದೇವಸ್ಥಾನ ಪ್ರವೇಶಿಸಬೇಕೆಂದಿರುವ ವಿಷಯ ತಿಳಿದು ದೇವಸ್ಥಾನದ ಬಾಗಿಲು ಮುಚ್ಚಿ ಬೀಗ ಹಾಕಿಕೊಂಡು ಹೋಗಿದ್ದರು. ಹೀಗಾಗಿ ಪ್ರತಿಭಟನಾಕಾರರು ದೇವಸ್ಥಾನದ ಮುಂಭಾಗದಲ್ಲಿ ಪ್ರತಿಭಟನೆ ಮಾಡಲು ಮುಂದಾದರು. ಇದರಿಂದಾಗಿ ಕೆಲ ವೇಳೆ ಆತಂಕದ ವಾತಾವರಣ ಸೃಷ್ಟಿಯಾಗಿತ್ತು. ಕೆಲವು ಸವರ್ಣೀಯ ಮುಖಂಡರು ದೇವಾಲಯ ಪ್ರವೇಶಿಸುವುದರಿಂದಾಗುವ ಪರಿಣಾಮಗಳನ್ನು ವಿವರಿಸಿ ದಲಿತರನ್ನು ಮನವೊಲಿಸಿ ದೇವಾಲಯವನ್ನು ಪ್ರವೇಶಿಸದಂತೆ ನೋಡಿಕೊಂಡರು. ದಲಿತರು ಸವರ್ಣೀಯರ ಅಡಿಯಲ್ಲಿ ಬದುಕು ಸಾಗಿಸುತ್ತಿದ್ದರಿಂದ ಅವರ ಮಾತಿಗೆ ಮರು ಮಾತನಾಡದೇ ದೇವಾಲಯ ಪ್ರವೇಶ ಚಳವಳಿಯನ್ನು ಕೈಬಿಟ್ಟರು ಎಂದು ಹಿರಿಯ ದಲಿತ ಹೋರಾಟಗಾರರಾದ ನರಸಯ್ಯ ಅವರು ಹೇಳಿದರು.[೪]

೫.೬. ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ರೆಡ್ಡಿಪಲ್ಲಿ ಘಟನೆ

ಜಾತಿಯ ವಿಷಗೋಡೆಗಳಿಂದ ನಿರ್ಮಿತವಾದ ರೆಡ್ಡಿಪಲ್ಲಿ ಗ್ರಾಮ ಜಾತಿಯತೆಯ ಗೂಡಾಗಿತ್ತು. ಭೂಮಾಲೀಕತ್ವ ಹೊಂದಿರುವ ರೆಡ್ಡಿಗಳು ಮತ್ತು ಲಿಂಗಾಯತರು ಆರ್ಥಿಕ, ರಾಜಕೀಯವಾಗಿ ಪ್ರಬಲರಾಗಿದ್ದರು. ಜೊತೆಗೆ ಹಿಂದುಳಿದ ವರ್ಗದವರನ್ನು ತಮ್ಮ ತೆಕ್ಕೆಯಲ್ಲಿಟ್ಟುಕೊಂಡು, ಅಸ್ಪೃಶ್ಯ ದಲಿತರು ಕೀಳುಜಾತಿಯೆಂಬ ಕಾರಣದಿಂದ ತಮಗೆ ಅನುಕೂಲವಾಗುವಂತೆ ಸತ್ತ ದನಗಳನ್ನು ಸಾಗಿಸುವುದು, ಕೊಟ್ಟಿಗೆಯಲ್ಲಿ ಕಸ ಎತ್ತಿಸುವಂತಹ ಅನೇಕ ಕನಿಷ್ಠ ಕೆಲಸಗಳು ದಲಿತರಿಗೆ ಮಾತ್ರ ಸೀಮಿತವಾದ ಕೆಲಸಗಳೆಂಬಂತೆ ದುಡಿಸಿಕೊಳ್ಳುತ್ತಾ ಬಂದಿದ್ದರು. ೧೯೪೭ರ ಸ್ವಾತಂತ್ರಪೂರ್ವ ದಲ್ಲಿಯೇ ಕೆಲವು ದಲಿತರು ಅಲ್ಪ ಸ್ವಲ್ಪ ಜಮೀನನ್ನು ಹೊಂದಿ ಸ್ವಾಭಿಮಾನವಾಗಿ ಬದುಕುತ್ತಿದ್ದರು. ಇದನ್ನು ಸಹಿಸಲಾಗದ ಕೆಲವು ಸವರ್ಣೀಯರು ದಲಿತರ ಬಗ್ಗೆ ದ್ವೇಷ-ಅಸೂಯೆಗಳನ್ನು ಬೆಳೆಸಿಕೊಂಡರು. ಹಾಗಾಗಿ ದಲಿತರೊಂದಿಗೆ ಸಣ್ಣಪುಟ್ಟ ವಿಚಾರಗಳಿಗೂ ಸುಮ್ಮನೆ ಗಲಾಟೆ ಮಾಡುತ್ತಾ ಬಂದಿದ್ದರು. ಇದರಿಂದಾಗಿ ಬೇಸತ್ತ ಕೆಲವು ದಲಿತರು ಸಭೆ ಸೇರಿ ಗ್ರಾಮದಲ್ಲಿ ದಾಸ್ಯಕ್ಕೆ ಬಿಟ್ಟ ಚಾಕರಿಗಳನ್ನು ಮಾಡಬಾರದೆಂದು ತೀರ್ಮಾನಿಸಿದರು. ಸವರ್ಣೀಯರೇ ಆ ಕೆಲಸಗಳನ್ನು ಮಾಡುವುದು ಅಪಮಾನವೆಂದು ಭಾವಿಸಿ ದಲಿತರ ಮೇಲೆ ಮತ್ತಷ್ಟು ದ್ವೇಷ ಬೆಳಸಿಕೊಂಡರು. ರೆಡ್ಡಿಪಲ್ಲಿಯ ಹೋಟೆಲ್‌ವೊಂದರಲ್ಲಿ ಚಹಾ ಕುಡಿಯುವ ವಿಚಾರಕ್ಕೆ ಸಂಬಂಧಿಸಿದಂತೆ ಸವರ್ಣೀಯರ ಗುಂಪೊಂದು ಪೂರ್ವಯೋಜಿತವಾಗಿ ದಲಿತ ಯುವಕನ ಮೇಲೆ ಹಲ್ಲೆ ಮಾಡುತ್ತ ದಲಿತ ಕೇರಿಯವರೆಗೆ ಹಟ್ಟಿಸಿಕೊಂಡು ಹೋದರು. ಅಲ್ಲಿ ದಲಿತರೊಂದಿಗೆ

ಘರ್ಷಣೆಗಿಳಿದರು. ಸವರ್ಣೀಯರ ಗುಂಪು ಕೆಲವು ಗುಡಿಸಲುಗಳಿಗೆ ಬೆಂಕಿ ಹಚ್ಚಿದರು. ಇದರಿಂದ ಭಯಭೀತರಾದ ದಲಿತರು ಊರನ್ನು ತೊರೆದರು. ನಂತರ ಇಷ್ಟೆಲ್ಲಾ ಕೃತ್ಯಗಳನ್ನು ಎಸಗಿದ ಸವರ್ಣೀಯರು ದಲಿತ ಮುಖಂಡರ ಸಮ್ಮುಖದಲ್ಲಿ ತಮಗೆ ಯಾವುದೇ ರೀತಿಯ ತೊಂದರೆಯಾಗದ ರೀತಿಯಲ್ಲಿ ದಲಿತರೊಂದಿಗೆ ರಾಜಿ ಪಂಚಾಯ್ತಿ ಮಾಡಿಸಿ ಸುಮ್ಮನಾದರು ಎಂದು ಕೋಲಾರದ ದಲಿತ ಮುಖಂಡರಾದ ರಂಗಯ್ಯ ನಿವೃತ್ತ ಶಿಕ್ಷಕರು ಆ ಸಂದರ್ಭವನ್ನು ನೆನಪಿಸಿಕೊಂಡರು.[೫]

೫.೭. ಶ್ರೀನಿವಾಸಪುರ ತಾಲ್ಲೂಕಿನ ತಾಡುಗೊಂಡ್ಲು ಘಟನೆ

ತಾಡುಗೊಂಡ್ಲು ಹಳ್ಳಿಯಲ್ಲಿರುವ ಹೋಟೆಲ್‌ನಲ್ಲಿ ದಲಿತರಿಗೆ ಎಲ್ಲರೂ ಕುಡಿಯುವ ಲೋಟದಲ್ಲಿ ಚಹಾ ಕೊಡದೆ ಅವರಿಗೆ ಪ್ರತ್ಯೇಕವಾಗಿ ಬೇರೆ ಲೋಟ ಇಡಲಾಗುತ್ತಿತ್ತು. ಅಲ್ಲದೇ ತೆಂಗಿನ ಚಿಪ್ಪುಗಳಲ್ಲಿ ಚಹ ನೀಡಲಾಗುತ್ತಿತ್ತು. ಇದನ್ನು ಆ ಹಳ್ಳಿಯ ದಲಿತರು ಪ್ರತಿಭಟಿಸಿದಾಗ ದಲಿತರ ಮೇಲೆ ಹಲ್ಲೆ ಮಾಡಲಾಯಿತು. ನಂತರ ಆ ಹೋಟೆಲ್‌ನಲ್ಲಿ ದಲಿತರಿಗೆ ಪ್ರವೇಶವನ್ನು ನಿರಾಕರಿಸಲಾಯಿತು. ಬಲವಂತವಾಗಿ ಹೋಟೆಲ್‌ನ್ನು ಕೆಲವು ದಲಿತ ಯುವಕರು ಪ್ರವೇಶಿಸಿದ್ದರಿಂದ ಸಿಟ್ಟಿಗೆದ್ದು ಸವರ್ಣೀಯರು ಹಳ್ಳಿಯಲ್ಲಿದ್ದ ದಲಿತರಿಗೆ ಹಿಂಸೆ ನೀಡಿ ದೌರ್ಜನ್ಯವೆಸಗಿದರು. ಹಿಂಸೆ ಮತ್ತು ದೌರ್ಜನ್ಯಗಳನ್ನು ತಾಳಲಾರದೇ ಎಷ್ಟೋ ದಲಿತರು ತಾವು ಹುಟ್ಟಿ ಬೆಳೆದ ಊರನ್ನು, ಮನೆಯನ್ನೇ ಬಿಟ್ಟು ನಗರಗಳಿಗೆ ವಲಸೆ ಹೋದರು. ಪೋಲೀಸರು ದಲಿತರನ್ನು ಎದುರಿಸಿ ಸುಮ್ಮನಾಗಿಸಿದರು ಎಂದು ಹಿರಿಯ ದಲಿತ ಹೋರಾಟಗಾರರಾದ ನರಸಯ್ಯ ಮಾಲೂರು ಅವರು ಹೇಳಿದರು.[೬]

೫.೮. ಚಿಂತಾಮಣಿ ತಾಲ್ಲೂಕಿನ ಸೂಡದೇವನಹಳ್ಳಿ ವಡ್ಡಗಲ್ ನರಸಿಂಹಸ್ವಾಮಿ ದೇವಾಲಯ ಪ್ರವೇಶ ಚಳವಳಿ

ಸೂಡದೇವನಹಳ್ಳಿಯ ವಡ್ಡಗಲ್ ನರಸಿಂಹಸ್ವಾಮಿ ದೇವಾಲಯ ಪುರಾಣ ಪ್ರಸಿದ್ಧವಾದ ದೇವಾಲಯವಾಗಿದ್ದು, ದಲಿತರಿಗೆ ಪ್ರವೇಶವನ್ನು ನಿರಾಕರಿಸಲಾಗಿತ್ತು. ಸೂಡದೇವನಹಳ್ಳಿಯ ದಲಿತ ಮುಖಂಡ ತಿಮ್ಮಯ್ಯ ಸೇರಿದಂತೆ ನಾಲ್ಕು ಜನ ದಲಿತಕೇರಿಯಲ್ಲಿ ಸಂಘಟಿತವಾದ ಯುವಕರು ಊರಿಗೆ ಸೇರಿದ ದೇವಾಲಯಕ್ಕೆ ಪ್ರವೇಶ ಮಾಡಲು ಮುಂದಾದರು. ಈ ಸುದ್ದಿ ಕ್ಷಣಾರ್ಧದಲ್ಲಿ ಗ್ರಾಮಕ್ಕೆ ಹಬ್ಬಿತು. ದೇವಾಲಯ ಪ್ರವೇಶಿಸಿದ ದಲಿತ ಯುವಕರನ್ನು ಮೇಲ್ಜಾತಿ ಸವರ್ಣೀಯರು ಹಿಡಿದು ಮಾರಣಾಂತಿಕವಾಗಿ ಹಲ್ಲೆ ನಡೆಸಿದರು.

ದಲಿತ ಯುವಕರ ಮೇಲೆ ನಡೆದ ಹಲ್ಲೆ ದಲಿತಕೇರಿಗೆ ತಲುಪುತ್ತಿದ್ದಂತೆಯೇ ಅಲ್ಲಿನ ಕೆಲವು ಹಿರಿಯರು ಈ ಹಲ್ಲೆಯಿಂದ ಗಾಯಗೊಂಡಿದ್ದ ಯುವಕರನ್ನು ಆಸ್ಪತ್ರೆಗೆ ದಾಖಲಿಸಲು ಕರೆತಂದರು. ಸವರ್ಣೀಯರು ಹಿಡಿತದಲ್ಲಿದ್ದ ಆಸ್ಪತ್ರೆಯಲ್ಲಿ ಸರಿಯಾದ ಚಿಕಿತ್ಸೆ ದೊರಕದಂತೆ ಹಲ್ಲೆಗೊಳಗಾದ ದಲಿತ ಯುವಕರನ್ನು ಅಸ್ಪತ್ರೆಯಿಂದ ಹೊರಹಾಕಲಾಯಿತು. ಸರಿಯಾದ

ಸಮಯಕ್ಕೆ ಔಷಧೋಪಚಾರವಿಲ್ಲದೆ, ದಲಿತ ಮುಖಂಡ ತಿಮ್ಮಪ್ಪ ಗಾಯದಿಂದ ನರಳಿ ಪ್ರಾಣ ಬಿಟ್ಟನು ಎಂದು ಮಾಲೂರಿನ ದಲಿತ ಚಿಂತಕರಾದ ವೆಂಕಟೇಶ ಅವರು ಆ ಕಹಿ ಘಟನೆಯನ್ನು ನೆನಪಿಸಿಕೊಂಡರು.[೬]

೫.೯. ಶಿವಮೊಗ್ಗದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಘಟನೆ

ಶಿವಪ್ಪನಾಯಕನ ಆಳ್ವಿಕೆ ಕಾಲದಲ್ಲಿ ಶಿವಮೊಗ್ಗದಲ್ಲಿ ಕಟ್ಟಿಸಿದ ಐತಿಹಾಸಿಕ ಕೋಟೆ ಆಂಜನೇಯಸ್ವಾಮಿ ದೇವಾಲಯಕ್ಕೆ ದಲಿತರು ಪ್ರವೇಶಿಸುವಂತಿರಲಿಲ್ಲ. ದ್ವಾರಬಾಗಿಲ ಬಳಿಯೂ ಹೋಗುವಂತಿರಲಿಲ್ಲ. ದೇವಾಲಯದಿಂದ ಬಹುದೂರ ನಿಂತು ದರ್ಶನ ಪಡೆಯಬೇಕಾಗಿತ್ತು. ಒಂದು ವೇಳೆ ಪೂಜೆ ಮಾಡಿಸಬೇಕೆಂದರೆ ಬಹುದೂರದಲ್ಲಿ ಬಹಳ ಸಮಯದವರೆಗೂ ಕಾಯಬೇಕಿತ್ತು. ಅಷ್ಟೂ ಹೊತ್ತು ಕಾಯ್ದರೂ ಆ ದೇವಸ್ಥಾನದ ಅರ್ಚಕರು ದಲಿತರಿಗೆ ಪೂಜೆಯನ್ನು ಮಾಡಿಕೊಡುತ್ತಿರಲಿಲ್ಲ. ದಲಿತರ ಪೂಜಾ ಸಾಮಗ್ರಿಗಳನ್ನು ಮುಟ್ಟದೆ, ಕೇವಲ ನೀರಿನ ಹನಿಯನ್ನು ಹಾಕಿ ಪೂಜೆ ಮುಗಿಯಿತ್ತೆಂದು ಕಳುಹಿಸುವ ಪದ್ಧತಿ ರೂಢಿಯಲ್ಲಿತ್ತು. ಈ ಅಸ್ಪೃಶ್ಯತೆಯನ್ನು ಅಲ್ಲಿನ ಅರ್ಚಕರು ಆಚರಿಸುತ್ತಿದ್ದರು. ಸ್ವಾತಂತ್ರ್ಯಪೂರ್ವದಲ್ಲಿ ಲೋಯರ್ ಸೆಕೆಂಡರಿ ಶಿಕ್ಷಣವನ್ನು ಪಡೆದಿದ್ದ ವೆಂಕಟಮ್ಮ ಎಂಬ ದಲಿತ ಹೆಣ್ಣು ಮಗಳು ನಾಗರತ್ನಮ್ಮ ಎಂಬ ಬ್ರಾಹ್ಮಣ ಹೆಣ್ಣುಮಗಳು ಸ್ನೇಹಿತೆ ಎಂಬ ಕಾರಣಕ್ಕಾಗಿ ದೇವಾಲಯದ ಒಳಗಡೆ ಕರೆದುಕೊಂಡು ಹೋಗಿ ಗರ್ಭಗುಡಿಗೆ ಪೂಜೆಯನ್ನು ಸಲ್ಲಿಸಿ ಬರುವಂತಹ ಸಂದರ್ಭದಲ್ಲಿ ದೇವಸ್ಥಾನದ ದೂರದಲ್ಲಿದ್ದಂತಹ ದಲಿತ ಸಮುದಾಯದವರೇ ವೆಂಕಟಮ್ಮ ದೇವಾಲಯ ಪ್ರವೇಶಿಸಿರುವುದನ್ನು ನೋಡಿ ಗಾಬರಿಯಾಗಿ ದೇವಾಲಯ ಪ್ರವೇಶಿಸಿದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. ಇವರ ಈ ರೀತಿಯ ವರ್ತನೆಯಿಂದ ಅಲ್ಲಿನ ಪುರೋಹಿತರಿಗೆ ವೆಂಕಟಮ್ಮ ದಲಿತ ಮಹಿಳೆ ಎಂದು ತಿಳಿದು ನಾಗರತ್ನಮ್ಮ ಮತ್ತು ವೆಂಕಟಮ್ಮನನ್ನು ಅಲ್ಲಿಯೇ ತಡೆದು ಎರಡು ಮನೆಯವರನ್ನು ಕರೆಸಿದರು. ವೆಂಕಟಮ್ಮನನ್ನು ಮತ್ತು ಅವರ ತಂದೆಯವರನ್ನು ದೇವಾಲಯದ ಅರ್ಚಕರು ಮತ್ತು ಕೆಲ ಬ್ರಾಹ್ಮಣ ಮುಖಂಡರು ನಿಂದಿಸಿ ಹಲ್ಲೆ ಮಾಡಲು ಮುಂದಾದರು. ಇದರಿಂದಾಗಿ ಭಯಭೀತರಾದ ವೆಂಕಟಮ್ಮನವರ ತಂದೆ ತಿಮ್ಮಯ್ಯ ಆ ಪುರೋಹಿತಶಾಹಿಗಳ ಕಾಲಿಗೆ ಬಿದ್ದು ಮತ್ತೊಮ್ಮೆ ಈ ರೀತಿಯ ತಪ್ಪಾಗದಂತೆ ನೋಡಿಕೊಳ್ಳುತ್ತೇನೆಂದು ಗೋಗರೆದರು. ವೆಂಕಟಮ್ಮನವರಿಂದ ಕ್ಷಮಾಪಣೆ ಕೇಳಿಸಿ ಅಲ್ಲಿಯೇ ಹೊಡೆದು ಮನೆಗೆ ಕರೆ ತಂದರು. ಅದೇ ರೀತಿ ನಾಗರತ್ನಮ್ಮನಿಗೂ ಸಹ ಅವರ ಪೋಷಕರು ದಲಿತ ಹೆಣ್ಣು ಮಗಳ ಸಹವಾಸ ಮಾಡದಂತೆ ಎಚ್ಚರಿಸಿ ಕರೆದುಕೊಂಡು ಹೋದರು. ಅಲ್ಲಿನ ಅರ್ಚಕರು ವೆಂಕಟಮ್ಮನನ್ನು ಹೊರಗೆ ಕಳುಹಿಸಿದ ನಂತರ ಹೋಮ-ಹವನಗಳನ್ನು ಮಾಡಿ ದೇವಸ್ಥಾನವನ್ನು ಶುದ್ಧೀಕರಿಸಿಕೊಂಡರು.

ಈ ಘಟನೆಯಿಂದ ತುಂಬ ಮನನೊಂದ ವೆಂಕಟಮ್ಮನವರು ಆ ಕಾಲಕ್ಕೆ ಸ್ವಲ್ಪಮಟ್ಟಿನ ವಿದ್ಯಾಭ್ಯಾಸ ಮಾಡಿ ತಿಳುವಳಿಕೆಯುಳ್ಳವರಾಗಿದ್ದರಿಂದ ನಡೆದ ಘಟನೆ ಕುರಿತು ಜಿಲ್ಲಾ ಕಲೆಕ್ಟರ್‌ಗೆ ದೂರು ನೀಡಿದರು. ದಲಿತರು ದೇವಾಲಯ ಪ್ರವೇಶಿಸುವುದಕ್ಕೆ ಅವಕಾಶ ನೀಡಬೇಕೆಂದು

ಮನವಿಯನ್ನು ಸಲ್ಲಿಸಿದರು. ಇವರ ಮನವಿಯನ್ನು ಸ್ವೀಕರಿಸಿದ ಅಂದಿನ ಶಿವಮೊಗ್ಗ ಜಿಲ್ಲಾ ಕಲೆಕ್ಟರ್ ದೇವಾಲಯದ ಆಡಳಿತ ಮಂಡಳಿಯೊಂದಿಗೆ ಚರ್ಚಿಸಿ, ದಲಿತರು ದೇವಾಲಯ ಪ್ರವೇಶ ಕುರಿತು ತೀರ್ಮಾನಿಸಲಾಗುವುದೆಂದು ಮತ್ತು ಯಾವುದೇ ಭರವಸೆ ನೀಡಲಾಗು ವುದಿಲ್ಲವೆಂದು ತೀರ್ಮಾನಿಸಿದರು. ವೆಂಕಟಮ್ಮ ಜಿಲ್ಲಾ ಕಲೆಕ್ಟರ್‌ನಿಂದ ತಮಗೆ ನ್ಯಾಯ ದೊರೆಯುವುದಿಲ್ಲವೆಂದು ಮನಗಂಡು, ತಮ್ಮ ಕೇರಿಯ ಕೆಲವು ಪ್ರಜ್ಞಾವಂತ ದಲಿತ ಯುವಕರು ಮಹಿಳೆಯರು ದೇವಾಲಯ ಪ್ರವೇಶಿಸುವುದಾಗಿ ತೀರ್ಮಾನಿಸಿ ದಲಿತ ಯುವಕ ಯುವತಿಯರನ್ನು ಸಂಘಟಿಸಿದರು. ಇದನ್ನು ತಿಳಿದ ಕೇರಿಯ ಹಿರಿಯ ದಲಿತರು ಇದಕ್ಕೆ ವಿರೋಧಿಸಿ ವೆಂಕಟಮ್ಮನವರಿಗೆ ವಸ್ತುಸ್ಥಿತಿಯನ್ನು ವಿವರಿಸಿದರು. ಸವರ್ಣೀಯರನ್ನು ದ್ವೇಷ ಕಟ್ಟಿಕೊಂಡರೆ ನಮ್ಮ ದಿನನಿತ್ಯದ ಮೂಲ ಸೌಲಭ್ಯಗಳಿಗೆ ತೊಂದರೆಯಾಗುತ್ತದೆಂದು ತಿಳಿಸಿ ದೇವಾಲಯ ಪ್ರವೇಶ ಚಳುವಳಿಯನ್ನು ಕೈ ಬಿಡುವಂತೆ ಮನವೊಲಿಸಿದರು. ವೆಂಕಟಮ್ಮನವರಿಗೆ ತಮ್ಮ ಸಮುದಾಯದವರೆ ವಿರೋಧಿಸಿದ ಮೇಲೆ ಅವರು ವಿರೋಧಿಸುವುದರಲ್ಲಿ ಅರ್ಥವಿದೆ. ನಮ್ಮ ಅಜ್ಞಾನ, ಅನಕ್ಷರತೆ, ಮೌಢ್ಯತೆಯನ್ನು ಸರಿಯಾದ ರೀತಿಯಲ್ಲಿ ಸವರ್ಣೀಯರು ಬಳಸಿಕೊಳ್ಳುತ್ತಿದ್ದಾರೆ ಎಂದು ಭಾವಿಸಿ ಮೊದಲು ತಮ್ಮ ಸಮುದಾಯದವರಿಗೆ ಅಕ್ಷರ ಜ್ಞಾನದ ಕೊರತೆಯನ್ನು ಹೋಗಲಾಡಿಸಿ ಮೌಢ್ಯತೆಯನ್ನು ತೊಡೆದು ಹಾಕುವವರಿಗೆ ಈ ರೀತಿಯ ಪ್ರಯತ್ನಗಳು ಸಫಲವಾಗುವುದಿಲ್ಲವೆಂಬುದನ್ನು ಅರಿತು ಅರಿವನ್ನು ಮೂಡಿಸಲು ಮುಂದಾದರು ಎಂದು ಡಿ.ಎಸ್.ಎಸ್. ಮುಖಂಡರಾದ ಶಿವಮೊಗ್ಗದ ಪದ್ಮನಾಭ ಅವರು ವಿವರಿಸಿದರು.[೮]

೫.೧೦. ಹುಣಸೂಡು ಗ್ರಾಮದ ಬಾವಿ ನೀರಿಗಾಗಿ ಹೋರಾಟ

ಶಿವಮೊಗ್ಗ ಜಿಲ್ಲೆಯ ಹುಣಸೂಡು ಗ್ರಾಮದಲ್ಲಿ ಬಾವಿ ನೀರಿಗಾಗಿ ಸ್ವಾತಂತ್ರ್ಯಪೂರ್ವದಲ್ಲಿ ಹೋರಾಟ ನಡೆದು ಯಶಸ್ವಿಯಾದ ಘಟನೆಯಾಗಿದೆ. ಈ ಹುಣಸೂಡು ಗ್ರಾಮದಲ್ಲಿ ಮುನ್ನೂರು ಮನೆ ದಲಿತ ಸಮುದಾಯದವರು, ಹತ್ತು ಮನೆ ಲಿಂಗಾಯಿತ ಸಮುದಾಯದವರು ಮತ್ತು ಕೇವಲ ನಾಲ್ಕು ಮನೆ ಬ್ರಾಹ್ಮಣ ಸಮುದಾಯದಿಂದ ಕೂಡಿದ ಊರಾಗಿತ್ತು. ಬೆರಳೆಣಿಕೆಯಷ್ಟಿದ್ದ ಸವರ್ಣೀಯರು ತೊಂಬತ್ತು ಭಾಗವಿದ್ದ ದಲಿತರನ್ನು ತಮ್ಮ ಕಪಿಮುಷ್ಠಿಯಲ್ಲಿಟ್ಟುಕೊಂಡಿದ್ದರು. ಗ್ರಾಮದಲ್ಲಿ ಕುಡಿಯುವ ನೀರಿಗಾಗಿ ಎರಡು ಬಾವಿಗಳಿದ್ದು, ಒಂದು ಸಿಹಿ ನೀರಿನ ಬಾವಿ ಮತ್ತೊಂದು ಉಪ್ಪು ನೀರಿನ ಬಾವಿ. ಈ ಉಪ್ಪು ನೀರಿನ ಬಾವಿಯ ನೀರನ್ನು ಕುಡಿಯಲು ದಲಿತ ಸಮುದಾಯದವರು ಬಳಸುತ್ತಿದ್ದರು. ಸಿಹಿ ನೀರಿನ ಬಾವಿಯ ನೀರನ್ನು ಕೇವಲ ಲಿಂಗಾಯಿತರು ಮತ್ತು ಬ್ರಾಹ್ಮಣರು ಮಾತ್ರ ಬಳಸಬೇಕಾಗಿತ್ತು. ದಲಿತರಿಗೆ ಕುಡಿಯಲು ಸಿಹಿ ನೀರು ಬೇಕಾದರೆ ಅವರು ಈ ಸಿಹಿ ನೀರಿನ ಬಾವಿಯ ದೂರದಲ್ಲಿ ಕಾಯುತ್ತಿರಬೇಕಾಗಿತ್ತು. ಯಾರಾದರೂ ಈ ಲಿಂಗಾಯಿತ ಅಥವಾ ಬ್ರಾಹ್ಮಣರು ನೀರು ಸೇದುತ್ತಿರುವ ಸಂದರ್ಭದಲ್ಲಿ ಕಾಡಿ-ಬೇಡಿ ಕುಡಿಯಲು ಯೋಗ್ಯವಾದ ನೀರನ್ನು ಪಡೆಯಬೇಕಾದಂತಹ ಪರಿಸ್ಥಿತಿ ಆ ಗ್ರಾಮದ ದಲಿತರ ಸ್ಥಿತಿಯಾಗಿತ್ತು.

೧೯೪೨ ಫೆಬ್ರವರಿಯಲ್ಲಿ ನಡೆಯುವ ಮಾರಮ್ಮ ಜಾತ್ರೆಗೆ ಆ ಗ್ರಾಮಕ್ಕೆ ವೆಂಕಟಮ್ಮ ಎಂಬ ದಲಿತ ಸ್ವತಂತ್ರ ಹೋರಾಟಗಾರ್ತಿಯು ಸಂಬಂಧಿಕರ ಮನೆಗೆ ಜಾತ್ರೆಗೆ ಬಂದಿದ್ದು ಕುಡಿಯಲು ನೀರು ಕೊಟ್ಟರು. ಅದು ಉಪ್ಪು ನೀರಾಗಿದ್ದರಿಂದ ಅವರು ಮತ್ತು ಅವರ ಮಕ್ಕಳು ಕುಡಿಯಲು ನಿರಾಕರಿಸಿದರು. ಸಿಹಿ ನೀರಿನ ಬಗ್ಗೆ ವಿಚಾರಿಸಿದಾಗ ಸಂಬಂಧಿಕರು ವಾಸ್ತವ ಪರಿಸ್ಥಿತಿಯನ್ನು ವಿವರಿಸಿದರು. ಅಲ್ಲದೆ ಮಧ್ಯಾಹ್ನವಾಗಿದ್ದರಿಂದ ಊರಿನ ಯಾವ ಲಿಂಗಾಯಿತರು, ಬ್ರಾಹ್ಮಣರು ಬಾವಿಯ ಹತ್ತಿರ ಇಲ್ಲದಿರುವುದರಿಂದ ನೀರನ್ನು ಸೇದಿ ಕೊಡಲು ಯಾರು ಇರುವುದಿಲ್ಲ. ಹಾಗಾಗಿ ಇದೇ ನೀರನ್ನು ಬಳಸುವಂತೆ ತಿಳಿಸಿದರು. ಇದರಿಂದ ಕೋಪಗೊಂಡ ವೆಂಕಟಮ್ಮನವರು ಹಗ್ಗ ಮತ್ತು ಬಿಂದಿಗೆಯೊಂದಿಗೆ ಸಿಹಿ ನೀರಿನ ಬಾವಿಯಲ್ಲಿ ನೀರು ಸೇದಲು ಹೊರಟರು. ಸಂಬಂಧಿಕರ ಮನೆಯವರು ಎಷ್ಟೇ ಬುದ್ಧಿ ಹೇಳಿದರೂ ಕೇಳದೆ ಬಾವಿಯಲ್ಲಿ ನೀರನ್ನು ಸೇದಲು ಹೋದರು. ಈ ಸಂದರ್ಭದಲ್ಲಿ ಲಿಂಗಾಯಿತ ಸಮುದಾಯದ ವ್ಯಕ್ತಿಯೊಬ್ಬ ಬಂದು ನೀರು ಸೇದುವುದನ್ನು ತಡೆದು ನಮ್ಮ ಬಾವಿಯನ್ನು ಅಪವಿತ್ರಗೊಳಿಸಿದೆ ಎಂದು ನಿಂದಿಸಿದನು. ಅವನ ಬೆದರಿಕೆಗೂ ಸಹ ವೆಂಕಟಮ್ಮನು ಅಂಜದೆ ಧೈರ್ಯವಾಗಿ ನೀರು ಸೇದಿದರು. ಅಲ್ಲದೆ ಸರ್ಕಾರಕ್ಕೆ ಜಿಲ್ಲಾ ಕಲೆಕ್ಟರ್‌ಗೆ ದೂರು ನೀಡುವುದಾಗಿ ಹೇಳಿ ಮನೆಗೆ ಬಂದರು. ಕೋಪಗೊಂಡ ಲಿಂಗಾಯಿತ ಸಮುದಾಯದವರು ಕೇವಲ ಬೆರಳೆಣಿಕೆಯಷ್ಟಿದ್ದು ಹೆಚ್ಚಿನ ಸಂಖ್ಯೆಯಲ್ಲಿದ್ದ ದಲಿತರನ್ನು ಎದುರು ಹಾಕಿಕೊಳ್ಳದೇ ಉಪಾಯವಾಗಿ ದಲಿತ ಮುಖಂಡರನ್ನು ಕರೆಸಿ ಆ ಹೆಣ್ಣು ಮಗಳಿಗೆ ಬುದ್ಧಿ ಹೇಳಿ ಎಚ್ಚರಿಕೆ ನೀಡುವಂತೆ ತಿಳಿಸಿದರು. ಇನ್ನು ಮುಂದೆ ಈಗಾಗದಂತೆ ನೋಡುಕೊಳ್ಳುವಂತೆ ಅಜ್ಞಾಪಿಸಿದರು. ಆದರೆ ವಿದ್ಯಾವಂತೆಯಾಗಿದ್ದ ವೆಂಕಟಮ್ಮ ತಮ್ಮ ಕೇರಿಯ ಎಲ್ಲ ಯುವಕರು, ಮುಖಂಡರು ಹಾಗೂ ಮಹಿಳೆಯರಿಗೆ ಅರಿವು ಮೂಡಿಸಿ ಧೈರ್ಯ ತುಂಬಿದರು. ಎಲ್ಲರನ್ನು ಒಗ್ಗೂಡಿಸಿ ಬಾವಿಯಲ್ಲಿ ನೀರನ್ನು ಸೇದಿಸಿದರು. ಈ ಕಾರ್ಯದಿಂದಾಗಿ ಲಿಂಗಾಯಿತರು, ಬ್ರಾಹ್ಮಣರು ಕೋಪಗೊಂಡರೂ ಬಾವಿ ನೀರನ್ನು ಸೇದುವುದನ್ನು ತಡೆಯುವಲ್ಲಿ ವಿಫಲರಾದರು. ಸಿಹಿ ನೀರಿನ ಬಾವಿಯಲ್ಲಿ ಅಂದಿನಿಂದ ನಿರಂತರವಾಗಿ ದಲಿತ ಸಮುದಾಯದವರು ನೀರನ್ನು ಬಳಸುವಂತಾಯಿತು. ಹೀಗೆ ವೆಂಕಟಮ್ಮನವರ ಶ್ರಮದಿಂದ ಹುಣಸೂಡು ಗ್ರಾಮದಲ್ಲಿ ಬಾವಿ ನೀರಿಗಾಗಿ ನಡೆದ ಹೋರಾಟ ಯಶಸ್ವಿಯಾಯಿತು. ಈ ಘಟನೆಯನ್ನು ಇಂದಿಗೂ ಅಲ್ಲಿನ ಹಿರಿಯರು ನೆನಪಿಸಿಕೊಳ್ಳುತ್ತಾರೆ.[೯]

೫.೧೧. ಗುಬ್ಬಿಯ ರಂಗನಾಥಸ್ವಾಮಿ ದೇವಾಲಯದ ಘಟನೆ

ಗುಬ್ಬಿಯ ದಲಿತ ಕಾಲೋನಿಯಲ್ಲಿ ವಾಸವಾಗಿದ್ದ ಕರಿಯಣ್ಣ ಎಂಬ ದಲಿತ ಮುಖಂಡರು ಸ್ವಾತಂತ್ರ್ಯ ಪೂರ್ವದಲ್ಲಿಯೇ ಸ್ವಲ್ಪಮಟ್ಟಿನ ಅಕ್ಷರ ಜ್ಞಾನ ಪಡೆದು ತಮ್ಮ ಸಮುದಾಯದ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯವನ್ನು ಮಾಡುತ್ತಿದ್ದರು. ಇವರು ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಅಸ್ಪೃಶ್ಯತಾ ಆಚರಣೆಯ ವಿರುದ್ಧ ಹಲವಾರು ಹೋರಾಟಗಳನ್ನು ಕೈಗೊಂಡಿದ್ದರು. ಗುಬ್ಬಿಯ ರಂಗನಾಥಸ್ವಾಮಿ ದೇವಾಲಯಕ್ಕೆ ಕೇವಲ ಸವರ್ಣೀಯರಿಗೆ ಮಾತ್ರ

ಪ್ರವೇಶವಿತ್ತು. ದಲಿತ ವರ್ಗದವರು ಯಾವುದೇ ಕಾರಣಕ್ಕೂ ದೇವಾಲಯದ ದ್ವಾರಬಾಗಿಲು ಬಳಿ ಪ್ರವೇಶಿಸುವುದನ್ನೂ ನಿರ್ಬಂಧಿಸಲಾಗಿತ್ತು. ಇದನ್ನು ಕಂಡ ಕರಿಯಣ್ಣನವರು ತಮ್ಮ ಕೇರಿಯ ಕೆಲವು ತಿಳುವಳಿಕೆ ಉಳ್ಳಂತಹ ದಲಿತ ಯುವಕರನ್ನು ಒಂದುಗೂಡಿಸಿ ದೇವಾಲಯ ಪ್ರವೇಶಕ್ಕೆ ಅವಕಾಶ ಮಾಡಿಕೊಡಬೇಕೆಂದು ರಂಗನಾಥಸ್ವಾಮಿ ದೇವಾಲಯದ ಅರ್ಚಕರಲ್ಲಿ ಮನವಿ ಮಾಡಿಕೊಂಡರು. ಇದರಿಂದಾಗಿ ದೇವಾಲಯದ ಅರ್ಚಕರು ಮತ್ತು ಕೆಲ ಸವರ್ಣೀಯ ಮುಖಂಡರು ಇವರ ಮನವಿಯನ್ನು ನಿರಾಕರಿಸಿದ್ದರಲ್ಲದೇ, ಅವರನ್ನು ನಿಂದಿಸಿ ತೀವ್ರವಾಗಿ ಹಲ್ಲೆ ಮಾಡಿದರು. ಸ್ವಾಭಿಮಾನಿಯಾದ ಕರಿಯಣ್ಣನವರು ಈ ಘಟನೆಯಿಂದ ಬೇಸತ್ತು ತಮ್ಮ ಹುಟ್ಟಿನ ಊರಾದ ಗುಬ್ಬಿಯನ್ನೇ ತೊರೆದು ಕುಟುಂಬ ಸಮೇತರಾಗಿ ಶಿವಮೊಗ್ಗಕ್ಕೆ ವಲಸೆ ಹೋದರು. ಶಿವಮೊಗ್ಗದಲ್ಲಿ ಸಣ್ಣಪುಟ್ಟ ಕೆಲಸ ಮಾಡಿಕೊಂಡು ಕಷ್ಟಪಟ್ಟು ದುಡಿದು ಜಮೀನು ಸಂಪಾದಿಸಿ ಉತ್ತಮ ಸ್ಥಿತಿಯನ್ನು ತಲುಪಿದರು. ಆದರೆ ಇವರಿಗೆ ಎಷ್ಟೇ ಹಣ ಆಸ್ತಿ ಗಳಿಸಿದರೂ, ದೇವಾಲಯ ಪ್ರವೇಶ ಸಂದರ್ಭದಲ್ಲಿ ಉಂಟಾಗಿದ್ದ ನಿಂದನೆ ಅಪಮಾನ ದಿನನಿತ್ಯ ಕೊರಗುವಂತೆ ಮಾಡಿದ್ದವು. ನಂತರ ಈ ರಂಗನಾಥ ದೇವಾಲಯ ಪ್ರವೇಶಿಸಿ ಪೂಜೆ ಸಲ್ಲಿಸಲೇಬೇಕೆಂಬ ಹಠದಿಂದ ಗುಬ್ಬಿಗೆ ಬಂದರು. ಆದರೆ ಆ ಐತಿಹಾಸಿಕ ಪುರಾತನ ದೇವಾಲಯ ಶಿಥಿಲಾವಸ್ಥೆಯಿಂದ ಬಾಗಿಲು ಮುಚ್ಚಿತ್ತು. ಇದನ್ನು ಕಂಡ ಕರಿಯಪ್ಪನವರು ಮತ್ತಷ್ಟು ಮರುಗಿದರು.

ಒಂದು ತೀರ್ಮಾನಕ್ಕೆ ಬಂದು ಅಲ್ಲಿನ ಸವರ್ಣೀಯ ಮುಖಂಡರ ಜೊತೆ ಮಾತನಾಡಿ ದೇವಾಲಯ ನವೀಕರಿಸುವುದಕ್ಕೆ ಎಲ್ಲಾ ರೀತಿಯ ಸಹಾಯ ಮಾಡುವುದಾಗಿ ತಿಳಿಸಿದರು. ಇದಕ್ಕೆ ಅಲ್ಲಿನ ಸವರ್ಣೀಯರು ಸಮ್ಮತಿಸಿದರು. ನಂತರ ಕರಿಯಪ್ಪನವರು ನಾನು ನವೀಕರಿಸಿ ಕೊಡುವುದಕ್ಕೆ ಒಂದು ಷರತ್ತು ಇದೆ. ಅದನ್ನು ಪೂರೈಸುವುದಾದರೆ ದೇವಾಲಯ ನವೀಕರಿಸುವುದಕ್ಕೆ ಮುಂದಾಗುವೆ ಎಂಬ ವಿಚಾರವನ್ನು ತಿಳಿಸಿದರು. ದಲಿತ ಸಮುದಾಯಕ್ಕೆ ಈ ದೇವಾಲಯ ಪ್ರವೇಶಕ್ಕೆ ಅವಕಾಶ ನೀಡಬೇಕೆಂಬ ಬೇಡಿಕೆಯನ್ನು ಇಟ್ಟರು. ಇದಕ್ಕೆ ಸವರ್ಣೀಯರು ಮೊದಲಿಗೆ ಹಿಂಜರಿದರೂ, ಕೆಲ ಸವರ್ಣೀಯರು ದೇವಾಲಯ ನಮಗೆ ಮುಖ್ಯ ಎಂಬ ಭಾವನೆಯಿಂದ ಷರತ್ತಿಗೆ ಒಪ್ಪಿಕೊಂಡರು. ಹಾಗಾಗಿ ಕೆಲ ಸವರ್ಣೀಯ ಮುಖಂಡರ ಸಹಾಯದಿಂದ ಜೀರ್ಣೋದ್ಧಾರ ಕೆಲಸ ಕೈಗೊಂಡು ನವೀಕರಣ ಮಾಡಲಾಯಿತು. ಅಂದಿನಿಂದ ದಲಿತ ಸಮುದಾಯದವರಿಗೂ ರಂಗನಾಥಸ್ವಾಮಿ ದೇವಾಲಯ ಪ್ರವೇಶಕ್ಕೆ ಮುಕ್ತವಾಗಿ ತೆರೆಯಿತು. ಇದಕ್ಕೆ ಕರಿಯಪ್ಪನವರ ಸ್ವಾಭಿಮಾನ ಮತ್ತು ತಮ್ಮ ಸಮುದಾಯದ ಬಗ್ಗೆ ಇದ್ದಂತಹ ಅಪಾರವಾದ ಕಾಳಜಿಯಿಂದ ಮುಕ್ತ ಅವಕಾಶ ದೊರೆಯುವಂತಾಯಿತು. ಅಂದಿನಿಂದಲೂ ಆ ಕುಟುಂಬಸ್ಥರು ಪ್ರತಿವರ್ಷ ಈ ದೇವಾಲಯಕ್ಕೆ ದೇಣಿಗೆಯನ್ನು ನೀಡುತ್ತಲೇ ಬರುತ್ತಿದ್ದಾರೆ.[೧೦]

೫.೧೨. ಕೊತ್ತನಹಳ್ಳಿಯ ಹೋರಾಟ

ಮದ್ದೂರು ತಾಲ್ಲೂಕಿನ ಕೊಪ್ಪ ಹೋಬಳಿಯ ಕೊತ್ತನಹಳ್ಳಿಯಲ್ಲೂ ಹೋರಾಟ ನಡೆಯಿತು. ಈ ಊರಿನ ಎಲ್ಲಾ ಅಸ್ಪೃಶ್ಯ ಜನಾಂಗದವರು ಒಂದುಗೂಡಿ ಕೆರೆಯ ನೀರನ್ನು ಮುಟ್ಟಿ

ನೀರನ್ನು ಕುಡಿಯಲು ಮುಂದಾದರು. ಕಾರಣ ಈಗಾಗಲೇ ಮೈಸೂರು ಸಂಸ್ಥಾನವು ಹೊರಡಿಸಿದ್ದ ಸರ್ಕಾರಿ ಆಜ್ಞೆಯಿಂದ ಪ್ರೇರೇಪಿತರಾದ ಈ ಊರಿನ ಜನರು ಪ್ರತಿ ಮನೆಯಿಂದ ಎರಡು ಮೂರು ಬಿಂದಿಗೆ, ಗಡಿಗೆಗಳನ್ನು ತೆಗೆದುಕೊಂಡು ಸುಮಾರು ೪೦೦ ಜನರು ಜೈಕಾರ ಹಾಕಿಕೊಂಡು ನೀರು ತರಲು ಹೋದರು. ಈ ವಿಷಯ ಒಕ್ಕಲಿಗರ ಕೇರಿಗೆ ಮಿಂಚಿನಂತೆ ಹರಡಿತು. ಎರಡು ಕೋಮಿನ ಜನರ ನಡುವೆ ಹೊಡೆದಾಟ ನಡೆದಿದ್ದರಿಂದ ಅನೇಕರಿಗೆ ಗಾಯಗಳಾದವು. ಏಟು ತಿಂದ ಹೆಂಗಸರು ಒಕ್ಕಲಿಗರನ್ನು ಶಪಿಸಿದರು. ಅಷ್ಟರಲ್ಲಿ ಪೋಲೀಸರು ಬಂದು ಗಲಾಟೆಯನ್ನು ಶಮನಗೊಳಿಸಿದರು. ಒಕ್ಕಲಿಗ ಜನಾಂಗದವರಿಂದ ದೌರ್ಜನ್ಯಕ್ಕೊಳಗಾಗಿದ್ದ ಈ ಊರಿನ ಅಸ್ಪೃಶ್ಯರು ಬ್ರಿಟೀಶ್ ಅಧಿಕಾರಿಯಾಗಿದ್ದ ರೆವರೆಂಡ್ ಸಾಡೆ ಅವರನ್ನು ಭೇಟಿ ಮಾಡಿ ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದುವ ಅಭಿಲಾಷೆಯನ್ನು ವ್ಯಕ್ತಪಡಿಸಿದರು. ದಲಿತರು ತಮ್ಮ ಸಾಮಾಜಿಕ ಭದ್ರತೆಯನ್ನು ಕಾಪಾಡಿಕೊಳ್ಳುವ ಸಲುವಾಗಿ ಮತಾಂತರಗೊಳ್ಳಲು ಮುಂದಾಗಿರಬಹುದು. ಈ ವಿಷಯ ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದನ್ನು ಗಮನಿಸಿದ ಅಯ್ಯರ್ ಅವರು ಮುರುಗೇಶನ್ ಪಿಳ್ಳೆ, ಎಂ. ನಿಥಕ್ಕರ್ ಬಾಬಾ ಅವರೊಡನೆ ಮೈಸೂರಿಗೆ ಬಂದು ಅಲ್ಲಿನ ಜಿಲ್ಲಾಧಿಕಾರಿಯೊಂದಿಗೆ ಕೊತ್ತನಹಳ್ಳಿಗೆ ಬಂದರು. ಎರಡು ಕೋಮಿನ ಜನರನ್ನು ಗ್ರಾಮದಲ್ಲಿನ ಲಕ್ಷ್ಮೀದೇವಿಯ ಗುಡಿಯಲ್ಲಿ ಸೇರಿ ಪಂಚಾಯಿತಿ ನಡೆಸಿ ಅಸ್ಪೃಶ್ಯರು ಕೆರೆಯ ನೀರು ತೆಗೆದುಕೊಳ್ಳುವಂತೆ ತೀರ್ಮಾನ ಕೊಟ್ಟು, ದಲಿತರನ್ನು ಉದ್ದೇಶಿಸಿ ನಿಮಗೆಲ್ಲಾ ಸ್ವಾತಂತ್ರ್ಯ ಬರುತ್ತದೆ. ಆಗ ನೀವು ಮತ ಹಾಕುವ ಹಕ್ಕನ್ನು ಪಡೆಯುತ್ತೀರಿ. ನಿಮ್ಮಲ್ಲಿ ಅನೇಕರು ಶಾಸಕರು ಮಂತ್ರಿಗಳು ಆಗಬಹುದು. ಮತಾಂತರಗೊಂಡರೆ ಈ ಅವಕಾಶ ತಪ್ಪುತ್ತದೆ ಎಂದು ದಲಿತರಲ್ಲಿ ಮನಪರಿವರ್ತನೆ ಮಾಡಿದರು. ದಲಿತರು ಅಂದೇ ಅಸ್ಪೃಶ್ಯತೆಯ ವಿರುದ್ಧ ಬಂಡೆದ್ದು ಮತಾಂತರಕ್ಕೆ ಮುಂದಾದದ್ದು ಒಂದು ರೀತಿಯ ಬದಲಾವಣೆಗೆ ಸಹಕಾರಿಯಾಯಿತು. ಈ ಸಂದರ್ಭದಲ್ಲಿ ಅಯ್ಯರ್ ಒಕ್ಕಲಿಗರ ಮನಪರಿವರ್ತನೆ ಮಾಡುವಲ್ಲಿ ಯಶಸ್ವಿಯಾದರು.[೧೧]

ಈ ಊರಿನ ಜನರು ಏಕೆ ಮತಾಂತರ ಹೊಂದಲು ಮುಂದಾಗಿರಬಹುದೆಂದರೆ ಕ್ರೈಸ್ತ ಧರ್ಮದಲ್ಲಿ ಯಾವುದೇ ಸಾಮಾಜಿಕ ಸಂಕೋಲೆಗಳಿರಲಿಲ್ಲ. ಅಸ್ಪೃಶ್ಯರಿಗೆ ಆರೋಗ್ಯದ ಮಹತ್ವದ ಬಗ್ಗೆ ತಿಳುವಳಿಕೆ ನೀಡುವುದು ಶಾಲೆ ಮತ್ತು ದೇವಾಲಯಗಳಿಗೆ ಮುಕ್ತ ಪ್ರವೇಶಾವಕಾಶ ನೀಡಿದುದು. ಹಾಗೆಯೇ ಇವರ ವ್ಯಕ್ತಿತ್ವ ರೂಪಿಸಿ ಕೊಡುವುದಕ್ಕೆ ಯಾವುದೇ ತೊಡರುಗಳಿಲ್ಲದ್ದರಿಂದ ಮೈಸೂರು ಸಂಸ್ಥಾನದಲ್ಲಿ ಅಂದಿನ ದಿನಗಳಲ್ಲಿ ಅಸ್ಪೃಶ್ಯರು ಮತಾಂತರ ಹೊಂದಲು ಮುಂದಾದರು ಎನ್ನಬಹುದು. ಆದರೆ ಅನೇಕ ಮಂದಿ ದಲಿತ ಹಿಂದೂಗಳು ಕ್ರೈಸ್ತಧರ್ಮಕ್ಕೆ ಮತಾಂತರ ಹೊಂದಿದ್ದ ಅಸ್ಪೃಶ್ಯರನ್ನು ಮತ್ತೆ ಹಿಂದೂ ಧರ್ಮಕ್ಕೆ ಬರುವ ಹಾಗೆ ಮಾಡಿ ಶುದ್ಧ ಕಾರ್ಯವನ್ನು ಕೈಗೊಂಡರು. ಅಂತಹವರುಗಳಲ್ಲಿ ತಗಡೂರು ರಾಮಚಂದ್ರರಾಯರು ಮತ್ತು ಗೋವಿಂದಾಚಾರ್ಯ ಸ್ವಾಮಿಗಳು ಪ್ರಮುಖರು. ಹೀಗಿದ್ದರೂ ಕೊತ್ತನಹಳ್ಳಿಯಂತಹ ಅನೇಕ ಘಟನೆಗಳು ಇಂದಿಗೂ ನಡೆಯುತ್ತಿದ್ದು ಊರಿನಿಂದ ಬಹಿಷ್ಕಾರ, ಹಲ್ಲೆ ನಡೆಸುವುದು, ಕಬ್ಬಿಣದ ಸರಪಳಿ ಬಿಗಿದು

ದುಡಿಸಿಕೊಳ್ಳುವಂತಹ ದುಷ್ಕೃತ್ಯಗಳು ನಡೆಯುತ್ತಿದ್ದು, ಅಸ್ಪೃಶ್ಯರು ಸಾಮೂಹಿಕವಾಗಿ ಮತಾಂತರ ಹೊಂದುವ ನಿರ್ಧಾರಕ್ಕೆ ಬರುತ್ತಿದ್ದಾರೆ.[೧೨]

೫.೧೩. ಸೋಮನಹಳ್ಳಿಯ ಘಟನೆ

೧೯೩೨ರಲ್ಲಿ ಸೋಮನಹಳ್ಳಿಯ ರಾಮಸಿಂಗಯ್ಯ ಎಂಬ ಪಂಚಮ ಯುವಕನ ಮದುವೆ ನಡೆಯಿತು. ಈ ಮದುವೆಯ ಕಾರ್ಯಕ್ರಮಕ್ಕೆ ಅಯ್ಯರ್ ಅವರು ಬಂದಿದ್ದರು. ಏಕೆಂದರೆ ಅಯ್ಯರ್ ಅವರ ಅಚ್ಚುಮೆಚ್ಚಿನ ವಿದ್ಯಾರ್ಥಿಗಳಲ್ಲಿ ರಾಮಸಿಂಗಯ್ಯನವರು ಸಹ ಒಬ್ಬರಾಗಿದ್ದರು. ಸೋಮನಹಳ್ಳಿಯ ಗೌಡರು ಬಹಳ ಪ್ರಬಲರಾಗಿದ್ದು, ಪಂಚಮರು ಸವರ್ಣೀಯರ ಬೀದಿಯಲ್ಲಿ ಚಪ್ಪಲಿ ಹಾಕಿಕೊಂಡು ನಡೆಯುವಂತಿರಲಿಲ್ಲ. ಈಗಾಗಲೇ ಅಯ್ಯರ್ ಅವರ ಪ್ರಭಾವಕ್ಕೊಳಗಾಗಿ ವಿದ್ಯೆ ಕಲಿತ ಮೊದಲ ತಲೆಮಾರಿನ ಯುವಕರು ಚರ್ಚಿಸಿ ನಾವು ಸವರ್ಣೀಯರ ಬೀದಿಯಲ್ಲಿ ಚಪ್ಪಲಿ ಹಾಕಿಕೊಂಡು ನಡೆದೆ ತಿರುಗುತ್ತೇವೆ ಎಂಬ ಪ್ರತಿಜ್ಞೆ ಮಾಡಿದ್ದರು. ಇವರ ಪ್ರತಿಜ್ಞೆಯ ಹಿಂದೆ ಬದಲಾಗುತ್ತಿದ್ದ ರಾಜಕೀಯ ಪರಿಸ್ಥಿತಿ ಮತ್ತು ದಲಿತ ಪರವಾದ ಕಾನೂನುಗಳ ಬಗ್ಗೆ ವಿದ್ಯಾವಂತ ದಲಿತರಿಗೆ ಜ್ಞಾನವಿದ್ದದ್ದು. ಹಾಗಾಗಿ ರಾಮಸಿಂಗಯ್ಯ ಅವರು ತಮ್ಮ ಮದುವೆಯ ದಿನವೇ ನನ್ನ ಹೆಣ ಬಿದ್ದರೂ ಸರಿಯೇ ನಾನು ಚಪ್ಪಲಿ ಹಾಕಿಕೊಂಡು ಸವರ್ಣೀಯರ ಬೀದಿಯಲ್ಲಿ ನಡೆದು ಬರುತ್ತೇನೆ ಎಂದು ಪ್ರತಿಜ್ಞೆ ಮಾಡಿ ಅದರಂತೆ ಮದುವೆ ಮನೆಗೆ ನಡೆದು ಬಂದರು. ಇದರಿಂದ ಕೋಪೋದ್ರಿಕ್ತರಾದ ಸವರ್ಣೀಯರು ರಾಮಸಿಂಗಯ್ಯನವರನ್ನು ಶಪಿಸಿದರು.

ಊರಿನ ಸವರ್ಣೀಯರೆಲ್ಲಾ ಒಂದಾಗಿ ಚಿಕ್ಕರಸಿನಕೆರೆಯಲ್ಲಿ ಚರ್ಚಿಸಿ ದಲಿತರ ಸೊಕ್ಕನ್ನು ಅಡಗಿಸಬೇಕೆಂದು ನಿರ್ಧರಿಸಿದ್ದರು. ಆದರೆ ಮಹಾರಾಜರ ಮತ್ತು ಅಯ್ಯರ್ ಅವರ ಕೃಪಕಟಾಕ್ಷ ದಲಿತರ ಪರವಾಗಿ ಇದ್ದುದ್ದರಿಂದ ಅದು ಸಾಧ್ಯವಾಗಲಿಲ್ಲ. ಚಿಕ್ಕರಸಿನಕೆರೆಯಲ್ಲಿ ನಡೆದ ಚರ್ಚೆಯ ನಂತರದ ದಿನವೇ ರಾಮಸಿಂಗಯ್ಯ ಅವರು ಅದೇ ಸ್ಥಳದಲ್ಲಿ ಹರಿಜನ ಸಮ್ಮೇಳನವನ್ನು ಕರೆದಿದ್ದರು. ಈ ವಿಷಯ ಅಯ್ಯರ್ ಅವರಿಗೆ ಮೊದಲೇ ತಿಳಿದಿದ್ದರಿಂದ ಮದ್ದೂರಿನ ಅಮಾಲ್ದಾರರಿಗೆ ಪತ್ರ ಬರೆದು ರಾಮಸಿಂಗಯ್ಯ ಅವರಿಗೆ ಎಲ್ಲಾ ರಕ್ಷಣೆಯನ್ನು ನೀಡಿ ಇಲ್ಲವಾದರೆ ನಿಮಗೆ ತೊಂದರೆಯಾಗುತ್ತದೆ ಎಂದು ಎಚ್ಚರಿಸಿದ್ದರು.[೧೩]

೫.೧೪. ರೈಲ್ವೆ ಕಛೇರಿಯ ಪ್ರಕರಣ

೧೯೩೫ರ ಜುಲೈ ತಿಂಗಳ ಶನಿವಾರ ಕೆ.ಎಸ್. ಬೋರಯ್ಯನವರಿಗೆ ಅಯ್ಯರ್ ಅವರು ಮೈಸೂರು ನಗರದ ರೈಲ್ವೆ ಕಛೇರಿಯಲ್ಲಿ ನೌಕರಿಯನ್ನು ಕೊಡಿಸಿದರು. ಮರುದಿನವೇ ಕಛೇರಿಯಲ್ಲಿ ಮುಖ್ಯ ಗುಮಾಸ್ತರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಮಹಾದೇವಪ್ಪನವರಿಗೆ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಲಾಗಿತ್ತು. ಆದರೆ ಈ ಕಾರ್ಯಕ್ರಮಕ್ಕೆಂದು ಬೋರಯ್ಯನವರಿಂದ ಒಂದು ರೂಪಾಯಿ ತೆಗೆದುಕೊಂಡಿದ್ದರೂ, ಅವರು ಹೊಲೆಯ ಎಂಬ ಕಾರಣಕ್ಕಾಗಿ ಮಾರ್ಡನ್ ಹಿಂದೂ ಹೊಟೇಲ್‌ನಲ್ಲಿ ಏರ್ಪಡಿಸಲಾಗಿದ್ದ ಭೋಜನಕ್ಕೆ ಆಹ್ವಾನಿಸಲಿಲ್ಲ. ಇದೇ ಕಛೇರಿಯಲ್ಲಿ

ನೌಕರಿಯಲ್ಲಿದ್ದ ಮೊಹಿಯುದ್ದೀನ್ ಸ್ಪಿಪಿನ್ ಮತ್ತು ದೇವಾಂಗದ ದೇವರತ್ನರು ಇದನ್ನು ವಿರೋಧಿಸಿ ಬೋರಯ್ಯನವರಿಗೆ ಬೆಂಬಲವಾಗಿ ನಿಂತರು. ಮೈಸೂರು ವಿಭಾಗದ ಕಮ್ಯುನಿಸಂನ ಕಾರ್ಯದರ್ಶಿಯಾಗಿದ್ದ ಬೋರಯ್ಯ ಅವರು ತಮಗಾದ ವಿಷಯವನ್ನು ಹಿಂದೂ ಪತ್ರಿಕೆಯಲ್ಲಿ ಪ್ರಕಟಿಸಿದರು. ವಿಷಯ ತಿಳಿದ ಅಯ್ಯರ್ ಮೈಸೂರಿಗೆ ಬಂದು ಸಂಚಾರ ನಿಯಂತ್ರಣ ವ್ಯವಸ್ಥಾಪಕರಾಗಿದ್ದ ಎ.ಎ. ಖಾನ್‌ರವರಿಗೆ ದೂರು ನೀಡಿ ಸಹಾಯಕ ಸಂಚಾರ ನಿಯಂತ್ರಣ ವ್ಯವಸ್ಥಾಪಕರಾದ ಕೆ. ಗುಂಡಪ್ಪನವರಿಗೆ ಹೀಗೆಲ್ಲ ನಡೆದರೆ ರೈಲ್ವೆ ಸಂಚಾರವನ್ನು ಬಂದ್ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು. ಈ ಮಾತಿನಿಂದ ಬಹಳ ವಿನಯದಿಂದ ಎದ್ದು ನಿಂತು ತಪ್ಪಾಯಿತು ಎಂದು ಕೇಳಿಕೊಂಡರು. ಒಟ್ಟಾರೆ ಇದರಿಂದ ತಿಳಿದುಬರುವ ಅಂಶವೆಂದರೆ 'ಬಾಬಾ ಸಾಹೇಬ್ ಅಂಬೇಡ್ಕರ್' ಅವರು ಹೇಳಿದಂತೆ ಭಾರತದಲ್ಲಿ ಸವರ್ಣೀಯರ ಮನೋಭಾವ ಬದಲಾವಣೆಯಾಗದೇ ಹೊರತು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಸಾಧ್ಯವಿಲ್ಲ' ಎಂಬಂತೆ ನಾಲ್ವಡಿಯವರ ಸರ್ಕಾರ ಪಂಚಮರ ಪರವಾಗಿ ಯಾವುದೇ ಕಾನೂನು ಜಾರಿಗೆ ತಂದರೂ ಸಹ ಸವರ್ಣೀಯರ ಮನೋಭಾವ ಮಾತ್ರ ಬದಲಾಗಲೇ ಇಲ್ಲ.[೧೪]

೫.೧೫. ರಾವಣಿ ಘಟನೆ

ಮಳವಳ್ಳಿ ತಾಲ್ಲೂಕು ರಾವಣಿ ಗ್ರಾಮದಲ್ಲಿ ಪ್ರಾಥಮಿಕ ಶಾಲೆಯನ್ನು ಉದ್ಘಾಟನೆ ಮಾಡುವ ಕಾರ್ಯಕ್ರಮದಲ್ಲಿ ಅಯ್ಯರ್ ಅವರು ೧೯೨೧ರ ಮಾರ್ಚ್ ತಿಂಗಳಿನಲ್ಲಿ ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ರಾವಣಿ ಗ್ರಾಮದಲ್ಲಿ ಊರಿನ ಗ್ರಾಮದೇವತೆಗಳಾದ ಚಿಕ್ಕ ತಾಯಮ್ಮ ಮತ್ತು ದೊಡ್ಡ ತಾಯಮ್ಮನ ಜಾತ್ರೆಯು ನಡೆದಿತ್ತು. ಇಂದಿಗೂ ಈ ಜಾತ್ರೆ ವರ್ಷಕ್ಕೊಮ್ಮೆ ಮಾರ್ಚ್ ಅಥವಾ ಏಪ್ರಿಲ್ ತಿಂಗಳಿನಲ್ಲಿ ನಡೆಯುತ್ತದೆ. ಈ ಸಂದರ್ಭದಲ್ಲಿ ಸವರ್ಣೀಯ ಜನಾಂಗದವರ ಉತ್ತೇಜನಕ್ಕೆ ಒಳಗಾದ ದಲಿತ ವರ್ಗದ ಜನರು ದನ, ಎಮ್ಮೆ, ಮೇಕೆಯನ್ನು ಬಲಿ ಕೊಡುವ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬಂದಿದ್ದರು. ಹಾಗೆಯೇ ಸವರ್ಣೀಯರು ತಮ್ಮ ಮನೆಯಲ್ಲಿ ಸತ್ತ ದನ ಎಮ್ಮೆಗಳನ್ನು ಹೊರ ಹಾಕುವ ಕಾರ್ಯಕ್ರಮಗಳನ್ನು ಈ ಜನಾಂಗದವರಿಗೆ ನೀಡುತ್ತಿದ್ದರು. ಇದನ್ನರಿತ ಅಯ್ಯರ್ ಅವರು ಈ ಹಬ್ಬದಲ್ಲಿ ಪ್ರಾಣಿಗಳನ್ನು ಬಲಿ ಕೊಡುವುದನ್ನು ನಿರ್ಬಂಧಿಸುವ ಕಟ್ಟಪ್ಪಣೆಯನ್ನು ಜಾರಿಗೆ ತರಲು ಸಂಬಂಧಿಸಿದ ಆಡಳಿತಾಧಿಕಾರಿಗಳಲ್ಲಿ ಒತ್ತಾಯಿಸಿದರು. ಅಲ್ಲದೆ ಸವರ್ಣೀಯರು ನೀಡುತ್ತಿದ್ದ ಸತ್ತ ದನ ಎಮ್ಮೆಗಳನ್ನು ಮುಟ್ಟಬಾರದೆಂದು ದಲಿತ ಜನರಿಗೆ ಹೇಳಿದರು. ಇವರ ಮಾತಿನಿಂದ ಪ್ರಭಾವಿತರಾದ ದಲಿತರು ಅಂದಿನಿಂದಲೇ ಎಮ್ಮೆ ದನ, ಮೇಕೆಗಳನ್ನು ಕಡಿಯುವುದನ್ನೇ ನಿಲ್ಲಿಸಿದರು. ಅಲ್ಲದೇ ಸವರ್ಣೀಯರು ಕೊಡುತ್ತಿದ್ದ ಸತ್ತ ಪ್ರಾಣಿಗಳನ್ನು ಮುಟ್ಟುವುದಿಲ್ಲವೆಂದು ಪ್ರಮಾಣ ಮಾಡಿದರು.

ಇದೇ ಗ್ರಾಮದಲ್ಲಿ ನೀರಿನ ಕಟ್ಟೆಯೊಂದು ಊರಗೌಡ ಒಕ್ಕಲಿಗನ ಜಮೀನಿಗೆ ಹೊಂದಿಕೊಂಡಂತೆ ಇದ್ದಿತು. ಆದರೆ ದಲಿತ ವರ್ಗದ ಜನ ಈ ಕಟ್ಟೆಯ ನೀರಿನಲ್ಲಿ ಬಟ್ಟೆ

ತೊಳೆಯಲು ಮತ್ತು ದನ ಕರುಗುಳಿಗೆ ನೀರು ಕುಡಿಸಲು ಹೋದಾಗ ಎರಡು ಕೋಮಿನ ನಡುವೆ ಘರ್ಷಣೆ ನಡೆಯಿತು.

ದಲಿತರು ಕಟ್ಟೆಯ ನೀರನ್ನು ಬಳಸದಂತೆ ಸವರ್ಣೀಯರು ನಿಷೇಧಿಸಿದ್ದರಲ್ಲದೆ ಮುಳ್ಳುಬೇಲಿಯನ್ನು ಹಾಕಿ ಮುಚ್ಚಿದ್ದರು. ಈ ವಿಷಯವನ್ನು ಅಯ್ಯರ್ ಅವರ ಬಳಿ ದಲಿತ ವರ್ಗದ ಜನರು ಹೇಳಿಕೊಂಡರು. ಇದನ್ನು ಪರಿಶೀಲಿಸಿದ ಅಯ್ಯರ್ ಮಳವಳ್ಳಿ ತಾಲ್ಲೂಕಿನ ಅಮಲ್ದಾರರನ್ನು ಕರೆಯಿಸಿ ವಿಚಾರಿಸಿ ಸವರ್ಣೀಯರ ಮನವೊಲಿಸಿದ ಅಯ್ಯರ್ ಮುಚ್ಚಲಾಗಿದ್ದ ಕಟ್ಟೆಯನ್ನು ತೆಗೆಸಿ ದಲಿತರು ಕಟ್ಟೆಯ ನೀರನ್ನು ಬಳಸಿಕೊಳ್ಳುವಂತೆ ಆಜ್ಞೆ ಕೊಡಿಸಿದರು. ಇದರಿಂದಾಗಿ ಅಯ್ಯರ್ ಮೈಸೂರು ಸಂಸ್ಥಾನದಲ್ಲಿ ಎಷ್ಟು ಪ್ರಭಾವಶಾಲಿಗಳಾಗಿದ್ದರು ಎಂಬುದು ತಿಳಿದು ಬರುತ್ತದೆ.[೧೫]

೫.೧೬. ಮಳವಳ್ಳಿಯ ಕುನ್ನಿರುಕಟ್ಟೆ ಘಟನೆ

ಮೈಸೂರು ಸಂಸ್ಥಾನ ಹೊರಡಿಸಿದ ಆಜ್ಞೆ ಮತ್ತು ೧೯೨೭ರಲ್ಲಿ ಅಂಬೇಡ್ಕರ್ ಮುಂದಾಳತ್ವದಲ್ಲಿ ನಡೆದ ಚೌಡರ್ ಕೆರೆ ಹೋರಾಟದಿಂದ ಪ್ರಭಾವಿತರಾದ ಮಳವಳ್ಳಿಯ ಅಸ್ಪೃಶ್ಯ ಜನರು ಕುನ್ನೀರುಕಟ್ಟೆಯ ನೀರನ್ನು ಬಳಸಲು ಮುಂದಾದರು. ಈ ಕುನ್ನೀರುಕಟ್ಟೆ(ಇಂದು ಕೆ.ಎಸ್.ಆರ್.ಟಿ.ಸಿ. ಬಸ್‌ನಿಲ್ದಾಣಕ್ಕೆ ಹೊಂದಿಕೊಡಂತೆ ಎದುರಿಗೆ ಕಂಡುಬರುವ ಮತ್ತು ಬಲಭಾಗದ ಕಡೆ ಇರುವ ಸ್ಥಳವಾಗಿದೆ.) ಇದ್ದ ಸ್ಥಳದಲ್ಲಿ ತೋಟಗಾರಿಕೆ ಇಲಾಖೆಯವರು ಮತ್ತು ಪ್ರಭಾವಿ ಕೆಲವು ವ್ಯಕ್ತಿಗಳು ಸ್ಥಳವನ್ನು ಆವರಿಸಿಕೊಂಡಿರುತ್ತಾರೆ. ಈ ನೀರು ಕುಡಿಯಲು ಯೋಗ್ಯವಾಗಿದ್ದು, ಖನಿಜಯುಕ್ತವಾದುದ್ದರಿಂದ ಟಿಪ್ಪುಸುಲ್ತಾನರು ಕುಡಿಯಲು ಇಲ್ಲಿಂದ ನೀರನ್ನು ತರಿಸಿಕೊಳ್ಳುತ್ತಿದ್ದರಂತೆ. ಈ ಕಾರಣದಿಂದಾಗಿ ಈ ಕಟ್ಟೆಯಲ್ಲಿ ಯಾರು ಪಾತ್ರೆ ದನ ಕರು ತೊಳೆಯುವುದಾಗಲಿ ಬಟ್ಟೆ ಒಗೆಯುವುದಾಗಲಿ ಮಾಡಬಾರದೆಂದು ಪುರಸಭೆಯು ಆಜ್ಞೆಯನ್ನು ಹೊರಡಿಸಿತ್ತು. ಆದರೆ ಈ ಕಟ್ಟೆಯ ನೀರನ್ನು ಅಸ್ಪೃಶ್ಯರು ಬಳಸುವಂತಿರಲಿಲ್ಲ. ಆದ್ದರಿಂದ ಮಳವಳ್ಳಿಯ ಎಂ. ಮಾದಯ್ಯ ಇದೇ ವೇಳೆಗೆ ಮೈಸೂರು ಸಂಸ್ಥಾನ ಹೊರಡಿಸಿದ ಆಜ್ಞೆಯಿಂದಾಗಿ ಯಾವ ಹೋರಾಟಕ್ಕೆ ಅವಕಾಶ ಮಾಡಿಕೊಡದೆ ಅಮಲ್ದಾರರ ಮೂಲಕ ಕುನ್ನೀರುಕಟ್ಟೆಯ ಒಂದು ಭಾಗದಲ್ಲಿ ಅಸ್ಪೃಶ್ಯರು ನೀರು ತೆಗೆದುಕೊಳ್ಳಲು ಮೆಟ್ಟಿಲನ್ನು ಕಟ್ಟಿಸಿ ವ್ಯವಸ್ಥೆ ಮಾಡಿಸಿಕೊಟ್ಟರು. ಪರಿಣಾಮ ೧೯೩೭ ಏಪ್ರಿಲ್ ತಿಂಗಳ ಮೊದಲ ವಾರದಲ್ಲಿ ಕುನ್ನೀರುಕಟ್ಟೆಯ ನೀರು ತರಲು ತಮ್ಮ ಜನರನ್ನು ಮೆರವಣಿಗೆಯ ಮೂಲಕ ಹೋದರು. ಇದನ್ನು ಸಹಿಸದ ಸವರ್ಣೀಯರು ಮತ್ತು ಮುಸ್ಲಿಮರು ಮೆಟ್ಟಿಲುಗಳ ಮೇಲೆ ಮಲ ಪಾಪಸ್‌ಕಳ್ಳಿಯನ್ನು ಕತ್ತರಿಸಿ ಹಾಕಿದರು. ಹಾಗೆಯೇ ಹರಿಜನ ಕೇರಿಯ ಮೇಲೆ ದಾಳಿ ನಡೆಸಿ ಇಪ್ಪತ್ತೆರಡು ಜನರನ್ನು ಥಳಿಸಿ ಮಾರಾಕಾಸ್ತ್ರಗಳಿಂದ ಹಲ್ಲೆ ಮಾಡಿದರು. ಸವರ್ಣೀಯರ ಮನೆಗಳಲ್ಲಿ ಜೀತಕ್ಕಿದ್ದ ಅಸ್ಪೃಶ್ಯರನ್ನು ಹೊಡೆದು ಓಡಿಸಿದರಲ್ಲದೆ ಸೀಮೆಎಣ್ಣೆ, ಉಪ್ಪು, ಕಾಳು ಏನೂ ಸಹ ಕೊಡದಂತೆ ಬಹಿಷ್ಕಾರ ಹಾಕಿದರು. ಇಂತಹ

ಘಟನೆಗಳು ೨೧ನೆಯ ಶತಮಾನದಲ್ಲಿಯೂ ಮುಂದುವರೆದುಕೊಂಡು ಬಂದಿರುವುದು ಜಾತ್ಯತೀತ ಮೌಲ್ಯಗಳನ್ನು ಹೊಂದಿರುವ ದೇಶಕ್ಕೆ ಕಳಂಕ ತರುವ ಸಂಗತಿಯೆಂದೇ ಹೇಳಬಹುದು. ಧೃತಿಗೆಟ್ಟ ಅಸ್ಪೃಶ್ಯರು ಹೋರಾಟದ ಮುಂದಾಳುಗಳನ್ನು ದೂರಿದರು. ಕೊನೆಗೆ ದಲಿತ ಮುಂದಾಳುಗಳು ಅಸ್ಪೃಶ್ಯ ಉಪಾಧ್ಯಾಯರಿಂದ ಒಂದೊಂದು ರೂಪಾಯಿ ಸಂಗ್ರಹಿಸಿ ಆದಿಕರ್ನಾಟಕ ಅಭಿವೃದ್ಧಿ ಸಂಘವನ್ನು ಸ್ಥಾಪಿಸಿದರು. ಈ ಸಂಘದ ವತಿಯಿಂದ ಕೆಲಸ ಕಳೆದುಕೊಂಡ ಜೀತಗಾರರಿಗೆ ಇಟ್ಟಿಗೆ ಅಚ್ಚು ಮಾಡುವ ಜೊತೆಗೆ ಇಟ್ಟಿಗೆಯ ಗೂಡುಕಟ್ಟಿ ಬೇಯಿಸುವ ಉದ್ದಿಮೆಯನ್ನು ಪ್ರಾರಂಭಿಸಿದರು ಹಾಗೂ ಬೆಂಗಳೂರಿನ ಬಿನ್ನಿಮಿಲ್‌ನ ಸಹಕಾರದಿಂದ ಬಹಿಷ್ಕಾರಕ್ಕೊಳಗಾದವರಿಗೆ ಅಗತ್ಯ ವಸ್ತುಗಳನ್ನು ಪೂರೈಸುವ ಕಾರ್ಯ ಮಾಡಲಾಯಿತು.

ಅಸ್ಪೃಶ್ಯರು ಊರಿನಿಂದ ಹೊರಗೆ ಹೋಗದಂತೆ ತಡೆಯಲು ಸವರ್ಣೀಯರು ಕಾವಲು ಕಾಯುತ್ತಿದ್ದರು. ಡಿ. ರುದ್ರಯ್ಯ(ಪಶುಸಂಗೋಪನಾ ಇಲಾಖೆಯ ನಿರ್ದೇಶಕರಾಗಿ ನಿವೃತ್ತರಾದವರು) ಈ ಗಲಾಟೆಯಿಂದ ಗಾಬರಿಕೊಂಡು ಇದನ್ನು ಹೇಗಾದರೂ ಮಾಡಿ ತಡೆಯಬೇಕೆಂದು ಕ್ಷೌರಕತ್ತಿಯೊಂದನ್ನು ಕೈಯಲ್ಲಿ ಹಿಡಿದು ೧೨ ಕಿ.ಮೀ. ಮದ್ದೂರಿನವರೆಗೆ ನಡೆದು ಬಂದು ಅಲ್ಲಿಂದ ರೈಲು ಹತ್ತಿ ಬೆಂಗಳೂರು ತಲುಪಿದರು. ಬೆಂಗಳೂರಿನಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆ ಬರೆಯುತ್ತಿದ್ದ ಮಳವಳ್ಳಿಯ ಎಂ. ಶಂಕರಯ್ಯನವರಿಗೆ ಊರಿನಲ್ಲಿ ನಡೆದ ಘಟನೆಯನ್ನು ತಿಳಿಸಿದರು. ಈ ಘಟನೆಯಲ್ಲಿ ೨೨ ಜನರು ಕಾಣೆಯಾಗಿದ್ದನ್ನು ಕೇಳಿ ದಿಗ್ಭ್ರಾಂತರಾದ ಶಂಕರಯ್ಯ ಅವರು ರುದ್ರಯ್ಯನವರನ್ನು ಕರೆದುಕೊಂಡು ಅಯ್ಯರ್ ಅವರ ಬಳಿಗೆ ಹೋಗಿ ವಿಷಯ ತಿಳಿಸಿದರು. ತಕ್ಷಣವೇ ಕಲಾಸಿಪಾಳ್ಯದಲ್ಲಿ ವಾಸವಾಗಿದ್ದ ಮುರುಗೇಶನ್ ಪಿಳ್ಳೆ ಪಾಮಡಿ ಸುಬ್ಬರಾಯಶೆಟ್ಟಿ ಮತ್ತು ಹರಿಜನ ಸೇವಕ ಸಂಘದ ವಿ. ರಾಮಚಂದ್ರರವರನ್ನು ಭೇಟಿ ಮಾಡಿ ಎಲ್ಲರೂ ಮಿರ್ಜಾರವರಿಗೆ ವಿಷಯ ತಿಳಿಸಿದರು. ಅವರ ಅಪ್ಪಣೆಯ ಮೇರೆಗೆ ಮೂವತ್ತು ಜನ ಪೋಲೀಸ್‌ರನ್ನು ಕರೆದುಕೊಂಡು ಮಳವಳ್ಳಿಗೆ ಬಂದು ಮೂರು ಸುತ್ತು ಗುಂಡು ಹಾರಿಸಿದರು. ಪರಿಣಾಮವಾಗಿ ಊರಿನ ಗಲಾಟೆಯು ಸಹಜ ಸ್ಥಿತಿಗೆ ಮರಳಿತು. ಹಾಗಾಗಿ ಅಂದು ಟಿ. ಮಾದಯ್ಯ ಅವರ ತಾಯಿ ಮುಂದೆ ಬಂದು ಪೋಲೀಸರ ಸಮ್ಮುಖದಲ್ಲಿ ಕುನ್ನೀರುಕಟ್ಟೆಯಿಂದ ಒಂದು ಕೊಡ ನೀರು ತಂದರು.[೧೬]

ಇದಾದ ಒಂದು ತಿಂಗಳ ತರುವಾಯ ಅಂದರೆ ಮೇ ತಿಂಗಳ ಕೊನೆ ವಾರದಲ್ಲಿ ಸಿ.ಡಿ. ಮಾದಯ್ಯನವರ ಮಗಳಾದ ಚಿಕ್ಕಣ್ಣಮ್ಮ ಎಂಬ ಯುವತಿ ತಾಮ್ರದ ಕೊಡ ತೆಗೆದುಕೊಂಡು ಕುನ್ನೀರುಕಟ್ಟೆಯಿಂದ ನೀರು ತರಲು ಹೊರಟ್ಟಿದ್ದರು. ಇದನ್ನು ಸಹಿಸದ ಸವರ್ಣೀಯರು, ಮುಸಲ್ಮಾನರು ಚಿಕ್ಕಣ್ಣಮ್ಮನ ಕೊಡ ಕಿತ್ತುಕೊಂಡು ಬಾವಿಗೆ ಎಸೆದು ಆಕೆಯನ್ನು ಥಳಿಸಿದರು. ಕೊಡ ತಂದ ಅಸ್ಪೃಶ್ಯರು ಬಾವಿಯಿಂದ ಮತ್ತೆ ನೀರು ತರಲು ಉತ್ತೇಜಿಸಿದರು. ಆಕೆಯು ಕಟ್ಟೆಯಲ್ಲಿ ನೀರು ಮೊಗೆದು ತರುತ್ತಿದ್ದಾಗ ನೂರಾರು ಸವರ್ಣೀಯರು ಸೇರಿ ದೊಣ್ಣೆ, ಮಚ್ಚು,

ಕತ್ತಿಗಳನ್ನಿಡಿದು ಕೇರಿಗೆ ನುಗ್ಗಿದರು ಹಾಗೂ ಚಿಕ್ಕಣ್ಣಮ್ಮ ತುಂಬಾ ಬೇಸರಗೊಂಡಳು. ಪರಿಣಾಮ ಎರಡು ಕೋಮಿನವರು ಹೊಡೆದಾಡುತ್ತಿರುವಾಗ ಆವೇಶ ಭರಿತರಾದ ಎಂ. ಮಾದಯ್ಯ, ಚಿಕ್ಕಲಿಂಗಯ್ಯ ಮತ್ತು ಡಿ. ರುದ್ರಯ್ಯನವರು ಸವರ್ಣೀಯರನ್ನು ಕೆಡವಿಕೊಂಡು ಮನಸ್ಸೋ ಇಚ್ಛೇ ಥಳಿಸಿ ಅಡ್ಡಗೆರೆ ಎಳೆದು 'ನೀವೇನಾದರೂ ಈ ಗೆರೆ ದಾಟಿ ಬಂದರೆ ಹೆಣಗಳು ಬೀಳುತ್ತವೆ ಹುಷಾರ್' ಎಂದು ಎಚ್ಚರಿಸಿ ಅಬ್ಬರಿಸಿದರು. ಈ ವೇಳೆಗೆ ಬಂದ ಪೊಲೀಸರು ಕೆಲವರನ್ನು ಬಂಧಿಸಿ ಕೇಸು ದಾಖಲು ಮಾಡಿ ಕೆಲವರ ಕೈಗೆ ಬೇಡಿ ಹಾಕಿದರು. ವಿಷಯ ತಿಳಿದ ಗೋಪಾಲಸ್ವಾಮಿ ಅಯ್ಯರ್ ಮಳವಳ್ಳಿಗೆ ಬಂದು ಇಪ್ಪತ್ತೇಳು ಜನ ಆರೋಪಿಗಳನ್ನು ಬಂಧಿಸಿ ಕೇಸು ದಾಖಲು ಮಾಡಿಸಿದರಲ್ಲದೆ, ನೊಂದವರಿಗೆ ಸಾಂತ್ವನ ಹೇಳಿದರು. ಮಳವಳ್ಳಿಯಿಂದ ಶ್ರೀರಂಗಪಟ್ಟಣ ಬಹಳ ದೂರವಿದ್ದ ಕಾರಣ ಪಿರ್ಯಾಧಿಗಾಗಿ ಶ್ರೀರಂಗಪಟ್ಟಣಕ್ಕೆ ಹೋಗಿ ಬರುವುದು ಅಸ್ಪಶ್ಯರಿಗೆ ಕಷ್ಟವಾಗಿದ್ದಿತು. ಆದ್ದರಿಂದ ಅಯ್ಯರ್ ಸರ್ಕಾರದ ಗಮನ ಸೆಳೆದು ಮಳವಳ್ಳಿಯಲ್ಲಿಯೇ ವಿಶೇಷ ನ್ಯಾಯಾಲಯವನ್ನು ಸ್ಥಾಪಿಸುವಂತೆ ಮಾಡಿದರು. ಇದು ಅಸ್ಪೃಶ್ಯರ ಅನುಕೂಲಕೋಸ್ಕರ ನಿರ್ಮಾಣಗೊಂಡ ನ್ಯಾಯಾಲಯವನ್ನು ನೋಡಿ ಸವರ್ಣೀಯರು ಹೆದರಿದರು. ಈ ಘಟನೆಯಲ್ಲಿ ಪಾಲ್ಗೊಂಡಿದ್ದ ಸವರ್ಣೀಯ ಅಪರಾಧಿಗಳಿಗೆ ನ್ಯಾಯಾಲಯ ಹದಿನಾಲ್ಕು ವರ್ಷ ಜೈಲು ಶಿಕ್ಷೆ ವಿಧಿಸಿತು. ಈ ಹೋರಾಟದ ಪರಿಣಾಮವಾಗಿ ಅಸ್ಪೃಶ್ಯರು ಕುನ್ನೀರುಕಟ್ಟೆ ನೀರನ್ನು ಬಳಸುವ ಹಕ್ಕು ಪಡೆದು ಜಯಶಾಲಿಗಳಾದರು.[೧೭]

೫.೧೭. ಹೆಮ್ಮನಹಳ್ಳಿಯ ಘಟನೆ

ಮದ್ದೂರು ತಾಲ್ಲೂಕು ಹೆಮ್ಮನಹಳ್ಳಿಯ ಲೆಕ್ಕಾಧಿಕಾರಿಯಾಗಿ ನಿವೃತ್ತಿ ಹೊಂದಿದ ಪ್ರಥಮ ತಲೆಮಾರಿನ ದಲಿತ ಕವಿಗಳಲ್ಲಿ ಒಬ್ಬರಾದ ಜಿ. ವೆಂಕಟಯ್ಯನವರ ಗ್ರಾಮವಾಗಿತ್ತು. ಇವರ ತಮ್ಮ ದಾಯಾದಿಗಳು ವಾಸವಾಗಿದ್ದ ನಿಡಗಟ್ಟ ಗ್ರಾಮದ ಪಂಚಮರ ಬಡಾವಣೆಗಾಗಿ ಸರಕಾರಕ್ಕೆ ಅರ್ಜಿಯನ್ನು ಸಲ್ಲಿಸಿದ್ದರು. ಇಲ್ಲಿಯೂ ಸಹ ಬಡಾವಣೆಗಾಗಿ ಕೇಳಿದ ಸ್ಥಳವು ಎಸ್.ಸಿ. ಮಲ್ಲಯ್ಯನವರ ಬಂದುಗಳಾಗಿದ್ದ ಕೆಂಪಟ್ಟೆಗೌಡರಿಗೆ ಸೇರಿದ್ದಿತು. ಹಾಗಾಗಿ ಹತ್ತು ವರ್ಷಗಳಿಂದಲೂ ಸಲ್ಲಿಸಿದ್ದ ಅರ್ಜಿಗಳು ಕಾಣೆಯಾಗಿದ್ದವು. ಈ ವಿಷಯ ಕುರಿತು ಅಯ್ಯರ್ ಅವರಿಗೆ ತಿಳಿಸಿದಾಗ ಅವರು ಮದ್ದೂರಿನ ಅಮಾಲ್ದಾರರಿಗೆ ಪತ್ರ ಬರೆದು ಸೋಮನಹಳ್ಳಿಯಲ್ಲಿ ತೆಗೆದುಕೊಂಡ ತೀರ್ಮಾನದಂತೆಯೇ ಹೆಮ್ಮನಹಳ್ಳಿಯಲ್ಲಿಯೂ ತೆಗೆದುಕೊಳ್ಳಿ ಎಂದು ಪತ್ರ ಬರೆದರು. ಈ ಪತ್ರದಿಂದ ಪ್ರಭಾವಿತರಾದ ಅಮಾಲ್ದಾರರು ಕೆಂಪಟ್ಟೆಗೌಡರ ಹೊಲವನ್ನು ಪಂಚಮರ ನಿವಾಸಕ್ಕಾಗಿ ಹಂಚಿಕೆ ಮಾಡಿದರು. ಪರಿಣಾಮವಾಗಿ ಕೋಪಗೊಂಡ ಗೌಡರು ಪ್ರಭಾವಿ ವ್ಯಕ್ತಿಯಾಗಿದ್ದರಿಂದ ಹದಿನೈದು ದಿನಗಳೊಳಗೆ ಗುಮಾಸ್ತರಾಗಿದ್ದ ಜಿ. ವೆಂಕಟಯ್ಯನವರನ್ನು ತಿಪಟೂರಿನ ಹತ್ತಿರವಿದ್ದ ಕೊಪ್ಪ ಎಂಬ ಗ್ರಾಮಕ್ಕೆ ವರ್ಗಾವಣೆ ಮಾಡಿಸಿದರು. ಇನ್ನು ನಿಡಗಟ್ಟ ವಿಷಯವಾಗಿ ಈಡಿಗ ಜನಾಂಗಕ್ಕೆ ಸೇರಿದ ಅಪ್ಪಾಜಿಗೌಡರು ಹೆಮ್ಮನಹಳ್ಳಿಯಲ್ಲಿ ತೆಗೆದುಕೊಂಡ ನಿರ್ಧಾರಕ್ಕೆ ಹೆದರಿ

ಯಾವ ತಕರಾರು ಮಾಡದೆ ಪಂಚಮರಿಗೆ ಆರು ಎಕರೆ ಹೊಲವನ್ನು ಬಡಾವಣೆಗಾಗಿ ಬಿಟ್ಟುಕೊಟ್ಟರು.[೧೮]

೫.೧೮. ಹುಲಿಯೂರುದುರ್ಗದ ಘಟನೆ

ಗ್ರಾಮೀಣ ಪ್ರದೇಶದಲ್ಲಿರುವ ಹೊಟೇಲ್‌ಗಳು ವಿಕೃತವಾದ ಬಗೆಯಲ್ಲಿ ಅಸ್ಪೃಶ್ಯತೆಯನ್ನು ಆಚರಣೆ ಮಾಡುವುದನ್ನು ಎಲ್ಲರೂ ಗಮನಿಸಿರುವ ವಿಷಯ. ಸಾಮಾನ್ಯವಾಗಿ ಗ್ರಾಮಗಳಲ್ಲಿ ಲಿಂಗಾಯಿತರು, ಕುರುಬರು, ಬೆಸ್ತರು, ಗಾಣಿಗರು ಆ ಊರಿಗೆ ಸಂಬಂಧಿಸಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಹೊಟೇಲ್‌ಗಳನ್ನು ತೆರೆದಿರುತ್ತಾರೆ. ಅಲ್ಲಿ ಅದೇ ಊರಿನ ದಲಿತರು ಚಹಾ ಸೇವನೆಗೆ ಬಂದರೆ ಸ್ವತಃ ತಮ್ಮ ಮನೆಯಿಂದ ಲೋಟ ತಂದು ಹೋಟೆಲ್ ಹೊರಗಡೆ ನಿಂತು ಚಹಾ ಕುಡಿದು ದೂರದಿಂದಲೇ ಮಾಲೀಕರು ಇಟ್ಟಿರುವ ತಟ್ಟೆಗೆ ನಿಗದಿಪಡಿಸಿದ ಹಣವನ್ನು ಹಾಕಿ ಹೋಗಬೇಕಾಗಿತ್ತು. ಲೋಟ ತಾರದೇ ಬಂದರೆ ಹೊಟೇಲ್‌ನ ಹೊರಗಡೆ ಇವರಿಗಾಗಿಯೇ ಸವರ್ಣೀಯರು ಪ್ರತ್ಯೇಕವಾಗಿ ಇಟ್ಟಿರುವ ಲೋಟವನ್ನು ತೆಗೆದುಕೊಂಡು ಚಹ ಕುಡಿದು ನಂತರ ಅದನ್ನು ಅವರೇ ತೊಳೆದು ಎಲ್ಲಿತ್ತೋ ಅಲ್ಲಿಯೇ ಇಟ್ಟು ಹೋಗಬೇಕಾದ ನಿಯಮ ಹಿಂದಿನಿಂದ ನಡೆದುಕೊಂಡು ಬಂದಿದೆ. ಇಂದು ಪ್ಲಾಸ್ಟಿಕ್ ಲೋಟಗಳು ಈ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ಬಗೆಹರಿಸಿವೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುವುದನ್ನು ನೋಡಬಹುದು. ಇದನ್ನು ವಿರೋಧಿಸಿ ಪ್ರತಿಭಟಿಸಿದರೆ ನಡೆಯುವುದೇ ದೌರ್ಜನ್ಯ. ಇಂತಹ ಒಂದು ಘಟನೆಯು ಮಾಗಡಿ ತಾಲ್ಲೂಕಿನ ಹುಲಿಯೂರುದುರ್ಗ ಜಾತ್ರೆಯಲ್ಲಿ ನಡೆದಿತ್ತು. ಜಾತ್ರೆಯಲ್ಲಿ ಹಾಕಿದ ಗುಡಿಸಲು ಹೊಟೇಲ್‌ಗಳಿಗೆ ಅಸ್ಪೃಶ್ಯರು ಹೋದರು. ಅಲ್ಲಿದ್ದ ಊರಗೌಡರು ಮತ್ತು ಸವರ್ಣೀಯರು ಒಳಹೋದ ಅಸ್ಪೃಶ್ಯರನ್ನು ಹೊಟೇಲ್‌ನಿಂದ ಹೊರಗೆ ದಬ್ಬಿದರು. ಇದನ್ನು ಸಹಿಸದ ಅಸ್ಪೃಶ್ಯರು ಅವರ ವಿರುದ್ಧ ತಿರುಗಿ ಬಿದ್ದರು. ಕಾರಣ ಇದೇ ವೇಳೆಗೆ ಮೈಸೂರು ಸಂಸ್ಥಾನವು ೧೯೩೨ರಲ್ಲಿ ಕಾನೂನೊಂದನ್ನು ಜಾರಿಗೆ ತಂದು ಅಸ್ಪೃಶ್ಯರು ಸಾರ್ವಜನಿಕ ಕೆರೆಕಟ್ಟೆ ಬಾವಿಗಳಲ್ಲಿ ಹೊಟೇಲ್‌ಗಳಿಗೆ ಮುಕ್ತ ಪ್ರವೇಶ ನೀಡಬೇಕೆಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿತ್ತು. ಇದರಿಂದ ಪ್ರಭಾವಿತರಾಗಿದ್ದ ಈ ಗ್ರಾಮದ ಅಸ್ಪೃಶ್ಯರು ಸವರ್ಣೀಯರ ವಿರುದ್ಧ ತಿರುಗಿ ಬಿದ್ದರು. ಇದನ್ನು ಸಹಿಸದ ಸವರ್ಣೀಯರು ಅಸ್ಪೃಶ್ಯರನ್ನು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ಹೊರಹಾಕಿದರು. ಇದರಿಂದ ಮನನೊಂದು ಸಂಘಟಿತರಾದ ಅಸ್ಪೃಶ್ಯರು ಈ ವೇಳೆಗಾಗಲೇ ಅಯ್ಯರ್ ಅವರ ಪ್ರಭಾವದಿಂದ ಶಿಕ್ಷಣ ಪಡೆದು ಅಕ್ಷರ ಜ್ಞಾನ ಬಲ್ಲವರಾಗಿದ್ದರು. ಹಾಗಾಗಿ ಅಯ್ಯರ್ ಅವರ ಶಿಷ್ಯರುಗಳು ಒಟ್ಟಿಗೆ ಸೇರಿ ನಡೆದ ಘಟನೆಯ ಬಗ್ಗೆ ಅಯ್ಯರ್ ಅವರಿಗೆ ಪತ್ರ ಬರೆದರು. ಪತ್ರ ತಲುಪಿದ ದಿನವೇ ಬೆಂಗಳೂರಿನಿಂದ ಹುಲಿಯೂರುದುರ್ಗಕ್ಕೆ ಬಂದ ಅಯ್ಯಾರ್ ಪೊಲೀಸ್ ಅಧಿಕಾರಿಗೆ ದೂರು ನೀಡಿದರು. ಪರಿಣಾಮವಾಗಿ ಪೊಲೀಸರು ಆ ದಿನವೇ ಇಬ್ಬರು ಸವರ್ಣೀಯರನ್ನು ಬಂಧಿಸಿದರು. ಇದರಿಂದ ಅಸ್ಪೃಶ್ಯರ ಹೋರಾಟಕ್ಕೆ ಜಯ ಲಭಿಸಿತು.[೧೯]

೫.೧೯. ಕೊಮ್ಮರಹಳ್ಳಿ ಘಟನೆ

'ಹರಿಯುವ ನೀರಿಗೆ ದೊಣ್ಣೆನಾಯಕನ ಅಪ್ಪಣೆ ಬೇಕೆ?' ಎಂಬ ಮಾತಿನಂತೆ ಕುನ್ನೀರುಕಟ್ಟೆಯ ಘಟನೆಯಂತಹ ಮತ್ತೊಂದು ಘಟನೆಯು ಮಂಡ್ಯದ ಹತ್ತಿರವಿರುವ ಕೊಮ್ಮರಹಳ್ಳಿ ಕೆರೆಯ ಪ್ರಕರಣದಲ್ಲಿ ಕಾಣಬಹುದು. ಈ ಊರಿನ ಅಸ್ಪೃಶ್ಯರು ಅಂಬೇಡ್ಕರ್ ಮತ್ತು ಅಯ್ಯರ್ ಅವರಿಂದ ಪ್ರಭಾವಿತರಾಗಿದ್ದರಲ್ಲದೆ, ಮಳವಳ್ಳಿಯ ಕುನ್ನೀರುಕಟ್ಟೆಯ ಹೋರಾಟ ಇವರಲ್ಲಿ ಹೊಸ ಹುರುಪನ್ನು ತುಂಬಿತ್ತು. ಪರಿಣಾಮವಾಗಿ ಎಚ್ಚೆತ್ತುಕೊಂಡು ಸಂಘಟಿತರಾದ ಅಸ್ಪೃಶ್ಯರು ಕೆರೆಯ ನೀರು ಬಳಸುವುದು ತಮ್ಮ ಹಕ್ಕು ಎಂದು ತಿಳಿದು ಕೆರೆಯಿಂದ ನೀರು ತರಲು ಮುಂದಾದರು. ಆದರೆ ಈ ಗ್ರಾಮದಲ್ಲಿ ಪ್ರಬಲರಾಗಿದ್ದ ಒಕ್ಕಲಿಗರು ಅಸ್ಪೃಶ್ಯರ ಮೇಲೆ ದಾಳಿ ಮಾಡಿದರು. ಇದರಿಂದ ರೊಚ್ಚಿಗೆದ್ದ ಅಸ್ಪೃಶ್ಯರು ಕುಡುಗೋಲು, ಮಚ್ಚು, ಕತ್ತಿ, ದೊಣ್ಣೆಗಳನ್ನು ಹಿಡಿದು ಹೋರಾಡಿದರು. ಎರಡು ಕೋಮಿನ ನಡುವೆ ಮಾರಮಾರಿ ನಡೆದು ಏಳು ಮಂದಿ ಪ್ರಾಣ ಕಳೆದುಕೊಂಡರು. ಇದರಿಂದಾಗಿ ಗ್ರಾಮದಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಯಿತು. ವಿಷಯ ತಿಳಿದ ಅಯ್ಯರ್ ಮಂಡ್ಯಕ್ಕೆ ಬಂದು ಜಿಲ್ಲಾಧಿಕಾರಿಯು ಸೇರಿದಂತೆ ಮೀಸಲು ಪೋಲೀಸ್ ಪಡೆಯೊಂದಿಗೆ ಕೊಮ್ಮರಹಳ್ಳಿಗೆ ಬಂದರು. ಎಂಟು ದಿನಗಳ ಕಾಲ ಮಂಡ್ಯದ ಪ್ರವಾಸಿ ಮಂದಿರದಲ್ಲಿ ಉಳಿದುಕೊಂಡು ಪರಿಸ್ಥಿತಿಯನ್ನು ಸುಧಾರಿಸಿದರು. ಇದೇ ವೇಳೆಗೆ ಕೆ.ಎಚ್. ರಾಮಯ್ಯ, ಕೆಂಗಲ್ ಹನುಮಂತಯ್ಯನವರು ಮಧ್ಯಪ್ರವೇಶ ಮಾಡಿ ಒಕ್ಕಲಿಗರಿಗೆ ತಿಳಿ ಹೇಳಿದರು. ಇವರೊಂದಿಗೆ ತಗಡೂರಿನ ರಾಮಚಂದ್ರರಾಯರು ಕೆರೆ ನೀರಿಗೆ ದೊಣ್ಣೆ ನಾಯಕನ ಅಪ್ಪಣೆ ಬೇಕೆ? ಎಂಬ ಕೈಪಿಡಿಯನ್ನು ಮುದ್ರಿಸಿ ಹಂಚಿದರು. ಕೊನೆಗೆ ಅಸ್ಪೃಶ್ಯರು ತಮ್ಮ ಹಕ್ಕನ್ನು ಪಡೆಯುವಲ್ಲಿ ಯಶಸ್ವಿಯಾದರು.[೨೦]

೫.೨೦. ಕಣಿಯರ ಬಿನ್ನಿಮಿಲ್ ಘಟನೆ

೧೯೨೫ ಮೇ ತಿಂಗಳಲ್ಲಿ ಬೆಂಗಳೂರಿನ ಬಿನ್ನಿಮಿಲ್ ಕೆಲಸ ಮಾಡುತ್ತಿದ್ದ ಕಣಿಯರಿಗೂ ಮತ್ತು ಅದೇ ಗಿರಣಿಯಲ್ಲಿ ಕೆಲಸ ಮಾಡುತ್ತಿದ್ದ ಸವರ್ಣೀಯರ ನಡುವೆ ಕ್ಷುಲಕ ಕಾರಣಕ್ಕೆ ಘರ್ಷಣೆ ಉಂಟಾಯಿತು. ಬಿನ್ನಿಮಿಲ್‌ನಲ್ಲಿ ಕೆಲಸ ಮಾಡುತ್ತಿದ್ದ ಕಣಿಯರು ಹಲವಾರು ಶೋಷಣೆ ದಬ್ಬಾಳಿಕೆಗೆ ಒಳಗಾಗಿದ್ದರು. ಕಸ್ತೂರಯ್ಯನೆಂಬ ಕಣಿಯ ಜಾತಿಗೆ ಸೇರಿದ ವ್ಯಕ್ತಿ ಸವರ್ಣೀಯರಾದ ರಂಗಸ್ವಾಮಿ, ದೊರೆಸ್ವಾಮಿ ಎಂಬುವರಿಗೆ ನೀರನ್ನು ಕುಡಿಯಲು ಕೊಟ್ಟಿದ್ದರಿಂದ ಕೋಪಗೊಂಡ ಸವರ್ಣೀಯರು ಅವರಿಗೆ ಕುಡಿಯಲು ನೀರು ಕೊಟ್ಟು ಜಾತಿ ಕೆಡಿಸಿದನೆಂಬ ಕಾರಣದಿಂದ ಕಸ್ತೂರಯ್ಯನ ಮೇಲೆ ಹಲ್ಲೆ ಮಾಡಿದರು. ಏಕೆಂದರೆ ಕಣಿಯರು ಅಸ್ಪೃಶ್ಯರೆಂದು ತೀರ್ಮಾನಿಸಿ ಅವರನ್ನು ಸಾಮಾಜಿಕವಾಗಿ ದೂರವಿಟ್ಟಿದ್ದರು. ಈ ವಿಷಯವಾಗಿ ಗಿರಣಿಯ ಹೊರಗೆ ಅಂದರೆ ಅರಳೇಪೇಟೆಯಲ್ಲಿ ಕಣಿಯರಿಗೂ ಸವರ್ಣೀಯರಿಗೂ ಘರ್ಷಣೆಗಳು ಉಂಟಾದವು. ಇದರಿಂದಾಗಿ ಅಲ್ಲಿನ ಕಣಿಯರು ಭಯ ಭೀತರಾದರು ಹಾಗೂ ಕಸ್ತೂರಯ್ಯನಿಗೆ ಜೀವಬೆದರಿಕೆ ಹಾಕಿದರು.[೨೧]

ನಂತರ ಕಣಿಯರು ಒಂದು ತೀರ್ಮಾನಕ್ಕೆ ಬಂದು ತಗಡೂರು ಗ್ರಾಮ ರಕ್ಷಣಾ ಸಮಿತಿಯ ಕಾರ್ಯದರ್ಶಿಯಾಗಿದ್ದ ರಾಮಚಂದ್ರರಾಯರಿಗೆ ಪತ್ರ ಬರೆದು ನಡೆದ ಎಲ್ಲಾ ವಿಚಾರಗಳನ್ನು ತಿಳಿಸಿ ತಮ್ಮ ಜೀವಕ್ಕೆ ಅಪಾಯವಿದೆಯೆಂದು ತಿಳಿಸಿದರು. ಪತ್ರ ತಲುಪಿದ ನಂತರ ತಗಡೂರು ರಾಮಚಂದ್ರರಾಯರು ಬೆಂಗಳೂರಿಗೆ ಬಂದು ಅರಳೇಪೇಟೆಯಲ್ಲಿ ಸುತ್ತಾಡಿ ಘಟನೆ ಕುರಿತಾಗಿ ಮಾಹಿತಿಯನ್ನು ಸಂಗ್ರಹಿಸಿದರು. ಸವರ್ಣೀಯ ಮುಖಂಡನೆಂದು ಹೇಳಿಕೊಳ್ಳುತ್ತಿದ್ದ ವ್ಯಕ್ತಿಯನ್ನು ಭೇಟಿ ಮಾಡಿ ನಡೆದ ಗಲಾಟೆಯ ಬಗ್ಗೆ ಚರ್ಚಿಸಿ ಕಣಿಯರ ಪರವಾಗಿ ಮಾತನಾಡಿ ಮುಂದೆ ಯಾವುದೇ ರೀತಿಯ ತೊಂದರೆ ನೀಡದಂತೆ ಮನವಿ ಮಾಡಿದರು. ಆದರೆ ಇದಕ್ಕೆ ಆ ಮುಖಂಡ ಒಪ್ಪಲಿಲ್ಲ. ಇವರ ಮನವಿಯನ್ನು ತಿರಸ್ಕರಿಸಿದನು. ಇದರಿಂದಾಗಿ ಅವರು ಪೊಲೀಸಿನವರ ಸಹಾಯ ಕೋರಿದರು. ಪೊಲೀಸ್ ಇಲಾಖೆಯವರು ಸಂಪೂರ್ಣ ಸಹಕಾರ ನೀಡಲು ಒಪ್ಪಿದರು. ತಗಡೂರಿಗೆ ತುಂಬಾ ಆಶ್ಚರ್ಯ ಮತ್ತು ಸಂತೋಷ ಉಂಟಾಯಿತು. ಅಲ್ಲದೇ ಕಣಿಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ನಿಲ್ಲಿಸಿ ಅವರಿಗೂ ಸಹ ಸಮಾಜದಲ್ಲಿ ಉತ್ತಮ ಸ್ಥಾನಮಾನಗಳನ್ನು ದೊರಕಿಸಿ ಕೊಡುವುದೊಂದೇ ಅಲ್ಲದೇ, ಇತರ ಪ್ರದೇಶಗಳಲ್ಲಿರುವ ಕಣಿಯರಿಗೂ ಸಹ ಅರಿವನ್ನು ಮೂಡಿಸಲು ಅವರನ್ನು ಅಸ್ಪೃಶ್ಯತೆಯಿಂದ ರಕ್ಷಿಸಲು ಸರ್ಕಾರದ ಗಮನಕ್ಕೆ ತರಬೇಕೆಂದು ನಿರ್ಧರಿಸಿ ೧೯೨೫ರ ಮೇ ೩೧ ಭಾನುವಾರದಂದು ಗಾಂಧೀ ಮೈದಾನದಲ್ಲಿ ಸಭೆಯನ್ನು ಏರ್ಪಡಿಸಿ ಮುರುಗೇಶನ್ ಪಿಳ್ಳೆಯವರು ಅಧ್ಯಕ್ಷತೆಯನ್ನು ವಹಿಸಲು ಕೋರಿದರು. ಈ ಸಭೆಗೆ ಗೋಪಾಲಸ್ವಾಮಿ ಅಯ್ಯರ್, ಶಾಮಣ್ಣ, ರಾಮಸ್ವಾಮಿ ಅಯ್ಯಂಗಾರ್, ರಾಮಕೃಷ್ಣಯ್ಯ ಮುಂತಾದ ಗಣ್ಯರನ್ನು ಕರೆಸಿದ್ದರು. ಅಲ್ಲಿ ಕಣಿಯರಿಗೂ ಮತ್ತು ಸವರ್ಣೀಯರಿಗೂ ಸೌಹಾರ್ದ ಸಂಬಂಧವನ್ನೆ ಕಲ್ಪಿಸುವುದು ಈ ಸಭೆಯ ಉದ್ದೇಶವಾಗಿತ್ತು. ಗೋಪಾಲಸ್ವಾಮಿ ಅಯ್ಯರ್ ಅವರು ಮಾತನಾಡಿ ಅರಿವನ್ನು ಮೂಡಿಸಲು ಪ್ರಯತ್ನ ಮಾಡಿದರು. ಈ ಸಭೆಯು ಉತ್ತಮವಾದ ತಿಳುವಳಿಕೆಯನ್ನು ನೀಡಲು ಸಹಕಾರಿಯಾಯಿತು ಹಾಗೂ ಸ್ನೇಹ ಸೌಹಾರ್ದಗಳನ್ನು ಏರ್ಪಡಿಸಲು ಈ ಸಭೆ ಉತ್ತಮವಾದ ವೇದಿಕೆಯಾಯಿತು.[೨೨]

ಮರುದಿನ ಟಿಪ್ಪುಸುಲ್ತಾನ್ ಅರಮನೆಯಲ್ಲಿ ಸೇರಿದ್ದ ಅದೇ ಸಭೆ, ಕಣಿಯರು ಹಾಕಿದ್ದ ನ್ಯಾಯಾಲಯದಲ್ಲಿನ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವಂತೆ ಉಭಯ ಜಾತಿಯವರನ್ನು ಒಪ್ಪಿಸಿತು. ಕಣಿಯರ ಚರಿತ್ರೆಯಲ್ಲಿ ಇದೊಂದು ಮಹತ್ವದ ಘಟನೆಯಾಯಿತು. ಅಲ್ಲಿ ಕಣಿಯರಿಗೆ ಸ್ವಲ್ಪಮಟ್ಟಿಗೆ ನ್ಯಾಯ ದೊರಕಿದಂತಾಯಿತು. ಈ ತೀರ್ಪು ಸಾರ್ವತ್ರಿಕವಾಗಿ ಹರಡಲೆಂದು ಕಣಿಯರ ಈ ಅಸ್ಪೃಶ್ಯತಾ ನಿವಾರಣೆ ನಾಡಿನ ಇತರ ಕಣಿಯರಿಗೂ ತಮ್ಮ ಸಾಮಾಜಿಕ ಹಕ್ಕುಗಳನ್ನು ತಿಳಿದುಕೊಳ್ಳಲು ಅನುಕೂಲವಾಗಲೆಂದು ಬೆಂಗಳೂರಿನ ಸಭೆಯಲ್ಲಿ ಚರ್ಚಿತವಾದ ಅಂಶಗಳನ್ನು ಮುದ್ರಿಸಿ ಪ್ರಕಟಿಸಿ ಇತರ ಭಾಗಗಳಲ್ಲಿರುವ ಕಣಿಯರಿಗೆ ಹಂಚಲಾಯಿತು.

ಹೀಗೆ ಬಿನ್ನಿಮಿಲ್ಲಿನಲ್ಲಿ ಕಣಿಯರ ಮೇಲಾಗುತ್ತಿದ್ದಂತಹ ಅಸ್ಪೃಶ್ಯತಾ ಆಪಾದನೆಯನ್ನು ತಗಡೂರು ರಾಮಚಂದ್ರರಾಯರು ಕಾನೂನಿನ ಅರಿವು ಮತ್ತು ಸಭೆಯನ್ನು ಏರ್ಪಡಿಸಿ ಅದರ

ಮುಖಾಂತರ ಸವರ್ಣೀಯರಲ್ಲಿ ತಿಳುವಳಿಕೆ ಮೂಡಿಸಿ ಅಸ್ಪೃಶ್ಯತಾ ನಿವಾರಣೆ ಮಾಡಲು ಪ್ರಯತ್ನಿಸಿದರು.[೨೩]

೫.೨೧. ಕಣಿಯರ ಟಿ. ನರಸೀಪುರದ ಗುಂಜಾ ನರಸಿಂಹಸ್ವಾಮಿ ದೇವಸ್ಥಾನ ಪ್ರವೇಶ ಚಳವಳಿ

ಕಣಿಯರು ಟಿ. ನರಸೀಪುರದ ಗುಂಜಾ ನರಸಿಂಹಸ್ವಾಮಿ ದೇವಾಲಯಕ್ಕೆ ಪ್ರವೇಶಿಸುವ ಸಂಬಂಧ ೧೯೨೫ ಸೆಪ್ಟೆಂಬರ್ ೫ರಂದು ನಡೆದ ಕರ್ನಾಟಕ ಕಣಿಯರ ಮಹಾಸಮ್ಮೇಳನದಲ್ಲಿ ತೀರ್ಮಾನಿಸಲಾಯಿತು. ಮೊದಲನೆಯ ಪ್ರಯತ್ನದಲ್ಲಿ ಕಣಿಯರು ಅಲ್ಲಿನ ಅಮಲ್ದಾರ್ ಮತ್ತು ಪ್ರಬಲ ಸಮುದಾಯಗಳ ವಿರೋಧದಿಂದಾಗಿ ಸಾಧ್ಯವಾಗಲಿಲ್ಲ. ಇದಕ್ಕಾಗಿ ಸತ್ಯಾಗ್ರಹದ ಹಾದಿಯನ್ನು ಹಿಡಿಯಬೇಕಾಯಿತು. ಈ ಸತ್ಯಾಗ್ರಹದ ಪ್ರಯತ್ನ ಒಂದು ವಿಧವಾದ ಸಂಧಾನದಿಂದ ಹಿಂತೆಗೆದುಕೊಳ್ಳಲ್ಪಟ್ಟಿತು. ಎರಡು ಮತ್ತು ಮೂರನೆಯ ಪ್ರಯತ್ನದ ಅವಧಿಯಲ್ಲಿ ಸತ್ಯಾಗ್ರಹಿಗಳ ಮೇಲೆ ಅಧಿಕಾರಿಗಳ ಕಿರುಕುಳ, ದೌರ್ಜನ್ಯ ಹಾಗೂ ಸರ್ಕಾರದ ವಿರೋಧದ ನಡುವೆ ನಿಂತು ಹೋಯಿತು. ಈ ಮೂರು ಚಳವಳಿಗಳು ಯಾವುದೇ ರೀತಿಯ ಫಲಪ್ರದವಾಗಲಿಲ್ಲ. ನಾಲ್ಕನೆಯ ಸತ್ಯಾಗ್ರಹವನ್ನು ೧೯೨೮ರ ಮೇ ೧೮ರಂದು ಮತ್ತೊಮ್ಮೆ ಗುಂಜಾ ನರಸಿಂಹಸ್ವಾಮಿ ದೇವಾಲಯ ಪ್ರವೇಶ ಚಳವಳಿಯನ್ನು ಆರಂಭಿಸುವುದಾಗಿ ತಗಡೂರು ರಾಮಚಂದ್ರರಾಯರು ಘೋಷಿಸಿದರು. ಹಾಗೆಯೇ ಸುತ್ತಮುತ್ತಲ ಹಳ್ಳಿಗಳಿಂದ ಸಾವಿರಾರು ಕಣಿಯರನ್ನು ಸೇರಿಸುವ ಉದ್ದೇಶವನ್ನು ಹೊಂದಿದ್ದರು. ನರಸೀಪುರದ ಪೂರ್ವಕ್ಕೆ ನಿಲುಸೋಗೆಯಲ್ಲಿ ಹೊರಗಿನಿಂದ ಬಂದ ಕಣಿಯರು ಮತ್ತು ಚಳವಳಿಗಾರರು ಉಳಿದುಕೊಳ್ಳಲು ವ್ಯವಸ್ಥೆಯನ್ನು ಮಾಡಲಾಯಿತು. ಕಣಿಯರು ಅಧಿಕ ಸಂಖ್ಯೆಯಲ್ಲಿ ಬಂದು ಸೇರುತ್ತಿರುವ ವಿಷಯ ಪೋಲೀಸಿನವರಿಗೆ ಮತ್ತು ಇತರ ಅಧಿಕಾರಿ ವರ್ಗದವರಿಗೂ ಹಾಗೂ ಸವರ್ಣೀಯರಿಗೂ ತಿಳಿದು ಅದನ್ನು ಎದುರಿಸಲು ಯುದ್ಧದಲ್ಲಿ; ವಿರೋಧಿಗಳನ್ನು ಎದುರಿಸಲು ಸಜ್ಜಾಗುವ ರೀತಿಯಲ್ಲಿ ಭರದಿಂದ ಸಜ್ಜುಗೊಳ್ಳುತ್ತಿದ್ದರು. ಊರಿನಲ್ಲಿ ಜನತೆಯ ಆತಂಕ ಕ್ಷಣ ಕ್ಷಣಕ್ಕೂ ಹೆಚ್ಚಾಗುತ್ತಿತ್ತು. ನಿಲುಸೋಗೆಯಲ್ಲಿ ಚಳವಳಿಗಾರರ ಬಿಡಾರ ಸ್ಥಾಪಿತವಾಗಿದ್ದರೂ ಸಹ ರಾಮಚಂದ್ರರಾಯರು ನರಸೀಪುರದ ಶಾಸ್ತ್ರಿಗಳೊಬ್ಬರ ಮನೆಯಲ್ಲಿ ತಂಗಿದ್ದು, ಚಳವಳಿಯ ಪೂರ್ವಸಿದ್ಧತೆ ಮತ್ತು ಪ್ರಚಾರದಲ್ಲಿ ತೊಡಗಿದ್ದರು. ಇದರಿಂದಾಗಿ ಅಧಿಕಾರಿಗಳು ತಗಡೂರರಿಗೆ ಯಾವುದೇ ರೀತಿಯ ಸಹಾಯ ಊಟ, ನೀರನ್ನು ಕೊಡಬಾರದೆಂದು ಕಟ್ಟುನಿಟ್ಟಿನ ಆದೇಶ ಹೊರಡಿಸಿದ್ದರು ಹಾಗೂ ಉಳಿದುಕೊಳ್ಳಲು ಅವಕಾಶ ನೀಡಿದ್ದ ಶಾಸ್ತ್ರಿಗಳನ್ನು ತುಂಬ ಬೆದರಿಸಿದ್ದರು. ಚಳವಳಿಯ ಹಿಂದಿನ ದಿನ ಕೊಠಡಿಯಲ್ಲಿ ಮಲಗಿದ್ದ ಸಂದರ್ಭದಲ್ಲಿ ಪೋಲೀಸಿನವರು ರಾಮಚಂದ್ರರಾಯರ ಕೊಠಡಿಯನ್ನು ಸುತ್ತುವರಿದರು. ಅಲ್ಲದೇ ನಿಲುಸೋಗೆಯಲ್ಲಿ ಚಳುವಳಿಗಾರರ ಬಿಡಾರವನ್ನು ಸಂಪೂರ್ಣವಾಗಿ ಪೋಲೀಸ್ ಅಧಿಕಾರಿಗಳು ಸುತ್ತುವರೆದಿದ್ದರು. ಇದರಿಂದಾಗಿ ಅಲ್ಲಿನ ಕಣಿಯರು ಭಯಭೀತರಾಗಿದ್ದರು. ನರಸೀಪುರದಿಂದ ನಿಲುಸೋಗೆವರೆಗೆ ಪೋಲೀಸ್ ಕಾವಲು ಇತ್ತು.[೨೪] ತಗಡೂರರು ತಮ್ಮ ಕೊಠಡಿಯಿಂದ ತಪ್ಪಿಸಿಕೊಂಡು ನೇರವಾಗಿ ನಿಲುಸೋಗೆ ಚಳವಳಿಗಾರರ ಬಿಡಾರವನ್ನು ಸೇರಿಕೊಂಡರು. ಅಲ್ಲದೆ ಸಬ್‌ಡಿವಿಜನ್ ಅಧಿಕಾರಿ ಪೂರ್ಣಅಯ್ಯಂಗಾರರು ತುಂಬಾ ಹಿಂದೂ ಸಂಪ್ರದಾಯಸ್ಥರಾಗಿದ್ದು ಕಣಿಯರು ಈ ದೇವಾಲಯ

ಪ್ರವೇಶವನ್ನು ತಡೆಯುವ ವ್ಯವಸ್ಥೆ ಮಾಡಿಕೊಂಡಿದ್ದರು. ನಂತರ ೬ ಗಂಟೆಗೆ ದೇವಾಲಯ ಪ್ರವೇಶ ಮಾಡುವ ತೀರ್ಮಾನ ಮಾಡಿದ್ದರಿಂದ ಪೋಲೀಸಿನವರು ಮತ್ತು ಅಧಿಕಾರಿಗಳು ಸತ್ಯಾಗ್ರಹಿಗಳು ಇರುವ ಬಿಡಾರಕ್ಕೆ ಬಂದು ತಗಡೂರು ರಾಮಚಂದ್ರರಾಯರನ್ನು ಬಂಧಿಸಿರುವುದಾಗಿಯೂ, ಅಲ್ಲದೆ ದೇವಾಲಯ ಪ್ರವೇಶ ಮಾಡಿದರೆ ಹಿಂಸಿಸುವುದಾಗಿಯು ಪ್ರಕಟಿಸಿದರು. ಈ ಮಾತನ್ನು ಕೇಳಿದ ರಾಮಚಂದ್ರರಾಯರು ತಾವು ಇರುವ ವಿಷಯವನ್ನು ಹೋರಾಟಗಾರರಿಗೆ ತಿಳಿಸಿದರು. ಇದರಿಂದಾಗಿ ಕಣಿಯವರಲ್ಲಿ ಉತ್ಸಾಹ ಹಿಮ್ಮಡಿಯಾಯಿತು. ಅವರು ಯಾವುದೇ ಗಲಾಟೆಗೆ ಅವಕಾಶ ಕೊಡಬಾರದೆಂದು ಮನವಿ ಮಾಡಿದರು. ಮೆರವಣಿಗೆ ನಡೆದು ನರಸೀಪುರದ ದೇವಸ್ಥಾನದ ಸುತ್ತ ಪ್ರದಕ್ಷಿಣೆ ಹಾಕಿದರು. ಅದಕ್ಕಾಗಿ ಪ್ರತಿಕ್ಷಣದ ಮಾಹಿತಿಯು ಅವರಿಗೆ ತಲುಪುವಂತೆ ನೋಡಿಕೊಂಡಿದ್ದರು. ನಂತರ ಅರ್ಚಕರು ಕಣಿಯರು ದೇವಸ್ಥಾನ ಒಳಗಡೆ ಪ್ರವೇಶಿಸುವುದನ್ನು ಪ್ರಬಲವಾಗಿ ವಿರೋಧಿಸಿದರು. ದೇವಸ್ಥಾನದ ಮುಂದೆ ಸುಮಾರು ಎಂಟು ದಿನಗಳ ಕಾಲ ಸತ್ಯಾಗ್ರಹ ನಡೆಯಿತು. ಆದರೆ ಸಂಪ್ರದಾಯಸ್ಥ ಪುರೋಹಿತರ ಹಾಗೂ ಸವರ್ಣೀಯರ ಮನಸ್ಸು ಪರಿವರ್ತನೆ ಆಗಲಿಲ್ಲ. ಆ ಸಮಯದಲ್ಲಿ ಪ್ರಜಾಪ್ರತಿನಿಧಿ ಸಭೆ ಸೇರಿತು. ಅದರಲ್ಲಿ ಕಣಿಯರ ಈ ಚಳವಳಿಯ ವಿಷಯವನ್ನು ಹೊಸಕೂಪ್ಪೆ ಕೃಷ್ಣರಾಯ, ನೀಲಗಿರಿ ಸಂಜೀವಯ್ಯ, ಎಂ.ಸಿ. ಲಿಂಗೇಗೌಡ ಮುಂತಾದವರು ಕಣಿಯರ ದೇವಾಲಯ ಪ್ರವೇಶ ನೀಡುವ ಕುರಿತು ಪ್ರಬಲವಾಗಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದರು. ಸಂಪ್ರದಾಯಕ್ಕೆ ಕಟ್ಟುಬಿದ್ದ ಸರ್ಕಾರ ಜಗ್ಗಲಿಲ್ಲ. ಅನೇಕ ಸದಸ್ಯರು ನರಸೀಪುರಕ್ಕೆ ಬಂದು ಚಳವಳಿಗಾರರನ್ನು ಕಂಡು ಮಾತನಾಡಿಸಿ ಸರ್ಕಾರದ ಗಮನ ಸೆಳೆಯುವ ಭರವಸೆಯನ್ನು ಕೊಟ್ಟರು. ಅಲ್ಲದೇ ಕೇವಲ ದೇವಾಲಯದ ವರಾಂಡಕ್ಕೆ ಪ್ರವೇಶದ ಅನುಮತಿ ನೀಡಲಾಯಿತು. ಇವರ ಭರವಸೆಯಿಂದ ಸತ್ಯಾಗ್ರಹ ನಿಲ್ಲಿಸಲಾಯಿತು.[೨೫]

೫.೨೨. ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯ ಪ್ರವೇಶ ಚಳವಳಿ

ತಗಡೂರು ರಾಮಚಂದ್ರರಾಯರು ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣೆಯ ಭಾಗವಾಗಿ ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯ ಪ್ರವೇಶ ಚಳವಳಿಯನ್ನು ಹಮ್ಮಿಕೊಂಡರು. ಈ ದೇವಾಲಯಕ್ಕೆ ಅಸ್ಪೃಶ್ಯರು ೧೯೩೨ ಡಿಸೆಂಬರ್ ತಿಂಗಳ ಒಂದು ಭಾನುವಾರದಂದು ಪ್ರವೇಶ ಮಾಡುವುದಾಗಿ ಪ್ರಸಿದ್ಧ ಪತ್ರಿಕೆಯಲ್ಲಿ ಪ್ರಕಟಿಸಿದರು. ಈ ಪ್ರಕಟಣೆ ಪ್ರಬಲ ಸಮುದಾಯಗಳ ಜನರನ್ನು ಕೆರಳಿಸಿತು. ಈ ವಿಷಯ ವಾದ-ವಿವಾದಗಳಿಗೆ ಎಡೆಮಾಡಿಕೊಟ್ಟಿತು. ಇದರಿಂದಾಗಿ ನಂಜನಗೂಡಿನಲ್ಲಿ ಭಯಭೀತ ವಾತಾವರಣ ನಿರ್ಮಾಣಯಿತು.

ಈ ವಿಷಯವನ್ನು ಕುರಿತು ಚರ್ಚಿಸುವುದಕ್ಕಾಗಿ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಅಭಿಪ್ರಾಯದಂತೆ ೧೯೩೨ ನವೆಂಬರ್ ೩೦ರಂದು ಮಹಾರಾಜರ ವೇದಾಂತದ ಗುರುಗಳಾದ ವಿ. ಸುಬ್ರಹ್ಮಣ್ಯ ಅಯ್ಯರ್ ಅವರ ಮನೆಯಲ್ಲಿ ವೈದಿಕ ಮುಖಂಡರ ಸಭೆಯನ್ನು ಸೇರಿಸಲಾಯಿತು. ಈ ಸಭೆಯಲ್ಲಿ ಪ್ರಮುಖ ವೈದಿಕರು ಮತ್ತು ಅರಮನೆ ಅಧಿಕಾರಿಗಳು ಭಾಗವಹಿಸಿದ್ದರು. ಸಂಜೆಯವರೆಗೂ ಶಾಂತ ರೀತಿಯಿಂದಲೂ, ಸೌಹಾರ್ದದಿಂದಲೂ ಮತ್ತು

ವಿಶ್ವಾಸದಿಂದಲೂ ಚರ್ಚೆ ನಡೆಯಿತು. ಅಸ್ಪೃಶ್ಯರ ಅಭಿವೃದ್ಧಿಯಲ್ಲಿ ಸರ್ವರೂ ಸಹಾನುಭೂತಿ ಉಳ್ಳವರಾದರೂ ದೇವಾಲಯದ ಪ್ರವೇಶದ ವಿಚಾರದಲ್ಲಿ ಅನುಮತಿ ನೀಡಲು ಹಿಂದೇಟು ಹಾಕಿದರು. ಪಂಚಮರಿಗೆ ದೇವಾಲಯ ಪ್ರವೇಶಕ್ಕೆ ಸಂಬಂಧಿಸಿದಂತೆ ತಾವು ಅಧ್ಯಯನ ಮಾಡಿರುವ ಗ್ರಂಥಗಳಲ್ಲಿ ಆಧಾರಗಳು ಸಿಕ್ಕಿಲ್ಲವೆಂದು ಕೆಲವರೂ, ಇನ್ನು ಹಲವು ಗ್ರಂಥಗಳನ್ನು ಪರಿಶೀಲಿಸಿ ಎಲ್ಲಿಯಾದರೂ ಸ್ವಲ್ಪ ಅವಕಾಶ ಸಿಕ್ಕಿದರೂ ಸಾಕು ಒಪ್ಪಿಗೆಯನ್ನು ಕೊಡುವುದಾಗಿ ಕೆಲವರು, ಇನ್ನೂ ಕೆಲವು ವೈದಿಕರು ನ್ಯಾಯ ವಿಧೇಯಕ ಸಭೆಯಲ್ಲಿ ಒಪ್ಪಿಗೆ ದೊರೆತು ಅದು ಶಾಸನವಾದರೆ ಯಾರ ಅಭ್ಯಂತರವು ಇಲ್ಲವೆಂದು ಅಭಿಪ್ರಾಯಪಟ್ಟರು. ಈ ರೀತಿಯಾದ ಚರ್ಚೆಗಳನ್ನು ಆ ಸಭೆಯಲ್ಲಿ ನಡೆಸಿ ಅಧಿಕೃತವಾಗಿ ಪಂಚಮರಿಗೆ ದೇವಾಲಯ ಪ್ರವೇಶವನ್ನು ನಿರಾಕರಿಸಲಾಯಿತು. ಆದರೆ ಪಟ್ಟು ಬಿಡದ ತಗಡೂರು ರಾಮಚಂದ್ರರಾಯರು ದಿನಾಂಕ ೧೯೩೨ ಡಿಸೆಂಬರ್ ೪ರಂದು ನಿಗದಿಪಡಿಸಿದ ಕಾರ್ಯಕ್ರಮದಂತೆ ದೇವಾಲಯ ಪ್ರವೇಶ ಮಾಡಲು ನಿರ್ಧರಿಸಿದರು. ಇದರಿಂದಾಗಿ ದೇವಾಲಯ ಪ್ರವೇಶಿಸುವ ಅಸ್ಪೃಶ್ಯರ ಮೇಲೆ ಸವರ್ಣೀಯರು ಸಗಣಿ, ಕಲ್ಲುಗಳನ್ನು ಎಸೆದು ಹಿಂಸೆಗೀಡು ಮಾಡಿದರು. ಆದರೆ ಸ್ಥಳದಲ್ಲಿದ್ದ ಪೋಲೀಸರು ಅಸ್ಪೃಶ್ಯರ ಮೇಲೆ ನಡೆಯುತ್ತಿದ್ದ ಹಿಂಸೆ ದೌರ್ಜನ್ಯವನ್ನು ತಪ್ಪಿಸಲು ಯಾವುದೇ ಕ್ರಮಕೈಗೊಳ್ಳಲಿಲ್ಲ. ನಂತರದ ದಿನಗಳಲ್ಲಿ ಮೈಸೂರು ನ್ಯಾಯ ವಿಧೇಯಕ ಸಭೆಯಲ್ಲಿ ಅಸ್ಪೃಶ್ಯರ ದೇವಾಲಯ ಪ್ರವೇಶವನ್ನು ಮಾಡಲು ಅನುಮತಿ ದೊರೆಯಿತಾದರೂ ಅದು ಸಮರ್ಪಕವಾಗಿ ಜಾರಿಯಾಗದೆ ಕಡತದಲ್ಲಿಯೇ ಉಳಿಯಿತು.

ಹಿಂದೆ ಸುಬ್ರಹ್ಮಣ್ಯ ಅಯ್ಯರ್ ಅವರ ಮನೆಯಲ್ಲಿ ಸೇರಿದ್ದ ವೈದಿಕರ ಸಭೆ ದೇವಾಲಯಕ್ಕೆ ಪಂಚಮರ ಪ್ರವೇಶವನ್ನು ಕುರಿತು ಯೋಚಿಸಬೇಕೆಂದು ಅದಕ್ಕೆ ನೀಡಿದ ಸಮಾಜಾಯಿಷಿಗಳು ಅನೇಕ ಚರ್ಚೆಗಳಿಗೆ ಅವಕಾಶವಾಯಿತಾದರೂ ಅದರಿಂದ ಪ್ರಯೋಜನವೇನು ಆಗಲಿಲ್ಲ. ಶೃಂಗೇರಿಯ ಸ್ವಾಮಿಯವರು ಅಸ್ಪೃಶ್ಯರ ದೇವಾಲಯ ಪ್ರವೇಶವನ್ನು ತೀವ್ರವಾಗಿ ವಿರೋಧಿಸಿದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಎಲ್ಲಾ ಕೋಮಿನವರ ವಾದಗಳನ್ನು ಅಂದಿನ ಸ್ಥಿತಿಗತಿಗಳನ್ನು ಗಮನದಲ್ಲಿಟ್ಟುಕೊಂಡು "ಅಸ್ಪೃಶ್ಯರು ಬೇಕಾಗಿದ್ದರೆ ತಮ್ಮ ತಮ್ಮ ದೇವಸ್ಥಾನಗಳನ್ನು ಸ್ಥಾಪಿಸಿಕೊಳ್ಳಲಿ ಬೇರೆಯವರ ಸಂಪ್ರದಾಯಗಳನ್ನು ಬಲವಂತದಿಂದ ಅಳಿಸಿ ಹಾಕಿ ಅವರಿಗೆ ನೋವನ್ನುಂಟು ಮಾಡುವುದು ಬೇಡ"[೨೬] ಎಂದರು. ಇದರಿಂದ ಬೇಸತ್ತು ತಗಡೂರು ರಾಮಚಂದ್ರರಾಯರು ತಗಡೂರಿನಲ್ಲಿಯೇ ಅಸ್ಪೃಶ್ಯರ ಕೇರಿಯಲ್ಲಿ ಒಂದು ಗಣಪತಿ ದೇವಾಲಯವನ್ನು ನಿರ್ಮಿಸುವ ಯೋಜನೆಯನ್ನು ಕೈಗೊಂಡರು. ಅದಕ್ಕೆ ಪೂರಕವಾಗಿ ಎಲ್ಲಾ ರೀತಿಯ ಸಹಾಯ ದೊರೆಯಿತು.

೧೯೩೩ ಅಕ್ಟೋಬರ್ ೧೩ರಂದು ಅಸ್ಪೃಶ್ಯರಿಗಾಗಿಯೇ ಏರ್ಪಡಿಸಿದ್ದ ಸ್ನಾನ ಘಟ್ಟವನ್ನು ಆರಂಭಿಸಿ ದೇವಾಲಯದಲ್ಲಿ ಗಣಪತಿಯನ್ನು ಬೆಳಿಗ್ಗೆ ೯ ಗಂಟೆಗೆ ಅಸ್ಪೃಶ್ಯರ ವಿಧಿವಿಧಾನದಂತೆ ಪ್ರತಿಷ್ಠಾಪಿಸಲಾಯಿತು. ಅದು ಇಂದಿನವರೆಗೂ ನಡೆದುಕೊಂಡು ಬರುತ್ತಿದೆ.[೨೭]

೫.೨೩. ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯರ ದೇವಾಲಯ ಪ್ರವೇಶ ಚಳವಳಿಯ ಪರಿಣಾಮಗಳು

೧೯೩೩ರ ಅಕ್ಟೋಬರ್ ೧೩ರಂದು ಕೆ.ಟಿ. ಭಾಷ್ಯಂ, ಟಿ. ಶರ್ಮ, ವೆಂಕಟಪತಯ್ಯ, ಪಿ.ಆರ್. ರಾಮಯ್ಯ ಅವರುಗಳ ನೇತೃತ್ವದಲ್ಲಿ ದಲಿತರಿಗೆ ಬೆಂಗಳೂರಿನ ಬಸವನಗುಡಿ ದೇವಾಲಯಕ್ಕೆ ಪ್ರವೇಶಾವಕಾಶವನ್ನು ಮಾಡಿಕೊಡಲಾಯಿತು. ಈ ಅಸ್ಪೃಶ್ಯರ ದೇವಾಲಯ ಪ್ರವೇಶ ಚಳವಳಿಯಲ್ಲಿ ಸಕಲೇಶಪುರದ ಡಾ. ಎಸ್. ಚಲುವರಾಯ್ ಸಹ ಭಾಗವಹಿಸಿದ್ದರು.

ಚಿತ್ರದುರ್ಗ ಜಿಲ್ಲಾ ಹೊಳಲ್ಕೆರೆ ತಾಲ್ಲೂಕು ಚಿಕ್ಕಜಾಜೂರಿನ ಕಾಂಗ್ರೇಸ್ ಕಾರ್ಯಕರ್ತರಾಗಿದ್ದ ಸಿದ್ಧಪ್ಪನವರು ೧೯೪೨ರಲ್ಲಿ ತಮ್ಮ ತಾಲ್ಲೂಕಿನಾದ್ಯಂತ ದಲಿತರಿಗೆ ದೇವಾಲಯ ಪ್ರವೇಶ ದೊರಕಿಸಿಕೊಡಲು ಅತ್ಯಂತ ಪ್ರಮುಖ ಪಾತ್ರವಹಿಸಿದ್ದರು. ಅಸ್ಪೃಶ್ಯರಿಗೆ ಮೈಸೂರು ಸಂಸ್ಥಾನದಾದ್ಯಂತ ದೇವಾಲಯಗಳಿಗೆ ಪ್ರವೇಶಾವಕಾಶವನ್ನು ದೊರಕಿಸಿಕೊಡುವ ದೃಷ್ಟಿಯಿಂದ ಅಖಿಲ ಮೈಸೂರು ಹರಿಜನ ದೇವಾಲಯ ಪ್ರವೇಶ ಸಮಿತಿಯ ಕಾರ್ಯ ನಿರ್ವಹಣಾಧಿಕಾರಿ ಸಭೆಯು ಡಿ. ಸುಬ್ಬರಾಮಯ್ಯ ಶೆಟ್ಟರ ನೇತೃತ್ವದಲ್ಲಿ ದಿನಾಂಕ ೧೦-೧-೧೯೪೪ರಂದು ಮೈಸೂರಿನಲ್ಲಿ ನಡೆಯಿತು. ಈ ಸಭೆಯಲ್ಲಿ ಕೈಗೊಂಡ ನಿರ್ಣಯವೇನೆಂದರೆ ಸಮಿತಿಯ ಸದಸ್ಯರು ಬೆಂಗಳೂರು, ಮೈಸೂರು, ಮಂಡ್ಯ, ಚಿತ್ರದುರ್ಗ, ಕಡೂರು ಮತ್ತು ಶಿವಮೊಗ್ಗ ಇನ್ನೂ ಮುಂತಾದ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ದಲಿತರಿಗೆ ಮೈಸೂರು ಸಂಸ್ಥಾನದಾದ್ಯಂತ ಇರುವ ದೇವಾಲಯಗಳಿಗೆ ಪ್ರವೇಶಾವಕಾಶವನ್ನು ದೊರಕಿಸಿಕೊಡುವ ವಿಚಾರದಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ಸಂಗ್ರಹಿಸಬೇಕೆಂದು ತೀರ್ಮಾನಿಸಲಾಯಿತು.

೧೯೪೫ರ ಅಕ್ಟೋಬರ್ ೨೫ರಂದು ಕೆ.ಸಿ. ರೆಡ್ಡಿ, ಗುರುವಾರೆಡ್ಡಿ, ಎಂ.ಸಿ. ಮಲ್ಲಪ್ಪ, ಶ್ರೀಮತಿ ರಾಜೀವಬಾಯಿ, ಶಿವರಾಂ ಮತ್ತು ಶ್ರೀಮತಿ ದ್ವಾರಕಾಬಾಯಿ ಕಡಾಂಬಿ ಇವರುಗಳು ಅಸ್ಪೃಶ್ಯರ ಪ್ರವೇಶಕ್ಕೆ ಅವಕಾಶವಿಲ್ಲದಿರುವ ದೇವಾಲಯಗಳಿಗೆ ತಾವೂ ಸಹ ಪ್ರವೇಶ ಮಾಡುವುದಿಲ್ಲವೆಂದು ಪ್ರತಿಜ್ಞೆ ಕೈಗೊಂಡಿದ್ದರು. ೧೯೪೭ರ ಜುಲೈ ೩ನೆಯ ವಾರದಲ್ಲಿ ತುಮಕೂರು ಜಿಲ್ಲಾ ಶಿವಗಂಗೆಯಲ್ಲಿರುವ ದೇವಾಲಯಗಳಿಗೆ ದಲಿತರು ಪ್ರವೇಶಿಸುವ ಅಧಿಕಾರವನ್ನು ಕೊಡುವುದಾಗಿ ಅಲ್ಲಿನ ಧರ್ಮದರ್ಶಿಗಳು ಘೋಷಣೆಯೊಂದನ್ನು ಹೊರಡಿಸಿದ್ದರು.

೧೯೪೭ರ ಫೆಬ್ರವರಿ ೨ರಂದು ಮೈಸೂರಿನ ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿ ದೇವಾಲಯಕ್ಕೆ ಅಸ್ಪೃಶ್ಯರಿಗೆ ಪ್ರವೇಶಾವಕಾಶವನ್ನು ದೊರಕಿಸಿ ಕೊಡಲಾಯಿತು. ಕೆ.ಸಿ. ರೆಡ್ಡಿಯವರು ಈ ದೇವಾಲಯ ಪ್ರವೇಶ ಚಳವಳಿಯ ನಾಯಕತ್ವವನ್ನು ವಹಿಸಿದ್ದರು. ಈ ದೇವಾಲಯ ಪ್ರವೇಶ ಚಳವಳಿಯಲ್ಲಿ ಸುಮಾರು ಹತ್ತು ಸಾವಿರಕ್ಕಿಂತಲೂ ಹೆಚ್ಚು ಜನ ಭಾಗವಹಿಸಿದ್ದು, ಮೈಸೂರು ಸಂಸ್ಥಾನದ ಅಸ್ಪೃಶ್ಯರ ದೇವಾಲಯ ಪ್ರವೇಶ ಚಳವಳಿಯಲ್ಲಿಯೇ ಮಹತ್ವದ್ದಾಗಿದೆ.

ಮೈಸೂರು ಸಂಸ್ಥಾನದಾದ್ಯಂತ ಯಾವ ದೇವಾಲಯಗಳಲ್ಲಿ ದಲಿತರಿಗೆ ಪ್ರವೇಶಾವಕಾಶವಿಲ್ಲವೊ ಅಂತಹ ದೇವಾಲಯಗಳಿಗೆ ಸರ್ಕಾರದ ಯಾವ ಮಂತ್ರಿಗಳೂ ಪ್ರವೇಶ ಮಾಡುವುದಿಲ್ಲವೆಂದು

ಸಂಕಲ್ಪ ಮಾಡಿರುವ ವಿಚಾರವನ್ನು ೧೯೪೭ರ ನವೆಂಬರ್ ೩ರಂದು ಹಾಸನದಲ್ಲಿ ಎಚ್.ಸಿ. ದಾಸಪ್ಪನವರು ಬೃಹತ್ ಸಭೆಯನ್ನು ಉದ್ದೇಶಿಸಿ ಮಾಡಿದ ಭಾಷಣವೊಂದರಲ್ಲಿ ತಿಳಿಸಿದರು.[೨೮]

೧೯೪೭ರ ಡಿಸೆಂಬರ್‌ನಲ್ಲಿ ಅಂದಿನ ಮಂತ್ರಿಯಾಗಿದ್ದ ಆರ್. ಚನ್ನಿಗರಾಮಯ್ಯ ಅವರ ನೇತೃತ್ವದಲ್ಲಿ ದಲಿತರಿಗೆ ತುಮಕೂರು ಜಿಲ್ಲೆ ತಾವರೆಕೆರೆಯ ಈಶ್ವರ ದೇವಸ್ಥಾನ, ಬಂಡೆ ರಂಗನಾಥಸ್ವಾಮಿ ದೇವಸ್ಥಾನಗಳಿಗೆ ಪ್ರವೇಶಾವಕಾಶವನ್ನು ದೊರಕಿಸಿಕೊಡಲಾಯಿತು. ಅಲ್ಲದೇ ಸೀಬಿ ನರಸಿಂಹಸ್ವಾಮಿ ದೇವಾಲಯ, ಗುಬ್ಬಿಯಪ್ಪನ ದೇವಾಲಯ, ಬಾಲ್ಯ ಹನುಮಂತರಾಯ ದೇವಾಲಯ, ಗೂಳೂರು ವಿನಾಯಕ ದೇವಾಲಯಗಳಿಗೆ ದಲಿತ ಮುಖಂಡರೊಂದಿಗೆ ಪ್ರವೇಶ ಮಾಡಿ ಅಂದೇ ಗೂಳೂರಿನಲ್ಲಿ ದಲಿತರು ಸವರ್ಣೀಯರಿಗೆ ಸರಿಸಮಾನರು, ಸಾರ್ವಜನಿಕ ಸ್ಥಳಗಳನ್ನು ಬಳಸಿಕೊಳ್ಳುವ ಹಕ್ಕು ಸವರ್ಣೀಯರಿಗೆ ಇರುವಂತೆ, ದಲಿತರಿಗೂ ಇದೆ ಎಂದು ಘೋಷಿಸಿದರು. ದಲಿತರನ್ನು ಮುಟ್ಟಿದರೆ ಸಮಾಜಕ್ಕೆ ದಂಡ ಕೊಡಬೇಕಿದ್ದ ಆ ಕಾಲದಲ್ಲಿ ಹೊಳಲ್ಕೆರೆ ವಾಸಿಯಾದ ಎಂ. ಲಿಂಗಪ್ಪ ಅವರು ಲಿಂಗಾಯಿತರಾಗಿದ್ದರು. ಅವರಿಗೆ ದಲಿತರೆಂದರೆ ಅತ್ಯಂತ ಪ್ರೀತಿ, ವಿಶ್ವಾಸ ಮತ್ತು ಗೌರವ. ಅವರ ಬೆಂಬಲದಿಂದ ಆರ್. ಚನ್ನಿಗರಾಮಯ್ಯ, ಸಿ.ಟಿ. ಹನುಮಂತಯ್ಯ ಮುಂತಾದವರು ಅವರ ಮನೆಯಲ್ಲೇ ದಲಿತರೊಂದಿಗೆ ಸಹಪಂಕ್ತಿ ಭೋಜನ ಏರ್ಪಡಿಸಿ ಸವರ್ಣೀಯರಲ್ಲಿ ಅರಿವನ್ನು ಮೂಡಿಸಲು ಪ್ರಯತ್ನಿಸಿದರು.[೨೯]

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯ ಗ್ರಾಮದವರಾದ ಬಿ.ಆರ್. ಶ್ಯಾಮ್‌ರವರು ೧೯೪೮ರಲ್ಲಿ ತೀರ್ಥಹಳ್ಳಿಯ ರಾಮೇಶ್ವರ ಹಾಗೂ ಇನ್ನಿತರ ದೇವಾಲಯಗಳಿಗೆ ಹರಿಜನರಿಗೆ ಪ್ರವೇಶಾವಕಾಶವನ್ನು ಕಲ್ಪಿಸಿಕೊಡಲು ಚಳವಳಿ ನಡೆಸಿದರು. ಅನಂತರ ಅಲ್ಲಿನ ದಲಿತರಿಗೆ ಈ ದೇವಾಲಯಗಳಿಗೆ ಪ್ರವೇಶಾವಕಾಶವನ್ನು ಮಾಡಿಸಿಕೊಟ್ಟರು.

ಮೈಸೂರು ಜಿಲ್ಲೆ ಕೆ.ಆರ್. ನಗರ ತಾಲ್ಲೂಕು ಚುಂಚನಕಟ್ಟೆ ದೇವಾಲಯಕ್ಕೆ ೧೭-೧-೧೯೪೮ರಂದು ದಲಿತರಿಗೆ ಪ್ರವೇಶಾವಕಾಶವನ್ನು ಕಲ್ಪಿಸಿಕೊಡಲಾಯಿತು. ಈ ಸುಸಂದರ್ಭದಲ್ಲಿ ಅಲ್ಲಿಗೆ ಆಗಮಿಸಿದ್ದ ಅಂದಿನ ಹಣಕಾಸು ಸಚಿವರಾಗಿದ್ದ ಎಚ್.ಸಿ. ದಾಸಪ್ಪನವರು ಅಲ್ಲಿನ ಸವರ್ಣೀಯ ಮುಖಂಡರೊಡನೆ ಮಾತುಕತೆ ನಡೆಸಿದರು. ಅವರುಗಳು ಇದೇ ರೀತಿ ದಲಿತರೊಡನೆ ಬೆರೆತು ಇನ್ನುಳಿದ ದೇವಾಲಯಗಳಿಗೂ ಪ್ರವೇಶಾವಕಾಶ ಕಲ್ಪಿಸಿಕೊಡಬೇಕೆಂದು ಅಲ್ಲಿನ ಸವರ್ಣೀಯರ ಮನವೊಲಿಸಿ ಅನಂತರ ಫೆಡರೇಷನ್ನಿನ ಅಧ್ಯಕ್ಷರಾದ ನೇರಳೆ ಮಾದಯ್ಯನವರು, ಎಂ.ಎಲ್. ನಂಜರಾಜ ಅರಸು ಮತ್ತು ಮೈಸೂರಿನ ಜಿಲ್ಲಾಧಿಕಾರಿಗಳು ದಲಿತರೊಂದಿಗೆ ದೇವಾಲಯ ಪ್ರವೇಶಿಸಿ ತೀರ್ಥ ಪ್ರಸಾದಗಳನ್ನು ಸ್ವೀಕರಿಸಿದರು.

ಮೈಸೂರು ಸಂಸ್ಥಾನದ ಹಲವಾರು ಕಾಂಗ್ರೆಸ್ ನಾಯಕರುಗಳ ಹೋರಾಟದ ಫಲವಾಗಿ ೧೯೪೪ರ ಜನವರಿ ತಿಂಗಳಿನ ಶಾಸನಸಭೆಯಲ್ಲಿ ಅಸ್ಪೃಶ್ಯರಿಗೆ ದೇವಾಲಯ ಪ್ರವೇಶಾವಕಾಶದ ಮಸೂದೆಗೆ ಅಂಗೀಕಾರ ದೊರೆಯಿತು. ಅನಂತರ ಅದು ಮೈಸೂರು ಮಹಾರಾಜರಿಂದ ಅಂಗೀಕೃತವಾಗಿ ೧೧-೨-೧೯೪೪ರ ಬುಧವಾರದಂದು ಶಾಸನ ರೂಪದಲ್ಲಿ ಜಾರಿಗೆ ಬಂದಿತು.

ಇದೇ ಸಮಯದಲ್ಲಿ ೧೮-೨-೧೯೪೮ರಂದು ಮೈಸೂರಿನ ಮಂಡಿ ಮೊಹಲ್ಲಾದಲ್ಲಿರುವ ವೆಂಕಟರಮಣಸ್ವಾಮಿ ದೇವಸ್ಥಾನಕ್ಕೆ ಅಸ್ಪೃಶ್ಯರಿಗೆ ಪ್ರವೇಶಾವಕಾಶವನ್ನು ಕಲ್ಪಿಸಿಕೊಡಲಾಯಿತು. ಈ ಸಂತೋಷದ ಸಂದರ್ಭದಲ್ಲಿ ತಗಡೂರು ರಾಮಚಂದ್ರರಾಯರು, ಕೆ. ಸಿದ್ಧಯ್ಯ ಮತ್ತು ಎಂ.ಎನ್. ಜೋಯಿಸ್ ಅವರುಗಳು ಹಾಜರಿದ್ದು, ಅಸ್ಪೃಶ್ಯರಿಗೆ ಮೈಸೂರು ಸಂಸ್ಥಾನದಾದ್ಯಂತ ಈ ರೀತಿಯ ದೇವಾಲಯಗಳಿಗೆ ಪ್ರವೇಶ ಮಾಡುವುದಕ್ಕೆ ಶ್ರಮಿಸಿದ ಕಾಂಗ್ರೆಸ್ ನಾಯಕರುಗಳ ಪ್ರಗತಿಪರ ಆಲೋಚನಾ ಕ್ರಮಗಳನ್ನು ಪ್ರಶಂಶಿಸಿದರು.[೩೦]

೧೦-೩-೧೯೪೮ರ ಬುಧವಾರದಂದು ಬೆಂಗಳೂರು ಜಿಲ್ಲೆ ನೆಲಮಂಗಲದಲ್ಲಿರುವ ಕಾಶಿ ವಿಶ್ವನಾಥಸ್ವಾಮಿ ದೇವಾಲಯದಲ್ಲಿ ಹರಿಜನರಿಗೆ ಪ್ರವೇಶಾವಕಾಶವನ್ನು ಮಾಡಿಕೊಡಲಾಯಿತು. ೨೫-೩-೧೯೪೮ರ ಗುರುವಾರ ಮೈಸೂರು ಜಿಲ್ಲೆ ಟಿ. ನರಸೀಪುರದಲ್ಲಿ ನಡೆದ ಶ್ರೀ ಗುಂಜಾ ನರಸಿಂಹಸ್ವಾಮಿ ದೇವರ ರಥೋತ್ಸವದಲ್ಲಿ ದಲಿತರು ಭಾಗವಹಿಸುವುದಕ್ಕೆ ಅವಕಾಶವನ್ನು ದೊರಕಿಸಿಕೊಡಲಾಯಿತು. ಈ ಸಂದರ್ಭದಲ್ಲಿ ಎಸ್.ಎಂ. ಸಿದ್ಧಯ್ಯ ಮತ್ತು ಎನ್. ರಾಚಯ್ಯ ಅವರುಗಳು ಭಾಗವಹಿಸಿದ್ದರು.

೧೩-೯-೧೯೪೫ರಂದು ಮೈಸೂರು ಸಂಸ್ಥಾನದ ಹರಿಜನ ದೇವಾಲಯ ಪ್ರವೇಶ ಸಮಿತಿ ಸಭೆಯ ಅಧ್ಯಕ್ಷರಾದ ಡಿ.ಆರ್. ರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಮೈಸೂರಿನಲ್ಲಿ ಜರುಗಿತು. ಈ ಸಭೆಯಲ್ಲಿ ಕೈಗೊಂಡ ನಿರ್ಣಯವೇನೆಂದರೆ ದಿನಾಂಕ ೩೧-೧೦-೧೯೪೫ರ ಒಳಗಾಗಿ ಸಮಿತಿಯು ಮೈಸೂರು ಸಂಸ್ಥಾನದಲ್ಲೆಲ್ಲಾ ಪ್ರಚಾರ ನಡೆಸಿ ಅಸ್ಪೃಶ್ಯರಿಗೆ ದೇವಾಲಯಗಳಲ್ಲಿ ಪ್ರವೇಶಾವಕಾಶವನ್ನು ದೊರಕಿಸಿಕೊಡುವುದು. ಈ ಮೂಲಕ ಅಸ್ಪೃಶ್ಯರು ದೇವಾಲಯಗಳ ಪ್ರವೇಶಕ್ಕೆ ಸಹಕಾರಿಯಾಗುವ ಕಾನೂನುಗಳನ್ನು ಮೈಸೂರು ಸಂಸ್ಥಾನದಾದ್ಯಂತ ಜಾರಿಗೆ ತರಬೇಕೆಂದು ಸರ್ಕಾರವನ್ನು ಅಗ್ರಹಪಡಿಸುವ ಒಂದು ಗೊತ್ತುವಳಿಯನ್ನು ಪಾಸು ಮಾಡಿತು. ಈ ಸಭೆಯಲ್ಲಿ ಪಾಮಡಿ ಸುಬ್ಬರಾಮಶೆಟ್ಟಿ, ಸ್ವಾಮಿ ವಿಶ್ವನಂದ, ಎಚ್.ಸಿ. ದಾಸಪ್ಪ, ಶ್ರೀಮತಿ ಯಶೋಧರಮ್ಮ, ದಾಸಪ್ಪ ಮುಂತಾದವರು ಭಾಗವಹಿಸಿದ್ದರು.[೩೧]

೧೯೪೭ರ ಜನವರಿ ತಿಂಗಳ ಕೊನೆಯ ವಾರದಲ್ಲಿ ಬೆಂಗಳೂರು ದಂಡು ಪ್ರದೇಶನದಲ್ಲಿನ ಎಲ್ಲಾ ದೇವಾಲಯಗಳು ದಲಿತರ ಪ್ರವೇಶಕ್ಕಾಗಿ ತೆರೆಯಲ್ಪಟ್ಟವು. ಹಾಗೆಯೇ ಮುಜರಾಯಿ ಇಲಾಖೆಗೆ ಸೇರಿದ ಆಂಜನೇಯ ಸ್ವಾಮಿ, ಸೋಮೇಶ್ವರ ಮತ್ತು ಸುಬ್ರಹ್ಮಣ್ಯಸ್ವಾಮಿ ದೇವಾಲಯಗಳಲ್ಲಿ ದಲಿತರಿಗೆ ಪ್ರವೇಶವನ್ನೂ ನೀಡಲಾಯಿತು.

ಮೈಸೂರು ಜಿಲ್ಲೆ ಗುಂಡ್ಲುಪೇಟೆಯ ಗೋಪಾಲಸ್ವಾಮಿ ಬೆಟ್ಟದ ರಥೋತ್ಸವ ನಡೆಯಿತು. ಈ ಸಮಯದಲ್ಲಿ ಅಲ್ಲಿನ ಕಾಂಗ್ರೆಸ್ ಮುಖಂಡರಾಗಿದ್ದ ಜಿ.ಎಲ್. ಚಿಕ್ಕಸಿದ್ಧಪ್ಪ, ವೈ.ಜಿ. ಶ್ರೀಕಂಠಚಾರ್ಯ ಅವರುಗಳು ಅಲ್ಲಿನ ಸ್ಥಳೀಯ ಸವರ್ಣೀಯ ಜನಗಳ ಸಹಕಾರದಿಂದ ದಲಿತರಿಗೆ ದೇವಾಲಯದ ಪ್ರವೇಶಾವಕಾಶವನ್ನು ದೊರಕಿಸಿಕೊಟ್ಟರು. ಸರಕಾರವು ದಲಿತರಿಗೆ

ದೇವಾಲಯಗಳಿಗೆ ಮುಕ್ತವಾಗಿ ಪ್ರವೇಶವನ್ನು ಕಲ್ಪಿಸಿಕೊಡುವ ಶಾಸನವನ್ನು ಜಾರಿಗೆ ತಂದಿದ್ದರೂ ಸವರ್ಣೀಯರು ದಲಿತರು ದೇವಾಲಯ ಪ್ರವೇಶಿಸುವುದನ್ನು ನಿರ್ಬಂಧಿಸಿದ್ದರು. ಮೈಸೂರು ಸಂಸ್ಥಾನದ ಬಹುತೇಕ ಭಾಗಗಳಲ್ಲಿ ಸವರ್ಣೀಯರ ಮನವೊಲಿಸಿ ದಲಿತರಿಗೆ ದೇವಾಲಯಗಳ ಮುಕ್ತ ಪ್ರವೇಶಾವಕಾಶವನ್ನು ಮಾಡಿಸುವಲ್ಲಿ ಅಂದಿನ ಕೆಲವು ಪ್ರಗತಿಪರ ಮುಖಂಡರುಗಳು ಪ್ರಾಮಾಣಿಕ ಪ್ರಯತ್ನ ಮಾಡಿದರು. ಯಳಂದೂರು ತಾಲ್ಲೂಕಿನ ಪ್ರಸಿದ್ಧ ಪುರಾತನ ದೇವಾಲಯವಾದ ಬಿಳಿಗಿರಿ ರಂಗನಾಥ ದೇವಾಲಯ ಪ್ರವೇಶಕ್ಕೆ ಸವರ್ಣೀಯರ ಯಾವ ನಿರ್ಬಂಧವು ಇಲ್ಲದೆ ದಲಿತರು ಪ್ರವೇಶವನ್ನು ಮಾಡಿದರು. ಈ ಸಮಯದಲ್ಲಿ ದೇವಾಲಯವನ್ನು ಪ್ರವೇಶ ಮಾಡಿದ ದಲಿತರು ಇನ್ನಿತರ ಸವರ್ಣೀಯರ ಜೊತೆ ದೇವರ ತೀರ್ಥ ಪ್ರಸಾದವನ್ನು ಸ್ವೀಕರಿಸಿ ಸಂತೋಷ ವ್ಯಕ್ತಪಡಿಸಿದರು.[೨]

ಮುಜರಾಯಿ ಸಚಿವರಾಗಿದ್ದ ಪಾಮಡಿ ಸಿದ್ಧರಾಮ ಶೆಟ್ಟರ ಮುಖಂಡತ್ವದಲ್ಲಿ ಮೈಸೂರು ಜಿಲ್ಲೆಯ ಟಿ. ನರಸೀಪುರ ತಾಲ್ಲೂಕಿನ ಸೋಸಲೆ ಗ್ರಾಮದ ಶ್ರೀ ಹೊನ್ನಾದೇವಿ ಮತ್ತು ವೀರಭದ್ರೇಶ್ವರ ದೇವಸ್ಥಾನಗಳಿಗೆ ಸಾವಿರಕ್ಕಿಂತಲೂ ಅಧಿಕ ದಲಿತರು ಪ್ರವೇಶಿಸಿ ಪೂಜೆ ಸಲ್ಲಿಸಿದರು. ಹೀಗೆ ದಲಿತರು ಮೈಸೂರು ಸಂಸ್ಥಾನದಾದ್ಯಂತ ಜಾಗೃತವಾಗುವುದನ್ನು ಮನಗಂಡ ಸವರ್ಣೀಯರು ಹಲವು ಕಡೆ ಸ್ವಯಂ ಪ್ರೇರಿತರಾಗಿ ದಲಿತರಿಗೆ ಮುಕ್ತ ಅವಕಾಶವನ್ನು ನೀಡಿದರು.

ಒಟ್ಟಾರೆಯಾಗಿ ಇಂತಹ ಘಟನೆಗಳಲ್ಲಿ ಘರ್ಷಣೆ, ಹಿಂಸೆ, ಕ್ರೌರ್ಯ, ದೌರ್ಜನ್ಯಗಳು ನಡೆಯುತ್ತಿದ್ದವು ಎನ್ನುವುದಕ್ಕೆ ನಮ್ಮ ಸಮಾಜದ ಪ್ರಬಲ ಕೋಮುಗಳಲ್ಲಿ ಮನೆ ಮಾಡಿಕೊಂಡಿರುವ ತಾರಮತ್ಯವಾದಿ ವಿಚಾರಗಳು ಕಾರಣವಾದವು ಎಂಬುದು ಸ್ಪಷ್ಟವಾಗುತ್ತವೆ. ಇಂತಹ ತಾರತಮ್ಯಗಳ ವಿರುದ್ಧ ಹೋರಾಟ ಮನೋಭಾವ ಬೆಳೆಸಿಕೊಳ್ಳಬೇಕಾದರೆ ಪ್ರತಿಯೊಬ್ಬ ವ್ಯಕ್ತಿಗೂ ಸಹ ಶಿಕ್ಷಣ ಅಗತ್ಯವಾಗಿ ಬೇಕೆ ಬೇಕು. ಶಿಕ್ಷಣದಿಂದಲೇ ವ್ಯಕ್ತಿ ತನ್ನ ಆಸೆ-ಆಕಾಂಕ್ಷೆ ಮತ್ತು ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗುತ್ತದೆ. ವೈಚಾರಿಕ ಮನೋಭಾವನೆ ಬೆಳೆಸಿಕೊಂಡು ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ. ಒಟ್ಟಾರೆ ಶಿಕ್ಷಣವು ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯವಾಗಿ ಬೇಕೇ ಬೇಕು. ಹಾಗಾಗಿ ಮೈಸೂರು ಸಂಸ್ಥಾನದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಾಳಜಿ, ಗೋಪಾಲಸ್ವಾಮಿ ಅಯ್ಯರ್ ಅವರ ಪರಿಶ್ರಮದಿಂದ ದಲಿತರಿಗೆ ಶಿಕ್ಷಣ ದೊರಕಿದ ಸಲುವಾಗಿ ಅಸ್ಪೃಶ್ಯತಾ ನಿವಾರಣೆಯ ಚಳವಳಿಗಳಲ್ಲಿ ಭಾಗವಹಿಸಲು ಮತ್ತು ದಲಿತ ಸಮುದಾಯದವರಲ್ಲಿ ಅರಿವನ್ನು ಉಂಟು ಮಾಡಲು ಸಹಕಾರಿಯಾಯಿತು.

ಕೊನೆ ಟಿಪ್ಪಣಿಗಳು

೧. ಸರ್ವೋದಯ ಕಿರಣ ಟಿ.ಎ., ೨೦೦೧, **ದಾಸಪ್ಪ, ಕವಿತಾ ಕೃಷ್ಣ**, ರಾಜಶ್ರೀ ಪ್ರಕಾಶನ, ತುಮಕೂರು, ಪುಟ ೧೪-೧೫.

೨. ವಕ್ತೃವಿವರ: ರಾಜಮ್ಮ, ೮೦ ವಯಸ್ಸು(ಟಿ.ಎ. ದಾಸಪ್ಪನವರ ಧರ್ಮಪತ್ನಿ), ತಿಪಟೂರು, ದಿನಾಂಕ ೩-೮-೨೦೧೫.

೩. ಸಂದರ್ಶನ: **ಕೃಷ್ಣದಾಸ್,** ೫೬ ವಯಸ್ಸು, ಹಿರಿಯ ದಲಿತ ಹೋರಾಟಗಾರರು, ಹಾಸನ.

೪. ವಕ್ತೃವಿವರ: **ನರಸಯ್ಯ,** ೬೪ ವಯಸ್ಸು, ದಲಿತ ಹೋರಾಟಗಾರರು, ಮಾಲೂರು, ಕೋಲಾರ ಜಿಲ್ಲೆ, ದಿನಾಂಕ ೨-೬-೨೦೧೪, ಮಾಲೂರು.

೫. ವಕ್ತೃವಿವರ: **ರಂಗಯ್ಯ,** ೭೦ ವಯಸ್ಸು, ನಿವೃತ್ತ ಶಿಕ್ಷಕರು ಹಾಗೂ ಹಿರಿಯ ದಲಿತ ಮುಖಂಡರು, ಕೋಲಾರ, ದಿನಾಂಕ ೩-೬-೨೦೧೪, ಕೋಲಾರ.

೬. ವಕ್ತೃವಿವರ: **ನರಸಯ್ಯ,** ೬೪ ವಯಸ್ಸು, ದಲಿತ ಹೋರಾಟಗಾರರು, ಮಾಲೂರು, ಕೋಲಾರ ಜಿಲ್ಲೆ, ದಿನಾಂಕ ೨-೬-೨೦೧೪, ಮಾಲೂರು.

೭. ವಕ್ತೃವಿವರ: **ವೆಂಕಟೇಶ್,** ೪೦ ವಯಸ್ಸು, ಚಿಂತಕರು ಹಾಗೂ ದಲಿತ ಮುಖಂಡರು, ಮಾಲೂರು ಕೋಲಾರ ಜಿಲ್ಲೆ, ದಿನಾಂಕ ೪-೬-೨೦೧೪, ಮಾಲೂರು.

೮. ಮಾಹಿತಿದಾರರು: **ಪದ್ಮನಾಭ,** ೬೫ ವಯಸ್ಸು, ಹಿರಿಯ ಡಿ.ಎಸ್.ಎಸ್. ಮುಖಂಡರು, ಶಿವಮೊಗ್ಗ ಜಿಲ್ಲೆ, ದಿನಾಂಕ ೧೫-೧೨-೨೦೧೬, ಶಿವಮೊಗ್ಗ

೯. ಮೇಲಿನವರೆ.

೧೦. ವಕ್ತೃವಿವರ: **ರಂಗಸ್ವಾಮಿ,** ೪೮ ವಯಸ್ಸು, ಡಿ.ಎಸ್.ಎಸ್. ಸಂಚಾಲಕರು, ಶಿವಮೊಗ್ಗ ಜಿಲ್ಲೆ, ದಿನಾಂಕ ೧೬-೧೨-೨೦೧೬, ಭದ್ರಾವತಿ.

೧೧. ಚಿನ್ನಸ್ವಾಮಿ ಸೋಸಲೆ ಎನ್., ೨೦೧೩, **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೮೭.

೧೨. ಅದೇ., ಪುಟ ೮೮.

೧೩. **ಪಂಚಮರ ಆರ್. ಗೋಪಾಲಸ್ವಾಮಿ ಅಯ್ಯರ್: ಒಂದು ಅಧ್ಯಯನ,** ಡಾ. ಎನ್. ಚಿನ್ನಸ್ವಾಮಿ ಸೋಸಲೆ ಅವರ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಎಂ.ಫಿಲ್. ನಿಬಂಧ, ಪುಟ ೪೮.

೧೪. ಡಿ.ಆರ್. ನಂಜಯ್ಯ, **ಡಿ.ಆರ್. ನೆನಪುಗಳು,** ಕಾಮಧೇನು ಪ್ರಿಂಟರ್ಸ್, ಬೆಂಗಳೂರು, ಪುಟ ೨೨.

೧೫. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೬, **ಕರ್ನಾಟಕದ ಸಮಗ್ರ ದಲಿತ ಚರಿತ್ರೆ,** ನವಕರ್ನಾಟಕ ಪ್ರಕಾಶನ, ಬೆಂಗಳೂರು, ಪುಟ ೮೫.

೧೬. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೩, **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧೩೫.

೧೭. ಅದೇ., ಪುಟ ೧೩೭.

೧೮. ಡಾ. ಜಿ. ಗೋಪಾಲ್, ೨೦೦೧, **ಆರ್. ಗೋಪಾಲಸ್ವಾಮಿ ಅಯ್ಯರ್,** ಸ್ನೇಹ ಪ್ರಿಂಟರ್ಸ್, ಬೆಂಗಳೂರು, ಪುಟ ೪೪.

೧೯. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೬, **ಕರ್ನಾಟಕ ಸಮಗ್ರ ದಲಿತ ಚರಿತ್ರೆ,** ನವಕರ್ನಾಟಕ ಪ್ರಕಾಶನ, ಬೆಂಗಳೂರು, ಪುಟ ೮೭.

೨೦. ಅದೇ., ಪುಟ ೯೦.

೨೧. ಎಂ.ಎನ್. ಜೋಯಿಸ್(ಸಂ), ೧೯೭೪, **ಕರ್ಮಯೋಗಿ ತಗಡೂರರ ಆತ್ಮಕಥನ ಮತ್ತು ಅಭಿನಂದನಾ ಗ್ರಂಥ,** ಗೀತಾ ಪ್ರಿಂಟರ್ಸ್, ಮೈಸೂರು, ಪುಟ ೬೯.

೨೨. ಅದೇ, ಪುಟ ೭೦.

೨೩. ಅದೇ, ಪುಟ ೭೧.

೨೪. ಅದೇ, ಪುಟ ೭೬.

೨೫. ಅದೇ, ಪುಟ ೭೮.

೨೬. ತಗಡೂರು ರಾಮಚಂದ್ರರಾವ್, ೧೯೮೬, **ಗ್ರಾಮದಾನ ಗ್ರಾಮ ಸ್ವರಾಜ್ಯ,** ವಿನೂತ ಪ್ರಿಂಟರ್ಸ್, ಮೈಸೂರು, ಪುಟ ೧೧೨.

೨೭. ಅದೇ, ಪುಟ ೧೧೪.

೨೮. ಸಂತೋಷಕುಮಾರ್, ೨೦೧೪, **ಮೈಸೂರು ಸಂಸ್ಥಾನದಲ್ಲಿ ತಗಡೂರು ರಾಮಚಂದ್ರರಾಯರ ರಚನಾತ್ಮಕ ಕಾರ್ಯಗಳು,** ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಮಹಾಪ್ರಬಂಧ, ಪುಟ ೧೭೮.

೨೯. ಬಸವರಾಜು ಕೆ.ಆರ್., ೨೦೧೩, **ಕರ್ನಾಟಕದ ಪ್ರಥಮ ದಲಿತ ಮಂತ್ರಿ ಆರ್. ಚನ್ನಿಗರಾಮಯ್ಯ ಜೀವನ ಸಾಧನೆ,** ದಲಿತ ಅಭಿವೃದ್ಧಿ ಸಂಸ್ಥೆ, ಹೊಸಪೇಟೆ, ಪುಟ ೫೮.

೩೦. ವೇಮಗಲ್ ಸೋಮಶೇಖರ್, ೨೦೦೪, **ಬೆಂಗಳೂರಿನಲ್ಲಿ ಮಹಾತ್ಮಗಾಂಧಿ,** ಬೆಂಗಳೂರು, ಪುಟ ೧೪೬.

೩೧. ಅದೇ, ಪುಟ ೧೫೦.

೩೨. ಅದೇ, ಪುಟ ೧೫೧.

❖❖❖

ಅಧ್ಯಾಯ : ಆರು

ಮೈಸೂರು ಸಂಸ್ಥಾನದಲ್ಲಿ ಸಾಮಾಜಿಕ ಸುಧಾರಣಾ ಕಾನೂನುಗಳ ಸಾಧಕ-ಬಾಧಕಗಳ ವಿಶ್ಲೇಷಣೆ

ಅಧ್ಯಾಯ : ಆರು

ಮೈಸೂರು ಸಂಸ್ಥಾನದಲ್ಲಿ ಸಾಮಾಜಿಕ ಸುಧಾರಣಾ ಕಾನೂನುಗಳ ಸಾಧಕ-ಬಾಧಕಗಳ ವಿಶ್ಲೇಷಣೆ

೬.೧. ಪ್ರಸ್ತಾವನೆ

ಭರತಖಂಡದಲ್ಲಿ ಅತ್ಯಂತ ಹೆಚ್ಚಿನ ಪ್ರಗತಿಯನ್ನು ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಾಧಿಸಿ ಮುಂದುವರಿಯುತ್ತಿರುವ ರಾಜ್ಯ ಎಂಬ ಹೆಗ್ಗಳಿಕೆಗೆ ನ್ಯಾಯವಾದ ಅರ್ಹತೆಯನ್ನು ಪಡೆದಿರುವ ಮೈಸೂರು ಸಂಸ್ಥಾನ ಮಾದರಿ ಸಂಸ್ಥಾನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದು ಒಂದು ರಾಜ್ಯದ ಹಾಗೂ ರಾಜನ ಹೊಗಳಿಕೆಯ ಮಾತುಗಳಲ್ಲ. ಇವುಗಳೆಲ್ಲವು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಳ್ವಿಕೆಯ ಅವಧಿಯಲ್ಲಿ ಇದ್ದಂತಹ ಮೈಸೂರು ಸಂಸ್ಥಾನದ ವಸ್ತುಸ್ಥಿತಿಯ ಸ್ಪಷ್ಟ ವಿವರಣೆಯಾಗಿದೆ. ಪ್ರಸ್ತುತ ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಸಾಧಿಸಲಾಗಿದ್ದ ಸರ್ವಾಂಗೀಣ ಪ್ರಗತಿಯನ್ನು ವಸ್ತುನಿಷ್ಠತೆಯಿಂದ ಅವಲೋಕಿಸಿ ವಿಶ್ಲೇಷಿಸಿ ಹೇಳಲಾಗಿರುವ ಮಾತುಗಳಾಗಿವೆ. ಏಕೆಂದರೆ ನಾಲ್ವಡಿಯವರ ಆಳ್ವಿಕೆಯ ಅವಧಿಯಲ್ಲಿಯೇ ಹೊಸ ಶಿಕ್ಷಣ ಮತ್ತು ಸಾಮಾನ್ಯ ಉದ್ಯೋಗಾವಕಾಶಗಳನ್ನು ಪಡೆಯುವ ಸಲುವಾಗಿ ವಿವಿಧ ಸಾಮಾಜಿಕ ಸಮುದಾಯಗಳು ಸಂಘಟಿತವಾದವು. ಮಹಿಳೆಯರು ಮತ್ತು ವಿದ್ಯಾವಂತ ಯುವಕರು ತಮ್ಮ ಹಕ್ಕುಬಾಧ್ಯತೆಗಳಿಗಾಗಿ ಧ್ವನಿ ಎತ್ತಿದ್ದರು. ಜಾತಿ ಪದ್ಧತಿ, ಅಸ್ಪೃಶ್ಯತೆ ಇನ್ನಿತರ ಸಾಮಾಜಿಕ ಅನಿಷ್ಟಗಳು ಮತ್ತು ಮೂಢನಂಬಿಕೆಗಳು ವಿಮರ್ಶೆಗೊಳಗಾದವು. ಮಹಾರಾಜ ನಾಲ್ವಡಿ ಕೃಷ್ಣರಾಜರು ಈ ಹೊಸ ಬೆಳವಣಿಗೆಗೆ ವೈಜ್ಞಾನಿಕವಾದ ಹಾಗೂ ಸಮತೋಲನವಾದ ನಿಲುವನ್ನು ತಳೆದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ರಾಜ್ಯಾಡಳಿತ ಕಾಲಕ್ಕೆ ಸಂಬಂಧಪಟ್ಟಿರುವ ಅಧಿಕೃತ ದಾಖಲೆ, ಪ್ರತ್ಯಕ್ಷದರ್ಶಿ ವರದಿ ಹಾಗೂ ವಿವರಣೆಗಳು, ಅಂದು ಕೈಗೊಳ್ಳಲಾಗಿದ್ದಂತಹ ಜನೋಪಯೋಗಿ ಕಾರ್ಯಗಳಿಗೆ ಬಲವಾದ ಸಾಕ್ಷಿಗಳಾಗಿ ಉಳಿದುಬಂದಿವೆ. ಇಲ್ಲಿನ ಶಿಕ್ಷಣ ಸಂಸ್ಥೆಗಳು ಪಂಚಮರಿಗಾಗಿಯೋ ಪ್ರತ್ಯೇಕ ಶಿಕ್ಷಣ ಸಂಸ್ಥೆಗಳು, ಜಲಾಶಯಗಳು, ಕೇಂದ್ರ ಹಾಗೂ ಸ್ಥಳೀಯ ಆಡಳಿತ ವ್ಯವಸ್ಥೆ, ಉನ್ನತ ಹಾಗೂ ಆಧುನಿಕ ಶಿಕ್ಷಣ ಇತ್ಯಾದಿ ಅಲ್ಲದೇ ಅವರ ಸಹಿಷ್ಣುತಾ ಮನೋಭಾವ, ಅವರ ಸಹಕಾರ ಅವರ ಸೇವೆಗಾಗಿಯೇ ರೂಪಿಸಿ

ಬೆಳೆಸಲಾಗಿದ್ದು ಸಂಸ್ಥೆಗಳು, ಲೋಕೋಪಯೋಗಿ ಕೆಲಸ, ಸ್ತ್ರೀಯರ ಹಾಗೂ ಇತರ ಹಿಂದುಳಿದ ವರ್ಗಗಳ ಒಳಿತಿಗಾಗಿ ಕೈಗೊಳ್ಳಲಾಗಿದ್ದ ಕ್ರಮಗಳು ಚರಿತ್ರೆಯಲ್ಲಿ ಅಮೋಘವಾದವುಗಳಾಗಿವೆ.

ದಲಿತರು-ಶೋಷಿತರು-ಕೆಳವರ್ಗದವರು ಮಹಿಳೆಯರು ಬುಡಕಟ್ಟು ಸಮುದಾಯದವರು ಮೊದಲ ಬಾರಿಗೆ ಸಾಮಾಜಿಕ ನ್ಯಾಯ ಹಾಗೂ ಬದಲಾವಣೆಯ ಮುಖಾಂತರ ಮಾತನಾಡಿದ್ದು ಇದೇ ಸಂದರ್ಭದಲ್ಲಿ. ಬಹುತೇಕ ರಾಜಪ್ರಭುತ್ವದವರದು ಪ್ರಮುಖವಾಗಿ ರಾಜಕೀಯ ಹಾಗೂ ದಬ್ಬಾಳಿಕೆಯ ಆಂದೋಲನವಾಗಿರುತ್ತದೆ. ರಾಜಕೀಯ ಹಾಗೂ ಧಾರ್ಮಿಕ ಅಂಶಗಳ ಮುಖಾಂತರ ಮೇಲ್ನೋಟಕ್ಕೆ ಮಾನವೀಯತೆಯನ್ನು ಬಿತ್ತುವುದು ಅವರ ಪ್ರಮುಖ ಉದ್ದೇಶಗಳಲ್ಲೊಂದಾಗಿರುತ್ತದೆ. ಆದರೆ ಅಂದು ಹದಗೆಟ್ಟ ಧಾರ್ಮಿಕ ಹಾಗೂ ಸಾಮಾಜಿಕ ಸ್ಥಿತಿಗತಿಯನ್ನು ಸುಧಾರಿಸಲು ಸಂಸ್ಥಾನಕ್ಕೆ ನಾಲ್ವಡಿ ಅವರ ಸಾಮಾಜಿಕ ಕಳಕಳಿ, ಆಡಳಿತಾತ್ಮಕ ಪ್ರೋತ್ಸಾಹ ಹಾಗೂ ಕೊಡುಗೆ ಇವುಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಭಾರತೀಯ ಸಮಾಜದಲ್ಲಿನ ತೊಡಕುಗಳನ್ನು ಸರಿಪಡಿಸಲು ಬದಲಾವಣೆ ಮಾಡಲು ಪ್ರಯತ್ನಿಸಿದ ಎಷ್ಟೋ ಸಮಾಜ ಸುಧಾರಕರನ್ನು ಕೆಲವರು ಸ್ವಾಗತಿಸಿದರೆ, ಮತ್ತೆ ಕೆಲವರು ಅವರನ್ನು ಸ್ವಾಗತಿಸಲಾರರು. ಭಾರತದಂತಹ ಜಾತಿ ವ್ಯವಸ್ಥೆಯ ನೆಲದಲ್ಲಿ ಇದಕ್ಕೆ ಎಂದೂ ಸ್ವಾಗತ ಇರಲಾರದು. ಇಂತಹ ಸನ್ನಿವೇಶದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕೈಗೊಂಡ ಸಾಮಾಜಿಕ ಬದಲಾವಣೆಯ ಕಾರ್ಯಗಳು ಭಾರತದ ಆಧುನಿಕ ಚರಿತ್ರೆಗೆ ಮಾದರಿಯಾಗಿದ್ದವು ಹಾಗೂ ಭಾರತದ ಸಂವಿಧಾನ ರಚನೆಯ ಸಂದರ್ಭದಲ್ಲಿಯೂ ಅನೇಕ ಅಂಶಗಳು ಸೇರ್ಪಡೆಗೊಂಡವು ಎಂಬುದು ಗಮನಾರ್ಹವಾದದ್ದಾಗಿದೆ.

ಸರ್ಕಾರ ಜನತೆಯ ಸರ್ವತೋಮುಖ ಬೆಳವಣಿಗೆಯ ದೃಷ್ಟಿಯಿಂದ ಜಾರಿಗೊಳಿಸಿದ ವಿವಿಧ ಕಾರ್ಯಕ್ರಮಗಳು ಮತ್ತು ನೀತಿಗಳೇ ಸಾಮಾಜಿಕ ಕಾನೂನುಗಳು. ಈ ಹಂತದಲ್ಲಿ ಅಸ್ಪೃಶ್ಯರ ಸಮಸ್ಯೆಗೆ ಸ್ಪಂದಿಸುವ, ಅವರ ಅಭಿವೃದ್ಧಿಗಾಗಿ ಅನೇಕ ಕಾನೂನುಗಳನ್ನು ಸಂಸ್ಥಾನ ತಂದಿತು. ಒಂದು ಸಂಸ್ಥಾನದ ಸರ್ವಕ್ಷೇತ್ರಗಳ ಬೆಳವಣಿಗೆಯನ್ನು ಅಳೆಯಲು ಆ ಸಂಸ್ಥಾನವು ಜಾರಿಗೆ ತಂದ ಸಾಮಾಜಿಕ ಕಾನೂನುಗಳನ್ನೇ ಮಾನದಂಡವನ್ನಾಗಿ ಬಳಸಬಹುದಾಗಿದೆ. ಸಾಮಾಜಿಕ ಕಾನೂನುಗಳ ಉದ್ದೇಶವೇ ಸಮಾಜದ ಕುಂದುಕೊರತೆಯನ್ನು ಮತ್ತು ಅಸಮಾನತೆಯನ್ನು ನೀಗಿಸುವುದಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಆಳ್ವಿಕೆಯಲ್ಲಿ ದಲಿತರ ಅಭಿವೃದ್ಧಿಗಾಗಿ ಸರ್ಕಾರದ ವತಿಯಿಂದ ಜಾರಿಗೆ ತಂದಂತಹ ಸಾಮಾಜಿಕ ಕಾನೂನುಗಳನ್ನು ಅವಲೋಕಿಸಿದಾಗ ಅವರಲ್ಲಿ ಆಧುನಿಕತೆಗೆ ಹೊಂದಿಕೊಳ್ಳುವ ಪ್ರಗತಿಪರ ಮನೋಭಾವನೆ, ಜನರ ಸ್ಥಿತಿಗತಿಯನ್ನರಿತು ಅದನ್ನು ಪರಿಹರಿಸಲು ನಡೆಸಿದ ಪ್ರಯತ್ನಗಳು ಕಂಡುಬರುತ್ತವೆ. ಅಂದು ಜಾರಿಗೆ ಬಂದಂತಹ ಪ್ರಮುಖ ಸಾಮಾಜಿಕ ಕಾನೂನುಗಳ ಅಧ್ಯಯನ ಮಾಡುವುದರ ಮೂಲಕ ಅವುಗಳ ಪ್ರಾಮುಖ್ಯತೆಯನ್ನು ಅರಿಯಬಹುದಾಗಿದೆ.

೬.೨. ದೇವದಾಸಿ ನಿಷೇಧದ ಕಾನೂನು

ಪ್ರಮುಖ ಸಾಮಾಜಿಕ ಪಿಡುಗಾಗಿರುವ ದೇವದಾಸಿ ಪದ್ಧತಿಯನ್ನು ನಿರ್ಮೂಲನೆ ಮಾಡಲು ಕಾನೂನು ಜಾರಿಗೆ ತಂದದ್ದು ನಾಲ್ವಡಿಯವರ ಪ್ರಮುಖ ಸಾಮಾಜಿಕ ಬೆಳವಣಿಗೆಯಾಗಿದೆ.

ದೇವಾಲಯಗಳಲ್ಲಿ ದೇವದಾಸಿಯರ ನೇಮಕಕ್ಕೆ ಅನ್ವಯವಾಗುತ್ತಿದ್ದ ಸನಾತನ ಧರ್ಮದ ಉಚ್ಚ ಧ್ಯೇಯಗಳನ್ನು ಗಾಳಿಗೆ ತೂರಿ ಅದಕ್ಕೆ ಬದಲು ಈ ಕೆಲಸವನ್ನು ಲಂಪಟ ವೃತ್ತಿಯಾಗಿ ಮಾರ್ಪಡಿಸಿ ಅಮಾಯಕ ದೇವದಾಸಿಯರನ್ನು ತಮ್ಮ ತಮ್ಮ ಕಾಮ ತೃಪ್ತಿಗಾಗಿ, ಬೀಳಾಗಿದ್ದ ಭೋಗ ವಸ್ತುಗಳಾಗಿ ಬಳಸಿಕೊಳ್ಳುತ್ತಿದ್ದ ಹೇಯ ಪದ್ಧತಿಯನ್ನು ಕೊನೆಗಾಣಿಸುವುದಕ್ಕಾಗಿ ಸರ್ಕಾರವು ೧೯೧೦ ಮೇ ತಿಂಗಳಿನಲ್ಲಿ ಒಂದು ಸುತ್ತೋಲೆಯನ್ನು ಹೊರಡಿಸಿತು. ಬ್ರಿಟೀಶರು ಹಾಗೂ ಸಂಸ್ಥಾನದ ಅನೇಕ ರಾಜರು ಈ ಅನಿಷ್ಟವನ್ನು ತಡೆಯುವ ಧೈರ್ಯ ಮಾಡದೇ ಹೋಗಿದ್ದರೂ, ಇದನ್ನು ಅಳಿಸಿ ಹಾಕುವ ಕಾರ್ಯಕ್ಕೆ ಕೈಹಾಕದೆ ಇದ್ದಂತಹ ಸಮಯದಲ್ಲಿ ನಾಲ್ವಡಿಯವರು ನಿರ್ಭೀತಿಯಿಂದ ವರ್ತಿಸಿ ಮಾರ್ಗದರ್ಶನ ಮಾಡಿದರು ಎಂಬುದಾಗಿ ಮದ್ರಾಸ್ ಹಾಗೂ ಬ್ರಿಟೀಶ್ ಪ್ರಾಂತ್ಯಗಳ ಪತ್ರಿಕೆಗಳಲ್ಲಿ ಪ್ರಶಂಸೆ ಕಂಡುಬಂದಿತು. ಸಾಮಾನ್ಯವಾಗಿ ಯಾವ ದೇಶೀಯ ರಾಜರನ್ನು ಹೊಗಳದೆ ಇದ್ದಂತಹ ಬ್ರಿಟೀಶ್ ಸರ್ಕಾರ ಈ ಕಾರ್ಯವನ್ನು ತೃಪ್ತಿಯಿಂದ ಮೆಚ್ಚಿಕೊಂಡು ಇದು ಧೈರ್ಯದ ಕೆಲಸ ಎಂದು ಬಣ್ಣಿಸಿತು. ಇದರಿಂದಾಗಿ ಸಂಸ್ಥಾನದ ಮುಜರಾಯಿ ಇಲಾಖೆಗೆ ಸೇರಿದ್ದ ದೇವಸ್ಥಾನಗಳಲ್ಲಿ ದೇವದಾಸಿಯರನ್ನು ನೇಮಿಸಿಕೊಳ್ಳುವ ಅವಕಾಶ ತಪ್ಪಿತು. ಸ್ವಾತಂತ್ರ್ಯ ಪೂರ್ವದ ಐವತ್ತು ವರ್ಷಗಳಲ್ಲಿಯೇ ಈ ಅನಿಷ್ಟ ಪದ್ಧತಿಯ ವಿರುದ್ಧ ಕಾನೂನು ಕ್ರಮ ಕೈಗೊಂಡಿದ್ದರಿಂದ ಮೈಸೂರು ಪ್ರಾಂತ್ಯ ಉತ್ತರ ಕರ್ನಾಟಕದ ಪ್ರಾಂತ್ಯಕ್ಕೆ ಹೋಲಿಸಿ ನೋಡಿದರೆ ಇದರಿಂದ ಸಂಪೂರ್ಣ ಗುಣವಾಗಿದೆ ಎನ್ನಬಹುದು. ಏಕೆಂದರೆ ಉತ್ತರ ಕರ್ನಾಟಕದ ಕೆಲವು ಪ್ರಾಚೀನ ದೇವಾಲಯಗಳಲ್ಲಿ ಇಂದಿಗೂ ಈ ದೇವದಾಸಿ ಪದ್ಧತಿ ಸರ್ಕಾರದ ಏನೆಲ್ಲ ಕಾನೂನು ಭದ್ರತೆಯ ನಡುವೆಯೂ ಕದ್ದು ಮುಚ್ಚಿ ನಡೆಯುತ್ತಿರುವುದು ಕಂಡುಬರುತ್ತದೆ.[೧]

ಸಮಾಜದ ಕಪ್ಪು ಚುಕ್ಕೆಯಾದ ದೇವದಾಸಿ ಪದ್ಧತಿಯು ಮೈಸೂರು ಸಂಸ್ಥಾನದಲ್ಲಿ ಪ್ರಾಚೀನ ಕಾಲದಿಂದಲೂ ಆಚರಣೆಯಲ್ಲಿತ್ತು. ದೇವದಾಸಿಯರೆಂದರೆ ದೇವಾಲಯಗಳಲ್ಲಿ ದೇವರ ಹೆಸರಲ್ಲಿ ಸಮರ್ಪಿಸಿಕೊಂಡಿರುವ, ನೃತ್ಯ ಮತ್ತು ಸಂಗೀತ ಸೇವೆ ಮಾಡುವ ಸ್ತ್ರೀಯರಾಗಿದ್ದರು. ಮೊದಮೊದಲು ಉನ್ನತ ಆದರ್ಶ, ಗೌರವವೆನ್ನಿಸಿಕೊಂಡಿದ್ದ ದೇವದಾಸಿ ಪದ್ಧತಿ ೧೮ ಮತ್ತು ೧೯ನೇ ಶತಮಾನದಲ್ಲಿ ತನ್ನ ಮೂಲ ಸ್ವರೂಪವನ್ನು ಸಂಪೂರ್ಣವಾಗಿ ಕಳೆದುಕೊಂಡು ಬದಲಾವಣೆಗೊಂಡಿತು. ಅವರು ಸಲ್ಲಿಸುವ ಸೇವೆ ಮತ್ತು ಸ್ಥಾನಗಳು ಕೀಳುಮಟ್ಟಕ್ಕಿಳಿದು ವೇಶ್ಯೆಯರಾದರೆಂದು ಇತಿಹಾಸ ತಿಳಿಸುತ್ತದೆ. ಮೈಸೂರು ಪ್ರಾಂತ್ಯದಲ್ಲಿ ಆಚರಣೆಯಲ್ಲಿದ್ದಂತಹ ಮತ್ತೊಂದು ಪ್ರಮುಖ ನೀಚ ಪದ್ಧತಿಯೆಂದರೆ ಬಸವಿ ಪದ್ಧತಿ. ಶಿವ, ವಿಷ್ಣು ಮತ್ತಿತರ ಗ್ರಾಮ ದೇವತೆಗಳ ಸೇವೆಗಾಗಿ ಬಸವಿಯರನ್ನು ಅರ್ಪಿಸಲಾಗುತ್ತಿತ್ತು. ಇಲ್ಲಿ ಗಮನಿಸಬೇಕಾದ ಬಹುಮುಖ್ಯವಾದ ಅಂಶವೆಂದರೆ ದೇವದಾಸಿಯರು ಹಾಗೂ ಬಸವಿಯರು ಸಾಮಾನ್ಯವಾಗಿ ದಲಿತರೇ ಆಗಿದ್ದುದು. ಆಳುವ ವರ್ಗ ಹಾಗೂ ಪುರೋಹಿತಶಾಹಿ ವರ್ಗ ಈ ವರ್ಗದ ಜನರನ್ನು ಧಾರ್ಮಿಕ ಹಾಗೂ ಮೂಢನಂಬಿಕೆಗಳಿಂದ ಕಟ್ಟಿ ಹಾಕಿ ಇವರು ಈ ಅನಿಷ್ಟ

ಪದ್ಧತಿಯನ್ನು ದೇವರು ನೀಡಿದ ವರವೆಂದು ತಿಳಿದು ಆಚರಿಸುವಂತೆ ಮಾಡಿದ್ದಾರೆ. ಈ ಅನಿಷ್ಟ ಸಾಮಾಜಿಕ ಪಿಡುಗುಗಳನ್ನು ನಿರ್ಮೂಲನೆಗೊಳಿಸಲು ಸರ್ಕಾರವು ೧೮೯೨ರಲ್ಲಿಯೇ ಆಜ್ಞೆಯನ್ನು ಹೊರಡಿಸಿತು. ಪ್ರಮುಖವಾಗಿ ಈ ಆಜ್ಞೆ ನಂಜನಗೂಡಿನ ಭೋಗಾ ನಂದೀಶ್ವರ ದೇವಾಲಯದಲ್ಲಿ ದೇವದಾಸಿಯರನ್ನು ನೇಮಿಸಿಕೊಳ್ಳುವ ಮತ್ತು ಕನ್ಯೆಯರು ನೃತ್ಯ ಮಾಡುವುದನ್ನು ನಿಷೇಧಿಸಿತು. ಪ್ರಮುಖವಾಗಿ ಈ ಆಜ್ಞೆ ಕೇವಲ ನಂಜನಗೂಡಿನ ದೇವಸ್ಥಾನಕ್ಕೆ ಮಾತ್ರ ಸೀಮಿತವಾಗಿತ್ತು. ನಂತರ ಇದನ್ನು ಸಂಸ್ಥಾನದ ಎಲ್ಲಾ ದೇವಾಲಯಗಳಿಗೂ ಅನ್ವಯವಾಗುವಂತೆ ಮಾಡಲಾಯಿತು.

ನಾಲ್ವಡಿಯವರು ಅಧಿಕಾರ ವಹಿಸಿಕೊಂಡ ನಂತರ ಈ ಅನಿಷ್ಟ ಪದ್ಧತಿಯನ್ನು ನಿರ್ಮೂಲನೆ ಮಾಡಲು ೧೯೦೯ರಲ್ಲಿ ಸರ್ಕಾರ ಆಜ್ಞೆಯನ್ನು ಹೊರಡಿಸಿ ದೇವದಾಸಿ ಪದ್ಧತಿ ತನ್ನ ಪಾವಿತ್ರ್ಯತೆಯನ್ನು ಕಳೆದುಕೊಂಡಿರುವ ದುಷ್ಟ ಪದ್ಧತಿಯೆಂದು ಘೋಷಿಸಿ ನಿಷೇಧಿಸಿತು. ೧೯೧೦ರಲ್ಲಿ ಸರ್ಕಾರದ ಹತೋಟಿಯಲ್ಲಿರುವ ಮುಜರಾಯಿ ದೇವಸ್ಥಾನಗಳಲ್ಲಿ 'ಗೆಜ್ಜೆಪೂಜೆ' ಸಮಾರಂಭ ಏರ್ಪಡಬಾರದೆಂದು ಆಜ್ಞೆ ಹೊರಡಿಸಿತು. ಹೀಗೆ ನಾಲ್ವಡಿ ಕೃಷ್ಣರಾಜರು ತಮ್ಮ ಆಡಳಿತ ಅವಧಿಯಲ್ಲಿ ಹಂತ ಹಂತವಾಗಿ ದೇವದಾಸಿ ಪದ್ಧತಿಯನ್ನು ನಿರ್ಮೂಲನೆಗೊಳಿಸಲು ಪ್ರಯತ್ನಿಸಿದರು.[೨]

೬.೩. ಬಾಲ್ಯವಿವಾಹ ನಿಷೇಧದ ಕಾನೂನು

ವಿವಾಹವು ಕುಟುಂಬದಂತೆಯೇ ಸಾಮಾಜಿಕವಾಗಿ ಬಹಳ ಪ್ರಾಮುಖ್ಯತೆಯನ್ನು ಗಳಿಸಿರುವ ಸಂಸ್ಥೆ. ವಿವಾಹದ ವಯಸ್ಸಿನ ಹಿನ್ನೆಲೆಯಲ್ಲಿ ಕಾಣಿಸಿಕೊಂಡ ಬಾಲ್ಯವಿವಾಹ, ವೇದಗಳ ಕಾಲದಲ್ಲಿ ೮ ರಿಂದ ೧೦ ವರ್ಷದ ಹುಡುಗಿಯರಿಗೆ ವಿವಾಹ ಮಾಡುವ ಸಂಪ್ರದಾಯ ಆರಂಭಗೊಂಡಿತು. ಆದರೆ ಮಧ್ಯಯುಗೀನ ಕಾಲದಲ್ಲಿ ಬಾಲ್ಯ ವಿವಾಹವು ಹೆಚ್ಚು ತೀವ್ರಗೊಂಡಿತು. ಅನಂತರ ಭಾರತೀಯ ಸಮಾಜದ ಅವಿಭಾಜ್ಯ ಅಂಗವಾಯಿತು. ಆದರೆ ಪಾಶ್ಚಾತ್ಯ ಸಂಸ್ಕೃತಿಯ ಪ್ರವೇಶದೊಂದಿಗೆ ಬಾಲ್ಯವಿವಾಹ ವ್ಯವಸ್ಥೆಯು ಸಮಾಜದ ಬೆಳವಣಿಗೆಗೆ ಪಿಡುಗೆಂಬ ಭಾವನೆ ಬೆಳೆಯಿತು. ರಾಜರಾಮ್‌ಮೋಹನ್‌ರಾಯ್, ಕೇಶವ ಚಂದ್ರಸೇನ್ ಮುಂತಾದವರು ವಿರೋಧಿಸಿದ್ದರಿಂದ ೧೮೭೨ರಲ್ಲಿ 'ದಿ ನೇಟಿವ್ ಮ್ಯಾರೆಯೇಜ್ ಆಕ್ಟ್' ಎಂಬ ಶಾಸನವನ್ನು ಜಾರಿಗೆ ತಂದು ಬಾಲ್ಯ ವಿವಾಹವನ್ನು ನಿಷೇಧಿಸಿತು. ಈ ಶಾಸನವು ಬಂದ ನಂತರವೂ ಬಾಲ್ಯ ವಿವಾಹಗಳು ನಿಲ್ಲಲಿಲ್ಲ. ಆದ್ದರಿಂದ ಭಾರತ ಸರ್ಕಾರವು ೧೮೯೧ರಲ್ಲಿ 'ದಿ ಎಜ್ ಆಫ್ ಕನ್ಸೆಂಟ್ ಬಿಲ್' ಎಂಬ ಶಾಸನವನ್ನು ಜಾರಿಗೆ ತಂದು ೧೨ ವರ್ಷದೊಳಗಿನ ಹುಡುಗಿಯರನ್ನು ವಿವಾಹವಾಗುವುದನ್ನು ನಿಷೇಧಿಸಲಾಯಿತು.

ಬ್ರಿಟೀಶ್ ಭಾರತದ ನೇರ ಆಳ್ವಿಕೆಯ ಪ್ರದೇಶಗಳಲ್ಲಿ ಜಾರಿಗೆ ಬಂದ 'ದಿ ಎಜ್ ಆಫ್ ಕನ್ಸೆಂಟ್ ಬಿಲ್' ಅನ್ನು ಮೈಸೂರು ಸಂಸ್ಥಾನದಲ್ಲೂ ಜಾರಿಗೊಳಿಸಬೇಕೆಂದು ಸುಧಾರಣಾವಾದಿಗಳು ೧೮೯೧ರಲ್ಲಿ ಬೇಡಿಕೆಯಿಟ್ಟರು.[೩]

ಆದರೆ ದಿವಾನರಾಗಿದ್ದ ಶೇಷಾದ್ರಿ ಅಯ್ಯರ್ ಅವರು ಈ ಶಾಸನದ ಅವಶ್ಯಕತೆನಿಧಿ ಸಭೆಯಲ್ಲಿ ಸದಸ್ಯರು ಬಾಲ್ಯ ವಿವಾಹಗಳನ್ನು ನಿಷೇಧಿಸಬೇಕೆಂದು ಅಭಿಪ್ರಾಯಪಟ್ಟರು. ಹಾಗೆಯೇ ಆರು ತಿಂಗಳ ಬಾಲಕಿಯನ್ನು ೫ ವರ್ಷದ ಹುಡುಗನಿಗೆ ಹಾಗೂ ೭ ವರ್ಷದ ಹುಡುಗಿಯನ್ನು ೬೫ ವರ್ಷದ ನಿವೃತ್ತ ಉದ್ಯೋಗಿಯೊಂದಿಗೆ ಬಾಲ್ಯವಿವಾಹ ನಡೆಸಿದ ಉದಾಹರಣೆಗಳನ್ನು ಉಲ್ಲೇಖಿಸಿ ಅಂಥವುಗಳನ್ನು ತಡೆಗಟ್ಟಬೇಕೆಂದು ವಾದಿಸಿದರು. ಸರ್ಕಾರವು ಸದಸ್ಯರ ಬೇಡಿಕೆಯನ್ನು ಒಪ್ಪಿ ಅವರ ಬಗ್ಗೆ ಮುಖ್ಯ ಮತಗಳಿಂದ ಅಭಿಪ್ರಾಯ ಕೇಳಿ ತೀರ್ಮಾನ ಕೈಗೊಳ್ಳುವುದಾಗಿ ತಿಳಿಸಿತು. ಮಠಾಧೀಶರೂ ಸಹ ಬಾಲ್ಯ ವಿವಾಹವು ಶಾಸ್ತ್ರಕ್ಕೆ ವಿರುದ್ಧವಾದುದೆಂಬ ಅಭಿಪ್ರಾಯವನ್ನು ತಿಳಿಸಿದರು. ಇವುಗಳ ಜೊತೆಗೆ ೧೮೯೧ರ ಜನಗಣತಿಯ ವೈವಾಹಿಕ ವಿವರಗಳೂ ಸಾರ್ವಜನಿಕ ಅಭಿಪ್ರಾಯವನ್ನೇ ಬೆಂಬಲಿಸುವಂತಿದ್ದವು.

ಮೇಲ್ಕಂಡ ವರದಿಯ ಅಂಶಗಳನ್ನರಿತ ಎಲ್ಲಾ ಸುಧಾರಣಾವಾದಿಗಳು ಬಾಲ್ಯವಿವಾಹವೆಂಬ ದುಷ್ಟ ಪದ್ಧತಿಯನ್ನು ಕೊನೆಗಾಣಿಸಬೇಕೆಂದು ಪ್ರತಿಪಾದಿಸಿದರು. ಎಂ. ವೆಂಕಟಕೃಷ್ಣಯ್ಯನಂಥವರು ೧೮ ವರ್ಷದ ಕೆಳಗಿನ ಹುಡುಗಿಯರ ವಿವಾಹಗಳನ್ನು ನಿಷೇಧಿಸಬೇಕೆಂದು ಸಲಹೆ ನೀಡಿದರು. ಹಾಗೆಯೇ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯನ್ನು, ಸಾಮಾಜಿಕ ನ್ಯಾಯ ಹಾಗೂ ಕಲ್ಯಾಣವನ್ನು ಸಾಧಿಸಲು ಮಧ್ಯೆ ಪ್ರವೇಶಿಸಬೇಕೆಂದು ಒತ್ತಾಯಿಸಿದರು. ಅಂತಿಮವಾಗಿ ೧೮೯೪ರಲ್ಲಿ ಸರ್ಕಾರವು 'ಬಾಲ್ಯವಿವಾಹ ನಿರ್ಬಂಧ ಶಾಸನ'ವನ್ನು ಜಾರಿಗೊಳಿಸಿತು.

ಭಾರತದಾದ್ಯಂತ ಈ ಶಾಸನವನ್ನು ಪ್ರಶಂಸಿಸಲಾಯಿತು. ಭಾರತದ ಇನ್ನಿತರ ರಾಜ್ಯಗಳು ಈ ಕ್ರಮವನ್ನು ಅನುಸರಿಸಬೇಕೆಂದು ಸುಧಾರಕರು ಅಭಿಪ್ರಾಯಪಟ್ಟರು. ಮದ್ರಾಸ್‌ನಲ್ಲಿ ಏರ್ಪಟ್ಟ ೧೨ನೇ ಸೋಷಿಯಲ್ ಕಾನ್ಫರೆನ್ಸ್‌ನಲ್ಲಿ ಸಾಮಾಜಿಕ ಅನಿಷ್ಟಗಳನ್ನು ಹೋಗಲಾಡಿಸಲು ಕೈಗೊಂಡ ಮೈಸೂರು ಸರ್ಕಾರದ ಕ್ರಮವನ್ನು ಪ್ರಶಂಸಿಸಲಾಯಿತು.[೪]

ಬಾಲ್ಯವಿವಾಹದ ಪ್ರಶ್ನೆಯು ಮತ್ತೆ ೧೯೨೮ರ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಗೆ ಬಂದಿತು. ಬೇರೆ ರಾಜ್ಯಗಳಾದ ಬರೋಡ, ಭೋಪಾಲ್, ಕಾಶ್ಮೀರ ಮತ್ತು ಇಂಪೀರಿಯಲ್ ಲೇಜಿಸ್ಲೇಟಿವ್ ಅಸೆಂಬ್ಲಿಗಳು ಬಾಲ್ಯ ವಿವಾಹದ ಬಗ್ಗೆ ಪ್ರಗತಿಪರ ಶಾಸನಗಳನ್ನು ತಂದಿದ್ದಾರೆ. ಆದರೆ ಮೈಸೂರು ಸಂಸ್ಥಾನವು ೧೯೨೯ರಲ್ಲಿ ತಂದ ಬಾಲ್ಯವಿವಾಹ ನಿರ್ಬಂಧ ಶಾಸನ ಅಥವಾ ಶಾರದ ಆಕ್ಟ್ ಅನ್ನು ಸರ್ಕಾರ ಜಾರಿಗೊಳಿಸಿತು. ಈ ಶಾಸನವು ಹುಡುಗಿ, ಹುಡುಗರ ವಿವಾಹದ ವಯಸ್ಸನ್ನು ಕ್ರಮವಾಗಿ ೧೫ ಮತ್ತು ೧೮ ಎಂದು ನಿಗದಿಗೊಳಿಸಿತು.

ಮೈಸೂರಿನಲ್ಲಿ ಈ ಶಾಸನವನ್ನು ಜಾರಿಗೊಳಿಸಬೇಕೆಂದು ಪುಟ್ಟಣ್ಣಶೆಟ್ಟಿ ಮುಂತಾದವರು ಒತ್ತಾಯಿಸಿದರು. ಈ ಶಾಸನವನ್ನು ಕುರಿತಂತೆ ಸಂಪ್ರದಾಯವಾದಿಗಳಿಗೂ, ಸುಧಾರಣಾ ವಾದಿಗಳಿಗೂ ದೀರ್ಘ ಚರ್ಚೆಗಳು ನಡೆದವು. ಒಬ್ಬ ಸದಸ್ಯರು 'ನಮ್ಮ ಜನರಲ್ಲಿ ಬಾಲ್ಯ ವಿವಾಹದಿಂದ ಕೆಡುಕು ತುಂಬಾ ಹೆಚ್ಚಾಗಿದೆ. ಇದನ್ನು ಖಂಡಿತವಾಗಿ ನಿಲ್ಲಿಸಬೇಕು. ಅದಕ್ಕೆ ಉಪಾಯವೇನೆಂದರೆ ಇನ್ನು ಮುಂದೆ ಶಾಲಾ, ಕಾಲೇಜುಗಳಿಗೆ ಸೇರಬಯಸುವ

ವಿದ್ಯಾರ್ಥಿನಿಯರುಗಳಿಗೆ ಅವರು ವಿವಾಹಿತರಾಗಿದ್ದಲ್ಲಿ ಸ್ಕಾಲರ್‌ಶಿಪ್‌ಗಳನ್ನು ಕೊಡತಕ್ಕದ್ದಲ್ಲ ಮತ್ತು ಅದರಿಂದ ಶುಲ್ಕವನ್ನು ದ್ವಿಗುಣವಾಗಿ ವಸೂಲು ಮಾಡಬೇಕು' ಎಂದು ಹೇಳಿದರು. ಬಹುಸಂಖ್ಯಾತ ಬ್ರಾಹ್ಮಣರು, ವೈಶ್ಯರು ಮತ್ತು ಮುಸ್ಲಿಂ ಸದಸ್ಯರು ಶಾರದ ಆಕ್ಟ್‌ನ್ನು ವಿರೋಧಿಸಿದರು.

ಬ್ರಾಹ್ಮಣೇತರ ಸದಸ್ಯರಾದ ಎಚ್.ಸಿ. ದಾಸಪ್ಪ, ಟಿ. ಮರಿಯಪ್ಪ, ಎನ್. ಸಂಜೀವಯ್ಯ ಮುಂತಾದವರು ವೈಜ್ಞಾನಿಕವಾಗಿ ಬಾಲ್ಯವಿವಾಹವು ಯುವ ಜನಾಂಗವನ್ನು ದೈಹಿಕವಾಗಿ ಹಾಗೂ ನೈತಿಕವಾಗಿ ಅಧಃಪತನಕ್ಕೆ ದೂಡುತ್ತವೆಂದೂ ಸರಾಸರಿ ಜೀವಿಸುವ ಶಕ್ತಿಯನ್ನು ಕುಗ್ಗಿಸುತ್ತದೆಂದೂ ಎಲ್ಲಕ್ಕಿಂತ ಹೆಚ್ಚಾಗಿ ಬಾಲ ವಿಧವೆಯರನ್ನು ಸೃಷ್ಟಿಸಿ, ಶಾಶ್ವತವಾಗಿ ಅವರನ್ನು ದುಃಖದ ಮಡುವಿಗೆ ತಳ್ಳುತ್ತದೆಂದು ವಾದಿಸಿ, ಶಾಸನವನ್ನು ಜಾರಿಗೊಳಿಸುವ ಮೂಲಕ ಸ್ತ್ರೀಯರನ್ನು ಉದ್ಧಾರಗೊಳಿಸಬೇಕೆಂದು ಮನವಿ ಮಾಡಿಕೊಂಡರು. ಈ ನಿಟ್ಟಿನಲ್ಲಿ ಮೈಸೂರು ಸಂಸ್ಥಾನದಲ್ಲಿ ಬಾಲ್ಯ ವಿವಾಹ ನಿಷೇಧ ಕಾಯ್ದೆ ಸಮರ್ಪಕವಾಗಿ ಕಾರ್ಯ ನಿರ್ವಹಿಸಿ ಬಾಲ್ಯವಿವಾಹ ತಡೆಯುವಲ್ಲಿ ಸ್ವಲ್ಪಮಟ್ಟಿಗೆ ಯಶಸ್ವಿಯಾಯಿತು.[೫]

೬.೪. ದಿ. ಮೈಸೂರು ಹಿಂದೂ ವಿಡೋ ರೀಮ್ಯಾರೆಜ್ ಆಕ್ಟ್

ಮೈಸೂರು ಸಂಸ್ಥಾನವು ೧೮೯೪ರಲ್ಲೇ ಬಾಲ್ಯವಿವಾಹ ನಿಷೇಧ ಕಾನೂನನ್ನು ಜಾರಿಗೆ ತಂದು ಬಾಲ್ಯವಿವಾಹ ನಿಷೇಧಿಸುವುದರ ಮೂಲಕ ಬಾಲವಿಧವೆಯರ ಸಂಖ್ಯೆಯನ್ನು ಕಡಿತಗೊಳಿಸಿತ್ತು. ಇಂದಿನ ಪ್ರಜಾಪ್ರಭುತ್ವ ಮಾದರಿಯ ಸರ್ಕಾರದ ಸಂವಿಧಾನಾತ್ಮಕ ಕಾನೂನುಗಳನ್ನು ಲೆಕ್ಕಿಸದೆ ಹೆಚ್ಚು ಹೆಚ್ಚಾಗಿ ಬಾಲ್ಯವಿವಾಹಗಳು ನಡೆಯುತ್ತಿರುವ ಸನ್ನಿವೇಶದಲ್ಲಿ ಅಂದು ಅಲಿಖಿತ ಸಂವಿಧಾನದ ರಾಜಪ್ರಭುತ್ವದಲ್ಲಿ ಇದರ ಪ್ರಭಾವ ಹೆಚ್ಚಾಗಿಯೇ ಇತ್ತು. ಅಂತೆಯೇ ವಿಧವೆಯರ ಸ್ಥಿತಿಯಂತೂ ಮಾತುಬಾರದ ಮೂಕ ಪ್ರಾಣಿಗಳಿಗಿಂತ ಹೀನಾಯವಾಗಿಯೇ ಇತ್ತೆನ್ನಬಹುದು. ವಿಧವೆಯರ ಸ್ಥಿತಿಯು ಹಿಂದೂ ಸಮಾಜದಲ್ಲಿ ತೀರಾ ಕೆಳಮಟ್ಟದಲ್ಲಿದ್ದು, ಅವರು ಕಷ್ಟದಾಯಕವಾದ ಜೀವನವನ್ನು ನಡೆಸುತ್ತಿದ್ದರೆಂಬುದಕ್ಕೆ ನೂರಾರು ಜ್ವಲಂತ ನಿದರ್ಶನಗಳು ನಮ್ಮ ಮುಂದಿವೆ. ಈ ಕುರಿತು ಬರೆದಂತಹ ಕಾದಂಬರಿಗಳಿಗೆ, ಚಲನಚಿತ್ರಗಳಿಗೆ ನಮ್ಮ ರಾಷ್ಟ್ರವೇ 'ರಾಷ್ಟ್ರ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ. ಒಂದರ್ಥದಲ್ಲಿ ಬಾಲ್ಯವಿವಾಹದ ಹೆಚ್ಚಳ, ಸತಿಪದ್ಧತಿಯ ಕಣ್ಮರೆ ಮತ್ತು ವಿಧವೆಯರ ಪುನರ್‌ವಿವಾಹಕ್ಕೆ ಇದ್ದಂತಹ ಅಡಚಣೆಗಳು ವಿಧವೆಯರ ಸಂಖ್ಯೆಯನ್ನು ಹಾಗೂ ಅವರ ಕಷ್ಟವನ್ನು ಜಾಮಿತಿಯ ಪ್ರಮಾಣದಲ್ಲಿ ಹೆಚ್ಚಿಸುತ್ತಿತ್ತು. ಸಾಮಾನ್ಯ ಶಿಕ್ಷೆಯಾಗಿದ್ದಂತಹ ಆಭರಣ, ಉತ್ತಮ ವಸ್ತ್ರಗಳನ್ನು ಧರಿಸದಂತೆ ನಿರ್ಬಂಧಿಸಿದ್ದು ಹಾಗೂ ದಿನಕ್ಕೊಮ್ಮೆ ಊಟ ನೀಡುವುದರ ಜೊತೆಗೆ ಪ್ರಮುಖವಾಗಿ ಅವರ ಇರುವಿಕೆಯನ್ನು ದುರ್ಲಕ್ಷಣವೆಂದು ಭಾವಿಸಿದ್ದು ಹಾಗೂ ತಲೆಯ ಕೂದಲನ್ನು ಬೋಳಿಸುತ್ತಿದ್ದದ್ದು ಸಾಮಾನ್ಯವಾಗಿ ಕಂಡುಬರುತ್ತಿದ್ದವು. ಹೀಗೆ ಹಿಂದೂ ಸಂಪ್ರದಾಯಸ್ಥರು ವಿಧವೆಯರನ್ನು ಹೀನಸ್ಥಿತಿಯಲ್ಲಿ ಉಳಿಸಿದ್ದನ್ನು ಗಮನಿಸಿದ ಸಮಾಜ ಸುಧಾರಕರು ವಿಧವೆಯರ ಪುನರ್ವಿವಾಹಕ್ಕೆ ಗಮನ ನೀಡಿದರು. ದಲಿತರು ಹಿಂದೂ ಸಂಪ್ರದಾಯಸ್ಥರ ಸಂಪರ್ಕದಿಂದ ಪ್ರಭಾವಿತರಾಗಿ ಈ ಪದ್ಧತಿಯನ್ನು ತಮ್ಮ ಸಮಾಜದಲ್ಲಿಯೂ

ಅನುಸರಿಸಿಕೊಂಡು ಬರುತ್ತಿದ್ದರು.[೬] ಇದನ್ನು ನಿರ್ಮೂಲನೆಗೊಳಿಸಿ ಇವರಿಗೆ ಮತ್ತೆ ಹೊಸ ಬೆಳಕನ್ನು ಕಾಣಿಸುವ ದೃಷ್ಟಿಯಿಂದ ೧೯೨೯ರಲ್ಲೇ ಪ್ರಜಾಪ್ರತಿನಿಧಿ ಸಭೆಯಲ್ಲಿ ವಿಧವೆಯರ ಪುನರ್‌ವಿವಾಹಕ್ಕಿರುವ ಅಡೆತಡೆಗಳನ್ನು ಕಾನೂನಾತ್ಮಕವಾಗಿ ತೊಲಗಿಸಬೇಕೆಂಬ ಬೇಡಿಕೆ ಬಂದಿತು. ಆದರೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸರ್ಕಾರವು ಹಿಂದೂ ಸಂಪ್ರದಾಯಸ್ಥರು ಮತ್ತು ಧಾರ್ಮಿಕ ಮಠಗಳು ವಿರೋಧಿಸಬಹುದೆಂಬ ಕಾರಣದಿಂದ ಸಾರ್ವಜನಿಕ ಒತ್ತಾಯ ಬರುವವರೆಗೆ ಅಂತಹ ಕಾನೂನನ್ನು ಜಾರಿಗೆ ತರುವ ಅವಶ್ಯಕತೆ ಇಲ್ಲವೆಂದು ವಾದಿಸಿದರು. ೧೯೩೬ರಲ್ಲಿ ಪ್ರಜಾಪ್ರತಿನಿಧಿ ಸಭೆಯು ಹಿಂದೂ ವಿಧವೆಯರ ಪುನರ್ವಿವಾಹಕ್ಕೆ ಸಂಬಂಧಿಸಿದ ಮಸೂದೆಯನ್ನು ಬಹುಮತದಿಂದ ಬೆಂಬಲಿಸಿತು. ಸಾರ್ವಜನಿಕ ಬೇಡಿಕೆಯನ್ನು ಗಮನಿಸಿದ ನಾಲ್ವಡಿಯವರು ೧೯೩೮ರ ಜುಲೈ ೭ರಂದು 'ದಿ ಮೈಸೂರು ಹಿಂದೂ ವಿಡೋ ರೀ ಮ್ಯಾರೇಜ್ ಆಕ್ಟ್' ಎಂಬ ಕಾನೂನನ್ನು ಜಾರಿಗೆ ತಂದರು. ಈ ಕಾನೂನು ಹಿಂದೂ ವಿಧವೆಯರಿಗೆ ಪುನರ್‌ವಿವಾಹಗಳನ್ನು ಸಂರಕ್ಷಿಸಿತು. ನಾಲ್ವಡಿಯವರು ಜಾರಿಗೆ ತಂದ ವಿಧವಾ ವಿವಾಹ ಕಾನೂನು ಮತ್ತು ಕನ್ಯೆಯರ ವಿವಾಹ ವಯಸ್ಸಿನ ಹೆಚ್ಚಳದ ಕ್ರಮವನ್ನೇ ಕೈಗೊಂಡಿದ್ದಾರಿಂದ ವಿಧವೆಯರ ಸಂಖ್ಯೆ ವಯಸ್ಸಿನ ಹೆಚ್ಚಳದ ಕ್ರಮವನ್ನು ಕೈಗೊಂಡಿದ್ದರಿಂದ ವಿಧವೆಯರ ಸಂಖ್ಯೆ ಕಡಿತಗೊಂಡಿತು. ಶತಮಾನಗಳಿಂದ ಶೋಷಣೆಗೆ ಒಳಗಾಗಿದ್ದ ವಿಧವೆಯರ ಮತ್ತು ಹೆಣ್ಣು ಮಕ್ಕಳ ಪುನರುದ್ಧಾರಕ್ಕೆ ಕಾನೂನು ಅನೇಕ ರೀತಿಯಲ್ಲಿ ಸಹಾಯಕವಾಯಿತು. ಸರ್ಕಾರದ ವತಿಯಿಂದಲೇ ದೇವರಾಜ ಬಹಾದ್ದೂರ್‌ಫಂಡ್ ಎಂಬುದನ್ನು ಸ್ಥಾಪಿಸಿ ಈ ಹಣದಿಂದ ವಿಧವೆಯರಿಗೆ ಸಹಾಯಕವಾಗಲು ವಿಡೋ ಹೋಂಗಳನ್ನು ಸ್ಥಾಪಿಸಿ ನಡೆಸಿಕೊಂಡು ಹೋಗುವ ಪರಿಪಾಠ ಜಾರಿಗೆ ಬಂದಿತ್ತು. ಈ ರೀತಿಯ ವಿಡೋ ಹೋಂಗಳಲ್ಲಿ ದಲಿತ ಮಹಿಳೆಯರೂ ಸಹ ಆಶ್ರಯ ಪಡೆದಿದ್ದಾರೆಂಬುದು ವಿಶೇಷ. ದಲಿತ ಮಹಿಳೆಯರು ಹೆಚ್ಚಾಗಿದ್ದಂತಹ ಸ್ಥಳವನ್ನು ಅಬಲಾಶ್ರಮ ಎಂದು ಕರೆಯಲಾಗುತ್ತಿತ್ತು. ಮೈಸೂರಿನಲ್ಲಿ ರಾವ್‌ಬಹುದ್ದೂರ್, ಎ. ನರಸಿಂಹ ಅಯ್ಯಂಗಾರ್‌ರ ಅಧ್ಯಕ್ಷತೆಯಲ್ಲಿ ಸಮಿತಿ ನಡೆಸುತ್ತಿದ್ದಂತಹ ವಿಧವಾ ವಸತಿ ಗೃಹವನ್ನು ಬಡ ವಿದ್ಯಾರ್ಥಿಗಳಿಗೆ ಉಚಿತ ಊಟ ಹಾಗೂ ವಸತಿ ಕಲ್ಪಿಸಲು ಬಳಸಿಕೊಳ್ಳುವಂತೆ ಆಜ್ಞೆಯನ್ನು ಹೊರಡಿಸಲಾಗಿತ್ತು. ಇದರಿಂದ ಗ್ರಾಮೀಣ ಪ್ರದೇಶದ ಆಸಕ್ತಿ ದಲಿತ ವಿಧವೆಯರು ನಗರಕ್ಕೆ ಬಂದು ಜೀವನೋಪಾಯದ ಶಿಕ್ಷಣದ ತರಬೇತಿ ಪಡೆದು ತಮ್ಮ ಜೀವನವನ್ನು ಯಾರ ಕೈಯಾಸರೆ ಇಲ್ಲದೆಯೇ ನಡೆಸಿಕೊಂಡು ಹೋಗುವ ಪರಿಪಾಠವನ್ನು ರೂಢಿಸಿಕೊಳ್ಳಲು ಸಹಕಾರಿಯಾಯಿತು.[೭]

೬.೫. ವೇಶ್ಯಾವೃತ್ತಿ ನಿಷೇಧದ ಕಾನೂನು

ಆಧುನಿಕ ಸಮಾಜದ ಮತ್ತೊಂದು ಪಿಡುಗಾಗಿರುವ ವೇಶ್ಯಾ ವೃತ್ತಿಯನ್ನು ತಡೆಗಟ್ಟಲು ಕೆಲವು ಪ್ರಯತ್ನಗಳು ಅಂದೇ ನಡೆದವು. ವೇಶ್ಯಾವೃತ್ತಿಯನ್ನು ತಡೆಗಟ್ಟಲು ಶಾಸನವನ್ನು ಜಾರಿಗೆ ತರುವುದಕ್ಕೆ ಮೊದಲು ಪ್ರಮುಖ ನಗರಗಳಲ್ಲಿನ ವೇಶ್ಯಾವೃತ್ತಿಯ ವ್ಯವಸ್ಥೆಯನ್ನು

ಕುರಿತು ಅಧ್ಯಯನ ಮಾಡಲು ಒಂದು ಪ್ರತ್ಯೇಕ ಸಮಿತಿಯನ್ನು ನೇಮಿಸಲಾಯಿತು. ಆ ಸಮಿತಿಯು ಹೊರರಾಜ್ಯದ ಪ್ರಮುಖ ನಗರಗಳಾದ ಕಲ್ಕತ್ತ, ಮದ್ರಾಸ್ ಮತ್ತು ಬೊಂಬಾಯಿಯಲ್ಲಿರುವಂತೆ ಬೆಂಗಳೂರು ಮತ್ತು ಮೈಸೂರಿನಲ್ಲೂ ವೇಶ್ಯಾವೃತ್ತಿಯನ್ನು ತಡೆಗಟ್ಟಲು ಕಾನೂನು ಜಾರಿಗೆ ತರಬೇಕೆಂದು ತಿಳಿಸಿತು. ಈ ವೇಶ್ಯಾವೃತ್ತಿಯನ್ನು ಅನುಸರಿಸುತ್ತಿದ್ದವರೂ ಸಹ ಬಡತನದ ಬೇಗೆಯಿಂದ ನರಳುತ್ತಿದ್ದಂತಹ ದಲಿತರೆ ಎಂಬುದು ಇಲ್ಲಿ ವಿಶೇಷ. ಅಂದಿನ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದಂತಹ ಎಚ್.ಸಿ. ದಾಸಪ್ಪನವರು, ವೇಶ್ಯಾವತ್ತಿಯನ್ನು ಸಂಪೂರ್ಣವಾಗಿ ತೊಡದು ಹಾಕಲು ಸಾಧ್ಯವಿಲ್ಲವಾದ್ದರಿಂದ ದುಷ್ಟ ಪದ್ಧತಿಯನ್ನು ತಡಗಟ್ಟಲಾದರೂ ಸರ್ಕಾರ ಕಾನೂನನ್ನು ಜಾರಿಗೆ ತರಬೇಕೆಂದು ಬೆಂಬಲಿಸಿದರು. ಆದರೆ ಇಂತಹ ಕಾನೂನನ್ನು ಹೆಚ್ಚಿನ ಸಂಖ್ಯೆಯ ಸದಸ್ಯರು ವಿರೋಧಿಸಿದ್ದರಿಂದ ೧೯೩೧ರಲ್ಲಿ ಅನುಷ್ಠಾನಕ್ಕೆ ತರಲಾಗಲಿಲ್ಲ. ಪ್ರಜಾಪ್ರತಿನಿಧಿ ಸಭೆಯಲ್ಲಿ ೧೯೩೪ರಲ್ಲಿ ಮತ್ತೆ ಸದಸ್ಯರು ಪ್ರಮುಖ ನಗರಗಳಲ್ಲಿ ವೇಶ್ಯಾವೃತ್ತಿ ಹೆಚ್ಚುತ್ತಿರುವುದರ ಬಗ್ಗೆ ಕಳವಳವನ್ನು ವ್ಯಕ್ತಪಡಿಸಿ ಅಂಕಿಅಂಶಗಳ ಸಮೇತ ನಿರೂಪಿಸಿ ವೇಶ್ಯಾವೃತ್ತಿಯನ್ನು ತಡೆಗಟ್ಟಲು ಕಾನೂನನ್ನು ತರಬೇಕೆಂದು ಒತ್ತಾಯಿಸಿದರು. ನಾಲ್ವಡಿಯವರು ಸಾಮಾಜಿಕ ಕಳಕಳಿಯ ಮಹಾರಾಜರಾಗಿದ್ದರಿಂದ ಪ್ರಜಾಪ್ರತಿನಿಧಿ ಸಭೆಯಲ್ಲಿ ಅಂತಹ ಕಾನೂನಿಗೆ ಸಂಪೂರ್ಣ ಬೆಂಬಲ ದೊರಕುವುದೆಂದು ನಿರೀಕ್ಷಿಸಿ ೧೯೩೬ ಜುಲೈ ೧೪ರಂದು ವೇಶ್ಯಾವೃತ್ತಿಯ ತಡೆಗಟ್ಟುವ Supperession Of Immoral Traffle Act ಎಂಬ ಕಾನೂನನ್ನು ಜಾರಿಗೆ ತಂದರು. ಈ ಕಾನೂನು ಸಾರ್ವಜನಿಕ ಸ್ಥಳಗಳಲ್ಲಿ ವೇಶ್ಯಾಕಾರ್ಯಕ್ಕೆ ಕೈಹಾಕಿದರೆ ಹಾಗೂ ಇದರ ಮೂಲಕ ಸಾರ್ವಜನಿಕರಿಗೆ ತೊಂದರೆ ನೀಡಿದರೆ ಎರಡು ತಿಂಗಳು ಸೆರೆವಾಸ ಮತ್ತು ೨೦೦ರೂ.ಗಳ ದಂಡ ವಿಧಿಸುವ ಅಧಿಕಾರ ಹೊಂದಿತ್ತು. ಹೀಗೆ ಕಾನೂನನ್ನು ಜಾರಿಗೆ ತರುವ ಮೂಲಕ ವೇಶ್ಯಾವೃತ್ತಿಯನ್ನು ನಿಯಂತ್ರಿಸಲು ಪ್ರಯತ್ನಿಸಲಾಯಿತು.[೮]

೬.೬. ದಿ ಮೈಸೂರ್ ಮೆಟರ್ನಿಟಿ ಬೆನಿಫಿಟ್ ಆಕ್ಟ್

ನಗರೀಕರಣ, ಜಾಗತೀಕರಣ ಹಾಗೂ ಕೈಗಾರೀಕರಣದ ಪ್ರಭಾವದಿಂದಾಗಿ ಹೆಚ್ಚು ಹೆಚ್ಚು ಕಾರ್ಖಾನೆಗಳು ಸಂಸ್ಥಾನದಲ್ಲಿ ಸ್ಥಾಪನೆಗೊಂಡವು. ಕಾರ್ಖಾನೆಗಳು ಹೆಚ್ಚಾದ ಹಾಗೆಯೇ ಕಾರ್ಮಿಕರ ಸಂಖ್ಯೆಯೂ ಬೆಳೆಯಿತು. ಸ್ವಾಭಾವಿಕವಾಗಿಯೇ ಕಾರ್ಖಾನೆಗಳ ಮಾಲೀಕರು ಕಡಿಮೆ ವೇತನಕ್ಕೆ ಸ್ತ್ರೀಯರನ್ನು ಕಾರ್ಮಿಕರಾಗಿ ನೇಮಿಸಿಕೊಳ್ಳಲಾರಂಭಿಸಿದ್ದರಿಂದ ಸ್ತ್ರೀ ಕಾರ್ಮಿಕರ ಸಂಖ್ಯೆ ಹೆಚ್ಚಳಗೊಂಡಿತು. ಈ ಸ್ತ್ರೀ ಕಾರ್ಮಿಕರಲ್ಲಿಯೂ ಸಹ ಗ್ರಾಮೀಣ ಪ್ರದೇಶದಿಂದ ಕೆಲಸವನ್ನು ಹುಡುಕಿಕೊಂಡು ನಗರಕ್ಕೆ ಬಂದಿದ್ದಂತಹ ದಲಿತ ಮಹಿಳೆಯರೇ ಹೆಚ್ಚಾಗಿದ್ದಾರೆ. ಇಂತಹ ಮಹಿಳೆಯರು ಇಲ್ಲಿ ಕೆಲಸಕ್ಕೆ ಸೇರಿದ ನಂತರ ಮಾಲೀಕರಿಂದ ಹಾಗೂ ಇತರೆ ಸಂಸ್ಥೆಗಳಿಂದ ಅನೇಕ ತೊಂದರೆಗಳನ್ನು ಎದುರಿಸಬೇಕಾಗಿತ್ತು. ನೆರೆಯ ಬ್ರಿಟೀಶ್ ಭಾರತದ ಸರ್ಕಾರಿ ಕಾರ್ಖಾನೆಗಳಲ್ಲಿ ಸ್ತ್ರೀ ಕಾರ್ಮಿಕರ ಹೆರಿಗೆಗೆ ಅನುಕೂಲವಾಗಲು ಮೂರು ವಾರಗಳ ಪ್ರಸೂತಿ ರಜೆ ಮತ್ತು ಅವಶ್ಯವಿದ್ದಾಗ ಕಾಯಿಲೆಯ ರಜೆಯನ್ನು ನೀಡಲಾಗುತ್ತಿತ್ತು. ಮೈಸೂರು

ಸಂಸ್ಥಾನದಲ್ಲಿಯೂ ಸರ್ಕಾರಿ ಕಾರ್ಖಾನೆಗಳಲ್ಲಿ ಇದೇ ಕಾನೂನು ಅನುಸರಿಸಲ್ಪಡುತ್ತಿತ್ತು. ಆದರೆ ಖಾಸಗಿ ಕಾರ್ಖಾನೆಗಳು ತಮ್ಮ ಮಹಿಳಾ ಕಾರ್ಮಿಕರಿಗೆ ಹೆರಿಗೆ ರಜೆ ಅಥವಾ ಇತರೆ ಯಾವ ಭತ್ಯೆಯನ್ನು ಒದಗಿಸುತ್ತಿರಲಿಲ್ಲ. ೧೯೨೯ರಲ್ಲಿ ಬೊಂಬಾಯಿ ಸರ್ಕಾರ ಹೆರಿಗೆ ಭತ್ಯೆ ಕಾನೂನಿಗನುಗುಣವಾಗಿ ಮೈಸೂರಿನಲ್ಲಿ ಅಂತಹ ಕಾನೂನನ್ನು ಜಾರಿಗೆ ತರಬೇಕೆಂದು ಬೋರ್ಡ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಕೋರಿಕೊಂಡಿತು. ಮೈಸೂರಿನ ಸ್ತ್ರೀ ಕಾರ್ಮಿಕರ ಹೆರಿಗೆ ಭತ್ಯೆ ರಜೆಯ ಸ್ಥಿತಿಗತಿಯನ್ನೇ ಕೂಲಂಕಷವಾಗಿ ಅಧ್ಯಯನ ಮಾಡಿ ಕೊನೆಗೆ ೧೯೩೭ರಲ್ಲಿ 'ದಿ ಮೈಸೂರು ಮೆಟರ್ನಿಟಿ ಬೆನಿಫಿಟ್ ಆಕ್ಟ್'ನ್ನು ಜಾರಿಗೆ ತರಲಾಯಿತು. ಈ ಕಾನೂನು ಖಾಸಗಿ ಕಾರ್ಖಾನೆಗಳಲ್ಲಿ ದುಡಿಯುವ ಸ್ತ್ರೀ ಕಾರ್ಮಿಕರಿಗೆ ಎಂಟು ವಾರಗಳ ಹೆರಿಗೆ ಭತ್ಯೆ ಸೌಲಭ್ಯ ನೀಡಬೇಕೆಂದು ತಿಳಿಸಿತು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕೈಗಾರಿಕಾ ಸ್ತ್ರೀ ಕಾರ್ಮಿಕರಿಗೆ ಹೆರಿಗೆ ಭತ್ಯೆಯ ಬಗ್ಗೆ ಕಾನೂನನ್ನು ಜಾರಿಗೆ ತಂದುದಲ್ಲದೆ ಪ್ರಸೂತಿ ಮತ್ತು ಮಕ್ಕಳ ಕೇಂದ್ರಗಳನ್ನು ಸ್ಥಾಪಿಸಲು ಆಡಳಿತಾತ್ಮಕವಾಗಿ ಸಹಾಯ ಮಾಡಿದರು. ಪ್ರಮುಖ ನಗರಗಳಾದಂತಹ ಬೆಂಗಳೂರು, ಮೈಸೂರು, ಹಾಸನಗಳಲ್ಲಿ ಪ್ರಸೂತಿ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಬೆಂಗಳೂರಿನಲ್ಲಿ ೧೯೨೨ರಲ್ಲಿ 'ಬಾಲಕೇಂದ್ರ'ವನ್ನು ಸ್ಥಾಪಿಸಿ ಅನಾಥ ಮಕ್ಕಳಿಗೆ ಹಾಗೂ ಬಡಮಕ್ಕಳಿಗೆ ಉಚಿತ ಹಾಲಿನ ಪೂರೈಕೆಯನ್ನು ಮಾಡುವ ವ್ಯವಸ್ಥೆ ಜಾರಿಗೆ ಬಂದಿತು. ಇದರಿಂದಾಗಿ ದಲಿತ ಸ್ತ್ರೀಯರ ಹಾಗೂ ಅನಾಥ ಮಕ್ಕಳ ಏಳಿಗೆಗಾಗಿ ಶ್ರಮಿಸಿದ ನಾಲ್ವಡಿಯವರು, ಸಂಸ್ಥಾನಕ್ಕೆ ಪ್ರಪ್ರಥಮವಾಗಿ ಸರ್. ಕಾಂತರಾಜ ಅರಸ್ ಅವರನ್ನು ಸಂಸ್ಥಾನದ ದಿವಾನರನ್ನಾಗಿ ನೇಮಿಸಿಕೊಂಡ ಆದರ್ಶ ವ್ಯಕ್ತಿಯಾದರು. ಕಾಂತರಾಜ ಅರಸ್‌ರವರು ಸ್ತ್ರೀಯರ ಬಗ್ಗೆ ಹೆಚ್ಚಿನ ಅನುಕಂಪ ಹೊಂದಿದ್ದಂಥವರು. ಇವರು ಉದಾರವಾಗಿ ನೀಡಿದಂತಹ ೧,೨೦,೦೦೦/-ರೂ.ಗಳ ಹಣದಿಂದ ಮೈಸೂರಿನಲ್ಲಿ ಗುಣಾಂಬ ಪ್ರಸೂತಿ ಮತ್ತು ಮಕ್ಕಳ ಕಲ್ಯಾಣ ಟ್ರಸ್ಟ್‌ನ್ನು ಸ್ಥಾಪಿಸಲಾಯಿತು. ಈ ಟ್ರಸ್ಟ್‌ನ ಮೂಲಕ ಗ್ರಾಮೀಣ ಪ್ರದೇಶಗಳಿಗೆ ಹೋಗಿ ದಲಿತ ಮಹಿಳೆಯರಲ್ಲಿ ಪ್ರಸೂತಿ ಹಾಗೂ ಇನ್ನಿತರ ವಿಷಯಗಳಲ್ಲಿ ಅಜ್ಞಾನ ಹಾಗೂ ಮೂಢನಂಬಿಕೆಗಳಿಂದಾಗುವ ತೊಂದರೆಯನ್ನು ತಿಳಿಸಿ ಅವರನ್ನು ಮುಖ್ಯವಾಹಿನಿಗೆ ಕರೆತರಲು ಶ್ರಮಿಸಿದರು.[೯]

೬.೭. ದಿ ಪ್ರಿವೆನ್ಷನ್ ಆಫ್ ಜುವೆನೈಲ್ ಸ್ಮೋಕಿಂಗ್ ಆಕ್ಟ್

ಇಂದಿಗೂ ನಮ್ಮ ಜನತೆಯನ್ನು ಎಡೆಬಿಡದೆ ಕಾಡುತ್ತಿರುವ ಪಿಡುಗುಗಳಾದಂತಹ ಕುಡಿತ ಮತ್ತು ಧೂಮಪಾನವು ದಲಿತ ಸಮಾಜಕ್ಕಂಟಿದ ಎರಡು ಶಾಪಗಳು. ಧೂಮಪಾನದಲ್ಲಿ ಉಪಯೋಗಿಸುವ ಹೊಗೆಸೊಪ್ಪು ಮನುಷ್ಯನ ಶ್ವಾಸಕೋಶ, ಹೃದಯ ಬೇನೆ, ಕುರುಡುತನ, ರುಬೆ ಹಾಗೂ ಶ್ರವಣಶಕ್ತಿಯ ಕುಂಠಿತ ಮುಂತಾದ ಕಾಯಿಲೆಗಳಿಗೆ ಈಡು ಮಾಡುತ್ತಿದೆ. ಹಾಗೆಯೇ ಮದ್ಯಪಾನದಿಂದ ಎದುರಾಗುವ ಸಮಸ್ಯೆಗಳ ಬಗ್ಗೆ ಬಿಡಿಸಿ ಹೇಳುವ ಸಂದರ್ಭವೇ ಬರುವುದಿಲ್ಲವೇನೋ. ಸಾರ್ವಜನಿಕ ಆರೋಗ್ಯಕ್ಕೆ ಕಂಟಕ ಪ್ರಾಯವಾದ ಧೂಮಪಾನ ಮತ್ತು

ಮದ್ಯಪಾನಗಳನ್ನು ತಡೆಗಟ್ಟಲು ಅದರಲ್ಲೂ ಅಪ್ರಾಪ್ತ ವಯಸ್ಕ ಹುಡುಗರನ್ನು ಧೂಮಪಾನದಿಂದ ದೂರವಿಡಲು ನಾಲ್ವಡಿ ಕೃಷ್ಣರಾಜರು ೧೯೧೧ ಅಕ್ಟೋಬರ್ ೯ರಂದು ದಿ ಪ್ರಿವೆನ್ಷನ್ ಆಫ್ ಜುವೆನೈಲ್ ಸ್ಮೋಕಿಂಗ್ ಆಕ್ಟ್ ಎಂಬ ಮಹತ್ವದ ಕಾನೂನಿಗೆ ಸಹಿ ಮಾಡಿದರು. ಇಂದೂ ಸಹ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ ಕಾನೂನುನನ್ನೇ ರಾಜ್ಯ ಸರ್ಕಾರ ಜಾರಿ ಮಾಡಿದೆ. ಆದರೆ ಈ ಕೆಲಸ ೧೯೧೧ರಲ್ಲೇ ನಡೆದಿತ್ತೆಂದರೆ ಮೈಸೂರು ಅರಸರ ಮುಂಜಾಗ್ರತ ಕ್ರಮದ ಬಗ್ಗೆ ಹೆಮ್ಮೆ ಮೂಡದೇ ಇರಲಾರದು. ಈ ಕಾನೂನು ೧೬ ವರ್ಷಕ್ಕೆ ಕೆಳಗಿನ ಅಪ್ರಾಪ್ತ ವಯಸ್ಕರಿಗೆ ತಂದೆಯ ಅನುಮತಿ ಪತ್ರವಿಲ್ಲದೆ, ಹೊಗೆಸೊಪ್ಪಿನ ಪದಾರ್ಥಗಳನ್ನು ಮಾರುವವರನ್ನು ಶಿಕ್ಷೆಗೆ ಗುರಿ ಮಾಡಿತು.[೧೦]

೬.೮. ಅಸ್ಪೃಶ್ಯತೆ ಆಚರಣೆಯ ವಿರುದ್ಧದ ಕಾನೂನು

ಮೈಸೂರು ಸಂಸ್ಥಾನಕ್ಕೆ ಸ್ವಾಮಿ ವಿವೇಕಾನಂದರು ಬಂದ ನಂತರ ಹಾಗೂ ಮಹಾರಾಜರಿಗೆ ಪತ್ರಗಳ ಮೂಲಕ ಅಸ್ಪೃಶ್ಯ ವರ್ಗದ ಉದ್ಧಾರಕ್ಕಾಗಿ ಕ್ರಮಕೈಗೊಳ್ಳಬೇಕೆಂದು ವಿನಂತಿಸಿದರ ಫಲವಾಗಿ ಮೈಸೂರು ಸರ್ಕಾರವು ಪಂಚಮರ ಕಲ್ಯಾಣಕ್ಕೆ ಮುಂದಾಯಿತು. ಕ್ರೈಸ್ತ ಮಿಷನರಿಗಳು ಆರಂಭಿಸಿದ್ದ ಆಧುನಿಕ ಶಿಕ್ಷಣ ಸಂಸ್ಥೆಗಳಲ್ಲಿ ಅಸ್ಪೃಶ್ಯರು ಪ್ರವೇಶ ಪಡೆದು ಶಿಕ್ಷಣ ಪಡೆಯುವಂತಾಯಿತು. ಮೈಸೂರು ಸರ್ಕಾರವು ೧೮೮೯-೯೦ರಲ್ಲಿ ಪಂಚಮ ಶಾಲೆಗಳೆಂಬ ಪ್ರತ್ಯೇಕ ಶಾಖೆಗಳನ್ನು ಸ್ಥಾಪಿಸುವ ಮೂಲಕ ಅಸ್ಪೃಶ್ಯರಿಗೆ ಶಿಕ್ಷಣ ನೀಡಲು ಮುಂದಾಯಿತು. ಹಾಗೆಯೇ ಪ್ರತಿ ವರ್ಷ ಅಂತಹ ಶಾಲೆಗಳನ್ನು ಹೆಚ್ಚಿಸುತ್ತಾ, ವಿದ್ಯಾರ್ಥಿ ವೇತನ, ಲೇಖನಿ, ಪುಸ್ತಕ, ಬಟ್ಟೆ ಮುಂತಾದ ಸೌಲಭ್ಯಗಳನ್ನು ಒದಗಿಸುವ ಮೂಲಕ ಅಸ್ಪೃಶ್ಯರಿಗೆ ಶಿಕ್ಷಣವನ್ನು ವಿಸ್ತರಿಸಲಾಯಿತು. ಆಗ ನಾಲ್ವಡಿಯವರ ಸರ್ಕಾರವು ೧೯೧೫ರಲ್ಲಿ ಒಂದು ಸುತ್ತೋಲೆಯನ್ನು ಹೊರಡಿಸಿ ಸಾಮಾಜಿಕ ಅಥವಾ ಧಾರ್ಮಿಕ ನಿರ್ಬಂಧದ ಆಧಾರದ ಮೇಲೆ ಅಸ್ಪೃಶ್ಯರನ್ನು ಸಾರ್ವಜನಿಕ ಶಾಲೆಗಳಿಗೆ ಸೇರುವುದನ್ನು ತಡೆಯಬಾರದೆಂದು ತಿಳಿಸಿತು.[೧೧]

ಅನಂತರ ೧೯೧೯ರಲ್ಲಿ ಒಂದು ಆಜ್ಞೆಯನ್ನು ಹೊರಡಿಸಿ ಜಾತಿಯನ್ನು ಆಧರಿಸಿ ಯಾರನ್ನು, ಸರ್ಕಾರಿ ನೆರವಿನಿಂದ ನಡೆಯುವ ಶಾಲೆಗಳಿಂದ ಹೊರಗಿಡುವಂತಿಲ್ಲವೆಂದು ಹಾಗೂ ಸರ್ಕಾರಿ ಆಸ್ಪತ್ರೆ, ಕೋರ್ಟುಗಳಿಗೆ, ಸರ್ಕಾರಿ ಶಾಲೆಗಳಿಗೆ ಸಾರ್ವಜನಿಕರೆಲ್ಲರಿಗೂ ಪ್ರವೇಶವಿದೆಯೆಂದು ಘೋಷಿಸಿತು. ಈ ಆಜ್ಞೆಗೆ ವಿರೋಧಗಳು ಎಷ್ಟೇ ಬಂದರೂ ನಾಲ್ವಡಿಯವರು ಸ್ಥಿರವಾಗಿ ನಿಂತರು. ಅಲ್ಲದೇ ಅಸ್ಪೃಶ್ಯರಿಗೆ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶಾವಕಾಶವನ್ನು ಒದಗಿಸಿದರು. ಇದರೊಂದಿಗೆ ಉನ್ನತ ಜಾತಿ ಮತ್ತು ಅಸ್ಪೃಶ್ಯ ವಿದ್ಯಾರ್ಥಿಗಳು ಒಂದೆಡೆ ಕುಳಿತು ಶಿಕ್ಷಣ ಕಲಿಯುವಂತಾಯಿತು. ನಾಲ್ವಡಿಯವರ ಸರ್ಕಾರವು ಅಸ್ಪೃಶ್ಯರ ಸಮಸ್ಯೆಯನ್ನು ಹಂತ ಹಂತವಾಗಿ ಹೋಗಲಾಡಿಸಲು ಮುಂದಾಯಿತು. ೧೯೩೩ರಲ್ಲಿ ಎಲ್ಲಾ ಸರ್ಕಾರಿ ಅಧಿಕಾರಿಗಳಿಗೂ ಆಜ್ಞೆಯೊಂದನ್ನು ಹೊರಡಿಸಿ ಅಸ್ಪೃಶ್ಯರಿಗೆ ಎಲ್ಲ ಕೆರೆಗಳನ್ನು ಬಳಸಿಕೊಳ್ಳುವ ಅವಕಾಶ ಮಾಡಿಕೊಡಬೇಕೆಂದು ನಿರ್ದೇಶನ ನೀಡಿತು. ಅದೇ ರೀತಿ ಬೆಂಗಳೂರು ತುಮಕೂರು ಮತ್ತು ಕೋಲಾರದ

ಜಿಲ್ಲಾ ಬೋರ್ಡ್‌ಗಳಿಗೆ ಅವುಗಳ ಹತೋಟಿಯಲ್ಲಿ ಇರುವ ಕೆರೆ ಬಾವಿಗಳನ್ನು ಅಸ್ಪೃಶ್ಯರಿಗೆ ತೆರೆಯುವಂತೆ ತಿಳಿಸಿತು. ಸಂಡೂರು ಮತ್ತು ತಿರುವಾಂಕೂರು ಸಂಸ್ಥಾನಗಳಲ್ಲಿ ದೇವಸ್ಥಾನ ಪ್ರವೇಶದ ಶಾಸನವು ಜಾರಿಗೆ ಬಂದಿದ್ದರಿಂದ ಪ್ರಭಾವಿತರಾದ ನಾಲ್ವಡಿಯವರು ೧೯೩೭ರಲ್ಲಿ ಅರಮನೆಯ ದಸರಾ ದರ್ಬಾರಿಗೆ, ಸ್ಥಳೀಯ ಸಂಸ್ಥೆಗಳ ಸದಸ್ಯರಿಗೆ ಪ್ರವೇಶಾವಕಾಶ ನೀಡಿದರು.[೨]

ನಾಲ್ವಡಿಯವರ ನೇತೃತ್ವದ ಮೈಸೂರು ಸರ್ಕಾರವು ತನ್ನ ಶಾಸನಾಧಿಕಾರವನ್ನು ಬಳಸಿ ಸಮಾಜದ ಎಲ್ಲಾ ಕ್ಷೇತ್ರಗಳ ಬೆಳವಣಿಗೆಯನ್ನು ಸಾಧಿಸಲು ಮೈಸೂರು ಸರ್ಕಾರ ಮತ್ತು ನಾಲ್ವಡಿಯವರು ಪ್ರಯತ್ನಿಸಿದರು. ಸಂಪ್ರದಾಯಬದ್ಧವಾಗಿದ್ದು ಕ್ಷೇತ್ರಗಳಲ್ಲಿ ಸಾಮಾಜಿಕ ಬದಲಾವಣೆಗೆ ವಿರೋಧ ತೀವ್ರವಾಗಿತ್ತು. ಅಲ್ಲದೆ ಮಹಾರಾಜರಾದ ನಾಲ್ವಡಿಯವರು ಸ್ವತಃ ಸಂಪ್ರದಾಯಸ್ಥ ಧರ್ಮವಲಂಬಿಯಾಗಿದ್ದು, ಸಾಮಾಜಿಕ, ಧಾರ್ಮಿಕ ಸುಧಾರಣಾ ಪ್ರಕ್ರಿಯೆಯನ್ನು ಕೆಲವು ಸಂದರ್ಭಗಳಲ್ಲಿ ನಿಧನಗೊಳಿಸಲು ಕಾರಣವಾಯಿತು. ಇಷ್ಟಾದರೂ ದಕ್ಷಿಣ ಭಾರತದ ನೆರೆಯ ಸಂಸ್ಥಾನಗಳಾದ ಹೈದರಾಬಾದ್ ತಿರುವಾಂಕೂರ್‌ಗಳಿಗೆ ಹೋಲಿಕೆ ಮಾಡಿದಲ್ಲಿ ಮೈಸೂರು ಸಂಸ್ಥಾನ ಸಾಮಾಜಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ಸಾಕಷ್ಟು ಬೆಳವಣಿಗೆಯನ್ನು ಕಂಡಿತ್ತು.

೭.೯. ಶೈಕ್ಷಣಿಕ ಸುಧಾರಣಾ ಕಾನೂನುಗಳು

ಆಧುನಿಕ ಪ್ರಪಂಚದಲ್ಲಿ ಶಿಕ್ಷಣದ ಸಾರ್ವತ್ರೀಕರಣದ ಮೂಲಕ ಸಮಾಜವನ್ನು ಬೌದ್ಧಿಕ ಉನ್ನತಿಯತ್ತ ಕೊಂಡುಯ್ಯುವುದನ್ನು ಆಧುನಿಕ ರಾಜ್ಯಗಳು ಆದರ್ಶವೆಂದು ಭಾವಿಸಿವೆ. ಮೂಲಭೂತವಾದ ಪ್ರಾಥಮಿಕ ಶಿಕ್ಷಣದ ಮಹತ್ವವನ್ನು ಮೈಸೂರು ಸರ್ಕಾರವು ಅರಿತಿದ್ದು ಅದರ ವಿಸ್ತರಣೆಗಾಗಿ ಕ್ರಮಕೈಗೊಂಡಿತು.

೧೯೦೮ರಲ್ಲಿ ಪ್ರಾಥಮಿಕ ಶಿಕ್ಷಣವನ್ನು ಉಚಿತವೆಂದು ಘೋಷಿಸಿತು. ಅಲ್ಲದೇ ೧೯೧೩ರಲ್ಲಿ ಮೈಸೂರು ಸರ್ಕಾರವು ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯ್ದೆಯನ್ನು ಜಾರಿಗೊಳಿಸಿತು. ಈ ಶಾಸನವು ೭ ರಿಂದ ೧೧ ವರ್ಷದವರೆಗಿನ ಹುಡುಗರನ್ನು ಅವರ ತಂದೆ ತಾಯಿಗಳು ಅಥವಾ ಪೋಷಕರು ಅಧಿಕೃತ ಶಾಲೆಗಳಿಗೆ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣ ಕಲಿಯಲು ಕಳುಹಿಸಬೇಕೆಂದು ತಿಳಿಸಿತು. ಈ ಕಾಯ್ದೆಯ ನಿಯಮಗಳನ್ನು ಪಾಲಿಸುವಂತೆ ಒಬ್ಬ ಅಧ್ಯಕ್ಷ ಮತ್ತು ೫ ಸದಸ್ಯರ ಶಾಲಾ ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿಯ ಹಾಜರಾತಿ ದಾಖಲೆಯನ್ನು ಪರಿಶೀಲಿಸಿ, ಪಾಲಕರಿಗೆ ಎಚ್ಚರಿಕೆ ಕೊಡುತ್ತಿತ್ತು. ಪಾಲಕರು ಶಾಸನದ ಪ್ರಕಾರ ಹುಡುಗರನ್ನು ಶಾಲೆಗೆ ಕಳುಹಿಸದಿದ್ದರೆ ನ್ಯಾಯಾಧೀಶರು ದಂಡ ವಿಧಿಸಿ ಎಚ್ಚರಿಕೆ ನೀಡುತ್ತಿದ್ದರು. ಈ ಕಾಯ್ದೆಯ ಪ್ರಭಾವದಿಂದ ಶಾಲೆಗಳು ತೆರೆಯಲ್ಪಟ್ಟವು. ಹಣದ ಅಭಾವ ಮತ್ತು ಶಿಕ್ಷಕರ ಕೊರತೆಯಿಂದಾಗಿ ಈ ಯೋಜನೆ ಯಶಸ್ವಿಯುತವಾಗಲಿಲ್ಲ. ಆದರೂ ನಾಲ್ವಡಿಯವರು ಈ ಶಾಸನ ಹಾಗೂ ಯೋಜನೆಯ ಮೂಲಕ ಶಿಕ್ಷಣವನ್ನು ಗ್ರಾಮೀಣ ಪ್ರದೇಶಗಳನ್ನೊಳಗೊಂಡಂತೆ ಎಲ್ಲರಿಗೂ ಸಾರ್ವತ್ರೀಕರಣಗೊಳಿಸಿದರು.

ಪ್ರಾಥಮಿಕ ಶಿಕ್ಷಣ ವಿಸ್ತಾರಗೊಂಡಂತೆ ಪ್ರೌಢ ಶಿಕ್ಷಣಕ್ಕೆ ಬೇಡಿಕೆ ಹೆಚ್ಚಿತು. ಆದರೆ ಮೈಸೂರು ಸಂಸ್ಥಾನದಲ್ಲಿದ್ದ ಎಲ್ಲ ಪ್ರೌಢ ಶಾಲೆಗಳು ಮದ್ರಾಸ್ ವಿಶ್ವವಿದ್ಯಾನಿಲಯ ನಿಯಂತ್ರಣಕ್ಕೆ ಒಳಪಟ್ಟಿದ್ದವು. ಹಾಗಾಗಿ ಇಲ್ಲಿನ ವಿದ್ಯಾರ್ಥಿಗಳು ಮದ್ರಾಸ್ ಸರ್ಕಾರ ನಡೆಸುತ್ತಿದ್ದ ಪರೀಕ್ಷೆಗೆ ಕೂರಬೇಕಿತ್ತು. ಹೆಚ್ಚಿನ ಮೈಸೂರಿನ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕೂರಲು ಅನುಮತಿ ದೊರೆಯುತ್ತಿರಲಿಲ್ಲ. ಈ ತೊಡಕನ್ನು ನಿವಾರಿಸಲು ಮೈಸೂರು ಸರ್ಕಾರವು ೧೯೧೨ರಲ್ಲಿ ಪ್ರೌಢ ಪರೀಕ್ಷಾ ಯೋಜನೆಗಳನ್ನು ಅಂಗೀಕರಿಸಿತು. ಇದರಿಂದಾಗಿ ಮೈಸೂರಿನ ವಿದ್ಯಾರ್ಥಿಗಳಿಗೆ ಹೆಚ್ಚು ಅವಕಾಶ ದೊರೆಯುವಂತಾಯಿತು. ರಾಜ್ಯದಲ್ಲಿ ಪರೀಕ್ಷೆಗಳನ್ನು ನಡೆಸಲಾರಂಭಿಸಿದ್ದರಿಂದ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳುವಂತಾಯಿತು. ಈ ಪ್ರೌಢ ಶಿಕ್ಷಣದ ಬೆಳವಣಿಗೆಯು ಪ್ರತ್ಯೇಕ ಮೈಸೂರು ವಿಶ್ವವಿದ್ಯಾಲಯ ಸ್ಥಾಪನೆಗೆ ದಾರಿ ಮಾಡಿಕೊಟ್ಟಿತು.[೧೩]

೬.೯.೧. ಕಡ್ಡಾಯ ಪ್ರಾಥಮಿಕ ಶಿಕ್ಷಣ

ಮೂಲಭೂತವಾದ ಪ್ರಾಥಮಿಕ ಶಿಕ್ಷಣದ ಮಹತ್ವವನ್ನು ಮೈಸೂರು ಸರ್ಕಾರವು ಅರಿತಿದ್ದು ಅದರ ವಿಸ್ತರಣೆಗಾಗಿ ಕ್ರಮಕೈಗೊಂಡಿತು. ಕಾಯ್ದೆಯ ನಿಯಮಗಳನ್ನು ಪಾಲಿಸುವಂತೆ ಮಾಡಲು ಒಬ್ಬ ಅಧ್ಯಕ್ಷ ಮತ್ತು ಐದು ಸದಸ್ಯರ ಶಾಲಾ ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿ ಹಾಜರಾತಿಯ ದಾಖಲೆಗಳನ್ನು ಪರಿಶೀಲಿಸಿ, ಪಾಲಕರಿಗೆ ಎಚ್ಚರಿಕೆ ಕೊಡುತ್ತಿತ್ತು.

ನಾಲ್ವಡಿಯವರು ೧೯೧೯ರ ಘಟಿಕೋತ್ಸವದಲ್ಲಿ ಮಾತನಾಡುತ್ತಾ 'ವಿಶ್ವವಿದ್ಯಾನಿಲಯದ ಜ್ಞಾನ ಪ್ರವಾಹವು ಜನಸಾಮಾನ್ಯನನ್ನು ಮುಟ್ಟಿ, ಅವನ ಸಂಸ್ಕೃತಿಯನ್ನು ಸಂಸ್ಕರಿಸಬೇಕು' ಎಂದು ಹೇಳಿದ್ದರು. ಅದಕ್ಕಾಗಿ ಜ್ಞಾನ ಪ್ರವಾಹವನ್ನು ಜನಸಾಮಾನ್ಯರಿಗೆ ತಲುಪಿಸಲು ಪ್ರಸರಣ ಮತ್ತು ಪ್ರಕಟಣ ವಿಭಾಗವನ್ನು ಸ್ಥಾಪಿಸಲಾಗಿತ್ತು. ಅವರ ಮೂಲಕ ಪ್ರಚಾರೋಪನ್ಯಾಸ ಹಾಗೂ ಪ್ರಕಟಣೆಯ ಮೂಲಕ ವಿಶ್ವವಿದ್ಯಾನಿಲಯದ ಮಟ್ಟದ ಬೌದ್ಧಿಕ ಜ್ಞಾನವು ಜನಸಾಮಾನ್ಯರಿಗೂ ತಲುಪುವಂತಾಯಿತು. ಹೀಗೆ ನಾಲ್ವಡಿಯವರ ಸರ್ಕಾರವು ಕೈಗೊಂಡ ಶೈಕ್ಷಣಿಕ ಯೋಜನೆಗಳು ಹಾಗೂ ಶಾಸನಗಳ ಪ್ರಭಾವದಿಂದ ಪ್ರಾಥಮಿಕ ಮಟ್ಟದಿಂದ ವಿಶ್ವವಿದ್ಯಾಲಯ ಮಟ್ಟದವರೆಗಿನ ಶಿಕ್ಷಣ ಸೌಲಭ್ಯವು ಸ್ಥಳೀಯವಾಗಿ ಜನಸಾಮಾನ್ಯರಿಗೆ ದೊರೆಯುವಂತಾಯಿತು. ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆ ರಾಜ್ಯದ ಶೈಕ್ಷಣಿಕ ಅವಕಾಶಕ್ಕೆ ಹೊಸ ಆಯಾಮ ನೀಡಿತು. ಸ್ಥಳೀಯ ಪ್ರತಿಭೆಗಳಿಗೆ ಉನ್ನತ ಶಿಕ್ಷಣ, ಉದ್ಯೋಗಾವಕಾಶಗಳು ದೊರೆಯುವಂತಾದವು. ಜೊತೆಗೆ ಹೊಸ ಚಿಂತನಾಶೀಲ ಬೌದ್ಧಿಕ ವರ್ಗವೊಂದು ಉದಯಿಸಿ ಮೈಸೂರಿನ ಸಮಗ್ರ ಏಳ್ಗೆಗೆ ನೆರವಾಗುವಂತಾಯಿತು.

೬.೯.೨. ಮೈಸೂರು ವಿಶ್ವವಿದ್ಯಾನಿಲಯ ಕಾಯ್ದೆ

ಮೈಸೂರಿನಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣಕ್ಕೆ ನೀಡಿದ ಪ್ರೋತ್ಸಾಹದಿಂದ ಹೆಚ್ಚಿನ ವಿದ್ಯಾರ್ಥಿಗಳು ಕಾಲೇಜು ಶಿಕ್ಷಣ ಪಡೆಯಲು ಅರ್ಹರಾದರು. ಆದರೆ ಮೈಸೂರಿನ

ಕಾಲೇಜುಗಳ ಮತ್ತು ಅವು ನಡೆಸುತ್ತಿದ್ದ ಪದವಿ ಪರೀಕ್ಷೆಗಳಿಗೆ ಮದ್ರಾಸ್ ವಿಶ್ವವಿದ್ಯಾನಿಲಯದ ಮನ್ನಣೆಯ ಅಗತ್ಯವಿದ್ದುದರಿಂದ ಮೈಸೂರಿನಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳು ಬೆಳೆಯಲು ಅವಕಾಶವಿರಲಿಲ್ಲ. ಹಾಗಾಗಿ ಮೈಸೂರು ಸರ್ಕಾರವು ೧೯೧೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಕಾಯ್ದೆಯನ್ನು ಜಾರಿಗೊಳಿಸುವ ಮೂಲಕ ಮೈಸೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿತು. ವಿಶ್ವೇಶ್ವರಯ್ಯನವರು ಪ್ರಜಾಪ್ರತಿನಿಧಿ ಸಭೆಯಲ್ಲಿ ವಿಶ್ವವಿದ್ಯಾನಿಲಯದ ಕಾಯ್ದೆಯನ್ನು ಮಂಡಿಸಿದ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ನಿರ್ದಿಷ್ಟ ಗುರಿಗಳೆಂದರೆ ಪ್ರಜೆಗಳ ಬೌದ್ಧಿಕ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸುವುದರ ಜೊತೆಗೆ ಅವರ ಕಾರ್ಯನಿರ್ವಹಣಾ ಚಾತುರ್ಯಗಳನ್ನು ಹೆಚ್ಚಿಸುವುದಾಗಿದೆ. ನಮ್ಮ ರಾಜ್ಯದ ಭವಿಷ್ಯದ ಅಗತ್ಯಗಳಿಗೆ ತಕ್ಕಂತೆ ಅತ್ಯುತ್ತಮ ವ್ಯಾಪಾರಸ್ಥರು, ವಾಣಿಜ್ಯೋದ್ಯಮಿಗಳು, ಆರ್ಥಿಕ ತಜ್ಞರು, ವಕೀಲರು, ಆರೋಗ್ಯ ಮತ್ತು ನೈರ್ಮಲ್ಯ ತಜ್ಞರು. ಇಂಜಿನಿಯರುಗಳು ಮುಂತಾದ ಮುತ್ಸದ್ಧಿಗಳನ್ನು ತಯಾರು ಮಾಡಿ ರಾಜ್ಯದ ಅಗತ್ಯಗಳಿಗೆ ಸಿದ್ಧಗೊಳ್ಳುವಂತೆ ತಯಾರುಗೊಳಿಸುವುದಾಗಿದೆ. ನಾಲ್ವಡಿಯವರೂ ಸಹ ವಿಶ್ವವಿದ್ಯಾನಿಲಯದ ಸೆನೆಟ್ ಪ್ರಾರಂಭೋತ್ಸವದಲ್ಲಿ ಮೈಸೂರಿನ ವಿಶೇಷ ಆಕಾಂಕ್ಷೆಗಳನ್ನು ತಲುಪುವ ಹಾಗೂ ರಾಜ್ಯದ ಬೌದ್ಧಿಕ, ಭೌತಿಕ ಪ್ರಗತಿ ಮತ್ತು ಅದರ ಮುಂದಿನ ಪರಿಣಾಮಗಳನ್ನು ಮನಗಂಡು ಸ್ಥಾಪಿಸಲಾದ ಸಂಸ್ಥೆ ಇದಾಗಿದೆ ಎಂದು ವಿಶ್ವವಿದ್ಯಾನಿಲಯದ ಸ್ಥಾಪನೆಯ ಉದ್ದೇಶವನ್ನು ಕುರಿತು ಹೇಳಿದ್ದರು.[೧೪]

ಹೀಗೆ ಮೈಸೂರು ಸಂಸ್ಥಾನದಲ್ಲಿ ಶೈಕ್ಷಣಿಕ ಬೆಳವಣಿಗೆ ಹಾಗೂ ಅಸ್ಪೃಶ್ಯರು, ಹಿಂದುಳಿದವರ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದರ ಫಲವಾಗಿ ಜಾಗೃತಗೊಂಡು ಸಂಘಟನೆಗಳನ್ನು ಸ್ಥಾಪಿಸಿಕೊಳ್ಳುವುದರ ಮೂಲಕ ತಮ್ಮ ಹಕ್ಕುಬಾಧ್ಯತೆಗಳನ್ನು ಪಡೆಯಲು ಕಾರಣವಾಯಿತು.

೬.೧೦. ಆರ್ಥಿಕ ಸುಧಾರಣಾ ಕಾನೂನುಗಳು

ನಮ್ಮ ಮೈಸೂರು ಸಂಸ್ಥಾನವು ಕೃಷಿ ದೇಶ. ಹಳ್ಳಿಗಳೇ ಇಲ್ಲಿಯ ಸಂಪತ್ತಿನ ಆಧಾರ. ರೈತನೇ ಹಳ್ಳಿಗಳ ಮತ್ತು ರಾಷ್ಟ್ರದ ತಳಹದಿ. ಅವನ ಸಂಪತ್ತೇ ದೇಶದ ಸಂಪತ್ತು. ಅವನ ಭಾಗ್ಯವೇ ದೇಶದ ಭಾಗ್ಯ. ಅವನ ಉದ್ಧಾರವೇ ದೇಶೋದ್ಧಾರ. ಸಂಸ್ಥಾನದ ಗ್ರಾಮೀಣ ಜನರಲ್ಲಿ ಸುಖ ಸಂಪತ್ತು ಸಮೃದ್ಧಿಯಾಗಿದ್ದರೆ ದೇಶದಲ್ಲಿ ನೆಲವೂ, ಬಲವೂ, ಸಂಪತ್ತು ನದಿಯಂತೆ ಹರಿಯುತ್ತದೆ ಎಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಪ್ರಜಾಪ್ರತಿನಿಧಿ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದಂತಹ ಸಂದರ್ಭದಲ್ಲಿ ಆಡಿದ ಮಾತುಗಳು. ಈ ಮಾತುಗಳೆಂದರೆ ನಾಲ್ವಡಿಯವರು ರೈತರ ಹಾಗೂ ಗ್ರಾಮಗಳ ಬಗ್ಗೆ ಇಟ್ಟುಕೊಂಡಿದ್ದಂತಹ ಅಭಿಲಾಷೆಯನ್ನು ಗ್ರಹಿಸಬಹುದಾಗಿದೆ.

ಭರತಖಂಡದಲ್ಲಿದ್ದಂತೆಯೇ ಮೈಸೂರು ಸಂಸ್ಥಾನದಲ್ಲಿಯೂ ದಲಿತವರ್ಗದವರು ಮೇಲ್ವರ್ಗದವರ ಸೇವೆ ಹಾಗೂ ಕೃಷಿ ದುಡಿಮೆಯಲ್ಲಿ ತೊಡಗಿದ ವರ್ಗದವರಾಗಿದ್ದರು.

ಪಾರಂಪಾರಿಕವಾಗಿ ಚರ್ಮ ಕೈಗಾರಿಕೆ, ಗ್ರಾಮ ನೈರ್ಮಲ್ಯವನ್ನು ನೋಡಿಕೊಳ್ಳುವ, ಸತ್ತ ಜಾನುವಾರುಗಳನ್ನು ಹೊರಗೆ ಹಾಕುವ ಜೀತಗಾರಿಕೆಯ ಕೆಲಸದಲ್ಲಿ ಅವರು ನಿರತರಾಗಿದ್ದರು. ಗ್ರಾಮಕ್ಕೆ ಹಾಗೂ ಸರ್ಕಾರದ ಇತರ ಅಧಿಕಾರಿಗಳಿಗೆ ಅವರು ಅವಶ್ಯಕವಾದ ಕೆಲಸಗಳನ್ನು ಮಾಡಿಕೊಡಬೇಕಾಗಿತ್ತು. ವಸಾಹತುಕಾಲದಲ್ಲಿ ಭೂಮಿಯ ಖಾಸಗೀಕರಣದಿಂದಾಗಿ ದಲಿತರು ಅತ್ಯಂತ ದಯನೀಯ ಸ್ಥಿತಿಗೆ ದೂಡಲ್ಪಟ್ಟರು. ಆದರೆ ಸಂಸ್ಥಾನದ ಖುಷ್ಕಿ ಪ್ರದೇಶದಲ್ಲಿ ಮಾತ್ರ ಅವರು ಸ್ವಲ್ಪ ಭೂಮಿಯನ್ನು ಕಾಣಿಕೆಯ ರೂಪದಲ್ಲಿ ಹೊಂದಿದ್ದರು. ಖಾಸಗೀಕರಣದಿಂದಾಗಿ ಗ್ರಾಮಾಂತರ ಪ್ರದೇಶದಲ್ಲಿ ಭೂಮಾಲೀಕರು ಹೆಚ್ಚು ಬಲವಾಗತೊಡಗಿದಂತೆ ಅಸ್ಪೃಶ್ಯರು ಇತರ ಕುಲಕಸುಬುದಾರರಂತೆಯೇ ಭೂಮಿಯ ಮೇಲಿನ ತಮ್ಮ ಪಾರಂಪರಿಕವಾದ ಹಕ್ಕನ್ನು ಕಳೆದುಕೊಂಡರು. ಕಾನೂನಿನ ದೃಷ್ಟಿಯಲ್ಲಿ ಜಾತಿ ಜಾತಿಗಳ ನಡುವೆ ಯಾವ ಅಂತರವಿಲ್ಲದಿದ್ದರೂ ಸಾಮಾಜಿಕ, ಧಾರ್ಮಿಕ ಆಚರಣೆಗಳ ವಿಷಯದಲ್ಲಿ ಮಧ್ಯೆ ಪ್ರವೇಶಿಸಬಾರದೆಂಬ ಸರ್ಕಾರದ ನೀತಿಯಿಂದಾಗಿ ಈ ಕಾನೂನು ನಿಷ್ಪ್ರಯೋಜಕವಾಯಿತು.

ಮೊದಲೇ ತಿಳಿಸಿರುವ ಹಾಗೆ ಸಂಸ್ಥಾನದ ಆರ್ಥಿಕ ಬೆನ್ನೆಲುಬು ಕೃಷಿ. ಅದರ ಆಧಾರಗಳೇ ರೈತರು. ಇಂದಿಗೂ ಸಹ ನಮ್ಮ ದೇಶದ ಜನರ ಪ್ರಧಾನವೃತ್ತಿ ಕೃಷಿಯೇ ಆಗಿದ್ದು, ಈ ಕ್ಷೇತ್ರವು ಬಹುಸಂಖ್ಯಾತ ಜನರಿಗೆ ಉದ್ಯೋಗವನ್ನೊದಗಿಸಿದೆ. ದಲಿತ ಜನತೆಯು ಇಂದಿಗೂ ಸಹ ಶೇ. ೯೦ರಷ್ಟು ಕೃಷಿಯನ್ನೇ ನಂಬಿ ಜೀವನ ನಡೆಸುತ್ತಿರುವುದು ಅನೇಕ ಮೂಲಾಧಾರಗಳಿಂದ ಕಂಡುಬರುತ್ತದೆ. ದಲಿತರು ಈ ಕೃಷಿಕ್ಷೇತ್ರದಲ್ಲಿ ಹೆಚ್ಚು ಹೆಚ್ಚಾಗಿ ಅವಲಂಬಿಗಳಾದಂತೆ ಸಮಸ್ಯೆಗಳು ಅಷ್ಟೇ ಹೆಚ್ಚಾದವು. ಇಂಥವುಗಳಲ್ಲಿ ಪ್ರಮುಖವಾದುವುದೆಂದರೆ ಕೃಷಿಗೆ ಬೇಕಾದ ಬಂಡವಾಳದ ಕೊರತೆ ಈ ಕೊರತೆಯನ್ನು ನೀಗಿಸಲು ನಾಲ್ವಡಿ ಅವರು 'ಆರ್ಥಿಕ ಪರಿಷತ್ತು' ಅನ್ನು ಸ್ಥಾಪಿಸಿದರು. ಈ ಪರಿಷತ್ತಿನ ಸ್ಥಾಪನೆಯಿಂದಾಗಿ ಅದರ ಅಂಗವಾಗಿದ್ದಂತಹ ವ್ಯವಸಾಯ ಸಮಿತಿಯು ಅಸ್ತಿತ್ವಕ್ಕೆ ಬಂದಿತು. ಅದು ಸಂಸ್ಥಾನದಲ್ಲಿ ಕಬ್ಬು ಬೆಳೆ ಅಭಿವೃದ್ಧಿ, ರೇಷ್ಮೆ ಕೃಷಿ ವಿಸ್ತರಣೆ, ಕೆರೆಗಳ ಅಭಿವೃದ್ಧಿ, ಖಾಯಂ ನೀರಾವರಿಗೆ ಅಂತರ್‌ಜಲ ಬಳಕೆ, ಗ್ರಾಮೀಣ ಕೈಗಾರಿಕೆಗಳ ಸ್ಥಾಪನೆಗೆ, ವ್ಯವಸಾಯ, ಶಿಕ್ಷಣದ ವಿಸ್ತರಣೆ ಇವುಗಳ ಬಗ್ಗೆ ಹೆಚ್ಚಿನ ರೀತಿಯಲ್ಲಿ ರೈತರಿಗೆ ತರಬೇತಿ ನೀಡಿ ಮುಂದೆ ಈ ಕೆಲಸಕ್ಕಾಗಿಯೇ ಪ್ರತ್ಯೇಕ ಸರ್ಕಾರಿ ಇಲಾಖೆಯನ್ನು ತೆರೆಯಿತು. ೧೯೧೨ರಲ್ಲಿ ವ್ಯವಸಾಯ ಇಲಾಖೆಯು ಅಸ್ತಿತ್ವಕ್ಕೆ ಬಂದಿತು. ಈ ಇಲಾಖೆಯಿಂದ ಅಸಂಖ್ಯಾತ ದಲಿತರು ಆರ್ಥಿಕ ನೆರವು ಪಡೆದರು. ತಮಗೆ ಇದ್ದಂತಹ ಬಂಜರು ಭೂಮಿಯನ್ನು ಹಸನು ಮಾಡಿಕೊಂಡು ವ್ಯವಸಾಯ ಮಾಡುವಂತೆ ಅನುಕೂಲ ಮಾಡಿಕೊಡಲಾಯಿತು.[೧೫]

ಮೈಸೂರು ಸಂಸ್ಥಾನವು ೧೮೯೪ರಲ್ಲಿ ಕೃಷಿ ಬ್ಯಾಂಕ್‌ನ್ನು ಸ್ಥಾಪಿಸುವುದರ ಮೂಲಕ ಕೃಷಿಕರಿಗೆ ಕಡಿಮೆ ಬಡ್ಡಿದರದಲ್ಲಿ ಮತ್ತು ಬಹು ಸುಲಭವಾಗಿ ಸಾಲ ದೊರೆಯುವಂತೆ ಮಾಡಿತು. ಆದರೆ ಕೃಷಿ ಬ್ಯಾಂಕುಗಳಲ್ಲಿದ್ದಂತಹ ಅನೇಕ ದೋಷಗಳು ಅವರ ನೈಜ ಉದ್ದೇಶಗಳನ್ನು

ಹಾಳುಗೆಡವಿ ಬ್ಯಾಂಕುಗಳನ್ನು ಮುಚ್ಚುವಂತೆ ಮಾಡಿದವು. ನಾಲ್ವಡಿ ಅವರ ಸರ್ಕಾರ ರೈತರಿಗೆ ಅವಶ್ಯವಾದಂತಹ ಸೌಲಭ್ಯಗಳನ್ನು ಒದಗಿಸಲು ತೀರ್ಮಾನಿಸಿ ೧೯೦೫ರಲ್ಲಿ ಸಹಕಾರಿ ಸೊಸೈಟಿಗಳ ಕಾಯ್ದೆಯನ್ನು ಜಾರಿಗೆ ತಂದಿತು.

ಈ ಕಾಯ್ದೆಯ ಆಧಾರದ ಮೇಲೆ ಅನೇಕ ಸದಸ್ಯರು ಒಗ್ಗೂಡಿ ಷೇರು ಬಂಡವಾಳವನ್ನು ತೊಡಗಿಸಿ ಮತ್ತು ಸರ್ಕಾರದ ಸಹಾಯಧನವನ್ನು ಉಪಯೋಗಿಸಿಕೊಂಡು ಅನೇಕ ಸಹಕಾರಿ ಬ್ಯಾಂಕುಗಳ ಸ್ಥಾಪನೆ ಮಾಡಿದರು. ಸಹಕಾರಿ ಸಂಘಗಳನ್ನು ಸಂಸ್ಥಾನದ ಪರಿಶಿಷ್ಟ ವರ್ಗ ಹಾಗೂ ಪರಿಶಿಷ್ಟ ಜಾತಿಯ ಜನಾಂಗದವರೂ ಸಹ ಸ್ಥಾಪಿಸಿದರು. ೧೯೧೫ರಲ್ಲಿ ಪರಿಶಿಷ್ಟರ ಈ ರೀತಿಯ ಸಹಕಾರಿ ಬ್ಯಾಂಕುಗಳ ಸಂಖ್ಯೆ ೬ಕ್ಕೆ ಏರಿತು. ಇದರಲ್ಲಿ ಪ್ರಮುಖವಾಗಿ ೧೯೦೮ರಲ್ಲಿಯೇ ಸ್ಥಾಪನೆಯಾದಂತಹ 'ಮಳವಳ್ಳಿಯ ಆದಿಕರ್ನಾಟಕದ ಸಹಕಾರ ಸಂಘ' ಒಂದು. ಈ ಸಹಕಾರಿ ಸೊಸೈಟಿಗಳು ಕೃಷಿಗೆ ಬೇಕಾದ ಆಧುನಿಕ ಕೃಷಿ ಸಲಕರಣೆಗಳು, ಉತ್ತಮ ತಳಿಯ ರಾಸುಗಳು ಮತ್ತು ಬೀಜಗಳು, ರಾಸಾಯನಿಕ ಗೊಬ್ಬರ, ಕಟ್ಟು ಅರೆಯುವ ಯಂತ್ರಗಳು ಹೆಚ್ಚು ಹೆಚ್ಚಾಗಿ ಇಳುವರಿ ನೀಡುವ ಭತ್ತ, ರಾಗಿ, ಜೋಳ, ದ್ವಿದಳ ಧಾನ್ಯಗಳು ಮುಂತಾದವುಗಳನ್ನು ಒದಗಿಸುತ್ತಿದ್ದವು. ಇಷ್ಟೇ ಅಲ್ಲದೆ ಈ ಸೊಸೈಟಿಗಳು ವ್ಯವಸಾಯಕ್ಕೆ ಮುನ್ನವೇ ರೈತರಿಗೆ ಮುಂಗಡ ಹಣ ನೀಡಿ ಅವರು ವ್ಯವಸಾಯದಲ್ಲಿ ತೊಡಗಿಕೊಳ್ಳಲು ಅನುವುಮಾಡಿ ಕೊಡುತ್ತಿದ್ದವು.[೧೬] ಈ ಎಲ್ಲಾ ಸರ್ಕಾರದ ಸೌಲಭ್ಯಗಳಿಂದಾಗಿ ದಲಿತರು ಆರ್ಥಿಕವಾಗಿ ಸಬಲರಾಗಲು ಪ್ರಯತ್ನಿಸುವಂತಾಯಿತು. ಇಷ್ಟು ಪ್ರಗತಿದಾಯಕ ಕಾರ್ಯ ನಡೆದರೂ ಸಹ ಸಂಸ್ಥಾನದಲ್ಲಿ ಕೃಷಿ ಆಧಾರಿತ ದಲಿತ ಪುರುಷ ಹಾಗೂ ಮಹಿಳೆಯ ಸ್ಥಿತಿ ಶೋಚನೀಯ ವಾಗಿತ್ತೆಂದು ಹೇಳಬಹುದು.

೬.೧.೧. ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯದ ಕಾಯ್ದೆ

ಸಮಾಜದ ಭೌತಿಕ ಬೆಳವಣಿಗೆಯನ್ನು ಸಾಧಿಸುವಲ್ಲಿ ಮೈಸೂರು ಸಂಸ್ಥಾನದ ಆಡಳಿತಗಾರರು ಬಹುಹಿಂದಿನಿಂದಲೂ ಪ್ರಧಾನ ಪಾತ್ರ ವಹಿಸುತ್ತಾ ಬಂದಿದ್ದಾರೆ. ಸಂಸ್ಥಾನದ ಪ್ರಜೆಗಳ ಜೀವನಾರೋಗ್ಯವನ್ನು ಕಾಪಾಡುವಲ್ಲಿ ಇವರ ಪ್ರಯತ್ನ ಬಹು ಹಿರಿದಾದುದು. ನಾಲ್ವಡಿಯವರ ನೇತೃತ್ವದಲ್ಲಿ ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯೀಕರಣ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಲು ಮುಂದಾಗಿ, ಸಾಂಪ್ರದಾಯಿಕವಾಗಿ ಇದ್ದು ಅಡೆತಡೆಗಳನ್ನು ನಿವಾರಿಸಲು ಹಲವಾರು ಶಾಸನಗಳನ್ನು ಜಾರಿಗೊಳಿಸಿತು. ಸಂಪತ್ಭರಿತ ರಾಜ್ಯದ ಅಂತರಿಕಾಂಶವೆಂದರೆ 'ಸದೃಢ ಆರೋಗ್ಯದ ಪ್ರಜೆಗಳು' ಎಂಬುದನ್ನು ಅರಿತಿದ್ದ ನಾಲ್ವಡಿಯವರು ಆರೋಗ್ಯ ಸೌಲಭ್ಯಗಳನ್ನು ಒದಗಿಸುವುದು ಪವಿತ್ರ ಕಾರ್ಯವೆಂದು ಭಾವಿಸಿದ್ದರು. ಹಾಗಾಗಿ ಅವರು ಆಸ್ಪತ್ರೆಗಳು ದೇವಾಲಯಗಳಿದ್ದಂತೆ ಎನ್ನುತ್ತಿದ್ದರು. ಆಧುನಿಕ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುತ್ತ ಆರೋಗ್ಯ ಸುಧಾರಣೆಗೆ ಹಾಗೂ ಅನಾರೋಗ್ಯಕ್ಕೆ ಮೂಲಕಾರಣವಾದ ನೈರ್ಮಲ್ಯವನ್ನು ಕಾಪಾಡಲು ಸರ್ಕಾರದ ವತಿಯಿಂದ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಆದರೆ ಆಧುನಿಕ ವೈದ್ಯಕೀಯ ಸೌಲಭ್ಯಗಳನ್ನು

ಸ್ವೀಕರಿಸಲು ನಿರಾಕರಿಸಿದ ಸಾಂಪ್ರದಾಯಿಕ ಸಮಾಜವು ಅವುಗಳನ್ನು ಒಡ್ಡಿಕೊಳ್ಳುವಂತೆ ಮಾಡಲು ಹಾಗೂ ಹೊಸ ಅಂಟು ಜಾಡ್ಯಗಳನ್ನು ತಡೆಗಟ್ಟಲು ನಾಲ್ವಡಿಯವರ ಸರ್ಕಾರ ಅನೇಕ ಆರೋಗ್ಯ ಹಾಗೂ ನೈರ್ಮಲ್ಯೀಕರಣಕ್ಕೆ ಸಂಬಂಧಿಸಿದ ಶಾಸನಗಳನ್ನು ಜಾರಿಗೊಳಿಸಿತು.

೬.೧೧.೧. ಸಾಂಕ್ರಾಮಿಕ ರೋಗಗಳ ನಿವಾರಣಾ ಕಾಯ್ದೆ

ಮೈಸೂರು ಸಂಸ್ಥಾನದ ಜನರನ್ನು ಬಹುವಾಗಿ ಕಾಡುತ್ತಿದ್ದ. ಈ ರೋಗಗಳೆಂದರೆ ಪ್ಲೇಗು, ಕಾಲರಾ, ಸಿಡುಬು ಮತ್ತು ಮಲೇರಿಯಾ, ಈ ರೋಗಗಳಿಂದ ಪ್ರತಿವರ್ಷ ಸಾವಿರಾರು ಜನ ಸಾವನ್ನಪ್ಪುತ್ತಿದ್ದರು. ಪ್ರಾಂತ್ಯದಲ್ಲಿ ಪ್ಲೇಗು ರೋಗವನ್ನು ಹರಡದಂತೆ ತಡೆಯಲು ೧೮೯೭ರಲ್ಲಿ ಸಾಂಕ್ರಮಿಕ ರೋಗಗಳ ಶಾಸನವನ್ನು ಜಾರಿಗೊಳಿಸಿದರು. ಹಾಗೆಯೇ ಸರ್ಕಾರವು ಪ್ಲೇಗ್ ತಡೆಗೆ ಚುಚ್ಚುಮದ್ದು ಹಾಕುವುದನ್ನು ಪ್ರೋತ್ಸಾಹಿಸಿತು. ಆದರೆ ಜನತೆಗೆ ಚುಚ್ಚುಮದ್ದಿನ ಬಗ್ಗೆ ವಿಶ್ವಾಸವಿರಲಿಲ್ಲ.

ಪ್ಲೇಗು ಎಂಬುದು ಮಾರಿದೇವತೆಯ ಒಂದು ಅಗ್ರಹ ರೂಪವೆಂದೂ ಅದಕ್ಕೆ ಮದ್ದಿಲ್ಲವೆಂದೂ, ಆಧುನಿಕ ಚಿಕಿತ್ಸಾ ಪ್ರಯತ್ನದಿಂದ ದೇವಿಯ ಕೋಪ ಮತ್ತಷ್ಟು ಹೆಚ್ಚುತ್ತದೆ ಎಂಬ ಭಾವನೆಯಿತ್ತು. ಈ ಕಾರಣದಿಂದ ಅನೇಕ ಜನರು ಚುಚ್ಚುಮದ್ದು ಹಾಕುವುದರ ವಿರುದ್ಧವಾಗಿ ಪ್ರತಿಭಟನೆಗೆ ನಿಂತರು. ಶ್ರೀರಂಗಪಟ್ಟಣ ಗಂಜಾಂ, ಚಿಕ್ಕಬಳ್ಳಾಪುರ ಮುಂತಾದ ಪ್ರದೇಶಗಳಲ್ಲಿ ಜನ ದಂಗೆಯೇಳುವವರೆಗೂ ಹೋಗಿದ್ದರು. ಅದೇ ರೀತಿ ಸರ್ಕಾರವು ಪ್ಲೇಗ್‌ಗೀಡಾಗಿದ್ದ ಜನರನ್ನು ಪ್ರತ್ಯೇಕ ಇಡುತ್ತಿದ್ದ ಕ್ಯಾಂಪ್ ಬಗ್ಗೆ ಬೇಸರಗೊಂಡಿದ್ದರು. ಒಮ್ಮೆ ಪ್ಲೇಗ್ ಶೆಡ್‌ನಲ್ಲಿದ್ದ ಶವವನ್ನು ನದಿಗೆಸೆದು ಶೆಡ್ ಅನ್ನು ಕಿತ್ತೊಗೆದು ಬೆಂಕಿಯಿಟ್ಟರು ಮತ್ತು ಅದಕ್ಕೆ ಸಂಬಂಧಿಸಿದ ಅಧಿಕಾರಿಗೆ ಕಲ್ಲನ್ನೆಸೆದರು. ಆದರೂ ಸರ್ಕಾರವು ಪ್ಲೇಗ್ ಪೀಡಿತರಿಗೆ ಸರ್ಕಾರಿ ಪ್ಲೇಗ್ ಆಸ್ಪತ್ರೆಗಳಲ್ಲಿ ಔಷಧಿ ನೀಡುವುದು ಪ್ಲೇಗ್‌ನಿಂದ ಸತ್ತವರ ಶವವನ್ನು ಸರ್ಕಾರಿ ವೆಚ್ಚದಿಂದ ಸುಡಿಸುವುದು ಮುಂತಾದ ಕಾರ್ಯಕ್ರಮಗಳ ಮೂಲಕ ಪ್ಲೇಗ್ ಹರಡುವುದನ್ನು ತಡೆಗಟ್ಟಲು ಪ್ರಯತ್ನಿಸಿತು. ಕಾಲರಾ, ಸಿಡುಬು, ಪ್ಲೇಗ್ ಮುಂತಾದ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಚುಚ್ಚುಮದ್ದು ಕಾಯ್ದೆಯನ್ನು ಜಾರಿಗೆ ತರಲಾಯಿತು. ಇದರಿಂದಾಗಿ ಜನರಲ್ಲಿ ಚುಚ್ಚು ಮದ್ದಿನ ಬಗ್ಗೆ ಇದ್ದ ತಿರಸ್ಕಾರ ಮತ್ತು ವಿರೋಧಗಳು ತಗ್ಗಿದವು. ಹೀಗೆ ಸರ್ಕಾರವು ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಮತ್ತು ಆಧುನಿಕ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿ ಆರೋಗ್ಯವನ್ನು ವೃದ್ಧಿಗೊಳಿಸಲು ಕ್ರಮಕೈಗೊಂಡಿತು.[೧೭]

೬.೧೧.೨. ನೈರ್ಮಲ್ಯೀಕರಣವನ್ನು ಕುರಿತ ಕಾಯ್ದೆಗಳು

ಗ್ರಾಮಾಂತರ ಪ್ರದೇಶಗಳಲ್ಲಿ ನೈರ್ಮಲ್ಯದ ಬಗ್ಗೆ ಗಮನ ಹರಿಸದಿದ್ದುದರಿಂದ ಸಾಂಕ್ರಾಮಿಕ ರೋಗಗಳಿಗೆ ಜನ ಬಹುಬೇಗ ತುತ್ತಾಗುತ್ತಿದ್ದರು. ಮೈಸೂರು ಸರ್ಕಾರವು ೧೮೯೮ರಲ್ಲೇ ಗ್ರಾಮೀಣ ನೈರ್ಮಲ್ಯ ಕಾಯ್ದೆಯನ್ನು ಜಾರಿಗೆ ತಂದು ಕುಡಿಯುವ ನೀರಿನ ಪೂರೈಕೆ,

ಒಳಚರಂಡಿ ವ್ಯವಸ್ಥೆಗಳನ್ನು ಅಭಿವೃದ್ಧಿಗೊಳಿಸುವ ಪ್ರಯತ್ನವನ್ನು ನಡೆಸಲಾರಂಭಿಸಿತು. ಸಾಂಕ್ರಾಮಿಕ ರೋಗಗಳು ಹರಡಲು ನೈರ್ಮಲ್ಯದ ಕೊರತೆಯೇ ಕಾರಣವಾಗಿದ್ದರಿಂದ ಸರ್ಕಾರವು ನೈರ್ಮಲ್ಯ ಇಲಾಖೆಯನ್ನು ಸಂಘಟಿಸಿ ಪ್ರತಿ ಜಿಲ್ಲೆಗೂ ಒಬ್ಬ ನೈರ್ಮಲ್ಯ ಅಧಿಕಾರಿ(Sanitary Officer)ಯ ನೇಮಿಸಿತು. ೧೯೧೭ರಲ್ಲಿ ಸ್ಯಾನಿಟರಿ ಕಮಿಷನರ್ ಎಂಬ ಹುದ್ದೆಯನ್ನು ಸೃಷ್ಟಿಸಲಾಯಿತು. ಜನರಿಗೆ ನೈರ್ಮಲ್ಯವನ್ನು ಕುರಿತು ತಿಳುವಳಿಕೆ ನೀಡುವ ಜವಾಬ್ದಾರಿಯನ್ನು ಶಿಕ್ಷಕರು, ಆರೋಗ್ಯ ಇಲಾಖೆಯ ಸಿಬ್ಬಂದಿ ಮತ್ತು ಸ್ಥಳೀಯ ಸಂಸ್ಥೆಗಳಾದ ಪುರಸಭೆಗಳು ಮತ್ತು ಗ್ರಾಮ ಸಮಿತಿಗಳಿಗೆ ವಹಿಸಲಾಯಿತು.[೧೮]

ಮೈಸೂರು ಸರ್ಕಾರವು ವೈದ್ಯಕೀಯ ವ್ಯವಸ್ಥೆಯನ್ನು ಸಂಘಟಿಸಲು ೧೯೦೭ರಲ್ಲಿ ಪ್ರತ್ಯೇಕ ಆರೋಗ್ಯ ಇಲಾಖೆಯನ್ನು ಸ್ಥಾಪಿಸಿತು. ಆ ನಂತರ ರೋಗಗಳ ನಿವಾರಣೆಯ ಜೊತೆಗೆ ರೋಗವನ್ನು ತಡೆಗಟ್ಟಲು ಹೆಚ್ಚು ಆದ್ಯತೆ ನೀಡಿ ಹಲವಾರು ಆಸ್ಪತ್ರೆಗಳನ್ನು ಸ್ಥಾಪಿಸಲಾಯಿತು. ೧೮೬೭ರಲ್ಲಿ ಔಷಧಾಲಯವಾಗಿ ಪ್ರಾರಂಭಿಸಲ್ಪಟ್ಟು, ೧೯೧೮ರಲ್ಲಿ ಮೇಲ್ದರ್ಜೆಯ ಸ್ಥಾನ ಪಡೆದು ನಾಲ್ವಡಿ ಕೃಷ್ಣರಾಜ ಒಡೆಯರ ಹೆಸರಿನಲ್ಲೇ ಸ್ಥಾಪನೆಗೊಂಡ ಕೃಷ್ಣರಾಜ ಆಸ್ಪತ್ರೆಯು ಸಾರ್ವಜನಿಕ ಆಸ್ಪತ್ರೆಯಾಗಿ ಪರಿವರ್ತನೆಗೊಂಡು ಅದು ಇಂದು ದೊಡ್ಡ ಆಸ್ಪತ್ರೆ ಎಂದೇ ಕರೆಯಲ್ಪಡುತ್ತದೆ. ಈ ಆಸ್ಪತ್ರೆಯ ಆಡಳಿತ ಮಂಡಳಿಯಲ್ಲಿ ವಿಶೇಷ ತಜ್ಞರಾಗಿದ್ದ ಇಂಗ್ಲೆಂಡಿನ ಸರ್ಜನ್ ಜೆ.ಫ್. ರಾಬಿನ್ಸನ್ ಹಾಗೂ ಯುರೋಪಿನಿಂದ ಬಂದಿದ್ದ ಫಿಸಿಷಿಯನ್ ಎ.ಆರ್. ಹೈಲಿಗ್‌ರವರು ಹಾಗೂ ದಾದಿಯರ ಮೇಲ್ವಿಚಾರಕಿಯಾಗಿ ಶಿಸ್ತಿಗೆ ಹೆಸರಾಗಿದ್ದ ಇಂಗ್ಲೆಂಡಿನ ಮಿಸ್ ಕೂಂಬ್ಸ್‌ರವರು ಕಾರ್ಯ ನಿರ್ವಹಿಸುತ್ತಿದ್ದರು. ಈ ಆಸ್ಪತ್ರೆಯ ದಾದಿಯರ ಮೇಲ್ವಿಚಾರಣಾ ಕೊಠಡಿ ಉತ್ತಮ ಸೌಲಭ್ಯಗಳನ್ನೊಳಗೊಂಡ ವಾರ್ಡ್‌ಗಳು, ಅಪರೇಷನ್ ಥಿಯೇಟರ್, ವಿದ್ಯುತ್ ಲಿಫ್ಟ್‌ಗಳಂತಹ ಮೊದಲಾದ ಆಧುನಿಕ ಅನುಕೂಲತೆಗಳನ್ನು ಒಳಗೊಂಡಿತ್ತು. ಇಲ್ಲಿ ವಿವಿಧ ವಿಷಯಗಳಲ್ಲಿ ಸಾರ್ವಜನಿಕರಿಗೆ ವಿಶೇಷ ಸೇವಾ ಸೌಲಭ್ಯಗಳನ್ನೇ ಕಲ್ಪಿಸಲಾಗಿತ್ತು. ಈ ಆಸ್ಪತ್ರೆಯು ಕ್ರಮೇಣ ಬೋಧಕ ಆಸ್ಪತ್ರೆಯಾಗಿ ಬದಲಾವಣೆಗೊಂಡು ಕೊನೆಗೆ ಮೈಸೂರು ವೈದ್ಯಕಾರ್ಯ ಕಾಲೇಜಿಗೆ ಹಸ್ತಾಂತರಗೊಂಡಿತು. ಇದೇ ತರಹ ಕಣ್ಣು, ದಂತ ಮುಂತಾದವುಗಳ ಬಗ್ಗೆ ಆಧುನಿಕವಾದ ವೈದ್ಯಕೀಯ ಸೌಲಭ್ಯ ಒದಗಿಸಲು ೧೯೧೩ರಲ್ಲಿ ಮಿಂಟೋ ಕಣ್ಣಾಸ್ಪತ್ರೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಯಿತು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕ್ಷ-ಕಿರಣ ಮತ್ತು ರೋಗ ಲಕ್ಷಣಶಾಸ್ತ್ರ ಪ್ರಯೋಗಾಲಯಗಳ ಸೌಲಭ್ಯವನ್ನು ೧೯೧೧ರಲ್ಲಿ ಆರಂಭಿಸಲಾಯಿತು. ಕ್ಷಯರೋಗ ಪೀಡಿತರಿಗಾಗಿ ಕ್ಷಯರೋಗ ಆಸ್ಪತ್ರೆಯನ್ನು ಮೈಸೂರಿನಲ್ಲಿ ಆರಂಭಿಸಲಾಯಿತು. ಇಂತಹ ವಿಶಿಷ್ಟ ಖಾಯಿಲೆಗಳಿಗೆ ಚಿಕಿತ್ಸೆ ಪಡೆಯಲು ಹೊರ ರಾಜ್ಯಗಳಿಗೆ ಹೋಗಬೇಕಾಗಿದ್ದುದು ಈ ಆಸ್ಪತ್ರೆಗಳ ಸ್ಥಾಪನೆಯಿಂದ ತಪ್ಪಿತು. ನಾಲ್ವಡಿಯವರು ವೈದ್ಯಕೀಯ ಕ್ಷೇತ್ರಕ್ಕೆ ಹೆಚ್ಚು ಮಹತ್ವ ನೀಡಿದ್ದರಿಂದಾಗಿ ಅವರ ಕಾಲದಲ್ಲಿ ಈ ಕ್ಷೇತ್ರ ಅಪಾರ ಬೆಳವಣಿಗೆಯನ್ನು ಕಂಡಿತು.[೧೯]

ಹೀಗೆ ಸಂಸ್ಥಾನದ ಪ್ರಜೆಗಳ ಸಾರ್ವಜನಿಕ ಆರೋಗ್ಯ ಹಾಗೂ ನೈರ್ಮಲ್ಯೀಕರಣವನ್ನು ಉತ್ತಮಗೊಳಿಸುವಲ್ಲಿ ಇದ್ದ ಸಾಂಪ್ರದಾಯಿಕ ಅಡೆತಡೆಗಳನ್ನು ನಿವಾರಿಸುವ ಹಾದಿಯಲ್ಲಿ ಜಾರಿಗೊಳಿಸಿದ ಕಾರ್ಯ ಯೋಜನೆಗಳು ಮತ್ತು ಶಾಸನಗಳು ಇಡೀ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ಮೂಲಕ ಕಲ್ಯಾಣ ರಾಜ್ಯದ ಗುರಿಯತ್ತ ಸಂಸ್ಥಾನವು ಸಾಗುವಲ್ಲಿ ನೆರವಾದವು.

೬.೧೨. ದಿ ಹಿಂದೂ ಲಾ ವುಮೆನ್ಸ್ ರೈಟ್ಸ್ ಆಕ್ಟ್

ಸ್ತ್ರೀಯರ ಸ್ಥಾನಮಾನವನ್ನು ಗುರುತಿಸುವಾಗ ಅವರು ಹೊಂದಿರುವ ರಾಜಕೀಯ ಹಕ್ಕುಗಳನ್ನು ಪರಿಗಣಿಸಲಾಗುತ್ತದೆ. ಸ್ತ್ರೀಯರು ಸಂಘಟನೆಗೊಂಡು ೧೯೨೧ರಲ್ಲಿ ದಿವಾನರಾದ ಕಾಂತರಾಜ ಅರಸ್ ಅವರನ್ನು ಭೇಟಿ ಮಾಡಿ ಸ್ಥಳೀಯ ಸಂಸ್ಥೆಗಳಾದ ಜಿಲ್ಲಾ ಬೋರ್ಡ್, ಮುನಿಸಿಪಲ್ ಬೋರ್ಡ್ ಹಾಗೂ ತಾಲ್ಲೂಕ್ ಬೋರ್ಡ್‌ಗಳಿಗೆ, ವಿಶ್ವವಿದ್ಯಾನಿಲಯದ ಸೆನೆಟ್ ಸಭೆಗೆ ಮತದಾನದ ಹಾಗೂ ಚುನಾವಣೆಗೆ ನಿಲ್ಲುವ ಸ್ತ್ರೀಯರ ಹಕ್ಕಿನ ಅನರ್ಹತೆಯನ್ನು ತೆಗೆದು ಹಾಕಬೇಕೆಂದು ಒತ್ತಾಯಿಸಿದರು. ಸರ್ಕಾರವು ೧೯೨೩ರಲ್ಲಿ ಆಡಳಿತಾತ್ಮಕ ಸುಧಾರಣಾ ಸಮಿತಿಯೊಂದನ್ನು ಡಾ. ಬಜೇಂದ್ರನಾಥ್ ಸಾಲ್‌ರವರ ಅಧ್ಯಕ್ಷತೆಯಲ್ಲಿ ನೇಮಿಸಿತು. ಇದರೊಂದಿಗೆ ಸ್ತ್ರೀಯರಿಗಿದ್ದ ಮತದಾನದ ಹಕ್ಕಿನ ಅನರ್ಹತೆಗಳು ರದ್ದಾದವು. ೧೯೨೬ರಲ್ಲಿ ಜಿಲ್ಲಾ ಬೋರ್ಡ್‌ನ ಚುನಾವಣೆಯಲ್ಲಿ ಸ್ತ್ರೀಯರಿಗೆ ಮತದಾನದ ಹಕ್ಕನ್ನು ಕೊಡಲಾಯಿತು. ಮುನಿಸಿಪಲ್ ಕಾಯ್ದೆಗೆ ೧೯೨೮-೨೯ರಲ್ಲಿ ತಿದ್ದುಪಡಿ ತರುವ ಮೂಲಕ ಸ್ತ್ರೀಯರ ಮುನಿಸಿಪಲ್ ಕೌನ್ಸಿಲ್‌ಗಳಿಗೆ ಸದಸ್ಯರಾಗುವುದಕ್ಕಿದ್ದ ತಾರತಮ್ಯ ನೀತಿಯನ್ನು ತೆಗೆದು ಹಾಕಲಾಯಿತು.

ಇದರಿಂದ ಮತದಾನದ ಹಕ್ಕು ಚುನಾವಣೆಗೆ ನಾಮಕರಣಗೊಳ್ಳುವ ಮೂಲಕ ಶಾಸನಸಭೆಗಳಿಗೆ ಪ್ರವೇಶಿಸುವ ಹಕ್ಕಿಗಾಗಿ ಬೇಡಿಕೆ ಹೆಚ್ಚಿತು. ೧೯೩೦ರಲ್ಲಿ ಮೊದಲ ಬಾರಿಗೆ ಯಶೋಧರಮ್ಮ ದಾಸಪ್ಪ ಮತ್ತು ಸಾಕಮ್ಮ ಎಂಬ ಇಬ್ಬರು ಸ್ತ್ರೀಯರು ಶಾಸನಸಭೆಯನ್ನು ಪ್ರವೇಶಿಸಿದರು. ಇದರೊಂದಿಗೆ ಸ್ತ್ರೀಯರಿಗೆ ಮತದಾನದ ಹಕ್ಕು ಮತ್ತು ಚುನಾವಣೆಗಳಿಗೆ ಉಮೇದುವಾರರಾಗಿ ನಿಲ್ಲುವ ಹಕ್ಕುಗಳು ದೊರೆತಂತಾದವು. ಸ್ತ್ರೀ ಸದಸ್ಯರು ಮಹಿಳೆಯರ ಸಮಸ್ಯೆಗಳನ್ನು ಎತ್ತಿ ಹಿಡಿದು ಮಹಿಳಾ ಹಿತಾಸಕ್ತಿಗಳನ್ನು ಕಾಪಾಡಲು ತಮ್ಮ ರಾಜಕೀಯ ಅಧಿಕಾರವನ್ನು ಸಮರ್ಥವಾಗಿ ಬಳಸಿಕೊಂಡರು. ೧೯೩೮ರಲ್ಲಿ ಕಲ್ಯಾಣಮ್ಮನವರು ಸರ್ಕಾರಿ ಉದ್ಯೋಗಗಳಿಗೂ ಸ್ತ್ರೀಯರು ಅರ್ಹರೆಂದು ಸರ್ಕಾರ ಪರಿಗಣಿಸಬೇಕೆಂದು ಒತ್ತಾಯಿಸಿದರು. ಕಾರಣ ಆಗ ಸರ್ಕಾರವು ಶಿಕ್ಷಣ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಮಾತ್ರ ಸ್ತ್ರೀಯರಿಗೆ ಉದ್ಯೋಗಗಳನ್ನು ನೀಡುತ್ತಿತ್ತು. ಸದಸ್ಯರ ಒತ್ತಾಯ ಮತ್ತು ಬೇಡಿಕೆಗಳ ಪರಿಣಾಮವಾಗಿ ಸರ್ಕಾರ ಅನೇಕ ಹಕ್ಕಗಳನ್ನು ನೀಡಿ ಲಿಂಗಾಧಾರಿತ ತಾರತಮ್ಯ ನೀತಿಯನ್ನು ಹೋಗಲಾಡಿಸಿತು.[೨೦]

ಭಾರತೀಯ ಸಮಾಜದಲ್ಲಿ ಸ್ತ್ರೀಯನ್ನು ಗೌರವದಿಂದ ಕಂಡಿದ್ದರೂ, ಆಕೆಗೆ ಪಿತ್ರಾರ್ಜಿತ ಆಸ್ತಿಯ ಹಕ್ಕನ್ನು ನಿರಾಕರಿಸಲಾಗಿತ್ತು. ಆರ್ಥಿಕತೆಯ ಸ್ವಾವಲಂಬನೆ ಇಲ್ಲದೆ ಸ್ತ್ರೀ ಎಲ್ಲಾ ಹಂತದಲ್ಲೂ ಪುರುಷನನ್ನು ಅವಲಂಬಿಸಿಕೊಂಡು ಬದುಕುವಂತಾಗಿತ್ತು. ೧೯೨೬ರಲ್ಲಿ ಕೆ.ಟಿ.

ಭಾಷ್ಯಂ ಅವರು ಸದನದಲ್ಲಿ ಹಿಂದೂ ಕಾನೂನನ್ನು ಪರಿಷ್ಕರಿಸಬೇಕೆಂದು ವಾದಿಸಿದರು. ಸದನದ ಬಹುಸಂಖ್ಯಾತ ಸದಸ್ಯರು ಹಿಂದೂ ಕಾನೂನುಗಳು ಶತಮಾನದ ಹಿಂದಿನ ಸಾಮ್ರಾಜ್ಯ ಅವಶ್ಯಕತೆಗೆ ರೂಪಿಸಿದವಾಗಿದ್ದು, ಈಗಿನ ಪ್ರಸ್ತುತ ಕಾಲಕ್ಕೆ ಬದಲಾವಣೆ ಅಗತ್ಯವೆಂದು ವಾದಿಸಿದರು. ಸರ್ಕಾರವು ಈ ವಾದವನ್ನು ಒಪ್ಪಿ ಹಿಂದೂ ಕಾನೂನುಗಳ ಕ್ರೋಢೀಕರಣ ಮತ್ತು ಪರಿಷ್ಕರಣೆಗಾಗಿ ಕೆ.ಎಸ್. ಚಂದ್ರಶೇಖರ ಅಯ್ಯರ್ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿತು. ಸ್ತ್ರೀಯರ ಸ್ಥಿತಿಗತಿಯ ಬೆಳವಣಿಗೆಗೆ ಬೇಕಾದ ಪರಿಷ್ಕರಣೆ ಗುರುತಿಸಲು ರುಕ್ಮಿಣಿಯಮ್ಮ ಎಂಬುವವರನ್ನು ಸಮಿತಿಗೆ ನೇಮಿಸಲಾಯಿತು. ಸಮಿತಿಯೂ ೧೯೩೦ರಲ್ಲಿ ವರದಿ ನೀಡಿತು. ವರದಿಯ ಮುಖ್ಯಾಂಶಗಳನ್ನು ಸದನವು ದೀರ್ಘವಾಗಿ ಚರ್ಚಿಸಿ ಮಹಾರಾಜ ನಾಲ್ವಡಿಯವರ ಅಂಕಿತದೊಡನೆ ೧೯೩೦ರ ಜೂನ್ ೯ರಂದು 'ದಿ ಹಿಂದೂ ಲಾ ವುಮನ್ಸ್ ರೈಟ್ಸ್ ಆಕ್ಟ್' ಎಂಬ ಶಾಸನವಾಗಿ ಜಾರಿಗೊಳಿಸಿತು. ಈ ಶಾಸನವು ಪಿತ್ರಾರ್ಜಿತ ಆಸ್ತಿಯಲ್ಲಿ ಕೆಲ ಭಾಗವನ್ನು ಸ್ತ್ರೀಧಾನವನ್ನು ಸೇರಿದಂತೆ ಹೊಂದುವ, ಅದನ್ನು ಅನುಭವಿಸುವ ಅಥವಾ ಮಾರುವ, ಅಡವಿಡುವ ಎಲ್ಲಾ ರೀತಿಯ ಅಧಿಕಾರವನ್ನು ನೀಡಿತು.[೨೧] ಈ ಶಾಸನವು ಸ್ತ್ರೀಯರ ಆಸ್ತಿಯ ಹಕ್ಕನ್ನು ಮಾನ್ಯಗೊಳಿಸಿ ಅವರ ಸಾಮಾಜಿಕ ಘನತೆಯನ್ನು ಹೆಚ್ಚಿಸುವ ಉದ್ದೇಶ ಹೊಂದಿದ್ದರೂ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಪಡೆಯಲು ನ್ಯಾಯಾಲಯದಲ್ಲಿ ದಾವೆ ಹೂಡುವಂತಿಲ್ಲ ಮುಂತಾದ ನಿಯಮಗಳಿಂದಾಗಿ ಹಾಗೂ ಸ್ತ್ರೀಯರಿಗೆ ಆಸ್ತಿಯ ಹಕ್ಕನ್ನು ಹಂಚಿಕೊಳ್ಳಲು ಮೂಲಭೂತವಾದಿ ಮನಸ್ಸುಗಳು ಸಿದ್ಧವಿರಲಿಲ್ಲವಾದ್ದರಿಂದ ಈ ಶಾಸನವು ತನ್ನ ಗುರಿಯನ್ನು ಸಾಧಿಸಲಿಲ್ಲ.

ಹೀಗೆ ಸಮಾಜದಲ್ಲಿ ಅಸ್ಪೃಶ್ಯ ವರ್ಗಗಳು, ಹಿಂದುಳಿದ ವರ್ಗಗಳು ಹಾಗೂ ಮಹಿಳೆಯರು ತಮ್ಮ ಜೀವನ ಶೈಲಿಯನ್ನು ಮಾರ್ಪಾಡುಗೊಳಿಸಿಕೊಂಡು ಆಧುನಿಕ ಸಮಾಜದ ಮುಖ್ಯವಾಹಿನಿಯಲ್ಲಿ ಸೇರುವಂತಾಗಬೇಕೆಂಬ ಮುಖ್ಯ ಉದ್ದೇಶದಿಂದ ನಾಲ್ವಡಿ ಕೃಷ್ಣರಾಜರ ಸರ್ಕಾರವು ಜಾರಿಗೊಳಿಸಿದ ಕಾನೂನುಗಳು ಅವರ ಸಾಮಾಜಿಕ ಕಳಕಳಿಗೆ ಹಿಡಿದ ಕನ್ನಡಿಯಾಗಿದೆ. ಅವರ ಕಾನೂನುಗಳ ಮೂಲಕ ದಲಿತರಿಗೆ ಮಾತನಾಡಲು ಪ್ರೇರಣೆಯಾದರು. ಆದರೆ ಎಲ್ಲ ಕಾನೂನುಗಳು ತಮ್ಮ ಗುರಿ ತಲುಪುವಲ್ಲಿ ವಿಫಲವಾದವು. ಏಕೆಂದರೆ ನಮ್ಮ ಪುರೋಹಿತಶಾಹಿ, ಊಳಿಗಮಾನ್ಯ, ಜಮೀನ್ದಾರಿಕೆಯ ಸಮಾಜದಲ್ಲಿನ ಮನಸ್ಸುಗಳೇ ಕಾರಣ. ಇದಕ್ಕೆ ಪೂರಕವಾಗಿ ದಲಿತ ಚಿಂತಕರಾದ ಡಾ. ಎನ್. ಚಿನ್ನಸ್ವಾಮಿ ಸೋಸಲೆ ಅವರು ಹೇಳುವಾಗೆ ನಮ್ಮ ಸಮಾಜದಲ್ಲಿ ಎರಡು ರೀತಿಯ ಸಂವಿಧಾನವನ್ನು ಕಾಣಬಹುದು. ಒಂದು ಲಿಖಿತ ಸಂವಿಧಾನ ಇನ್ನೊಂದು ಅಲಿಖಿತ ಸಂವಿಧಾನ. ಲಿಖಿತ ಸಂವಿಧಾನಕ್ಕಿಂತ ಅಂದಿನಿಂದ ಇಂದಿನವರೆಗೂ ಅಲಿಖಿತ ಸಂವಿಧಾನವೇ ನಮ್ಮನ್ನು ವ್ಯವಸ್ಥಿತವಾಗಿ ನಿಯಂತ್ರಿಸಿಕೊಂಡು ಬಂದಿರುವ ಅಂಶವನ್ನು ಚರ್ಚಿಸುತ್ತಾರೆ. ಮೈಸೂರು ಸಂಸ್ಥಾನದಲ್ಲಿ ಪ್ರಗತಿಪರ ಕಾನೂನುಗಳ ಮುಖಾಂತರ ಸ್ವಲ್ಪಮಟ್ಟಿನ ಎಲ್ಲಾ ವರ್ಗದವರ ಪ್ರಗತಿಗೆ ಕಾರಣವಾಯಿತು.

ಕೊನೆ ಟಿಪ್ಪಣಿಗಳು

೧. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೦, **ವಸಾಹತುಕಾಲಘಟ್ಟದ ಮೈಸೂರು ಸಂಸ್ಥಾನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೯೫.

೨. ಅದೇ, ಪುಟ ೯೬.

೩. ಡಾ. ಎಂ.ಎಸ್. ಅನಿತಾ, ೨೦೧೬, **ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್(ಜೀವನ ಸಾಧನೆ ಮತ್ತು ವ್ಯಕ್ತಿತ್ವ)**, ಮೈಸೂರು ವಿಶ್ವವಿದ್ಯಾನಿಲಯ ಶತಮಾನೋತ್ಸವ ಪ್ರಕಟಣ ಸಮಿತಿ, ಮೈಸೂರು, ಪುಟ ೨೫೪.

೪. ಅದೇ, ಪುಟ ೨೫೫.

೫. ಅದೇ, ಪುಟ ೨೫೫-೨೫೬.

೬. ಡಾ. ಎನ್. ಚಿನ್ನಸ್ವಾಮಿ ಸೋಸಲೆ(ಸಂ), ೨೦೧೬, **ಕರ್ನಾಟಕದ ಸಮಗ್ರ ದಲಿತ ಚರಿತ್ರೆ**, ನವಕರ್ನಾಟಕ ಪ್ರಕಾಶನ, ೨೦೧೬, ಬೆಂಗಳೂರು, ಪುಟ ೧೬೦.

೭. ಅದೇ, ಪುಟ ೧೬೧.

೮. ಪ್ರೊ. ಲಕ್ಷ್ಮಣ್ ತೆಲಗಾವಿ(ಸಂ), ೨೦೦೬, **ಚರಿತ್ರೆ ಅಧ್ಯಯನ, ಸಂಪುಟ-೧, ಸಂಚಿಕೆ-೧**, ಡಾ. ಎನ್. ಚಿನ್ನಸ್ವಾಮಿ ಅವರ ಲೇಖನ, ಆಧುನಿಕ **ಮೈಸೂರು ಸಂಸ್ಥಾನದಲ್ಲಿ ಸಾಮಾಜಿಕ ಸುಧಾರಣಾ ಕ್ರಮಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೩೭-೩೮.

೯. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೩, **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೨೬೨-೨೬೨.

೧೦. ಅದೇ, ಪುಟ ೨೬೧.

೧೧. ಡಾ. ಎಂ.ಆರ್. ರವಿ, ೨೦೧೪, **ಆಧುನಿಕ ಶಿಕ್ಷಣ ಮತ್ತು ಸಾಮಾಜಿಕ ಬದಲಾವಣೆ**(೧೮೮೧-೧೯೪೭), ಸಂವಹನ ಪ್ರಕಾಶನ, ಮೈಸೂರು, ಪುಟ ೧೦೬.

೧೨. ಅದೇ, ಪುಟ ೧೦೮.

೧೩. ಡಾ. ಎಂ.ಎಸ್. ಅನಿತಾ, ೨೦೧೬, **ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್(ಜೀವನ, ಸಾಧನೆ ಮತ್ತು ವ್ಯಕ್ತಿತ್ವ)**, ಮೈಸೂರು ವಿಶ್ವವಿದ್ಯಾನಿಲಯ ಶತಮಾನೋತ್ಸವ ಪ್ರಕಟಣ ಸಮಿತಿ, ಮೈಸೂರು, ಪುಟ ೨೬೫.

೧೪. ಅದೇ, ಪುಟ ೨೬೬.

೧೫. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೦, **ವಸಾಹತು ಕಾಲಘಟ್ಟದ ಮೈಸೂರು ಸಂಸ್ಥಾನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧೦೧.

೧೬. ಅದೇ, ಪುಟ ೧೦೨.

೧೭. ಡಾ. ಎಂ.ಆರ್. ರವಿ, ೨೦೧೪, **ಆಧುನಿಕ ಶಿಕ್ಷಣ ಮತ್ತು ಸಾಮಾಜಿಕ ಬದಲಾವಣೆ(೧೮೮೧-೧೯೪೭)**, ಸಂವಹನ ಪ್ರಕಾಶನ, ಮೈಸೂರು, ಪುಟ ೧೧೯.

೧೮. ಅದೇ, ಪುಟ ೧೨೨.

೧೯. ಅದೇ, ಪುಟ ೧೨೫.

೨೦. ಪ್ರೊ. ಲಕ್ಷ್ಮಣ್ ತೆಲಗಾವಿ(ಸಂ), ೨೦೦೬, **ಚರಿತ್ರೆ ಅಧ್ಯಯನ, ಸಂಪುಟ-೧, ಸಂಚಿಕೆ-೧,** ಡಾ. ಎನ್. ಚಿನ್ನಸ್ವಾಮಿ ಅವರ ಲೇಖನ, **ಆಧುನಿಕ ಮೈಸೂರು ಸಂಸ್ಥಾನದಲ್ಲಿ ಸಾಮಾಜಿಕ ಸುಧಾರಣಾ ಕ್ರಮಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೩೪.

೨೧. ಅದೇ, ಪುಟ ೪೦.

❖❖❖

ಅಧ್ಯಾಯ : ಏಳು

ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣಾ ಹೋರಾಟಗಳ ಪರಿಣಾಮ ಮತ್ತು ಸಮಕಾಲೀನ ಸಂದರ್ಭದ ದಲಿತರ ಸ್ಥಿತ್ಯಂತರಗಳು

ಅಧ್ಯಾಯ : ಏಳು

ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣಾ ಹೋರಾಟಗಳ ಪರಿಣಾಮ ಮತ್ತು ಸಮಕಾಲೀನ ಸಂದರ್ಭದ ದಲಿತರ ಸ್ಥಿತ್ಯಂತರಗಳು

೭.೧. ಪ್ರಸ್ತಾವನೆ

ಭಾರತೀಯ ಸಾಮಾಜಿಕ ವ್ಯವಸ್ಥೆಯ ವೈಶಿಷ್ಟ್ಯವೆಂದರೆ ಜಾತೀಯತೆ. ಮೇಲ್ನೋಟಕ್ಕೆ ಒಂದೇ ಜನಸಮುದಾಯದಿಂದ ಕೂಡಿದುದೆಂದು ಕಂಡುಬಂದರೂ ಲೆಕ್ಕವಿಲ್ಲದಷ್ಟು ಜಾತಿ-ಉಪಜಾತಿ, ಪಂಗಡ-ಉಪಪಂಗಡ, ಮತ-ಪಂಥಗಳಿಂದ ತುಂಬಿಹೋಗಿದೆ. ಚಾರಿತ್ರಿಕ ನೆಲೆಯಲ್ಲಿ ಸಾಮಾಜಿಕ ಶ್ರೇಣೀಕರಣದ ಪರಿಣಾಮವನ್ನು ಗಮನಿಸುವುದಾದರೆ, ತಾರತಮ್ಯ ಇದರ ಮೂಲಗುಣವೆಂದು ಸ್ಪಷ್ಟಪಡುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಸ್ವಾತಂತ್ರ್ಯಪೂರ್ವದಿಂದ ಇಂದಿನವರೆಗೆ ಭಾರತೀಯ ಸಮಾಜದಲ್ಲಿ ಉಂಟಾದಂತಹ ಸಾಮಾಜಿಕ, ಆರ್ಥಿಕ, ರಾಜಕೀಯ ಬದಲಾವಣೆಗಳು ಮತ್ತು ಹೋರಾಟಗಳ ಫಲವನ್ನೇ ಚರ್ಚಿಸಲಾಗಿದೆ.

ಮೈಸೂರು ಸಂಸ್ಥಾನದಲ್ಲಿ ದಲಿತವರ್ಗಗಳು ಜಾಗೃತಿಗೊಂಡು ೧೯೨೦ರ ನಂತರ ದಲಿತ ಹೋರಾಟಗಳಿಗೆ ಹೊಸ ಆಯಾಮ ದೊರೆತು, ಅವರು ಗಟ್ಟಿ ಧ್ವನಿಯಲ್ಲಿ ಮಾತನಾಡ ತೊಡಗಿದರು. ಅಸ್ಪೃಶ್ಯತಾಚರಣೆ ವಿರುದ್ಧ ಕಾನೂನನ್ನು ಜಾರಿಗೆ ತರಲು ಸರ್ಕಾರವನ್ನು ಒತ್ತಾಯಿಸತೊಡಗಿದರು. ಹರಿಜನ ಸೇವಕ ಸಂಘವೂ ಇದಕ್ಕೆ ತನ್ನ ದನಿಗೂಡಿಸಿತು. ಇದರ ಪರಿಣಾಮವಾಗಿ ಹಲವಾರು ಸಾಮಾಜಿಕ ಕಾನೂನುಗಳು ಜಾರಿಗೊಂಡವು. ದಲಿತ ಸಮುದಾಯಗಳಿಗೆ ಮೂಲಭೂತ ಅವಶ್ಯಕತೆಗಳು ದೊರೆಯುವಂತದಾವು. ಇದಕ್ಕೆಲ್ಲಾ ಮುಖ್ಯಕಾರಣ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರು ಸಂಘಟನಾತ್ಮಕವಾಗಿ ಕೈಗೊಂಡ ಹೋರಾಟಗಳನ್ನೇ ಸೂಕ್ಷ್ಮವಾಗಿ ಗಮನಿಸುತ್ತಿದ್ದ ಅಸ್ಪೃಶ್ಯ ಸಮುದಾಯ ತಮ್ಮನ್ನು ಕಡೆಗಣಿಸಿ ಸವಲತ್ತುಗಳನ್ನು ಪ್ರಬಲ ಕೋಮುಗಳು ಪಡೆದಿದ್ದು ಎಚ್ಚರಗೊಳ್ಳಲು ಮತ್ತು ತಮ್ಮ ಹಕ್ಕುಬಾಧ್ಯತೆಗಳನ್ನು ಪಡೆಯಲು ಹೋರಾಟಗಳನ್ನು ನಡೆಸಿದವು. ಮೈಸೂರು ಸಂಸ್ಥಾನದಲ್ಲಿ ಉಂಟಾದಂತಹ ಅಸ್ಪೃಶ್ಯತಾ ನಿವಾರಣಾ ಹೋರಾಟಗಳ ಫಲವನ್ನು ಸಮಗ್ರವಾಗಿ ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

೭.೨. ದಲಿತ ವರ್ಗದವರಿಗೆ ಶಿಕ್ಷಣ ಸೌಲಭ್ಯ

ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣಾ ಹೋರಾಟಗಳು ಫಲವಾಗಿ ಶಿಕ್ಷಣವೆಂಬುದು ಸಾರ್ವತ್ರೀಕರಣಗೊಂಡು ಪಂಚಮ ವರ್ಗದವರಿಗೂ ಲಭಿಸುವಂತಾಯಿತು. ಯಾವುದೇ ಭೇದಭಾವವಿಲ್ಲದೆ ಸರ್ವರಿಗೂ ಶೈಕ್ಷಣಿಕ ಸಂಸ್ಥೆಗಳ ಬಾಗಿಲನ್ನು ತೆರೆದವರೆಂದರೆ ಕ್ರೈಸ್ತ ಮಿಷನರಿಗಳು. ಇವರು ಆರಂಭಿಸಿದ ಪಂಚಮರ ಶಿಕ್ಷಣವನ್ನು ಮೈಸೂರು ಸರ್ಕಾರವು ಯಶಸ್ವಿಯಾಗಿ ಮುಂದುವರಿಸಿಕೊಂಡು ಹೋಯಿತು. ೧೮೯೦ರಲ್ಲಿ ಆನೇಕಲ್ ತಾಲ್ಲೂಕಿನ ಹುಸ್ಕೂರು, ಮಾಲೂರು ತಾಲ್ಲೂಕಿನ ನರಸಾಪುರ ಎರಡು ಕಡೆ ಪಂಚಮರಿಗಾಗಿ ಸರ್ಕಾರಿ ಶಾಲೆಗಳನ್ನು ತೆರೆಯಿತು. ಸರ್ಕಾರವು ದೇಶೀಯ ಶಾಲೆಗಳಿಗೂ ಅನುದಾನ ನೀಡುವ ಯೋಜನೆ ಜಾರಿಗೊಳಿಸಿದ್ದು, ಅದೇ ನಿಯಮಗಳು ಹೊಲೆಯ, ಮಾದಿಗ, ಲಂಬಾಣಿ, ಭೋವಿ ಎಲ್ಲಾ ಜನಾಂಗದವರಿಗೂ ವಿಸ್ತರಿಸಿತು. ಪಂಚಮರ ಶಿಕ್ಷಣಕ್ಕೆ ಉತ್ತೇಜನ ನೀಡಿತು. ೬ ವಿದ್ಯಾರ್ಥಿಗಳಿರುವ ಪಂಚಮರ ಶಾಲೆಗಳಿಗೂ ಅನುದಾನ ನೀಡಲು ತೀರ್ಮಾನಿಸಿತು. ಹಾಗಾಗಿ ೧೮೯೦-೯೧ರಲ್ಲಿ ೫ ಇದ್ದ ಪಂಚಮ ಶಾಲೆಗಳ ಸಂಖ್ಯೆ ೧೮೯೯-೧೯೦ರ ವೇಳೆಗೆ ೨೭ಕ್ಕೆ ಏರಿತು. ಪಂಚಮ ವಿದ್ಯಾರ್ಥಿಗಳಿಗೆ ಸ್ಲೇಟ್, ಪುಸ್ತಕಗಳನ್ನು ಉಚಿತವಾಗಿ ನೀಡಲಾಗುತ್ತಿತ್ತು. ಈ ಪ್ರೋತ್ಸಾಹ ಕ್ರಮಗಳಿಂದಾಗಿ ೧೮೯೦-೯೧ರಲ್ಲಿ ಶೇ. ೦.೨೩ರಷ್ಟಿದ್ದು ಪಂಚಮ ವಿದ್ಯಾರ್ಥಿಗಳ ಪ್ರಮಾಣ ೧೮೯೯-೧೯೦೦ರ ವೇಳೆಗೆ ಶೇ. ೧.೪೮ರಷ್ಟಾಯಿತು.[೧]

ನಾಲ್ವಡಿಯವರ ಆಡಳಿತದ ಆರಂಭದ ವರ್ಷವೇ ಅಂದರೆ ೧೯೦೧-೦೨ರಲ್ಲಿ ಪೋಲೀಸರ ನೆರವಿನಿಂದ ಲಂಬಾಣಿಗಳಿಗಾಗಿ ೧೧ ಶಾಲೆಗಳನ್ನು ತೆರೆಯಲಾಯಿತು. ಅವುಗಳನ್ನು ಶಿವಮೊಗ್ಗ ೭, ತುಮಕೂರು ೨, ಹಾಸನ ಹಾಗೂ ಚಿತ್ರದುರ್ಗಗಳಲ್ಲಿ ಒಂದೊಂದರಂತೆ ಸ್ಥಾಪಿಸಲಾಗಿತ್ತು. ಪಂಚಮ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಕಲಿಯಲು ವಿದ್ಯಾರ್ಥಿವೇತನ ನೀಡಲಾರಂಭಿಸಿತು. ಸರ್ಕಾರವು ದೂರದ ಪ್ರದೇಶಗಳಿಂದ ಬರುವ ಅಸ್ಪೃಶ್ಯ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ೧೯೧೭ರಲ್ಲಿ ಉಚಿತ ವಸತಿಶಾಲೆಯೊಂದನ್ನು ಮೈಸೂರಿನಲ್ಲಿ ಸ್ಥಾಪಿಸಿತು. ಈ ಶಾಲೆಯಲ್ಲಿ ಕೈಗಾರಿಕಾ ತರಬೇತಿ, ಚಾಪೆ ಹೆಣೆಯುವ, ಕೃಷಿ, ಬಡಗಿ, ಕಮ್ಮಾರಿಕೆ ಮುಂತಾದವುಗಳನ್ನು ಕಲಿಸಲಾಗುತ್ತಿತ್ತು. ಊಟ ಮತ್ತು ಬಟ್ಟೆಯನ್ನು ಉಚಿತವಾಗಿ ಸರ್ಕಾರ ಒದಗಿಸಲು ೪೦೦೦ ರೂಪಾಯಿಗಳನ್ನು ವಾರ್ಷಿಕವಾಗಿ ನೀಡುತ್ತಿತ್ತು. ಈ ವಸತಿನಿಲಯದ ೧೨ ವಿದ್ಯಾರ್ಥಿಗಳು ಎಲ್.ಎಸ್. ಪರೀಕ್ಷೆಗೆ ಕುಳಿತು ೧೦ ಜನ ಪಾಸಾದರು.

ವಸತಿ ನಿಲಯಗಳ ಬೇಡಿಕೆ ಹೆಚ್ಚಾದಂತೆ ೧೯೧೮ರಲ್ಲಿ ಚಿಕ್ಕಮಗಳೂರು ಹಾಗೂ ತುಮಕೂರುಗಳಲ್ಲಿ ಬೋರ್ಡಿಂಗ್ ಶಾಲೆಗಳನ್ನು ಸ್ಥಾಪಿಸಲಾಯಿತು. ೧೯೧೭ರಿಂದ ಪಂಚಮರ ಶಿಕ್ಷಣಕ್ಕಾಗಿ ಸರ್ಕಾರವು ಒಂದು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿತು. ತುಮಕೂರು ಮತ್ತು ಚಿಕ್ಕಮಗಳೂರಿನ ಪಂಚಮ ಬೋರ್ಡಿಂಗ್ ಶಾಲೆಗಳ ಅಭಿವೃದ್ಧಿಗಾಗಿ ಸರ್ಕಾರ ೧೯೧೭-೧೮ರಲ್ಲಿ ೫೦೦೦೦ ರೂ.ಗಳ ನೆರವು ನೀಡಿತು. ಸೆಂಟ್ರಲ್ ಪಂಚಮ ಬೋರ್ಡಿಂಗ್ ಶಾಲೆಯನ್ನು ಪ್ರೌಢಶಿಕ್ಷಣ ಕೇಂದ್ರವನ್ನಾಗಿ ಮಾಡಲಾಯಿತು.

ಸರ್ಕಾರವು ೧೯೧೫ರಲ್ಲಿ ಒಂದು ಸುತ್ತೋಲೆಯನ್ನು ಹೊರಡಿಸಿ ಸಾಮಾಜಿಕ ಅಥವಾ ಧಾರ್ಮಿಕ ನಿರ್ಬಂಧದ ಆಧಾರದ ಮೇಲೆ ಪಂಚಮರನ್ನು ಸಾರ್ವಜನಿಕ ಶಾಲೆಗಳಿಗೆ ಸೇರುವುದನ್ನು ತಡೆಯಬಾರದೆಂದು ತಿಳಿಸಿತು. ಅಂತಿಮವಾಗಿ ಎಲ್ಲಾ ಸರ್ಕಾರಿ ಮತ್ತು ಅನುದಾನ ಪಡೆಯುವ ಶಾಲೆಗಳಲ್ಲಿ ಪಂಚಮರಿಗೆ ಪ್ರವೇಶಾವಕಾಶ ನೀಡುವಂತಾಗಲು ೧೯೧೮ರ ನವೆಂಬರ್ ೨೩ರಲ್ಲಿ ಹೊರಡಿಸಿದ ಒಂದು ಆಜ್ಞೆಯನ್ನು 'ಸರ್ಕಾರಿ ನೆರವಿನಲ್ಲಿ ನಡೆಯುವ ಶಾಲೆಗಳಲ್ಲಿ ಜಾತಿಯನ್ನಾಧರಿಸಿ ವಿದ್ಯಾರ್ಥಿಗಳನ್ನು ಹೊರಗಿಡುವಂತಿಲ್ಲವೆಂದು' ತಿಳಿಸಿತು. ಈ ಮೂಲಕ ಶಾಲೆಗಳ ಪ್ರವೇಶಾತಿಗೆ ಅಸ್ಪೃಶ್ಯರಿಗಿದ್ದ ತಡೆಯನ್ನು ಶಾಸನಾತ್ಮಕವಾಗಿ ನಿವಾರಿಸಲಾಯಿತು. ಈ ಆಜ್ಞೆಯನ್ನು ಹಲವು ಪ್ರಮುಖರು ವಿರೋಧಿಸಿದರು. ಪ್ರಜಾಪ್ರತಿನಿಧಿ ಸಭೆಯಲ್ಲಿ ಸರ್ಕಾರದ ಈ ಕ್ರಮವನ್ನೇ ವಿರೋಧಿಸಿದ ಸದಸ್ಯರು ಪಂಚಮರನ್ನು ಸಾರ್ವಜನಿಕ ಶಾಲೆಗಳಲ್ಲಿ ಉನ್ನತ ಜಾತಿಯ ಮಕ್ಕಳ ಜೊತೆ ಜೊತೆಯಲ್ಲಿ ಶಿಕ್ಷಣ ಪಡೆಯಲು ನಿರ್ದೇಶಿಸಬಾರದೆಂದು ಒತ್ತಾಯಿಸಿದರು. ಮೈಸೂರು ಸರ್ಕಾರ ಬಲವಾಗಿ ತಿರಸ್ಕರಿಸಿದ್ದಲ್ಲದೆ, ಆಜ್ಞೆಯನ್ನು ವಿರೋಧಿಸಿ ಪಂಚಮ ಮಕ್ಕಳನ್ನು ಸೇರಿಸದ ಶಾಲೆಗಳ ಅನುದಾನವನ್ನು ರದ್ದು ಮಾಡುವುದಾಗಿ ತಿಳಿಸಿತು.

ಹೀಗೆ ಒಡೆಯರ ಬೆಂಬಲ ಮತ್ತು ಕಾಯ್ದೆಯ ಪ್ರಭಾವದಿಂದ ೧೯೧೯-೨೦ರಲ್ಲಿ ಸುಮಾರು ೩೧೪೪ ಪಂಚಮ ವಿದ್ಯಾರ್ಥಿಗಳು ಸಾರ್ವಜನಿಕ ಶಾಲೆಗಳಿಗೆ ಪ್ರವೇಶ ಪಡೆದರು. ಪಂಚಮ ವಿದ್ಯಾರ್ಥಿಗಳಿಗಿದ್ದ ಶಾಲೆಯ ಪ್ರವೇಶದ ನಿರ್ಬಂಧವು ಹಂತ ಹಂತವಾಗಿ ನಶಿಸುತ್ತಾ ಹೋಯಿತು.[೨]

ಅಸ್ಪೃಶ್ಯ ಮಕ್ಕಳನ್ನು ಶಾಲೆಗೆ ಸೇರಿಸುವಂತೆ ಪ್ರೋತ್ಸಾಹ ನೀಡಲು ವಿದ್ಯಾರ್ಥಿಗಳ ತಂದೆ-ತಾಯಿಗಳಿಗೆ ಭತ್ಯೆ ನೀಡುವ ವಿಶೇಷ ಕ್ರಮ ಕೈಗೊಳ್ಳಲಾಯಿತು. ಮಿಲ್ಲರ್ ಕಮಿಟಿಯೂ ಸಹ ಪಂಚಮ ಶಾಲೆಗಳಿಗೆ ಪಂಚಮ ಶಿಕ್ಷಕರನ್ನು ಹಾಗೂ ಪರಿವೀಕ್ಷಕರನ್ನು ನೇಮಿಸುವ ಮೂಲಕ ವಿಶೇಷ ಗಮನ ನೀಡಬೇಕೆಂದು ಸಲಹೆ ನೀಡಿತು. ಜೊತೆಗೆ ಪಂಚಮ ವಿದ್ಯಾರ್ಥಿಗಳಿಗೆ ಬೋರ್ಡಿಂಗ್ ಶಾಲೆ, ವಿದ್ಯಾರ್ಥಿವೇತನ ಮತ್ತಿತರ ಸೌಲಭ್ಯಗಳನ್ನು ನೀಡಬೇಕೆಂದು ತಿಳಿಸಿತು.

ಸರ್ಕಾರವು ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಶಿಕ್ಷಣ ಪಡೆಯುವಂತೆ ಪ್ರೋತ್ಸಾಹಿಸಲು ವಾರ್ಷಿಕವಾಗಿ ೬ ರೂಪಾಯಿಗಳಿಂದ ೧೫ ರೂಪಾಯಿಗಳವರೆಗಿನ ವಿದ್ಯಾರ್ಥಿವೇತನಗಳನ್ನು ೧೯೧೮ರಲ್ಲಿ ನೀಡಿತು. ದೂರದ ಊರುಗಳಿಂದ ಬರುವ ವಿದ್ಯಾರ್ಥಿಗಳಿಗೆ ರೈಲ್ವೆಯಲ್ಲಿ ರಿಯಾಯಿತಿ ನೀಡಲಾಯಿತು. ಇವುಗಳಿಂದಾಗಿ ೧೯೨೦-೨೧ರ ವೇಳೆಗೆ ಪಂಚಮರ ಶಾಲೆಗಳ ಸಂಖ್ಯೆ ೭೩೯ಕ್ಕೇರಿತು. ಒಟ್ಟು ೧೫.೩೯೦ ವಿದ್ಯಾರ್ಥಿಗಳಿದ್ದೂ ಅದರಲ್ಲಿ ೧.೮೩೯ ಬಾಲಕಿಯರಿದ್ದರು.

ಸರ್ಕಾರ ಹಾಗೂ ಸಾರ್ವಜನಿಕ ಸಂಸ್ಥೆಗಳು ಕೈಗೊಂಡ ಕ್ರಮಗಳಿಂದಾಗಿ ೧೯೧೮ರಲ್ಲಿ ಮೆಟ್ರಿಕ್ಯುಲೇಶನ್ ೧೯೨೫ರಲ್ಲಿ ಪದವಿಯನ್ನು ಮೊದಲ ಬಾರಿಗೆ ಪಂಚಮ ವಿದ್ಯಾರ್ಥಿಗಳು ಪಡೆದರು. ೧೯೨೧ರಲ್ಲಿ ಸರ್ಕಾರಿ ಸೇವೆಯಲ್ಲಿ ಯಾವುದೇ ಪ್ರಾತಿನಿಧ್ಯ ಪಡೆಯದಿದ್ದ ಪಂಚಮರು ೧೯೩೫ರ ವೇಳೆಗೆ ಶೇ. ೪.೫೮ರಷ್ಟು ಗೆಜೆಟೆಡ್ ಮತ್ತು ಶೇ. ೬.೯೫ರಷ್ಟು ನಾನ್ ಗೆಜೆಟೆಡ್

ಹುದ್ದೆಗಳನ್ನು ಹೊಂದುವಂತಾದರು. ಇವು ಮೈಸೂರು ಸಂಸ್ಥಾನದಲ್ಲಿ ದಲಿತರು ನಡೆಸಿದ ಹೋರಾಟಗಳ ಫಲ ಹಾಗೂ ನಾಲ್ವಡಿಯವರ ಸಾಮಾಜಿಕ ಕಳಿಕಳಿಯಿಂದಾಗಿ ಶಿಕ್ಷಣ ಪಡೆದ ದಲಿತರು ಜಾಗೃತಗೊಳಿಸಲು ಸಹಕಾರಿಯಾಯಿತು ಮತ್ತು ಮೂಲಭೂತ ಸೌಲಭ್ಯಗಳನ್ನು ಪಡೆಯಲು ಮುಂದಾದರು.[೩]

ಒಟ್ಟಾರೆಯಾಗಿ ಮೈಸೂರು ಸಂಸ್ಥಾನದಲ್ಲಿ ದಲಿತರು ಕೈಗೊಂಡ ಹೋರಾಟಗಳಿಂದ ಹಾಗೂ ನಾಲ್ವಡಿಯವರ ಸಾಮಾಜಿಕ ಕಳಕಳಿಯಿಂದಾಗಿ ಅಸ್ಪೃಶ್ಯರು ಶಿಕ್ಷಣ ಪಡೆದು ಜಾಗೃತಗೊಳ್ಳಲು ಸಹಕಾರಿಯಾಯಿತು.

೭.೩. ದಲಿತ ವರ್ಗಗಳ ಸಾಮಾಜಿಕ ಮತ್ತು ಆರ್ಥಿಕಾಭಿವೃದ್ಧಿ

ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣಾ ಹೋರಾಟಗಳ ಪರಿಣಾಮವಾಗಿ ದಲಿತ ವರ್ಗಗಳು ಸ್ವಲ್ಪಮಟ್ಟಿನ ಏಳ್ಗೆಯನ್ನು ಕಂಡವು. ಕ್ರೈಸ್ತ ಮಿಷನರಿಗಳು, ನಾಲ್ವಡಿ ಅವರ ಸರ್ಕಾರ ನೀಡಿದ ಶಿಕ್ಷಣದಿಂದಾಗಿ, ಶಿಕ್ಷಣ ಪಡೆದ ದಲಿತರಲ್ಲಿ ಪ್ರಜ್ಞೆ ಮೂಡಿ ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಧ್ವನಿ ಎತ್ತಲು ಸಹಕಾರಿಯಾಯಿತು. ಪ್ರಬಲವರ್ಗಗಳು ತಮ್ಮ ಸ್ವಾರ್ಥ ಸಾಧನೆಗಾಗಿ ಮತ್ತು ಪ್ರಭುತ್ವವನ್ನು ಓಲೈಸಿಕೊಳ್ಳುವ ದೃಷ್ಟಿಯಿಂದ ಅನಿವಾರ್ಯವಾಗಿ ಒಲ್ಲದ ಮನಸ್ಸಿನಿಂದ ದಲಿತರಿಗೆ ಶಿಕ್ಷಣ ನೀಡಿದ್ದರ ಫಲವಾಗಿ ದಲಿತರಲ್ಲಿ ಜಾಗೃತಿ ಉಂಟಾಗಿ ಸಾಮಾಜಿಕ ಬದಲಾವಣೆ ಹೊಂದಲು ಸಹಕಾರಿಯಾಯಿತು. ಶಿಕ್ಷಣ ಪಡೆದ ದಲಿತರು ತಮ್ಮ ಸಮುದಾಯಗಳ ಮೇಲೆ ಆಗುತ್ತಿದ್ದಂತಹ ಶೋಷಣೆ, ಅನ್ಯಾಯ, ದಬ್ಬಾಳಿಕೆಯನ್ನು ಪ್ರತಿಭಟಿಸಲು ಮುಂದಾದರು. ಇದಕ್ಕೆ ಬೆಂಬಲವಾಗಿ ಕೆಲವು ಪ್ರಗತಿಪರ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಬೆನ್ನೆಲುಬಾಗಿ ನಿಂತರು.[೪]

ದಲಿತಪ್ರಜ್ಞೆ ಬಂದ ನಂತರ ದಲಿತರು ದನಿ ಎತ್ತತೊಡಗಿದರು. ಪಾರಂಪರಿಕವಾಗಿ ತಮ್ಮ ಮೇಲೆ ವಿಧಿಸಲ್ಪಟ್ಟಿದ್ದ ನಿರ್ಬಂಧಗಳಿಂದ ಬಿಡುಗಡೆ ಪಡೆಯಲು ದಲಿತರು ಯೋಚಿಸತೊಡಗಿದರು. ದಲಿತರು ದೇವಸ್ಥಾನ ಪ್ರವೇಶಿಸಿ ಪೂಜಿಸುವಂತಿರಲಿಲ್ಲ. ಕೆರೆ, ಬಾವಿಯ ನೀರನ್ನು ನೇರವಾಗಿ ಉಪಯೋಗಿಸುವಂತಿರಲಿಲ್ಲ. ಸಾರ್ವಜನಿಕ ಬೀದಿಗಳಲ್ಲಿ ಓಡಾಡುವಂತಿರಲಿಲ್ಲ. ಬದಲಾಗಿ ಯಾವ ವೃತ್ತಿಗಳನ್ನು ಮೇಲ್ವರ್ಗದ ಜನ ಕೀಳೆಂದು ಭಾವಿಸಿದ್ದಾರೋ, ಅಂಥ ವೃತ್ತಿಗಳನ್ನು ದಲಿತರು ಮಾಡಿ ಬದುಕಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಲಾಗಿತ್ತು. ದಲಿತರ ಮೇಲಿನ ನಿರ್ಬಂಧಗಳ ವಿರುದ್ಧ ಅನೇಕ ಚಳವಳಿಗಳನ್ನು ಮೈಸೂರು ಸಂಸ್ಥಾನದಲ್ಲಿ ಕೈಗೊಂಡರು. ಕೆಲವು ಹೋರಾಟಗಳಲ್ಲಿ ಯಶಸ್ಸನ್ನು ಕಂಡರು. ಮತ್ತೆ ಕೆಲವು ಹೋರಾಟಗಳಲ್ಲಿ ದೌರ್ಜನ್ಯ, ಹಿಂಸೆಗೆ ಒಳಗಾದರು. ದಲಿತರ ಹೋರಾಟಗಳನ್ನು, ಮನವಿಗಳನ್ನು ಪುರಸ್ಕರಿಸಿದ ನಾಲ್ವಡಿ ಸರ್ಕಾರ ಅನೇಕ ಪ್ರಗತಿಪರ ಕಾನೂನುಗಳನ್ನು ಹೊರಡಿಸುವುದರ ಮುಖಾಂತರ ಸಾರ್ವಜನಿಕ ಸ್ಥಳಗಳಾದ ದೇವಾಲಯ ಪ್ರವೇಶ, ಕೆರೆ, ಬಾವಿ, ಶಾಲೆಗಳಿಗೆ ಮುಕ್ತ ಪ್ರವೇಶವನ್ನು ಕಲ್ಪಿಸಿತು. ಇದಕ್ಕೆ ಮೈಸೂರು ಸಂಸ್ಥಾನದಾದ್ಯಂತ ಸಾರ್ವಜನಿಕ ಪ್ರವೇಶಗಳಿಗೆ ದಲಿತರಿಗೆ ಅವಕಾಶ ನೀಡಿದ್ದನ್ನು ಕೆಲ ಸಂಪ್ರದಾಯ

ಸವರ್ಣೀಯರು ವಿರೋಧಿಸಿದರು. ಸರ್ಕಾರದ ಆಜ್ಞೆಯಾಗಿದ್ದರಿಂದ ಹಂತ ಹಂತವಾಗಿ ಸ್ವಲ್ಪಮಟ್ಟಿಗೆ ವಿರೋಧ ಕಡಿಮೆಯಾಯಿತು. ಮುಕ್ತ ಅವಕಾಶ ದೊರೆಯುವಂತಾಯಿತು.[೫]

ದಲಿತರ ಆರ್ಥಿಕ ಪ್ರಗತಿಗೆ ಸಹಾಯಕವಾಗಲೆಂದು ಪ್ರತ್ಯೇಕ ಸಹಕಾರ ಸಂಘಗಳನ್ನು ಸ್ಥಾಪಿಸಲು ೩೦,೦೦೦ ಮೊತ್ತದ ವಾರ್ಷಿಕ ವಂತಿಗೆಯನ್ನು ಕೊಡಲಾಯಿತು. ದಲಿತರಿಗೆ ಶೇ. ೫ರ ಬಡ್ಡಿಯ ಮೇಲೆ ಸಾಲ ಮಂಜೂರು ಮಾಡಲು ಈ ಸಹಕಾರ ಸಂಘಗಳಿಗೆ ನಿರ್ದೇಶನ ನೀಡಲಾಯಿತು. ಸುಗ್ಗಿಯ ಮುನ್ನ ಐದು ತಿಂಗಳ ಕಾಲ ದಲಿತರು ತಮ್ಮ ಸಂಸಾರ ತೂಗಿಸಲು ಅನುಕೂಲವಾಗುವಂತೆ ತಿಂಗಳಿಗೆ ರೂ. ೧೦ರಂತೆ ಕೆಲವು ದಲಿತರಿಗೆ ಸಹಾಯಧನವನ್ನು ನೀಡಲಾಯಿತು. ಅತಿ ಕಡಿಮೆ ಬೆಲೆಯಲ್ಲಿ ಸರ್ಕಾರಿ ಜಮೀನನ್ನು ದಲಿತರಿಗೆ ಕೊಟ್ಟು ೧೦ ವರ್ಷಗಳ ಕಾಲ ಪರಭಾರೆ ಮಾಡುವುದನ್ನು ನಿಷೇಧಿಸಲಾಯಿತು. ವಿವಿಧ ಕ್ಷೇತ್ರಗಳಲ್ಲಿ ದಲಿತ ಕಲ್ಯಾಣ ಕಾರ್ಯದ ಪ್ರಗತಿಯನ್ನು ಪರಿಶೀಲಿಸಲು ಒಂದು ಖಾಯಂ ಸಮಿತಿಯನ್ನು ನೇಮಿಸಲಾಯಿತು. ದಲಿತರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡಲು ಸರ್ಕಾರ ಮುಂದಾಯಿತು.[೬]

ಪ್ರಗತಿಪರ ದಲಿತೇತರರು ನಾಲ್ವಡಿಯವರ ಸಹಕಾರದಿಂದ ಮೈಸೂರು ಸಂಸ್ಥಾನದಲ್ಲಿ ದಲಿತರು ಎಲ್ಲಾ ರಂಗಗಳಲ್ಲಿಯೂ ಸ್ವಲ್ಪಮಟ್ಟಿನ ಪ್ರಗತಿಯನ್ನು ಸಾಧಿಸಿದರು.

೭.೪. ಸಮಕಾಲೀನ ಸಂದರ್ಭದ ದಲಿತರ ಸ್ಥಿತ್ಯಂತರಗಳು

ಮೈಸೂರು ಸಂಸ್ಥಾನದ ಮೊದಲ ತಲೆಮಾರಿನ ದಲಿತ ಹೋರಾಟಗಾರರು, ಸಾಹಿತಿಗಳು ಹಾಗೂ ಅಂಬೇಡ್ಕರ್ ಅವರ ವಿಚಾರಗಳು ಮತ್ತು ಅವರ ಹೋರಾಟಗಳು ೭೦ರ ದಶಕದಿಂದ ಹೆಚ್ಚು ಹೆಚ್ಚು ಪ್ರಚಲಿತಕ್ಕೆ ಬಂದು ದಲಿತವರ್ಗದವರಲ್ಲಿ ದಲಿತಪ್ರಜ್ಞೆ ಮೂಡಿ ಅಂಬೇಡ್ಕರ್ ವಿಚಾರಧಾರೆಗಳನ್ನು ಮತ್ತು ಅವರ ಕೃತಿಗಳನ್ನು ಎರಡನೇ ತಲೆಮಾರಿನ ದಲಿತ ಶಿಕ್ಷಣವಂತರು ತಿಳಿಯಲು ಸಹಕಾರಿಯಾಯಿತು. ಅಂಬೇಡ್ಕರ್ ಅವರ ಚಿಂತನೆಗಳನ್ನು ಮೈಗೂಡಿಸಿಕೊಂಡು ಹೊರಬಂದ ನೂರಾರು ದಲಿತ ಸಾಹಿತಿಗಳು ತಮ್ಮ ಸಮುದಾಯದ ಮೇಲೆ ನಡೆಯುತ್ತಿರುವ ದೌರ್ಜನ್ಯ, ದಬ್ಬಾಳಿಕೆ, ನೋವು, ಬವಣೆಯನ್ನು ಸಾಹಿತ್ಯದ ಮುಖಾಂತರ ತಮ್ಮ ಶೋಷಣೆಯನ್ನು ವ್ಯಕ್ತಪಡಿಸತೊಡಗಿದರು. ದಲಿತ, ಬಂಡಾಯ ಸಾಹಿತ್ಯ ಉಗಮಗೊಂಡು ಶೋಷಿತರನ್ನು ಎಚ್ಚರಿಸತೊಡಗಿತು. ಜಾಗೃತಗೊಂಡ ದಲಿತ ಸಮುದಾಯಗಳಲ್ಲಿ ಹಲವಾರು ರೀತಿಯ ಸ್ಥಿತ್ಯಂತರಗಳಿಗೆ ಕಾರಣವಾಯಿತು. ದಲಿತ ಚಳವಳಿ, ದಲಿತ ಸಾಹಿತ್ಯ, ದಲಿತ ಸಂಘಟನೆಗಳ ಉಗಮ ಹೀಗೆ ಹಲವಾರು ರೀತಿಯ ಬದಲಾವಣೆಗಳು ೭೦ರ ದಶಕದ ನಂತರ ಉಂಟಾದವು. ಇವುಗಳಿಂದ ದಲಿತರ ಸಾಮಾಜಿಕ, ಆರ್ಥಿಕ, ರಾಜಕೀಯ ಪರಿಸ್ಥಿತಿಗಳಲ್ಲಿ ಬದಲಾವಣೆ ಉಂಟಾಗಲು ಕಾರಣವಾಯಿತು.

ಪ್ರಸ್ತುತ ಅಧ್ಯಾಯದಲ್ಲಿ ಸಮಕಾಲೀನ ಸಂದರ್ಭದ ದಲಿತರ ಸ್ಥಿತ್ಯಂತರಗಳಿಗೆ ಸಂಬಂಧಿಸಿದಂತೆ ಮೈಸೂರು ಸಂಸ್ಥಾನದ ಅಸ್ಪೃಶ್ಯತಾ ಹೋರಾಟಗಳು ಯಾವ ರೀತಿ ಪ್ರೇರಣೆಯಾಯಿತು

ಎಂಬುದನ್ನು ವಿಸ್ತೃತವಾಗಿ ಚರ್ಚಿಸಲಾಗಿದೆ. ದಲಿತ ಚಳವಳಿ, ಸಾಹಿತ್ಯ, ಸಂಘಟನೆ ಇವುಗಳಿಗೆ ಪ್ರೇರಣೆ ಮತ್ತು ಪ್ರಸ್ತುತ ಸಂದರ್ಭದ ದಲಿತ ಸಂಘಟನೆಗಳನ್ನು ವಸ್ತುನಿಷ್ಠವಾಗಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

೭.೫. ದಲಿತ(ಬೂಸಾ ಚಳವಳಿ) ಚಳವಳಿಗೆ ಪ್ರೇರಣೆ

ಬೂಸಾ ಚಳವಳಿಗೆ ಪರೋಕ್ಷವಾಗಿ ಪ್ರೇರಣೆಯಾದವರು ಮೈಸೂರು ಸಂಸ್ಥಾನದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಗೋಪಾಲಸ್ವಾಮಿ ಅಯ್ಯರ್ ಅವರು. ಏಕೆಂದರೆ ಶಿಕ್ಷಣ ಎಂಬುದು ಕೆಲವೇ ವ್ಯಕ್ತಿಗಳ ಸ್ವತ್ತಾಗಿದ್ದಂತಹ ಸಂದರ್ಭದಲ್ಲಿ ಅಸ್ಪೃಶ್ಯ ವರ್ಗದವರಿಗೆ ಶಿಕ್ಷಣ ಕಲ್ಪಿಸಿದ್ದು ಅವರಲ್ಲಿ ಜಾಗೃತಿಯನ್ನುಂಟು ಮಾಡಲು ನಾಲ್ವಡಿಯವರು ಹಾಗೂ ಗೋಪಾಲಸ್ವಾಮಿ ಅಯ್ಯರ್ ಅವರೇ ಪ್ರಮುಖ ಕಾರಣ. ಇವರ ದಲಿತಪರ ಕಾಳಜಿಯಿಂದ ಸ್ಥಾಪಿಸಿದ ಪಂಚಮ ಶಾಲೆಯಲ್ಲಿಯೇ ಬಸವಲಿಂಗಪ್ಪನವರು ಶಿಕ್ಷಣವನ್ನು ಪಡೆದಿದ್ದು. ಸ್ವಾತಂತ್ರ್ಯ ಪೂರ್ವದಲ್ಲಿಯೇ ಉತ್ತಮ ಶಿಕ್ಷಣ ಪಡೆದ ಬಸವಲಿಂಗಪ್ಪನವರು ಸ್ವಾತಂತ್ರ್ಯ ನಂತರದ ರಾಜಕೀಯ ಮತ್ತು ಸಾಂಸ್ಕೃತಿಕ ಪಲ್ಲಟಗಳಿಗೆ ಕಾರಣರಾದರು. ಬಸವಲಿಂಗಪ್ಪನವರು ಶಿಕ್ಷಣ ಪಡೆದ ಸಲುವಾಗಿ ತಮ್ಮ ದಲಿತ ಸಮುದಾಯದ ಮೇಲೆ ಎಲ್ಲಾ ವಲಯಗಳಿಂದ ಆಗುತ್ತಿರುವ ದೌರ್ಜನ್ಯ, ಶೋಷಣೆಗಳನ್ನು ಅರ್ಥ ಮಾಡಿಕೊಳ್ಳಲು ಸಹಕಾರಿಯಾಯಿತು. ಇದರ ಪರಿಣಾಮವೇ ಬೂಸ ಪ್ರಕರಣ.[೭]

ಬಿ. ಬಸವಲಿಂಗಪ್ಪನವರು ಸೃಷ್ಟಿಸಿದ 'ಬೂಸಾ' ಪ್ರಕರಣವು ಭಾರತದ ಸಾಹಿತ್ಯ ಚರಿತ್ರೆಯಲ್ಲಿ ಒಂದು ಮೈಲಿಗಲ್ಲು. ಕರ್ನಾಟಕ ಐತಿಹಾಸದಲ್ಲಂತೂ ಈ ಪ್ರಕರಣ ಸಾಹಿತ್ಯ ಮತ್ತು ಚಳವಳಿಗೆ ಒಂದು ಮಹತ್ತರವಾದ ತಿರುವನ್ನೇ ನೀಡಿತು. ಭಾರತೀಯ ಸಾಮಾಜಿಕ ಸಂದರ್ಭದಲ್ಲಿ ಧರ್ಮ, ಸಮಾಜ, ಸಾಹಿತ್ಯ ಎಲ್ಲವೂ ಒಂದಕ್ಕೊಂದು ತಳಕು ಹಾಕಿಕೊಂಡು ದಲಿತರನ್ನು ಶೋಷಣೆ ಮಾಡುತ್ತಿದೆ ಎಂದು ಬಿ. ಬಸವಲಿಂಗಪ್ಪನವರು ಭಾವಿಸಿಕೊಂಡಿದ್ದರು.

೧೯೭೩ರ ಸಂದರ್ಭದಲ್ಲಿ 'ಕನ್ನಡ ಸಾಹಿತ್ಯ ಬೂಸಾ' ಆಗಿದೆ ಎಂದು ಹೇಳಿದರು. ಕೇವಲ ಕೈ ಬೆರಳಣಿಕೆಯಷ್ಟು ಜನವರ್ಗದ ಹಿತಾಸಕ್ತಿಯನ್ನು ಪ್ರತಿನಿಧಿಸುವ ಕನ್ನಡ ಸಾಹಿತ್ಯ ಬಹುಸಂಖ್ಯಾತ ಜನರ ದುಃಖ-ದುಮ್ಮಾನವನ್ನು ಎಂದೂ ಕನ್ನಡ ಸಾಹಿತ್ಯ ಹೊರಲೋಕಕ್ಕೆ ತೆರೆದಿಟ್ಟಿಲ್ಲ ಎಂದು ಭಾವಿಸಿ ಬಸವಲಿಂಗಪ್ಪನವರು ಸಾವಿರಾರು ವರ್ಷಗಳಿಂದ ಮಾನವ ಹಕ್ಕುಗಳಿಂದ ವಂಚಿತವಾಗಿ ಪಶು-ಪಕ್ಷಿಗಳಿಗಿಂತಲೂ ಕೀಳಾಗಿ ಬದುಕುತ್ತಿರುವ ದಲಿತ ಜನಾಂಗಕ್ಕೆ ಸಾಹಿತ್ಯದಿಂದ ಏನಾದರೂ ಪ್ರಯೋಜವಾಗಿದೆಯೇ ಎಂದು ಪ್ರಶ್ನಿಸಿದರು. ಹಳ್ಳ-ಕೊಳ್ಳ, ಕಲ್ಲು-ಮಣ್ಣು-ನಾಯಿ-ನದಿ-ಹದ್ದುಗಳನ್ನು ದೇವರ ಅವತಾರಕ್ಕೆ ಹೋಲಿಸಿ ರಚಿಸಿದ ಸಾಹಿತ್ಯ, ಸಾವಿರಾರು ವರ್ಷಗಳಿಂದ ಗುಲಾಮಗಿರಿಯಲ್ಲಿ ನರಳುತ್ತಿರುವ ದಲಿತ ಜನವರ್ಗವನ್ನು ಕಂಡಿದ್ದಾದರೂ ಹೇಗೆ? ಎಂಬ ಪ್ರಶ್ನೆ ಬಿ. ಬಸವಲಿಂಗಪ್ಪನವರಲ್ಲಿ ಮೂಡಿದಾಗ ಅವರು ಸಹಜವಾಗಿಯೇ ಸಾಹಿತ್ಯದ ಕುರಿತು ತಮ್ಮ ಆಕ್ಷೇಪ ವ್ಯಕ್ತಪಡಿಸಿದರು.

ಹೀಗೆ ಹೇಳಲು ಕಾರಣವೇನೆಂದರೆ, ಬಿ. ಬಸವಲಿಂಗಪ್ಪನವರು ಮೂಲತಃ ಶೋಷಿತ ವರ್ಗದಿಂದ ಬಂದವರಾಗಿದ್ದರು. ಹೀಗಾಗಿ ದಲಿತ ವರ್ಗದ ನೋವುಗಳು, ಅಪಮಾನಗಳನ್ನು ಅವರು ಕೂಡ ಅನುಭವಿಸಿದ್ದರು. ಹೀಗಾಗಿ ಅವರು ಒಬ್ಬ ವಿಚಾರವಾದಿಯಾಗಿ ಮತ್ತು ಬಂಡಾಯಗಾರರಾಗಿ ಬೆಳೆದರು. ಅವರ ವಿಚಾರವಾದಕ್ಕೆ ಮತ್ತು ಬಂಡಾಯಕ್ಕೆ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ವಿಚಾರಧಾರೆ ಮತ್ತು ಹೋರಾಟಗಳು ಹಾಗೂ ನಾಲ್ವಡಿಯವರು ನೀಡಿದ ಶಿಕ್ಷಣ ಸ್ಫೂರ್ತಿಯಾಗಿದ್ದವು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಅಂಬೇಡ್ಕರ್ ಅವರ ಹೆಸರು ಕೇಳಿದರೆ ಕಿಡಿಕಿಡಿಯಾಗುತ್ತಿದ್ದ ಸವರ್ಣೀಯರು ಆ ವಾದ ಮತ್ತು ಚಿಂತನೆಯನ್ನು ವಿರೋಧಿಸಿದರು. ಈ ನಿಟ್ಟಿನಲ್ಲಿ ಹಿಂದೂ ಧರ್ಮ, ಸಮಾಜ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಯಾವುದೇ ಅಸ್ಪೃಶ್ಯ ಟೀಕಿಸಿದರೆ ಮತ್ತು ವಿರೋಧಿಸಿದರೆ ಸವರ್ಣೀಯ ಸಮಾಜ ಸಹಿಸುತ್ತಿರಲಿಲ್ಲ. ಬಿ. ಬಸವಲಿಂಗಪ್ಪನವರು ಹಿಂದೂ ಧರ್ಮದ ವಿರುದ್ಧ ಮತ್ತು ಕನ್ನಡ ಸಾಹಿತ್ಯದ ವಿರುದ್ಧ ಮಾತನಾಡಿದಾಗ ಅದು ವಿವಾದಾತ್ಮಕವಾಯಿತು.[೮]

ಬಸವಲಿಂಗಪ್ಪನವರು ಆಳವಾಗಿ ಅಧ್ಯಯನ ಮಾಡುವುದರ ಮೂಲಕ ವೈಚಾರಿಕತೆಯನ್ನು ಬೆಳೆಸಿಕೊಂಡು ವಿದ್ಯಾರ್ಥಿ ದಿಶೆಯಿಂದಲೇ ದಲಿತ ನಾಯಕತ್ವವನ್ನು ವಹಿಸಿದವರಾಗಿದ್ದರು. ದಲಿತ ಚಳವಳಿಯ ಉಗಮಕ್ಕೆ ಕಾರಣೀಭೂತರಾದರು.

ಹೀಗೆ ಬಿ. ಬಸವಲಿಂಗಪ್ಪನವರು ಕನ್ನಡ ಸಾಹಿತ್ಯ ಬೂಸಾ ಎಂದು ಕರೆದುದರ ಪರಿಣಾಮವಾಗಿ ದಲಿತರೆಲ್ಲ ಒಂದಾಗಲು ಅವಕಾಶವಾಯಿತು. ಈ ಬೂಸಾ ಪ್ರಕರಣ ದೊಡ್ಡ ಕೋಲಾಹಲವನ್ನೇ ತಂದಿತು. ಈ ಸಂದರ್ಭದಲ್ಲಿ ಸ್ವಾಭಿಮಾನ ಆತ್ಮಸ್ಥೈರ್ಯ ಕಾಣಿಸಿಕೊಂಡವು. ಅಸ್ಪೃಶ್ಯರು ತಮ್ಮ ಜಾತಿಗಳ ಹೆಸರಿನೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವ ಕೆಚ್ಚು ತೋರಿದರು. ಹರಿಜನ ಎಂಬ ಪದವನ್ನು ಬಳಸಲು ನಿರಾಕರಿಸಿದರು. 'ನಾವು ಹರಿಯ ಮಕ್ಕಳಲ್ಲ, ನಾವು ಮನುಷ್ಯರ ಮಕ್ಕಳೇ' ಎಂಬ ದಲಿತಪ್ರಜ್ಞೆಯೊಂದಿಗೆ, ಸ್ವಾಭಿಮಾನದೊಂದಿಗೆ ದಲಿತ ಪದವನ್ನು ರೂಢಿಯಲ್ಲಿ ತಂದರು.

೭.೬. ದಲಿತ ಚಳವಳಿ ಮತ್ತು ಸಂಘಟನೆಗಳ ಉಗಮಕ್ಕೆ ಪ್ರೇರಣೆ

ದಲಿತ ಚಳವಳಿಯ ಐತಿಹಾಸಿಕ ಹಿನ್ನೆಲೆಯನ್ನು ಮೈಸೂರು ಸಂಸ್ಥಾನದಲ್ಲಿ ನಡೆದ ಬ್ರಾಹ್ಮಣೇತರ ಚಳವಳಿಯಲ್ಲಿ ವಿಸ್ತಾರವಾಗಿ ಕಾಣಬಹುದು. ಬ್ರಿಟೀಶರ ಆಡಳಿತದ ಅವಧಿಯಲ್ಲಿ ಕ್ರೈಸ್ತ ಮಿಷನರಿಗಳು ಮತಾಂತರದ ಉದ್ದೇಶದಿಂದ ಮೈಸೂರು ಸಂಸ್ಥಾನದ ದಲಿತರನ್ನು ಮೇಲೆತ್ತುವ ಪ್ರಯತ್ನಗಳನ್ನು ಮಾಡಿದ್ದಾರೆ. ಮೈಸೂರು ಒಡೆಯರ ಆಡಳಿತ ಈ ಸಂದರ್ಭದಲ್ಲಿ ದಲಿತರ ಬೆಳವಣಿಗೆಯಿಂದಾಗಿ ಇತರ ರಾಜ್ಯಗಳಿಗಿಂತ ಹೆಚ್ಚಿನ ಶ್ರೇಯಸ್ಸು ಗಳಿಸಿತ್ತು. ಅದಕ್ಕಾಗಿ ಬ್ರಿಟೀಶ್ ಸರಕಾರದಿಂದ ಪ್ರಶಂಸೆಯನ್ನು ಪಡೆದಿತ್ತು. ೧೯೦೫ರ ಸುಮಾರಿಗೆ ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಎನ್ನುವ ಪ್ರಜ್ಞೆ ಬೆಳೆದಿತ್ತು. ದಲಿತರನ್ನು ತಮ್ಮೊಂದಿಗೆ ಸೇರಿಸಿಕೊಂಡ ಬ್ರಾಹ್ಮಣೇತರರು

ನಾವು ಹೆಚ್ಚಿನ ಸಂಖ್ಯೆಯಲ್ಲಿದ್ದೇವೆಂದು ತೋರಿಸಲು ಮುಂದಾದರು. ಬ್ರಾಹ್ಮಣರಿಗೂ ಬ್ರಾಹ್ಮಣೇತರರಿಗೂ ಅಧಿಕಾರಕ್ಕಾಗಿ ಬಿರುಸಿನ ತಿಕ್ಕಾಟ ಪ್ರಾರಂಭವಾಯಿತು. ಈ ತಿಕ್ಕಾಟದಲ್ಲಿ ಬ್ರಾಹ್ಮಣೇತರರ ಬೇಡಿಕೆಗಳಿಗೆ ಮಣಿದು, ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವಂತಾಯಿತು. ಬ್ರಾಹ್ಮಣೇತರರು ಮೀಸಲಾತಿಯನ್ನು ಗಿಟ್ಟಿಸಿಕೊಂಡರು.[೯]

೧೯೧೮ರಲ್ಲಿ ಮೈಸೂರು ಸಂಸ್ಥಾನದಲ್ಲಿ ದಲಿತರಲ್ಲಿ ಜಾಗೃತಿ ಆರಂಭವಾಯಿತು. ಮೊದಲ ಬ್ರಾಹ್ಮಣೇತರರ ಚಳವಳಿಯು ೧೯೧೮ರಲ್ಲಿ ಜರುಗಿತು. ಈ ಚಳವಳಿಯ ಸಂದರ್ಭವನ್ನೇ ದಲಿತಪ್ರಜ್ಞೆಯ ಹಿನ್ನೆಲೆಯಲ್ಲಿ ಗಮನಿಸುವುದು ಅಗತ್ಯವಾಗಿದೆ. ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ, ಬ್ರಾಹ್ಮಣೇತರರು ತಮ್ಮನ್ನು ಜಾತಿವಾದಿಗಳು ಎಂದು ಕರೆದುಕೊಂಡು ಜಾತಿವಾರು ಪ್ರಾತಿನಿಧ್ಯಬೇಕು ಎಂದು ಹೋರಾಡಲು ಅಸ್ಪೃಶ್ಯರ ಬಲವನ್ನು ಗಿಟ್ಟಿಸಿಕೊಂಡಿದ್ದಾರೆ. ಆದರೆ ಈವರೆಗೂ ಮೀಸಲಾತಿಯನ್ನು ಸಮರ್ಥವಾಗಿ ಬಳಸಿಕೊಳ್ಳಾಗದ ದಲಿತರು 'ಮೀಸಲಾತಿಯ ಜನ' ಎಂಬ ಚುಚ್ಚುಮಾತಿಗೆ ಬಲಿಯಾಗುತ್ತಿದ್ದಾರೆ. ಆದರೆ ಯಾವ ಜನ ಹಿಂದೆ ಕೋಮುವಾರು ಪ್ರಾತಿನಿಧ್ಯಬೇಕು ಎಂದು ಕೋಮುಗಾರಿಕೆಯನ್ನು ಮುಂದು ಮಾಡಿ, ಲಾಭ ಪಡೆದು ಮುಂದೆ ಬಂದರೋ, ಅದೇ ಜನ ಇಂದು ದಲಿತರಿಗೆ ವಿರೋಧಿಗಳಾಗಿ ನಿಲ್ಲುತ್ತಿರುವುದು ಗಮನಿಸಿದರೆ ಚರಿತ್ರೆ ಮರಳಿ ನಕ್ಕಂತೆ ಭಾಸವಾಗುತ್ತಿವೆ.

ಮೊದಲ ಬ್ರಾಹ್ಮಣೇತರ ಚಳವಳಿಯ ಸಂದರ್ಭದಲ್ಲಿ ದಲಿತರು ತಾವು ಈ ನೆಲದ ಮೂಲನಿವಾಸಿಗಳೆಂದು ಗುರುತಿಸಿಕೊಂಡರು. ತಮ್ಮ ಕುಲ ಜಾಂಬವನೆಂದು ಗುರುತಿಸಿಕೊಂಡು, ಆದಿಜಾಂಬವ ಸಂಘ, ಆದಿದ್ರಾವಿಡ ಸಂಘ ಎಂದು ಸಂಘಗಳನ್ನು ಕಟ್ಟಿಕೊಂಡಿರುವುದು ಗಮನಿಸಿದರೆ ದಲಿತರಲ್ಲಿಯೇ ಪ್ರಜ್ಞೆ ಪ್ರಾರಂಭವಾದದ್ದು ಸ್ಪಷ್ಟವಾಗುತ್ತದೆ. ಈ ಸಂಘಗಳು ೧೯೦೫-೦೬ರಲ್ಲಿಯೇ ವೀರಶೈವ, ಒಕ್ಕಲಿಗ ಸಂಘಗಳೊಂದಿಗೆ ಪ್ರಾರಂಭವಾಗಿವೆ. ಒಡೆಯರ ಎದುರು ಬೇಡಿಕೆಯನ್ನು ಮುಂದಿಡುವಾಗ ಬ್ರಾಹ್ಮಣೇತರರ ಸಂಘಟನೆಗಳು ದಲಿತರನ್ನು ತಮ್ಮ ಬಲಸಂವರ್ಧನೆಗಾಗಿ ಬಳಸಿಕೊಂಡಿದ್ದಾರೆ ಮತ್ತು ಬೂಟಾಟಿಕೆಯ ಅಭಿವೃದ್ಧಿ ಮಾತುಗಳನ್ನು ಹೇಳಿರುವುದು ಕಂಡುಬರುತ್ತದೆಯೇ ವಿನಾ ಬೆಳವಣಿಗೆ ಮಾತ್ರ ಆಮೆಗತಿಗಿಂತಲೂ ದೂರಾಗಿತ್ತು ಎನ್ನುವುದಕ್ಕೆ ಇವತ್ತಿನ ಸ್ಥಿತಿಗತಿಗಳೇ ಸಾಕ್ಷಿಯಾಗಿ ನಿಲ್ಲುತ್ತವೆ. ೧೮೯೦ರ ದಶಕದಲ್ಲಿ ದಲಿತರಿಗೆ ಪ್ರತ್ಯೇಕ ಶಾಲೆಗಳು ಪ್ರಾರಂಭವಾದರೂ ಒಬ್ಬ ದಲಿತ ಮೆಟ್ರಿಕ್ಯುಲೇಶನ್ ಪಾಸಾಗಲು ೨೮ ವರ್ಷಗಳು(೧೯೧೮) ಬೇಕಾಗಿವೆ. ಪದವಿ ಮುಗಿಸಲು(೧೯೨೫) ೩೫ ವರ್ಷಗಳು ಬೇಕಾದವು. ಎಲ್ಲದರ ಮೇಲೆ ಪ್ರಭುತ್ವ ಸಾಧಿಸುತ್ತಿದ್ದ ಜಮೀನ್ದಾರರು ದಲಿತರನ್ನು ಆರ್ಥಿಕವಾಗಿ ಹೆಚ್ಚು ಶೋಷಿಸುತ್ತಿದ್ದು, ಅಸ್ಪೃಶ್ಯರ ಬಗೆಗೆ ಹೆಚ್ಚಿನ ಸಹಾನುಭೂತಿಯನ್ನು ಆಂತರಿಕವಾಗಿ ಹೊಂದಲಿಲ್ಲ. ದಲಿತರ ಸಮಸ್ಯೆಗಳ ಬಗೆಗೆ ಇಲ್ಲಿಯ ನಾಯಕರು ಮಾತನಾಡಿದರೂ ಆ ಮಾತುಗಳು ಮೊಸಳೆ ಕಣ್ಣೀರಿನಂತಾದವು. ರಾಜ್ಯದ ಶೇಕಡ ೬೫ರಷ್ಟು ಜನಸಂಖ್ಯೆಯನ್ನು ನಾವು ಪ್ರತಿನಿಧಿಸುತ್ತೇವೆ

ಎಂದು ಹೇಳಿಕೊಳ್ಳಲು ದಲಿತರನ್ನು ಬಳಸಿಕೊಂಡರು. ವಾಸ್ತವದಲ್ಲಿ ತಮ್ಮ ಜಾತಿಗಳ ಹಿತ ಸಾಧಿಸುವುದರಲ್ಲೇ ಹೆಚ್ಚು ಆಸಕ್ತಿಯನ್ನು ವಹಿಸಿದರು.

೧೯೨೪ರಲ್ಲಿ ಮೈಸೂರಿನಲ್ಲಿ ನಡೆದ ಸಮ್ಮೇಳನದಲ್ಲಿ ಮೊದಲ ಬಾರಿಗೆ ಅಸ್ಪೃಶ್ಯರೆಲ್ಲಾ ಒಟ್ಟಿಗೆ ಸೇರಿ ಗುರುತಿಸಿಕೊಳ್ಳಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ಅದಕ್ಕಿಂತಲೂ ಮುಖ್ಯವಾಗಿ ಇವರು ನಾವೆಲ್ಲ ಈ ನೆಲದ ಮೂಲನಿವಾಸಿಗಳೆಂದು ಅರಿತು ತಮ್ಮನ್ನು ಗುರುತಿಸಲು ಬಳಸುತ್ತಿರುವ ಜಾತಿಸೂಚಕ ಪಟ್ಟವನ್ನು ತೊರೆದು ಆದಿಕರ್ನಾಟಕ, ಆದಿದ್ರಾವಿಡ ಎಂದು ಕರೆದುಕೊಂಡಿದ್ದು ಮತ್ತು ತಮ್ಮನ್ನು ಅಂತೆಯೇ ಗುರುತಿಸಬೇಕೆಂದು ಮೈಸೂರು ಒಡೆಯರಲ್ಲಿ ಕೇಳಿಕೊಂಡಿದ್ದು ಮಹತ್ವದ ಹೆಜ್ಜೆಯಾಗಿದೆ. ಇದೇ ರೀತಿ ಬೇರೆ ಬೇರೆ ಕಡೆಗಳಲ್ಲಿಯೂ ದಲಿತರು ಒಗ್ಗೂಡಿರುವುದು ಮತ್ತು ತಾವು ಮೂಲ ನಿವಾಸಿಗಳು ಎಂದು ಗುರುತಿಸಿಕೊಂಡಿರುವುದು, ತಮ್ಮ ಏಳ್ಗೆ ಕುರಿತು ಹೋರಾಡಿರುವುದು ಕಂಡುಬರುತ್ತದೆ. ೧೯೦೦ರಿಂದ ೧೯೪೭ರವರೆಗೆ ನಡೆದ ದಲಿತರ ಹೋರಾಟದ ಸಂಕ್ರಮಣ ಕಾಲವಾಗಿ ನಿಲ್ಲುತ್ತದೆ.

ಸ್ವಾತಂತ್ರ್ಯ ನಂತರದ ಅವಧಿಯಲ್ಲಿ ಕೇವಲ ರಾಜಕೀಯ ವಿಚಾರಗಳಿಗೆ ಸಂಬಂಧಿಸಿದಂತೆ ಎರಡನೇ ತಲೆಮಾರಿನ ಅಕ್ಷರಸ್ಥ ದಲಿತರು ಹೋರಾಟ ನಡೆಸಿದರು. ದೇವರಾಜ ಅರಸರ ಆಳ್ವಿಕೆಯ ಕಾಲದಲ್ಲಿ ಅದಕ್ಕೆ ಹೊಸ ರಂಗು ಬಂತು. ಆಗ ಬಂದ ಹಾವನೂರು ಆಯೋಗದ ವರದಿ ಮಹತ್ವದ ಬದಲಾವಣೆಯನ್ನು ತಂದಿತು. ೧೯೭೯ರಲ್ಲಿ ಅಂಬೇಡ್ಕರ್ ಜಯಂತಿಯಂದು ಈ ವರದಿಯನ್ನು ಜಾರಿಯಲ್ಲಿ ತರಲು ವ್ಯವಸ್ಥಿತವಾದ ಆಂದೋಲನಕ್ಕೆ ಅವಕಾಶ ಸಿಕ್ಕಂತಾಯಿತು. ಇವರಲ್ಲಿ ಬಿ. ಬಸವಲಿಂಗಪ್ಪ, ಎಲ್.ಜಿ. ಹಾವನೂರು, ಮಲ್ಲಿಕಾರ್ಜುನ ಸ್ವಾಮಿ ಮುಂತಾದವರು ನೇತೃತ್ವವನ್ನು ವಹಿಸಿದ್ದರು. ಇದರ ಫಲವಾಗಿ ವರದಿ ಜಾರಿಗೆ ಬಂದು ಹೊಸ ಬದಲಾವಣೆಗೆ ಚಾಲನೆ ಸಿಕ್ಕಾಂತಾಯಿತು.

ದಲಿತರು ಒಗ್ಗೂಡಲು, ಹೋರಾಡುವ ಏಕತಾ ಮನೋಭಾವ ತಂದದ್ದು, ಬೂಸಾ ಚಳವಳಿ ಬಿ. ಬಸವಲಿಂಗಪ್ಪನವರು. ದಲಿತ ವಿದ್ಯಾರ್ಥಿಗಳ ಸಮಾರಂಭವೊಂದರಲ್ಲಿ ದಲಿತರನ್ನು ಗಮನದಲ್ಲಿಟ್ಟುಕೊಂಡು ಮಾತನಾಡುತ್ತಾ ಕನ್ನಡ ಸಾಹಿತ್ಯ ಬೂಸಾ ಎಂದು ಹೇಳಿದ್ದರ ಪರಿಣಾಮವಾಗಿ ಮೇಲ್ಜಾತಿಯ ಜನ ಒಂದಾದರು. ಬಸವಲಿಂಗಪ್ಪನವರು ಕ್ರಾಂತಿಕಾರಿ ವಿಚಾರದ ಬೆಳವಣಿಗೆ ಸಹಿಸದ ದಲಿತೇತರ ರಾಜಕಾರಣಿಗಳು ಗಲಾಟೆ ಎಬ್ಬಿಸುವಂತೆ ಮಾಡಿದರು.

ಈ ಸಂದರ್ಭದಲ್ಲಿ ಎರಡನೆಯ ತಲೆಮಾರಿನ ಅಕ್ಷರಸ್ಥ ದಲಿತರು ಮತ್ತು ದಲಿತ ವಿದ್ಯಾರ್ಥಿಗಳೆಲ್ಲಾ ಸಿಟ್ಟಿನ ದವಡೆಗೆ ತುತ್ತಾದರು. ಸಾಕಷ್ಟು ಹಿರಿಯ ಸಾಹಿತಿಗಳಿಂದ ಬೆಂಬಲ ಸಿಕ್ಕರೂ ಸಾಹಿತ್ಯದ ಕಾರಣಕ್ಕೆ ಬಸವಲಿಂಗಪ್ಪನವರು ಮಂತ್ರಿ ಪದವಿಯನ್ನು ಕಳೆದುಕೊಳ್ಳಬೇಕಾಯಿತು. ಈ ಘಟನೆ ರಾಜಕೀಯ ಪಲ್ಲಟವನ್ನು ಉಂಟುಮಾಡಿತು. ಈ ಘಟನೆಗಳೇ ಎರಡನೇ ತಲೆಮಾರಿನ ಅಕ್ಷರಸ್ಥ ದಲಿತರನ್ನು ಬಡಿದೆಬ್ಬಿಸಿದವು. ದಲಿತರಿಗೆ ಹೊಸ ಬಗೆಯ ಪ್ರಪಂಚವನ್ನು ಅರಿಯುವಂತೆ ಬೆರಗಾಗುವಂತೆ, ಚಿಂತನೆಗೆ ಎಡೆ ಮಾಡಿಕೊಟ್ಟಿತು.

ಈ ಸಂದರ್ಭದಲ್ಲಿ ದಲಿತರ ಹೋರಾಟ ಹಿಂಸೆಯ ವಿರುದ್ಧ ಸಿಡಿದು ನಿಲ್ಲಬೇಕಾದ ಸ್ಥಿತಿ ಅನಿವಾರ್ಯವಾಗಿ ಕಾಣಿಸಿಕೊಂಡಿತು. ಈ ಬಿಸಿ ಕರ್ನಾಟಕದಲ್ಲಿ ಎದ್ದುದ್ದರಿಂದ ಎಲ್ಲರ ಚಿಂತನೆಯ ಕೂಸಾಗಿ ೧೯೭೪ರಲ್ಲಿ 'ಕರ್ನಾಟಕ ದಲಿತ ಸಂಘರ್ಷ ಸಮಿತಿ' ರೂಪುಗೊಂಡಿತು. ಎಲ್ಲರ ಗಮನ ಸೆಳೆಯಿತು. ದಲಿತ ಸಂಘರ್ಷ ಸಮಿತಿ ಬರುವುದಕ್ಕಿಂತ ಮುಂಚಿತವಾಗಿ ದಲಿತರಿಗೆ ಯಾವುದೇ ಸಂಘಟನೆಗಳು ಇರಲಿಲ್ಲವೆಂದಲ್ಲ. ಸ್ವಾತಂತ್ರ್ಯಪೂರ್ವದಲ್ಲಿಯೇ ಆದಿಜಾಂಬವ ಸಂಘ, ಆದಿದ್ರಾವಿಡ ಸಂಘ, ಸಿವಿಕ್ ಅಂಡ್ ಸೋಶಿಯಲ್ ಪ್ರೋಗ್ರೆಸ್ ಅಸೋಸಿಯೇಶನ್ ಹೀಗೆ ಬೇರೆ ಬೇರೆ ಹೆಸರುಗಳಿಂದ ಸಂಘಟನೆಗಳಿದ್ದವು. ಇವು ಹೆಚ್ಚಾಗಿ ಸರಕಾರಿ ಸೌಲಭ್ಯ ಪಡೆಯುವುದಕ್ಕಾಗಿ ಮತ್ತು ಶೋಷಣೆಯ ವಿರುದ್ಧದ ಹೋರಾಟಗಳಿಗೆ ಸೀಮಿತವಾಗಿದ್ದವು.[೧೦]

ಬೂಸಾ ಪ್ರಕರಣದ ನಂತರದಲ್ಲಿ ಹುಟ್ಟಿಕೊಂಡ ಸಂಘಗಳು ಬೇರೆ ಬೇರೆ ಸ್ವರೂಪವನ್ನು ಪಡೆದುಕೊಂಡಿದ್ದವು. ೧೯೭೪ರಲ್ಲಿ ಎರಡನೆಯ ತಲೆಮಾರಿನ ಅಕ್ಷರಸ್ಥರಿಂದ ಭದ್ರಾವತಿಯಲ್ಲಿ ದಲಿತ ಸಂಘರ್ಷ ಸಮಿತಿಯು ಮೊದಲಿಗೆ ತನ್ನ ನೆಲೆಯನ್ನು ಕಂಡುಕೊಂಡಿತು.

ಆಂತರಿಕ ಹೋರಾಟಗಳು ತ್ವರಿತಗೊಂಡು ಇಲ್ಲಿಯ ದಲಿತರು ಒಗ್ಗಟ್ಟಿನ ಹೋರಾಟದಲ್ಲಿ ಮುಂದಾಗಿದ್ದನ್ನು ಕಾಣುತ್ತೇವೆ. ಹೀಗೆಯೇ ಇನ್ನುಳಿದ ಕಡೆಗಳಲ್ಲಿಯೂ ಇದೇ ಬಿಸಿ ಎದ್ದುದ್ದರಿಂದ ಎಲ್ಲರ ಚಿಂತನೆಯ ಕೂಸಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ರೂಪುಗೊಂಡಿತು. ೧೯೭೬ರ ಡಿಸೆಂಬರ್‌ನಲ್ಲಿ ಎಲ್ಲರ ಗಮನವನ್ನು ಸೆಳೆಯುವಂತೆ ದಲಿತ ಲೇಖಕರ ಮತ್ತು ಕಲಾವಿದರ ಸಮ್ಮೇಳನವನ್ನು ಭದ್ರಾವತಿಯಲ್ಲಿ ಮಾಡಿತು. ಅನಂತರದಲ್ಲಿ ದಲಿತ ವಿದ್ಯಾರ್ಥಿ ಒಕ್ಕೂಟ, ದಲಿತ ಮಹಿಳಾ ಒಕ್ಕೂಟ ಹೀಗೆ ಬೇರೆ ಬೇರೆ ಅಂಗಗಳನ್ನು ಹೊಂದಿತ್ತು.

ಹೀಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿಗೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಇಂದು ತನ್ನ ಅಸ್ತಿತ್ವವನ್ನು ಹೊಂದಿವೆ. ಅದೊಂದು ಬಲಿಷ್ಠ ಸಂಘಟನೆಯಾಗಿ ಕರ್ನಾಟಕ ದಲಿತ ಚಳವಳಿಗೆ ಪ್ರೇರಕಶಕ್ತಿಯಾಗಿ ಬೆಳೆದು ನಿಂತಿತು ಮತ್ತು ಯಶಸ್ಸನ್ನು ಕಂಡಿತು.

೭.೭. ದಲಿತ ಸಾಹಿತ್ಯದ ಉಗಮಕ್ಕೆ ಪ್ರೇರಣೆ

ದಲಿತ ಸಾಹಿತ್ಯ-ದಲಿತ ಚಳವಳಿ ಎಂದ ತಕ್ಷಣ ೧೯೭೦ರ ದಶಕ ನೆನಪಿಗೆ ಬರುತ್ತದೆ. ಆ ಮಟ್ಟಿಗೆ ಅವುಗಳ ಪ್ರಭಾವ ಇದೆ. ಆಧುನಿಕ ಕನ್ನಡ ಸಾಹಿತ್ಯ ಹಾಗೂ ಸಾಮಾಜಿಕ ಬದುಕಿನ ಮೇಲೆ ಗಣನೀಯ ಪ್ರಭಾವವನ್ನು ಬೀರಿರುವ ಇವುಗಳು ಹೊಸ ಆಯಾಮಕ್ಕೆ ಎಡೆ ಮಾಡಿಕೊಟ್ಟಿವೆ. ವಾಸ್ತವವಾಗಿ ದಲಿತರೆ ಈ ದೇಶದ ಮೂಲನಿವಾಸಿಗಳು. ಶ್ರಮಸಂಸ್ಕೃತಿಗೆ ಮತ್ತೊಂದು ಹೆಸರೆಂದರೆ ದಲಿತರದು. ಕೃಷಿಸಂಸ್ಕೃತಿಯ ಹುಟ್ಟಿಗೆ ಈ ನೆಲದ ಸಂಗತಿಗಳಾದ ದಲಿತರೆ ಕಾರಣ. ಹಾಗಾಗಿ ಈ ಭೂಮಿಯ ಕಳ್ಳು-ಬಳ್ಳಿಗಳಾದ ದಲಿತರೇ ಈ ನೆಲದ ನಿಜ ಸಾಂಸ್ಕೃತಿಕ ವಾರಸುದಾರರಾಗಿದ್ದಾರೆ. ಈ ಎಲ್ಲಾ ಹಿನ್ನೆಲೆಯಲ್ಲಿ ದಲಿತ ಸಾಂಸ್ಕೃತಿಕ ನೆಲೆಗಳು ಈ ದೇಶದ ಮೂಲ ಸಾಂಸ್ಕೃತಿಕ ನೆಲೆಗಳೇ ಆಗಿವೆ. ಶತಶತಮಾನಗಳಿಂದ ಅದುಮಿಟ್ಟುಕೊಂಡಿದ್ದ

ನೋವುಗಳು ೧೯೭೦ರ ದಶಕದಲ್ಲಿ ಸ್ಫೋಟಿಸಿದ್ದು ಒಂದು ಚಾರಿತ್ರಿಕ ದಾಖಲೆಯೇ ಆಗಿದ್ದರೂ ಕೂಡ, ಇಪ್ಪತ್ತನೆಯ ಶತಮಾನದ ಆದಿಯಲ್ಲಿಯೇ ದಲಿತ ಸಾಹಿತ್ಯದ ಹಿರಿಯ ತಲೆಮಾರಿನ ಲೇಖಕರು ಸಾಹಿತ್ಯಿಕ ಕೃಷಿ ಮಾಡಿರುವುದು ಗಮನಾರ್ಹವಾಗಿದೆ.[೧೧]

ದಲಿತ ಸಾಹಿತ್ಯ ಅಧಿಕೃತವಾಗಿ ಪ್ರಾರಂಭಗೊಂಡಿದ್ದು, ತೀರಾ ಇತ್ತೀಚೆಗೆ ಎಂಬುದು ನಿಜವಾದರೂ ಇದಕ್ಕಿಂತ ಪೂರ್ವದಲ್ಲಿಯೇ ದಲಿತರ ಪ್ರಸ್ತಾಪ ಅನೇಕ ಕೃತಿಗಳಲ್ಲಿ ಬಂದಿದೆ. ರಾಮಾಯಣದ ಶಂಭೂಕ, ಮಹಾಭಾರತದ ಏಕಲವ್ಯರು ಪ್ರಾಸಂಗಿಕವಾಗಿ ಚಿತ್ರಿತರಾಗಿದ್ದರೂ ಆ ಮೂಲಕ ದಲಿತರ ಸ್ಥಿತಿಗತಿಗಳನ್ನು ಅರಿಯಬಹುದಾಗಿದೆ. ಕರ್ಣನಂಥವರು ಜಾತಿ ಕಾರಣಕ್ಕೆ ಅನುಭವಿಸಿದ ಮೂಕಯಾತನೆ, ಪರಿಸ್ಥಿತಿಗಳ ಒತ್ತಡಕ್ಕೆ ಸಿಕ್ಕು ದುರಂತವನ್ನು ಪಂಪ ಕವಿ ಸಮರ್ಪಕವಾಗಿಯೇ ಚಿತ್ರಿಸಿದ್ದಾನೆ. ದಲಿತರನ್ನು ಹೊರತುಪಡಿಸಿ ಸಮಾಜವನ್ನು ಕಲ್ಪಿಸಿಕೊಳ್ಳಲೂ ಅಸಾಧ್ಯವೆಂಬುದನ್ನು ಈ ಸಾಹಿತ್ಯ ಕೃತಿಗಳು ಮನಗಾಣಿಸಿವೆ. ಹರಿಹರನಂಥವರು ದಲಿತರನ್ನು ಕುರಿತು ಕಾವ್ಯ ರಚನೆ ಮಾಡಿದುದನ್ನು ಇಲ್ಲಿ ನೆನೆಯಬಹುದು.

ಹರಿದಾಸರು ಸಾಮಾಜಿಕ ವಿಷಮತೆಯ ವಿರುದ್ಧ ದನಿ ಎತ್ತಿ ಹಾಡಿದುದೂ ಗಮನಾರ್ಹವೇ. ಕನಕದಾಸರ 'ರಾಮಧಾನ್ಯ ಚರಿತೆ' ದಲಿತನೊಬ್ಬನ ಎಚ್ಚರ, ಹೋರಾಟ ಮತ್ತು ವಿಜಯಗಳ ಕಥೆಯಂತಿರುವುದು ಇನ್ನೂ ಗಮನಾರ್ಹ. ಇವೆಲ್ಲ ಧಾರ್ಮಿಕ ನೆಲೆಯಲ್ಲಿ ನಡೆದ ಸುಧಾರಣಾ ಹಾದಿ ಎಂಬುದು ನಿಜವಾದರೂ ಆ ಕಾಲಕ್ಕೆ ದಲಿತರ ವಿಮೋಚನೆಗಾಗಿ ಸಾಹಿತ್ಯದ ಮೂಲಕವೂ ಪ್ರಯತ್ನ ನಡೆದುದಕ್ಕೆ ನಿದರ್ಶನಗಳಾಗಿವೆ.

ಇಂಥ ಪ್ರಯತ್ನಗಳು ಆಗೊಮ್ಮೆ ಈಗೊಮ್ಮೆ ಘಟಿಸುವ ಆಕಸ್ಮಿಕಗಳಾಗಿದ್ದವು ಅಷ್ಟೆ. ಏಕೆಂದರೆ ಸಮಾಜದ ಬಹುಪಾಲು ಜನವರ್ಗಕ್ಕೆ ಶಿಕ್ಷಣವನ್ನು ನಿರಾಕರಿಸಲಾಗಿತ್ತು. ಅಲ್ಲದೇ ಕೆಲವೇ ಜನ ಅದರ ಮೇಲೆ ಹಿಡಿತ ಸಾಧಿಸಿಕೊಂಡಿದ್ದರ ಪರಿಣಾಮವಾಗಿ ಬಹುಪಾಲು ಜನರ ಭಾವನೆಗಳು ಸಾಹಿತ್ಯ ಪ್ರಪಂಚಕ್ಕೆ ಎರವಾಗಬೇಕಾಯಿತು. ಸಾಹಿತ್ಯ ರಚನೆಯಲ್ಲಿ ಕೆಲವೇ ಕೆಲವು ಜನರು ಪಾಲು ಪಡೆದಿದ್ದರಿಂದ ಸಾಹಿತ್ಯದ ವ್ಯಾಪ್ತಿಯೂ ಅಷ್ಟರಮಟ್ಟಿಗೆ ಸೀಮಿತವಾಗಿತ್ತು. ಬದಲಾದ ಸಾಮಾಜಿಕ, ರಾಜಕೀಯ ಪರಿಸ್ಥಿತಿಗಳು, ಬ್ರಿಟಿಷರ ಆಳ್ವಿಕೆ, ಅಂಬೇಡ್ಕರ್, ಫುಲೆ ಮುಂತಾದವರ ಹೋರಾಟಗಳ ಪರಿಣಾಮವಾಗಿ ಅದುವರೆಗೆ ಶಿಕ್ಷಣದಿಂದ ವಂಚಿತರಾಗಿದ್ದ ಜನತೆಗೆ ಶಿಕ್ಷಣ ದೊರೆತು ತಮ್ಮ ತಮ್ಮ ಪರಿಸ್ಥಿತಿಗಳ ಅರಿವು ಮೂಡಲು ಸಾಧ್ಯವಾಯಿತು. ತಮ್ಮ ಇರುವಿಕೆ ಕುರಿತು ಜಾಗೃತಿ ಮೂಡುತ್ತಿದ್ದಂತೆಯೇ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸುವುದು ದಲಿತರಿಗೆ ಅನಿವಾರ್ಯವಾಗತೊಡಗಿತು. ಯಾವ ಇರುವಿಕೆಯನ್ನು ಅಸಹಾಯಕ ನೆಲೆಯಲ್ಲಿ ಮೌನವಾಗಿ ಒಪ್ಪಿಕೊಂಡಿದ್ದರೋ, ಪ್ರಜ್ಞೆ ಬಂದ ಮೇಲೆ ಅದರ ವಿರುದ್ಧ ದಲಿತರು ದನಿ ಎತ್ತತೊಡಗಿದರು. ಪಾರಂಪರಿಕವಾಗಿ ತಮ್ಮ ಮೇಲೆ ವಿಧಿಸಲ್ಪಟ್ಟಿದ್ದ ನಿರ್ಬಂಧಗಳಿಂದ ಬಿಡುಗಡೆ ಪಡೆಯಲು ದಲಿತರು ಯೋಚಿಸತೊಡಗಿದರು. ಮೊದಲ ತಲೆಮಾರಿನ ದಲಿತ ಸಾಹಿತಿಗಳು

ತಮ್ಮ ಕವನ ಕಥೆ, ಕಾದಂಬರಿಗಳ ಮೂಲಕ ಬಡತನ, ಸಿಟ್ಟು, ಅಸ್ಪೃಶ್ಯತೆ ಮುಂತಾದ ಅಂಶಗಳನ್ನೇ ತಮ್ಮ ಸಾಹಿತ್ಯದಲ್ಲಿ ಚಿತ್ರಿಸಿ ಆಕ್ರೋಶವನ್ನು ಹೊರಹಾಕಿದ್ದರು.[೨]

ಮೊದಲ ತಲೆಮಾರಿನ ದಲಿತ ಸಾಹಿತಿಗಳು ಹಾಗೂ ಅಂಬೇಡ್ಕರ್ ಅವರ ವಿಚಾರಧಾರೆಗಳ ಪ್ರಭಾವ ೭೦ರ ದಶಕದಲ್ಲಿ ಕೆಲವು ಕ್ರಾಂತಿಕಾರಕ ಬದಲಾವಣೆಗಳನ್ನು ಉಂಟುಮಾಡಿದವು. ಶಿಕ್ಷಣವು ಎರಡನೇ ತಲೆಮಾರಿನ ದಲಿತರ ಬದುಕಿನಲ್ಲಿ ಮಹತ್ವದ ಪಾತ್ರ ವಹಿಸಿತು. ಮೊದಲ ತಲೆಮಾರಿನ ಅಕ್ಷರಸ್ಥ ದಲಿತರು ಹೊರಬಂದು ಲೇಖನಿ ಹಿಡಿದದ್ದು, ಕತ್ತಲಾವರಿಸಿದ ಸಾಹಿತ್ಯ ರಂಗಕ್ಕೆ ಹೊಸ ಆಶಾಕಿರಣಗಳು ಮೂಡುವಂತಾದವು. ಗ್ರಾಮೀಣ ಪರಿಸರದಿಂದ ಬಂದ ದಲಿತರಿಗೆ ಜಾನಪದ ಕ್ಷೇತ್ರದಲ್ಲಿ ಅನಾಯಾಸವಾಗಿ ತಲೆ ಎತ್ತಿ ನಿಂತರು. ಜಾನಪದ ಅಧ್ಯಯನ, ಜನಾಂಗೀಯ ಅಧ್ಯಯನಗಳು ದಲಿತ ಸಾಹಿತ್ಯಕ್ಕೆ ಹೊಸ ಆಯಾಮವನ್ನು ಒದಗಿಸುವಲ್ಲಿ ಸಹಕರಿಸಿದವು. ಬೆಲ್ಚಿ ಪ್ರಕರಣ, ಮೀಸಲಾತಿ ವಿರೋಧಿ ಪ್ರಕರಣ, ಮತಾಂತರದ ಪ್ರಸಂಗಗಳು, ಭೂಹೋರಾಟದ ಪ್ರಸಂಗಗಳು, ಭೂ ಆಕ್ರಮಣದ ಪ್ರಸಂಗಗಳು, ಮಲ ತಿನ್ನಿಸಿದ ಪ್ರಕರಣ, ಬೆತ್ತಲೆಸೇವೆ ವಿರೋಧಿ ಪ್ರಕರಣ, ಚುನಾವಣಾ ಬಹಿಷ್ಕಾರ ಇಂಥ ಹಲವಾರು ಸಂದರ್ಭಗಳು ಚಳವಳಿಯನ್ನು ಸಾಹಿತ್ಯದ ಚಟುವಟಿಕೆಗೆ ಪೂರಕವಾಗಿ ಕೆಲಸ ಮಾಡಿವೆ. ಸಮಾಜದಲ್ಲಿನ ಅಸ್ಪೃಶ್ಯತಾಚರಣೆ, ಅನಿಷ್ಟಪದ್ಧತಿಗಳ ವಿರುದ್ಧ ಸಾಹಿತ್ಯ ಮುಖಾಂತರ ಜಾಗೃತಿ ಮೂಡಿಸಿ ಸಂಘಟನೆಗೊಳ್ಳಲು ದಲಿತ ಸಾಹಿತ್ಯ ರಚಿಸಿದ ದಲಿತ ಮತ್ತು ದಲಿತೇತರರು ಪ್ರಮುಖ ಪಾತ್ರ ವಹಿಸಿದರು.[೧೩]

ಹೀಗೆ ಮೈಸೂರು ಸಂಸ್ಥಾನದಲ್ಲಿ ಮೊದಲ ತಲೆಮಾರಿನ ದಲಿತ ಸಾಹಿತಿಗಳಿಂದ ಉಂಟಾದ ಕೃಷಿ ೭೦ರ ದಶಕದ ವೇಳೆಗೆ ಎರಡನೇ ತಲೆಮಾರಿನ ದಲಿತ ಬರಹಗಾರರಿಗೆ ಪ್ರೇರಣೆಯಾಗಿ ಬೃಹದಾಕಾರವಾಗಿ ಬೆಳೆಯಲು ಕಾರಣವಾಯಿತು. ಎಪ್ಪತ್ತರ ದಶಕದಲ್ಲಿದ್ದ ಆಲೋಚನಾ ಕ್ರಮಗಳಿಗೂ ೧೯ನೇ ಶತಮಾನದ ಆರಂಭದ ಕಾಲಘಟ್ಟದ ಚಿಂತನಾಕ್ರಮಕ್ಕೂ ಬಹಳಷ್ಟು ವ್ಯತ್ಯಾಸವಿದ್ದರೂ ವೈಚಾರಿಕವಾಗಿ, ಸಾಮಾಜಿಕವಾಗಿ ಸ್ವಲ್ಪಮಟ್ಟಿಗೆ ಬದಲಾವಣೆ ಆದದ್ದು ನಮ್ಮ ಗಮನಕ್ಕೆ ಬರುತ್ತದೆ.

೭.೮. ಪ್ರಸ್ತುತ ಸಂದರ್ಭದ ದಲಿತ ಚಳವಳಿ ಮತ್ತು ಸಂಘಟನೆಗಳ ವಿಶ್ಲೇಷಣೆ

ಮೊದಲ ತಲೆಮಾರಿನ ದಲಿತ ನಾಯಕರು ಮೈಸೂರು ಸಂಸ್ಥಾನದಲ್ಲಿ ಮೂಲಭೂತ ಅವಶ್ಯಕತೆಗಳಾದ ಶಿಕ್ಷಣ, ವಸತಿ, ಬಟ್ಟೆ, ಉದ್ಯೋಗ ಮುಂತಾದ ಸೌಲಭ್ಯಗಳಿಗಾಗಿ ಚಳವಳಿಗಳನ್ನು ಸಂಘಟನೆಗಳ ಮುಖಾಂತರ ನಡೆಸಿ ಅವುಗಳನ್ನು ಪಡೆಯುವಲ್ಲಿ ಯಶಸ್ವಿಯಾದರು. ತದನಂತರ ದಲಿತ ಚಳವಳಿ, ಸಂಘಟನೆಗಳು, ನಿಧಾನಗತಿಯಲ್ಲಿ ಸಾಗುತ್ತ ಬಂದು ೭೦ರ ದಶಕದಲ್ಲಿ ಎರಡನೇ ತಲೆಮಾರಿನ ಶಿಕ್ಷಣವಂತರಲ್ಲಿ ಅಂಬೇಡ್ಕರ್ ಅವರ ವಿಚಾರಧಾರೆಗಳು ಪ್ರವೇಶವಾದ ನಂತರ ದಲಿತ ಚಳುವಳಿಯ ದಿಕ್ಕೇ ಬದಲಾಯಿತು.

ದಲಿತ ಚಳವಳಿಯು ಬಾಬಾಸಾಹೇಬ್ ಅಂಬೇಡ್ಕರ್‌ರ ತತ್ವ-ವಿಚಾರ, ಪ್ರಭಾವ, ಪ್ರೇರಣೆಯನ್ನೊಳಗೊಂಡಿದ್ದರಿಂದ ದಲಿತರ, ದುಡಿಯುವ ಜನರ ಬಡತನ, ಹಸಿವು, ಅಸಮಾನತೆ, ದಾರಿದ್ರ್ಯ ದೂರ ಮಾಡಲು ಹೋರಾಟ ಮಾಡಬೇಕೆಂಬ ಚಳವಳಿಯಲ್ಲಿ ತೊಡಗಿಕೊಂಡವರ

ಮನದಾಸೆಯಾಗಿತ್ತು. ಅದರಂತೆ ಕೆಲಸವೂ ಮಾಡಿತು. ಹಲ್ಲೆ ನಡೆದಲ್ಲೆಲ್ಲ ತಕ್ಷಣ ಪ್ರತಿಕ್ರಿಯಿಸಿ ಚಳವಳಿ ನಡೆಸುವುದು ೧೯೮೦ರ ದಶಕದವರೆಗೂ ಇತ್ತು. ವಿದ್ಯಾರ್ಥಿಗಳು, ನೌಕರರು, ಮಹಿಳೆಯರು ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಹೋರಾಟವನ್ನು ಯಶಸ್ವಿಗೊಳಿಸುತ್ತಿದ್ದರು. ಎಂತಹ ಬಿಕ್ಕಟ್ಟಿನ ಸಮಸ್ಯೆ ಉದ್ಭವಿಸಿದರೂ ದಲಿತ ಚಳವಳಿಯು ಇನ್ನಿತರ ಪ್ರಗತಿಪರ ಸಂಘಟನೆಗಳೊಂದಿಗೆ ಒಂದಾಗಿ ಹೋರಾಟದಲ್ಲಿ ತೊಡಗುತ್ತಿತ್ತು. ಡಾ. ಬಿ.ಆರ್. ಅಂಬೇಡ್ಕರ್ ಅವರ 'ಶಿಕ್ಷಣ, ಸಂಘಟನೆ, ಹೋರಾಟ' ಎಂಬ ತ್ರಿವಳಿ ಸೂತ್ರಗಳನ್ನು ಚಾಚೂ ತಪ್ಪದೇ ಪಾಲಿಸಿತು. ದಲಿತ ಚಳವಳಿಯಲ್ಲಿದ್ದ ಬಂಡಾಯ ಮನೋಭಾವ ದಲಿತಪ್ರಜ್ಞೆ ನವಸಮಾಜ ನಿರ್ಮಿಸುವ ಕನಸು ಮೆಚ್ಚುವಂತಹದಾಗಿತ್ತು. ಹೀಗೆ ೮೦ರ ದಶಕದಲ್ಲಿ ಉನ್ನತ ಹಂತವನ್ನೇ ತಲುಪಿದ ದಲಿತ ಚಳವಳಿ ಕ್ರಮೇಣ ರಾಜಕೀಯ ಕುತಂತ್ರಕ್ಕೆ ಹಾಗೂ ಸ್ವಾರ್ಥಕ್ಕೆ ಬಲಿಯಾಗಿ ಸಾವಿರಾರು ಸಂಘಟನೆಗಳಾಗಿ ದಲಿತ ಚಳವಳಿಯ ದಿಕ್ಕೇ ಬದಲಾಗತೊಡಗಿತು.[೧೪]

ದಲಿತ ಸಂಘಟನೆಗಳಲ್ಲಿ ರಾಜಕೀಯ ಪ್ರವೇಶವಾದ ನಂತರ ಆರಂಭದಲ್ಲಿ ಇದ್ದ ಸ್ಫೂರ್ತಿ, ಹೋರಾಟ, ಒಗ್ಗಟ್ಟು ದಲಿತ ಸಂಘಟನೆಗಳಲ್ಲಿ ಕ್ರಮೇಣ ಕಡಿಮೆಯಾಗುತ್ತಾ ಬಂದಿತು. ಸಂಘಟನೆಯ ಮುಂಚೂಣಿಯಲ್ಲಿದ್ದ ನಾಯಕರು ತಮಗೆ ಸಿಕ್ಕಿದ ಕೆಲವು ಕನಿಷ್ಠ ಸೌಲಭ್ಯಗಳಿಗೆ ಮಾರುಹೋಗಿ ಸಂಘಟನೆಯನ್ನು ಬಲಪಡಿಸುವಲ್ಲಿ ವಿಫಲರಾದರು. ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಸವರ್ಣೀಯ ನಾಯಕರು ಎಡ, ಬಲಗಳೆಂದು ದಲಿತರನ್ನು ಪ್ರತ್ಯೇಕಿಸಿ ಒಡೆದು ಆಳುವ ನೀತಿ ಅನುಸರಿಸಿ ದಲಿತ ಚಳವಳಿಯ ಕಾವನ್ನು ಕಡಿಮೆ ಮಾಡಿದರು.

ಕೆಲವು ಆಸೆ ಆಮಿಷಗಳಿಗೆ ಬಲಿಯಾದ ಕೆಲ ದಲಿತ ನಾಯಕರು ತಮ್ಮ ಕಾರ್ಯ ಚಟುವಟಿಕೆಗಳನ್ನು ಸ್ಥಗಿತಗೊಳಿಸುತ್ತಾ ಬಂದರು. ಅವರಲ್ಲಿ ನಾಯಕತ್ವಕ್ಕಾಗಿ ಪೈಪೋಟಿ, ಹಣ ದುರುಪಯೋಗ, ಅಧಿಕಾರ ದುರುಪಯೋಗದಿಂದಾಗಿ ಸಂಘಟನೆಯ ಒಗ್ಗಟ್ಟಿನಲ್ಲಿ ಬಿರುಕು ಮೂಡತೊಡಗಿತು. ಒಬ್ಬರನ್ನೊಬ್ಬರು ಕಾಲೆಳೆಯುವ ಪ್ರವೃತ್ತಿ, ಹೊಟ್ಟೆಕಿಚ್ಚು ಮತ್ತು ಅಸೂಯೆ ಭಾವನೆಗಳಿಂದಾಗಿ ತಮ್ಮ ಮೂಲ ಉದ್ದೇಶಗಳನ್ನೇ ಮರೆತು ಕೆಲವು ನಾಯಕರು ತಮ್ಮ ಸ್ವಾರ್ಥ ಸಾಧನೆಗಾಗಿ ಸಂಘಟನೆಗಳನ್ನು ವ್ಯಕ್ತಿಗತ ಮಾಡುತ್ತಾ ಬಂದರು. ಕೆಲವು ಸಂಘಟನೆಗಳು ಕೇವಲ ಲೆಟರ್‌ಹೆಡ್ ಸಂಘಟನೆಗಳಾಗಿ ಉಳಿಯತೊಡಗಿದವು. ಇನ್ನೂ ಕೆಲವು ಸಂಘಟನೆಗಳು ಅದರ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳಿಗೆ ಸೀಮಿತಗೊಂಡವು. ನಿರ್ದಿಷ್ಟ ಕಾರ್ಯಕ್ರಮವಿಲ್ಲದ ಕಾರಣ ಹಾಗೂ ನಾಯಕರ ಒಳಜಗಳದಿಂದ ಬೇಸತ್ತ ಸದಸ್ಯರು ಸಂಘಟನೆಯನ್ನು ಬೆಳೆಸುವ ನಿಟ್ಟಿನಲ್ಲಿ ಆಸಕ್ತಿಯನ್ನು ಕಳೆದುಕೊಂಡರು.[೧೫]

ಈ ಬೆಳವಣಿಗೆಯಿಂದಾಗಿ ರಾಷ್ಟ್ರ ಮತ್ತು ರಾಜ್ಯಮಟ್ಟದಲ್ಲಿ ಸಾವಿರಾರು ಸಂಖ್ಯೆಯಲ್ಲಿರುವ ದಲಿತ ಸಂಘಟನೆಗಳು ಒಟ್ಟಾಗಿ ಒಂದು ಬಲವಾದ ಒಕ್ಕೂಟವನ್ನು ಕಟ್ಟುವುದರಲ್ಲಿ ಸೋತವು. ಅಂಬೇಡ್ಕರ್ ಅವರ ಭಾವಚಿತ್ರವನ್ನು ತಮ್ಮ ಸ್ವಾರ್ಥ ಬೆಳವಣಿಗೆಗೆ ಮಾತ್ರ ಉಪಯೋಗಿಸಿಕೊಳ್ಳ ತೊಡಗಿದವು. ಈ ರೀತಿಯಲ್ಲಿ ಕೆಲವು ಸಂಘಟನೆಗಳ ಪ್ರಸ್ತುತ ಸಂದರ್ಭದಲ್ಲಿ ಕಾರ್ಯ ನಿರ್ವಹಿಸುತ್ತಿರುವುದನ್ನು ಗಮನಿಸಬಹುದಾಗಿದೆ.

ಒಟ್ಟಾರೆಯಾಗಿ ಮೈಸೂರು ಸಂಸ್ಥಾನದಲ್ಲಿ ನಡೆದ ಹಲವಾರು ಸಾಮಾಜಿಕ ಹೋರಾಟಗಳು ದಲಿತರ ಸ್ಥಿತಿಗತಿಯಲ್ಲಿ ಬದಲಾವಣೆ ಉಂಟಾಗಲು ಸಹಕಾರಿಯಾಯಿತು. ಅಂದಿನ ಪುರೋಹಿತಶಾಹಿ ವ್ಯವಸ್ಥೆಯ ಸಂದರ್ಭದಲ್ಲಿ ದಲಿತ ವರ್ಗಗಳು 'ಶಿಕ್ಷಣ, ಸಂಘಟನೆ, ಹೋರಾಟ' ಎಂಬ ಅಂಬೇಡ್ಕರ್ ಅವರ ಅಂಶಗಳನ್ನು ಬಿತ್ತಿದರ ಫಲವೇ ಹಂತ ಹಂತವಾಗಿ ಬೆಳೆದು ೧೯೭೦ರ ದಶಕದಲ್ಲಿ ಹೆಮ್ಮರವಾಗಿ ಬೆಳೆಯಲು ಮೈಸೂರು ಸಂಸ್ಥಾನದ ಮೊದಲ ತಲೆಮಾರಿನ ದಲಿತ ಶಿಕ್ಷಣವಂತರು, ಹೋರಾಟಗಾರರೇ ಕಾರಣ.

ಇವರ ನಿಸ್ವಾರ್ಥ ಹೋರಾಟ ದಲಿತ ಸಮುದಾಯಗಳಲ್ಲಿ ಸಂಘಟನಾತ್ಮಕ ಮನೋಭಾವನೆ ಮೂಡಿಸಿ ತಮ್ಮ ಮೂಲಭೂತ ಸೌಲಭ್ಯಗಳನ್ನು ಪಡೆಯಲು ನೆರವಾದವು. ತದನಂತರ ಬಂದ ದಲಿತ ಚಳವಳಿ ಸಂಘಟನೆಗಳು ಯಾವುದೇ ಆಸೆ-ಆಕಾಂಕ್ಷೆಗಳಿಗೆ ಬಲಿಯಾಗದೇ ತಮ್ಮ ಸಮುದಾಯದ ಹಿತಕ್ಕಾಗಿ ದುಡಿದವು. ಆದರೆ ಪ್ರಬಲ ವರ್ಗಗಳ ಕುತಂತ್ರದಿಂದ ಹಾಗೂ ರಾಜಕೀಯ ಪ್ರವೇಶದಿಂದ ಪ್ರಸ್ತುತ ಸಂದರ್ಭದ ಸಂಘಟನೆಗಳಲ್ಲಿ ಬಿರುಕು ಮೂಡಿ ಎಡ-ಬಲಗಳೆಂದು ಸಮುದಾಯಗಳನ್ನೇ ಒಡೆಯುವ ಕೆಲಸವನ್ನು ಮಾಡಿ ಇವರ ಕಿತ್ತಾಟದಲ್ಲಿ ಇತರ ಕೋಮುಗಳ ತಮ್ಮ ಬೇಳೆಯನ್ನೇ ಬೇಯಿಸಿಕೊಳ್ಳುತ್ತಿರುವುದನ್ನು ಕಾಣುತ್ತಿದ್ದೇವೆ. ದಲಿತ ಸಮುದಾಯದ ಅಭಿವೃದ್ಧಿಗೆ ಎಲ್ಲಾ ದಲಿತವರ್ಗಗಳು ಒಗ್ಗೂಡಿದರೆ ದಲಿತ ಸಮುದಾಯ ಉತ್ತಮ ಪ್ರಗತಿಯನ್ನು ಸಾಧಿಸಿ ಸಮಾಜದಲ್ಲಿ ಉನ್ನತಮಟ್ಟವನ್ನು ತಲುಪುವುದರಲ್ಲಿ ಯಾವುದೇ ಸಂಶಯವಿಲ್ಲ.

೭.೯. ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ ಚಿಂತನೆಗಳು ಕನ್ನಡಿಗರಿಗೆ ಒದಗಿದ ಸಂದರ್ಭ

ಅಂಬೇಡ್ಕರ್ ಅವರ ಚಿಂತನೆಗಳು ಇಂದು ಕೇವಲ ಭಾರತದಲ್ಲಷ್ಟೇ ಅಲ್ಲ, ವಿಶ್ವದ ಉದ್ದಗಲಕ್ಕೂ ವ್ಯಾಪಿಸಿರುವುದನ್ನು ಗಮನಿಸಬಹುದು. ಇವರ ಬಗೆಗಿನ ಲೇಖನ, ಇವರ ಕೃತಿಗಳ ಅನುವಾದ ಅನೇಕ ಭಾಷೆಗಳಲ್ಲಿ ಆಗುತ್ತಿದೆ. ಇವರ ವಿಚಾರಧಾರೆಗಳು ಇಂದು ಎಲ್ಲಾ ಪ್ರಕಾರಗಳಲ್ಲಿಯೂ ಕಾಣಿಸಿಕೊಂಡಿದೆ. ಒಂದು ಕಾಲದಲ್ಲಿ ಅಂಬೇಡ್ಕರ್ ಸಾಹಿತ್ಯವನ್ನು ಅಸ್ಪೃಶ್ಯವೆಂದು ಭಾವಿಸಿ ಇವರ ಕೃತಿಗಳನ್ನು ಓದುವುದು ಹೀನತೆಯ ದ್ಯೋತಕವೆಂದು ಭಾವಿಸಲಾಗುತ್ತಿತ್ತು. ಆದರೆ ಇಂದು ಬಾಬಾಸಾಹೇಬರ ವಿಚಾರಧಾರೆಗಳ ಮೌಲ್ಯವನ್ನು ಅರಿತ ಪ್ರಗತಿಪರರು, ದಲಿತ ಚಿಂತಕರು ಅವರ ಸಂಶೋಧನಾತ್ಮಕ ಸಾಹಿತ್ಯವನ್ನು ಎಲ್ಲಾ ಸಮುದಾಯಗಳಿಗೂ ತಲುಪುವ ಕಾರ್ಯವನ್ನು ಮಾಡುತ್ತಿದ್ದಾರೆ. ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಈ ಎಲ್ಲಾ ಕ್ಷೇತ್ರಗಳಲ್ಲಿನ ಬಾಬಾಸಾಹೇಬರ ಆಲೋಚನಕ್ರಮ, ಸಂಶೋಧನೆ ಪ್ರತಿಯೊಂದು ಸಮುದಾಯಗಳಲ್ಲಿನ ಶೋಷಿತರ ಪರವಾದ ಚಿಂತನೆಗಳಿರುವುದನ್ನು ಅವರ ವಿಚಾರಧಾರೆಗಳನ್ನು ತಿಳಿಯುವುದರಿಂದ ಮಾತ್ರ ಅವರೊಬ್ಬ ಕೇವಲ ದಲಿತ ನಾಯಕರಲ್ಲ ಎಲ್ಲ ಶೋಷಿತ

ಸಮುದಾಯಗಳ ನಾಯಕರೆಂಬುದು ಸ್ಪಷ್ಟವಾಗುತ್ತದೆ. ಕೆಲ ಕುತಂತ್ರ ರಾಜಕಾರಣಿಗಳು, ಬ್ರಾಹ್ಮಣ್ಯ ತುಂಬಿದ ಮನಸ್ಸುಗಳು ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಜಾತಿಗೆ ಸೀಮಿತಗೊಳಿಸಿ ಅವರ ವಿಚಾರಧಾರೆಗಳನ್ನು ಮುಚ್ಚಿಡುವ ಪ್ರಯತ್ನ ಮಾಡಿರುವುದು ವಿಷಾದದ ಸಂಗತಿಯಾಗಿದೆ. ಕೇವಲ ಅವರನ್ನು ಜಾತಿಗೆ ಸೀಮಿತಗೊಳಿಸದೆ ಎಲ್ಲಾ ಸಮುದಾಯಗಳ ಪರವಾದ ರಾಷ್ಟ್ರನಾಯಕರಾಗಿ ಪ್ರಸ್ತುತ ಸಂದರ್ಭದಲ್ಲಿ ನೋಡಬೇಕಾಗಿದೆ.

ಡಾ. ಬಿ.ಆರ್. ಅಂಬೇಡ್ಕರ್ ಅವರ ಚಿಂತನೆಗಳು ಕನ್ನಡರಿಗೆ ೧೯೭೦ರ ದಶಕದಲ್ಲಿ ಒದಗಿಬಂದವು. ದಲಿತ ಚಿಂತಕರಾದ ಡಾ. ಎನ್. ಚಿನ್ನಸ್ವಾಮಿ ಸೋಸಲೆ ಅವರು ಅಭಿಪ್ರಾಯ ಪಡುವ ಹಾಗೆ ಅಂಬೇಡ್ಕರ್ ಅವರು ಯಾರ ಪರ ಬರೆದರೋ ಅವರಿಗೆ ಓದುವುದು ಗೊತ್ತಿರಲಿಲ್ಲ. ಯಾರ ವಿರುದ್ಧ ಬರೆದರೋ ಅವರು ಓದುವ ಗೋಜಿಗೆ ಹೋಗಲಿಲ್ಲ ಎಂದು ಹೇಳಿರುವ ಮಾತು ಪ್ರಸ್ತುತ ಸಂದರ್ಭಕ್ಕೂ ಕನ್ನಡಿ ಹಿಡಿದಂತಿದೆ. ಹಾಗಾಗಿ ಅಂಬೇಡ್ಕರ್ ಅವರ ಚಿಂತನೆಗಳು ಕನ್ನಡಿಗರಿಗೆ ನಿಧಾನವಾಗಿ ತಲುಪಿದವು. ಎರಡನೇ ತಲೆಮಾರಿನ ದಲಿತ ಶಿಕ್ಷಣವಂತರು ಹಾಗೂ ಪ್ರಗತಿಪರ ಚಿಂತಕರು ಇವರ ಚಿಂತನೆಗಳನ್ನು ಕನ್ನಡಿಗರಿಗೆ ಪರಿಚಯಿಸುವ ಕಾರ್ಯ ಮಾಡಿದರು. ಕನ್ನಡಕ್ಕೆ ಅಂಬೇಡ್ಕರ್ ಸಾಹಿತ್ಯದ ವಾಸ್ತವ, ನಿಜ ಹಾಗೂ ಸಂಶೋಧನಾತ್ಮಕ ವಿಚಾರಗಳನ್ನು ಅನುವಾದಿಸಿದರು. ಇದು ಓದುಗರನ್ನು ಬಹುಬೇಗ ಆಕರ್ಷಿಸಿ ಅಂಬೇಡ್ಕರ್ ಪ್ರಭಾವ ಉಂಟಾಗಲು ಸಹಕಾರಿಯಾಯಿತು. ಅಂಬೇಡ್ಕರ್ ಸಾಹಿತ್ಯ ಓದುಗರ ಮನಸ್ಸನ್ನು, ಮೆದುಳನ್ನು ಕೊರೆಯಲು ಪ್ರಾರಂಭಿಸಿತು. ಇವರ ಪ್ರಭಾವ ಕೇವಲ ಸಾಹಿತ್ಯ ಕ್ಷೇತ್ರದಲ್ಲಷ್ಟೇ ಅಲ್ಲ, ಮನುಷ್ಯನ ದೈನಂದಿನ ಸಂದರ್ಭದಲ್ಲಿಯೂ ಸ್ಪಷ್ಟವಾಗತೊಡಗಿತು. ಪರಿಣಾಮವಾಗಿ ಇದು ಇಂದಿನ ಅಂಬೇಡ್ಕರ್ ಯುಗಕ್ಕೆ ಕಾರಣವಾಯಿತು.

ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿ ಉಗಮಗೊಂಡ ಮೇಲೆ ಅಂಬೇಡ್ಕರ್ ಅವರ ಶಿಕ್ಷಣ, ಸಂಘಟನೆ, ಹೋರಾಟ, ಈ ಅಂಶಗಳ ಅಡಿಯಲ್ಲಿ ತನ್ನ ಹೋರಾಟವನ್ನು ಪ್ರಾರಂಭಿಸಿತು. ಆರಂಭದ ಹಂತದಲ್ಲಿ ದಲಿತ ಸಂಘರ್ಷ ಸಮಿತಿಯ ಸದಸ್ಯರು ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಅರಿತಿದ್ದರು. ದಲಿತರ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಹೋರಾಟ ನಡೆಸಿ ಅಂಬೇಡ್ಕರ್ ಚಿಂತನೆಗಳನ್ನು ಸಾಕಾರಗೊಳಿಸಲು ಪ್ರಯತ್ನಿಸಿದರು.

ಆರಂಭ ಘಟ್ಟದಲ್ಲಿ ಅಂಬೇಡ್ಕರ್ ಚಿಂತನೆಗಳನ್ನು ಅಳವಡಿಸಿಕೊಂಡ ದಲಿತೇತರರು ಸಹ ಡಿ.ಎಸ್.ಎಸ್. ಹೋರಾಟದಲ್ಲಿ ಕೈ ಜೋಡಿಸಿ ಚಳವಳಿಗಳು ಯಶಸ್ವಿಯಾಗುವಂತೆ ಮಾಡಿದರು. ತದನಂತರ ರಾಜಕೀಯ ಕುತಂತ್ರಕ್ಕೆ ಸಂಘಟನೆ ಬಲಿಯಾಗಿ ಅಂಬೇಡ್ಕರ್ ಚಿಂತನೆಗಳು ಮಾಯವಾಗಿ ಅಂಬೇಡ್ಕರ್ ಅವರನ್ನು ಉತ್ಸವಮೂರ್ತಿಯನ್ನಾಗಿ ಮಾಡಿದರು. ಏಕೆಂದರೆ ಅಂಬೇಡ್ಕರ್ ಅವರನ್ನು ರಾಷ್ಟ್ರನಾಯಕರೆಂದು ಒಪ್ಪಿಕೊಳ್ಳದ ಬ್ರಾಹ್ಮಣ್ಯ ತುಂಬಿದ ಮನಸ್ಸುಗಳು ಅವರನ್ನು ಕೇವಲ ದಲಿತ ನಾಯಕರಂತೆಯೇ ಬಿಂಬಿಸಲು ಪ್ರಯತ್ನಿಸಿದರು.

ಅಂಬೇಡ್ಕರ್ ಚಿಂತನೆ, ವಿಚಾರಧಾರೆಗಳನ್ನು ಅವರು ಮಾಡಿದ ಅಸ್ಪೃಶ್ಯತಾ ವಿರೋಧಿ ಹೋರಾಟಗಳನ್ನು ತಿಳಿಯದ ದಲಿತ ನಾಯಕರು ಅವರನ್ನು ಶೋಷಕ ಹೊಗಳುವ ರೀತಿಯಲ್ಲಿ ಹೊಗಳುತ್ತಾ, ವೈಭವೀಕರಿಸುತ್ತ ಬರುತ್ತಿದ್ದರೆ ಅವರನ್ನು ದೇವರ ವಿಗ್ರಹವನ್ನಾಗಿಸಿ ಪೂಜೆ ಮಾಡುತ್ತಾ ಅವರ ಚಿಂತನೆಗಳನ್ನು ಬಲಿ ಕೊಡುತ್ತಾ ಬರುತ್ತಿದ್ದಾರೆ.

ದೇಶದಲ್ಲಿಯೇ ಬಾಬಾಸಾಹೇಬ್ ಅಂಬೇಡ್ಕರ್ ಅವರ ಪ್ರತಿಮೆ ಆಗಿರುವಷ್ಟು ಇನ್ಯಾವಾ ನಾಯಕರ ಪ್ರತಿಮೆಗಳು ಕಂಡುಬರುವುದಿಲ್ಲ. ಆದರೆ ಈ ವಿಚಾರದಲ್ಲಿ ಕಾಡುವ ಪ್ರಶ್ನೆ ಎಂದರೆ, ಒಂದು ಕಡೆ ಅಂಬೇಡ್ಕರ್ ಪ್ರತಿಮೆಗಳನ್ನು ಸ್ಥಾಪಿಸಲಾಗುತ್ತಿದೆ. ಮತ್ತೊಂದು ಕಡೆ ಆ ಪ್ರತಿಮೆಗಳಿಗೆ ಅಪಮಾನ ಮಾಡಲಾಗುತ್ತಿದೆ. ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಿ ಎಂದು ಹೋರಾಟ ಮಾಡುವವರೂ ದಲಿತರೆ. ಅದಕ್ಕೆ ಅಪಮಾನ ಮಾಡಿದ ಮೇಲೆ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿ ಎಂದು ಕೇಳುವವರೂ ದಲಿತರೇ ಎಂಬ ಅಂಶವನ್ನು ದಲಿತ ಚಿಂತಕರಾದ ಡಾ. ಎನ್. ಚಿನ್ನಸ್ವಾಮಿ ಸೋಸಲೆ ಅವರು 'ದಲಿತ ಚರಿತ್ರೆಯಲ್ಲಿ ರಚನೆಯಲ್ಲಿ ಕಾಡಲೇಬೇಕಾದ ಪ್ರಶ್ನೆಗಳು' ಎಂಬ ಕೃತಿಯಲ್ಲಿ ಸಮಗ್ರವಾಗಿ ಚರ್ಚಿಸಿದ್ದಾರೆ. ಕಳೆದ ೩೦-೪೦ ವರ್ಷಗಳ ಅವಧಿಯಲ್ಲಿ ದಲಿತರು ಈ ವಿಷಯಗಳಿಗಾಗಿ ಮಾಡಿರುವ ಹೋರಾಟ, ಹೂಡಿರುವ ಶ್ರಮ, ಹಾಕಿರುವ ಪ್ರಯತ್ನ ಬಹಳ ದೊಡ್ಡದು. ಈಗಲೂ ಅಂಬೇಡ್ಕರ್ ಅವರನ್ನು ಸಾಂಕೇತಿಕವಾಗಿ ರಕ್ಷಿಸುವ ಅಥವಾ ಕಾಯುವ ಕಾಯಕದಲ್ಲಿ ದಲಿತರು ತೊಡಗಿದ್ದಾರೆ. ಶೋಷಕ ವ್ಯವಸ್ಥೆ ಅಂಬೇಡ್ಕರ್ ಅವರನ್ನು ಸಾಂಕೇತಿಕವಾಗಿ ಕಾಯುವ ಕೆಲಸವನ್ನು ದಲಿತರಿಗೆ ವಹಿಸಿಕೊಟ್ಟಿದೆ.

ದಲಿತರು ಇಂದು ಅಂಬೇಡ್ಕರ್ ಅವರನ್ನು ಕೇವಲ ಮೂರ್ತಿ ಪೂಜೆಗೆ ಸೀಮಿತಗೊಳಿಸದೆ ಅವರ ವಿಚಾರಧಾರೆಗಳನ್ನು ಅರಿಯುವ ಕೆಲಸ ಮಾಡಬೇಕಾಗಿದೆ. ಬಾಬಾಸಾಹೇಬರ ಚಿಂತನೆಗಳನ್ನು ಇಂದು ಸಮಾಜದ ಪ್ರತಿಯೊಬ್ಬರಿಗೂ ತಲುಪಿಸುವ ಕಾರ್ಯವನ್ನು ಕರ್ನಾಟಕದ ಮಟ್ಟಿಗೆ ಅವರ ಚಿಂತನೆ, ಆಲೋಚನ ಕ್ರಮವನ್ನು ಮೈಗೂಡಿಸಿಕೊಂಡು ಬಂದ ಪ್ರಮುಖ ದಲಿತ ಚಿಂತಕರಾದ ಡಾ. ಸಿದ್ಧಲಿಂಗಯ್ಯ, ದೇವನೂರು ಮಹಾದೇವ, ಡಾ. ಎನ್. ಚಿನ್ನಸ್ವಾಮಿ ಸೋಸಲೆ, ಕೆ.ಬಿ. ಸಿದ್ಧಯ್ಯ, ಬಿ.ಎಂ. ಪುಟ್ಟಯ್ಯ ಹೀಗೆ ಅನೇಕ ಬುದ್ಧಿಜೀವಿಗಳು ತಮ್ಮ ಕೃತಿಗಳ ಮುಖಾಂತರ ಅಂಬೇಡ್ಕರ್ ಆಲೋಚನೆಗಳ ಪ್ರಜ್ಞೆಯನ್ನು ಮೂಡಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ವಿಶೇಷವಾಗಿ ಡಾ. ಎನ್. ಚಿನ್ನಸ್ವಾಮಿ ಸೋಸಲೆ ಅವರು ತಮ್ಮ ಇತ್ತೀಚಿನ ಕೃತಿಗಳಲ್ಲಿ ಅಂಬೇಡ್ಕರ್ ಅವರ ಚಿಂತನೆಗಳನ್ನು ಸರಳ ಮತ್ತು ಸ್ಪಷ್ಟವಾಗಿ ಸಾಮಾನ್ಯ ಓದುಗನಿಗೂ ತಲುಪಿಸುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ತಮ್ಮ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಕೊಂಡ ದಲಿತ ಸಮಸ್ಯೆಗಳನ್ನು ಸಮಗ್ರವಾಗಿ ಚರ್ಚಿಸಿ ಅದಕ್ಕೆ ಪರಿಹಾರೋಪಾಯಗಳನ್ನು ಅಂಬೇಡ್ಕರ್ ಅವರ ಸಂವಿಧಾನದ ಆಶಯದ ನೆಲೆಯಲ್ಲಿ ನೀಡುತ್ತಿರುವುದು ಗಮನಾರ್ಹವಾಗಿದೆ ಹಾಗೂ ಅಂಬೇಡ್ಕರ್ ಅವರನ್ನು ಓದುವ ಬಗೆಯನ್ನು ಅವರ ವಿಚಾರಧಾರೆಗಳನ್ನು ಪ್ರತಿಯೊಬ್ಬರಿಗೂ

ತಲುಪುವ ರೀತಿಯ ಸಂಶೋಧನಾತ್ಮಕ ಲೇಖನ, ಕೃತಿಗಳನ್ನು ರಚಿಸಿ ಓದುಗರ ಆಲೋಚನ ಕ್ರಮವನ್ನೇ ಬದಲಿಸಿದ್ದಾರೆ.

ಒಟ್ಟಾರೆಯಾಗಿ ಬಾಬಾಸಾಹೇಬ್ ಅಂಬೇಡ್ಕರ್ ಅವರ ಚಿಂತನೆಗಳು ಕನ್ನಡಿಗರಿಗೆ ಒದಗಿದ ಸಂದರ್ಭದಲ್ಲಿ ದಲಿತ ಪ್ರಜ್ಞೆ ಮೂಡಿ ಜಾಗೃತಗೊಂಡು ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಪ್ರಯತ್ನಗಳು ನಡೆದವು. ಬಾಬಾಸಾಹೇಬರ ವಿಚಾರಧಾರೆಗಳು ಪ್ರಸ್ತುತ ಸಂದರ್ಭಕ್ಕೆ ಅಗತ್ಯವಾಗಿರುವುದರಿಂದ ಕೇವಲ ದಲಿತ ಸಮುದಾಯದ ಹಿತಕೋಸ್ಕರ ದುಡಿಯದೆ ಶೋಷಿತರ, ಹಿಂದುಳಿದವರ, ಮಹಿಳೆಯರ, ಕಾರ್ಮಿಕರ ಅಭಿವೃದ್ಧಿಗಾಗಿ ಮಂಡಿಸಿದ ವಿಚಾರಗಳು ಜಾರಿಗೊಳಿಸಿದ ಕಾನೂನುಗಳನ್ನು ಎಲ್ಲಾ ಸಮುದಾಯದವರು ಅರ್ಥ ಮಾಡಿಕೊಳ್ಳುವ ಜರೂರಿದೆ. ಆಗ ಮಾತ್ರ ಬಾಬಾಸಾಹೇಬರಿಗೆ ಗೌರವವನ್ನು ನೀಡಿದಂತಾಗುತ್ತದೆ. ಅವರ ಶ್ರಮ ಸಾರ್ಥಕವಾಗಿ ಸಮಾಜದಲ್ಲಿ ಸಮಾನತೆಯಿಂದ ಬಾಳಲು ಸಹಕಾರಿಯಾಗುತ್ತದೆ.

ಕೊನೆ ಟಿಪ್ಪಣಿಗಳು

೧. ಡಾ. ಎಂ.ಎಸ್. ಅನಿತಾ, ೨೦೧೬, **ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್(ಜೀವನ, ಸಾಧನೆ ಮತ್ತು ವ್ಯಕ್ತಿತ್ವ)**, ಮೈಸೂರು ವಿಶ್ವವಿದ್ಯಾನಿಲಯ, ಶತಮಾನೋತ್ಸವ ಪ್ರಕಟಣ ಸಮಿತಿ, ಮೈಸೂರು, ಪುಟ ೨೨೭.

೨. ಅದೇ, ಪುಟ ೨೨೯.

೩. ಅದೇ, ಪುಟ ೨೩೦.

೪. ಡಾ. ಎಸ್. ಚಂದ್ರಶೇಖರ್, ೧೯೮೩, **ಸಾಮಾಜಿಕ ಹಿನ್ನೆಲೆಯಲ್ಲಿ ಮೈಸೂರು ರಾಜಕೀಯ ಕೆಲವು ಒಳನೋಟಗಳು(೧೮೮೧-೧೯೪೦)**, ಅಂಕಣ ಪ್ರಕಾಶನ, ಬೆಂಗಳೂರು, ಪುಟ ೫೨.

೫. ಡಾ. ಅರವಿಂದ ಮಾಲಗತ್ತಿ(ಸಂ), ೨೦೦೨, **ದಲಿತ ಮಾರ್ಗ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪುಟ ೯೩.

೬. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೦, **ವಸಾಹತು ಕಾಲಘಟ್ಟದ ಮೈಸೂರು ಸಂಸ್ಥಾನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧೪೮.

೭. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೬, **ಧೀಮಂತ ಕ್ರಾಂತಿಕಾರಿ ಬಿ. ಬಸವಲಿಂಗಪ್ಪ ಸಂಸ್ಮರಣ ಸಂಪುಟ**, ಕ್ರಾಂತಿಕಾರಿ ಬಿ. ಬಸವಲಿಂಗಪ್ಪ ಜಯಂತಿ ಆಚರಣಾ ಸಮಿತಿ, ಬೆಂಗಳೂರು, ಪುಟ ೧೭೪.

೮. ಅದೇ, ಪುಟ ೨೮೯.

೯. ಅದೇ, ಪುಟ ೧೬೨.

೧೦. ಅದೇ, ಪುಟ ೧೬೩,

೧೧. ಡಾ. ಎಂ.ಎಸ್. ಶೇಖರ್, ೨೦೧೬, **ಆಧುನಿಕ ಕನ್ನಡ ಸಾಹಿತ್ಯದ ಮೊದಲ ತಲೆಮಾರಿನ ದಲಿತ ಸಾಹಿತಿಗಳು,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪುಟ ೩೯.

೧೨. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೧೩, **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧೬೯.

೧೩. ಡಾ. ಅರವಿಂದ ಮಾಲಗತ್ತಿ(ಸಂ), ೨೦೦೨, **ದಲಿತ ಮಾರ್ಗ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪುಟ ೨೪೨.

೧೪. ಡಿ.ಎಸ್. ವೀರಯ್ಯ, **ದಲಿತ ಚಿಂತನೆ,** ಪುಟ ೭೪.

೧೫. ಅದೇ, ಪುಟ ೮೮.

❖❖❖

ಅಧ್ಯಾಯ : ಎಂಟು

ಸಮಾರೋಪ

ಅಧ್ಯಾಯ : ಎಂಟು

ಸಮಾರೋಪ

ಮೈಸೂರು ಸಂಸ್ಥಾನ ಕರ್ನಾಟಕ ಚರಿತ್ರೆಯಲ್ಲಿ ಮುಖ್ಯವಾದ ಸ್ಥಾನವನ್ನು ಪಡೆದುಕೊಂಡಿದೆ. ಕರ್ನಾಟಕ ಚರಿತ್ರೆ ಹಲವಾರು ಏಳು-ಬೀಳುಗಳನ್ನು ಕಂಡು ತನ್ನದೇ ಆದಂತಹ ಭವ್ಯ ಹಾಗೂ ಅಭವ್ಯದಂತಹ ಚರಿತ್ರೆಗಳನ್ನು ಹೊಂದಿದೆ. ಶಾಸನ, ಸಾಹಿತ್ಯಗಳನ್ನು ರಚಿಸಿದವರು ತಮ್ಮ ಚರಿತ್ರೆಯನ್ನು ಕುರಿತು ಉತ್ಸಾಹ ಉದ್ವೇಗದಿಂದ ಮಾತನಾಡುವವರು ಅದೇ ಚರಿತ್ರೆಯಲ್ಲಿ ಅಮರರಾಗಿದ್ದರೂ ಸಹ ದಾಖಲೆ ಇಲ್ಲ ಎನ್ನುವ ಕಾರಣಕ್ಕೆ ಅವರ ಭವ್ಯತೆ ಇಂದು ಆಗಿರುವ ಅಭವ್ಯ ಚರಿತ್ರೆ ಬಗ್ಗೆ ಯಾವುದೇ ಮಾತನಾಡದೆ ನಿರ್ಲಕ್ಷ ವಹಿಸಿದ್ದೇವೆ. ಅದಕ್ಕೆ ಕಾರಣಗಳು ಹಲವಾರು, ಅಭವ್ಯ ಚರಿತ್ರೆಯನ್ನು ಭವ್ಯ ಚರಿತ್ರೆ ಎಂದು ಹೇಳುವ ಜನಾಂಗಕ್ಕೆ ಶಿಕ್ಷಣ ಇಲ್ಲದೆ ಇರುವುದು, ಭವ್ಯ ಚರಿತ್ರೆಯಲ್ಲಿ ಇರುವಂತಹ ಅಭವ್ಯಗಳನ್ನು ಗುರುತಿಸಿ ಅಭವ್ಯ ಎಂದು ಹೇಳುವುದಕ್ಕೆ ಶಿಕ್ಷಣ ಹೀನರಿಗೆ ಅಕ್ಷರ ಗೊತ್ತಿಲ್ಲದೆ ಇರುವುದು. ಈ ಎರಡು ಕಾರಣಗಳು ಮುಖ್ಯವಾದವುಗಳಾಗಿವೆ.

ಈ ಹಂತದಲ್ಲಿ ಮೈಸೂರು ಸಂಸ್ಥಾನ ಒಂದು ವಿಶಿಷ್ಟ ಸ್ಥಾನದಲ್ಲಿ ನಿಲ್ಲುತ್ತದೆ. ವಿಜಯನಗರ ಪತನ ಆದ ನಂತರ ಅತಿ ಹೆಚ್ಚು ಸಂಶೋಧನೆ ಮತ್ತು ಅಧ್ಯಯನಕ್ಕೆ ಒಳಪಟ್ಟಂತಹ ಕ್ಷೇತ್ರ ಎಂದರೆ ಅದು ಮೈಸೂರು ಸಂಸ್ಥಾನ. ಯಾಕೆ, ಏನು, ಯಾರಿಂದ, ಯಾಕಾಗಿ ಬದಲಾವಣೆ ಆಯ್ತು ಎಂದು ಅಧ್ಯಯನ ಮಾಡಲಿಕ್ಕೆ ಪ್ರಶ್ನೆಗಳನ್ನು ಇಟ್ಟುಕೊಂಡು ಸಂಶೋಧನೆ ಮಾಡಲು ಹೊರಟಾಗ ಹಲವಾರು ಪ್ರಶ್ನೆಗಳು ನಮ್ಮ ಸಂಶೋಧಕರಿಗೆ ಎದುರಾಗುತ್ತವೆ. ವಿಜಯನಗರ ಪತನದ ನಂತರ ಉತ್ತರದಲ್ಲಿ ಮೊಘಲರ ಆಳ್ವಿಕೆ ಇತ್ತು. ವಿಜಯನಗರ ಸಾಮ್ರಾಜ್ಯವನ್ನು ಅಂತ್ಯಗೊಳಿಸಿದಂತಹ ಮುಸ್ಲಿಂ ಸಾಮ್ರಾಜ್ಯ ಒಂದು ಕಡೆ, ಒಳಾಡಳಿತದಲ್ಲಿ ಬೇಡ ಸಮುದಾಯದ ಪಾಳೆಗಾರರ ಆಳ್ವಿಕೆಯಿತ್ತು. ಈ ವಿಜಯನಗರ ಸಾಮ್ರಾಜ್ಯದಲ್ಲಿ ಅಷ್ಟದಿಗ್ಗಜರೆನಿಸಿಕೊಂಡವರು ಶೈವ ಮತ್ತು ವೈಷ್ಣವ ಸಂಪ್ರದಾಯಸ್ಥ ವೈದಿಕರು ವಿಜಯನಗರ ಪತನದ ನಂತರ ಮೈಸೂರು ಸಂಸ್ಥಾನಕ್ಕೆ ಫಲಾಯನಗೊಂಡರು.

ಮೈಸೂರು ಸಂಸ್ಥಾನದ ಚರಿತ್ರೆ ಕುರಿತು ವಸ್ತುನಿಷ್ಠವಾಗಿ ಅಧ್ಯಯನ ಕೈಗೊಂಡಿರುವ ವಿದ್ವಾಂಸರಾದ ಚಿನ್ನಸ್ವಾಮಿ ಸೋಸಲೆ ಅವರು ಹೇಳುವಂತೆ ಮೈಸೂರು ಸಂಸ್ಥಾನಕ್ಕೆ ಬಂದ

ಬ್ರಾಹ್ಮಣರು ತಮ್ಮ ಭ್ರಾತೃತ್ವ ಉಳಿಸಿಕೊಳ್ಳಲು ಇಲ್ಲಿನ ರಾಜಕೀಯಕ್ಕೆ ಧರ್ಮದ ಲೇಪನ ಮೆತ್ತಿ ಧರ್ಮವನ್ನು ಪ್ರಾಬಲ್ಯಗೊಳಿಸಿ ಧರ್ಮ ರಾಜಕೀಯದ ಆಧಾರದ ಮೇಲೆ ಆಡಳಿತ ನಡೆಯುವಂತೆ ನೋಡಿಕೊಂಡರು.

ಆಧುನಿಕ ಮೈಸೂರಿನ ಚರಿತ್ರೆಯಲ್ಲಿ ಬಹಳ ಮುಖ್ಯವಾಗಿ ಹಲವಾರು ರೀತಿಯ ಘಟನೆಗಳು ನಡೆಯುತ್ತವೆ. ಬ್ರಿಟೀಶರು ಪ್ರವೇಶ ಮಾಡಿದಾಗಿನಿಂದ ೧೯೪೭ರವರೆಗೂ ಮೈಸೂರು ಸಂಸ್ಥಾನವನ್ನು ಒಂದಲ್ಲ ಒಂದು ರೀತಿಯಲ್ಲಿ ನೇರ ಮತ್ತು ಪರೋಕ್ಷ ಆಳ್ವಿಕೆ ನಡೆಸಿ ಸಂಸ್ಥಾನವನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡಿರುತ್ತಾರೆ. ಬ್ರಾಹ್ಮಣೇತರ ಚಳವಳಿ ಆರಂಭಗೊಂಡು, ಜಮೀನ್ದಾರಿಕೆ ವರ್ಗಗಳು ಪ್ರಬಲಗೊಳ್ಳುತ್ತಿರುತ್ತವೆ. ಈ ಎಲ್ಲಾ ಆಧಾರದ ಮೇಲೆ ಬ್ರಾಹ್ಮಣರು ಆಳ್ವಿಕೆ ಮಾಡಿದ ಜಾಗವನ್ನು ಬ್ರಾಹ್ಮಣೇತರರು ಪಡೆಯಲು ಮುಂದಾಗುತ್ತಾರೆ. ಇದರಿಂದಾಗಿ ಪಾರಂಪರಿಕ ವೃತ್ತಿಯಿಂದ ಬ್ರಾಹ್ಮಣರು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುವ ಪರಿಸ್ಥಿತಿ ಉಂಟಾಗುತ್ತದೆ. ಮತ್ತೆ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕೆ ಮಾಡುವುದೇ ಧರ್ಮದ ರಕ್ಷಣೆಯ ಹೆಸರಿನಲ್ಲಿ ದಲಿತರಿಗೆ ಶಿಕ್ಷಣ, ಮೂಲಭೂತ ಸೌಲಭ್ಯಗಳನ್ನು ನೀಡಲು ಮುಂದಾಗುವುದರ ಮೂಲಕ ತಮ್ಮ ಚಾಣಾಕ್ಷ ಬುದ್ಧಿಯಿಂದ ಅರಸರಿಗೆ ಹತ್ತಿರವಾಗಿ ತಮ್ಮ ಕಾರ್ಯಗಳನ್ನು ಸಾಧಿಸಿಕೊಳ್ಳಲು ಮತ್ತು ಅಧಿಕಾರ ಪಡೆಯಲು ಪ್ರಯತ್ನಿಸುತ್ತಾರೆ(ಚಿನ್ನಸ್ವಾಮಿ ಸೋಸಲೆ ಅವರ 'ದಲಿತ ಚರಿತ್ರೆ ರಚನೆಯಲ್ಲಿ ಕಾಡಲೇಬೇಕಾದ ಪ್ರಶ್ನೆಗಳು' ಕೃತಿಯಲ್ಲಿ ಮೇಲಿನ ಅಂಶಗಳನ್ನು ಸಮಗ್ರವಾಗಿ ಚರ್ಚಿಸಲಾಗಿದೆ). ಈ ಹಂತದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಆದಂತಹ ಎಲ್ಲಾ ಸಾಂಸ್ಕೃತಿಕ ಬದಲಾವಣೆಗಳನ್ನು ಪ್ರಸ್ತುತ ಪ್ರಬಂಧದಲ್ಲಿ ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡಲಾಗಿದೆ. ಬಹಳ ಮುಖ್ಯವಾಗಿ ದಲಿತ ಸಮುದಾಯವು ಹೇಗೆ ಅಭಿವೃದ್ಧಿ ಹೊಂದಿತು ಎಂಬುದನ್ನು ರಾಜಕೀಯ ದೃಷ್ಟಿಕೋನದಿಂದ ಮಹಾರಾಜರು ಮಾಡಿದರು ಎಂದು ಹೇಳುವುದು ಒಂದು ಕಡೆ. ದಲಿತ ಸಮುದಾಯದ ಅಭಿವೃದ್ಧಿಯನ್ನು ಏಕೆ ಮಾಡಿದರು ಎಂದು ಹೇಳುವುದು ಇನ್ನೊಂದು ಕಡೆ. ಎಲ್ಲವನ್ನು ಮಾಡಿದರು ಎಂಬುದಕ್ಕೆ ನಮಗೆ ಹಲವಾರು ರೀತಿಯ ಸಂಪನ್ಮೂಲಗಳನ್ನು ದೊರೆಯುತ್ತವೆ. ಆದರೆ ಏಕೆ ಮಾಡಿದರು ಎಂಬುದಕ್ಕೆ ನಮಗೆ ಯಾವ ಪತ್ರಾಗಾರ ಇಲಾಖೆ ಅಥವಾ ಆ ಕಾಲಘಟ್ಟದ ಯಾವುದೇ ಕೃತಿಗಳಲ್ಲಿ ಮಾಹಿತಿ ದೊರೆಯುವುದಿಲ್ಲ.

ಮಹಾರಾಜರು ಏಕೆ ದಲಿತೋಭಿವೃದ್ಧಿ ಮಾಡಿದರು, ಅದರಿಂದಾದ ಪರಿಣಾಮಗಳೇನು, ಅದರಿಂದ ಯಾರಿಗೆ ಅನುಕೂಲ ಮತ್ತು ಅನಾನುಕೂಲವಾಯಿತು. ಈ ಎಲ್ಲಾ ಅಂಶಗಳನ್ನು ವಸ್ತುನಿಷ್ಠವಾಗಿ ಅಧ್ಯಯನ ಮಾಡುವುದೇ ಈ ಪ್ರಬಂಧದ ಪ್ರಮುಖ ಆಶಯವಾಗಿದೆ.

ಈ ಹಿನ್ನೆಲೆಯಿಂದ ಪ್ರಸ್ತುತ ಪ್ರಬಂಧದಲ್ಲಿ;

ಮೊದಲನೆಯ ಅಧ್ಯಾಯದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರ ವರ್ಗಗಳ ರಾಜಕೀಯ ಕುತಂತ್ರ, ದಲಿತ ಮತ್ತು ದಲಿತೇತರರ ಸಾಮಾಜಿಕ ಕಾರ್ಯಗಳ ಹಿನ್ನೆಲೆ, ಸಮಾಜ ಸುಧಾರಣಾ

ಕಾನೂನುಗಳ ಸಾಧಕ-ಬಾಧಕಗಳು ಹೀಗೆ ಹಲವಾರು ಉದ್ದೇಶಗಳನ್ನು ಇಟ್ಟುಕೊಂಡು ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣೆಗೆ ಪ್ರೇರಣೆಯಾದ ಅಂಶಗಳ ಬಗ್ಗೆ ವಿಸ್ತೃತವಾಗಿ ವಿಶ್ಲೇಷಿಸಲಾಗಿದೆ. ಅಸ್ಪೃಶ್ಯತಾ ನಿವಾರಣೆಯನ್ನು ಸಾಮಾಜಿಕ ಕಳಕಳಿಯ ಹಿನ್ನೆಲೆಯಿಂದ ಕೈಗೊಂಡರೆ ಅಥವಾ ರಾಜಕೀಯ ಪ್ರೇರಿತದಿಂದ ಮಾಡಿದರೆ ಮತ್ತು ಯಾರ ಪ್ರಭಾವಕ್ಕೆ ಒಳಗಾಗಿ ಅಸ್ಪೃಶ್ಯತಾ ನಿವಾರಣೆಯನ್ನು ಕೈಗೊಂಡಿದ್ದರ ರಾಜಕೀಯ ಒಳನೋಟಗಳನ್ನು ಸೂಕ್ಷ್ಮವಾಗಿ ಚರ್ಚಿಸಿ ವಿಶ್ಲೇಷಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ದಲಿತೇತರು ಕೈಗೊಂಡ ದಲಿತೋದ್ಧಾರದ ಕಾರ್ಯಗಳನ್ನು ಚರ್ಚಿಸಲಾಗಿದೆ. ಈವರೆಗೂ ಸ್ವಾತಂತ್ರ್ಯ ಹೋರಾಟಗಾರ, ರಾಜಕೀಯ ನಾಯಕ ಮತ್ತು ಅವರ ಅಸ್ಪೃಶ್ಯತಾ ನಿವಾರಣೆ ಕಾರ್ಯಗಳನ್ನು ಮಾರೆಮಾಚಿ ರಾಷ್ಟ್ರ ನಾಯಕರಂತೆ ಚಿತ್ರಿಸಿರುವ ಅಂಶಗಳ ಹೊರತಾಗಿ ಅವರ ಸಮಾಜ ಸುಧಾರಣ ಕಾರ್ಯಗಳು ಪ್ರಮುಖವಾದವುಗಳು. ಈ ಕಾರ್ಯಗಳನ್ನು ಕೈಗೊಳ್ಳಲು ಇದ್ದ ಹಿಂದಿನ ಉದ್ದೇಶಗಳನ್ನು ಚರ್ಚಿಸಲಾಗಿದೆ.

ನಾಲ್ಕು ಮತ್ತು ಐದನೇ ಅಧ್ಯಾಯದಲ್ಲಿ ಕ್ಷೇತ್ರಕಾರ್ಯಾಧಾರಿತ ಮಾಹಿತಿಯನ್ನು ಆಧರಿಸಿ ಚರಿತ್ರೆಯಿಂದ ಮರೆಮಾಚಲ್ಪಟ್ಟ ಅನೇಕ ದಲಿತ ಹೋರಾಟಗಾರರು ಮತ್ತು ಅವರ ಹೋರಾಟಗಳನ್ನು ದಾಖಲಿಸಲಾಗಿದೆ. ವಿದ್ವಾಂಸರಾದ ಎನ್. ಚಿನ್ನಸ್ವಾಮಿ ಸೋಸಲೆ ಅವರು ಹೇಳುವ ಹಾಗೆ ದಲಿತ ಚರಿತ್ರೆಯ ಮೂಲ ಆಕರವೇ 'ಉಳ್ಳವರು ಆಡುವ ದರ್ಪದ ಮಾತುಗಳಲ್ಲೇ ಅಡಗಿದೆ' ಎನ್ನುವ ಹಾಗೆ ನಾನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಗ್ರಹಿಸಿದ ಮಾಹಿತಿಗಳು ಪೂರಕವಾಗಿವೆ. ಅಕ್ಷರ ಬಲ್ಲವರು ತಮ್ಮ ಹೋರಾಟದ ಮೂಲಗಳನ್ನು ಡೈರಿಯ ಬರವಣಿಗೆ ಮೂಲಕ ಕಾಗದ ಪತ್ರಗಳ ಮುಖಾಂತರ ಚರಿತ್ರೆ ರಚನೆಯಾಗಬಹುದು. ಆದರೆ ಅಕ್ಷರವೇ ಗೊತ್ತಿಲ್ಲದವರು ಚರಿತ್ರೆಗೆ ಪೂರಕವಾದ ಕೆಲಸಗಳನ್ನು ಮಾಡಿದ್ದರೂ ಸಹ ಬರವಣಿಗೆ ಇಲ್ಲದಿದ್ದ ಕಾರಣಕ್ಕಾಗಿ ದಾಖಲಿಸದೆ ಇರುವುದು ವಾಸ್ತವವೇ ಸತ್ಯ. ಈ ಹಿನ್ನೆಲೆಯಲ್ಲಿ ಸಂಶೋಧಕನಾಗಿ ನಾನು ಈ ಎರಡು ಅಧ್ಯಯನದಲ್ಲಿ ಸಂಗ್ರಹಿಸಿರುವ ಸಂದರ್ಶನಾಧಾರಿತದಿಂದ ಹೊರಹೊಮ್ಮಿರುವ ಅಂಶಗಳು ದಲಿತ ಚರಿತ್ರೆಗೆ ದಾಖಲಾರ್ಹವೇ ಆಗಿವೆ. ವಿಷಯಕ್ಕೆ ಪೂರಕವಾಗಿ ಮಾನ್ಯರನ್ನು ಸಂದರ್ಶನ ಮಾಡಿದಾಗ ಈ ಇಳಿವಯಸ್ಸಿನಲ್ಲಿಯೂ ಅವರು ನೀಡಿದ ಮಾಹಿತಿಗಳು, ಅವರು ಮಾಹಿತಿ ನೀಡುವಾಗ ಆ ಸಂದರ್ಭದ ಸಾಮಾಜಿಕ ಕಟ್ಟುಪಾಡುಗಳ ಕುರಿತು ವಿವರಣೆ ನೀಡುವಾಗ ಅವರಲ್ಲಿ ಸಾಧಕತೆಯ ಭಾವನೆ ಕಂಡುಬರುತ್ತಿತ್ತು. ಅವರೆಲ್ಲರ ಫಲವೇ ಇಂದು ಒಂದಷ್ಟು ದಲಿತರಲ್ಲಿ ವಿವಿಧ ಹಂತಗಳಲ್ಲಿ ಪ್ರಜ್ಞೆ ಮೂಡಿರುವುದಕ್ಕೆ ಕಾರಣವೆಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಅವರ ಹೋರಾಟದ ಜೀವನ ಮತ್ತು ಅಸ್ಪೃಶ್ಯತಾ ನಿವಾರಣಾ ಹೋರಾಟಗಳನ್ನು ನಾಲ್ಕು ಮತ್ತು ಐದನೇ ಅಧ್ಯಾಯದಲ್ಲಿ ದಾಖಲಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಪ್ರಸ್ತುತ ಸಂದರ್ಭದಲ್ಲಿ ಇದ್ದಂತಹ ಸಾಮಾಜಿಕ ಸುಧಾರಣಾ ಕಾನೂನುಗಳು ಮೈಸೂರು ಸಂಸ್ಥಾನದಲ್ಲಿ ಆಗಲೇ ಜಾರಿಗೊಳಿಸಿ ದಲಿತರ ಅಭಿವೃದ್ಧಿಗೆ ಪ್ರಯತ್ನಿಸಿದ ಬಗೆಯನ್ನು ಚರ್ಚಿಸಲಾಗಿದೆ. ಒಡೆಯರು ಏತಕ್ಕಾಗಿ ಕಾನೂನುಗಳನ್ನು ಜಾರಿಗೊಳಿಸಿದರು. ಅದರ ಪರಿಣಾಮಗಳೇನು ಎಂಬುದನ್ನು ಕೂಲಂಕುಶವಾಗಿ ಪ್ರಸ್ತುತ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಮೈಸೂರು ಸಂಸ್ಥಾನದಲ್ಲಿನ ಅಸ್ಪೃಶ್ಯತಾ ನಿವಾರಣಾ ಹೋರಾಟಗಳು ಪ್ರಸ್ತುತ ಸಂದರ್ಭದ ದಲಿತರ ಮೇಲೆ ಪ್ರಭಾವ ಬೀರಿವೆ ಹಾಗೂ ದಲಿತರ ಸ್ಥಿತ್ಯಂತರಗಳಿಗೆ ಕಾರಣವಾಗಿವೆ ಎಂಬುದರ ಜೊತೆಗೆ ಇಂದಿನ ದಲಿತ ಚಳವಳಿ, ಸಂಘಟನೆ, ಅಂಬೇಡ್ಕರ್ ಕನ್ನಡಿಗರಿಗೆ ಪ್ರವೇಶದ ನಂತರವಾದ ಬದಲಾವಣೆ ಈ ಎಲ್ಲಾ ಅಂಶಗಳನ್ನು ಪ್ರಸ್ತುತ ಅಧ್ಯಯನದಲ್ಲಿ ವಿಸ್ತೃತವಾಗಿ ವಿಶ್ಲೇಷಣಾತ್ಮಕವಾಗಿ ಚರ್ಚಿಸಲಾಗಿದೆ.

ಎಂಟನೆಯ ಅಧ್ಯಾಯವು ಸಮರೋಪವಾಗಿದ್ದು ಈ ಅಧ್ಯಾಯದಲ್ಲಿ ನಾನು ಪ್ರಬಂಧ ಬರವಣಿಗೆಗೆ ಮಾಹಿತಿ ಸಂಗ್ರಹಿಸಿದ ಬಗೆ ಎಲ್ಲಾ ಅಧ್ಯಾಯಗಳ ಸ್ವರೂಪ ಹಾಗೂ ಈ ಅಧ್ಯಯನದಿಂದ ಕಂಡುಕೊಂಡ ಫಲಿತಗಳನ್ನು ಚರ್ಚಿಸಲಾಗಿದೆ. 'ಮಾಡಬೇಕಾಗಿರುವುದು ಅಪಾರ ಮಾಡಿರುವುದು ಅಲ್ಪ' ಎಂಬ ನಾಣ್ಣುಡಿಯಂತೆ 'ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣಾ ಹೋರಾಟಗಳು' ಎಂಬ ಈ ಪ್ರಬಂಧಕ್ಕೆ ವಿಭಿನ್ನ ರೀತಿಯ ಹೊಸ ಮಾಹಿತಿಗಳನ್ನು ಸಂಗ್ರಹಿಸಿ ಚರಿತ್ರೆಯಿಂದ ದೂರ ಉಳಿದ ಹಲವಾರು ಅಂಶಗಳನ್ನು ಕಟ್ಟಿಕೊಟ್ಟಿರುವೆನೆಂಬ ತೃಪ್ತಿ ಭಾವನೆ ಇದೆ.

*** ಅಧ್ಯಯನದಿಂದ ಕಂಡುಕೊಂಡ ಫಲಿತಗಳು**

ಪ್ರಸ್ತುತ ಪ್ರಬಂಧದಿಂದ ಕಂಡುಕೊಂಡ ಫಲಿತಗಳನ್ನು ಕೆಳಗಿನಂತೆ ಗುರುತಿಸಲಾಗಿದೆ.

* ಮೊದಲ ತಲೆಮಾರಿನ ದಲಿತ ಶಿಕ್ಷಣವಂತರು ಯಾರಿಂದ, ಯಾವ ಉದ್ದೇಶಕ್ಕಾಗಿ ಶಿಕ್ಷಣವನ್ನು ಪಡೆದರು ಎಂಬ ಸೂಕ್ಷ್ಮ ಅಂಶವನ್ನು ವಸ್ತುನಿಷ್ಠವಾಗಿ ಗ್ರಹಿಸಲಾಗಿದೆ.

* ಪ್ರಥಮ ತಲೆಮಾರಿನ ದಲಿತ ಶಿಕ್ಷಣವಂತರಿಗೆ ಗಾಂಧೀಜಿ ಏಕೆ ಪ್ರಭಾವ ಬೀರಿದರು, ಬಾಬಾಸಾಹೇಬ್ ಅಂಬೇಡ್ಕರ್ ಅವರು ಏಕೆ ಪ್ರಭಾವ ಬೀರಲಿಲ್ಲ ಎಂಬ ಸೂಕ್ಷ್ಮ ವಿಚಾರವನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

* ಮೈಸೂರು ಸಂಸ್ಥಾನದಲ್ಲಿನ ಪ್ರಜಾಪ್ರತಿನಿಧಿಸಭೆ, ನ್ಯಾಯ ವಿಧೇಯಕ ಸಭೆ ಮತ್ತು ಬೇರೆ ಬೇರೆ ವಲಯಗಳಲ್ಲಿ ದಲಿತರ ಪಾತ್ರಗಳು ಯಾವ ರೀತಿ ನೆಪ ಮಾತ್ರಕ್ಕೆ ಇತ್ತು ಎಂಬುದನ್ನು ಪ್ರಸ್ತುತ ಪ್ರಬಂಧದಲ್ಲಿ ಗುರುತಿಸಲಾಗಿದೆ.

* ಭಾರತಕ್ಕೆ ಸ್ವಾತಂತ್ರ ಬಂದು ೭೦ ವರ್ಷವಾಯಿತು. ಸಂವಿಧಾನ ಜಾರಿಗೆ ಬಂದು ೬೫ ವರ್ಷಗಳಾಯಿತು. ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ಇರುವ ಸರ್ಕಾರ, ಕಾನೂನುಗಳು

ನಮ್ಮ ದೇಶವನ್ನು ಮುನ್ನಡೆಸುತ್ತಿದ್ದರೂ ಸಹ ಅಸ್ಪೃಶ್ಯ ಆಚರಣೆಯಲ್ಲಿ ಮಾತ್ರ ನಾವು ಪ್ರಾಚೀನ ಭಾರತದ ವ್ಯವಸ್ಥೆಯಲ್ಲಿಯೇ ಇದ್ದೇವೆಂದು ನಾನು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಕಂಡುಕೊಂಡಿದ್ದೇನೆ. ಇದಕ್ಕೆ ಎಷ್ಟೋ ಸಂದರ್ಭಗಳಲ್ಲಿ ಅಪವಾದವು ಇರಬಹುದು. ಆದರೆ ವಾಸ್ತವವೇ ಬೇರೆ. ಬಹಳ ಮುಖ್ಯವಾಗಿ ನನ್ನ ಅಧ್ಯಯನದಲ್ಲಿ ಸಂಸ್ಕೃತಿಗೆ ಚಲನೆಯಿದೆ ಸಾಂಪ್ರದಾಯಕ್ಕೆ ಚಲನೆ ಇಲ್ಲ ಎಂಬುದನ್ನು ಮನಗಂಡಿದ್ದೇನೆ.

* ಮೈಸೂರು ಸಂಸ್ಥಾನದಲ್ಲಿ ಒಡೆಯರು ಜಾರಿಗೊಳಿಸಿದ ಸಮಾಜ ಸುಧಾರಣಾ ಕಾನೂನುಗಳು ಶೋಷಿತ ಸಮುದಾಯಕ್ಕೆ ಯಾವ ಪ್ರಮಾಣದಲ್ಲಿ ಆಶಾದಾಯಕವಾಗಿದ್ದವು ಎಂಬುದನ್ನು ವಿಸ್ತೃತವಾಗಿ ಮನಗಾಣಲಾಗಿದೆ. ಈ ಸಮಾಜ ಸುಧಾರಣಾ ಕಾನೂನುಗಳ ಮೂಲಕ ದಲಿತರಲ್ಲಿ ಮೂಡಿದ ಎಚ್ಚರಿಕೆಯನ್ನು ಸಹಿಸದ ಸವರ್ಣೀಯರು ಮಾಡಿದ ದೌರ್ಜನ್ಯಗಳನ್ನು ಈ ಅಧ್ಯಯನದಲ್ಲಿ ಮನಗಾಣಲಾಗಿದೆ.

* ಮಾರ್ಗದರ್ಶಕರು ಹೇಳುವಂತೆ ಸವರ್ಣೀಯರು ದಲಿತರನ್ನು 'ಯೂಸ್ ಅಂಡ್ ಥ್ರೊ' ರೀತಿಯಲ್ಲಿ ಬಳಸಿಕೊಳ್ಳುತ್ತಾರೆ ಎಂಬ ಮಾತು ಮೈಸೂರು ಸಂಸ್ಥಾನದಲ್ಲಿ ನಡೆದ ಬ್ರಾಹ್ಮಣೇತರ ಚಳವಳಿಗೆ ಅನ್ವಯಿಸುತ್ತದೆ. ಬ್ರಾಹ್ಮಣ ಮತ್ತು ಬ್ರಾಹ್ಮಣೇತರರು ತಮ್ಮ ಅನುಕೂಲಕ್ಕಾಗಿ ದಲಿತ ಸಮುದಾಯವನ್ನು ಬಳಸಿಕೊಂಡು, ಎಲ್ಲಾ ರೀತಿಯ ಸವಲತ್ತುಗಳನ್ನು ಪಡೆದ ನಂತರ ದಲಿತರನ್ನು ಕೈಬಿಟ್ಟ ಸೂಕ್ಷ್ಮ ರಾಜಕೀಯ ಕುತಂತ್ರಗಳನ್ನು ಪ್ರಸ್ತುತ ಪ್ರಬಂಧದಲ್ಲಿ ಗುರುತಿಸಿರುತ್ತೇನೆ.

* ಇಲ್ಲಿಯವರೆಗೂ ಚರಿತ್ರೆಯಲ್ಲಿ ಹಲವಾರು ಪ್ರಗತಿಪರ ದಲಿತೇತರ ನಾಯಕರುಗಳನ್ನು ಕೇವಲ ಸ್ವಾತಂತ್ರ್ಯ ಹೋರಾಟ ಮತ್ತು ರಾಜಕೀಯ ನೆಲೆಯಲ್ಲಿ ಮಾತ್ರ ಗುರುತಿಸಿರುವುದನ್ನು ಗಮನಿಸಬಹುದು. ಆದರೆ ಪ್ರಸ್ತುತ ಪ್ರಬಂಧದಲ್ಲಿ ದಲಿತೇತರರು ದಲಿತರ ಅಭಿವೃದ್ಧಿಗೆ ಹಲವಾರು ಕಾರ್ಯಗಳನ್ನು ಕೈಗೊಂಡಿದ್ದರ ಹಿನ್ನೆಲೆ ಮತ್ತು ಅವರ ದಲಿತಪರ ಕಾರ್ಯಗಳನ್ನು ಗುರುತಿಸಲಾಗಿದೆ.

* ಆಧುನಿಕ ಮೈಸೂರು ಸಂಸ್ಥಾನದ ಒಡೆಯರು ಹಾಕಿದ 'ದಲಿತ ಶಿಕ್ಷಣ' ಎಂಬ ಬೀಜ, ಹೆಮ್ಮರವಾಗಿ ಬೆಳೆದು ನೆರಳು ಕೊಡಲು ಪ್ರಾರಂಭಿಸಿದ್ದು, ಕರ್ನಾಟಕದಲ್ಲಿ ೧೯೭೦ರ ದಶಕದಲ್ಲಿ ಉಂಟಾದ ಬೂಸಾ ಚಳವಳಿಯ ನಂತರದ ದಲಿತ ಚಳವಳಿ, ಸಂಘಟನೆ ಮುಖಾಂತರ ಎಂಬುದನ್ನು ಗುರುತಿಸಲಾಗಿದೆ.

* ಮೈಸೂರು ಸಂಸ್ಥಾನದ ಪ್ರಥಮ ತಲೆಮಾರಿನ ದಲಿತ ಶಿಕ್ಷಣವಂತರ ಮುಖಾಂತರ ಎರಡು ಮತ್ತು ಮೂರನೇ ತಲೆಮಾರಿನ ದಲಿತ ಶಿಕ್ಷಣವಂತರು ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ಮುಖ್ಯವಾಹಿಗೆ ತರಲು ಪ್ರಯತ್ನಿಸಿದ ಬಗೆಯನ್ನು ವಿವೇಚಿಸಲಾಗಿದೆ.

* ಮೊದಲ ತಲೆಮಾರಿನ ದಲಿತ ಶಿಕ್ಷಣವಂತರು ಮೈಸೂರು ಸಂಸ್ಥಾನದಲ್ಲಿ ಮೂಲಭೂತ ಸಮಸ್ಯೆಗಳಾದ ಶಿಕ್ಷಣ, ವಸತಿ, ಆಹಾರ ಮುಂತಾದ ಅಂಶಗಳನ್ನು ಮುಂದಿಟ್ಟುಕೊಂಡು ಹೋರಾಟ ನಡೆಸಿದರೆ, ಎರಡನೇ ತಲೆಮಾರಿನ ದಲಿತ ಶಿಕ್ಷಣವಂತರು ಸಂವಿಧಾನದ ಆಶಯವಾದ

‘ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು’ ಎಂಬ ಆಶಯದೊಂದಿಗೆ ಭೂಮಿಯನ್ನು ಪಡೆಯಲು ಹೋರಾಟ ನಡೆಸಲು ಮುಂದಾದ ಬಗೆಯನ್ನು ಗುರುತಿಸಲಾಗಿದೆ.

* ಮೈಸೂರು ಸಂಸ್ಥಾನದಲ್ಲಿ ಗಾಂಧೀ ಮತ್ತು ಅವರ ಅನುಯಾಯಿಗಳು ಅಸ್ಪೃಶ್ಯತಾ ನಿವಾರಣೆಗೆ ಮುಂದಾಗಲು ಕಾರಣ ಮತ್ತು ಗಾಂಧೀ ಅವರ ಅಸ್ಪೃಶ್ಯತಾ ನಿವಾರಣೆಯ ಉದ್ದೇಶದ ಹಿಂದಿನ ಒಳರಾಜಕೀಯವನ್ನು ಸೂಕ್ಷ್ಮವಾಗಿ ಗ್ರಹಿಸಲಾಗಿದೆ.

* ಮೈಸೂರು ಸಂಸ್ಥಾನಕ್ಕೆ ಅಂಬೇಡ್ಕರ್ ಅವರನ್ನು ಪ್ರವೇಶವಾಗದಂತೆ ನೋಡಿಕೊಂಡು ಬ್ರಾಹ್ಮಣ್ಯ ತುಂಬಿದ ಬ್ರಾಹ್ಮಣೇತರರ ಹುನ್ನಾರಗಳನ್ನು ಗುರುತಿಸಲಾಗಿದೆ.

* ಡಾ. ಎನ್. ಚಿನ್ನಸ್ವಾಮಿ ಸೋಸಲೆ ಅವರ “ನಾಲ್ವಡಿ ಕೃಷ್ಣ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು” ಕೃತಿಯಲ್ಲಿ ಇದುವರೆಗೂ ಚರಿತ್ರೆಯಲ್ಲಿ ದಾಖಲಾಗದೆ ಎಲೆಮರೆ ಕಾಯಿಯಂತೆ ಇದ್ದು ಸ್ವಾತಂತ್ರಪೂರ್ವದಲ್ಲಿಯೇ ಶಿಕ್ಷಣ ಪಡೆದ ೪೦ ಜನ ಪ್ರಥಮ ತಲೆಮಾರಿನ ದಲಿತ ಶಿಕ್ಷಣವಂತರನ್ನು ದಾಖಲು ಮಾಡಿದ್ದಾರೆ. ಇದನ್ನು ಹೊರತುಪಡಿಸಿ ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಇನ್ನು ೨೫ ಜನ ಪ್ರಥಮ ತಲೆಮಾರಿನ ಶಿಕ್ಷಣವಂತರನ್ನು ಗುರುತಿಸಿ ಅವರ ದಲಿತೋದ್ಧಾರದ ಕಾರ್ಯಗಳು ಮತ್ತು ಅವರ ಜೀವನವನ್ನು ದಾಖಲಿಸಲಾಗಿದೆ. ಇದು ನನ್ನ ಪ್ರಬಂಧದಲ್ಲಿ ಕಂಡುಕೊಂಡ ಹೊಸ ವಿಷಯವಾಗಿದೆ.

❖❖❖

ಅನುಬಂಧಗಳು

೧. ವಕ್ತೃ ವಿವರ

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಸಂದರ್ಶಿಸಿ ದಿನಾಂಕ	ಸ್ಥಳ
೧.	ದೇವನೂರು ಮಹಾದೇವ	೬೮	ಹಿರಿಯ ಸಾಹಿತಿಗಳು ಮತ್ತು ಹೋರಾಟಗಾರರು	೧೭-೮-೨೦೧೩	ಮೈಸೂರು
೨.	ಸಿದ್ಧಲಿಂಗಯ್ಯ	೬೫	ಕವಿಗಳು ಮತ್ತು ಹೋರಾಟಗಾರರು	೨೭-೯-೨೦೧೩	ಬೆಂಗಳೂರು
೩.	ಕೆ.ಬಿ. ಸಿದ್ಧಯ್ಯ	೬೫	ಸಾಹಿತಿಗಳು ಮತ್ತು ಹೋರಾಟಗಾರರು	೨೦-೮-೨೦೧೩	ತುಮಕೂರು
೪.	ಕೆ. ದೊರೆರಾಜು	೬೬	ನಿವೃತ್ತ ಡಿ.ಡಿ.ಪಿ.ಐ. ಮತ್ತು ಹೋರಾಟ ಗಾರರು	೨೦-೮-೨೦೧೩	ತುಮಕೂರು
೫.	ರಾಮಾಂಜಿನಪ್ಪ	೩೫	ಡಿ.ಎಸ್.ಎಸ್. ಮುಖಂಡರು	೨೧-೮-೨೦೧೩	ತುಮಕೂರು
೬.	ವಿರೂಪಾಕ್ಷಪ್ಪ	೫೦	ಗುತ್ತಿಗೆದಾರರು ಮತ್ತು ಡಿ.ಎಸ್.ಎಸ್. ಸಂಚಾಲಕರು	೨೧-೮-೨೦೧೩	ತುಮಕೂರು
೭.	ರಾಜಮ್ಮ (ಟಿ.ಎ. ದಾಸಪ್ಪನವರ ಪತ್ನಿ)	೬೦	ಗೃಹಿಣಿ	೨೩-೮-೨೦೧೩	ತಿಪಟೂರು
೮.	ರಮೇಶ್	೩೦	ಶಿಕ್ಷಕರು	೨೩-೮-೨೦೧೩	ಗುಬ್ಬಿ
೯.	ಸಿದ್ಧಯ್ಯ	೬೦	ವ್ಯವಸಾಯ ಮತ್ತು ಪ್ರಗತಿಪರ ಹೋರಾಟಗಾರ	೨೪-೮-೨೦೧೩	ಕುಣಿಗಲ್
೧೦.	ಕೆಂಚ ಮಾರಯ್ಯ	೫೫	ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯರು	೨೫-೮-೨೦೧೩	ಕೊರಟಗೆರೆ
೧೧.	ಕುಮಾರ್	೪೦	ವ್ಯವಸಾಯ	೨೫-೮-೨೦೧೩	ಪಾವಗಡ
೧೨.	ಕೆ.ಎಸ್. ಭಗವಾನ್	೬೫	ಸಾಹಿತಿಗಳು ಮತ್ತು ವಿಚಾರವಾದಿಗಳು	೨೭-೯-೨೦೧೩	ಮೈಸೂರು

೧೩.	ಅರವಿಂದ ಮಾಲಗತ್ತಿ	೫೮	ಹಿರಿಯ ಸಾಹಿತಿಗಳು ಪ್ರಾಧ್ಯಾಪಕರು ಮೈಸೂರು ವಿಶ್ವವಿದ್ಯಾನಿಲಯ	೨೭-೯-೨೦೧೩	ಮೈಸೂರು
೧೪.	ಪುಟ್ಟಸ್ವಾಮಿ	೭೦	ನಿವೃತ್ತ ಶಿಕ್ಷಕರು	೨೮-೯-೨೦೧೩	ಹೆಚ್.ಡಿ. ಕೋಟೆ
೧೫.	ನಂದಕುಮಾರ್	೪೦	ಡಿ.ಎಸ್.ಎಸ್. ಮುಖಂಡರು	೨೯-೯-೨೦೧೩	ಹೆಚ್.ಡಿ. ಕೋಟೆ
೧೬.	ರಮೇಶ	೩೫	ವ್ಯವಸಾಯ ಡಿ.ಎಸ್.ಎಸ್. ಸಂಚಾಲಕರು	೩೦-೯-೨೦೧೩	ಕೊಳ್ಳೇಗಾಲ
೧೭.	ಬೆಟ್ಟಯ್ಯ ಕೋಟೆ	೭೦	ಹಿರಿಯ ದಲಿತ ಹೋರಾಟಗಾರರು ಹಾಗೂ ಚಿಂತಕರು	೧-೧೦-೨೦೧೩	ಮೈಸೂರು
೧೮.	ಕೃಷ್ಣದಾಸ್	೫೦	ದಲಿತ ಮುಖಂಡರು	೨೮-೧೨-೨೦೧೩	ಹಾಸನ
೧೯.	ನಾಗರಾಜ್ ಹೆತ್ತೂರು	೪೫	ಪತ್ರಕರ್ತರು	೨೮-೧೨-೨೦೧೩	ಹಾಸನ
೨೦.	ಎಂ.ಬಿ. ಪುಟ್ಟಸ್ವಾಮಿ	೫೦	ದಲಿತ ಮುಖಂಡರು	೨೯-೧೨-೨೦೧೩	ಹಾಸನ
೨೧.	ಗಂಗಾಧರ	೪೫	ಮಾಜಿ ನಗರಸಭೆ ಸದಸ್ಯರು	೩೦-೧೨-೨೦೧೩	ಹಾಸನ
೨೨.	ಜಯರಾಮಣ್ಣ	೬೫	ಹಿರಿಯ ದಲಿತ ಹೋರಾಟಗಾರರು	೧-೧-೨೦೧೪	ಹಾಸನ
೨೩.	ನರಸಯ್ಯ	೬೪	ಹಿರಿಯ ದಲಿತ ಹೋರಾಟಗಾರರು	೪-೬-೨೦೧೪	ಮಾಲೂರು
೨೪.	ರಂಗಯ್ಯ	೭೦	ನಿವೃತ್ತ ಶಿಕ್ಷಕರು	೩-೬-೨೦೧೪	ಕೋಲಾರ
೨೫.	ವೆಂಕಟೇಶ್	೪೦	ದಲಿತ ಮುಖಂಡರು	೪-೬-೨೦೧೪	ಮಾಲೂರು
೨೬.	ರಾಜಣ್ಣ	೪೫	ಸರ್ಕಾರಿ ನೌಕರ	೫-೬-೨೦೧೪	ಕೋಲಾರ
೨೭.	ಕೋಟಗನಾಹಳ್ಳಿ ರಾಮಯ್ಯ	೬೮	ದಲಿತ ನಾಯಕರು ಮತ್ತು ಹೋರಾಟಗಾರರು	೫-೬-೨೦೧೪	ಕೋಲಾರ
೨೮.	ವೆಂಕಟನರಸಯ್ಯ	೬೦	ವ್ಯವಸಾಯ ಮತ್ತು ಹಿರಿಯ ದಲಿತ ಮುಖಂಡರು	೭-೬-೨೦೧೪	ಕೆ.ಜಿ.ಎಫ್.
೨೯.	ಜಯಣ್ಣ	೫೦	ಡಿ.ಎಸ್.ಎಸ್ ಸಂಚಾಲಕರು	೨-೩-೨೦೧೪	ಚಿತ್ರದುರ್ಗ
೩೦.	ರಾಜಕುಮಾರ್	೪೫	ಉಪನ್ಯಾಸಕರು	೨-೩-೨೦೧೪	ಚಿತ್ರದುರ್ಗ
೩೧.	ಭರಂಪುರ ಕಣುಮಪ್ಪ	೬೪	ನಿವೃತ್ತ ಉಪನ್ಯಾಸಕರು	೩-೩-೨೦೧೪	ಹಿರಿಯೂರು
೩೨.	ಶಿವಣ್ಣ	೩೦	ವ್ಯವಸಾಯ ಮತ್ತು ಚಿಂತಕರು	೪-೩-೨೦೧೬	ಹೊಳಲ್ಕೆರೆ

೩೩.	ರವೀಶ್	೪೦	ವ್ಯಾಪಾರ ಮತ್ತು ದಲಿತ ಮುಖಂಡರು	೪-೩-೨೦೧೬	ಹೊಳಲ್ಕೆರೆ
೩೪.	ಪದ್ಮನಾಭ	೭೦	ಹಿರಿಯ ದಲಿತ ಮುಖಂಡರು	೨೬-೫-೨೦೧೫	ಶಿವಮೊಗ್ಗ
೩೫.	ರಂಗಸ್ವಾಮಿ	೪೦	ಅತಿಥಿ ಉಪನ್ಯಾಸಕ	೨೬-೫-೨೦೧೫	ಶಿವಮೊಗ್ಗ
೩೬.	ಮಂಜಪ್ಪ	೫೦	ಎಲ್.ಐ.ಸಿ. ಏಜೆಂಟ್ ಹಾಗೂ ಪ್ರಗತಿಪರ ಚಿಂತಕ	೨೭-೫-೨೦೧೫	ಭದ್ರಾವತಿ
೩೭.	ಬಸವರಾಜು	೬೦	ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯರು	೨೮-೫-೨೦೧೫	ಎನ್.ಆರ್.ಪುರ
೩೮.	ಗುರುಮೂರ್ತಿ ಕೆ.	೫೦	ಡಿ.ಎಸ್.ಎಸ್. ಮುಖಂಡರು	೨೮-೫-೨೦೧೫	ಶಿವಮೊಗ್ಗ
೩೯.	ಸಿದ್ದೇಶ್	೩೫	ಶಿಕ್ಷಕರು	೨೯-೫-೨೦೧೫	ಹರಿಹರ
೪೦.	ಲೋಕೇಶ್	೨೫	ಕಾರ್ಮಿಕ ಮತ್ತು ಡಿ.ಎಸ್.ಎಸ್. ಸದಸ್ಯ	೩೦-೫-೨೦೧೫	ದಾವಣಗೆರೆ
೪೧.	ಮೂರ್ತಿ	೪೦	ಅಧ್ಯಕ್ಷರು ಜನಪರ ಸಂಘ	೩೧-೫-೨೦೧೫	ದಾವಣಗೆರೆ
೪೨.	ಶಂಕರಪ್ಪ	೫೦	ಹೈಕೋರ್ಟ್ ನ್ಯಾಯವಾದಿಗಳು ಮತ್ತು ಸಾಹಿತಿಗಳು	೨-೬-೨೦೧೫	ಬೆಂಗಳೂರು
೪೩.	ಟಿ.ಹೆಚ್. ಮೂರ್ತಿ	೫೫	ಪ್ರಾಧ್ಯಾಪಕರು ಬೆಂಗಳೂರು ವಿಶ್ವವಿದ್ಯಾಲಯ	೨೬-೧೦-೨೦೧೫	ಬೆಂಗಳೂರು
೪೪.	ಸೀತಾರಾಮ	೪೦	ಡಿ.ಎಸ್.ಎಸ್. ಮುಖಂಡರು	೨೬-೧೦-೨೦೧೫	ಬೆಂಗಳೂರು
೪೫.	ಕೆ. ಮಾಯಿಗೌಡ	೬೫	ಸಾಹಿತಿಗಳು	೨೮-೧೦-೨೦೧೫	ಮಂಡ್ಯ
೪೬.	ಜಯಪ್ರಕಾಶ್‌ಗೌಡ	೫೫	ಅಧ್ಯಕ್ಷರು ಕರ್ನಾಟಕ ಸಂಘ ಮಂಡ್ಯ	೨೮-೧೦-೨೦೧೫	ಮಂಡ್ಯ
೪೭	ಹೊಂಬಳಯ್ಯ	೪೫	ಅತಿಥಿ ಉಪನ್ಯಾಸಕರು	೨೯-೧೦-೨೦೧೫	ಮಂಡ್ಯ
೪೮.	ಕೆಂಚಪ್ಪ	೭೦	ಹಿರಿಯ ದಲಿತ ಹೋರಾಟಗಾರರು	೨೯-೧೦-೨೦೧೫	ಮಳವಳ್ಳಿ
೪೯.	ಚೌಡೇಶ	೩೦	ವ್ಯವಸಾಯ ಮತ್ತು ಪ್ರಗತಿಪರ ಚಿಂತಕರು	೩೦-೧೦-೨೦೧೫	ಮದ್ದೂರು
೫೦.	ಬಾಬು	೩೩	ಸಂಶೋಧನಾ ವಿದ್ಯಾರ್ಥಿ	೩೦-೧೦-೨೦೧೫	ಮದ್ದೂರು
೫೧.	ಚನ್ನಕೇಶವ	೪೦	ಡಿ.ಎಸ್.ಎಸ್. ಮುಖಂಡರು	೩೧-೧೦-೨೦೧೫	ಮಂಡ್ಯ

೫೨.	ರಾಜವರ್ಧನ್ (ಕರ್ನಾಟಕದ ಪ್ರಥಮ ದಲಿತ ಮಂತಿ ಆರ್. ಚನ್ನಿಗರಾಮಯ್ಯ ನವರ ಪುತ್ರ)	೭೫	ಮಾಜಿ ಮಂತ್ರಿಗಳು	೬-೪-೨೦೧೪	ಬೆಂಗಳೂರು
೫೩.	ಡಾ. ಓ. ಅನಂತರಾಮಯ್ಯ	೬೮	ವಿಶ್ರಾಂತ ಕುಲಪತಿಗಳು ತುಮಕೂರು ವಿಶ್ವವಿದ್ಯಾಲಯ	೬-೪-೨೦೧೪	ಬೆಂಗಳೂರು
೫೪.	ಗಂಗಾಧರಯ್ಯ	೭೦	ಹಿರಿಯ ಪತ್ರಕರ್ತರು	೭-೪-೨೦೧೪	ಬೆಂಗಳೂರು
೫೫.	ಡಾ. ನಂದೀಶ್ವರ	೫೦	ಪ್ರಾಂಶುಪಾಲರು	೯-೪-೨೦೧೪	ಶಿರಾ
೫೬.	ಕರಿಯಪ್ಪ	೫೦	ಉಪನ್ಯಾಸಕರು	೧೨-೮-೨೦೧೪	ದೊಡ್ಡ ಬಳ್ಳಾಪುರ
೫೭.	ಬಾಲಾಜಿ ಚೆನ್ನಯ್ಯ (ಟಿ. ಚೆನ್ನಯ್ಯನವರ ಮಗ)	೫೦	ರಾಜಕೀಯ ಮುಖಂಡರು	೧೩-೮-೨೦೧೪	ಕೋಲಾರ
೫೮.	ಶ್ರೀನಿವಾಸ ರೆಡ್ಡಿ	೪೦	ವ್ಯಾಪಾರ	೧೪-೮-೨೦೧೪	ಬಾಗೆಪಲ್ಲಿ
೫೯.	ತಿಮ್ಮಯ್ಯ	೭೦	ಗುತ್ತಿಗೆದಾರರು ಡಿ.ಎಸ್.ಎಸ್. ಮುಖಂಡರು	೧೧-೪-೨೦೧೪	ತುಮಕೂರು
೬೦.	ಕುಮಾರ್	೪೦	ಪೌರಕಾರ್ಮಿಕ	೧೨-೪-೨೦೧೪	ತುಮಕೂರು
೬೧.	ನಂಜುಂಡಸ್ವಾಮಿ	೫೬	ಪೊಲೀಸ್ ವರಿಷ್ಠ ಅಧಿಕಾರಿಗಳು	೨೬-೧೦-೨೦೧೫	ಬೆಂಗಳೂರು
೬೨.	ಡಾ. ಕಾವಲಮ್ಮ	೫೦	ಪ್ರಾಧ್ಯಾಪಕರು	೨೭-೯-೨೦೧೩	ಬೆಂಗಳೂರು
೬೩.	ಪಾರ್ವತಮ್ಮ	೫೦	ಸಾಮಾಜಿಕ ಹೋರಾಟಗಾರ್ತಿ	೩೧-೧೦-೨೦೧೫	ಮಂಡ್ಯ
೬೪.	ಗೌರಮ್ಮ	೪೫	ಡಿ.ಎಸ್.ಎಸ್. ಸದಸ್ಯೆ	೨೬-೫-೨೦೧೫	ಶಿವಮೊಗ್ಗ
೬೫.	ರತ್ನಮ್ಮ	೬೫	ಗೃಹಿಣಿ	೨೮-೧೨-೨೦೧೩	ಹಾಸನ
೬೬.	ಸವಿತ	೪೦	ಅತಿಥಿ ಉಪನ್ಯಾಸಕರು	೩೦-೧೨-೨೦೧೩	ಹಾಸನ
೬೭.	ಶ್ರೀಗೌರಿ	೫೦	ಮಹಿಳಾ ಹೋರಾಟಗಾರ್ತಿ	೧೨-೮-೨೦೧೪	ಚಿಕ್ಕಬಳ್ಳಾಪುರ
೬೮.	ದು. ಸರಸ್ವತಿ	೫೦	ಲೇಖಕಿ ಮತ್ತು ಮಹಿಳಾ ಹೋರಾಟಗಾರ್ತಿ	೨೦-೮-೨೦೧೩	ತುಮಕೂರು

❖❖❖

೨. ಪರಾಮರ್ಶನ ಗ್ರಂಥಗಳು

೧. ಪ್ರಾಥಮಿಕ ಆಕರಗಳು

೧. ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರು ರಿಪೋರ್ಟ್ಸ್-೧೮೮೦-೧೯೫೦.

೨. ಅರಮನೆ ಕಂಟ್ರೋಲರ್ಸ್ ಆಫೀಸ್ ಮತ್ತು ಪ್ಯಾಲೇಸ್ ಕಡತಗಳು(೧೮೮೦-೧೯೪೦).

೩. ಡೊನೇಷನ್ಸ್ ಇಲಾಖೆ ಕಡತಗಳು(೧೮೫೦-೧೯೫೬).

೪. ಲೆಜಿಸ್ಲೆಟೀವ್ ಅಸೆಂಬ್ಲಿ ಕಡತಗಳು.

೫. ಎಜುಕೇಷನಲ್ ಫೈಲ್-೧೯೧೩-೧೯೪೦.

೬. ಗೆಜೆಟ್‌ಗಳು.

೭. ಪ್ರೊಸೀಡಿಂಗ್ಸ್ ಆಫ್ ದಿ ಮೈಸೂರ್ ಲೆಜಿಸ್ಲೇಟಿವ್ ಕೌನ್ಸಿಲ್-೧೯೦೧-೧೯೪೭.

೮. ಪ್ರೊಸೀಡಿಂಗ್ಸ್ ಆಫ್ ದಿ ಚೀಫ್ ಕಮೀಷನರ್ ಆಫ್ ಮೈಸೂರು ರೆವಿನ್ಯೂ ಡಿಪಾರ್ಟ್‌ಮೆಂಟ್ ಎಜುಕೇಷನಲ್.

೯. ರಿಪೋರ್ಟ್ ಇಂಡಿಯನ್ ಸೋಷಿಯಲ್ ಕಾನ್‌ಫರೆನ್ಸ್-೧೮೮೯-೧೮೯೪, ಮೈಕ್ರೋಫಿಲ್ಮ್.

೧೦. ಕಾಂತರಾಜ್ ಅರಸ್ ಅವರ ಪತ್ರ ವ್ಯವಹಾರಗಳು.

೧೧. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಅನ್ಯರಾಜ್ಯ ಹಾಗೂ ರಾಜ್ಯದೊಳಗಿನ ಪತ್ರ ವ್ಯವಹಾರಗಳು.

೧೨. ಮಿರ್ಜಾ ಇಸ್ಮಾಯಿಲ್ ಅವರ ಪತ್ರ ವ್ಯವಹಾರಗಳು.

೧೩. ವಿಶ್ವೇಶ್ವರಯ್ಯ ಅವರ ಪತ್ರ ವ್ಯವಹಾರಗಳು.

೧೪. ಸ್ಕೀಮ್ ಫಾರ್ ಎನ್‌ಕರೇಜಿಂಗ್ ಎಜುಕೇಷನ್ ಅಮಾಂಗ್ ದಿ ಡಿಪ್ರೆಸ್ಡ್ ಕ್ಲಾಸ್‌ಗೆ ಸಂಬಂಧಿಸಿದ ಕಡತಗಳು.

೧೫. ಅಗ್ರಿಕಲ್ಚರ್, ಅಡ್ಮಿನಿಸ್ಟ್ರೇಷನ್ ಆಫ್ ಲ್ಯಾಂಡ್ಸ್, ವಿಲೇಜ್ ಪಂಚಾಯಿತ್, ಪಬ್ಲಿಕ್ ಇನ್‌ಸ್ಟ್ರಕ್ಷನ್ ಕಡತಗಳು.

೧೭. ದಿವಾನ್ ಆಫೀಸ್ ಫೈಲ್, ೧೯೧೭, ಎಸ್.ಎಲ್.ಎನ್.ಒಸ್ ೧೨೮.

೧೮. ಪ್ರೊಸಿಡಿಂಗ್ಸ್ ಆಫ್ ಆದಿದ್ರಾವಿಡ ಮಹಾಜನ್ ಸಭಾ ಮೈಸೂರು, ೧೯೩೨.

೧೯. ಸೆನ್‌ಸನ್ಸ್ ರಿಪೋರ್ಟ್ಸ್ ಆಫ್ ಮೈಸೂರ್ ಸ್ಟೇಟ್ಸ್, ೧೮೮೧, ೧೮೯೧, ೧೯೦೧, ೧೯೧೧, ೧೯೨೧, ೧೯೩೧, ೧೯೪೧.

೨೦. ಕರ್ನಾಟಕ ಸ್ಟೇಟ್ ಗ್ಯಾಸೆಟಿಯರ್ ವ್ಯಾಲುಮ್ ೧ ರಿಂದ ೫.

೨೧. ಮೈಸೂರ್ ಗ್ಯಾಸೆಟಿಯರ್, ೧೯೨೭-೩೦

ಸ್ಪೀಚ್‌ಸ್(ಭಾಷಣಗಳು)

೨೨. ಸ್ಪೀಚಸ್ ಬೈ ಹಿಸ್ ಹೈನೆಸ್ ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್.

೨೩. ಸ್ಪೀಚಸ್ ಬೈ ಶ್ರೀ ಮಿರ್ಜಾ ಎಂ. ಇಸ್ಮಾಯಿಲ್, ದಿವಾನ್ಸ್ ಆಫ್ ಮೈಸೂರ್.

೨೪. ಸ್ಪೀಚಸ್ ಬೈ ಹಿಸ್ ಹೈನೆಸ್ ಯುವರಾಜ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್.

೨೫. ಸ್ಪೀಚಸ್ ಬೈ ಶ್ರೀ ಸಿ. ರಂಗಾಚಾರ್ಲು, ದಿವಾನ್ಸ್ ಆಫ್ ಮೈಸೂರು.

೨೬. ಸ್ಪೀಚಸ್ ಬೈ ಶ್ರೀ ಎಂ. ವಿಶ್ವೇಶ್ವರಯ್ಯ, ದಿವಾನ್ಸ್ ಆಫ್ ಮೈಸೂರು.

೨೭. ಸ್ಪೀಚಸ್ ಬೈ ಶ್ರೀ ಎಂ. ಕಾಂತರಾಜ್ ಅರಸ್, ದಿವಾನ್ಸ್ ಆಫ್ ಮೈಸೂರು.

೨೮. ಸ್ಪೀಚಸ್ ಬೈ ಹಿಸ್ ಹೈನೆಸ್ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್, ಮಹಾರಾಜ ಆಫ್ ಮೈಸೂರು.

೨. ಅನುಷಂಗಿಕ ಆಕರಗಳು

೧. ಅನಿತಾ ಎಂ.ಎಸ್., ೨೦೧೬, **ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್(ಜೀವನ, ಸಾಧನೆ ಮತ್ತು ವ್ಯಕ್ತಿತ್ವ)**, ಮೈಸೂರು ವಿಶ್ವವಿದ್ಯಾನಿಲಯ, ಶತಮಾನೋತ್ಸವ ಪ್ರಕಟಣ ಸಮಿತಿ, ಮೈಸೂರು.

೨. ಅರವಿಂದ ಮಾಲಗತ್ತಿ, ೨೦೦೩, **ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩. ಅರವಿಂದ ಮಾಲಗತ್ತಿ(ಸಂ), ೨೦೦೨, **ದಲಿತ ಮಾರ್ಗ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೪. ಅಶೋಕ ಶೆಟ್ಟರ್, ೨೦೦೪, **ಚರಿತ್ರೆ-ಸಮಾಜ-ಸಾಹಿತ್ಯ**, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.

೫. ಅಳಗೋಡಿ ಡಿ.ಎಲ್., ೨೦೦೧, **ಭಾರತದಲ್ಲಿ ಕ್ರೈಸ್ತ ಧರ್ಮದ ಇತಿಹಾಸ**, ಕನ್ನಡ ದೈವಜ್ಞ ಸಾಹಿತ್ಯ ಸಮಿತಿ, ಮಂಗಳೂರು.

೬. ಉಮಾದೇವಿ ಎಂ. ಪಾಟೀಲ, ೨೦೦೭, **ಪ್ರೊ. ಬಿ. ಕೃಷ್ಣಪ್ಪನವರ ದಲಿತ ಕಥನ,** ಪಲ್ಲವ ಪ್ರಕಾಶನ, ಬಳ್ಳಾರಿ.

೭. ಉಮಾಪತಿ ಕೆ.ಎಸ್., ೧೯೯೮, **ಮೈಸೂರ್ ಚಲೋ(ಸತ್ಯಾಗ್ರಹ ಪತ್ರಗಳು),** ಅಂಕಿತ ಪುಸ್ತಕ, ಬೆಂಗಳೂರು.

೮. ಒಡೆಯರ್ ಡಿ. ಹೆಗ್ಗಡೆ, ೧೯೮೬, **ಬಿ.ಆರ್. ಅಂಬೇಡ್ಕರ್ ಅವರ ಸಮಗ್ರ ಚಿಂತನೆ,** ಶ್ರೀನಿಧಿ ಪ್ರಿಂಟರ್ಸ್, ಮಂಗಳೂರು.

೯. ಕಮಲಾಕ್ಷ ಪಿ., ೧೯೮೬, **ದಲಿತೋದ್ಧಾರಕ ಕುದ್ಮುಲ್ ರಂಗರಾವ್,** ದಿ, ಕಮಲಾಕ್ಷ ಪ್ರಿಂಟರ್ಸ್, ಮಂಗಳೂರು.

೧೦. ಕವಿತಾ ಕೃಷ್ಣ, ೨೦೦೧, **ಸರ್ವೋದಯ ಕಿರಣ ಟಿ.ಎ. ದಾಸಪ್ಪ,** ರಾಜಶ್ರೀ ಪ್ರಕಾಶನ, ತುಮಕೂರು.

೧೧. ಕವಿತಾ ಕೃಷ್ಣ, ೧೯೯೦, **ಸ್ವಾತಂತ್ರ್ಯ ಶ್ರೀ,** ಕವಿತಾ ಪ್ರಕಾಶನ, ತುಮಕೂರು.

೧೨. ಕುಮಾರಸ್ವಾಮಿ ಎಚ್., ೨೦೧೦, **ದಲಿತ ಚಳವಳಿ ಮತ್ತು ಸಾಮಾಜಿಕ ನ್ಯಾಯ,** ದಲಿತ ಅಭಿವೃದ್ಧಿ ಸಂಸ್ಥೆ, ಹೊಸಪೇಟೆ.

೧೩. ಕೃಷ್ಣಶರ್ಮಾ(ಸಂ), ೧೯೭೦, **ಗಾಂಧೀ ಮತ್ತು ಕರ್ನಾಟಕ,** ಗಾಂಧಿ ಸ್ಮಾರಕ ನಿಧಿ, ಬೆಂಗಳೂರು.

೧೪. ಗೋಪಾಲ ಜಿ., ೧೯೮೧, **ಚಂದ್ರವಳ್ಳಿಯ ಅಸ್ಪೃಶ್ಯರು,** ಗಿರಿ ಪ್ರಕಾಶನ, ಮೈಸೂರು.

೧೫. ಗೋಪಾಲ ಜಿ., ೨೦೦೧, **ಆರ್. ಗೋಪಾಲಸ್ವಾಮಿ ಅಯ್ಯರ್,** ಸ್ನೇಹಾ ಪ್ರಿಂಟರ್ಸ್, ಬೆಂಗಳೂರು.

೧೬. ಗೋಪಾಲರಾವ್ ಎಚ್.ಎಸ್., ೧೯೯೬, **ಕರ್ನಾಟಕ ಏಕೀಕರಣ ಇತಿಹಾಸ,** ನವಕರ್ನಾಟಕ ಪ್ರಕಾಶನ, ಬೆಂಗಳೂರು.

೧೭. ಗೋವಿಂದರಾಜು ಸಿ.ಆರ್., ೨೦೦೯, **ನವಚಾರಿತ್ರಿಕವಾದ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮. ಗೌರಿ ಸುಂದರ್(ಸಂ), ೨೦೧೦, **ಮೈಸೂರು ದಸರಾ,** ಸುಂದರ ಪ್ರಕಾಶನ, ಬೆಂಗಳೂರು.

೧೯. ಚಂಡಾಳ, ೨೦೦೫, **ಕರ್ನಾಟಕ ದಲಿತ ಚಳವಳಿ ಮತ್ತು ಡಾ. ಬಿ.ಆರ್. ಅಂಬೇಡ್ಕರ್,** ಚೈತ್ರಾ ಪ್ರಕಾಶನ, ಬೆಂಗಳೂರು.

೨೦. ಚಂದ್ರಣ್ಣ ಡಿ.ಎಸ್.(ಸಂ), ೨೦೦೬, **ಗಾಂಧೀಜಿ ಬದುಕು ಬರಹ,** ರೂಪ ಪ್ರಕಾಶನ, ಮೈಸೂರು.

೨೧. ಚಂದ್ರಶೇಖರ್ ಎಸ್., ೧೯೯೨, **ಅಂಬೇಡ್ಕರ್ ಮತ್ತು ಗಾಂಧಿ,** ಅಕ್ಷರ ಪ್ರಕಾಶನ, ಸಾಗರ.

೨೨. ಚಂದ್ರಶೇಖರ್ ಎಸ್., ೨೦೦೦, **ದಕ್ಷಿಣ ಭಾರತ: ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೩. ಚಂದ್ರಶೇಖರ್ ಎಸ್., ೨೦೦೨, **ಆಧುನಿಕ ಕರ್ನಾಟಕದ ಆಂದೋಲನಗಳು,** ನಮ್ಮ ಪ್ರಕಾಶನ, ತಿಪಟೂರು.

೨೪. ಚಂದ್ರಶೇಖರ್ ಎಸ್., ೨೦೦೬, **ವಸಾಹತುಕಾಲೀನ ಕರ್ನಾಟಕ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೨೫. ಚಂದ್ರಶೇಖರ್ ಎಸ್.(ಸಂ), ೧೯೯೭, **ಕರ್ನಾಟಕ ಚರಿತ್ರೆ ಸಂಪುಟ-೭,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೬. ಚಂದ್ರಶೇಖರ್ ಟಿ.ಆರ್.(ಸಂ), ೨೦೦೫, **ದಲಿತ ಅಧ್ಯಯನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೭. ಚನ್ನೇಗೌಡ ಡಿ.ಆರ್., ೧೯೯೪, **ನಮ್ಮ ಮಹಾರಾಜರು,** ಕಾವ್ಯಾಲಯ ಪ್ರಕಾಶನ, ಮೈಸೂರು.

೨೮. ಚಿನ್ನಸ್ವಾಮಿ ಸೋಸಲೆ ಎನ್., ೨೦೧೩, **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೯. ಚಿನ್ನಸ್ವಾಮಿ ಸೋಸಲೆ ಎನ್., ೨೦೧೫, **ದಲಿತ ಚರಿತ್ರೆ ರಚನೆಯಲ್ಲಿ ಕಾಡಲೇಬೇಕಾದ ಪ್ರಶ್ನೆಗಳು,** ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ.

೩೦. ಚಿನ್ನಸ್ವಾಮಿ ಸೋಸಲೆ ಎನ್., ೨೦೧೦, **ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಸಮಕಾಲೀನ ದಲಿತರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೧. ಚಿನ್ನಸ್ವಾಮಿ ಸೋಸಲೆ ಎನ್., ೨೦೦೮, **ಭಾರತೀಯ ಸಮಾಜ ಮತ್ತು ದಲಿತರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೨. ಚಿನ್ನಸ್ವಾಮಿ ಸೋಸಲೆ ಎನ್., ೨೦೦೪, **ಸಾಮ್ರಾಜ್ಯ ಮತ್ತು ಸಂಸ್ಥಾನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೩. ಚಿನ್ನಸ್ವಾಮಿ ಸೋಸಲೆ ಎನ್., ೨೦೦೫, **ನಾಲ್ವಡಿ ಕೃಷ್ಣನ ಮೈಸೂರು: ಸಾಮಾಜಿಕ, ಆರ್ಥಿಕ ಅಭಿವೃದ್ಧಿ ನೆಲೆಯ ಅಧ್ಯಯನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೪. ಚಿನ್ನಸ್ವಾಮಿ ಸೋಸಲೆ ಎನ್., ೨೦೦೪, **ನಮ್ಮ ಗ್ರಾಮಗಳು ಅಂದು-ಇಂದು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೫. ಚಿನ್ನಸ್ವಾಮಿ ಸೋಸಲೆ ಎನ್., ೨೦೧೨, **ದಲಿತರ ಬದುಕು-ಮೆಲುಕು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೬. ಚಿನ್ನಸ್ವಾಮಿ ಸೋಸಲೆ ಎನ್., ೨೦೧೩, **ದಲಿತರ ಮೇಲಿನ ದೌರ್ಜನ್ಯ ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆಗಳು,** ಯಾಜಿ ಪ್ರಕಾಶನ, ಹೊಸಪೇಟೆ.

೩೭. ಚಿನ್ನಸ್ವಾಮಿ ಸೋಸಲೆ ಎನ್., ೨೦೦೯, **ವಸಾಹತು ಕಾಲಘಟ್ಟದ ಮೈಸೂರು ಸಂಸ್ಥಾನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೮. ಚಿನ್ನಸ್ವಾಮಿ ಸೋಸಲೆ ಎನ್., ೨೦೦೬, **ಪ್ರಭುತ್ವ ಮತ್ತು ದಲಿತರು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩೯. ಚಿನ್ನಸ್ವಾಮಿ ಸೋಸಲೆ ಎನ್., ೨೦೧೨, **ಅಂಬೇಡ್ಕರ್‌ವಾದ ಮತ್ತು ಪ್ರಸ್ತುತ ದಲಿತರು,** ಸಪ್ನ ಬುಕ್‌ಹೌಸ್, ಬೆಂಗಳೂರು.

೪೦. ಚಿನ್ನಸ್ವಾಮಿ ಸೋಸಲೆ ಎನ್., ೨೦೧೨, **ಅಂಬೇಡ್ಕರ್ ದೃಷ್ಟಿಯಲ್ಲಿ ದಲಿತರು ಮತ್ತು ಮತಾಂತರ,** ಯಾಜಿ ಪ್ರಕಾಶನ, ಬೆಂಗಳೂರು.

೪೧. ಚಿನ್ನಸ್ವಾಮಿ ಸೋಸಲೆ ಎನ್.(ಸಂ), ೨೦೧೬, **ಧೀಮಂತ(ಕ್ರಾಂತಿಕಾರಿ ಬಿ. ಬಸವಲಿಂಗಪ್ಪ ಸಂಸ್ಮರಣ ಸಂಪುಟ),** ಕ್ರಾಂತಿಕಾರಿ ಬಿ. ಬಸವಲಿಂಗಪ್ಪ ಜಯಂತಿ ಆಚರಣಾ ಸಮಿತಿ, ಬೆಂಗಳೂರು.

೪೨. ಚಿನ್ನಸ್ವಾಮಿ ಸೋಸಲೆ ಎನ್.(ಸಂ), ೨೦೧೧, **ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಕಾಲದ ಮೈಸೂರು ಸಂಸ್ಥಾನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೩. ಚಿನ್ನಸ್ವಾಮಿ ಸೋಸಲೆ ಎನ್.(ಸಂ), ೨೦೧೫, **ಜಯಚಾಮರಾಜೇಂದ್ರ ಒಡೆಯರ್ ಕಾಲದ ಮೈಸೂರು ಸಂಸ್ಥಾನ,** ಸುಂದರ ಪ್ರಕಾಶನ, ಮೈಸೂರು.

೪೪. ಚಿನ್ನಸ್ವಾಮಿ ಸೋಸಲೆ ಎನ್., ರಚನೆ ಮತ್ತು(ಸಂ), ೨೦೧೬, **ಕರ್ನಾಟಕದ ಸಮಗ್ರ ದಲಿತ ಚರಿತ್ರೆ,** ನವಕರ್ನಾಟಕ ಪ್ರಕಾಶನ, ಬೆಂಗಳೂರು.

೪೫. ಚಿನ್ನಸ್ವಾಮಿ ಸೋಸಲೆ ಎನ್., ೨೦೧೬, **ಒನಕೆ ಓಬವ್ವ: ದಲಿತ ಸಂವೇದನೆಯೊಂದಿಗೆ ಮುಖಾಮುಖಿ,** ಗೌತಮ ಪ್ರಕಾಶನ, ಕಮಲಾಪುರ.

೪೬. ಚಿನ್ನಸ್ವಾಮಿ ಸೋಸಲೆ ಎನ್., ೨೦೧೦, **ಗಡಿ ಚಳವಳಿ: ಇತ್ತೀಚಿನ ಆಯಾಮಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೭. ಚಿನ್ನಸ್ವಾಮಿ ಸೋಸಲೆ ಎನ್.(ಸಂ), ೨೦೧೦, **ಸಮಕಾಲೀನ ಕರ್ನಾಟಕ ವಿವಿಧ ಆಯಾಮಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೮. ಚಿನ್ನಸ್ವಾಮಿ ಸೋಸಲೆ ಎನ್., ೨೦೧೨, **ಕರ್ನಾಟಕ ಚರಿತ್ರೆ ಮತ್ತು ಸಾಹಿತ್ಯ,** ಸಿ.ವಿ.ಜಿ. ಪಬ್ಲಿಕೇಷನ್, ಬೆಂಗಳೂರು.

೪೯. ಜಯಪ್ಪಗೌಡ ಡಿ.ಎಸ್., ೧೯೯೪, **ದಿವಾನ್ ಸರ್.ಎಂ. ವಿಶ್ವೇಶ್ವರಯ್ಯನವರ ಕಾರ್ಯ ಸಾಧನೆಗಳು,** ಶುಭೋದಯ ಪ್ರಕಾಶನ, ಮೈಸೂರು.

೫೦. ಜಯಸಿಂಹರಾವ್ ಸಿ.ಕೆ., ೧೯೪೦, **ಪ್ರಗತಿಪರ ಮೈಸೂರು,** ಎಲೆಕ್ಟ್ರಿಕ್ ಪ್ರೆಸ್, ತುಮಕೂರು.

೫೧. ಜವರಯ್ಯ ಮ.ನ., ೧೯೯೫, **ಅಂಬೇಡ್ಕರ್ ವಿದ್ಯಾರ್ಥಿ ಜೀವನ ಚರಿತ್ರೆ,** ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು.

೫೨. ಜವರಯ್ಯ ಮ.ನ., ೨೦೦೧, **ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಂಬೇಡ್ಕರ್,** ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು.

೫೩. ಜವರಯ್ಯ ಮ.ನ., ೧೯೯೪, **ಆಧುನಿಕ ಪರಂಪರೆ ಹಾಗೂ ದಲಿತ ಬಂಡಾಯ ಸಾಹಿತ್ಯ ಸಮಗ್ರ ಅಧ್ಯಯನ,** ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು.

೫೪. ಜವರಯ್ಯ ಮ.ನ., ೧೯೯೫, **ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ,** ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು.

೫೫. ಜವರಯ್ಯ ಮ.ನ., ೧೯೯೧, **ಅಂಬೇಡ್ಕರ್ ವಿಚಾರ ಸಾಹಿತ್ಯ ಸಮಗ್ರ ಅಧ್ಯಯನ,** ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು.

೫೬. ಜವರಯ್ಯ ಮ.ನ., ೧೯೯೪, **ಬಿ.ಆರ್. ಅಂಬೇಡ್ಕರ್(ಕ.ಅ.) ಜಾತಿ ವಿನಾಶ,** ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು.

೫೭. ಜೋಯಿಸ್ ಎಂ.ಎನ್.(ಸಂ), **ಕರ್ಮಯೋಗಿ ತಗಡೂರರ ಆತ್ಮಕಥನ ಮತ್ತು ಅಭಿನಂದನಾ ಗ್ರಂಥ,** ಗೀತಾ ಪ್ರಿಂಟರ್ಸ್, ಮೈಸೂರು.

೫೮. ತಗಡೂರು ರಾಮಚಂದ್ರರಾವ್, ೧೯೮೬, **ಗ್ರಾಮದಾನ ಗ್ರಾಮ ಸ್ವರಾಜ್ಯ,** ವಿನೂತನ ಪ್ರಿಂಟರ್ಸ್, ಮೈಸೂರು.

೫೯. ತಂಬಂಡ ವಿಜಯ್ ಪೂಣಚ್ಚ(ಸಂ), **ಚರಿತ್ರೆ ವಿಶ್ವಕೋಶ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೦. ತಲಕಾಡು ಚಿಕ್ಕರಂಗೇಗೌಡ, ೨೦೧೩, **ಟಿಪ್ಪುಸುಲ್ತಾನ ಕಾಲದ ಪ್ರಸಂಗಗಳು,** ಚಂದ್ರಗಿರಿ ಪ್ರಕಾಶನ, ಬೆಂಗಳೂರು.

೬೧. ತೀತಾಶರ್ಮ, ೧೯೯೬, **ಮೈಸೂರು ಇತಿಹಾಸದ ಹಳೆಯ ಪುಟಗಳು,** ನವನೀತ ಪ್ರಕಾಶನ, ಬೆಂಗಳೂರು.

೬೨. ತಿಪ್ಪೇಸ್ವಾಮಿ ಪಿ.ಆರ್., ೧೯೭೯, **ಹೋರಾಟಗಾರ ಕೆಂಚಪ್ಪ,** ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.

೬೩. ತಿಮ್ಮನಹಳ್ಳಿ ವೇಣುಗೋಪಾಲ್, ೨೦೧೦, **ರೈತರು: ಮೈಸೂರು ಅಧಿಕಾರಶಾಹಿ ಮತ್ತು ರಾಷ್ಟ್ರೀಯ ಚಳುವಳಿ-೧೮೮೧-೧೯೪೭,** ಧಾತ್ರಿ ಪುಸ್ತಕ, ಬೆಂಗಳೂರು.

೬೪. ದಯಾನಂದಮಾನೆ, ೨೦೦೭, **ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ದಲಿತ ಚಳವಳಿ,** ಡಾ. ಬಿ.ಆರ್. ಅಂಬೇಡ್ಕರ್ ರೀಸರ್ಚ್ ಅಕಾಡೆಮಿ, ಮೈಸೂರು.

೬೫. ದಾಸನೂರು ಕೂಸಣ್ಣ, ೨೦೦೮, **ಸಮರ್ಥ ಸಂಸದೀಯ ಪಟು ಡಾ. ಬಾಬು ಜಗಜೀವನರಾಮ್,** ಮಾತಂಗ ಪ್ರಕಾಶನ, ಮೈಸೂರು.

೬೬. ದೇವನೂರು ಮಹಾದೇವ, ರಾಜಶೇಖರಯ್ಯ ಎಂ.ಎಂ. ಸಿದ್ಧಲಿಂಗಯ್ಯ(ಸಂ), **ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಸಂಪುಟ-೧ರಿಂದ ೨೩ರವರೆಗೆ,** ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೬೭. ದೇವಯ್ಯ ಹರವೆ, ೧೯೮೨, **ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು,** ರಶ್ಮಿ ಉದ್ಯಮ ಕೇಂದ್ರ, ಮೈಸೂರು.

೬೮. ದೊರೆಸ್ವಾಮಿ ಎಚ್.ಎಸ್., ೨೦೦೬, **ಹೋರಾಟದ ದಿಟ್ಟ ಹೆಜ್ಜೆಗಳು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೬೯. ನಂಜಯ್ಯ ಡಿ.ಆರ್., **ಡಿ.ಆರ್. ನೆನಪುಗಳು,** ಕಾಮಧೇನು ಪ್ರಿಂಟರ್ಸ್, ಬೆಂಗಳೂರು.

೭೦. ನಂಜಯ್ಯ ಹೊಂಗನೂರು, ೨೦೦೧, **ಬಿ. ರಾಚಪ್ಪಯ್ಯ ಅವರ ಜೀವನ ಮತ್ತು ರಾಜನೀತಿ,** ಬಿ. ರಾಚಯ್ಯ ಪ್ರತಿಷ್ಠಾನ, ಮೈಸೂರು.

೭೧. ನಂಜರಾಜ ಅರಸು ಪಿ.ವಿ. ಮತ್ತು ಚಂದ್ರರಾಜ ಅರಸು ಎಸ್.ಆರ್.(ಸಂ),ಃ ೧೯೯೯, **ನಾಲ್ವಡಿ ಕೃಷ್ಣರಾಜ ಒಡೆಯರ್ ಒಂದು ದರ್ಶನ,** ಅಖಿಲ ಕರ್ನಾಟಕ ಅರಸು ಪರಿಷತ್(ರಿ), ಮೈಸೂರು.

೭೨. ನಂಜರಾಜ ಅರಸು, ಪಿ.ವಿ., ೨೦೦೮, **ಮೈಸೂರು ನೂರಿನ್ನೂರು ವರ್ಷಗಳ ಹಿಂದೆ,** ಅಭಿರುಚಿ ಪ್ರಕಾಶನ, ಮೈಸೂರು.

೭೩. ನಂಜುಂಡಸ್ವಾಮಿ ವಿ., ೨೦೧೦, **ಶ್ರೀ ಜಯಚಾಮರಾಜೇಂದ್ರ ಒಡೆಯರ ಕೃತಿಗಳು,** ತನುಮನ ಪ್ರಕಾಶನ, ಮೈಸೂರು.

೭೪. ನಾಗತಿಹಳ್ಳಿ ರಮೇಶ್, ೨೦೦೩, **ಮಾನವತಾವಾದಿ ಮಲ್ಲಯ್ಯ,** ಸೃಷ್ಟಿ ಪ್ರಕಾಶನ, ಬೆಂಗಳೂರು.

೭೫. ನಾರಾಯಣ ಎಂ., ೨೦೦೩, **ಸಾಮಾಜಿಕ ಸಮಸ್ಯೆಗಳು,** ಚೇತನ ಬುಕ್ ಹೌಸ್, ಮೈಸೂರು.

೭೬. ನಾರಾಯಣರಾವ್ ವಿ.ಎಸ್., ೧೯೭೫, **ಮಿರ್ಜಾ ಇಸ್ಮಾಯಿಲ್ ಅವರ ಜೀವನ ಚರಿತ್ರೆ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೭೭. ನಾರಾಯಣರಾವ್ ವಿ.ಎಸ್., ೧೯೭೮, **ದಿವಾನ್ ಸರ್ ಶೇಷಾದ್ರಿ ಅಯ್ಯರ್: ಜೀವನ-ಸಾಧನೆ,** ಗೀತಾ ಬುಕ್‌ಹೌಸ್, ಮೈಸೂರು.

೭೮. ಪ್ರಭುಗಣೇಶ್, ೨೦೦೪, **ಪೆರಿಯಾರ್(ಜೀವನ ಚರಿತ್ರೆ),** ಅಖಿಲಾ ಏಜೆನ್ಸಿಸ್, ಮೈಸೂರು.

೭೯. ಪ್ರೇಮಲತಾ ಸುಂದರೇಶನ್, ೧೯೯೪, **ಮೈಸೂರು ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು,** ಸ್ವಾತಂತ್ರ ಹೋರಾಟಗಾರರ ಸಂಘ, ಮೈಸೂರು.

೮೦. ಪ್ರೇಮಿಳಾದೇವಿ ಬಿ.ಕೆ., ೨೦೧೦, **ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ವರ್ಗಗಳ ಚಳವಳಿ ಹಾಗೂ ರಾಜಕೀಯ ಜಾಗೃತಿ,** ರೂಪ ಪ್ರಕಾಶನ, ಮೈಸೂರು.

೮೧. ಪ್ರಾಣೇಶ್ ಬಿ.ಆರ್., ೧೯೯೭, **ಯಶೋಧರ ದಾಸಪ್ಪ ಮತ್ತು ಎಚ್.ಸಿ. ದಾಸಪ್ಪ,** ಭಾರತಿ ಪ್ರಕಾಶನ, ಮೈಸೂರು.

೮೨. ಪಾರ್ವತಿ ಎಚ್.ಎಸ್., ೧೯೭೪, **ಕಲ್ಯಾಣಮ್ಮ: ಜೀವನ ಮತ್ತು ಕಾರ್ಯ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೮೩. ಪುಟ್ಟಯ್ಯ ಬಿ.ಎಂ., ೨೦೦೮, **ಮುಖಾಮುಖಿ: ಸಮಾಜ ಸಂಸ್ಕೃತಿ ಚಳವಳಿ,** ಸಿದ್ಧಾರ್ಥ, ಪ್ರಕಾಶನ, ಹೊಸಪೇಟೆ.

೮೪. ಪುಟ್ಟಸ್ವಾಮಿ ಬಿ.ಎಸ್., ೨೦೦೭, **ಕೈಫಿಯತ್ತು ಕಂಡ ಮೈಸೂರು ರಾಜಕೀಯ ಚರಿತ್ರೆ,** ಮುದ್ದುಶ್ರೀ ಗ್ರಂಥಮಾಲೆ, ಬೆಂಗಳೂರು.

೮೫. ಪುರುಷೋತ್ತಮ ಬಿಳಿಮಲೆ, ೧೯೯೮, **ದಲಿತ ಜಗತ್ತು,** ಹೊಸದಿಕ್ಕು ಪ್ರಕಾಶನ, ಬೆಂಗಳೂರು.

೮೬. ಪೋತೆ ಎಚ್.ಟಿ., ೨೦೦೩, **ಪುಲೆ, ಶಾಹು, ಅಂಬೇಡ್ಕರ್,** ತಿಪ್ಪಣಂಬು ಪ್ರಕಾಶನ, ರಾಯಚೂರು.

೮೭. ಪೋತೆ ಎಚ್.ಟಿ., ೨೦೦೪, **ದಲಿತಾಂತರಂಗ,** ತಿಪ್ಪಣಂಬು ಪ್ರಕಾಶನ, ರಾಯಚೂರು.

೮೮. ಪೋತೆ ಎಚ್.ಟಿ.(ಅನು).ಃ ೨೦೦೫, **ಬೆಂದವರು,** ಪಲ್ಲವಿ ಪ್ರಕಾಶನ, ಗುಲಬರ್ಗಾ.

೮೯. ಬಂಗಾರಪ್ಪ ಹೊಸಪುರ, ೧೯೯೯, **ಅಂಬೇಡ್ಕರ್, ಗಾಂಧೀಜಿ, ವಿವೇಕಾನಂದರ ದೃಷ್ಟಿಯಲ್ಲಿ ಸಮಾನತೆಯ ಚಿಂತನೆಗಳು,** ಚಿಂತನ ಪ್ರಕಾಶನ, ಹೊಳೆನರಸೀಪುರ.

೯೦. ಬಂಜಗೆರೆ ಜಯಪ್ರಕಾಶ್, ೨೦೦೫, **ಉಲಿಯ ಉಯ್ಯಾಲೆ,** ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.

೯೧. ಬಸವರಾಜು ಕೆ.ಆರ್., ೨೦೧೩, **ಕರ್ನಾಟಕದ ಪ್ರಥಮ ದಲಿತ ಮಂತ್ರಿ ಆರ್. ಚನ್ನಿಗರಾಮಯ್ಯ ಜೀವನ ಸಾಧನೆ,** ದಲಿತ ಅಭಿವೃದ್ಧಿ ಸಂಸ್ಥೆ, ಹೊಸಪೇಟೆ.

೯೨. ಬರಗೂರು ರಾಮಚಂದ್ರಪ್ಪ, ೨೦೦೧, **ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ,** ಅಂಕಿತ ಪುಸ್ತಕ, ಬೆಂಗಳೂರು.

೯೩. ಬರಗೂರು ರಾಮಚಂದ್ರಪ್ಪ, ೨೦೧೦, **ಮರ್ಯಾದಸ್ಥ ಮನುಷ್ಯರಾಗೋಣ**, ಅಂಕಿತ ಪುಸ್ತಕ, ಬೆಂಗಳೂರು.

೯೪. ಬರಗೂರು ರಾಮಚಂದ್ರಪ್ಪ, ೨೦೦೭, **ಕನ್ನಡ ಸಾಹಿತ್ಯವೆಂಬ ಸ್ವಾತಂತ್ರ್ಯ ಹೋರಾಟ**, ಅಂಕಿತ ಪುಸ್ತಕ, ಬೆಂಗಳೂರು.

೯೫. ಬಿಪನ್‌ಚಂದ್ರ(ಕ.ಅ.) ತೇಜಶ್ರೀ ಜ.ನಾ., ೨೦೦೭, **ಭಾರತ ರಾಷ್ಟ್ರೀಯ ಕಾಂಗ್ರೇಸ್ ದೀರ್ಘಾವಧಿಯ ಗತಿಶೀಲತೆ**, ಅಕ್ಕಿ ಪ್ರಕಾಶನ, ಕುಣಿಗಲ್.

೯೬. ಭಗವಾನ್ ಕೆ.ಎಸ್.(ಅನು), ೨೦೧೩, **ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ**, ಮಹಿಮ ಪ್ರಕಾಶನ, ಮೈಸೂರು.

೯೭. ಭಟ್ ಜಿ.ಎಸ್., ೨೦೦೬, **ಆಯ್ದ ವ್ಯಕ್ತಿ ಚಿತ್ರಗಳು**, ದೇಜಗೌ ಸಾಹಿತ್ಯ ಮಾಲೆ, ಮೈಸೂರು.

೯೮. ಭಟ್ಟ ಜಿ.ಎನ್., ಜೀನಹಳ್ಳಿ ಸಿದ್ಧಲಿಂಗಪ್ಪ(ಸಂ), ೨೦೧೦, **ಮೈಸೂರು ದರ್ಶನ**, ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು.

೯೯. ಭರಂಪುರ ಕಣುಮಪ್ಪ, ೨೦೦೯, **ಮಾತಂಗ ಸಮಾಜದ ದಿಗ್ದರ್ಶಕರು**, ಆದಿಜಾಂಬವ ವಿದ್ಯಾಭಿವೃದ್ಧಿ ಟ್ರಸ್ಟ್, ಬೆಂಗಳೂರು.

೧೦೦. ಭಾಸ್ಕರಪ್ಪ ಸಿ.ಎನ್.(ಸಂ), ೧೯೯೧, **ತುಮಕೂರು ಜಿಲ್ಲಾ ದರ್ಶನ**, ಟೈಮ್ಸ್ ಪಬ್ಲಿಕೇಷನ್, ತುಮಕೂರು.

೧೦೧. ಭೈರವಮೂರ್ತಿ ಕೆ.(ಸಂ), ೧೯೯೯, **ಶಿವಮಯ**, ತಳಗವಾದಿ ಪ್ರಕಾಶನ, ಮೈಸೂರು.

೧೦೨. ಮಧುಕೇಶ್, ೨೦೦೩, **ನಾರಾಯಣಗುರು(ಜೀವನ ಚರಿತ್ರೆ)**, ಅಖಿಲಾ ಏಜೆನ್ಸಿಸ್, ಮೈಸೂರು.

೧೦೩. ಮಂಜಪ್ಪ ಶೆಟ್ಟಿ ಮಸಗಲಿ ಎಂ.ಪಿ., ೨೦೦೩, **ಮೈಸೂರು ಅರಮನೆ**, ಮಸಗಲಿ ಪ್ರಕಾಶನ, ಮೈಸೂರು.

೧೦೪. ಮಂಗ್ಳೂರ ವಿಜಯ, ೨೦೦೭, **ಸ್ವಾತಂತ್ರ್ಯ ಭಾರತದ ದಲಿತರ ಸ್ಥಿತಿಗತಿ**, ಸಂಬುದ್ಧ ಪ್ರಕಾಶನ, ಬೆಂಗಳೂರು.

೧೦೫. ಮಾಯಿಗೌಡ ಕೆ.(ಅನು), ೨೦೧೪, **ಪೆರಿಯಾರ್ ಫಿಲಾಸಫಿ**, ಸಪ್ನ ಬುಕ್‌ಹೌಸ್, ಬೆಂಗಳೂರು.

೧೦೬. ಮಾಲಿ ಮುದ್ದಣ್ಣ, ೧೯೬೯, **ಮಾಲಿಮರಿಯಪ್ಪ ಜೀವನ ಸಾಧನೆ**, ಸಾಹಿತ್ಯಾಲಯ, ತುಮಕೂರು.

೧೦೭. ಮಹಾದೇವಯ್ಯ ಪಿ.(ಸಂ), ೨೦೦೫, **ದಲಿತರು ಮತ್ತು ಪರ್ಯಾಯ ರಾಜಕಾರಣ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦೮. ಮುನಿವೆಂಕಟಪ್ಪ ವಿ., ೧೯೯೮, **ದಲಿತ ಚಳವಳಿ ಒಂದು ಅವಲೋಕನ,** ರವಿ ಆಫ್‌ಸೆಟ್ ಪ್ರಿಂಟರ್ಸ್, ಮೈಸೂರು.

೧೦೯. ಮುನಿವೆಂಕಟಪ್ಪ(ಸಂ), ೧೯೯೮, **ದಲಿತ ಚಳವಳಿ ಒಂದು ಅವಲೋಕನ,** ವಿಚಾರವಾದಿ ಪ್ರಕಾಶನ, ಮೈಸೂರು.

೧೧೦. ಮುರುಳೀಧರ ಜಗತಾಪ, ೧೯೯೭, **ಸಮಾಜ ಸುಧಾರಕ ಮಹಾತ್ಮ ಪುಲೆ,** ನವಕರ್ನಾಟಕ ಪ್ರಕಾಶನ, ಬೆಂಗಳೂರು.

೧೧೧. ಮೂರ್ತಿ ಕೆ.ಎಲ್.ಎನ್., ೨೦೦೬, **ಮೈಸೂರು ಸಂಸ್ಥಾನದ ರಾಜಕೀಯ ಮತ್ತು ಸಂವಿಧಾನಾತ್ಮಕ ಬೆಳವಣಿಗೆಗಳು,** ಚೇತನ ಬುಕ್‌ಹೌಸ್, ಮೈಸೂರು.

೧೧೨. ಮೂರ್ತಿ ಎನ್., ೨೦೦೫, **ಜಾತಿ ಮತ್ತು ಮೀಸಲಾತಿ(ಸಮಗ್ರ ಚಿಂತನೆ),** ದಲಿತ ಸಂಘರ್ಷ ಸಮಿತಿ ಪ್ರಕಾಶನ, ಬೆಂಗಳೂರು.

೧೧೩. ಮೂರ್ತಿ ಎನ್., ೨೦೦೫, **ಕಾಂಗ್ರೆಸ್, ಗಾಂಧಿ ಮತ್ತು ದಲಿತರು,** ದಲಿತ ಸಂಘರ್ಷ ಸಮಿತಿ ಪ್ರಕಾಶನ, ಬೆಂಗಳೂರು.

೧೧೪. ಮೂರ್ತಿ ಟಿ.ಹೆಚ್., ೨೦೦೬, **ಆರ್. ಗೋಪಾಲಸ್ವಾಮಿ ಅಯ್ಯರ್,** ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೧೫. ಮೋಹನ್‌ಕೃಷ್ಣ ರೈ ಕೆ., ೨೦೦೪, **ಪ್ರಭುತ್ವ ಮತ್ತು ಜನತೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧೬. ಮೋಹನ್‌ಕೃಷ್ಣ ರೈ ಕೆ., ೨೦೦೭, **ವಸಾಹತುಶಾಹಿ ಮತ್ತು ನಗರೀಕರಣ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧೭. ರವಿ ಎಂ.ಆರ್., ೨೦೧೪, **ಆಧುನಿಕ ಶಿಕ್ಷಣ ಮತ್ತು ಸಾಮಾಜಿಕ ಬದಲಾವಣೆ(೧೮೮೧-೧೯೪೭),** ಸಂವಹನ ಪ್ರಕಾಶನ, ಮೈಸೂರು.

೧೧೮. ರಾಕೇಶ್ ಹೆಚ್.ಎಸ್., ೨೦೧೨, **ಮೈಸೂರು ಒಡೆಯರು ಮತ್ತು ಶೃಂಗೇರಿ ಮಠ,** ಕಿಟಕಿ ಪ್ರಕಾಶನ, ಮೈಸೂರು.

೧೧೯. ರಾಜಶೇಖರ್ ಎಸ್., ೨೦೦೧, **ಭಾರತೀಯ ಸಮಾಜ,** ಭ್ರಮರ ಪ್ರಕಾಶನ, ಶಿವಮೊಗ್ಗ.

೧೨೦. ರಾಜಾರಾಮ್ ವಿ.ಎಸ್., ೧೯೪೫, **ಆಧುನಿಕ ಮೈಸೂರು ನಿರ್ಮಾಪಕರು,** ಮೋದಿಪವರ್ ಪ್ರಿಂಟಿಂಗ್ ವರ್ಕ್ಸ್, ಬೆಂಗಳೂರು.

೧೨೧. ರಾಜು ಎಲ್.ಪಿ., ೨೦೧೧, **ವಸಾಹತುಶಾಹಿ ಮತ್ತು ರಾಷ್ಟ್ರೀಯತೆ ಸಂಘರ್ಷ,** ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಮೈಸೂರು.

೧೨೨. ರಾಧಾಕೃಷ್ಣ, ೧೯೪೯, **ನನ್ನ ತಂದೆ(ಬಿ. ಪುಟ್ಟಯ್ಯನವರ ಜೀವನ ಚಿತ್ರ)**, ಜಿಯಲಾಜಿಕಲ್ ಸೊಸೈಟಿ ಆಫ್ ಇಂಡಿಯಾ, ಬೆಂಗಳೂರು.

೧೨೩. ರಾಮಣ್ಣ ಕೆ., ೨೦೦೮, **ಸೋಲಿಲ್ಲದ ಸರದಾರರು ಸ್ವಾತಂತ್ರ್ಯಕ್ಕಾಗಿ ದುಡಿದ ಧೀರರು**, ಭಾರತೀ ಪ್ರಕಾಶನ, ಮೈಸೂರು.

೧೨೪. ರಾಮಣ್ಣ ಹೆಚ್. ಕೋಡಿಹಳ್ಳಿ, ೨೦೦೯, **ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೨೫. ರೋಮಿಲಥಾಪರ್(ಕ.ಅ.) ೧೯೭೮, ಗೋಪಾಲ ಕೃಷ್ಣರಾವ್, **ಕೋಮುವಾದ ಹಾಗೂ ಭಾರತೀಯ ಇತಿಹಾಸ ಲೇಖನ**, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೧೨೬. ಲಕ್ಷ್ಮಣ್ ತೆಲಗಾವಿ, ೧೯೯೯, **ಹಿಂದುಳಿದ ವರ್ಗಗಳ ಮತ್ತು ದಲಿತ ಚಳವಳಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೨೭. ಲಕ್ಷ್ಮೀಪತಿ ಸಿ.ಜೆ., ೨೦೦೯, **ಮತಾಂತರ ಸತ್ಯಾನ್ವೇಷಣೆ**, ಸಂಚಲನ, ಬೆಂಗಳೂರು.

೧೨೮. ಲಕ್ಷ್ಮೀನಾರಾಯಣ ನಾಗವಾರ(ಸಂ), ೨೦೦೦, **ಬಿ. ಬಸವಲಿಂಗಪ್ಪ ಮತ್ತು ಬುಸಾ ಚಳವಳಿ ಕಾಲ ಶತಮಾನ**, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಬೆಂಗಳೂರು.

೧೨೯. ಲಿಂಗಪ್ಪ ಎಂ.ಕೆ., ೧೯೮೦, **ಮೈಸೂರು: ಒಂದು ಅಧ್ಯಯನ**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೩೦. ಲೀಲಾ ಜಿ. ಮುಂಬೈ, ೨೦೧೦, **ಮೈಸೂರು ಸಾಂಸ್ಕೃತಿಕ ಸಂಕಥನ**, ಕನ್ನಡ ಅಧ್ಯಯನ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ.

೧೩೧. ವಿಜಯಪೂಣಚ್ಚ ತಂಬಂಡ, ೨೦೦೯, **ಕೆಳವರ್ಗದ ಪ್ರತಿಭಟನೆಗೆ ಸಬಾಲ್ಟರ್ನ್ ಚರಿತ್ರೆ ಬರವಣಿಗೆ ಕ್ರಮ ಮತ್ತು ವಿಮರ್ಶೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೩೨. ವಿಠ್ಠಲಮೂರ್ತಿ ಆರ್.ಟಿ., ೨೦೦೫, **ದಲಿತ ಚಳವಳಿಯ ನಾಳೆಗಳು**, ಪ್ರಭೆ ಪ್ರಕಾಶನ, ಬೆಂಗಳೂರು.

೧೩೩. ವೀರಯ್ಯ ಡಿ.ಎಸ್., ೨೦೦೫, **ದಲಿತ ಚಿಂತನೆ ವೈಚಾರಿಕ ಲೇಖನಗಳ ಸಂಕಲನ**, ಸಪ್ನ ಬುಕ್‌ಹೌಸ್, ಬೆಂಗಳೂರು.

೧೩೪. ವಿರೂಪಾಕ್ಷಿ ಪೂಜಾರಹಳ್ಳಿ(ಸಂ), ೨೦೦೫, **ದಲಿತರು ಮತ್ತು ಚರಿತ್ರೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೩೫. ವಿಶ್ವನಾಥ ಎಂ.(ಸಂ), ೧೯೯೨, **ಲೋಕ ಸೇವಾನಿರತ ಡಿ. ಕೊಂಗಾಡಿಯಪ್ಪ**, ಕೊಂಗಾಡಿಯಪ್ಪ ಸ್ಮಾರಕ ಗ್ರಂಥ ಸಮಿತಿ ಪ್ರಕಾಶನ, ಬೆಂಗಳೂರು.

೧೩೬. ವೆಂಕಟೇಶನ್ ಎಚ್., ೧೯೮೫, **ನವಭಾರತದಲ್ಲಿ ಹರಿಜನರ ಹತ್ಯೆಗಳು,** ಕರ್ನಾಟಕ ದಲಿತ ಕ್ರಿಯಾ ಸಮಿತಿ, ಬೆಂಗಳೂರು.

೧೩೭. ವೆಂಕಟಸ್ವಾಮಿ ಎಂ., ೨೦೦೩, **ಅಸ್ಪೃಶ್ಯರು(ಒಂದು ಪರಿಶೀಲನೆ),** ನವಕರ್ನಾಟಕ ಪ್ರಕಾಶನ, ಬೆಂಗಳೂರು.

೧೩೮. ವೇಮಗಲ್ ಸೋಮಶೇಖರ್, ೨೦೦೦, **ಬೆಂಗಳೂರಿನಲ್ಲಿ ಮಹಾತ್ಮಗಾಂಧಿ,** ಭಾರತೀಯ ವಿದ್ಯಾಭವನದ ವಿಜ್ಞಾನ ಮತ್ತು ಮಾನವೀಯ ಮೌಲ್ಯಗಳ ಗಾಂಧೀ ಕೂಟ, ಬೆಂಗಳೂರು.

೧೩೯. ವೇಮಗಲ್ ಸೋಮಶೇಖರ್, ೨೦೦೫, **ಮಹಾತ್ಮಗಾಂಧಿ ಮತ್ತು ಅಸ್ಪೃಶ್ಯತೆ,** ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೪೦. ಶಂಕರ ನಾರಾಯಣರಾವ್ ಎನ್.ಪಿ., ೧೯೯೧, **ಸ್ವಾತಂತ್ರ ಗಂಗೆಯ ಸಾವಿರ ತೊರೆಗಳು,** ನವಕರ್ನಾಟಕ ಪ್ರಕಾಶನ, ಬೆಂಗಳೂರು.

೧೪೧. ಶಾರದ ಶಂಕರ್, ೨೦೧೧, **ಮಗಳ ನೆನಪಿನಾಳದಲ್ಲಿ ಆರ್.ಸಿ.,** ಆಟದ ಬುಕ್ ಹೌಸ್, ಬೆಂಗಳೂರು.

೧೪೨. ಶಿವರಾಮಯ್ಯ, ೨೦೦೭, **ವಿಮೋಚನೆಗಾಗಿ ಮತಾಂತರ,** ಸಂಚಲನ ಪ್ರಕಾಶನ, ಬೆಂಗಳೂರು.

೧೪೩. ಶಿಂಗ್ರಯ್ಯ ಎಂ., ೧೯೪೧, **ಮೈಸೂರಿನ ಆಳಿದ ಮಹಾಸ್ವಾಮಿಯವರಾದ ನಾಲ್ವಡಿ ಕೃಷ್ಣರಾಜ ಒಡೆಯರವರ ಚರಿತ್ರೆ,** ಮೈಸೂರು.

೧೪೪. ಶ್ರೀಧರಮೂರ್ತಿ ಮ., ೧೯೭೨, **ಒಡೆಯರು ಮತ್ತು ಮೈಸೂರು,** ಕರ್ನಾಟಕ ಸಹಕಾರಿ ಪ್ರಕಾಶನ, ಬೆಂಗಳೂರು.

೧೪೫. ಶ್ರೀಧರಮೂರ್ತಿ ಎ.(ಸಂ), ೨೦೧೦, **ಮೈಸೂರು ಒಡೆಯರು ಮತ್ತು ಕರ್ನಾಟಕ ಸಂಸ್ಕೃತಿ,** ಸಂಸ್ಕೃತಿ ಬುಕ್ ಪ್ಯಾರಡೈಸ್, ಮೈಸೂರು.

೧೪೬. ಶ್ರೀನಿವಾಸ ಹಾವನೂರು, ೨೦೦೦, **ಹೊಸಗನ್ನಡದ ಅರುಣೋದಯ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೪೭. ಶೇಖರ್ ಎಂ.ಎಸ್., ೨೦೦೬, **ಮೊದಲ ತಲೆಮಾರಿನ ದಲಿತ ಸಾಹಿತಿಗಳು,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೪೮. ಶೇಖರ್ ಎಂ.ಎಸ್., ೨೦೦೭, **ಡಿ. ಗೋವಿಂದದಾಸ್ ಸಮಗ್ರ ಸಾಹಿತ್ಯ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪೯. ಸದಾನಂದ ಜೆ.ಎಸ್., ೧೯೯೨, **ಬ್ರಾಹ್ಮಣೇತರರ ಚಳವಳಿ ಮತ್ತು ಮಿಲ್ಲರ್ ವರದಿ,** ಅರಿವು-ಬರಹ ಪ್ರಕಾಶನ, ಬೆಂಗಳೂರು.

೧೫೦. ಸಾವಿತ್ರಮ್ಮ ಎಚ್.ವಿ., ೨೦೧೫, **ಎಚ್.ವಿ. ನಂಜುಂಡಯ್ಯ ಜೀವನ ಮತ್ತು ಕಾರ್ಯ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೫೧. ಸಿದ್ಧಲಿಂಗಯ್ಯ, ೨೦೦೬, **ಊರುಕೇರಿ,** ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.

೧೫೨. ಸಿದ್ರಾಮ ಕಾರಣಿಕ(ಅನು), ೨೦೧೩, **ನಾಗವಂಶ ದಲಿತ ಅಸ್ಮಿತೆ,** ಲಡಾಯಿ ಪ್ರಕಾಶನ, ಗದಗ.

೧೫೩. ಸುಂದರರಾವ್ ಬ.ನ., ೧೯೮೫, **ಬೆಂಗಳೂರಿನ ಇತಿಹಾಸ,** ಅಂಕಿತ ಪ್ರಕಾಶನ, ಬೆಂಗಳೂರು.

೧೫೪. ಸುಧಾಮಣಿ ಬಿ.ವಿ., ೨೦೦೯, **ದಳವಾಯಿ ನಂಜರಾಜಯ್ಯನ ಕಾಲದ ಮೈಸೂರು,** ಅನನ್ಯ ಪ್ರಕಾಶನ, ಮೈಸೂರು.

೧೫೫. ಸುಜ್ಞಾನಮೂರ್ತಿ ಬಿ.(ಅನು), ೨೦೧೨, **ತಮಿಳು ಬೌದ್ಧ ದಲಿತ ಹೋರಾಟಗಾರರ ಅಯೋತಿದಾಸ್,** ಲಡಾಯಿ ಪ್ರಕಾಶನ, ಗದಗ.

೧೫೬. ಸುಜ್ಞಾನಮೂರ್ತಿ ಬಿ.(ಅನು), ೨೦೧೫, **ಮನುಸ್ಮೃತಿ ಅಪರಾಧ ಶಿಕ್ಷೆ,** ಲಡಾಯಿ ಪ್ರಕಾಶನ, ಗದಗ.

೧೫೭. ಸೂರ್ಯನಾಥ ಕಾಮತ್(ಸಂ), ೧೯೯೭, **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂಪುಟ-೨,** ಗೀತಾಬುಕ್ ಹೌಸ್, ಮೈಸೂರು.

೧೫೮. ಸೂರ್ಯನಾಥ ಕಾಮತ್, ೧೯೮೮, **ಸ್ವಾತಂತ್ರ್ಯ ಹೋರಾಟದ ಹಲವು ಮುಖಗಳು,** ಬುರ್ಲಿ ಬಿಂದು ಮಾಧವ ಸ್ಮಾರಕ ಪ್ರತಿಷ್ಠಾನ, ಹುಬ್ಬಳ್ಳಿ.

೧೫೯. ಸೂರ್ಯನಾಥ ಕಾಮತ್(ಸಂ), ೧೯೮೯, **ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ-೨,** ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು.

೧೬೦. ಹನುಮಂತಯ್ಯ ಎಲ್., ೧೯೯೦, **ದಲಿತಲೋಕದ ಒಳಗೆ,** ಮಾಹಿತಿ ಪ್ರಕಾಶನ, ಬೆಂಗಳೂರು.

೧೬೧. ಹನುಮಂತಯ್ಯ ಎಲ್., ೧೯೯೨, **ಅಂಬೇಡ್ಕರ್ ಮತ್ತು ಸಮಕಾಲೀನತೆ,** ವಾಹಿನಿ ಪ್ರಕಾಶನ, ಬೆಂಗಳೂರು.

೧೬೨. ಹಾಲತಿ ಸೋಮಶೇಖರ್, **ಮಹಿಳಾ ಸಾಮಾಜಿಕ ಚಳುವಳಿಗಳು,** ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ, ವಿಸ್ಮಯ ಪ್ರಕಾಶನ, ಬೆಂಗಳೂರು.

೧೬೩. ಹಿರೇಮಠ ಎಸ್.ಎಸ್., ೨೦೦೧, **ದಲಿತ ಸಂಸ್ಕೃತಿ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಔ. English References Books

1. Gopal M.H., 1993, **British Sources of the Economic, Political and Social History of the Mysore State, 1799-1812,** South Aisa Books, Mumbai.
2. Hettne Bjorn., 1978, **Political Economy of Indirect Rule: Mysore 1881-1947,** Ambika Publications, New Delhi.
3. Kavlekar K.K., 1990, **Non-brahmin Movement in Southern India, 1873-1949,** Shivaji University.
4. Keer Dhananjay, 2013 **Dr. Babasaheb Ambedkar,** Popular Prakashan, Mumbai.
5. Kshirsagar R.K., 1994, **Dalith Movement in India and its Leaders(1887-1956),** M.D. Publication, New Delhi.
6. Manor James., 1977, **Political Changes in an Indian State: Mysore 1917-1955,** New Delhi.
7. Nair Janaki, 1998, **Miners and Millhanos,** sage publications, New Delhi.
8. Nair Janki, 2012, **Mysore Modern,** Orient Black Swan, New Delhi.
9. Gail, Omvedt, 1994, **Dalits and The Democratic Revolution (Dr. Ambedkar and the Dalit Movement in Colonial India),** Sage Publication, New Delhi.
10. Indu, Rajgopal, 1979, **The Tyranny of Caste: The Non-Brahmin Movement and Political Development in South India,** Vikas Publishing House, New Delhi.
11. Kadetotad N.K., 1977, **Religion and Socity among the Harijans,** Karnataka University, Dharwad.
12. Kambale J.R., 1979, **Rise and awakening of depressed Classes in India,** National Publishing House, New Delhi.
13. Kuppaswamy B., 1978, **Bakward Class Movement In Karnataka,** Bangalore University, Bangalore.
14. Kuppaswamy B., 1975, **Social Change in India,** Vikas Publication, New Delhi.
15. Meti T.K., 1971, **Economic Developement and Social Change in Myosre State,** Karnataka University, Dharwad.

೪. **ಲೇಖನಗಳು/ಸಂಪುಟಗಳು**

೧. ರಹಮತ್ ತರೀಕೆರೆ(ಸಂ), ಚಿನ್ನಸ್ವಾಮಿ ಸೋಸಲೆ ಎನ್.(ಲೇ), ೨೦೦೩, ಕನ್ನಡ ಅಧ್ಯಯನ ಸಂಚಿಕೆ, **ಮೈಸೂರು ಒಡೆಯರ ಮೇಲಿನ ಅಧ್ಯಾಯಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಲಕ್ಷ್ಮಣ್ ತೆಲಗಾವಿ(ಸಂ), ಚಿನ್ನಸ್ವಾಮಿ ಸೋಸಲೆ ಎನ್.(ಲೇ.), **ಆಧುನಿಕ ಮೈಸೂರು ಸಂಸ್ಥಾನದಲ್ಲಿ ಸಾಮಾಜಿಕ ಸುಧಾರಣಾ ಕ್ರಮಗಳು**, ರಾಮರತನ್(ಲೇ) **ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸಭೆ ಮತ್ತು ಇನಾಮ್ ಭೂ ಸಂಬಂಧಗಳು**, ಜುಲೈ-ಡಿಸೆಂಬರ್-೨೦೦೫, ಚರಿತ್ರೆ ಅಧ್ಯಯನ, ಸಂಪುಟ-೧, ಸಂಚಿಕೆ-೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಲಕ್ಷ್ಮಣ್ ತೆಲಗಾವಿ(ಸಂ), ಶಂಕರನಾರಾಯಣರಾವ್ ಎನ್.ಪಿ.(ಲೇ) **ಮೈಸೂರು ೧೬೧೦ ರಿಂದ ೧೯೩೬ರಿಂದ ೧೯೩೬ರವರೆಗಿನ ಏಳುಬೀಳುಗಳ ಪಕ್ಷಿ ನೋಟ**, ಜನವರಿ-ಜೂನ್-೨೦೦೬, ಚರಿತ್ರೆ ಅಧ್ಯಯನ, ಸಂಪುಟ-೧, ಸಂಚಿಕೆ-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಗೋವಿಂದರಾಜು ಪಿ.ಆರ್.(ಸಂ), ಮೋಹನ್‌ಕೃಷ್ಣ ರೈ(ಲೇ), **ಚರಿತ್ರೆ ಸಂಶೋಧನೆಯಲ್ಲಿ ಸಮಸ್ಯೀಕರಣ ಪ್ರಕ್ರಿಯೆ**, ಜನವರಿ-ಜೂನ್-೨೦೦೭, ಚರಿತ್ರೆ ಅಧ್ಯಯನ, ಸಂಪುಟ-೨, ಸಂಚಿಕೆ-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ಮೋಹನ್‌ಕೃಷ್ಣ ರೈ(ಸಂ), ಚಿನ್ನಸ್ವಾಮಿ ಸೋಸಲೆ ಎನ್.(ಲೇ), **ಮೈಸೂರು ಸಂಸ್ಥಾನದಲ್ಲಿ ದಲಿತ ಶಿಕ್ಷಣ(ನಾಲ್ವಡಿ ಕೃಷ್ಣರಾಜ ಒಡೆಯರ ಕಾಲಕ್ಕೆ ಸಂಬಂಧಿಸಿದಂತೆ)**, ಜುಲೈ-ಡಿಸೆಂಬರ್-೨೦೦೭, ಚರಿತ್ರೆ ಅಧ್ಯಯನ, ಸಂಪುಟ-೩, ಸಂಚಿಕೆ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ಚಿನ್ನಸ್ವಾಮಿ ಸೋಸಲೆ ಎನ್.(ಸಂ), ಮೋಹನ್‌ಕೃಷ್ಣ ರೈ(ಲೇ), **ಪರ್ಯಾಯ ಚರಿತ್ರೆ: ರಚನೆಯ ಸಾಧ್ಯತೆಗಳು**, ಚಿನ್ನಸ್ವಾಮಿ ಸೋಸಲೆ ಎನ್(ಲೇ), **ದಲಿತ ಸಂಸ್ಕೃತಿ: ಚಾರಿತ್ರಿಕ ವಿಶ್ಲೇಷಣೆ**, ಜುಲೈ-ಡಿಸೆಂಬರ್-೨೦೦೮, ಚರಿತ್ರೆ ಅಧ್ಯಯನ, ಸಂಪುಟ-೫, ಸಂಚಿಕೆ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ಚಿನ್ನಸ್ವಾಮಿ ಸೋಸಲೆ ಎನ್(ಸಂ.), ಅನಿತ ಎಂ.ಎಸ್.(ಲೇ), **ಮೌಖಿಕ ಆಕರಗಳಲ್ಲಿ ಪ್ರತಿಬಿಂಬಿತ ವಾದಂತೆ ನಾಲ್ವಡಿ ಅವರ ವ್ಯಕ್ತಿತ್ವ ಮತ್ತು ಆಡಳಿತ**, ಚಿನ್ನಸ್ವಾಮಿ ಸೋಸಲೆ(ಲೇ), **ಮೈಸೂರು ಸಂಸ್ಥಾನದಲ್ಲಿ ಶಿಕ್ಷಣ ಪಡೆದ ಪ್ರಥಮ ದಲಿತ ಮಹನೀಯರು**, ಜನವರಿ-ಜೂನ್-೨೦೧೦, ಚರಿತ್ರೆ ಅಧ್ಯಯನ, ಸಂಪುಟ-೫, ಸಂಚಿಕೆ-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮. ಗೋವಿಂದರಾಜು ಸಿ.ಆರ್.(ಸಂ), ಚಿನ್ನಸ್ವಾಮಿ ಸೋಸಲೆ ಎನ್.(ಲೇ), **ಮೈಸೂರು ಸಂಸ್ಥಾನದಲ್ಲಿ ಕ್ರೈಸ್ತ ಮಿಶನರಿಗಳ ಪ್ರವೇಶ ಮತ್ತು ದಲಿತರ ಮತಾಂತರ: ಒಂದು ಚರ್ಚೆ,** ೨೦೧೧, ಸಂಯುಕ್ತ ಸಂಚಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯. ವಿರೂಪಾಕ್ಷಿ ಪೂಜಾರಹಳ್ಳಿ(ಸಂ), ಚಿನ್ನಸ್ವಾಮಿ ಸೋಸಲೆ ಎನ್(ಲೇ), **ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣೇತರ ಚಳವಳಿ ಮತ್ತು ದಲಿತ ಪ್ರಜ್ಞೆಯ ಪ್ರಶ್ನೆಗಳು,** ಜುಲೈ-ಡಿಸೆಂಬರ್-೨೦೧೨, ಚರಿತ್ರೆ ಅಧ್ಯಯನ, ಸಂಪುಟ-೮, ಸಂಚಿಕೆ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦. ಚಿನ್ನಸ್ವಾಮಿ ಸೋಸಲೆ ಎನ್(ಸಂ) ಮತ್ತು (ಲೇ), **ಚರಿತ್ರೆ ರಚನೆಯಲ್ಲಿ ಇರಬೇಕಾದ 'ದಲಿತ ಪ್ರಜ್ಞೆ', ಜುಲೈ-ಡಿಸೆಂಬರ್-೨೦೧೬,** ಚರಿತ್ರೆ ಅಧ್ಯಯನ, ಸಂಪುಟ-೯, ಸಂಚಿಕೆ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. **ಇತಿಹಾಸ ದರ್ಶನ ಸಂಪುಟಗಳು**

ಸಂಪುಟ-೮/೧೯೮೩, ಸಂಪುಟ-೧೦/೧೯೯೫, ಸಂಪುಟ-೧೬/೨೦೦೧, ಸಂಪುಟ-೨೦/೨೦೦೫, ಸಂಪುಟ-೨೨/೨೦೦೭, ಸಂಪುಟ-೨೪/೨೦೦೯, ಸಂಪುಟ-೨೫/೨೦೧೦, ಸಂಪುಟ-೨೬/೨೦೧೧.

೬. **ಮೈಸೂರು ದರ್ಶನ ಸಂಪುಟಗಳು.**

೭. **ಅಪ್ರಕಟಿತ ಆಕರಗಳು**

ಎಂ.ಫಿಲ್. ನಿಬಂಧಗಳು

೧. ಅನಂತರಾಮಯ್ಯ ಓ., ೧೯೮೧, **ಎಜುಕೇಷನ್ ಆ್ಯಂಡ್ ಸೋಷಿಯಲ್ ವೆಲ್‌ಫೇರ್ ಮೇಜರ್ಸ್ ಇನ್ ಪ್ರಿನ್ಸ್ಲೀ ಮೈಸೂರು ೧೯೦೦-೧೯೩೮,** ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨. ಸವಿತ ಕೆ.ಎಸ್., ೨೦೦೯, **ಮೈಸೂರು ರಾಜ್ಯದಲ್ಲಿ ಮಹಿಳಾ ಕಲ್ಯಾಣದ ಒಂದು ಅಧ್ಯಯನ ೧೮೮೧-೧೯೫೬,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಸ್ವಾಮಿ ಕೆ.ಎಸ್., ೨೦೦೮, **ಪಂಚಮರ ಆರ್. ಗೋಪಾಲಸ್ವಾಮಿ ಅಯ್ಯರ್: ಒಂದು ಅಧ್ಯಯನ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ವೀಣಾಕುಮಾರಿ ಡಿ.ಎಂ., ೨೦೧೦, **ಶಿಕ್ಷಣ ತಜ್ಞ ಹೆಚ್.ಎಂ. ಗಂಗಾಧರಯ್ಯ ಅವರ ಜೀವನ ಸಾಧನೆ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪಿಎಚ್.ಡಿ. ಮಹಾಪ್ರಬಂಧಗಳು

೧. ಅನಂತರಾಮಯ್ಯ ಓ., ೧೯೮೮, **ಸೋಷಿಯೋ-ಎಕಾನಮಿಕ್ ಚೇಂಜ್ ಡಿಪ್ರೆಸ್ಡ್ ಕ್ಲಾಸಸ್ ಇನ್ ಮೈಸೂರು ಸ್ಟೇಟ್ ೧೯೦೨-೧೯೫೨,** ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨. ಆಂಜಿನಪ್ಪ ಎಂ., ೧೯೯೫, **ಹಿಸ್ಟರಿ ಆಫ್ ಮೈಸೂರು ಎಜುಕೇಷನ್ ಇನ್ ಇಂಡಿಯನ್ ಸ್ಟೇಟ್ ಮೈಸೂರು ೧೮೫೪-೧೯೪೦,** ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೩. ಕುಮಾರಸ್ವಾಮಿ ಎಂ., ೨೦೦೮, **ಮೈಸೂರು ಸಂಸ್ಥಾನದ ರಾಷ್ಟ್ರೀಯ ಹೋರಾಟದಲ್ಲಿ ಸ್ಥಳೀಯ ಪತ್ರಿಕೆಗಳ ಪಾತ್ರ: ಒಂದು ಅಧ್ಯಯನ(೧೮೮೫-೧೯೭೪),** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

೪. ಕೋಮಲ ಕೆ.ಎಂ., ೨೦೦೨, **ದಿವಾನ್ ಕಾಂತರಾಜ ಅರಸ್: ಒಂದು ಅಧ್ಯಯನ,** ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೫. ಗುರುಸ್ವಾಮಿ ಕೆ., ೨೦೧೧, **ಕರ್ನಾಟಕದಲ್ಲಿ ದಲಿತ ಚಳವಳಿ-ಮೈಸೂರು ಜಿಲ್ಲೆ ಒಂದು ಐತಿಹಾಸಿಕ ಅಧ್ಯಯನ(೧೯೭೦-೨೦೦೦),** ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೬. ಚಿನ್ನಸ್ವಾಮಿ ಸೋಸಲೆ ಎನ್., ೨೦೦೧, **ಮೈಸೂರು ಸಂಸ್ಥಾನದಲ್ಲಿ ಗ್ರಾಮೀಣಾಭಿವೃದ್ಧಿ: ಒಂದು ಸಮೀಕ್ಷೆ (೧೮೮೧ ರಿಂದ ೧೯೪೭),** ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೭. ಮಾರಪ್ಪ ಕೆ.ಎನ್., ೨೦೦೯, **ಮೈಸೂರು ಸಂಸ್ಥಾನದ ಆಡಳಿತಾತ್ಮಕ ಇತಿಹಾಸ(೧೮೩೧-೧೯೪೭) ಜನಪದ ಧೋರಣೆಗಳು: ಒಂದು ಅಧ್ಯಯನ,** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು.

೮. ಮಹೇಶ್‌ಕುಮಾರ್ ಕೆ.ಈ., ೨೦೦೯, **ದಲಿತ ಚಳವಳಿ, ದಲಿತರ ಅನನ್ಯತೆ ಮತ್ತು ಭಾರತೀಯ ಸ್ವಾತಂತ್ರ್ಯ ಹೋರಾಟ: ೧೮೮೫-೧೯೪೭,** ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

೯. ವಿಜಯಲಕ್ಷ್ಮಮ್ಮ ಜಿ., ೨೦೧೫, **ಮೈಸೂರು ಒಡೆಯರ ಚರಿತ್ರೆ: ಚರಿತ್ರೆ ಲೇಖನಶಾಸ್ತ್ರದ ಹಿನ್ನೆಲೆಯಲ್ಲಿ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦. ಹನುಮಂತರಾಜು ಎಂ.ಜಿ., ೨೦೧೧, **ಮೈಸೂರು ಸಂಸ್ಥಾನದಲ್ಲಿ ಗಾಂಧೀಜಿಯವರ ರಾಜಕೀಯ ಚಿಂತನೆಗಳ ಪ್ರಭಾವ(೧೯೨೦-೧೯೪೭),** ಗಾಂಧೀ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೮. ಕ್ವಾಟರ್ಲಿ ಜರ್ನಲ್ ಆಫ್ ದಿ ಮಿಥಿಕ್ ಸೊಸೈಟಿ, ಬೆಂಗಳೂರು.

೧. ಜನವರಿ-ಏಪ್ರಿಲ್-೧೯೪೧, ಕೃಷ್ಣರಾಜ ಒಡೆಯರ್ಸ್ ಸ್ಪೆಷಲ್

೨. ವಾಲ್ಯುಮ್-XXIV, ನಂ. ೩, ಜನವರಿ, ೧೯೩೪.

೩. ವಾಲ್ಯುಮ್-XXV, ನಂ. ೪, ಏಪ್ರಿಲ್, ೧೯೩೪.

೪. ವಾಲ್ಯುಮ್-LX, ನಂ. ೪, ಅಕ್ಟೋಬರ್-ಡಿಸೆಂಬರ್, ೧೯೭೯.

೫. ವಾಲ್ಯುಮ್-LXXIX, ನಂ. ೧-೨, ಜನವರಿ-ಜೂನ್, ೧೯೮೮.

೬. ವಾಲ್ಯುಮ್-XCVI, ನಂ. ೧, ಜನವರಿ-ಮಾರ್ಚ್, ೨೦೦೨.

೭. ವಾಲ್ಯುಮ್-XCVI, ನಂ. ೩-೪, ಜುಲೈ-ಡಿಸೆಂಬರ್, ೨೦೦೩.

೮. ವಾಲ್ಯುಮ್-XCV, ನಂ. ೨, ಏಪ್ರಿಲ್-ಜೂನ್, ೨೦೦೪.

೯. ವಾಲ್ಯುಮ್-XCVIII, ನಂ. ೧-೨, ಜನವರಿ-ಜೂನ್, ೨೦೦೫.

೧೦. ವಾಲ್ಯುಮ್-XCVI, ನಂ. ೨, ಏಪ್ರಿಲ್-ಜೂನ್, ೨೦೦೭.

೯. ಸಾಧನೆ

೧. ಚಂದ್ರಶೇಖರ್ ಎಸ್.(ಮೂಲ), ಬಸವರಾಜ ಕಲ್ಗುಡಿ(ಅನು), **ಮೈಸೂರು ಸಂಸ್ಥಾನದಲ್ಲಿ ಹಿಂದುಳಿದವರ ಏಳ್ಗೆ**, ೧೯೧೮-೧೯೨೬, ಏಪ್ರಿಲ್-ಜೂನ್-೧೯೭೫, ಸಾಧನೆ, ಸಂಪುಟ-೪, ಸಂಚಿಕೆ-೨-೪, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨. ಶಿವರುದ್ರಪ್ಪ ಜಿ.ಎಸ್.(ಸಂ), **ಸಾಧನೆ**, ಅಕ್ಟೋಬರ್-ಡಿಸೆಂಬರ್-೧೯೮೧, ಸಂಪುಟ-೧೦, ಸಂಚಿಕೆ-೪, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೦. ಪ್ರಬುದ್ಧ ಕರ್ಣಾಟಕ

೧. ೧೯೧೯, ಸಂಪುಟ-೧, ಸಂಚಿಕೆ-೮-೯

೨. ೧೯೩೮, ಸಂಪುಟ-೧೯, ಸಂಚಿಕೆ-೧-೪

೩. ೧೯೪೦, ಸಂಪುಟ-೨೨, ಸಂಚಿಕೆ-೨

೪. ೧೯೭೮, ಸಂಪುಟ-೬೦, ಸಂಚಿಕೆ-೩, ೪, ೭,

೫. ತಿಪ್ಪೇರುದ್ರಸ್ವಾಮಿ ಎಚ್.(ಸಂ) **ನಾಲ್ವಡಿ ಕೃಷ್ಣರಾಜ ಒಡೆಯರ ಕುರಿತ ವಿಶೇಷ ಸಂಚಿಕೆ**, ಪ್ರಬುದ್ಧ ಕರ್ಣಾಟಕ, ೧೯೮೭, ಸಂಪುಟ-೬೮, ಸಂಚಿಕೆ-೪, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೧. ಮಾನವಿಕ ಕರ್ಣಾಟಕ

೧೯೭೯, ಸಂಪುಟ-೨, ಸಂಪುಟ-೭, ಸಂಚಿಕೆ-೩,

ನಾಲ್ವಡಿ ಕೃಷ್ಣರಾಜ ಒಡೆಯರವರ ವಿಶೇಷ ಸಂಚಿಕೆ, ಮೈಸೂರು ವಿಶ್ವವಿದ್ಯಾನಿಲಯದ ರಜತ ಮಹೋತ್ಸವದ ಸವಿನೆನಪಿನ ಸಂಚಿಕೆ, ಮೈಸೂರು.

೧೨. ಪತ್ರಿಕೆಗಳು

೧. ಕರ್ನಾಟಕ ಪ್ರಕಾಶಿಕ: ೧೯೦೦ ರಿಂದ ೧೯೨೦.

೨. ಮೈಸೂರು ಸ್ಟಾರ್: ೧೯೦೫ ರಿಂದ ೧೯೨೫.

೩. ಮೈಸೂರು ವೃತ್ತಾಂತ ಬೋದಿನಿ: ೧೮೯೪ ರಿಂದ ೧೯೦೦.

೪. ಸಾಧ್ವಿ ಪತ್ರಿಕೆ: ೧೯೩೦ ರಿಂದ ೧೯೪೭.

೫. ಪಂಚಮ ಪತ್ರಿಕೆ

೬. ಹೊಸತು

೭. ಸಂವಾದ

೮. ಪ್ರಬುದ್ಧ ಕರ್ನಾಟಕ

೯. ಅಂಬೇಡ್ಕರ್ ವಾಯ್ಸ್

೧೦. ಪ್ರಜಾವಾಣಿ


೧೧. ವಿಜಯ ಕರ್ನಾಟಕ

೧೨. ಹೊಸ ದಿಗಂತ

❖❖❖

೩. ನಕ್ಷೆಗಳು

ಆಧುನಿಕ ಮೈಸೂರು ಸಂಸ್ಥಾನದಲ್ಲಿ ಪಂಚಮ ಶಾಲೆಗಳಿದ್ದಂತಹ ಸ್ಥಳಗಳು



● 1880ರಿಂದ 1918ರ ಅವಧಿಯಲ್ಲಿ ಸ್ಥಾಪನೆಯಾದ ಪಂಚಮ ಶಾಲೆಗಳು

● 1918ರಿಂದ 1947ರ ಅವಧಿಯಲ್ಲಿ ಸ್ಥಾಪನೆಯಾದ ಪಂಚಮ ಶಾಲೆಗಳು

ಆಧುನಿಕ ಮೈಸೂರು ಸಂಸ್ಥಾನದಲ್ಲಿ ಕ್ರೈಸ್ಥ ಮಿಷನರಿ ಶಾಲೆಗಳು ಇದ್ದಂತಹ ಸ್ಥಳಗಳು



● ಕ್ರೈಸ್ತ ಮಿಷನರಿ ಶಾಲೆಗಳು
ಚಾಮರಾಜನಗರ
ಕೊಳ್ಳೆಗಾಲ
ಯಳಂದೂರು
ಟಿ ನರಸೀಪುರ
ಮುಡುಕುತೊರೆ
ಬೆಂಗಳೂರು
ಕೆ.ಜಿ.ಎಫ್.
(ಹೆಚ್ಚಿನ ವಿವರಣೆಗೆ ಅಧ್ಯಾಯ ೧ನ್ನು ನೋಡಿ)


ಆಧುನಿಕ ಮೈಸೂರು ಸಂಸ್ಥಾನದಲ್ಲಿದ್ದ ಮಹಿಳಾ ಶಿಕ್ಷಣ ಕೇಂದ್ರಗಳು



- ಮಹಾರಾಣಿ ಕಾಲೇಜು
- ವನಿತಾ ಸದನ
- ಮಾತೃ ಮಂಡಳಿ
- ಭಗನಿ ಸೇವಾ ಸಮಾಜ
- ಕಸ್ತೂರಿಬಾ ಬಾಲಿಕಾ ಶಾಲೆ

(ಹೆಚ್ಚಿನ ವಿವರಣೆಗೆ ಅಧ್ಯಾಯ ಒನ್ನು ಗಮನಿಸಿ)

ಆಧುನಿಕ ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣಾ ಹೋರಾಟ ನಡೆದ ಸ್ಥಳಗಳು



- (ಕೆಂಪು) ದೇವಾಲಯ ಪ್ರವೇಶ ಚಳುವಳಿ ನಡೆದ ಸ್ಥಳಗಳು
- (ಹಸಿರು) ಕೆರೆ ನೀರಿಗಾಗಿ ಹೋರಾಟ ನಡೆದ ಸ್ಥಳಗಳು
- (ಕಪ್ಪು) ರಥೋತ್ಸವಕ್ಕೆ ಸಂಬಂಧಿಸಿದಂತೆ ಹೋರಾಟ ನಡೆದ ಸ್ಥಳಗಳು
- (ಹಳದಿ) ಹೋಟೆಲ್ ಪ್ರವೇಶಕ್ಕೆ ಸಂಬಂಧಿಸಿದಂತೆ ಹೋರಾಟ ನಡೆದ ಸ್ಥಳಗಳು

(ಹೆಚ್ಚಿನ ಮಾಹಿತಿಗೆ ಅಧ್ಯಾಯ ಹಿನ್ನು ಗಮನಿಸಿ)

೪. ಛಾಯಾಚಿತ್ರಗಳು


ಆಧುನಿಕ ಮೈಸೂರು ಸಂಸ್ಥಾನವನ್ನು ಆಳ್ವಿಕೆ ಮಾಡಿದ ಅರಸರುಗಳು



೧೦ ನೇ ಚಾಮರಾಜ ಒಡೆಯರ್



ನಾಲ್ವಡಿ ಕೃಷ್ಣರಾಜ ಒಡೆಯರ್



ಕಂಠೀರವ ನರಸಿಂಹರಾಜ ಒಡೆಯರ್



ಜಯ ಚಾಮರಾಜೇಂದ್ರ ಒಡೆಯರ್


ಆಧುನಿಕ ಮೈಸೂರು ಸಂಸ್ಥಾನದ ಪ್ರಮುಖ ಪ್ರಗತಿಪರ ದಲಿತೇತರರು



ಪಂಚಮರ ಆರ್.
ಗೋಪಾಲಸ್ವಾಮಿ ಅಯ್ಯರ್



ಸಿ.ಆರ್.ರೆಡ್ಡಿ



ತಲಕಾಡು ಆರ್. ರಂಗೇಗೌಡ
(ದಲಿತರ ಪ್ರಥಮ ಗುರುಗಳು)



ಹೆಚ್. ಸಿ. ದಾಸಪ್ಪ



ಯಶೋಧರಮ್ಮ ದಾಸಪ್ಪ



ತಗಡೂರು ರಾಮಚಂದ್ರರಾಯ



ಹೆಚ್. ವಿ. ನಂಜುಂಡಯ್ಯ


ಆಧುನಿಕ ಮೈಸೂರು ಸಂಸ್ಥಾನದ ಪ್ರಮುಖ ದಲಿತ ಹೋರಾಟಗಾರರು




ಬಿ. ಬಸವಲಿಂಗಪ್ಪ
(ಮಾಜಿ ಸಚಿವರು)




ಆರ್.ಚನ್ನಿಗರಾಮಯ್ಯ
(ಪ್ರಥಮ ದಲಿತ ಮಂತ್ರಿ)



ಹೆಚ್.ಎಂ. ಗಂಗಾಧರಯ್ಯ
(ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಸ್ಥಾಪಕರು)



ಟಿ. ಎ. ದಾಸಪ್ಪ
(ದಲಿತ ಮುಖಂಡರು)




ಧರ್ಮವಾರಪಲ್ಲಿ ವೆಂಕಟರಾಮಣ್ಣ
(ದಲಿತ ಮುಖಂಡರು)




ಆಟದ ಪೆನ್ನಯ್ಯ
(ದಲಿತ ಮುಖಂಡರು)




ಟಿ. ಚೆನ್ನಯ್ಯ
(ಪ್ರಥಮ ತಲೆಮಾರಿನ ದಲಿತ ರಾಜಕಾರಣಿ)



ಎಂ. ಹನುಮಂತಯ್ಯ
(ನೆಲಮಂಗಲದ ದಲಿತ ಹೋರಾಟಗಾರರು)



ಚಿಕ್ಕಯಲ್ಲಪ್ಪ
(ನಿಮ್ನವರ್ಗದ ಪ್ರತಿನಿಧಿ)



ಚರಿತ್ರೆ ವಿಭಾಗ